ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೮೭

ಸಾಹಿತ್ಯಮಾಲೆ – ೭೪

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ಪ್ರವಾಹಕ್ಕೆ ಎದುರಾಗಿ

# ಪ್ರವಾಹಕ್ಕೆ ಎದುರಾಗಿ


ಇಂಗ್ಲಿಷ್ ಮೂಲ

**ಟಿ. ಸ್ಕಾರ್ಲೆಟ್ ಎಪ್‌ಸ್ಟೀನ್**

ಅನುವಾದಕರು

**ಎಂ.ಎಸ್. ರಘುನಾಥ್, ಸುಮನಾ ವಿಶ್ವನಾಥ್**

**ಎಲ್.ವಿ. ಶಾಂತಕುಮಾರಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ

ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ

ಬೆಂಗಳೂರು – ೫೬೦ ೦೫೬

**PRAVAHAKKE EDURAGI:** Translation of *Swimming Upstream* by **Mrs. T. Scarlet Epstein ;** Translated into Kannada by **M.S. Raghunath, Ms. Sumana Vishwanath and Ms. L.V. Shantakumari**; Editor-in-Chief : **Dr. Pradhan Gurudatta ;** Published by **Sri P. Narayana Swamy, Registrar, Kuvempu Bhasha Bharathi Pradikara ;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; 2010; Pp.xvii+335 Price : Rs. 150/-

© ಹಕ್ಕುಗಳನ್ನು ಕಾದಿರಿಸಿದೆ.

ಮುದ್ರಣ : ೨೦೧೦
ಪುಟಗಳು : xvi+೩೩೫
ಬೆಲೆ : ರೂ. ೧೫೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-12-3**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೪೭/೦೯

ದಿನಾಂಕ : ೦೫.೦೮.೨೦೦೯

# ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನು ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**

ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ.ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು, ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಅದು ಅನೇಕ ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಮನು ಬಳಿಗಾರ್

(ಮನು ಬಳಿಗಾರ್)

# ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು

ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ : ೦೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿತು. ಇದೇ ದಿನಾಂಕ: ೧೯.೦೮.೨೦೦೯ರಂದು ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನೆ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು

(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.

(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು

(೩) ಪತ್ರಿಕೋದ್ಯಮ ಮತ್ತು ಭಾಷಾಂತರ

(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ

(ಋ) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು

(೬) ತೌಲನಿಕ ಸಾಹಿತ್ಯ

(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ **ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್** ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) **ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ ‘ರವೀಂದ್ರ ಸಂಚಯ’ವನ್ನು ಹೊರತಂದಿರುವ ರೀತಿಯಲ್ಲಿಯೇ **‘ಕುವೆಂಪು ಸಂಚಯ’** ಮತ್ತು **‘ಪು.ತಿ.ನ ಸಂಚಯ’**ಗಳನ್ನು ಹೊರತರಲಾಗಿದೆ. ಇದೇ ರೀತಿಯಲ್ಲಿ **ಶಿವರಾಮ ಕಾರಂತ, ಮಾಸ್ತಿ, ವಿ.ಕೃ. ಗೋಕಾಕ್** ಮತ್ತು **ಜಿ.ಎಸ್. ಶಿವರುದ್ರಪ್ಪ** ಮೊದಲಾದ ಕನ್ನಡದ ಮಹತ್ವದ ಲೇಖಕರ ಸಂಕಲನಗಳನ್ನು ಹೊರತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇತರ

ಮಹತ್ವದ ಕನ್ನಡ ಲೇಖಕರ 'ಸಂಚಯ'ಗಳನ್ನು ಹೊರತರಲಾಗುತ್ತದೆ. ಮುಂದೆ ಇವುಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನೂ ಹಾಕಿಕೊಳ್ಳಲಾಗುತ್ತಿದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: **ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ** (ಹಿಂದೀ), **ವಿಶ್ವನಾಥ ಸಂಚಯ** (ತೆಲುಗು), **ಆಶಾಪೂರ್ಣದೇವಿ ಸಂಚಯ** (ಬಂಗಾಳಿ), **ಶಿವಶಂಕರ ಪಿಳ್ಳೈ ಸಂಚಯ** ಮತ್ತು **ಎಂ.ಟಿ. ವಾಸುದೇವ ನಾಯರ್ ಸಂಚಯ** (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

**ರಾಷ್ಟ್ರೀಯ ಪ್ರಶಸ್ತಿ :** ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ **ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು** ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

**ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ** : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) **ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳೂ ಸೇರಿದಂತೆ ಇದುವರೆಗೆ ೮೦ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತರಲಾಗಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್

ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಉಳಿದ ಎಂಟು ಸಂಪುಟಗಳು (೪ ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾರ್ಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ–ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

**ಖಾಸಗಿ ಪ್ರಕಾಶಕರ ಸಹಭಾಗಿತ್ವ :** ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ **ವಿಶೇಷ ಯೋಜನೆ**ಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯವನ್ನು ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ

ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಎರಡನೆಯ ವಿಶ್ವಯುದ್ಧದ ಸಂದರ್ಭದಲ್ಲಿ ಹಿಟ್ಲರ್‌ನಿಂದ ನಡೆದ ಭಯಂಕರ ಅತ್ಯಾಚಾರಗಳಿಂದ ನೊಂದ ಯಹೂದಿ ಸಮುದಾಯಕ್ಕೆ ಸೇರಿದ ಶ್ರೀಮತಿ ಟಿ. ಸ್ಕಾರ್ಲೆಟ್ ಎಪ್‌ಸ್ಟೀನ್ ಅವರು ಆ ವಿಭೀಷಿಕೆಗಳನ್ನು, ಬವಣೆಗಳನ್ನು ಸ್ವತಃ ಎದುರಿಸಿದಂಥವರು. ಅನೇಕ ದೇಶಗಳು ನೆಲೆನೀಡಲು ನಿರಾಕರಿಸಿದಂಥ ದುರ್ಭರ ಸನ್ನಿವೇಶವನ್ನು ಎದುರಿಸಿನಿಂತು ಕಷ್ಟ–ಸಂಕಟ–ನೋವು–ನಿರಾಶೆಗಳನ್ನು ಅನುಭವಿಸಿದಂಥವರು. ಖ್ಯಾತ ಸಮಾಜಶಾಸ್ತ್ರಜ್ಞರಾದ ಡಾ. ಶ್ರೀನಿವಾಸ್ ಅವರ ಪ್ರೇರಣೆಯಿಂದ ಸಮಾಜಸೇವೆಗೆ ತಮ್ಮನ್ನು ತೊಡಗಿಸಿಕೊಂಡು, ಅವರು ಸೂಚಿಸಿದಂಥ ಲಕ್ಷಣಗಳನ್ನು ಒಳಗೊಂಡಿದ್ದ ಮಂಗಳದಂಥ ಕುಗ್ರಾಮಕ್ಕೆ ಬಂದು, ತಮ್ಮ ಜನಪರ ಕಾರ್ಯಗಳಿಂದ 'ಸ್ಕಾರ್ಲೆಟ್'ನ ಜನಾನುವಾದವೇ ಆದ 'ಕೆಂಪೆಮ್ಮ' ಎಂಬ ಅಭಿಧಾನದಿಂದಲೇ ಗ್ರಾಮೀಣ ಜನತೆಯ ಪ್ರೀತಿಗೌರವಗಳಿಗೆ ಪಾತ್ರರಾದವರು. ತಮ್ಮ ಈ ಆತ್ಮಕಥೆಯಲ್ಲಿ ಅವರು ಹೃದಯ ವಿದ್ರಾವಕವಾದ ತಮ್ಮ ಅನುಭವಗಳನ್ನು ಬಣ್ಣಿಸಿರುವ ಪರಿ ಮನಕಲಕುವಂಥದೇ ಆಗಿದೆ. ಕನ್ನಡದಲ್ಲಿ ಇದೊಂದು ಅಪೂರ್ವ ರೀತಿಯ ಆತ್ಮಕಥನವೇ ಆಗಿದ್ದು, ಕನ್ನಡಿಗರಿಗೆ ಇದು ಪ್ರಿಯವಾಗುತ್ತವೆಂದು ನಂಬಿದ್ದೇವೆ. ಇಂಥ ವಿಶಿಷ್ಟಕೃತಿಯೊಂದನ್ನು ಕನ್ನಡದಲ್ಲಿ ಹೊರತರಲು ಅವಕಾಶ ಮಾಡಿಕೊಟ್ಟ ವಯೋವೃದ್ಧೆ ಶ್ರೀಮತಿ ಎಪ್‌ಸ್ಟೀನ್ ಅವರಿಗೂ, ಇದರಲ್ಲಿ ನೆರವಾಗಿರುವ ನಿವೃತ್ತ ಐ.ಎ.ಎಸ್. ಅಧಿಕಾರಗಳಾದ ಶ್ರೀ ಟಿ. ತಿಮ್ಮೆಗೌಡ ಅವರಿಗೂ, ಕರಡುಪರಿಶೀಲನೆಯಲ್ಲಿ ನೆರವಾಗಿರುವ ಡಾ. ಚಕ್ಕರೆ ಶಿವಶಂಕರ್ ಮತ್ತು ಶ್ರೀಮತಿ ಆರತಿ ನಾಗೇಶ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**

# ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಹಾರೈಕೆ | vii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xii |
| ೧. ಸಾಧಾರಣ ಆರಂಭ | ೩ |
| ೨. ಪ್ರಬಲವಾಗುತ್ತಿದ್ದ ಬಿರುಗಾಳಿ | ೨೨ |
| ೩. ಸದ್ಯದ ಪ್ರೌಢವಯಸ್ಸು | ೩೨ |
| ೪. ಆಶ್ರಯವನ್ನರಸುತ್ತಾ... | ೫೦ |
| ೫. ಮಹಾ ಪಲಾಯನ | ೬೯ |
| ೬. ಜವಾಬ್ದಾರಿಗಳನ್ನು ಹೊರುತ್ತಾ... | ೮೯ |
| ೭. ಯುದ್ಧದ ಸಮಯ | ೧೦೬ |
| ೮. ಪ್ರಬಲ ನಿರೀಕ್ಷೆಗಳು | ೧೨೮ |
| ೯. ಅಡೆತಡೆಯ ಓಟ | ೧೬೦ |
| ೧೦. ಮೂವತ್ತಕ್ಕೆ ಜೀವನ ಪ್ರಾರಂಭ | ೧೮೩ |
| ೧೧. ಕಡೆಗೂ ದೊರಕಿದ ಯೋಗ್ಯ ವ್ಯಕ್ತಿ | ೨೧೨ |
| ೧೨. ಮನಸುಗಳ ಮದುವೆ | ೨೨೬ |
| ೧೩. 'ಸಮತೋಲನ ಕಾರ್ಯ' | ೨೪೨ |
| ೧೪. "ದುರದೃಷ್ಟದ ಸಮಯ" | ೨೬೮ |
| ೧೫. ಬೆಂಕಿಯೊಡನೆ ಹೋರಾಟ | ೨೯೨ |
| ೧೬. ಜೀವನ ಮತ್ತು ಮರಣ | ೩೧೧ |
| ೧೭. ಮರಣದ ನಂತರದ ಜೀವನ | ೩೨೯ |

# ಪ್ರವಾಹಕ್ಕೆ ಎದುರಾಗಿ

# ೧. ಸಾಧಾರಣ ಆರಂಭ

ನನ್ನ ಜೀವನವನ್ನು ನೀರ ಮೇಲೆ ಈಜುವಿಕೆ ಎಂಬುದಾಗಿ ಬಣ್ಣಿಸಬಹುದೆಂದು ನಾನೆಂದೂ ಊಹಿಸಿರಲಿಲ್ಲ. ಪ್ರತಿಯೊಬ್ಬ ಬಾಲಕನಂತೆ, ಬಾಲಕಿಯಾಗಿ ನನ್ನ ಕನಸುಗಳು ನನಸಾಗಬಹುದು ಹಾಗೂ ನನ್ನ ಜೀವನ ನಾವು ಕೇಳಿ ಬೆಳೆದಂತೆ, ಬಾಲ್ಯ ಕತೆಗಳಲ್ಲಿ ಹೇಳುವ ಹಾಗೆ, ಅರಳಬಹುದೆಂದು ನಾನೂ ಬಲವಾಗಿ ನಂಬಿದ್ದೆ. ನನ್ನ ಭವಿಷ್ಯದ ಬಗ್ಗೆ ದತ್ತವಾದ ನನ್ನ ಹಕ್ಕು ನನ್ನದೇ ಷರತ್ತಿನ ಅನ್ವಯ ಇದೆಯೆಂದು ನಾನು ಅಕಾಲ ಪ್ರೌಢಿಮೆಯನ್ನು ಹೊಂದಿದ್ದೆಯೆಂದು ಹೇಳುವ  ಮಟ್ಟಿಗೆ ಹೋಗಿದ್ದೆ. ಒಟ್ಟಿನಲ್ಲಿ ಲಿಂಗ, ಧರ್ಮ ಅಥವಾ ಜನಾಂಗದ ಪೂರ್ವಾಗ್ರಹ ನನ್ನ ನ್ಯಾಯಯುತ ವರ್ಗಕ್ಕೆ ಅಡ್ಡಿಪಡಿಸಬಹುದೆಂದು ನಾನು ಊಹಿಸಲೂ ಇಲ್ಲ. ಹಾಗೆಯೇ ನನ್ನ ಜೀವನದಲ್ಲಿನ ಏರಿಳಿತಗಳ ಬಗ್ಗೆಯೂ ನಾನು ಊಹಿಸಲಿಲ್ಲ.

ಅಂತೂ ಮೊದಲು ನನ್ನ ಪರಿಚಯವನ್ನು ಮಾಡಿಕೊಳ್ಳಬೇಕು. ನನ್ನ ಹೆಸರು ಟ್ರೂತ್ ಗ್ರುನ್‌ವಾಲ್ಡ್ ಎಂದು. ನಾನು ಹುಟ್ಟಿದ್ದು ಸಾಧಾರಣ ಮನೆತನವೊಂದರಲ್ಲಿ. ೧೯೨೨ರ ಜುಲೈ ತಿಂಗಳಿನ ಸಾಧಾರಣ ದಿನದಂದು, ವಿಯೆನ್ನಾದ ಅಷ್ಟೇ ಸಾಧಾರಣ ಭಾಗವೊಂದರಲ್ಲಿ. ನಾನು ನನ್ನ ತಂದೆ ತಾಯಿ ಸಿಗ್‌ಫ್ರೈಡ್ ಮತ್ತು ರೋಸಾ, ನನ್ನ ಅಣ್ಣಂದಿರು ಓಟ್ಟೋ ಮತ್ತು ಕುರ್ಟ್‌ರೊಂದಿಗೆ ಅಪಾರ್ಟ್‌ಮೆಂಟ್ ಒಂದರ ಎರಡನೇ ಮಹಡಿಯ ಸಣ್ಣ ಫ್ಲಾಟ್ ಒಂದರಲ್ಲಿ ವಾಸಿಸುತ್ತಿದ್ದೆವು. ಅದು ಇದ್ದದ್ದು ಶ್ರಮಜೀವಿಗಳೇ ಹೆಚ್ಚಾಗಿದ್ದ, ಬಡ ಯಹೂದಿಗಳೇ ವಾಸಿಸುತ್ತಿದ್ದ ಬ್ರಿಗಿಟನ್ ಎಂಬಲ್ಲಿ. ಅಂದವಲ್ಲದ ಹೊರಭಾಗ, ಕತ್ತಲು, ಗಾಳಿ, ಬೆಳಕು ಇಲ್ಲದ ಹಜಾರ ಹಾಗೂ ಕಡಿದಾದ ಸುತ್ತು ಹೊಡೆಯುವ ಮೆಟ್ಟಿಲುಗಳು. ನಮ್ಮ ಕಟ್ಟಡ ವರ್ಣಿಸುವಂತಹದ್ದಾಗಿರಲಿಲ್ಲ. ಫ್ಲಾಟ್‌ನ ಹೊರಗಡೆಯಿದ್ದ ಕೊಠಡಿಯಿಂದ ಸದಾ ವಿಚಿತ್ರವಾದ ರಬ್ಬರ್ ಸುಟ್ಟ ವಾಸನೆ ಬರುತ್ತಿತ್ತು. ನಾನಂದುಕೊಂಡಿದ್ದೆ, ಅದು ಮಾಟಗಾತಿಯೊಬ್ಬಳು ಕುದಿಸಿದ ಕಷಾಯವಿರಬಹುದೆಂದು. ಆದರೆ ನಂತರ ನನಗೆ ತಿಳಿಯಿತು, ಆ ಬಾಗಿಲಾಳು ಮತ್ತು ಅವನ ಮಗಳು 'ಭ್ರೂಣಹತ್ಯೆ ಮಾಡಿಸಿ, ಭ್ರೂಣಗಳನ್ನು ಯಾವುದೇ ಸಾಕ್ಷ್ಯವಿಲ್ಲದಂತೆ, ಸುಡುತ್ತಿದ್ದುದರಿಂದ ಬರುತ್ತಿದ್ದ ವಾಸನೆಯೆಂದು.

ನಮ್ಮ ಅಪಾರ್ಟ್‌ಮೆಂಟ್ ಆ ಕಟ್ಟಡದ ಇತರ ವಸತಿಗಳಂತೆ ಬಹಳ ಚಿಕ್ಕದಾಗಿತ್ತು. ಅದರಲ್ಲಿದ್ದದ್ದು ಎರಡು ಕೊಠಡಿಗಳು. ಒಂದು ಅಡಿಗೆ ಮನೆ. ಒಂದು

ಕೊಠಡಿ ನನ್ನ ತಾಯಿ–ತಂದೆಯರ ಮಲಗುವ ಕೋಣೆಯಾದರೆ, ಮತ್ತೊಂದು ನಮ್ಮ ಕೊಠಡಿ. ಆಡುಂಬೊಲ ಹಾಗೂ ನನ್ನ ಸೋದರರು ಮಲಗುವ ಕೊಠಡಿಯಾಗಿತ್ತು. ಈ ಕೊಠಡಿಯಲ್ಲಿ ಎರಡು ದೊಡ್ಡ ಕಬ್ಬಿಣದ ಸರಪಳಿಯುಳ್ಳ ಕಿಟಕಿಗಳಿದ್ದು, ಅವುಗಳ ಮೂಲಕ ನಮ್ಮ ಜಗತ್ತು ಸಾಗುವುದನ್ನು ನೋಡುತ್ತಿದ್ದೆ. ನನ್ನ ಪ್ರತಿದಿನದ ಬದುಕಿನ ಜಂಜಾಟಕ್ಕಿಂತ ಹೊರಗಿನ ಬದುಕು ಸದಾ ಹೆಚ್ಚು ಆಕರ್ಷಣೆಯನ್ನುಂಟುಮಾಡುತ್ತಿತ್ತು. ಯುಗೋಸ್ಲಾವಿಯಾದಲ್ಲಿ ಅಪ್ಪ ವ್ಯಾಪಾರಿಯಾಗಿ ಕೆಲಸ ಮಾಡುತ್ತಿರಲು, ನಾವೂ ನಮ್ಮ ಮನೆಯ ವಿವಿಧೋದ್ದೇಶ ಕೊಠಡಿಯಲ್ಲೇ ಮಲಗುತ್ತಿದ್ದೆವು, ಆನಂತರ ಮತ್ತೊಂದು ಸಣ್ಣ ಕೊಠಡಿಯಲ್ಲೇ ಅಮ್ಮನ ಜೊತೆ ಮಲಗುವ ಬಡ್ತಿ ದೊರೆಯಿತು. ಈ ಸಾಮೀಪ್ಯವನ್ನು ನನ್ನ ಭಾಗ್ಯ ಎಂದೆಣಿಸಿದೆ ಹಾಗೂ ಅದು ನನ್ನ ಎಳೆ ವಯಸ್ಸಿನಿಂದಲೇ ನಮ್ಮಿಬ್ಬರನ್ನೂ ಬಹಳ ಹತ್ತಿರಕ್ಕೆ ತಂದಿತು. ಅಪ್ಪ ಆಗಾಗ ಮನೆಗೆ ಬಂದಾಗ ಅಪ್ಪ, ಅಮ್ಮ ಇಬ್ಬರಿಗೂ ಮಲಗುವ ಕೋಣೆಯನ್ನು ಬಳಸಲನುಕೂಲವಾಗುವಂತೆ, ನನಗೆ ಇರುವ ಕೊಠಡಿಯಲ್ಲೇ ಹಗುರ ಹಾಸಿಗೆಯೊಂದನ್ನು ವ್ಯವಸ್ಥೆ ಮಾಡಲಾಯಿತು. ನಮ್ಮ ಮಲಗುವ ಕೋಣೆಗೆ ಒಂದೇ ಒಂದು ಸಣ್ಣ ಕಿಟಕಿಯಿತ್ತು. ಅದರಿಂದ ಹಿಂಬದಿಯಲ್ಲಿದ್ದ ಹೋಟೆಲ್ ಒಂದು ಕೆಳ ಮಹಡಿಯಲ್ಲಿ ಕಾಣುತ್ತಿತ್ತು. ಬೇಸಿಗೆಯ ದಿನಗಳಲ್ಲಿ, ಆ ಹೋಟೆಲ್ ಮುಚ್ಚಿದ್ದರೆ ಸಾಕೆಂದು ನಾನು ಎಷ್ಟೊಂದು ಹಾತೊರೆಯುತ್ತಿದ್ದೆ. ಕಾರಣ, ನಮ್ಮ ಕಿಟಕಿಯ ಕೆಳಗೆ ಕಸದ ತೊಟ್ಟಿಯಲ್ಲಿ ಅವರು ನಾರುವ ಕಸವನ್ನು ಬಿಸಾಕುತ್ತಿದ್ದರು. ಕೊಳೆತ ಮಾಂಸ ಹಾಗೂ ತರಕಾರಿ ಕಸದ ಗಬ್ಬು ವಾಸನೆಯನ್ನು ನಾವು ಸಹಿಸಿಕೊಳ್ಳ ಬೇಕಾಗಿತ್ತು. ನಮ್ಮ ಅಡಿಗೆ ಮನೆ ಚಿಕ್ಕದಾಗಿದ್ದು, ಅನುಕೂಲಕರವಾಗಿರಲಿಲ್ಲ. ಸೌದೆ ಉರಿಸುವ ಒಲೆ ಹಾಗೂ ಗೋಡೆಯಲ್ಲಿ ಕಪಾಟುಗಳಿಗೆ ಮಾತ್ರ ಸ್ಥಳಾವಕಾಶವಿತ್ತು. ಸ್ನಾನದ ಮನೆಯಿರಲಿಲ್ಲ. ಆದರೆ, ನಮ್ಮ ನೆರೆಹೊರೆಯವರೊಂದಿಗೆ ಕಕ್ಕಸ್ಸನ್ನು ಹಂಚಿಕೊಳ್ಳಬೇಕಾಗಿತ್ತು.

ನಮ್ಮ ಅಪಾರ್ಟ್‌ಮೆಂಟ್ ಚಿಕ್ಕದಾಗಿದ್ದರೂ, ಅಮ್ಮ ಅದರಲ್ಲಿ ಪ್ರೀತಿಯನ್ನು ತುಂಬಿ, ನಮಗೆ ಒಂದು ಸಂತೋಷ ತರುವ ಮನೆಯನ್ನಾಗಿ ಮಾಡಲು ಪ್ರಯತ್ನಿಸಿದಳು. ನಾವೆಲ್ಲರೂ ಒಂದೇ ಶಾಲೆಗೆ ಹೋಗುತ್ತಿದ್ದುದರಿಂದ, ನಮ್ಮ ಕಟ್ಟಡದಲ್ಲಿ ನಮಗೆ ಅನೇಕ ಸ್ನೇಹಿತರಿದ್ದರು. ಒಂದೇ ತರಹದ ಬಾಳ್ವೆ ನಡೆಸುತ್ತಿದ್ದೆವು. ಮಧ್ಯಾಹ್ನದ ವೇಳೆ ಅಮ್ಮ ತನ್ನ ಯಾರಾದರೂ ಗೆಳತಿಯರನ್ನು ನೋಡಲು ಹೋದಾಗ, ಓಟ್ಟೊವನ್ನು ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಸೇರಿರುತ್ತಿದ್ದ ಮಕ್ಕಳನ್ನು ನೋಡಿಕೊಳ್ಳಲು ಹೇಳುತ್ತಿದ್ದಳು. ಯಾರೂ ಬಿದ್ದು ಗಾಯ ಮಾಡಿಕೊಳ್ಳುವಂತಾಗ ಬಾರದು ಎಂದೇ ಅಮ್ಮ ಅವನಿಗೆ ಹೇಳುತ್ತಿದ್ದಳು; ಅಷ್ಟು ಬಿಟ್ಟರೆ, ನಮ್ಮ ಚೇಷ್ಟೆಯ ಬಗ್ಗೆ ಉದಾರವಾಗಿರುತ್ತಿದ್ದಳು. ಅಪ್ಪನ ವಾಕಿಂಗ್‌ಸ್ಟಿಕ್ ಅನ್ನು ಬಂದೂಕಿನಂತೆ

ಬಳಸಿ ಯುದ್ಧದ ಆಟಗಳನ್ನು ಆಡುತ್ತಿದ್ದೆವು. ಇಲ್ಲವೇ ನಾವು ರಸ್ತೆ ಬದಿಯಿಂದ ಸಂಗ್ರಹಿಸಿದ್ದ ಕುದುರೆ ಚೆಸ್ಟ್ ನಟ್‌ಗಳಿಂದ ಸೈನ್ಯದಳದಂತೆ ಕೆತ್ತನೆ ಮಾಡುತ್ತಿದ್ದೆವು. ಅಮ್ಮ ಅಪಾರ್ಟ್‌ಮೆಂಟ್‌ಗೆ ಹಿಂದಿರುಗಿ ಬರುವ ಹೊತ್ತಿಗೆ, ಮನೆ ತಲೆಕೆಳಕಾಗಿರುತ್ತಿತ್ತು. ಮೇಜು ಕುರ್ಚಿಗಳು ಸಂಪೂರ್ಣವಾಗಿ ಹಾಳಾಗಿರುತ್ತಿದ್ದುವು. ನೆಲದ ಮೇಲೆ ನಮ್ಮ ಚೆಸ್ಟ್‌ನಟ್ ಸೈನ್ಯ ಸೋತವರಂತೆ ಬಿದ್ದಿರುತ್ತಿತ್ತು. ಅಮ್ಮನೋ ಆಯಾಸವೆಂಬುದೇ ಅರಿಯದವಳು, ಎಂದೂ ದೂರುತ್ತಿರಲಿಲ್ಲ. ಸುಮ್ಮನೆ ಕೊಠಡಿಯನ್ನು ತಹಬದಿಗೆ ತರುತ್ತಿದ್ದಳು.

ಹತ್ತಿರದಲ್ಲೇ ಒಂದು ವಿಶಾಲ ಉದ್ಯಾನವಿತ್ತು. ಹವಾಮಾನ ಚೆನ್ನಾಗಿದ್ದಾಗಲೆಲ್ಲಾ, ಅನೇಕ ಬಾರಿ ನನ್ನ ಸೋದರರು ಓಟ್ಟೊ ಮತ್ತು ಕುರ್ಟ್ ಮತ್ತು ನಮ್ಮ ತರುಣ ಮಿತ್ರರೊಂದಿಗೆ ನಾನು ಅಲ್ಲಿಗೆ ಹೋಗುತ್ತಿದ್ದೆ. ನಾನು ಚಿಕ್ಕ ಹುಡುಗಿಯಾಗಿದ್ದಾಗ, ನನಗೆ ಕೊಡಲ್ಪಟ್ಟಿದ್ದ ಬೊಂಬೆಯನ್ನು ಕೂಡಿಸುವ ಗಾಡಿಯನ್ನು ಹೊರಗೆ ಹೋದಾಗಲೆಲ್ಲಾ ತೆಗೆದುಕೊಂಡು ಹೋಗಬೇಕೆಂದು ಹಠ ಮಾಡುತ್ತಿದ್ದೆ. ಆದರೂ, ನನ್ನ ಸೋದರರು ಹಾಗೂ ಇತರ ಹುಡುಗರು ಬೊಂಬೆಯಿಟ್ಟುಕೊಂಡು ಆಟವಾಡುವುದರಲ್ಲಿ ಆಸಕ್ತರಾಗಿರಲಿಲ್ಲ. ಆ ಗಾಡಿಯನ್ನು ಇತರರೆ ಉದ್ದೇಶಗಳಿಗಾಗಿ ಬಳಸುತ್ತಿದ್ದರು. ಕೆಲವು ವೇಳೆ, ನನ್ನನ್ನು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದಿದ್ದರು; ಇತರ ವೇಳೆ ಅಗ್ನಿಶಾಮಕ ವಾಹನ ಅಥವಾ ರೇಸ್ ಕಾರು ಇಂಥ ವಾಹನಗಳಲ್ಲಿ ನಾನು ಯಾವಾಗಲೂ ಪ್ರಯಾಣಿಕಳಾಗಿರುತ್ತಿದ್ದೆ, ಶೀಘ್ರ ಸಾವಿನೆಡೆಗೆ ನನ್ನನ್ನು ತಳ್ಳಬಹುದಾದ ಭಯ ಸದಾ ನನ್ನನ್ನು ಆವರಿಸಿತ್ತು. ಆದರೆ ಆ ಭಯವನ್ನು ಕುರಿತು ಹುಡುಗರು ನನ್ನನ್ನು ಅಪಹಾಸ್ಯ ಮಾಡಿದಾಗ ನಾನು ನನ್ನ ಭಯವನ್ನು ತೋರ್ಪಡಿಸುತ್ತಿರಲಿಲ್ಲ. ಐದನೆಯ ವಯಸ್ಸಿನಲ್ಲಿದ್ದಾಗಲೂ, ನಾನು ಯಾವುದೇ ದೌರ್ಬಲ್ಯದ ಚಿಹ್ನೆಯನ್ನು ತೋರಿಸಲು ಸಿದ್ಧಳಿರಲಿಲ್ಲ.

ಬ್ರಿಗಿಟನ್ ಎನ್ನುವುದು ಯಹೂದಿಗಳ ವಸಾಹತುವಿನಂತಿತ್ತು. ನಮ್ಮ ಎಲ್ಲಾ ಗೆಳೆಯರು ಯಹೂದಿಗಳೇ ಆಗಿದ್ದರು. ಸ್ಥಳೀಯ ಅಂಗಡಿಗಳ ಹಾಗೂ ಅಗತ್ಯ ಸೌಲಭ್ಯಗಳನ್ನೆಲ್ಲಾ ಯಹೂದಿಗಳೇ ನಡೆಸುತ್ತಿದ್ದರು. ಅವರಲ್ಲಿ ಕೆಲವರು ಮಡಿವಂತಿಕೆಯ ಹಿನ್ನೆಲೆಯಿಂದ ಬಂದವರಾಗಿದ್ದರೆ, ನಮ್ಮಂಥ ಇತರರು ಸಂಪೂರ್ಣವಾಗಿ ಬೆರೆಯುತ್ತಿದ್ದರು. ನಮ್ಮ ದಿನನಿತ್ಯದ ಕಾರ್ಯಕ್ರಮಗಳಲ್ಲಿ ಯಹೂದಿ ಆರಾಧನ ಮಂದಿರಕ್ಕೆ ವಾರದ ಪ್ರವಾಸಕ್ಕೆ ಹೋಗುವುದು ಸೇರಿರಲಿಲ್ಲ. ನಾವು ಯಹೂದಿ ಶಿಕ್ಷಣವನ್ನು ಪಡೆದಿರಲಿಲ್ಲ. ನನ್ನ ಯಹೂದಿತನ ಎನ್ನುವುದು ಸಮಸ್ಯೆಯೇ ಆಗಿರಲಿಲ್ಲ. ಕಾರಣ, ನಾವು ನಮ್ಮಂತಹವರ ಮಧ್ಯೆಯಲ್ಲಿಯೇ ಇದ್ದೆವು. ನಾವು ಯಾವುದೇ ರೀತಿಯಲ್ಲಿ ಭಿನ್ನ ಎಂದೆನಿಸಿರಲಿಲ್ಲ.

ನಾನು ಮೂರು ಮಕ್ಕಳ ಪೈಕಿ ಕೊನೆಯವಳಾಗಿದ್ದೆ. ಓಟ್ಟೊ ಹುಟ್ಟಿದ್ದು

೧೯೧೨ರಲ್ಲಿ. ನನಗಿಂತ ಅವನು ಹತ್ತು ವರ್ಷ ದೊಡ್ಡವನಾಗಿದ್ದುದರಿಂದ, ಅವನನ್ನು ನಾನು ದೇವಸಮಾನವಾಗಿ ಕಾಣುತ್ತಿದ್ದೆ ಹಾಗೂ ಚಿಕ್ಕ ವಯಸ್ಸಿನಿಂದಲೇ ಅವನನ್ನು ಮಾದರಿಯಾಗಿ ನೋಡುತ್ತಿದ್ದೆ. ಅವನು ಅತಿ ಧೈರ್ಯಶಾಲಿ ಹಾಗೂ ಮುನ್ನುಗ್ಗುವ ಸ್ವಭಾವದವನಾಗಿದ್ದುದರಿಂದ ಅವನನ್ನು ಸುಭದ್ರತೆಗಾಗಿ ಇಟ್ಟುಕೊಂಡವಳಂತೆ ಕಾಣುತ್ತಿದ್ದುದರಿಂದ, ನನಗೆ ಆತಂಕವಿಲ್ಲದಂತಾಗಿತ್ತು. ಒಮ್ಮೆ ನಮ್ಮ ಅಪಾರ್ಟ್‌ಮೆಂಟಿನೆದುರು ಕ್ಯಾಥೊಲಿಕರ ಮೆರವಣಿಗೆಯನ್ನು ನಿಲ್ಲಿಸಲಾಯಿತು. ಅದರಲ್ಲಿ ಭಾಗಿಯಾಗಿದ್ದ ಸೈನ್ಯ ದಳ ಅನೇಕ ಬಾರಿ ಗಾಳಿಯಲ್ಲಿ ಗುಂಡುಗಳನ್ನು ಹೊಡೆದರು. ತಕ್ಷಣವೇ ಓಟ್ಟೊ ಕಿಟಕಿ ಬಳಿ ಧಾವಿಸಿದ, ಏನಾಗುತ್ತಿದೆ ಎಂಬುದನ್ನು ನೋಡಲು. ನಾನು ಅವನನ್ನು ಹಿಂಬಾಲಿಸಿದೆ. ಕುರ್ಟ್ ಮತ್ತು ಅಮ್ಮ ನಡುಗುತ್ತಾ ಮಲಗುವ ಕೋಣೆಯಲ್ಲಿ ಅವಿತುಕೊಂಡರು. ಹೀಗೆ ಓಟ್ಟೊ ನನ್ನ ಬಾಲ್ಯ ಜೀವನದಲ್ಲಿ ನನ್ನ ತಂದೆಯೋಪಾದಿಯಾಗಿದ್ದನು. ಅಪ್ಪ ಬಹುಪಾಲು ಮನೆಯಿಂದ ಹೊರಗೇ ಇದ್ದುದರಿಂದ, ಕುರ್ಟ್ ನನಗಿಂತ ನಾಲ್ಕು ವರ್ಷ ಮಾತ್ರ ದೊಡ್ಡವನಾಗಿದ್ದುದರಿಂದ, ಅವನೊಂದಿಗೆ ನನ್ನ ಸಂಬಂಧ ಭಿನ್ನ ರೀತಿಯದಾಗಿತ್ತು. ಅವನು ಖಾಯಿಲೆಯ ಮಗುವಾಗಿ ನಮ್ಮಮ್ಮನನ್ನು ಸದಾ ಪೀಡಿಸುತ್ತಿದ್ದುದರಿಂದ, ನಾನು ಅವನನ್ನು ಸದಾ ತಿರಸ್ಕಾರದಿಂದ ನೋಡುತ್ತಿದ್ದೆ. ಅದೇ ನಾನು ಸ್ವತಂತ್ರವಾಗಿ ಬೆಳೆಯುತ್ತಿದ್ದ ಹುಡುಗಿ, ನನ್ನ ವಯಸ್ಸಿಗೇ ದೃಢ ಹಾಗೂ ಎತ್ತರವಾಗಿದ್ದೆ. ನನ್ನನ್ನೇ ಅಕ್ಕ ಎಂದು ಅನೇಕ ಬಾರಿ ಕೇಳುತ್ತಿದ್ದಾಗ ಕುರ್ಟ್‌ಗೆ ಕೋಪ ಬರುತ್ತಿತ್ತು. ಬಾಲ್ಯದಿಂದಲೂ ನಮ್ಮಿಬ್ಬರದು ಉಭಯ ಮನೋವೃತ್ತಿಯ ಸಂಬಂಧ, ಕುರ್ಟ್‌ನದು ಗುಟ್ಟಾಗಿ ಕುಶಲತೆಯಿಂದ ಬಳಸುವ ಪ್ರವೃತ್ತಿ, ನಾನೋ ಆವೇಶ ಪ್ರವೃತ್ತಿಯುಳ್ಳವಳು ಹಾಗೂ ಶೀಘ್ರ ಕೋಪಿ. ಊಟಕ್ಕೆ ಕುಳಿತಾಗ, ಟೇಬಲ್‌ನ ಕೆಳಗಿನಿಂದ ಜಿಗುಟುತ್ತಿದ್ದ ನಾನು, ಎಲ್ಲರೆದುರಿಗೆ ಅವನ ತಲೆಗೆ ಏಟು ಕೊಡುತ್ತಿದ್ದೆ. ಅವನ ಅನಾರೋಗ್ಯದ ಬಗ್ಗೆ ತಲೆ ಕೆಡಿಸಿಕೊಂಡಿದ್ದ ಅಮ್ಮ, ಅವನೇ ತರಲೆ ಆರಂಭಿಸಿದುದನ್ನರಿಯದೆ, ಅವನ ಪರ ವಹಿಸಿ, ನನ್ನನ್ನು ಬೈಯ್ಯುತ್ತಿದ್ದಳು. ಅವನೇ ಜಗಳ ಆರಂಭಿಸಿದ್ದು ಎಂದು ನಾನೆಷ್ಟೇ ಹೇಳಿದರೂ, ಅವಳು ಅದನ್ನು ಕೇಳಲು ಸಿದ್ಧಳಿರಲಿಲ್ಲ. ಅಮ್ಮ ಮತ್ತು ನನ್ನ ನಡುವಿನ ಈ ಗಲಾಟೆಯಲ್ಲಿ ತನಗೇನೂ ಗೊತ್ತಿಲ್ಲದಂತೆ ಕುರ್ಟ್ ನಿರ್ಲಿಪ್ತನಾಗಿರುತ್ತಿದ್ದ. ಇದು ನನ್ನ ವಿರುದ್ಧ ಅಮ್ಮನ ಕೋಪವನ್ನು ಹಾಗೂ ಅವನ ವಿರುದ್ಧ ನನ್ನ ಕೋಪವನ್ನು ಹೆಚ್ಚಿಸುತ್ತಿತ್ತು. ಅವಳು ವಿನಾಕಾರಣ ನನ್ನನ್ನು ದೂಷಿಸುತ್ತಿದ್ದುದರ ಬಗ್ಗೆ ಹಾಗೂ ಕುರ್ಟ್‌ನ ನಡವಳಿಕೆಯನ್ನು ಬದಲಾಯಿಸುವುದರ ಬಗ್ಗೆಯೂ ಸಹ ನಾನೇನೂ ಮಾಡಲು ಸಾಧ್ಯವಿಲ್ಲವೆಂದು ನನ್ನ ಕಹಿ ಅನುಭವ ಮನವರಿಕೆ ಮಾಡಿ ಕೊಟ್ಟಿತ್ತು.

ಕುಟುಂಬದ ಹೆಣ್ಣು ಮಗುವಾಗಿ ಅಪ್ಪನ ದೃಷ್ಟಿಯಲ್ಲಿ ನಾನು ಮುದ್ದು

ಮಗುವಾಗಿದ್ದೆ. ನನ್ನ ಕಿರುಬೆರಳಲ್ಲೇ ನಾನು ಅವನನ್ನು ಕುಣಿಸಬಲ್ಲವಳಾಗಿದ್ದೆ. ಆದರೂ ಅದೇ ಧಾಟಿಯಲ್ಲಿ ನನ್ನ ಅಣ್ಣಂದಿರು ನನ್ನನ್ನು ರೇಗಿಸುತ್ತಿದ್ದರು, ಕರುಣೆಯಿಲ್ಲದೆ ತಮ್ಮ ತಂಗಿಯನ್ನು ರೇಗಿಸಲು ಅನೇಕ ದಾರಿಗಳನ್ನು ಕಂಡುಕೊಂಡು. ಅವರು ಅನೇಕ ವೇಳೆ ಹೇಳುತ್ತಿದ್ದುದೇನೆಂದರೆ ನೀನು ನಮ್ಮ ತಂದೆ–ತಾಯಿಯರ ಮಗುವಲ್ಲ, ಕಾರಣ ನೀನು ಅವರ ಮದುವೆ ಸಮಯದಲ್ಲಿ ಇರಲಿಲ್ಲ ಎಂದು. ಇದರಿಂದ ಸ್ವಾಭಾವಿಕವಾಗಿಯೇ ನನಗೆ ವೇದನೆಯುಂಟಾಯಿತು. ಅವರ ವಾದ ಸರಿಯಲ್ಲವೆಂದು ನನಗೆ ಗೊತ್ತಿದ್ದರೂ ತಪ್ಪಿಹೋಗಿದ್ದ ತರ್ಕವನ್ನು ನಾನು ಪತ್ತೆ ಮಾಡಲಾಗಲಿಲ್ಲ. ಬುದ್ಧಿವಂತಿಕೆ ಪ್ರಶ್ನೆ ಬಂದಾಗ ನನ್ನ ಅಣ್ಣಂದಿರೇ ಮೇಲುಗೈ ಪಡೆಯುತ್ತಿದ್ದರಲ್ಲದೆ, ಅವರು ನೋಡುವುದಕ್ಕೂ ಚೆನ್ನಾಗಿದ್ದರು. ಆದರೆ, ನಾನು ಸೊಟ್ಟ ಕಣ್ಣಿನವಳಾಗಿದ್ದು, ಕನ್ನಡಕ ಧರಿಸುತ್ತಿದ್ದೆ. ಬಹಳ ಮಚ್ಚೆಗಳಿದ್ದವು, ನನ್ನ ರೂಪದ ಬಗ್ಗೆ ತನಗೆ ಚಿಂತೆಯಾಗಿರುವುದಾಗಿ ಅಮ್ಮ ಒಪ್ಪಿಕೊಂಡಳು. ಆದರೆ ಅತ್ಯಾಕರ್ಷಕ ಜನರೂ ಸಹ ವಯಸ್ಸಾಗುತ್ತಿದ್ದಂತೆ ತಮ್ಮ ಸೌಂದರ್ಯವನ್ನು ಕಳೆದು ಕೊಳ್ಳುತ್ತಾರೆ ಎಂದು ಹೇಳಿ ನನ್ನನ್ನು ಸಮಾಧನಪಡಿಸಲೆತ್ನಿಸುತ್ತಿದ್ದಳು. ಅವಳು ಒತ್ತಿ ಹೇಳುತ್ತಿದ್ದಳು: "ಸೌಂದರ್ಯ ಕ್ರಮೇಣ ಅದೃಶ್ಯವಾಗುತ್ತದೆ, ಆದರೆ ನಿನ್ನ ಮೆದುಳಿನಲ್ಲಿ ನೀನು ಏನನ್ನು ತುಂಬಿಕೊಳ್ಳುತ್ತೀಯೋ ಅದು ಮಾತ್ರ ಎಂದೆಂದಿಗೂ ಉಳಿಯುತ್ತದೆ." ಅಮ್ಮ ಚಿಕ್ಕ ವಯಸ್ಸಿನವಳಾಗಿದ್ದಾಗಿನ ಚಿತ್ರವನ್ನು ನೋಡಿದರೆ, ಅವಳೇನೂ ಹೇಳಿಕೊಳ್ಳುವಷ್ಟು ಆಕರ್ಷಕವಾಗಿರಲಿಲ್ಲ. ನನ್ನನ್ನೇ ಅವಳು 'ಚಿಕ್ಕಮ್ಮ' ಎಂದು ಕರೆಯುವಷ್ಟರ ಮಟ್ಟಿಗೆ ನನ್ನಲ್ಲಿ ಅವಳ ಪ್ರತಿರೂಪವನ್ನು ಕಾಣುತ್ತಿದ್ದರೇನೋ! ಅವಳು ಹೇಳುತ್ತಿದ್ದುದು ನನಗೆ ತಿಳಿದಂತೆ, ನಾನು ನಮ್ಮ ಮನೆಯ ಕುರೂಪಿ ಎಂದು ಭಾವಿಸುವುದೇನೂ ಕಡಿಮೆಯಾಗಲಿಲ್ಲ. ನನ್ನ ಅಣ್ಣಂದಿರಿಗೆ ಹೋಲಿಸಿದರೆ ನಾನು ಬಹಳ ಅನಾನುಕೂಲ ಪರಿಸ್ಥಿತಿಯಲ್ಲೇ ಬೆಳೆದೆ. ಅವರೊಂದಿಗೆ ರೂಪ, ವಯಸ್ಸು ಅಥವಾ ಜ್ಞಾನದಲ್ಲಿ ನಾನು ಸ್ಪರ್ಧಿಸಲಾರೆ ಎಂದು ನಂಬಿದ್ದೆ. ಅದನ್ನು ಒಪ್ಪಿಕೊಳ್ಳಲಾರದೆ, ನಾನು ಸಿಡುಕು ಮತ್ತು ದುಗುಡದಿಂದ ಕೂಡಿದ ಮಗುವಾದೆ. ಅಮ್ಮನಿಗೆ ಹೆಚ್ಚು ಸಂಕೋಚವಾಗುವಂತಾದರೂ, ನನಗೆ ಹಲವು ವೇಳೆ ಅವಳ ಗೆಳತಿಯರನ್ನು ಮಾತನಾಡಿಸುವ ಮನಸ್ಸಾಗುತ್ತಿರಲಿಲ್ಲ. ಅವರುಗಳು ರಸ್ತೆಯಲ್ಲಿ ಸಿಕ್ಕಾಗ. ನನ್ನ ನಡವಳಿಕೆಯನ್ನು ಅವರು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅವರನ್ನು ಒಲಿಸಿಕೊಳ್ಳಲು ನಾವೇಕೆ ಸಂತೊಷವಾಗಿರುವಂತೆ ನಟಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ ಎಂದು ನಾನು ವಿವರಿಸಿದೆ. ಅಮ್ಮ ವಿವೇಕಿ; ಅವಳ ಅನೇಕ ಸುದ್ದಿಗುಟ್ಟುಗಳಲ್ಲೊಂದನ್ನು ಬೇರೆ ಮಾತಿಲ್ಲದೆ ಹೇಳುತ್ತಿದ್ದಳು: "ಒಂದು ನಗು ಹಾಗೂ ಒಳ್ಳೆಯ ಮಾತು– ಇವುಗಳಿಂದ ನಿನಗೇನೂ ಖರ್ಚಾಗುವುದಿಲ್ಲ. ಆದರೆ ಅವು ನಿನ್ನನ್ನೇ ಜೀವನದಲ್ಲಿ ಬಹುದೂರ ಕೊಂಡೊಯ್ಯಬಲ್ಲುವು. ಆ ಹೊತ್ತಿನಲ್ಲಿ ಅವಳ ಮಾತಿನ ವಿವೇಕ ನನಗೆ ಹಿಡಿಸಿರಲಿಲ್ಲ.

ನಾನು ಚಿಕ್ಕವಳಿದ್ದಾಗ, ಅಮ್ಮ ತಾನು ಅಪ್ಪನನ್ನು ಪ್ರೀತಿಸಿದ ಕತೆಗಳನ್ನು ಹೇಳುವುದನ್ನು ನಾನು ಇಷ್ಟಪಟ್ಟಿದ್ದೆ. ಅವಳು ಅಪ್ಪನನ್ನು ಮೊದಲ ಸಲ ಭೇಟಿ ಮಾಡಿದ್ದು, ಅವಳು ಕೋಶರ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಅಪ್ಪ ತನ್ನ ಊಟಕ್ಕಾಗಿ ಮಾಂಸದ ತಿನಿಸನ್ನು ಕೊಳ್ಳಲು ಹೋಗುತ್ತಿದ್ದನಂತೆ. ಅಪ್ಪನ ಭೇಟಿ ದಿನನಿತ್ಯದ ಘಟನೆಯಾಯಿತು ಹಾಗೂ ಈ ಸುಂದರ ತರುಣ ಬಿಡುವು ಮಾಡಿಕೊಂಡು, ಅವಳೊಡನೆ ಮಾತಾಡುತ್ತಿದ್ದುದು, ಅಮ್ಮನಿಗೆ ಹೆಮ್ಮೆಯ ವಿಷಯವಾಗಿತ್ತು. ತಾನು ಸಂಜೆ ಹೊತ್ತು ನೃತ್ಯ ಮಾಡುತ್ತಾ ಕಾಲ ಕಳೆಯುತ್ತಿದ್ದುದಾಗಿಯೂ, ವಿಯೆನ್ನಾದ ವಾಲ್ಟ್ಸ್ ನೃತ್ಯ ತನಗೆ ಇಷ್ಟವೆಂದೂ ಅಪ್ಪ ಅವಳಿಗೆ ಹೇಳಿದ್ದರು. ಹಿಂದಿನ ರಾತ್ರಿ ಎಷ್ಟೊಂದು ಕಾಲರ್‌ಗಳು ಒದ್ದೆಯಾಗುವಷ್ಟು ಬೆವರುತ್ತಿದ್ದೆ. ಎಂದು ಹೇಳಿದ್ದು ಅಮ್ಮನಿಗೆ ಇಷ್ಟವಾಗಿತ್ತು. ಅಮ್ಮ ಎಂದೂ ನೃತ್ಯ ನೋಡಲು ಹೋಗಿದ್ದಿಲ್ಲ. ಅದರ ಬದಲು ಸಂಜೆ ಹೊತ್ತು ನಡೆಯುತ್ತಿದ್ದ ಉಚಿತ ಉಪನ್ಯಾಸಗಳಿಗೆ ಹೋಗುತ್ತಿದ್ದಳು ಹಾಗೂ ಉಪನ್ಯಾಸಕರು ಶಿಫಾರಸು ಮಾಡುತ್ತಿದ್ದ ಪುಸ್ತಕಗಳನ್ನು ಓದುವುದರಲ್ಲಿ ಸಂಜೆ ಕಳೆಯುತ್ತಿದ್ದಳು. ಅಪ್ಪನಿಗೆ ರೂಪವಿದ್ದರೆ, ಅಮ್ಮನಿಗೆ ಬುದ್ಧಿಶಕ್ತಿಯಿತ್ತೆಂದು ಕಾಣುತ್ತದೆ. ಆಗ ಅಪ್ಪ ತನ್ನೊಂದಿಗೆ ವಿಯೆನ್ನಾದ ಅರಬಾದ ಪ್ರದೇಶದಲ್ಲಿ ಒಂದು ದಿನ ಕಳೆಯುವಂತೆ ಕೇಳಿದರು. ಮೊದಲು ಅದಕ್ಕೊಪ್ಪಿಕೊಳ್ಳಲು ಅವಳಿಗೆ ಬಹಳ ನಾಚಿಕೆಯಿತ್ತು. ಆದರೆ ತನ್ನ ತಂದೆಯ ಅನುಮತಿ ಪಡೆದು, ಹೊರಗಡೆ ಹೋಗುವ ಸಾಹಸ ಮಾಡಲು ನಿರ್ಧರಿಸಿದಳು. ಕೊನೆಗೆ ಅವರು ಒಂದು ದಿನ ವಿಮೋಚನಾ ಹಬ್ಬದ ಮಧ್ಯದಲ್ಲಿ ಹೋಗಲು ಸಿದ್ಧ ಮಾಡಿಕೊಂಡರು. ಒಂದು ಸಣ್ಣ ಹೋಟೆಲ್ ಒಂದರಲ್ಲಿ ನಿಂತಾಗ, ಅಲ್ಲಿ ಚಿಕ್ಕ ಗೋಧಿ ಬ್ರೆಡ್ ಒಂದನ್ನು ನೀಡಿದಾಗ, ಅಮ್ಮ ಊಟವನ್ನೇ ತಿರಸ್ಕರಿಸಬೇಕಾಯಿತು. ಅಮ್ಮ ಸಾಂಪ್ರದಾಯಿಕ ಯಹೂದಿ ಮನೆತನದಿಂದ ಬಂದವಳಾದ್ದರಿಂದ ಬ್ರೆಡ್ಡನ್ನಾಗಲಿ, ಹಂದಿ ಮಾಂಸದ ತಿನಿಸನ್ನಾಗಲೀ ತಿನ್ನುತ್ತಿರಲಿಲ್ಲ. ಅಪ್ಪ ಸಂಮಿಶ್ರ ಹಿನ್ನೆಲೆಯಿಂದ ಬಂದವನು. ಅವಳನ್ನು ಹೇಗೋ ಹೊಂದಿಕೊಳ್ಳುವಂತೆ ಒಪ್ಪಿಸಲು ಯತ್ನಿಸಿದ. ಆದರೆ, ಅವಳು ಹಟ ಮಾಡಿದಳು. ನಂತರ ಅವಳು ನನ್ನ ಬಳಿ ಒಪ್ಪಿಕೊಂಡಂತೆ ಅಂತಹ ನಿಷೇಧಿತ ಆಹಾರವನ್ನು ತಿಂದರೆ, ದೇವರು ತನ್ನನ್ನು ಶಿಕ್ಷಿಸುತ್ತಿದ್ದ ಎಂದು ಖಂಡಿತವಾಗಿ ನಂಬಿದ್ದಳು. ಆದರೂ, ಅಮ್ಮ ಏನನ್ನಾದರೂ ತಿನ್ನಬೇಕು ಎಂದು ಅಪ್ಪ ಒತ್ತಾಯಪಡಿಸುತ್ತಲೇ ಇದ್ದ. ಕೊನೆಗೆ ಸ್ಯಾಂಡ್‌ವಿಚ್ಚನ್ನು ರುಚಿ ನೋಡಲು ಒಪ್ಪಿದಳು, ಆದರೆ ದೇವರು ತನಗೆ ತೊಂದರೆ ಮಾಡಬಹುದು ಎಂದು ಅಮ್ಮ ನಿರೀಕ್ಷಿಸುತ್ತಿದ್ದಳು. ಆದರೆ ದೇವರಿಂದ ಯಾವುದೇ ಅಂತಹ ಅನುಮೋದನೆ ಮಾಡುವಂತಹ ಕುರುಹು ದೊರೆಯದೆ ಇದ್ದುದು, ಯಹೂದಿ ಸಾಂಪ್ರದಾಯಿಕತೆಯಿಂದ ಬೇರ್ಪಡುವ ಆರಂಭಕ್ಕೆ ಅಮ್ಮನಿಗೆ ಅವಕಾಶವಾಯಿತು.

ಅಮ್ಮನಂತೆ ಅಪ್ಪ ತನ್ನ ಯಾವುದೇ ಕತೆಗಳನ್ನು ಹೆಚ್ಚು ಹೇಳುತ್ತಿರಲಿಲ್ಲ. ಆದರೆ, ನನ್ನನ್ನು ತನ್ನ ಮಂಡಿಯ ಮೇಲೆ ಕೂರಿಸಿಕೊಂಡು, ಮೊದಲ ಮಹಾಯುದ್ಧದಲ್ಲಿ ಅವನು ಸಲ್ಲಿಸಿದ ಆಸ್ಟ್ರಿಯಾದ ನೃತ್ಯ ವೈದ್ಯಕೀಯ ದಳದಲ್ಲಿ ಸೇವೆಗೆ ಸಂಬಂಧಿಸಿದ ಯುದ್ಧದ ಕತೆಗಳನ್ನು ಹೇಳುತ್ತಿದ್ದನು. ಮೊದಲು ಅವನು ಸೇವೆ ಸಲ್ಲಿಸಿದ್ದು ಪೋಲೆಂಡಿನ ಪೂರ್ವ ದಳದಲ್ಲಿ. ನಂತರ ಇಟಾಲಿಯನ್ನರ ವಿರುದ್ಧ ಆಲ್ಪ್ಸ್‌ನಲ್ಲಿ. ನನಗೆ ಚೆನ್ನಾಗಿ ನೆನಪಿದೆ, ಅಪ್ಪ ಸಂರಕ್ಷಿಸಿ ಇಟ್ಟುಕೊಂಡಿದ್ದ ಪೆಟ್ಟಿಗೆಯನ್ನು; ಅದರಲ್ಲಿದ್ದುದು ಯುದ್ಧದಲ್ಲಿ, ಭಯಾನಕವಾಗಿ ಗಾಯಗೊಂಡವರ ಚಿತ್ರಗಳು. ಓಟ್ಟೊ, ಕುರ್ಟ್ ಮತ್ತು ನಾನು ಈ ಭಯಾನಕ ಚಿತ್ರಗಳಿಂದ ಆಶ್ಚರ್ಯಗೊಂಡು ಅಪ್ಪನ ಪೆಟ್ಟಿಗೆಯನ್ನು ತೆಗೆದು ನೋಡಲು ಅನೇಕ ವೇಳೆ ಪ್ರಯತ್ನಪಟಿದ್ದೆವು. ವೈದ್ಯಕೀಯ ದಳದಲ್ಲಿನ ಅಪ್ಪನ ಯುದ್ಧದ ಅನುಭವಗಳು ಅವನನ್ನು ಜೀವನಪೂರ್ತಿ ಪ್ರಶಾಂತಚಿತ್ತನನ್ನಾಗಿ ಹಾಗೂ ಆಸ್ಟ್ರಿಯಾದ ಸಮಾಜವಾದಿ ಪಕ್ಷದ ಪಕ್ಕಾ ಬೆಂಬಲಿಗನನ್ನಾಗಿ ಮಾಡಿರಬೇಕು. ಅದಕ್ಕೇ ಅವನು ಅನಂತರದಲ್ಲಿ ಆಸ್ಟ್ರಿಯಾದ ರಾಜಮನೆತನದ ರದ್ದತಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಮಾಜವಾದಿಗಳ ಗುಂಪಿನಲ್ಲಿ ಒಬ್ಬನಾದ. ಒಂದು ದಿನ ನಾನು ಪ್ರಾಥಮಿಕ ಶಾಲೆಯಲ್ಲಿದ್ದಾಗ ಶಿಕ್ಷಣ ಸಚಿವರು ನಮ್ಮ ಶಾಲೆಗೆ ಹಾಗೂ ನನ್ನ ತರಗತಿಗೆ ಭೇಟಿ ಕೊಡುವವರೆಗೂ, ಅಪ್ಪ ಆ ಚಳವಳಿಗೆ ನಿಷ್ಠೆ ಹೊಂದಿದ್ದನೆಂದು ನನಗೆ ತಿಳಿದಿರಲಿಲ್ಲ. ಆ ಸಚಿವರು ಹಾಜರಿಯಲ್ಲಿ ನನ್ನ ಕೊನೆಯ ಹೆಸರನ್ನು ಗುರುತಿಸಿ ನಾನು ಸಿಗ್‌ಫ್ರಿ ಗ್ರುನ್‌ವಾಲ್ಡ್‌ನ ಮಗಳೇ ಎಂದು ಕೇಳಿದರು. ನಾನು ಹಾಗೆಂದಾಗ, ತಮ್ಮ ಶುಭಾಶಯಗಳನ್ನು ನನ್ನ ತಂದೆಗೆ ತಿಳಿಸುವಂತೆ ಹೇಳಿದರು. ನನ್ನೊಬ್ಬಳನ್ನು ಹೀಗೆ ಗುರುತಿಸಿದ್ದಕ್ಕೆ ನನಗೆ ಅಪ್ಪನ ಬಗ್ಗೆ ಹೆಮ್ಮೆಯುಂಟಾಯಿತು.

ಅಪ್ಪ 'ಮುಕ್ತ ಚಿಂತಕರ ಸಂಘ'ದ ಸದಸ್ಯನೂ ಆಗಿದ್ದನು. ಹಾಗಾಗಿ ಅವನೊಬ್ಬ ಗಾಢ ನಾಸ್ತಿಕನಾಗಿದ್ದನು. ನಾನು ಮಗುವಾಗಿದ್ದಾಗಿನಿಂದ ನಾವು ಯಾವ ಯಹೂದಿ ಹಬ್ಬವನ್ನೂ ಆಚರಿಸಲಿಲ್ಲ, ಅಂತೆಯೇ ಕ್ರೈಸ್ತ ಹಬ್ಬಗಳನ್ನು ಸಹ, ಅಮ್ಮನಿಗೆ ತನ್ನ ಗಂಡನ ನಾಸ್ತಿಕತೆ ಹಾಗೂ ಯಹೂದಿ ಅನನ್ಯತೆಯ ನಿರಾಕರಣೆ ಬಗ್ಗೆ ಸಂತೋಷ ವಿರಲಿಲ್ಲ. ಆದರೆ ಅವನೊಂದಿಗೆ ಅದರ ಬಗ್ಗೆ ವಾದಿಸುತ್ತಿರಲಿಲ್ಲ– ಅದರಲ್ಲೂ ನಮ್ಮೆದುರಿಗೆ. ಅಮ್ಮ ದೊಡ್ಡ ಪ್ರಮಾಣದ ಸ್ವನಿಯಂತ್ರಣವನ್ನು ಯಾವಾಗಲೂ ನಿರ್ವಹಿಸಬೇಕಾಗಿತ್ತು. ನಮ್ಮಮ್ಮನ ಪ್ರಶಾಂತ ಸ್ವಭಾವದ ವಿರುದ್ಧವಾಗಿ ಅಪ್ಪನದು ಸುಲಭವಾಗಿ ಕೆರಳುವ ಸ್ವಭಾವ; ಏನಾದರೂ ಅವನನ್ನು ಕೆರಳಿಸಿದರೆ, ಹಾಗೂ ಅವನಿಗೇನಾದರೂ ಬೇಸರವಾದರೆ, ತಕ್ಷಣವೇ ಅವನು ತಾಳ್ಮೆ ಕಳೆದುಕೊಳ್ಳುತ್ತಿದ್ದನು. ಬೈಗುಳ ಬಾಯಿಂದ ಬರುತ್ತಿತ್ತು. ಭೌತಿಕವಾಗಿ ಹಿಂಸೆ ಮಾಡದಿದ್ದರೂ, ನಮ್ಮ ಕುಟುಂಬದ ಮೇಲೆ ಅಪ್ಪ ಯಾವುದೇ ರೀತಿಯ ಪಿತೃಪ್ರಧಾನ ಕಟ್ಟುಪಾಡನ್ನು

ವಿಧಿಸುತ್ತಿರಲಿಲ್ಲ. ಆದರೆ, ಪಾಲನೆಯೆಲ್ಲವನ್ನೂ ಅಮ್ಮನಿಗೇ ವಹಿಸಿದ್ದನು. ಅವಳು ಒಳ್ಳೆಯ ಆದರೆ ದೃಢ ಸ್ವಭಾವದವಳು. ನಮ್ಮೆಲ್ಲರ ತಪ್ಪುಗಳಿದ್ದರೆ, ಅವುಗಳಿಗೆ ನಮ್ಮನ್ನೇ ಜವಾಬ್ದಾರರನ್ನಾಗಿಸುತ್ತಿದ್ದಳು. ಉದಾಹರಣೆಗೆ ಅಂಗಡಿಯಿಂದ ಏನಾದರೂ ತರಲು ಕಳುಹಿಸಿದಾಗ ನಾನು ಆ ಕೋರಿಕೆಯನ್ನು ನೆರವೇರಿಸದಿದ್ದರೆ, ಅಮ್ಮ ತನ್ನ ಮೆಲುದನಿಯಲ್ಲಿ ಹೇಳುತ್ತಿದ್ದಳು: "ನಿಮ್ಮಮ್ಮನನ್ನು ಈ ರೀತಿ ನಡೆಸಿಕೊಳ್ಳುವುದೇ ಸರಿ. ಇದಕ್ಕೆ ನಾನು ಅರ್ಹಳಂತೆ ಮಾಡಿದ್ದೀಯ" ಈ ಮಾತುಗಳು ನನ್ನಲ್ಲಿ ತಪ್ಪಿತಸ್ಥಳೆಂಬ ಭಾವನೆ ಬರಿಸುತ್ತಿತ್ತು. ಆಗ ಅವಳು ಹೇಳಿದ ಕೆಲಸವನ್ನು ನಾನು ತಕ್ಷಣವೇ ಮಾಡುತ್ತಿದ್ದೆ. ತನ್ನ ಮೆಲ್ಲನೆಯ ಆದರೆ, ಚಾಕಚಕ್ಯತೆಯ ದಾರಿಯಲ್ಲಿ, ತನ್ನ ಬೇಡಿಕೆಗಳನ್ನು ಈಡೇರಿಸುವ ಹಾಗೆ ಮಾಡುತ್ತಿದ್ದಳು. ಉದಾಹರಣೆಗೆ, ನಮ್ಮ ಗೆಳತಿಯರ ತಂದೆತಾಯಿಯರು ತಾವಾಗಿಯೇ ನಮ್ಮನ್ನು ಪ್ರಖ್ಯಾತ ವಿಯೆನ್ನಾ ಮೇಳ ಪ್ರೇಟರ್‌ಗೆ ಕರೆದುಕೊಂಡು ಹೋದಾಗ, ಅಮ್ಮ ನಮಗೆ ಹೇಳಿದ್ದಳು: "ಅವರೇನಾದರೂ ಕೊಟ್ಟರೆ, ಅದನ್ನು ತೆಗೆದುಕೊಳ್ಳಬೇಕು ಎಂದು ಎಷ್ಟೇ ಅನಿಸಿದರೂ, 'ಬೇಡ, ವಂದನೆಗಳು' ಎಂದಷ್ಟೇ ಹೇಳಬೇಕು" ಎಂದಿದ್ದಳು. ಹಾಗಾಗಿ, ಮಕ್ಕಳಿರದ ಆ ಶ್ರೀ ಮತ್ತು ಶ್ರೀಮತಿ ಷ್ರಾಜ್‌ರವರು ನನ್ನನ್ನು ಪ್ರೇಟರ್‌ಗೆ ಕರೆದುಕೊಂಡು ಹೋಗಿ ದೊಡ್ಡ ಚಕ್ರ ಅಥವಾ ಸುತ್ತುವ ಮರದ ಕುದುರೆಗಳ ಮೇಲೆ ಕುಳಿತುಕೊಳ್ಳುವಂತೆ ಹೇಳಿದಾಗ, ನಾನು ಅಮ್ಮ ಹೇಳಿಕೊಟ್ಟಂತೆ, ಒಂದೇ ಮಾತು ಹೇಳಿದೆ, "ಬೇಡ, ವಂದನೆಗಳು" ಎಂದು. ಅವರ ಎಲ್ಲಾ ಕೋರಿಕೆಯನ್ನು ನಾನು ತಿರಸ್ಕರಿಸಿದಾಗ, ನಾನು ಅವರ ಸಂಗಡ ಮುಜುಗರವನ್ನನುಭವಿಸುತ್ತಿದ್ದೇನೆ ಎಂದು ತಿಳಿದು, ಎಲ್ಲಾ ಪ್ರಯತ್ನಗಳನ್ನು ಕೈಬಿಟ್ಟರು. ಮರಳಿ ನನ್ನನ್ನು ಮನೆಗೆ ತಲುಪಿಸಿದಾಗ, ಅಮ್ಮನಿಗೆ ಹೇಳಿದರು: "ನಿಮ್ಮ ಚಿಕ್ಕ ಹುಡುಗಿಗೆ ನಮ್ಮೊಂದಿಗೆ ಇರಲು ಸರಿ ಬರಲಿಲ್ಲವೆಂದು ಕಾಣುತ್ತದೆ, ನಾವೇನು ಕೊಡಿಸಲು ಹೋದರೂ, ಅವಳು ಅದನ್ನು 'ಬೇಡ, ವಂದನೆಗಳು' ಎಂದು ಹೇಳಿ ತಿರಸ್ಕರಿಸಿಬಿಟ್ಟಳು" ಎಂದು. ಅವರು ಹಾಗೆ ಹೇಳಿ ಹೋದ ನಂತರ ಅಮ್ಮ ನನ್ನನ್ನು ಎತ್ತಿಕೊಂಡು ಹೇಳಿದಳು: "ನಿನ್ನ ಬಗ್ಗೆ ನನಗೆ ತುಂಬಾ ಹೆಮ್ಮೆಯಿದೆ." ಅವಳ ಹೊಗಳಿಕೆಯಿಂದಾಗಿ ನಾನು ಬೇರೆ ಪರಿಹಾರ ಪಡೆದೆ; ಕಾರಣ ಅವಳು ಹೇಳಿದ್ದೆಲ್ಲವನ್ನೂ ಪಾಲಿಸಿದ್ದೆ.

ಅಪ್ಪ ಹೊರದೇಶದಲ್ಲಿ ಕೆಲಸ ಮಾಡಲು ಆರಂಭಿಸಿದಾಗಿನಿಂದ, ಕುಟುಂಬದ ಮುಖ್ಯಸ್ಥಳಾಗಿ ಅಮ್ಮನ ಪಾತ್ರ ಮತ್ತಷ್ಟು ಹೆಚ್ಚಾಯಿತು. ಮೊದಲ ಯುದ್ಧದ ನಂತರ ಅಪ್ಪನಿಗೆ ಕೆಲಸ ಸಿಗುವುದು ಬಹಳ ಕಷ್ಟವಾಯಿತು. ಅವನು ಅನೇಕ ಕಡೆ ವಿಭಿನ್ನ ರೀತಿಯ ಉದ್ಯೋಗಗಳಿಗಾಗಿ ಪ್ರಯತ್ನಿಸಿದ. ಆದರೆ, ಪರಿಸ್ಥಿತಿ ಕಠಿಣವಾಗಿದ್ದುದರಿಂದ ಅವನಿಗೆ ಯವುದೂ ಸರಿಹೋಗಲಿಲ್ಲ. ಕೊನೆಗೆ, ಅಮ್ಮನ ಸೋದರ, ನಮ್ಮ ಶ್ರೀಮಂತ ಮಾವ ಬಿಲ್, ಯುಗೊಸ್ಲಾವಿಯಾದಲ್ಲಿ ಮೊದಲ ಜವಳಿ ಕಾರ್ಖಾನೆಯನ್ನು

ಆರಂಭಿಸಿದ್ದವನು, ಅಮ್ಮನ ಕೋರಿಕೆ ಮೇರೆಗೆ ಮಾರಾಟಗಾರನ ಉದ್ಯೋಗವೊಂದನ್ನು ಅಪ್ಪನಿಗೆ ಕೊಡಿಸಿದನು. ಇದು ಅಮ್ಮನ ಪಾತ್ರವನ್ನು ಬದಲಾಯಿಸಿದ್ದೇ ಅಲ್ಲದೆ, ಅದು ಅಪ್ಪನೊಂದಿಗೆ ನಮ್ಮ ಸಂಬಂಧವನ್ನೂ ಬದಲಾಯಿಸಿತು. ಅವನು ನಮ್ಮ ಕುಟುಂಬದ ಸಮಗ್ರ ಭಾಗವಾಗಿ ಇರಲೇ ಇಲ್ಲ. ರಜೆಗಳಲ್ಲಿ ಮಾತ್ರ ಅವನು ವಿಯೆನ್ನಾಗೆ ಬರುತ್ತಿದ್ದನು. ಹಾಗಾಗಿ, ನಾವು ನಮ್ಮ ಸ್ವಂತ ತಂದೆಯೆಂಬುದಕ್ಕಿಂತ ಹೆಚ್ಚಾಗಿ, ಅವನನ್ನು ಆಗಾಗ ಭೇಟಿ ನೀಡುವವನು ಎಂದು ಪರಿಗಣಿಸುತ್ತಿದ್ದೆವು.

ನಾವು ಅವನಿಗೆ ಆಗಾಗ ಕಾಗದ ಬರೆಯುತ್ತಿರಬೇಕು, ನಮ್ಮ ಜೀವನದ ವಿವರಗಳನ್ನು ತಿಳಿಸುತ್ತಾ ಎಂದು ಅಮ್ಮ ಯಾವಾಗಲೂ ಅಪ್ಪನ ಬಗೆಗಿನ ಒಲವನ್ನು ಮರುಕಳಿಸುವಂತಾಗಲು, ಸದಾ ಪ್ರಯತ್ನಿಸುತ್ತಿದ್ದಳು. ಆದರೆ, ಇದು ನಮ್ಮಿಬ್ಬರ ಮಧ್ಯೆ ಇದ್ದ ಅಂತರವನ್ನು ಕಡಿಮೆ ಮಾಡಲಿಲ್ಲ. ನಮ್ಮ ಕುಟುಂಬದ ಭಾವನಾತ್ಮಕ ಚೌಕಟ್ಟು ಬದಲಾಗುವುದಿರಲಿ, ಅದರ ಆರ್ಥಿಕ ಸುಭದ್ರತೆ, ಸಡಿಲವಾಯಿತು. ಅಪ್ಪನಿಗೆ ಸಂಬಳ ಬರುತ್ತಿದ್ದುದು ಯುಗೋಸ್ಲಾವಿಯಾದಲ್ಲಿ. ದುಡ್ಡಿನ ಅಡೆತಡೆಗಳಿದ್ದ ಕಡೆ, ಆದ್ದರಿಂದ, ಅವನ ಆದಾಯವನ್ನು ಆಸ್ಟ್ರಿಯಾಕ್ಕೆ ವರ್ಗಾಯಿಸುವುದು ಯಾವಾಗಲೂ ಕಷ್ಟವಾಗುತ್ತಿತ್ತು. ಹೀಗಾಗಿ ಪ್ರತಿ ತಿಂಗಳ ಮೊದಲಲ್ಲಿ ಅಮ್ಮನಿಗೆ ಖರ್ಚಿಗೆ ದುಡ್ಡು ಬರುವುದು ಏಳರಿಂದ ಹತ್ತು ದಿನಗಳಾಗುತ್ತಿತ್ತು. ಮನೆ ಖರ್ಚನ್ನು ನಿಭಾಯಿಸಲು ಅಮ್ಮ ಬಹಳ ಕಷ್ಟಪಡುತ್ತಿದ್ದಳು. ತಿಂಗಳ ಕೊನೆ ಹೊತ್ತಿಗೆ, ಕೈಯೆಲ್ಲಾ ಬರಿದಾಗಿ ಮುಂದಿನ ತಿಂಗಳ ಸಂಬಳ ಎಂದು ಬರುತ್ತದೋ ಎಂದು ಲೆಕ್ಕಹಾಕುತ್ತ ಕುಳಿತಿರುತ್ತಿದ್ದಳು. ಆ ದಿನಗಳಲ್ಲಿ, ಅಮ್ಮ ಅಡಿಗೆಯನ್ನು ಅತಿ ಕಡಿಮೆ ಖರ್ಚಿನಲ್ಲಿ ತಯಾರಿಸುತ್ತಿದ್ದಳು; ಸಾಮಾನ್ಯವಾಗಿ ನನಗೆ ಇಷ್ಟವಾಗುವ ಆಲೂಗಡ್ಡೆ ಮತ್ತು ಸಾಸೇಜ್ ಮಾಂಸವನ್ನು ಊಟಕ್ಕೆ ನಿಡುತ್ತಿದ್ದಳು. ನಾನು ಯಾವುದನ್ನೂ ಸುಲಭವಾಗಿ ತಿನ್ನುತ್ತಿರಲಿಲ್ಲವಾದ್ದರಿಂದ, ಬಿಟ್ಟಾಗ ಅಥವಾ ಕಡಿಮೆ ಊಟ ಮಾಡಿದಾಗ, ಓಟ್ಟೋ ಸದಾ ಹೇಳುತ್ತಿದ್ದ: "ಊಟ ಮಾಡು, ಇಲ್ಲಾಂದ್ರೆ ನಾಳೆಗೆ ಉಳಿಯೋ ತಂಗಳನ್ನೇ ಬೇರೆ ತರಹ ಅಡಿಗೇಲಿ ತಿನ್ನಬೇಕಾಗುತ್ತೆ!" ಈ ಎಚ್ಚರಿಕೆ ಕೂಡಾ ಜಾಸ್ತಿ ತಿನ್ನುವುದಕ್ಕೆ ನನಗೆ ಉತ್ತೇಜನ ಕೊಡುತ್ತಿರಲಿಲ್ಲ. ಅಮ್ಮ ಮಾಡ್ತಿದ್ದ ಅಡುಗೇನೆಲ್ಲಾ ನಾನು ಸದಾ ಟೀಕೆ ಮಾಡುತ್ತಿದ್ದೆ. ಇದರಿಂದ ಎಲ್ಲರಿಗೂ ಕೋಪ ಬರುತ್ತಿತ್ತು. ನನ್ನ ಅಣ್ಣಂದಿರು ಬೆದರಿಸುತ್ತಿದ್ದರು, ನೀನು ದೊಡ್ಡವಳಾಗಿ ಮದುವೆಯಾದ ಮೇಲೆ, ನಿಮ್ಮ ಮನೆಗೆ ಊಟಕ್ಕೆ ಬಂದಾಗ ನಾವೂ ಇದಕ್ಕೆ ಪ್ರತಿಯಾಗಿ ತೋರಿಸ್ತೀವಿ ಅಂತ. ನೀನು ಮಾಡೋ ಅಡಿಗೆ ಬಗ್ಗೆ ನಾವೂ ತಿರಸ್ಕಾರ ಮಾಡ್ತೀವಿ, ನೀನು ಅಮ್ಮನ ಅಡಿಗೆ ಬಗ್ಗೆ ಮಾಡ್ತಿರೋ ಹಾಗೆ ಅಂತ. ಆದರೂ ನನ್ನ ಅಡಿಗೆ ಬಗ್ಗೆ ಯಾವುದೇ ದೂರು ಇಲ್ಲದ ಹಾಗೆ ನಾನು ಮಾಡ್ತೀನಿ ಅಂತ ಉತ್ತರಿಸಿ ಜಾರಿಕೊಳ್ಳುತ್ತಿದ್ದೆ.

ನಮ್ಮ ಅದೃಷ್ಟಕ್ಕೆ, ಓರ್ವ ಯಹೂದಿ ದಿನಸಿ ವ್ಯಾಪಾರಿಯಿದ್ದ, ರೈಸ್ ಎಂಬಾತ. ನಮ್ಮ ಕುಟುಂಬದ ಮಿತ್ರನಾಗಿದ್ದ ಅವನು ದಿನಸಿ ಕೊಡುತ್ತಿದ್ದ, ಸಂಬಳದ ದುಡ್ಡು ವರ್ಗಾವಣೆಯಾಗಿ ಬಂದಾಗ ಅಮ್ಮ ಪಾವತಿ ಮಾಡುತ್ತಿದ್ದಳು. ಅಮ್ಮನೊಂದಿಗೆ ಆ ದಿನಸಿ ಅಂಗಡಿಗೆ ಹೋಗುವುದೆಂದರೆ ತುಂಬಾ ಇಷ್ಟವಾಗುತ್ತಿತ್ತು. ಕಾರಣ, ಅವನು ತನ್ನ ಕೌಂಟರ್ ಹಿಂದೆ ಕರೆದುಕೊಂಡು ಹೋಗಿ ನಾನು, ಏನನ್ನಾದರೂ ಸಣ್ಣ ಪ್ರಮಾಣದ್ದು ತೆಗೆದುಕೊಳ್ಳಲು ಅವಕಾಶ ನೀಡುತ್ತಿದ್ದ. ನಾನು ಐದು ವರ್ಷಗಳಿದ್ದಾಗಲೇ, ನಾನು ದೊಡ್ಡವಳಾದ ಮೇಲೆ ನನ್ನನ್ನು ಮದುವೆಯಾಗುವುದಾಗಿ ಹೇಳುತ್ತಿದ್ದ. ಅದಕ್ಕೆ ನಾನು ಉತ್ತರಿಸುತ್ತಿದ್ದೆ: "ನೀನು ನನಗಿಂತ ಬಹಳ ದೊಡ್ಡವನು" ಎಂದು. ಅವನು ಅದಕ್ಕೆ ಪ್ರತಿಕ್ರಿಯಿಸುತ್ತಿದ್ದ: "ನೀನು ನನ್ನ ಜೊತೆ ಸರಿಹೋಗುವವರೆಗೆ, ನಾನು ದೊಡ್ಡವನಾಗಿ ಬೆಳೆಯುವುದನ್ನೇ ನಿಲ್ಲಿಸಿಬಿಡುತ್ತೇನೆ." ಹಾಗೆ ಮಾಡಲು ಸಾಧ್ಯವಿತ್ತೋ, ಇಲ್ಲವೋ ಗೊತ್ತಿರಲಿಲ್ಲ. ಆದರೆ ಆ ಸಮಯದಲ್ಲಿ ನಾನು ಅವನೊಂದಿಗೆ ವಾದಿಸುವ ಸ್ಥಿತಿಯಲ್ಲಿರಲಿಲ್ಲ.

ಜೀವನ ಇಲ್ಲಿಯವರೆಗೆ ಎಂದಿನ ಗತಿಯಲ್ಲಿಯೇ ಸಾಗಿತ್ತು. ನಮ್ಮ ನೆರೆ ಹೊರೆಯಲ್ಲಿದ್ದ ನನ್ನ ವಯಸ್ಸಿನ ಬಾಲಕ ಬಾಲಕಿಯರೊಂದಿಗಿನ ನನ್ನ ಸಂಬಂಧವನ್ನು ಶಾಲೆ ಗಟ್ಟಿಮಾಡಿತ್ತು, ಅವರೊಂದಿಗೆ ನಾನು ಸ್ನೇಹ ಬೆಳೆಸಿದ್ದೆ. ಆದರೆ ೧೯೩೦ರಲ್ಲಿ ನನ್ನ ಜೀವನ ನಾಟಕೀಯವಾಗಿ ಬದಲಾಗುವುದಿತ್ತು. ವಿಯೆನ್ನಾದಲ್ಲಿ ವಸತಿ ಸಮಸ್ಯೆಯನ್ನು ನಿವಾರಿಸಲು ಯುದ್ಧಾನಂತರದ ಪ್ರಗತಿಪರ ಆಸ್ಟ್ರಿಯಾ ಸರ್ಕಾರ, ಫ್ಲಾಟ್‌ಗಳನ್ನು ನಿರ್ಮಾಣ ಮಾಡಿತು. ಹಾಗಾಗಿ ಸಮಾಜವಾದಿ ಪಕ್ಷದ ತೀವ್ರ ಬೆಂಬಲಿಗರಾಗಿದ್ದ ಅಪ್ಪನಿಗೆ, ನಮಗಾಗಿ ಫ್ಲಾಟ್ ಒಂದನ್ನು ಪಡೆಯುವುದು ಏನೂ ಕಷ್ಟವಾಗಲಿಲ್ಲ. ನನ್ನ ಗೆಳತಿಯರನ್ನು ಬಿಟ್ಟುಹೋಗಲು ನನಗೆ ಬೇಸರವೆನಿಸಿದರೂ, ಹೊಚ್ಚ ಹೊಸದಾದ, ಬಿಳಿ ಬಣ್ಣದ ಬಾಗಿಲುಗಳು ಹಾಗೂ ಕಿಟಕಿಯ ಚೌಕಟ್ಟನ್ನೊಳಗೊಂಡ ಆ ಫ್ಲಾಟ್ ಅನ್ನು ಕಂಡು ನನಗೆ ಖುಷಿಯಾಯಿತು. ಒಂದು ಕೊಠಡಿ, ಎರಡು ಮಲಗುವ ಕೊಠಡಿಗಳು, ಮಧ್ಯದ ದೊಡ್ಡ ಹಜಾರ, ಕೈ ತೊಳೆಯುವ ಬೇಸಿನ್ ಒಳಗೊಂಡ ಅಡಿಗೆ ಮನೆ, ಶೌಚಾಲಯ ಮತ್ತು ವಿಶಾಲವಾದ ಬಾಲ್ಕನಿಯುಳ್ಳ ಅದು ದೊಡ್ಡದಾಗಿತ್ತು. ಸ್ನಾನದ ಮನೆ ಅಥವಾ ನೀರು ಹರಿಸುವ ಮೋಲ್ ನಲ್ಲಿ ಇರಲಿಲ್ಲ. ಆದರೆ ಕೇಂದ್ರೀಯವಾಗಿ ಬಟ್ಟೆ ಒಗೆಯುವ ಅನುಕೂಲವಿತ್ತು, ಪ್ರತಿಯೊಬ್ಬ ಬಾಡಿಗೆದಾರನಿಗೂ ಒಂದು ಬಟ್ಟೆ ಒಗೆಯುವ ಸಾಧನವನ್ನು ನಿಗದಿಪಡಿಸಲಾಗಿತ್ತು. ಅತ್ಯಾಧುನಿಕ ಬಟ್ಟೆ ಒಗೆತ ಹಾಗೂ ಒಣಗಿಸುವ ಸಾಧನಗಳನ್ನು ಒದಗಿಸಲಾಗಿತ್ತು. ಅದೇ ಕಟ್ಟಡದಲ್ಲಿ ಸ್ನಾನದ ಮನೆಗಳಿದ್ದುವು. ವಾರಕ್ಕೆ ಒಂದು ದಿನವಾದರೂ ಈ ಸೌಲಭ್ಯಗಳನ್ನು ನಾವು ಬಳಸಿಕೊಳ್ಳುತ್ತಿದ್ದೆವು. (ಮಧ್ಯದಲ್ಲಿ ಅಡಿಗೆ ಮನೆಯಿಂದ ನೀರು ತೆಗೆದುಕೊಂಡು

ನಾವು ದೈನಂದಿನ ಅಗತ್ಯಗಳಿಗೆ ಬಳಸುತ್ತಿದ್ದೆವು.)

ವಿಯೆನ್ನಾದ ೧೯ನೇ ಜಿಲ್ಲೆ ಡೊಬ್ಲಿಂಗ್‌ನ ಕಾರ್ಲ್‌ಮಾರ್ಕ್ಸ್ ಹೂಫ್, ಸಮುದಾಯ ಜೀವನದಲ್ಲಿ ಒಂದು ಪ್ರಯೋಗವಾಗಿತ್ತು. ಒಂದು ಕಿಲೋಮೀಟರ್ ಉದ್ದದ ಆ ದೊಡ್ಡ ಸಮಕೋನದ ಬ್ಲಾಕ್‌ನಲ್ಲಿ ಒಂದು ಸಾವಿರಕ್ಕೂ ಮೀರಿ ಅಪಾರ್ಟ್‌ಮೆಂಟ್‌ಗಳಿದ್ದವು. ಅದು ಇಡೀ ಜಗತ್ತಿನ ಗಮನ ಸೆಳೆದಿತ್ತು ಹಾಗೂ ಅನೇಕ ವಿದೇಶೀ ಗಣ್ಯರನ್ನು ಅದರ ಸುತ್ತ ಪ್ರವಾಸ ಮಾಡಿಸಲಾಗುತ್ತಿತ್ತು. ಆಗಿನ ವೇಲ್ಸ್ ರಾಜಕುಮಾರ (ಮುಂದಿನ ಎಡ್ವರ್ಡ್ ದೊರೆ ೮ನೆ) ಹೀಗೆ ಭೇಟಿ ನೀಡಿದ ಗಣ್ಯರಲ್ಲಿ ಒಬ್ಬನಾಗಿದ್ದನು. ನಾವೊಂದು ದಿನ ಅವನಿಗೆ ಬಟ್ಟೆ ಒಗೆಯಲು ಸಹಾಯ ಮಾಡುತ್ತಿದ್ದಾಗ ಅವನು ಭೇಟಿ ನೀಡಿದ್ದನು. ಓರ್ವ ಇಂಗ್ಲೆಂಡಿನ ರಾಜಕುಮಾರನನ್ನು ಸ್ವತಃ ನೋಡಿದ್ದಕ್ಕೆ ನಾವು ಹೆಮ್ಮೆಪಟ್ಟುಕೊಂಡಿದ್ದೆವು.

೧೯೩೦ರಲ್ಲಿ ನಾವು ಕಾರ್ಲ್‌ಮಾರ್ಕ್ಸ್ ಹೂಫ್‌ಗೆ ಸ್ಥಳಾಂತರಗೊಂಡಾಗ ನಾನು ಪ್ರಾಥಮಿಕ ಶಾಲೆಯ ಎರಡನೆಯ ತರಗತಿಯಲ್ಲಿದ್ದೆ. ಹಾಗಾಗಿ ೧೯ನೆಯ ಜಿಲ್ಲೆಗೆ ನಾನು ಬೇರೊಂದು ಶಾಲೆಗೆ ವರ್ಗಾವಣೆ ಪಡೆಯಬೇಕಿತ್ತು. ನನ್ನ ಚಿರಪರಿಚಿತ ಶಾಲೆಯ ವಾತಾವರಣವನ್ನು ಹಾಗೂ ನನ್ನ ಆಪ್ತಮಿತ್ರರ ವಲಯವನ್ನು ಬಿಟ್ಟು ಹೋಗುವುದಕ್ಕೆ ನನಗೆ ಬಹಳ ಬೇಸರವಾಗಿತ್ತು. ಫ್ಲಾಟ್‌ನಿಂದ ನಡೆದುಹೋಗುವಷ್ಟು ಹತ್ತಿರದಲ್ಲಿದ್ದ, ಗ್ರಾನ್‌ಜಿಸಗರ್‌ನ ಪ್ರಾಥಮಿಕ ಶಾಲೆಗೆ ಅಮ್ಮ ನನ್ನನ್ನು ಕರೆದೊಯ್ದಾಗ, ನಾನು ಹಟ ಮಾಡಿದೆ, ನಮ್ಮ ಹೊಸ ಶಿಕ್ಷಕಿಯ ಸ್ನೇಹಮಯ ಸಾಮೀಪ್ಯಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದೆ. ಅಮ್ಮನಿಗೆ ನಿರಾಶೆಯಾಗುವ ಹಾಗೆ, ಶಿಕ್ಷಕಿಯರ ಪ್ರಶ್ನೆಗಳೆಲ್ಲಕ್ಕೂ ನಾನು ಒಂದೆರಡು ಅಕ್ಷರಗಳಲ್ಲಿ ಉತ್ತರಿಸಿದೆ, ನಾನು ದಡ್ಡಿ ಎಂಬ ಭಾವನೆಯನ್ನು ಅದು ಉಂಟುಮಾಡಿತು. ತನ್ನ ಹಟಮಾರಿ ಮಗಳ ವಿಚಾರದಲ್ಲಿ ಸಹನೆ ಕಳೆದುಕೊಳ್ಳದ ಬಗ್ಗೆ ಅಮ್ಮನಿಗೆ ಬಹಳ ಕಷ್ಟವಾಗಿರಬೇಕು. ಬೇರೆ ಶಾಲೆಗೆ ಕಳುಹಿಸುವ ಪ್ರಸ್ತಾಪದ ಬಗ್ಗೆ ನನ್ನ ಅಭಿಪ್ರಾಯ ಕೇಳದೆ ಇದ್ದುದಕ್ಕೆ ನಾನು ನನ್ನ ತೀವ್ರ ವಿರೋಧವನ್ನು ವ್ಯಕ್ತಪಡಿಸಲೇಬೇಕೆಂದು ಅನ್ನಿಸಿತ್ತು. ನಮ್ಮ ಈ ಪ್ರಸ್ತಾವಕ್ಕೆ ಅಮ್ಮನಿಗೇ ಎರಡು ಮನಸ್ಸಿತ್ತು; ಒಂದೆಡೆ, ಹೊಸ ಹಾಗೂ ದೊಡ್ಡ ಅಪಾರ್ಟ್‌ಮೆಂಟ್‌ಗೆ ಬಂದುದಕ್ಕೆ ಅವಳಿಗೆ ಸಂತೋಷವಾಗಿತ್ತು. ಆದರೆ ಜೀವನದ ಅತ್ಯಂತ ದೀರ್ಘಕಾಲ ಕಳೆದ ಸ್ಥಳದಿಂದ ಬುಡಸಹಿತ ಕಿತ್ತಂತಾಗಿತ್ತು. ಹೊಸ ಸ್ಥಳಕ್ಕೆ ಬಂದ ಕೆಲವು ದಿನಗಳ ನಂತರ ಅವಳಿಗೆ ಅಂಗಡಿಯಲ್ಲಿ ಕೊಳ್ಳಬೇಕೆನಿಸಿದಾಗ, ನನಗೆ ಹೇಳಿದಳು: "ಮುತ್ತಿಕೋ, ನನ್ನೊಂದಿಗೆ ಬ್ರಿಟನ್‌ಗೆ ಬಂದುಬಿಡು, ನಮ್ಮ ಹಳೇ ದಿನಸಿ ಅಂಗಡಿಯಲ್ಲಿ ಕೊಳ್ಳೋಣ, ನಮ್ಮ ಅನೇಕ ಮಿತ್ರರನ್ನೂ ಭೇಟಿ ಮಾಡಬಹುದು" ಎಂದು ಹೇಳಿದಳು. ನನಗಾಗಲಿ, ಅಮ್ಮನಿಗಾಗಲಿ, ಕಾರ್ಲ್‌ಮಾರ್ಕ್ಸ್ ಹೋಫ್‌ನಲ್ಲಿ ಸರಿಬರಲಿಲ್ಲ. ಹಾಗಾಗಿ, ಬ್ರಿಗಿಟನ್‌ಗೆ ಆಗಾಗ್ಗೆ ಹೋಗುತ್ತಿದ್ದೆವು.

ನಾನು ಬೆಳೆದದ್ದು ದೊಡ್ಡ ಕುಟುಂಬದಲ್ಲಿ; ನನ್ನ ತಂದೆತಾಯಿಗಳಿಬ್ಬರಿಗೂ,

ಅನೇಕ ಸೋದರ, ಸೋದರಿಯರಿದ್ದರು. ಅವರ ಮಕ್ಕಳುಗಳು ಹಾಗಾಗಿ ನನಗೆ ಅನೇಕ ಚಿಕ್ಕಪ್ಪಂದಿರು, ಅತ್ತೆಯರು ಹಾಗೂ ಸ್ವಂತ ಸೋದರರಲ್ಲದವರೂ ಇದ್ದರು. ಅಪ್ಪನ ತಂದೆ ತಾಯಿಯರು, ಥೆರೆಪಾ ಮತ್ತು ಲಿಯೋಫೋಲ್ಡ್ ಗ್ರುನ್‌ಲಾಲ್ಡ್, ಮೊರಾಲಿಯಾದ ಬಾಸ್ಕೋವಿನಲ್ಲಿದ್ದರು. ಅಪ್ಪ ಹುಟ್ಟಿದಾಗ (೧೮೫೫ರಲ್ಲಿ) ಆಸ್ಟ್ರೋ ವಿಂಗರಿ ಸಾಮ್ರಾಜ್ಯದ ಭಾಗವಾಗಿತ್ತು. ನನ್ನ ಅಜ್ಜಿ ಥೆರೆಪಾ ಎತ್ತರದ ದಾಷ್ಟೀಕ ಹೆಂಗಸು. ತನ್ನ ಗಂಡನ ಮೇಲೆ ದೈಹಿಕವಾಗಿ ಹಾಗೂ ತನ್ನ ವ್ಯಕ್ತಿತ್ವದಿಂದ ಪ್ರಾಬಲ್ಯವನ್ನು ಹೊಂದಿದ್ದಳು. ನಾನು ಅವನನ್ನು ನೋಡುವ ಹೊತ್ತಿಗೆ, ಅವನೊಬ್ಬ ಚಿಕ್ಕ, ಹಿರಿಯನಂತಿದ್ದ, ಸದಾ ಸ್ಥಳೀಯ ಕಾಫಿ ಹೋಟೆಲ್‌ನಲ್ಲಿ ಚುಟ್ಟಾ ಸೇದುತ್ತಾ, ತನ್ನ ಗೆಳೆಯರೊಂದಿಗೆ ಇಸ್ಪೀಟ್ ಆಡುತ್ತಾ ಇದ್ದನು.

ಬೇಸಿಗೆ ರಜೆಯಲ್ಲಿ ಸಾಮಾನ್ಯವಾಗಿ, ನಾವು ಅವರೊಡನೆ ಇರಲು ಬಾಸ್ಕೋವಿಗೆ ಹೋಗುತ್ತಿದ್ದೆವು. ಅಲ್ಲಿ ಎಲ್ಲಾ ಜನರೂ ಪರಸ್ಪರ ಪರಿಚಯಸ್ಥರಾಗಿದ್ದರು. ಅವರ ರಸ್ತೆ ಯಹೂದಿಗಳು ವಾಸಿಸುತ್ತಿದ್ದ ಪ್ರದೇಶದ ಭಾಗವಾಗಿತ್ತು ಎಂದು ಅಜ್ಜಿ ನನಗೆ ಹೇಳಿದ್ದಳು. ಅಲ್ಲಿ ಯಹೂದಿಗಳು ತಮ್ಮನ್ನು ಇತರರಿಂದ ಬೇರ್ಪಡಿಸಿಕೊಳ್ಳಲು ವಾಸಿಸುತ್ತಿದ್ದರು ಎಂದು ಹೇಳಿದುದರ ಮಹತ್ವವೇನು ಎಂದು ನಾನು ಅರಿಯದವಳಾಗಿದ್ದೆ. ಅವರ ಬೆಟ್ಟದ ತಪ್ಪಲಿನ ರೈಲು ನಿಲ್ದಾಣವನ್ನು ತಲುಪಿದಾಗ ನಮ್ಮ ತಲುಪುವಿಕೆಯ ಸುದ್ದಿ ನಾವು ಹೋಗುವ ಮೊದಲೇ ಅವರಿಗೆ ತಲುಪಿತ್ತು. ಎತ್ತರವಾಗಿದ್ದ ಹಾಗೂ ಸುಂದರವಾಗಿದ್ದ ನಮ್ಮ ಅಜ್ಜಿ ತನ್ನ ಕೈಗಳನ್ನು ಚಾಚುತ್ತಾ ನಮ್ಮನ್ನು ಎದುರುಗೊಂಡು, ಪ್ರತಿಯೊಬ್ಬರನ್ನು ತನ್ನ ವಿಶಾಲವಾದ ಎದೆಗೆ ಅವುಚಿಕೊಂಡು ನಮ್ಮ ಮುಖಗಳಿಗೆ ಮುತ್ತು ಕೊಡುತ್ತಿದ್ದಳು. ಆದರೆ ಆ ಎಂಜಲಿನ ಮುತ್ತು ನಮಗೆ ಇಷ್ಟವಾಗುತ್ತಿರಲಿಲ್ಲ.

ನಾವೊಮ್ಮೆ ಬಂದಿದ್ದೆವು, ಇಲ್ಲಿದ್ದ ಅನೇಕ ಮಿತ್ರರನ್ನು ಮತ್ತೆ ನೋಡಲು ಓಟ್ಟೋ ಮತ್ತು ಕುರ್ಟ್ ಕಾತರರಾಗಿದ್ದರು. ನಾನು ಬರುವ ಮೊದಲೇ ಇಲ್ಲಿ ಅನೇಕ ದಿನಗಳನ್ನು ಕಳೆದಿದ್ದರು. ನನಗೆ ನೆನಪಿರುವಂತೆ, ನನ್ನ ಅಜ್ಜಿ ತಾತನನ್ನು ಮೊದಲ ಸಲ ಭೇಟಿ ಮಾಡಲು ಬಂದಾಗ ನನಗೆ ಕೇವಲ ೪ ವರ್ಷ. ನನಗೆ ಬೇರೆ ಮಕ್ಕಳು ಗೊತ್ತಿರದಿದ್ದ ಕಾರಣ, ಅಮ್ಮನನ್ನು ಜಿಗಣೆ ತರಹ ಹಿಡಿದುಕೊಂಡಿದ್ದೆ. ಮಾರುಕಟ್ಟೆಯಲ್ಲಿ ಬಟ್ಟೆ ಅಂಗಡಿಗಳನ್ನೆಲ್ಲಾ ನೋಡಿ ಕಾಲ ಕಳೆಯುತ್ತಿದ್ದೆವು. ವಿಯೆನ್ನಾಗಿಂತ ಇಲ್ಲಿ ಕಡಿಮೆ ಬೆಲೆಯಾಗಿದ್ದರಿಂದ, ಏನಾದರೂ ಕೊಳ್ಳಲು ಯೋಚಿಸುತ್ತಿದ್ದೆವು. ನನ್ನ ನಾಲ್ಕನೆಯ ಹುಟ್ಟುಹಬ್ಬದ ದಿನ, ಒಂದು ಅಂಗಡಿಗೆ ನನ್ನನ್ನು ಕರೆದುಕೊಂಡು ಹೋದಾಗ, ಅಮ್ಮ ಬಟ್ಟೆ ಕೊಳ್ಳುತ್ತಿದ್ದಾಗ, ಅಂಗಡಿಯ ತರುಣ, ಸ್ಫುರದ್ರೂಪಿ ಸಹಾಯಕ ಲಿಯೋ ಎಂಬುವನು ನನ್ನನ್ನು ಮಾತಾಡಿಸಿದ. ನನ್ನನ್ನು ಮುದ್ದುಮಾಡಿದ. ನನ್ನ ಹುಟ್ಟು ಹಬ್ಬ ಇದೆಯೆಂದು ಹೇಳಿದಾಗ, ಕೌಂಟರ್

ಹಿಂದೆ ಹೋಗಿ ನನಗೆ ಸುಂದರವಾದ ಬೊಂಬೆಯೊಂದನ್ನು ಉಡುಗೊರೆಯಾಗಿ ನೀಡಿದ. ಅವನೊಂದಿಗೆ ಆ ಕ್ಷಣ ನಾನು ಪ್ರೀತಿ ಬೆಳೆಸಿದ್ದೆ. ಅನೇಕ ವರ್ಷಗಳವರೆಗೆ ಆ ಬೊಂಬೆಯನ್ನು ಜೋಪಾನವಾಗಿರಿಸಿಕೊಂಡಿದ್ದೆ. ಅನಂತರದ ದಿನಗಳಲ್ಲಿ ಆ ಮಾರುಕಟ್ಟೆಗೆ ಹೋದಾಗ ಆ ಅಂಗಡಿಗೇ ಹೋಗುವಂತೆ ಅಮ್ಮನಿಗೆ ಹೇಳುತ್ತಿದ್ದೆ, ಲಿಯೋನನ್ನು ಭೇಟಿ ಮಾಡುವ ಸಲುವಾಗಿ.

ಒಂದು ಬೇಸಿಗೆಯಲ್ಲಿ ನಾನು ಮತ್ತು ಕುರ್ಟ್ ಇಬ್ಬರನ್ನೇ ಬಾಸ್ಕೋವಿಗೆ ಅಮ್ಮ ಕಳುಹಿಸಿದಳು. ನಮ್ಮಿಬ್ಬರನ್ನು ವಿಯೆನ್ನಾದಲ್ಲಿ ರೈಲಿನಲ್ಲಿ ಕುಳ್ಳಿರಿಸಿ, ಆಸ್ಟ್ರಿಯಾ ಚಕ್ ಗಡಿಯಲ್ಲಿ ರೈಲನ್ನು ಬದಲಾಯಿಸಬೇಕೆಂದೂ, ಅಲಿ ಅಪ್ಪನ ಸೋದರಿ ಬರವಳೆಂದೂ, ಅಲ್ಲಿಂದ ಅವಳು ಬಾಸ್ಕೋವಿಗೆ ಕರೆದೊಯ್ಯುವುದಾಗಿಯೂ ಹೇಳಿದ್ದಳು. ಗಡಿ ಪ್ರದೇಶದ ನಿಲ್ದಾಣ ತಲುಪಿದಾಗ ನಮಗೆ ತಿಳಿಸಿದ್ದಂತೆ ಇಳಿದೆವು, ಬ್ರುನೋಗೆ ರೈಲಿನಲ್ಲಿ ಹೋಗುತ್ತಿರಬಹುದೆಂದು ಇತರ ಪ್ರಯಾಣಿಕರನ್ನು ಹಿಂಬಾಲಿಸಿದೆವು. ಪ್ರತಿಯೊಂದು ಬೋಗಿಯ ಹೊರಗಡೆ, ಬ್ರುನೋ ಅಂತಲ್ಲ, 'ನೆಕ್ಸುಸಾರ್ನಿ' ಎಂಬ ಫಲಕವನ್ನು ನೋಡಿದಾಗ, ಅವುಗಳು ಬ್ರುನೋಗೆ ಅಲ್ಲ, 'ನೆಕ್ಸುಸಾರ್ನಿ' ಎಂಬ ಸ್ಥಳಕ್ಕೆ ಹೋಗುವ ಬೋಗಿಗಳೆಂದು ಭಾವಿಸಿದೆವು. ನಾವು ಫ್ಲಾಟ್‌ಫಾರಂನ ಉದ್ದಕ್ಕೂ ಬ್ರುನೋಗೆ ತೆರಳಲಿರುವ ರೈಲಿಗಾಗಿ ಹುಡುಕಾಡಿದೆವು. ರೈಲು ಹೊರಡುವ ಸಮಯವಾಗಿದ್ದುದರಿಂದ, ನಮಗೆ ಚಿಂತೆಯಾಯಿತು. ಅದೃಷ್ಟವಶಾತ್, ಓರ್ವ ಗಾರ್ಡ್, ನಾವು ಹುಡುಕಾಡುತ್ತಿದ್ದುದನ್ನು ನೋಡಿ, ನಾವು ಎಲ್ಲಿಗೆ ಹೋಗಬೇಕೆಂದು ವಿಚಾರಿಸಿದನು. ನಾವು ಹೋಗಬೇಕಾದ ಸ್ಥಳವನ್ನು ಹೆಸರಿಸಿದಾಗ, ನಮಗಾಗಿ ಬಾಗಿಲನ್ನು ತೆರೆದು ರೈಲಿನೊಳಗೆ ಬರಲು ಹೇಳಿದನು. 'ಇದು ಬ್ರುನೋಗೆ ಹೋಗುತ್ತಿದೆ' ಎಂದು ಕೂಗಿಕೊಂಡನು. ನಮಗೆ ಗೊಂದಲವುಂಟಾಗಿ, ಬೋಗಿಯೊಳಗೆ ಕುಳಿತಮೇಲೆ ಪಕ್ಕದಲ್ಲಿದ್ದ ಮಹಿಳಾ ಪ್ರಯಾಣಿಕಳನ್ನು ಈ ರೈಲು ಬ್ರುನೋಗೋ ಅಥವಾ ನೆಕ್ಸುಸಾರ್ನಿಗೆ ಹೋಗುತ್ತದೋ ಎಂದು ಕೇಳಿದ್ದಕ್ಕೆ, ಆಕೆ ನಕ್ಕುಬಿಟ್ಟಳು. 'ನೆಕ್ಸುಸಾರ್ನಿ ಅನ್ನೋದು ಸ್ಥಳವಲ್ಲ, ಅದೆಂದರೆ ಧೂಮಪಾನ ಕೂಡದು' ಎಂದರ್ಥ ಎಂದು ಹೇಳಿದಾಗ ನಮಗೆ ನಮ್ಮ ಅಜ್ಞಾನದ ಅರಿವಾಯಿತು.

ನಮ್ಮಪ್ಪನ ತಮ್ಮ ಲಿಯೋ ಒಬ್ಬನನ್ನು ಬಿಟ್ಟು, ಅವನ ಎಲ್ಲ ಸಂಬಂಧಿಕರೂ ಮೊರಾಲಿಯದಲ್ಲಿದ್ದರು. ಅಂದರೆ, ಅವರಲ್ಲಿ ಯಾರೊಬ್ಬರ ಬಗ್ಗೆಯೂ ನನಗೆ ನಿಕಟ ಸಂಪರ್ಕವಿರಲಿಲ್ಲ. ಆದರೂ, ಲಿಯೋ ಚಿಕ್ಕಪ್ಪನನ್ನು ಮಾತ್ರ ನಮ್ಮ ಕುಟುಂಬದ ಭಾಗವಾಗಿ ಪರಿಗಣಿಸಿದ್ದೆ. ವಿಯೆನ್ನಾದಲ್ಲಿ ವಾಸಿಸುತ್ತಿದ್ದುದರಿಂದ, ಅವನು ಆಗಾಗ್ಗೆ ಬರುತ್ತಿದ್ದ. ಅವನು ಯಾವಾಗಲೂ ನನ್ನ ಸಂಗಡ ಆಟವಾಡುತ್ತಿದ್ದ ಹಾಗೂ ಏನಾದರೂ ಉಡುಗೊರೆ ನೀಡುತ್ತಿದ್ದ. ಹಾಗಾಗಿ ಅವನನ್ನು ಕಂಡರೆ ನನಗೆ

ತುಂಬಾ ಇಷ್ಟ. ಚಿಕ್ಕ ಹುಡುಗಿಯರಿಗೆ ಯಾವುದರಿಂದ ಸಂತೋಷವಾಗುತ್ತದೆ ಎಂದು ಗೊತ್ತಿತ್ತು ಎಂದು ಕಾಣುತ್ತದೆ. ನನಗೊಂದು ಚಿಕ್ಕ ಕೊಡೆ ಹಾಗೂ ಈಜುಡುಪು ನೀಡಿದ್ದಕ್ಕೆ ನಾನು ದೊಡ್ಡವಳಾದಂತೆ ಭಾವಿಸಿದ್ದೆ. ಹೀಗಾಗಿ, ನಾನು ಅಪ್ಪನ ಮುದ್ದು ಮಗಳು ಮಾತ್ರ ಆಗಿರಲಿಲ್ಲ, ನನ್ನ ಚಿಕ್ಕಪ್ಪನಿಂದಲೂ ಹೆಚ್ಚು ಮುದ್ದಿನಿಂದ ಹಾಳಾಗಿದ್ದೆ. ಲಿಯೋ ಮದುವೆಯಾಗಿದ್ದು, ಕೆಳಸ್ತರದ ಹೆಂಗಸು ಲಿಂಲ್ಜಿಯನ್ನು. ಇದರಿಂದ ನನ್ನ ತಾಯಿಗೆ ಮಾತ್ರವಲ್ಲ, ಗ್ರುನ್‌ಲಾಲ್ಡ್ ಕುಟುಂಬದ ಇತರರಿಗೂ ಇರಿಸುಮುರಿಸಾಗಿತ್ತು.

೧೯೩೬ರ ಡಿಸೆಂಬರ್‌ನಲ್ಲಿ ತಾತ ಗ್ರುನ್‌ವಾಲ್ಡ್ ನಿಧನರಾದರು. ಆಗ ಅಪ್ಪ ನಮ್ಮೊಂದಿಗೆ ವಿಯೆನ್ನಾದಲ್ಲಿದ್ದರು. ಅಪ್ಪ ನನ್ನನ್ನು ತಮ್ಮೊಂದಿಗೆ ಅವರ ಅಂತ್ಯ ಸಂಸ್ಕಾರಕ್ಕಾಗಿ ಬ್ರುನೊಗೆ ಕರೆದುಕೊಂಡು ಹೋದರು. ಶೋಕಾಚರಣೆಯ ಅವಧಿಯಲ್ಲಿ ನಾವು ನಮ್ಮ ಅತ್ತೆಯೋರ್ವರ ಮನೆಯಲ್ಲಿ ತಂಗಿದ್ದೆವು. ಆ ಅವಧಿಯಲ್ಲಿ ನಮ್ಮಪ್ಪನ ಸಂಬಂಧಿಕರಲ್ಲಿ ಹೆಚ್ಚು ಕಡಿಮೆ ಎಲ್ಲರನ್ನೂ ಭೇಟಿ ಮಾಡಿದೆ. ಆದರೆ ಅವರಲ್ಲಿ ಯಾರನ್ನೂ ಚೆನ್ನಾಗಿ ತಿಳಿದುಕೊಳ್ಳಲು ಆಗಲಿಲ್ಲ. ಅಪ್ಪನ ಅತ್ಯಂತ ಚಿಕ್ಕ ಸೋದರ ಆಮಿಟ್‌ನ ನೆನಪು ಮಾತ್ರ ಚೆನ್ನಾಗಿದೆ. ಅವನಿಗೆ ಅಮ್ಮನಿಗಿರುವ ಆಕರ್ಷಕ ವ್ಯಕ್ತಿತ್ವ ಹಾಗೂ ಅವಳಂತೆ ಒಳ್ಳೆಯ ರೂಪವಿದೆ. ಸೋದರರ ಪೈಕಿ ಅವನೊಬ್ಬನೇ ಅತ್ಯಂತ ಯಶಸ್ವಿಯಾದವನು.

ಈ ಎಲ್ಲಾ ಸಂಬಂಧಿಕರ ಮಧ್ಯದಲ್ಲಿ ನಾನು ಎಷ್ಟು ಒಂಟಿಯಾಗಿದ್ದೆ ಎಂಬುದು ಆಮಿಟ್ ಚಿಕ್ಕಪ್ಪನಿಗೆ ಮನವರಿಕೆಯಾಗಿರಬೇಕೆಂದು ನಾನು ಊಹಿಸಿದೆ. ಏಕೆಂದರೆ, ಅವನು ತನ್ನ ಮೊದಲ ಮಹಾಯುದ್ಧದ ಅನುಭವಗಳನ್ನು ಹೇಳುತ್ತಾ, ನನ್ನೊಡನೆ ಬಹಳ ಸಮಯ ಕಳೆಯುತ್ತಿದ್ದನು. ಅವುಗಳು ನನಗೆ ರೋಮಾಂಚನ ವನ್ನುಂಟುಮಾಡುತ್ತಿತ್ತು. ಆಸ್ಟ್ರೋ ಹಂಗೇರಿಯನ್ ಸೈನ್ಯಕ್ಕೆ ಸೇರಿದವನಾಗಿದ್ದುದರಿಂದ ಅವನನ್ನು ರಷ್ಯನರು ಯುದ್ಧಕೈದಿಯನ್ನಾಗಿಸಿದ್ದರು ಹಾಗೂ ಹೊಸದಾಗಿ ರಚಿತವಾಗಿದ್ದ ಚೆಕ್ ಗುಂಪಿಗೆ ಸೇರುವಂತೆ ಆಹ್ವಾನಿಸಿದ್ದರು. ಅದು ಜರ್ಮನ್–ಆಸ್ಟ್ರಿಯನ್ ಮೈತ್ರಿಯ ವಿರುದ್ಧ ಕಾದಾಡಲು ರಚಿತವಾಗಿತ್ತು. ರಷ್ಯಾದಲ್ಲಿ ಬಾಲ್ಶೆವಿಕ್ ಜನ ಅಧಿಕಾರಕ್ಕೆ ಬಂದ ನಂತರ ಜರ್ಮನ್‌ರೊಂದಿಗೆ ರಾಜಿ ಮಾಡಿಕೊಂಡಿದ್ದರು. ಆಗ ಆ ಗುಂಪು ಕೆಂಪು ಸೈನ್ಯದ ವಿರುದ್ಧ ಸೆಣಸಾಡುತ್ತಿದ್ದ ಶ್ವೇತವರ್ಣೀಯ ರಷ್ಯನರು ಹಾಗೂ ಇತರರೊಂದಿಗೆ ಸೇರಿತ್ತು. ರಷ್ಯದಲ್ಲೆಲ್ಲಾ ಆ ಸೈನ್ಯ ಅಗಾಧ ಜನಗಳ ಬೆಂಬಲವನ್ನು ಹೊಂದಿದ್ದುದರಿಂದ, ಸೈಬೀರಿಯಾದ ಮೂಲಕ ವ್ಲಾದಿವೊಸ್ತಕ್‌ನಲ್ಲಿ ಕೊನೆಗೊಳ್ಳುವಂತೆ ಹಿಂದಕ್ಕೆ ಸರಿಯುವ ಹಾಗೆ ಒತ್ತಾಯ ಬಂದಿತ್ತು. ಅಲ್ಲಿಂದ ಅವರನ್ನು ಬಿಡುಗಡೆ ಮಾಡಿದ್ದು, ಅಮೆರಿಕದ ನೌಕಾದಳ. ಕೊನೆಗೆ ೧೯೨೧ರಲ್ಲಿ, ಆರ್ಲಿಟ್ ತನ್ನ ಕುಟುಂಬವನ್ನು ಭೇಟಿ ಮಾಡಲು ಹಿಂತಿರುಗಿದಾಗ ಅವನನ್ನು ನೋಡಿ ಖುಷಿ

ಪಟ್ಟರು. ಅನೇಕ ವರ್ಷಗಳವರೆಗೆ ಅವನ ಬಗ್ಗೆ ಏನೂ ಸುದ್ದಿ ಇರದೆ ಇದ್ದುದರಿಂದ, ಅವನು ಸತ್ತೇಹೋಗಿದ್ದನೆಂದು ಅವರು ತಿಳಿದಿದ್ದರಂತೆ. ಚೆಕ್ ಗುಂಪಿನ ಸದಸ್ಯರು ಹೊಸ ರಾಜ್ಯದ ಸೈನ್ಯದ ಕೇಂದ್ರಬಿಂದುವಿನಲ್ಲಿದ್ದರು. ಆಮಿಟ್ ಚಿಕ್ಕಪ್ಪ ಚೆಕೊಸ್ಲೊವಾಕಿಯಾ ಸೈನ್ಯದ ಅತ್ಯುನ್ನತ ಅಧಿಕಾರಿಯಾಗಿದ್ದನು. ಅದರಿಂದ ಅವನು ಅನೇಕ ಸವಲತ್ತುಗಳನ್ನು ಹೊಂದಲು ಸಾಧ್ಯವಾಯಿತು.

ಲಿಯೊ ಮದುವೆಯಾಗಿ, ಕುಟುಂಬದಿಂದ ದೂರವಾದ ನಂತರ ಆಮಿಟ್ ನನ್ನ ಅಚ್ಚುಮೆಚ್ಚಿನ ಚಿಕ್ಕಪ್ಪನಾದ. ವಿಶ್ವಾಸ ಪರಸ್ಪರ ಇದ್ದಂತೆ ಕಂಡುಬಂದಿತು. ನಾನು ಅವನನ್ನು ಭೇಟಿ ಮಾಡಿದಾಗಲೆಲ್ಲಾ, ನನ್ನನ್ನು ಅಣ್ಣನ ಮಗಳು ಎಂಬುದಕ್ಕಿಂತ ಓರ್ವ ಗೆಳತಿಯಂತೆ ಕಾಣುತ್ತಿದ್ದನು. ಅದರಿಂದ ನನಗೆ ಖುಷಿಯೇ ಆಗಿತ್ತು. ನಾನು ತಕ್ಷಣವೇ ದೊಡ್ಡವಳಾದಂತೆ ಭಾಸವಾಗಿತ್ತು. ತನ್ನ ಮದುವೆಯ ಬಗ್ಗೆ ನನ್ನ ಬಳಿ ಹೇಳಿಕೊಂಡಿದ್ದ. ತನ್ನ ಹೆಂಡತಿಯನ್ನು ತಾನೆಷ್ಟು ಪ್ರೀತಿಸಿದೆ ಹಾಗೂ ಅವಳ ವ್ಯಕ್ತಿತ್ವ ಹಾಗೂ ಜೀವನಶೈಲಿ ಉಂಟುಮಾಡಿದ ಸಮಸ್ಯೆಗಳ ಬಗ್ಗೆಯೂ ಹೇಳಿ ಕೊಳ್ಳುತ್ತಿದ್ದನು. ನಾನವನಿಗೆ ತುಂಬಾ ಹತ್ತಿರವಾದೆ, ನಾನು ವಿಯೆನ್ನಾದ ತರುಣ ಹಾಗೂ ಸುಂದರ ನಟರಲ್ಲೊಬ್ಬನಾದ ಹ್ಯಾನ್ಸ್ ಜಾರೆ ಎಂಬುವವನ ಬಗ್ಗೆ ದೂರದಿಂದಲೇ ಎಂಥಾ ಪ್ರೀತಿಯಿತ್ತು ಎಂಬಂತಹ ಅಮೂಲ್ಯ ರಹಸ್ಯಗಳನ್ನು ಅವನಲ್ಲಿ ಹೇಳಿಕೊಂಡಿದ್ದೆ. ಅವನ ಫೋಟೋವನ್ನು ನನ್ನ ದಿಂಬಿನ ಕೆಳಗೆ ಬಚ್ಚಿಟ್ಟು ಪ್ರತಿ ರಾತ್ರಿ ನಿದ್ರೆ ಮಾಡುವ ಮೊದಲು ಆಸೆಯಿಂದ ಅದನ್ನು ನೋಡುತ್ತಿದ್ದೆ. ಅವನ ಹತ್ತಿರ ಹೋಗುವುದಿರಲಿ, ಅವನನ್ನು ವೈಯಕ್ತಿಕವಾಗಿ ನೋಡುವ ಅವಕಾಶವೂ ಇಲ್ಲ ಎಂದು ಗೊತ್ತಿತ್ತು. ಆಮಿಟ್ ಚಿಕ್ಕಪ್ಪ ನನ್ನ ಈ ವರ್ತನೆಯನ್ನು ಹುಡುಗಾಟವೆಂದು ಪರಿಗಣಿಸಿರಲಿಲ್ಲ ಹಾಗೂ ನನ್ನನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಇದನ್ನು ನಾನು ಅವನ ಬಗ್ಗೆ ಬಹಳ ಪ್ರಶಂಸಿಸುತ್ತಿದ್ದೆ.

ನನ್ನ ತಾಯಿಯ ಮೊದಲ ಹೆಸರು ಲೊಬಲ್. ಅವಳಿಗೂ ಅನೇಕ ಸಂಬಂಧಿಕರಿದ್ದರು. ಆದರೆ ಅವಳ ತಂದೆ ಹಾಗೂ ಥಿಯಾ ಅತ್ತೆ ವಿನಃ ಅವರಾರೂ ನಮ್ಮ ಬಳಿಯಲ್ಲೂ ವಾಸಿಸುತ್ತಿರಲಿಲ್ಲ. ಅಮ್ಮ ಅವರ ಬಗ್ಗೆ ಬೇಕಾದಷ್ಟು ಹೇಳಿದ್ದಳು. ಆದರೆ ನನಗೆ ಅವರೆಲ್ಲಾ ಅಪರಿಚಿತರಂತೆಯೇ ಕಂಡಿದ್ದರು. ಚಿಕ್ಕ ಹುಡುಗಿಯಾಗಿ ನಾನು ನನ್ನ ತಾತನನ್ನು ಪೂಜ್ಯ ಭಾವದಿಂದ ನೋಡುತ್ತಿದ್ದೆ. ಅವರ ಮಂಡಿಯ ಮೇಲೆ ಕುಳಿತುಕೊಳ್ಳಲು ಇಚ್ಛಿಸುತ್ತಿದ್ದೆ. ನಾನು ಹುಟ್ಟುವ ಸ್ವಲ್ಪ ಮುಂಚಿತವಾಗಿ ನನ್ನ ಅಜ್ಜಿ ತೀರಿಕೊಂಡಿದ್ದುದರಿಂದ, ಅವಳು ನನಗೆ ಗೊತ್ತೇ ಇರಲಿಲ್ಲ. ಸಂಪೂರ್ಣವಾಗಿ ಹೊಂದಿಕೊಳ್ಳುವಂಥ ಹಿನ್ನೆಲೆಯಲ್ಲಿ ಬಂದ ಅಪ್ಪನಂತಲ್ಲದೆ, ನನ್ನ ತಾಯಿ ಕಡೆಯ ಅಜ್ಜಿ ತಾತಂದಿರು ಸಮರ್ಪಕವಾದ ಸಂಪ್ರದಾಯಸ್ಥ ಯೆಹೂದಿಗಳಾಗಿದ್ದರು. ನನಗೆ ಆರು ವರ್ಷವಾಗಿದ್ದಾಗ, ನನ್ನನ್ನು ತಾನು ಹುಟ್ಟಿದ

ಸ್ಥಳ ಬ್ಲಾಟಿಸ್ತಾವೆ ಬಳಿಯ ಸ್ಟುಪೋಲಾ ಎಂಬಲ್ಲಿಗೆ ಕರೆದುಕೊಂಡು ಹೋಗಿದ್ದಳು. ಅಲ್ಲಿ ಅವಳ ಸೋದರಮಾವ ಲೆಪೋಲ್ಡ್ ಕುಗ್ಲರ್ ತನ್ನ ಕುಟುಂಬದೊಡನೆ ವಾಸಿಸುತ್ತಿದ್ದ. ಮೊದಲ ಮಹಾಯುದ್ಧದಲ್ಲಿ ಕಾಲೊಂದನ್ನು ಕಳೆದುಕೊಂಡಿದ್ದ ಅವನು ಊರುಗೋಲಿನ ಸಹಾಯದಿಂದ ನಡೆಯುತ್ತಿದ್ದನು. ಅವನು ಬಹಳ ದಯಾಳು ಹಾಗೂ ಸಭ್ಯನಂತೆ ಕಂಡುಬಂದ. ಅವನು ಮತ್ತು ಅಮ್ಮ, ತಮ್ಮ ತಾಯಿ ಸುಮಾರು ಪ್ರತಿ ವರ್ಷ ಹೇಗೆ ಮಕ್ಕಳನ್ನು ಹೆರುತ್ತಿದ್ದಳೆಂಬುದನ್ನು ಜ್ಞಾಪಿಸಿಕೊಂಡರು. ಸದಾ ಗರ್ಭಿಣಿಯಾಗಿರುತ್ತಿದ್ದ ಅವಳ ಆರೋಗ್ಯ ಕ್ಷೀಣವಾಗಿತ್ತು. ಮನೆಯ ಕೆಲಸವನ್ನು ನಿಭಾಯಿಸುವಲ್ಲಿ ಬಹಳ ಕಷ್ಟ ಪಡುತ್ತಿದ್ದಳು. ಅದರಿಂದಾಗಿ ನನ್ನ ತಾಯಿಯನ್ನು ಶಾಲೆಯಿಂದ ಬಿಡಿಸಿ ೯ನೆಯ ವಯಸ್ಸಿನಲ್ಲಿ ಮನೆಯ ಕೆಲಸಕ್ಕೆ ಹಾಕಿದ್ದರು. ಆ ಸಮಯದಲ್ಲಿ ಮನೆಯಲ್ಲಿ ಸೇವಕಿಯನ್ನಿಟ್ಟುಕೊಳ್ಳಲು ಅವರು ಅಸಮರ್ಥರಾಗಿದ್ದರು. ಆ ಎಳೆ ವಯಸ್ಸಿನಲ್ಲೇ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ನನ್ನ ಅಜ್ಜಿಯ ಒಳ್ಳೆಯ ಮಕ್ಕಳೆಲ್ಲಾ ಹುಟ್ಟುತ್ತಲೇ ಸತ್ತಿದ್ದರು ಅಥವಾ ಎಳೆಯ ವಯಸ್ಸಿನಲ್ಲೇ ಸತ್ತಿದ್ದವು. ಹಾಗಾಗಿ ಅವಳ ಅಮ್ಮನ ಚಿಕ್ಕ ಮಕ್ಕಳಿಗೆಲ್ಲಾ ಅಮ್ಮನೇ ತಾಯಿ ಸಮಾನಳಾಗಿದ್ದಳು. ಉಳಿದ ಮಕ್ಕಳ ಪೈಕಿ ಉಳಿದ ತನಗಿಂತ ಒಂದು ವರ್ಷ ಚಿಕ್ಕವನಾಗಿದ್ದ ಲಿಲ್ಲಿಯ ಬಗ್ಗೆ ಅವಳು ನಿಕಟ ಸಂಬಂಧವನ್ನು ಹೊಂದಿದ್ದಳು. ನಂತರದ ದಿನಗಳಲ್ಲಿ ಲಿಲ್ಲಿ ಓರ್ವ ಯಶಸ್ವಿ ಶ್ರೀಮಂತ ಉದ್ಯಮಿಯಾದಾಗಲೂ ಅವನು ತನ್ನ ಅಕ್ಕನ ಬಗ್ಗೆ ಇದ್ದ ನಿಕಟ ಸಂಬಂಧವನ್ನು ಮರೆತಿರಲಿಲ್ಲ. ತಾನು ಸಾಯುವವರೆಗೂ, ಅವನಿಂದ ಏನಾದರೂ ಸಹಾಯ ಅಥವಾ ಬೆಂಬಲ ಪಡೆಯಬಹುದೆಂದು ಅವಳು ತಿಳಿದಿದ್ದಳು.

ಚಿಕ್ಕವಳಿದ್ದಾಗ ನಾನು ಅಮ್ಮನೊಡನೆ ಕುಳಿತು ರಾತ್ರಿ ಬಹಳ ಹೊತ್ತಿನವರೆಗೆ ಅವಳು ಚಿಕ್ಕ ಹುಡುಗಿಯಾಗಿದ್ದಾಗಿನ ವಿವರಗಳನ್ನು ಕೇಳಿಸಿಕೊಳ್ಳುವುದಕ್ಕೆ ಇಷ್ಟ ಪಡುತ್ತಿದ್ದೆ. ಅವಳ ತಂದೆ ಆಗ ಕೃಷಿ ಉಪಕರಣಗಳ ವ್ಯಾಪಾರಿಯಾಗಿದ್ದರಂತೆ. ಸಂಪ್ರದಾಯಸ್ಥ ಯಹೂದಿಯಾಗಿ, ಪ್ರತಿವರ್ಷ ಇಸ್ರೇಲಿಗಳು ಈಜಿಪ್ಟ್‌ನಿಂದ ವಲಸೆ ಹೋದ ದಿನದ ನೆನಪಿನಲ್ಲಿ ತನ್ನ ಕುಟುಂಬದ ಎಲ್ಲ ಸದಸ್ಯರಿಗೂ ಹೊಸ ಬಟ್ಟೆಗಳನ್ನು ತರಬೇಕೆಂಬ ತನ್ನ ಕರ್ತವ್ಯವನ್ನು ಮನವರಿಕೆ ಮಾಡಿಕೊಂಡಿದ್ದನಂತೆ. ಪ್ರತಿವರ್ಷ ವಸಂತ ಋತು ಮೊದಲಲ್ಲಿ ಬರುವ ಈಸ್ಟರ್ ಹೊತ್ತಿನ ಯಹೂದಿ ಹಬ್ಬದ ಮುಂಚೆ ಲೇಬ್ಲ್ ತಾತ ಹಳ್ಳಿಯಲ್ಲಿ ತನ್ನ ಗಿರಾಕಿಗಳಾಗಬಲ್ಲ ರೈತರನ್ನು ಭೇಟಿ ಮಾಡುತ್ತಾ ಓಡಾಡುತ್ತಿದ್ದರಂತೆ, ತಾನು ಮಾರುತ್ತಿದ್ದ ಯಂತ್ರೋಪಕರಣಗಳನ್ನು ಕೊಂಡುಕೊಳ್ಳಬಹುದೆಂಬ ನಿರೀಕ್ಷೆಯಿಂದ. ಹೊಲದಿಂದ ಹೊಲಕ್ಕೆ ನಡೆದಾಡುತ್ತಾ, ಆಕಾಶದತ್ತ ತಲೆಯನ್ನು ನೆಟ್ಟು, ದೇವರಲ್ಲಿ ಮೊರೆಯಿಡುತ್ತಿದ್ದನಂತೆ. "ನನಗೆ ಈ ಬದುಕನ್ನು ಏಕಿಷ್ಟು ಕಷ್ಟ ಮಾಡುತ್ತೀಯಾ? ಸ್ವಲ್ಪ ಬದಲಾವಣೆಗೋಸ್ಕರವಾದರೂ,

ರೈತರು ಸಾಕಷ್ಟು ಉಪಕರಣಗಳನ್ನು ಕೊಳ್ಳುವಂತೆ ಮಾಡು. ಅದರಿಂದ ನಾನು ಹಬ್ಬವನ್ನು ಆಚರಿಸಲು, ನೀನು ಬಯಸುವಂತೆ ಸಾಧ್ಯವಾಗುತ್ತದೆ. ಇದನ್ನು ಕೇಳುವುದು ಹೆಚ್ಚಾಯಿತೆ?" ವಸಂತ ಋತುವಿನ ಸಮಯದಲ್ಲಿ ರೈತರು ಹೊಸ ಉಪಕರಣಗಳನ್ನು ಕೊಳ್ಳಲು ಸಿದ್ಧತೆ ನಡೆಸುವರಾದ್ದರಿಂದ, ತಾತನಿಗೆ ತನ್ನ ಉದ್ದೇಶಿತ ಕಾರ್ಯಗಳಿಗೆ ಸ್ವಲ್ಪ ಹಣ ಬರುತ್ತಿತ್ತು. ಆಗ ಅವರು ಮತ್ತೆ ದೇವರ ಕಡೆ ನೋಡುತ್ತಾ, "ನನ್ನನ್ನು ಕಷ್ಟದಿಂದ ಪಾರು ಮಾಡಿದ್ದಕ್ಕೆ ವಂದನೆಗಳು. ಮತ್ತೆ ಮುಂದಿನ ವರ್ಷವೂ ಈ ಸಮಯಕ್ಕೆ ಇದನ್ನೇ ಮುಂದುವರಿಸುತ್ತೀಯೆಂದು ನಂಬಿದ್ದೇನೆ."

ನಿಜ, ಕೇವಲ ನಾಲ್ಕು ವರ್ಷದವನಿದ್ದಾಗ ತಾತ ತನ್ನ ೬೫ನೆಯ ವಯಸ್ಸಿನಲ್ಲಿ ನಿಧನರಾದರು. ಅವರು ಸತ್ತ ದಿನ ನನಗೆ ಚೆನ್ನಾಗಿ ನೆನಪಿದೆ ಅಥವಾ ಅದನ್ನು ಎಷ್ಟು ಸಾರಿ ನನಗೆ ಹೇಳಲಾಗಿದೆಯೆಂದರೆ, ನನ್ನ ಮನಸ್ಸಿನಲ್ಲಿ ಅದು ಅಚ್ಚೊತ್ತಿದಂತಿದೆ. ಹಾಗಾಗಿ ನನಗೆ ನೆನಪಿದೆಯೆಂದುಕೊಂಡಿದ್ದೇನೆ. ಊಟದ ವೇಳೆಯಲ್ಲಿ ತಾತ ಸತ್ತ ದಿನದಂದು ಅಮ್ಮ ನನಗೆ ತೆಂಗಿನಕಾಯಿ, ಬಿಸ್ಕತ್ತು ನಾವು ಕರೆಯುತ್ತಿದ್ದಂತೆ ಬಸ್ಸರ್ಲ್ (ಚುಂಬನಗಳು)ಗಳನ್ನು ಕಳುಹಿಸಿದ್ದಳು. ಒಮ್ಮೆ ಈ ಬಿಸ್ಕತ್‌ಅನ್ನು ಅವರಿಗೆ ನೀಡಲು ಹೋದಾಗ, ಅವನು ಹೇಳಿದ್ದು "ನನಗೆ ತೆಂಗಿನಕಾಯಿಯ ಮುತ್ತುಗಳು ಬೇಡ, ನಿನ್ನಿಂದ ಒಂದು ಮುತ್ತು ಬೇಕು" ಎಂದು. ಅವನು ಸದಾ ನನ್ನ ನೆಚ್ಚಿನ ತಾತನಾಗಿದ್ದ. ನನಗೆ ಅವನ ಆಲಿಂಗನ ಇಷ್ಟವಾಗಿತ್ತು. ಅವನ ಗಡ್ಡ ಸದಾ ಚುಚ್ಚುತ್ತಿತ್ತು. ಊಟವಾದ ನಂತರ ಅಮ್ಮ ನನ್ನನ್ನು ತನ್ನೊಂದಿಗೆ ಕರೆದುಕೊಂಡು ಹೋಗುತ್ತಿದ್ದಳು. ಆದರೆ ಓಟ್ಟೋ ಮತ್ತು ಕುರ್ಟ್ ಮಾತ್ರ ಮನೆಯಲ್ಲೇ ಉಳಿದಿದ್ದರು. ನಾವು ಬಂದ ಸ್ವಲ್ಪ ಹೊತ್ತಿನ ನಂತರ ಓಟ್ಟೋ ನಮ್ಮ ಹಿಂದೆ ಓಡಿ ಬಂದ. 'ತಾತ ಬಹಳ ಜ್ವರದಿಂದ ಮಲಗಿದ್ದಾರೆ, ನಾವು ಮನೆಗೆ ತಕ್ಷಣ ಹಿಂತಿರುಗಬೇಕೆಂದು ಅಮ್ಮನಿಗೆ ಹೇಳಿದ. ನನ್ನನ್ನು ಎತ್ತಿಕೊಂಡು ಅಮ್ಮ ಮನೆಗೆ ಓಡಿದಳು. ಆದರೂ ನಾವು ಅಲ್ಲಿಗೆ ತಲುಪುವ ಹೊತ್ತಿಗೆ ಅವಳ ಅಪ್ಪ ಆಗಲೇ ತೀರಿಕೊಂಡಿದ್ದನು. ಅಮ್ಮ ಬಿಕ್ಕಿಬಿಕ್ಕಿ ಅತ್ತಿದ್ದು ನನಗೆ ನೆನಪಿದೆ. ಅವಳು ಅತ್ತದ್ದನ್ನು ಅದುವರೆನಿಗೂ ನಾನು ನೋಡಿರದೆ ಇದ್ದುದಕ್ಕೆ ಅದು ನನ್ನ ಮೇಲೆ ಗಾಢ ಪರಿಣಾಮವನ್ನುಂಟುಮಾಡಿತ್ತು. ಆ ಸಮಯದಲ್ಲಿ ಸಾವು ಎಂದರೇನೆಂಬುದನ್ನು ಅರ್ಥ ಮಾಡಿಕೊಳ್ಳದಷ್ಟು ತೀರ ಚಿಕ್ಕ ವಯಸ್ಸಿನವಳಾಗಿದ್ದುದರಿಂದ, ಅಲ್ಲಿ ನಡೆದ ಎಲ್ಲಾ ಘಟನೆಗಳಿಂದ ಏನೋ ಭಯಾನಕವಾದ್ದು ನಡೆದಿದೆ ಎಂದು ಅರ್ಥೈಸಿಕೊಂಡೆ. ಗಡ್ಡಧಾರಿ ವಿಚಿತ್ರ ಜನಗಳು ಬಂದು ನಮ್ಮ ಮನೆ ಸುತ್ತಾ ಏನೋ ಮಾಡಲು ಅಣಿಯಾದರು. ಅದರಿಂದ ನನಗೆ ಭಯವಾಯಿತು. ನಾನು ಅಮ್ಮನ ಬಳಿಯೇ ಇರತೊಡಗಿದೆ. ಆದರೆ, 'ಅವಳು ಯಾವುದೋ ಗಳಿಗೆಯಲ್ಲಿ ನನ್ನನ್ನೆತ್ತಿ, ನನ್ನ ಅಣ್ಣನಿಗೆ ಮೀಸಲಾಗಿದೆ ಎಂದು ಸದಾ ನಾನು ಹೇಳುತ್ತಿದ್ದ ಜಾಗದಲ್ಲಿ, ಅದನ್ನು ಬಳಸಲು ನಾನೆಂದೂ

ಧೈರ್ಯ ಮಾಡದೆ ಇದ್ದ ಆ ಜಾಗದಲ್ಲಿ ಕುಳ್ಳಿರಿಸಿದಳು. ನಾನು ಅಲ್ಲಿ ಕುಳಿತುಕೊಳ್ಳಲು ಅಮ್ಮ ಆಸ್ಪದ ಕೊಟ್ಟ ವಿಷಯದ ಬಗ್ಗೆ ನನಗೆ ಸಂತೋಷವಾಯಿತು. ನನ್ನ ಹುಡುಗಾಟದ ರೀತಿಯಲ್ಲಿ ನನ್ನ ಸುತ್ತ ಏನು ನಡೆಯುತ್ತಿತ್ತು ಎಂಬುದರ ಬಗ್ಗೆ ತಿಳಿದುಕೊಳ್ಳಲು ನಾನು ಎಚ್ಚರ ವಹಿಸಲಿಲ್ಲ. ನಾನು ದೊಡ್ಡವಳಾದ ಮೇಲೆ, ತಾತ ಸತ್ತ ಆ ದಿನದ ಘಟನೆಗಳನ್ನೆಲ್ಲಾ ನೆನಪಿಸಿಕೊಂಡಾಗ ಅದರ ಪೂರ್ಣ ಪರಿಣಾಮಗಳನ್ನು ಹಾಗೂ ನಾನೆಂಥಾ ಮೂರ್ಖ ಹುಡುಗಿಯಾಗಿದ್ದೆ ಎಂಬುದನ್ನು ನಾನು ಮನವರಿಕೆ ಮಾಡಿಕೊಂಡೆ.

ಥಿಯಾ ಅತ್ತಿಗೆ ನನಗೆ ನೆನಪಿರುವಂತೆ, ತೂಕದ ಆದರೂ ನೋಡಲು ಚೆನ್ನಾಗಿದ್ದ ಆಕೆಗೆ ಯಾವಾಗಲೂ ಚರ್ಚೆಗೆ ಒಂದೇ ಒಂದು ವಿಷಯವಿತ್ತು. ಗಂಡನನ್ನು ಹುಡುಕುವುದು ಹೇಗೆ? ಅವರು ಅವನೊಂದಿಗೆ ಮಾತಾಡುವುದನ್ನು ನಾನು ಕೇಳಿಸಿಕೊಂಡಂತೆ ಅವರು ಮದುವೆಯಾಗುವುದಕ್ಕೆ ಎಷ್ಟು ಇಷ್ಟಪಟ್ಟಿದ್ದರು. ಅವಳು ನನ್ನ ಅಜ್ಜಿ ತಾತಂದಿರೊಡನೆ ವಾಸಿಸುತ್ತಿದ್ದಳು ಹಾಗೂ ಅಜ್ಜಿ ಸತ್ತ ನಂತರ ತಾತನನ್ನು ಚೆನ್ನಾಗಿ ನೋಡಿಕೊಂಡಳು. ತಾತನೂ ಸತ್ತ ಮೇಲೆ ಅವರ ಫ್ಲಾಟ್‌ನಲ್ಲಿಯೇ ಇದ್ದರು. ತಾತ ಸಾಯುವ ಮೊದಲು ಅವರು ತನ್ನ ಅತ್ಯಂತ ಚಿಕ್ಕ ವಯಸ್ಸಿನ ಹಾಗೂ ಅತೀ ಶ್ರೀಮಂತ ಮಗ ಲಿಲ್ಲಿಯು, ಥಿಯಾಳನ್ನು ನೋಡಿಕೊಳ್ಳಬೇಕೆಂದು ಮಾತು ತೆಗೆದುಕೊಂಡಿದ್ದರು. ಅದರಂತೆ, ಲಿಲ್ಲಿ, ಥಿಯಾಳಿಗೆ ಮಾಸಿಕ ಭತ್ಯೆಯನ್ನು ತಿಂಗಳ ಖರ್ಚಿಗಾಗುವಷ್ಟು ಕಳುಹಿಸುತ್ತಿದ್ದನು.

ಲಿಲ್ಲಿ ಚಿಕ್ಕಪ್ಪ ಮಹಾಯುದ್ಧದ ಅವಧಿಗೆ ಕಳುಹಿಸುವಷ್ಟು ದೊಡ್ಡವನಾಗಿರಲಿಲ್ಲ. ಸ್ಲೋವಿನಾಯಾದ ಸಣ್ಣ ಪಟ್ಟಣ ಮಾರ್‌ಬರ್ಗ್‌ನಲ್ಲಿ ಮೊದಲ ಹತ್ತಿ ಗಿರಣಿಯನ್ನು ಅವನು ಸ್ಥಾಪಿಸಿದನು. ಅವನು ಸಾಕಷ್ಟು ಶ್ರೀಮಂತನೂ ಆದನು. ಅವನ ಬಾಲ್ಯದಲ್ಲಿ ಆಪ್ತನೇ ಆಗಿದ್ದ ನಮ್ಮಮ್ಮನಿಗೆ ವಿಧೇಯನಾಗಿದ್ದ. ಅವನು ಆಗಾಗ್ಗೆ ದುಡ್ಡನ್ನು ಕಳುಹಿಸುತ್ತಿದ್ದನು. ಅಪ್ಪ ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂಬ ಭಾವನೆಯಿಂದ ಅವನಿಗೆ ಅಪ್ಪನ ಬಗ್ಗೆ ಒಳ್ಳೆಯ ಭಾವನೆಯಿರಲಿಲ್ಲ. ಅಮ್ಮನ ಕೋರಿಕೆ ಮೇರೆಗೆ ಅಪ್ಪನನ್ನು ವ್ಯಾಪಾರಿಯಾಗಿ ತೆಗೆದುಕೊಂಡಿದ್ದನು. ಶಾಲೆ ಬಿಟ್ಟಿದ್ದ ೧೭ ವರ್ಷದ ಸುಂದರ ತರುಣಿ ಗ್ರಿಟ್ ಅತ್ತೆಯನ್ನು ಲಿಲ್ಲಿ ಮದುವೆಯಾದನು. ಎರಡು ಗಂಡು ಮಕ್ಕಳು ಹ್ಯಾನ್ಸ್ ಮತ್ತು ಪಾಲ್ ಹುಟ್ಟಿದವು. ಅವರೊಂದಿಗೆ ನಾವೂ ಸಹ ಸ್ನೇಹದಿಂದ ಇದ್ದೆವು.

ಹೀಗೆ ನನ್ನ ಬಾಲ್ಯದ ಮೊದಲ ಭಾಗ ಹೆಚ್ಚು ಕಮ್ಮಿ ಮಹತ್ವರಹಿತವೇ ಆಗಿತ್ತು ಹಾಗೂ ನನ್ನ ಜೀವನ ರೀತಿ ಬದಲಾಯಿತು, ಎಲ್ಲ ಜನರದ್ದು ಆದಂತೆ ಸಂಬಂಧಿಕರ ಓಡಾಟದ ನಡುವೆ. ಬ್ರಿಗಿಟನುದಲ್ಲಿ ನಮ್ಮ ನೆರೆಹೊರೆ, ಸಮುದಾಯದ ಪ್ರಬಲ ಪ್ರಜ್ಞೆಯಿಂದ ಒಂದಾಗಿತ್ತು. ನನ್ನ ತಂದೆತಾಯಿಯರು ಎಲ್ಲರಿಗೂ ಗೊತ್ತಿದ್ದವರು,

ಗೌರವಿಸಲ್ಪಟ್ಟವರು, ನನ್ನ ಸಹೋದರರು ಜನಪ್ರಿಯರಾಗಿದ್ದರು. ನನ್ನ ಜೀವನದಲ್ಲಿ ಭೂಪಟ ತಯಾರಾಗುವಂತೆ ಕಾಣುತ್ತಿತ್ತು ಹಾಗೂ ನಾನು ನನ್ನ ಮಾರ್ಗದಲ್ಲಿ ಸಾಕಷ್ಟು ಸುಲಭವಾಗಿಯೇ ಚಲಿಸುತ್ತಿದ್ದೆ.

* * * *

# ೨. ಪ್ರಬಲವಾಗುತ್ತಿದ್ದ ಬಿರುಗಾಳಿ

ಕಾರ್ಲ್‌ಮಾರ್ಕ್ಸ್ ಹಾಫ್‌ಗೆ ನಾವು ಹೋಗಬೇಕಾಗಿ ಬಂದುದು ಹೊಸ ಅಧ್ಯಾಯವೊಂದನ್ನು ಆರಂಭಿಸಿತೆನ್ನಬಹುದು. ಇದ್ದಕ್ಕಿದ್ದಂತೆ, ನನಗೆ ಅರಿವಿಲ್ಲದರ ಬಗ್ಗೆ ಅರಿವು ಉಂಟಾಯಿತು. ಬ್ರಿಗಿಟನ್‌ನಲ್ಲಿದ್ದ ಮೊದಲ ವರ್ಷಗಳಲ್ಲಿ, ಯಹೂದಿ ಪಕ್ಷಪಾತ ವಿರೋಧಿಯ ಕಲ್ಪನೆ ನನಗೇನೂ ತಿಳಿದಿರಲಿಲ್ಲ. ಆದರೂ, ಕಾರ್ಲ್‌ಮಾರ್ಕ್ಸ್ ಹಾಫ್‌ಗೆ ವರ್ಗಾವಣೆ ಹೊಂದಿದ ಕೆಲವು ಸಮಯದಲ್ಲೇ, ನನ್ನನ್ನು ವಿಭಿನ್ನವಾಗಿ ಪರಿಗಣಿಸಬೇಕಾಗಿ ಬಂತು ಎಂಬುದು ನನಗೆ ಮನವರಿಕೆಯಾಯಿತು, ಓರ್ವ ಅನ್ಯ ಹಾಗೂ ಓರ್ವ ಬಹಿಷ್ಕೃತಳು ಎಂಬುದಾಗಿ.

ಅದು ಸಂಭವಿಸಿದಾಗ ನನಗೆ ಎಂಟು ವರ್ಷ. ಅಮ್ಮ ನನ್ನನ್ನು ಸ್ಥಳೀಯ ಪ್ರಾಥಮಿಕ ಶಾಲೆಗೆ ಸೇರಿಸಿದ್ದಳು. ನನ್ನ ಸ್ವಾತಂತ್ರ್ಯದ ಕೊನೆಯ ಕ್ಷಣಗಳನ್ನು ಸಂತೋಷವಾಗಿ ಕಳೆದು, ಹೊಸ ಆಡುಂಬೊಲದ ಹುಡುಕಾಟ ನಡೆಸಲು ನಾನು ಕಾತರಳಾಗಿದ್ದೆ. ಶಾಲೆಗೆ ಸೇರುವಾಗ ನಾನು ಮೊದಲೇ ನೋಡಿದ್ದ ಅನೇಕ ಮಕ್ಕಳನ್ನು ನೋಡಿದೆ. ಅವರು ಯಾವುದೋ ಚೆಂಡಿನ ಆಟವಾಡುವುದರಲ್ಲಿ ಮಗ್ನರಾಗಿದ್ದರು. ಆದರೆ, ನನ್ನನ್ನು ಗುರುತು ಹಿಡಿದಂತೆ ತೋರಿತು. ನಾನು ಅವರೊಂದಿಗೆ ಬೆರೆಯಲು ಪ್ರಯತ್ನಿಸಿದಾಗ ಅವರೆಲ್ಲರೂ ಒಟ್ಟಿಗೆ, ತಮ್ಮ ನಾಲಗೆಯನ್ನು ನನ್ನೆದೆಗೆ ಚಾಚುತ್ತಾ, 'ಸೌಜುದೀನ್, ಸೌಜುದೀನ್' (ಯಹೂದಿ ಹಂದಿ) ಎಂದು ಕಿರುಚಿದರು. ನನಗಂತೂ ಅತ್ಯಾಶ್ಚರ್ಯವುಂಟಾಯಿತು, ಅಷ್ಟೇ ಘಾಸಿಯಾಯಿತು. ಆ ಭಯಾನಕ ಶಬ್ದಗಳು ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದಂತೆಯೇ ನಾನು ಮಹಡಿಗೆ ಓಡಿದೆ. ಅಮ್ಮ ಬಾಗಿಲನ್ನು ತೆರೆದಾಗ, ನಾನು ಅವಳ ಬಾಹುಗಳನ್ನು ತಬ್ಬಿಕೊಂಡು ಒಂದೇ ಸಮನೆ ಬಿಕ್ಕಿ ಬಿಕ್ಕಿ ಅತ್ತೆ. ಕೊನೆಗೆ, ಏನಾಯಿತು ಎಂಬುದನ್ನು ಅವಳಿಗೆ ತಿಳಿಸಲು ನಾನು ಸಮಾಧಾನಗೊಂಡೆ. ನನ್ನ ಕಣ್ಣೀರನ್ನು ಒರೆಸಿಕೊಂಡು, ನಾನು ಕೇಳುತ್ತಿದ್ದೆ. ಏಕೆ ಈ ಮಕ್ಕಳು ನನ್ನನ್ನು ಆ ರೀತಿ ಅವಹೇಳನ ಮಾಡಿದರು ಎಂದು. ಯಹೂದಿಯಾಗಿರುವುದರಿಂದ ಏನು ತಪ್ಪು? ಅದು ನನ್ನನ್ನು ಏಕೆ ಬೇರೆ ಮಾಡಿತು? ನಾನು ಅವರಿಗಿಂತ ವಿಭಿನ್ನವಾಗಿದ್ದೇನೆ ಅಂತ ಆ ಮಕ್ಕಳು ತಿಳಿದಿದ್ದರಿಂದ, ಅವರುಗಳು ನನ್ನನ್ನು ಇಷ್ಟಪಡಲಿಲ್ಲ ಎಂದು ಅಮ್ಮ ತನ್ನ ಬುದ್ಧಿವಂತಿಕೆಯಿಂದ ನನಗೆ ವಿವರಿಸಲೆತ್ನಿಸಿದಳು. ಅಪ್ಪನ ಮಾತನ್ನು ತಳ್ಳಿ

ಹಾಕದಿದ್ದುದಕ್ಕಾಗಿ ಹಾಗೂ ನಮ್ಮಲ್ಲಿ ಯಹೂದಿ ಹಮೀನ ಪ್ರಜ್ಞೆಯನ್ನು ರೂಢಿಸದೆ ಇದ್ದದ್ದು ಬೇಸರವಾಗಿದೆಯೆಂದು ಹೇಳುತ್ತಾ, ಅದರಿಂದ ನಾವು ನಮ್ಮಷ್ಟಕ್ಕೆ ಬೀಗಬಹುದೆಂದೂ ತನ್ನ ಅನಿಸಿಕೆಯನ್ನು ತಿಳಿಸಿದರು. ನನ್ನ ಎಲ್ಲಾ ಹೊಸ ಶಾಲಾ ಸಹಪಾಠಿಗಳು ನನ್ನನ್ನು ಏಕೆ ಕೆಣಕಿದರೆಂಬುದನ್ನು ಅರ್ಥಮಾಡಿಕೊಳ್ಳಲು ನನಗೆ ಕಷ್ಟವಾಯಿತು.

ಒಮ್ಮೆ ಶಾಲೆ ಆರಂಭವಾದದ್ದೆ ನಾನು ಬೆಳೆದುಬಂದ ಬಗೆಯನ್ನು ಅವರಿಗೆ, ನಾನು ಒಪ್ಪಿಗೆಯಾಗುವಂತೆ, ಮುಚ್ಚಿಡಲು ಕಷ್ಟಪಟ್ಟು ಪ್ರಯತ್ನಿಸಿದೆ. ನಿಜಕ್ಕೂ, ಅವರ ಬಾಲ್ಯ ನನ್ನದಕ್ಕಿಂತ ಹೇಗೆ ಭಿನ್ನವಾಗಿತ್ತೆಂಬುದು ನನಗೆ ಆರ್ಥವಾಗಲಿಲ್ಲ. ಆದರೂ ಶಾಲಾ ವರ್ಷಗಳು ಕಳೆದಂತೆ, ನನ್ನ ಕೆಲವು ಯಹೂದಿಯೇತರ ಗೆಳತಿಯರಿಗೂ, ನಾನು ಅಪರಿಚಿತಳಾಗಿಯೇ ಉಳಿದೆ ಎಂಬ ವಾಸ್ತವ ನನಗೆ ತಿಳಿಯಿತು. ನನ್ನ ತರಗತಿಯಲ್ಲೇ ಪರಕೀಯತೆ ಎನ್ನುವುದು ಹೇಗೋ ಸಹಿಸಿಕೊಳ್ಳ ಬಹುದಾಗಿತ್ತು. ಆದರೆ, ಇಡೀ ಶಾಲೆಯಲ್ಲಿ ನಾನೊಬ್ಬಳೇ ಯಹೂದಿ ಹುಡುಗಿ ಯಾಗಿದ್ದುದರಿಂದ ನಿಷ್ಠುರವಾಗಿರುವುದನ್ನು ಬೆಳೆಸಿಕೊಂಡೆ ಹಾಗೂ ನಾನೇ ಸ್ವಂತವಾಗಿ ಸಂತೋಷವಾಗಿರಬಲ್ಲ ಚಟುವಟಿಕೆಗಳ ಬಗ್ಗೆ ಗಮನ ಹರಿಸಿದೆ. ನಾನೋರ್ವ ಅತ್ಯಾಸಕ್ತಿಯ ಓದುಗಳಾದೆ. ಗಣಿತದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಖುಷಿ ಕಂಡೆ. ಹೀಗೆ, ನಾನೋರ್ವ ಪ್ರತಿಭಾವಂತ ತರುಣಿಯಾಗಿ ತರಗತಿಗೇ ಸದಾ ಮೊದಲಿಗಳಾಗಿದ್ದೆ. ಇದು ನನ್ನ ಸಹಪಾಠಿಗಳಿಗೆ ಇಷ್ಟವಾಗದಿದ್ದರೂ, ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ನಿಲ್ಲಿಸಿದೆ.

ಓರ್ವ ಯಹೂದಿ ಕುಟುಂಬದವರ ಮಗಳಾದ ಲಿಜ್ಜಿ ಮೆಕ್ಲರ್ ಎಂಬ ಬಾಲಕಿ ಮಾತ್ರ ನನ್ನ ನಿಜವಾದ ಗೆಳತಿಯಾಗಿದ್ದಳು. ಆ ಸಮಯದಲ್ಲಿ, ನಮ್ಮ ಮೇಲಿನ ಅಪಾರ್ಟ್‌ಮೆಂಟ್‌ಗೆ ಅವರು ಸ್ಥಳಾಂತರಗೊಂಡಿದ್ದರು. ಲಿಜ್ಜಿ ನನಗಿಂತ ಎರಡು ವರ್ಷ ದೊಡ್ಡವಳಾಗಿದ್ದಳು. ಹಾಗಾಗಿ ಬಾಲಕಿಯರ ಪ್ರೌಢಶಾಲೆಗೆ ಹೋಗುತ್ತಿದ್ದಳು.ಅವಳಿಗೊಬ್ಬ ಹನ್ಸಿ ಎಂಬ ತಮ್ಮನೂ ಇದ್ದ. ಶಾಲೆಗೆ ಹೋಗುವಷ್ಟು ದೊಡ್ಡವನಾಗಿರಲಿಲ್ಲ. ನಮಗಾಗುತ್ತಿದ್ದ ಆಳವಾದ ನೋವಿನ ಬಗ್ಗೆ ನಾನು ಮತ್ತು ಲಿಜ್ಜಿ ಅನೇಕ ವೇಳೆ ನಮ್ಮಲ್ಲೇ ಪರಸ್ಪರ ಮಾತಾಡಿಕೊಳ್ಳುತ್ತಿದ್ದೆವು. ಏಕೆಂದರೆ, ನಮ್ಮ ತಾಯಂದಿರು ತಮ್ಮ ಗಂಡುಮಕ್ಕಳಿಗೆ ಆದ್ಯತೆ ನೀಡುವುದರ ಮೂಲಕ, ಹೆಣ್ಣುಮಕ್ಕಳ ಬಗ್ಗೆ ತಾರತಮ್ಯ ತೋರಿಸುತ್ತಿದ್ದರು. ಲಿಜ್ಜಿಯ ತಂದೆ ಎಂಜಿನಿಯರಿಂಗ್ ಪದವಿಯನ್ನು ಹೊಂದಿದ್ದರು. ಆದರೆ ತನ್ನ ವೃತ್ತಿಯಲ್ಲಿ ಉದ್ಯೋಗ ದೊರೆಯದ ಕಾರಣ, ಆತ ಬ್ಯಾಂಕಿನ ಗುಮಾಸ್ತರಾಗಿದ್ದರು. ಆದರೂ ತನ್ನ ಆತ್ಮಗೌರವವನ್ನು ಕಾಪಾಡಿ ಕೊಳ್ಳುವುದಕ್ಕಾಗಿ ಎಲ್ಲರೂ ತನ್ನನ್ನು ಎಂಜಿನಿಯರ್‌ರವರೇ ಎಂದು ಕರೆಯಬೇಕೆಂದು ಒತ್ತಾಯ ಮಾಡುತ್ತಿದ್ದರು. ಅದು ನನಗೆ ವಿಚಿತ್ರವೆನಿಸಿತ್ತು. ಲಿಜ್ಜಿಯ ತಾಯಿಗೆ

ಕಾಲಿನಲ್ಲಿ ಕ್ಯಾನ್ಸರ್ ಆಗಿ ಶಸ್ತ್ರಚಿಕಿತ್ಸೆಯಾಗಿತ್ತು. ಹಾಗಾಗಿ ಅನೇಕ ದಿನಗಳವರೆಗೆ ಹಾಸಿಗೆ ಹಿಡಿದು ಮಲಗಿದ್ದಳು. ಅದರಿಂದ ಲಿಜ್ಜಿ ಅವಳ ಮನೆಯ ಅನೇಕ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತು. ನನ್ನೊಂದಿಗೆ ಆಡಲು ಸಮಯವಿರಲಿಲ್ಲ; ಆದರೂ ನಾನಾಗಲಿ, ಅವಳಾಗಲಿ ಇತರ ನಮ್ಮ ವಯಸ್ಸಿನ ಸ್ಥಳೀಯ ತರುಣರೊಂದಿಗೆ ಸೇರಲು ಸಾಧ್ಯವಿಲ್ಲದೆ ಇದ್ದುದರಿಂದ ಸಾಧ್ಯವಾದ ಮಟ್ಟಿಗೆ ನಾವು ಪರಸ್ಪರ ಒಟ್ಟಾಗಿರುತ್ತಿದ್ದೆವು.

ನನ್ನ ಪ್ರಾಥಮಿಕ ಶಿಕ್ಷಣ ಮುಗಿಸಿದ ತಕ್ಷಣ, ನನ್ನ ಇಬ್ಬರೂ ಸೋದರರೂ ಹೋಗುತ್ತಿದ್ದ ಪ್ರೌಢಶಾಲೆಗೇ ನನ್ನನ್ನೂ ಸೇರಿಸಬಹುದೆಂದು ನಾನು ತಿಳಿದುಕೊಂಡಿದ್ದೆ. ಆದರೆ, ಆ ವಿಷಯವಾಗಿ ಅಮ್ಮನಿಗೆ ಬೇರೆ ವಿಚಾರಗಳಿದ್ದವು. ಹಲವು ವಿಷಯಗಳಲ್ಲಿ ಅವಳು ಉದಾರ ಮನಸ್ಸುಳ್ಳವಳೂ, ಪ್ರಗತಿಪರಳಾಗಿದ್ದರೂ ಓರ್ವ ಬಾಲಕಿಗೆ ಉನ್ನತ ಶಿಕ್ಷಣ ಕೊಡಿಸುವುದು ಹಣ ಹಾಗೂ ಶ್ರಮ ವ್ಯರ್ಥ ಮಾಡಿದಂತೆ ಎಂದು ನಂಬಿದ್ದಳು. ಹೆಣ್ಣುಮಕ್ಕಳಿಗೆ ಮದುವೆಯಾಗಿ ಮಕ್ಕಳನ್ನು ಪಡೆಯುವವರಾದ್ದರಿಂದ ಅವರಿಗೆ ಶಿಕ್ಷಣ ಕೊಡಿಸುವುದು ಪ್ರಯೋಜನಕಾರಿಯಲ್ಲ ಎಂದು ಅವಳು ವಾದಿಸುತ್ತಿದ್ದಳು. ನಾನು ಕೋಪಗೊಂಡು ನಮ್ಮಮ್ಮನಿಗೆ ನೀನು ನನ್ನ ಮತ್ತು ನನ್ನ ಸೋದರರ ಮಧ್ಯೆ ನನ್ನ ವಿರುದ್ಧ ತಾರತಮ್ಯ ಮಾಡುತ್ತಿದ್ದೀಯ ಎಂದು ಮುಕ್ತವಾಗಿಯೇ ಆರೋಪಿಸಿದೆ. ಅದರಿಂದ ಕೊನೆಗವಳು ನಾನು ಪ್ರೌಢಶಾಲಾ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಲು ಆಸ್ಪದ ನೀಡಿದಳು. ನಾನು ಸೇರ್ಪಡೆ ಯಾಗುವುದಿಲ್ಲವೇನೋ ಎಂದು ನಿರೀಕ್ಷಿಸಬಹುದೆಂದು ಊಹಿಸಿದೆ. ಅಭ್ಯರ್ಥಿಗಳ ಪಟ್ಟಿಯಲ್ಲಿ ನಾನು ಮೊದಲನೆಯದವಳಾಗಿದ್ದಕ್ಕೆ ನನಗೆ ಖುಷಿಯಾಯಿತು.

ಅನೇಕ ಮಧ್ಯಮ ವರ್ಗದ ಯಹೂದಿ ಕುಟುಂಬಗಳು ವಾಸಿಸುತ್ತಿದ್ದ ವಿಯೆನ್ನಾದ ೯ನೇ ಧಾಸ್ಟಿರ್ಕ್‌ನಲ್ಲಿ ಗ್ಲಾಸರ್‌ಗಾಸ್ ಪ್ರೌಢಶಾಲೆಯು ಇದ್ದದ್ದೆ. ಅದು ಕಾರ್ಲ್‌ಮಾರ್ಕ್ಸ್ ಹಾಫ್‌ನಿಂದ ಸಾಕಷ್ಟು ದೂರದಲ್ಲಿತ್ತು. ಹಾಗಾಗಿ ನಾನು ಶಾಲೆಗೆ ಟ್ರಾಮ್‌ನಲ್ಲಿ ಪ್ರಯಾಣಿಸಬೇಕಾಗಿತ್ತು. ನಾನು ಸೇರಿದ ಆ ತರಗತಿಯಲ್ಲಿ ನಲವತ್ತು ಬಾಲಕಿಯರಿದ್ದರು. ಅದರಲ್ಲಿ ಮೂರನೇ ಒಂದರಷ್ಟು ಯಹೂದಿಗಳೇ ಆಗಿದ್ದರು. ಕೊನೆಗೆ ಕ್ರೀಡೆಗಳು ಹಾಗೂ ಚರ್ಚೆಗಳಲ್ಲಿ ನಾನು ಭಾಗಿಯಾಗಲು ಸಾಧ್ಯವಾಯಿತು. ಹಾಗೂ ನನ್ನ ದೀರ್ಘಾವಧಿಯ ನಿರ್ಬಂಧಿತ ಪ್ರತ್ಯೇಕತೆ ಮುಗಿದಿತ್ತು ಅಥವಾ ನನಗೆ ಹಾಗನ್ನಿಸಿತ್ತು. ಹೊಸ ಶಾಲಾ ವಾತಾವರಣದಲ್ಲಿ ಆಪ್ತ ಗೆಳತಿಯರನ್ನು ಮಾಡಿಕೊಳ್ಳಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ. ನಾವು ಅನ್ಯೋನ್ಯವಾಗಿಯೇ ಇದ್ದೆವು. ಪ್ರಾಥಮಿಕ ಶಾಲೆಯಲ್ಲಿ ನಾನು ಪಟ್ಟ ಪ್ರತ್ಯೇಕತೆಯ ಪಾಡನ್ನೂ ಅದರಿಂದ ನಾನು ಯಹೂದಿ ತತ್ವ ವಿರೋಧಿ ಬೇರುಗಳನ್ನು ಕಂಡುಕೊಳ್ಳಲು ಪ್ರಚೋದನೆ ಗೊಂಡದ್ದನ್ನು ಅವರಿಗೆ ಹೇಳಿದೆ. ಇತರೆ ಸಮಯದಲ್ಲಿ ನಾವು ಉಗಮ ಸಿದ್ಧಾಂತಗಳ

ಒಳಿತನ್ನು ಹಾಗೂ ಧಾರ್ಮಿಕ ಅಧ್ಯಯನದಲ್ಲಿ ಕಲಿತಿದ್ದನ್ನೂ ಚರ್ಚಿಸುತ್ತಿದ್ದೆವು. ಆಧುನಿಕ ಸಮಾಜ ಆಡಂ ಮತ್ತು ಈವ್‌ನಿಂದ ಇಳಿದು ಬಂದಿತೋ ಅಥವಾ ಅದು ನೈಸರ್ಗಿಕ ಆಯ್ಕೆ ಮತ್ತು ಉಗಮದ ಫಲವೋ ಎಂಬುದರ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡುತ್ತಿದ್ದೆವು. ಪರಸ್ಪರ ತಮ್ಮ ಬುದ್ಧಿವಂತಿಕೆಗೆ ಸವಾಲು ಒಡ್ಡುವುದರಲ್ಲಿ ಖುಷಿ ಪಟ್ಟುಕೊಳ್ಳುತ್ತಿದ್ದ ಬುದ್ಧಿವಂತ ತರುಣರ ಗುಂಪಿನಲ್ಲಿ ನಾನು ಸಂತೋಷವಾಗಿದ್ದೆ. ಎಷ್ಟು ಸಂತೋಷವಾಗಿದ್ದೆನೆಂದರೆ, ಒಮ್ಮೊಮ್ಮೆ ಟ್ರಾಮ್ ಕಾರ್ ಹತ್ತುವಾಗ ಅವುಗಳಿಗೆ ಹತ್ತದೇ ಸುಮ್ಮನಿರುತ್ತಿದ್ದೆ. ಆದರೆ, ತಕ್ಷಣ ನೆನಪಾಗುತ್ತಿತ್ತು, ಅಮ್ಮ ನಾನು ಮನೆಗೆ ಹಿಂತಿರುಗುವುದನ್ನೇ ಆತಂಕದಿಂದ ಎದುರು ನೋಡುತ್ತಿರುತ್ತಾರೆ ಎಂದು.

ಪ್ರೌಢಶಾಲೆಯ ನನ್ನ ಮೊದಲ ವರ್ಷದಲ್ಲಿ, ನನ್ನ ಸೋದರರಷ್ಟೇ ನಾನೂ ಸಹ ಬುದ್ಧಿವಂತಳೆಂದು, ಅಮ್ಮನಿಗೆ ಸಾಬೀತುಪಡಿಸಲು ನಾನು ಸಾಕಷ್ಟು ಕಷ್ಟಪಟ್ಟು ಓದಿದೆ. ಇದು ನನ್ನ ಶಾಲಾ ವರದಿಯಲ್ಲಿ ನನಗೆ ಪುರಸ್ಕಾರ ದೊರಕುವಂತೆ ಮಾಡಿತು. ಆ ವರದಿಯನ್ನು ನಾನು ಹೆಮ್ಮೆಯಿಂದ ಮನೆಗೆ ತಂದಾಗ, ಆ ಹೊತ್ತಿಗೆ ವಿಯೆನ್ನಾದ ತಾಂತ್ರಿಕ ವಿ.ವಿ. ನಿಲಯದ ವಿದ್ಯಾರ್ಥಿಯಾಗಿದ್ದ ಓಟ್ಟೊ ನನ್ನನ್ನು ಪ್ರಶಂಸಿಸಿದ ಹಾಗೂ ಒಂದು ರೀತಿಯ ಅಸಹಜ ವರ್ತನೆಯಲ್ಲಿ ನನ್ನ ಹಣೆಗೆ ಮುತ್ತಿಟ್ಟ. ಈ ರೀತಿಯ ಔಪಚಾರಿಕ ಗುರುತಿಸಲ್ಪಡುವಿಕೆಯಿಂದ ನಾನು ಎಷ್ಟು ಖುಷಿಗೊಂಡೆನೆಂದರೆ ಮಾರನೆಯ ವರ್ಷಕ್ಕೆ ಇನ್ನೂ ಚೆನ್ನಾಗಿ ಓದುವ ಪ್ರತಿಜ್ಞೆ ಕೈಗೊಂಡೆ. ಓಟ್ಟೊಗೆ ಇದು ಬರೀ ತಮಾಷೆಯಾಗಿರಲಿಲ್ಲ ಎಂದು ನಾನು ಆ ಸಮಯದಲ್ಲಿ ಮನವರಿಕೆ ಮಾಡಿಕೊಳ್ಳಲಿಲ್ಲ. ಕಾರಣ, ಆ ಹೊತ್ತಿಗೆ ಅವನಾಗಲೇ ಉದಯೋನ್ಮುಖ ಹವ್ಯಾಸಿ ನಟನಾಗಿದ್ದ ಹಾಗೂ ತನ್ನ ಮನಸ್ಸಿನಲ್ಲಾಗಲೇ ತಂದೆಯ ಪಾತ್ರವನ್ನು ಅಭಿನಯಿಸುತ್ತಿದ್ದ, ನನ್ನನ್ನು ಔಪಚಾರಿಕವಾಗಿ ಚುಂಬಿಸಿದಾಗ. ನಾನು ಅವನೆಡೆಗೆ ನಿಜವಾದ ಗೌರವದಿಂದ ನೋಡಿದರೆ ಅವನು ಮಾತ್ರ ಪಿತೃ ಪ್ರಾಯದ ನಡವಳಿಕೆಯನ್ನು ಅಭಿನಯಿಸುತ್ತಿದ್ದ.

ಓಟ್ಟೊವಿನೊಂದಿಗೆ ನನಗೆ ಯಾವಾಗಲೂ ಸಹಮತವಿರಲಿಲ್ಲ. ನಾನೊಮ್ಮೆ ೧೧ ವರ್ಷದವಳಿದ್ದಾಗ, ನಾನು ಸಿಗ್ಮಂಡ್ ಫ್ರಾಯ್ಡ್‌ನ 'Introduction to Psychoanalysis' ಕೃತಿಯನ್ನು ಓದಲು ನಿರ್ಧರಿಸಿದೆ. ಅದರ ಬಗ್ಗೆ ನನಗೆ ತಿಳಿದದ್ದು ನನ್ನ ಪ್ರೌಢಶಾಲಾ ಗೆಳತಿಯೊಬ್ಬರಿಂದ. ಅದನ್ನು ನನ್ನ ಕೈಯಿಂದ ಕಿತ್ತು ಹರಿದುಹಾಕಿ, "ನೀನು ಓದುತ್ತಿರುವುದನ್ನು ಅರ್ಥ ಮಾಡಿಕೊಳ್ಳಲು ನೀನಿನ್ನೂ ಚಿಕ್ಕವಳು. ಆದರೂ ಅದನ್ನು ಓದಿದರೆ ಮುಂದೆ ಅದರ ಪರಿಣಾಮವನ್ನು ಅನುಭವಿಸ ಬೇಕಾಗುತ್ತದೆ" ಎಂದು ಕೂಗಾಡಿದ. ಅವನ ಆಕ್ಷೇಪಣೆಯಲ್ಲಿ ತರ್ಕವಿಲ್ಲದ್ದನ್ನು ಕಂಡು, ನಾನು ಪ್ರತ್ಯುತ್ತರ ನೀಡಿದೆ: "ನೀನು ಹೇಳುವುದು ಎರಡೂ ಸರಿಯಲ್ಲ; ನಾನು ಓದುತ್ತಿರುವುದನ್ನು ನಾನು ಅರ್ಥಮಾಡಿಕೊಳ್ಳಲಾರೆ ಎಂದಾದರೆ, ಅದರಿಂದ

ನನಗೆ ಯಾವ ತೊಂದರೆಯಾಗಲಾರದು ಅಥವಾ ನನಗೆ ಅದು ತೊಂದರೆಯನ್ನುಂಟು ಮಾಡಬಹುದು. ಹಾಗಾದಲ್ಲಿ ನಾನೇನನ್ನು ಓದುತ್ತಿದ್ದೇನೆಯೋ ಅದನ್ನು ನಾನು ಅರ್ಥಮಾಡಿಕೊಳ್ಳಬೇಕು." ವಾಸ್ತವವಾಗಿ ಅವನು ತನ್ನ ತಂಗಿ ತನ್ನ ವಾದದ ತರ್ಕವನ್ನು ಪ್ರಶ್ನಿಸುವುದನ್ನು ವಿರೋಧಿಸಿದ. ಮತ್ತಷ್ಟು ಮಾತಿನ ಭರಾಟೆಯ ನಂತರ, ಅವನು ನನ್ನೆಡೆಗೆ ಪುಸ್ತಕವನ್ನು ಎಸೆದು ಹೇಳಿದ, "ಓದಲೇ ಬೇಕಾದರೆ ಓದು, ಸಂತೋಷ." ಆಗ ನಾನು ರಾತ್ರಿ ತುಂಬಾ ಹೊತ್ತು ಎದ್ದಿದ್ದೆ ಆ ಪುಸ್ತಕವನ್ನು ಮುಗಿಸಲು. ನಾನು ಅನೇಕ ಸಾರಿ ಓಟ್ಟೊ ವಿರುದ್ಧ ಬಂಡೇಳುತ್ತಿದ್ದೆ. ತಮ್ಮ ತಂದೆ ತಾಯಿಯರ ವಿರುದ್ಧ ಬಹಳ ಜನ ತರುಣರು ಬಂಡೇಳುವಂತೆ.

ನನ್ನ ಶಾಲಾ ದಿನಗಳು ಸಂತೋಷದಾಯಕವಾಗಿ ಒಂದು ಹಂತಕ್ಕೆ ಬಂದರೂ, ಆಸ್ಟ್ರಿಯಾದ ರಾಜಕೀಯ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿತ್ತು. ೧೯೩೪ರ ಫೆಬ್ರವರಿ ೧೨ರಂದು ಆಸ್ಟ್ರಿಯಾದ ಸೋಷಿಯಲ್ ಡೆಮೊಕ್ರಾಟಿಕ್ ಪಕ್ಷವು ಸಾಮೂಹಿಕ ಮುಷ್ಕರವನ್ನು ಘೋಷಿಸಿತು. ಹಾಗೂ ಅವರ ಪ್ಯಾರಾಮಿಲಿಟರಿ ವಿಭಾಗ ಷುಟ್ಜ್ ಬಂದ್ ಆಗುವುದೇ ಚುನಾಯಿತರಾಗಿದ್ದ ಬಲಪಂಥೀಯ ಸರ್ಕಾರದ ವಿರುದ್ಧ ಶಸ್ತ್ರಸಜ್ಜಿತ ದಂಗೆಯನ್ನು ಆರಂಭಿಸಿತ್ತು. ಈ ರಕ್ಷಣಾ ಪಡೆಯ ವಿಭಾಗವು ಕಾರ್ಲ್‌ಮಾರ್ಕ್ಸ್ ಹಾಫ್ ದಕ್ಷಿಣದ ತುದಿಯಲ್ಲಿ ಪ್ರತಿಬಂಧವನ್ನೊಡ್ಡಿತ್ತು (ನಾವು ವಾಸಿಸುತ್ತಿದ್ದದ್ದು ಉತ್ತರದ ವಿಭಾಗದಲ್ಲಿ) ರಾತ್ರೋರಾತ್ರಿ ವಾತಾವರಣ ಬದಲಾಯಿತು: ಜನ ಉದ್ವಿಗ್ನಗೊಂಡು ಭಯಭೀತರಾದರು. ಏನಾಗುತ್ತಿದೆ ಎಂಬುದೇ ಯಾರಿಗೂ ಗೊತ್ತಿರಲಿಲ್ಲ; ಎನಾದರೂ ಆಗಬಹುದೆಂದು ಹೆದರಿ ಜನ ಸಿಕ್ಕಿದ್ದೆಲ್ಲವನ್ನು ಕೊಳ್ಳುತ್ತಿದ್ದರು. ಷುಟ್ಸ್‌ಬಂದ್‌ನ ಶಾಖೆಯಾಗಿದ್ದ ಅಕೆಡೆಮಿಕ್ ಲೆಜನ್‌ನನ್ನು ಓಟ್ಟೊ ಸೇರಿದ್ದನು. ಅವನು ಕೆಲಸಕ್ಕೆ ಸೇರಿಕೊಳ್ಳಬೇಕಾಗಿತ್ತು. ತನ್ನ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದರಿಂದ ಅವನು ನಮ್ಮನ್ನು ನೋಡಿ ಬರಲು ಹೋಗಿ ಮತ್ತೆ ಹಿಂತಿರುಗಲು ಅನುಮತಿ ಪಡೆದಿದ್ದನು. ಅವನು ಬೀಗ ತೆಗೆದು ಬಂದಾಗ ಎಷ್ಟೋ ಸಂತೋಷವಾಗಿದ್ದೆವು. ಆದರೆ ಅವನು ಕೆಲವು ಗಂಟೆಗಳ ನಂತರ ಹೋಗಬೇಕಾಗಿ ಬಂದಾಗ, ಬಹಳ ಹೆದರಿದ್ದೆವು.

ಕತ್ತಲಾಗುತ್ತಿದ್ದಂತೆಯೇ, ಓಟ್ಟೊ ತನ್ನ ನಿಗದಿತ ಕೆಲಸಕ್ಕೆ ಹಿಂತಿರುಗಬೇಕಾಗಿತ್ತು. ಅವನು ಹೋದ ನಂತರ, ನಾವುಗಳು ಟೇಬಲ್ಲಿನ ಸುತ್ತ ನಿಶ್ಚಲರಾಗಿ ಕುಳಿತೆವು. ನಮ್ಮ ಫ್ಲಾಟ್‌ನಲ್ಲಿ ಭಯಾನಕ ಮೌನ ಆವರಿಸಿತ್ತು. ನಮಗೆ ಕೇಳಿಸುತ್ತಿದ್ದುದು ಗಡಿಯಾರದ ಟಿಕ್‌ಟಿಕ್ ಶಬ್ದ ಮಾತ್ರ. ಇದ್ದಕ್ಕಿದ್ದಂತೆ ನಮಗೆ ಗಟ್ಟಿಯಾದ ಶಬ್ದ ಕೇಳಿಸಿತು. ಗಾಬರಿಯಿಂದ ನಾವು ಪರಸ್ಪರ ನೋಡಿಕೊಂಡೆವು. ಅದು ಬಂದೂಕಿನ ಶಬ್ದವೇ ಇರಬೇಕೆಂದು, ಈ ಗುಂಡುಗಳು ಓಟ್ಟೊ ಕಡೆಗೆ ಗುರಿಯಿಟ್ಟಿರಬೇಕು. ಹಾಗಾಗಿ ಇಷ್ಟು ಹೊತ್ತಿಗೆ ಅವನು ಎಲ್ಲೋ ಬಿದ್ದಿರಬೇಕು, ಗಾಯಗೊಂಡು

ಅಥವಾ ಸತ್ತು ಎಂದು ನಮಗೆ ಖಚಿತವಾಯಿತು.

ಅನಂತತೆಯೊಂದು ತೋರಿದಂತೆ ನಾವು ಸ್ತಂಭೀಭೂತರಾಗಿ ಕುಳಿತೆವು. ಆ ಹೊತ್ತಿಗೆ ಆದರೆ, ಅದು ಕೆಲವು ನಿಮಿಷಗಳಿಗಿಂತ ಹೆಚ್ಚಾಗಲಿಲ್ಲ. ಆಗ ಬಾಗಿಲ ಗಂಟೆ ರಿಂಗಣಿಸಿತು. ನಾನು ಬಾಗಿಲು ತೆರೆಯಲು ಓಡಿಹೋದೆ, ಕೆಟ್ಟ ಸುದ್ದಿಯನ್ನೇ ನಿರೀಕ್ಷಿಸುತ್ತಾ. ಆದರೆ ಓಟ್ಟೊ ಜೀವಂತವಾಗಿ, ಗಾಯಗೊಳ್ಳದೆ ಬಂದಿದ್ದು ನೋಡಿ, ಉದ್ವೇಗದಿಂದ ಅವನು ಬಿಕ್ಕುತ್ತಾ ಹೇಳಿದ: "ಗುಂಡಿನ ಬೆಂಕಿ ನನ್ನನ್ನು ನಿಲ್ಲಿಸಿತು. ಅದಕ್ಕೆ ಮುನ್ನುಗ್ಗುವುದು ಅಪಾಯವೆಂದು ನಾನು ಹಿಂದಕ್ಕೆ ಬಂದೆ." ನಮ್ಮ ಉದ್ವೇಗದಿಂದ ಬಿಡುಗಡೆ ಇದ್ದಕ್ಕಿದ್ದ ಹಾಗೆ ಹೇಗೆ ನಡೆಯಿತೆಂದರೆ ನಮ್ಮಲ್ಲಿ ಪ್ರತಿಯೊಬ್ಬರೂ ಅದಕ್ಕೆ ವಿಭಿನ್ನ ರೀತಿಯಲ್ಲಿ ಹೊಂದಿಕೊಂಡೆವು. ಅಮ್ಮ ಊಟವನ್ನು ಸಿದ್ಧಪಡಿಸಲು ಅನುವಾದಳು; ಕುರ್ಟ್ ತನ್ನ ಪುಸ್ತಕಗಳಲ್ಲಿ ಮುಳುಗಿದ; ನಾನು ಓಟ್ಟೊವನ್ನು ತಬ್ಬಿಕೊಂಡೆ. ಅವನಾದರೋ ತನ್ನ ಸಂಗಾತಿಗಳನ್ನು ಅಲ್ಲೇ ಬಿಟ್ಟು ಬಂದುದಕ್ಕೆ ಅಪರಾಧಿ ಭಾವನೆಯನ್ನು ವ್ಯಕ್ತಪಡಿಸಿದ.

ಆ ಮುಂದಿನ ಕೆಲವು ದಿನಗಳು ನಮಗೆಲ್ಲಾ ಕಷ್ಟಕರವಾಗಿದ್ದವು. ಗುಂಡು ವಿನಿಮಯದ ನಿರಂತರ ಶಬ್ದ ಭಯಾನಕವಾಗಿತ್ತು. ನಿಯತವಾಗಿ, ಮಿಲಿಟರಿಯ ಶಸ್ತ್ರಸಜ್ಜಿತ ಕಾರುಗಳು ಹೊರಗಡೆ ಸಂಚರಿಸುತ್ತಿದ್ದವು. ಹಾಗೂ ಕಿಟಕಿಯಲ್ಲಿ ಯಾವುದೇ ಮುಖ ಕಂಡರೂ, ಅವರು ಗುಂಡು ಹೊಡೆಯುತ್ತಿದ್ದರು. ಯುಗೋಸ್ಲಾವಿಯಾದಲ್ಲಿ ಪ್ರವಾಸದಲ್ಲಿದ್ದ ಅಪ್ಪನೊಂದಿಗೆ ಸಂಪರ್ಕವೇ ಇರಲಿಲ್ಲ, ಕಾರ್ಲ್‌ಮಾರ್ಕ್ಸ್ ಹಾಫ್‌ನಲ್ಲಿನ ದೂರವಾಣಿ ಸಂಪರ್ಕವನ್ನು ಕಡಿದುಹಾಕಿದ್ದುದರಿಂದ ನಮ್ಮ ಬಗ್ಗೆ ಅವರಿಗೆ ಬಹಳ ಚಿಂತೆ ಆಗಬಹುದೆಂದು ನಾವು ಹೆದರಿದೆವು. ಅಹಿತಕರ ಸುದ್ದಿಯನ್ನು ಕೇಳಿ ನಮ್ಮನ್ನು ಸಂಪರ್ಕಿಸುವ ಸಾಧ್ಯವಿಲ್ಲದೆ ಇರುವುದರಿಂದ, ಅಮ್ಮ ಮತ್ತು ಓಟ್ಟೊ ಇಬ್ಬರೂ ನಾವೇನು ಮಾಡಬೇಕು ಎಂಬುದರ ಬಗ್ಗೆ ಚರ್ಚಿಸಿದೆವು. ಅಪ್ಪನ ಸಹೋದ್ಯೋಗಿ ಹಾಗೂ ಆಪ್ತಮಿತ್ರರೊಬ್ಬರ ಕುಟುಂಬದವರೊಡನೆ ಆಶ್ರಯ ಪಡೆಯುವುದೊಳ್ಳೆಯದು ಎಂದು ನಿರ್ಧರಿಸಿದೆವು. ಅವರು ವಾಸಿಸುತ್ತಿದ್ದುದು, ವಿಯೆನ್ನಾದ ಯಹೂದಿ ವಸತಿಯೊಂದರಲ್ಲಿ. ಕದನ ನಡೆಯುತ್ತಿದ್ದ ಪ್ರದೇಶದ ದೂರದಿಂದ. ಅಪ್ಪ ನಮ್ಮ ಬಗ್ಗೆ ತಿಳಿಯಲು ಅವರಿಗೆ ಫೋನ್ ಮಾಡಬಹುದೆಂದು ನಿರೀಕ್ಷಿಸಿದೆವು. ಅದರಂತೆ, ನಾವುಗಳು ಸಣ್ಣ ಚೀಲದಲ್ಲಿ ಅಗತ್ಯವಾದ್ದನ್ನು ತುಂಬಿಕೊಂಡೆವು. ಕೋಟ್‌ಗಳನ್ನು ಧರಿಸಿ ಗುಂಡೇಟು ನಿಲ್ಲುವವರೆಗೂ ಕಾದೆವು. ಓಟ್ಟೊ ತಾನು ದಾರಿಯಲ್ಲಿ ಕರೆದೊಯ್ಯುವುದಾಗಿ ಹೇಳಿ, ಕಟ್ಟಡದಿಂದ ಹೊರ ಬರಲು ಯಾವಾಗ ಹಾಗೂ ಎಲ್ಲಿ ಸುರಕ್ಷಿತವಾದುದು ಎಂದು ತಿಳಿಸುವುದಾಗಿ ಹೇಳಿದ. ಎಲ್ಲವೂ ನಿಶ್ಶಬ್ದವಾದಾಗ, ನಾವು ಫ್ಲಾಟ್‌ನಿಂದ ಹೊರನಡೆದೆವು. ಅಮ್ಮ ಬಾಗಿಲಿಗೆ ಬೀಗ ಹಾಕಿದಳು. ನಾವುಗಳು ಓಟ್ಟೊವನ್ನು ಕೆಳಗೆ ಹಿಂಬಾಲಿಸಿದೆವು.

ನಾವ್ಯಾರೂ ಒಂದೂ ಮಾತಾಡಲಿಲ್ಲ. ಓಟ್ಟೊ ಜಾಗರೂಕತೆಯಿಂದ ಮುಂಬಾಗಿಲನ್ನು ತೆರೆದ. ನಮಗೆ ಹಿಂದೆಯೇ ಇರಲು ಹೇಳಿ ಹೊರಗೆ ಕಾಲಿಟ್ಟ. ನಾವು ಹೊರಗೆ ಬರಲು ಸುರಕ್ಷಿತವಾಗಿದೆ ಎಂದು ಗೊತ್ತಾದಾಗ, ನಮಗೆ ಕೈ ಸನ್ನೆ ಮಾಡಿದ, ನಾವುಗಳು ಮೆಲ್ಲಗೆ ಖಾಲಿಯಾಗಿದ್ದ ಆಟದ ಮೈದಾನದ ಮುಖಾಂತರ ಹೊರ ನಡೆದೆವು. ಹೀಗೆ ಮಾಡುವಾಗ, ಮತ್ತೊಂದು ಮನೆಯ ಪ್ರವೇಶದ್ವಾರದಲ್ಲಿದ್ದ ಇಬ್ಬರು ತರುಣರ ದೇಹಗಳನ್ನು ಹಾದು ಹೋದೆವು. ರಕ್ತ ದಾರಿಯಲ್ಲಿ ಹೊರ ಚೆಲ್ಲಿತ್ತು. ರಕ್ತದ ಮಡುವಿನಲ್ಲಿರಲಿ, ಅದಕ್ಕಿನ್ನ ಯಾರಾದರೂ ಸತ್ತಿರುವುದನ್ನು ನಾನು ನೋಡಿದ್ದು ಅದೇ ಮೊದಲು. ನಾನು ನಿಂತು ಹತ್ತಿರದಿಂದ ಸರಿಯಾಗಿ ನೋಡಬೇಕೆನ್ನಿಸುವಷ್ಟರಲ್ಲಿ ಅಮ್ಮ ನನ್ನ ಕೈ ಹಿಡಿದೆಳೆದಳು, ನನ್ನ ಸೋದರನ ಬಳಿ. ಅಪಾಯದ ವಲಯುವನ್ನು ನಾವು ದಾಟುವಷ್ಟರಲ್ಲಿ, ಬಲಪಂಥೀಯ ಮಿಲಿಟರಿಯವರು ಉದ್ದೇಶಪೂರ್ವಕವಾಗಿಯೇ ದೇಹಗಳನ್ನು ಅಲ್ಲಿ ಬಿಟ್ಟಿದ್ದಾರೆ, ಇತರ ಸ್ವಾತಂತ್ರ್ಯ ಹೋರಾಟಗಾರರು ಕದನವನ್ನು ಮುಂದುವರಿಸಲಾರದಂತೆ ಹೆದರಿಸಲು ಎಂದು ಓಟ್ಟೊ ವಿವರಿಸಿದ.

ಇತರ ಯಾವುದೇ ಸಮಸ್ಯೆಗಳಿಲ್ಲದೆ ನಾವು ನಮ್ಮ ಗೆಳೆಯರ ಅಪಾರ್ಟ್‌ಮೆಂಟ್‌ನ್ನು ತಲುಪಲು ಯಶಸ್ವಿಯಾದೆವು. ಅಲ್ಲಿ ನಮಗೆ ಭವ್ಯ ಸ್ವಾಗತ ದೊರೆಯಿತು. ಅಪ್ಪ ಅವರಿಗೆ ಪದೇ ಪದೇ ಫೋನ್ ಮಾಡಿ ನಾವೆಲ್ಲ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದೇವೆಂಬುದನ್ನು ತಿಳಿದುಕೊಳ್ಳಲು ಹೇಳುತ್ತಿದ್ದರೆಂದು ಅವರು ತಿಳಿಸಿದರು. ಸ್ವಲ್ಪ ಹೊತ್ತಿನ ನಂತರ ಅಪ್ಪ ಫೋನ್ ಮಾಡಿದಾಗ ನಾವೆಲ್ಲಾ ಗುಂಡಿನ ಕಾಳಗದಲ್ಲೂ ಬದುಕುಳಿದಿದ್ದೇವೆ ಎಂಬುದನ್ನು ಒತ್ತಿ ಹೇಳಲಾಯಿತು. ಗುಂಡೇಟಿನಿಂದ ಸತ್ತು ಬಿದ್ದಿದ್ದವರ ಬಗ್ಗೆ ನಾನಿನ್ನೂ ಯೋಚಿಸುತ್ತಲೇ ಇದ್ದೆ. ಆ ಭಯಾನಕ ಅನುಭವವನ್ನು ಅಪ್ಪನಿಗೆ ಫೋನ್‌ನಲ್ಲಿ ವಿವರಿಸಿ ಹೇಳಿದೆ. ಅವನು ಉತ್ತರಿಸಿದ್ದೇನೆಂದರೆ, "ಡಾರ್ಲಿಂಗ್, ದಯವಿಟ್ಟು, ಈ ವಿಷಯಗಳ ಬಗ್ಗೆ ಚಿಂತಿಸುವುದನ್ನು ನಿಲ್ಲಿಸು– ನೀನು ಸಾವಿನ ಬಗ್ಗೆ ಚಿಂತಿಸುವಷ್ಟು ದೊಡ್ಡವಳಲ್ಲ" ಎಂದು. ಆದರೂ ಈ ಮಾತುಗಳು ನನ್ನ ಮನಸ್ಸಿನಲ್ಲಿ ಬೇರೂರಿದ್ದ ದೃಶ್ಯಗಳನ್ನು ಅಳಿಸಲಾಗಲಿಲ್ಲ. ನಾವು ನಮ್ಮ ಗೆಳೆಯರೊಡನೆ ತಂಗಲು ನಿರ್ಧರಿಸಿದೆವು, ಪರಿಸ್ಥಿತಿ ಸುಧಾರಿಸಬಹುದೆಂಬ ನಿರೀಕ್ಷೆಯಿಂದ. ಆದರೂ, ರಾಜಕೀಯ ಪರಿಸ್ಥಿತಿ ಹದಗೆಟ್ಟಿತು. ಪ್ರತಿದಿನ ನಾವು ರೇಡಿಯೋಗೆ ಅಂಟಿ ಕುಳಿತಿದ್ದೆವು, ಸುದ್ದಿಗಾಗಿ ಕಾಯುತ್ತಾ. ನಾವೆಲ್ಲಾ ಆತಂಕದಿಂದ ಕಾಯುತ್ತಿದ್ದಂತೆ, ಬಲಪಂಥೀಯ ಡಾಲ್‌ಫಸ್ ಆಳ್ವಿಕೆಯು ಪ್ರತಿರೋಧವನ್ನು ಹತ್ತಿಕ್ಕಿತ್ತು. ಓಟ್ಟೊ ಭಯಭೀತನಾಗಿ ಶತಪಥ ತಿರುಗಿದ ಹೋರಾಟದಲ್ಲಿ ಭಾಗಿಯಾದವರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಾ. ಷುಟ್ಜ್‌ಬಂದ್ ಸೋಲನ್ನುಂಡಿದೆ ಹಾಗೂ ಡಾಲ್‌ಫಸ್ ಸರ್ಕಾರ ಪೂರ್ತಿ ನಿಯಂತ್ರಣದಲ್ಲಿದೆ

ಎಂದು ಪ್ರಕಟಿಸಲಾಯಿತು. ಸರಿಯಾದ ಮೇಲ್ಪಂಕ್ತಿ ಹಾಕಿಕೊಡಲು ಹಾಗೂ ಇಂತಹ ದಂಗೆ ಮತ್ತೇಳುವುದನ್ನು ತಡೆಗಟ್ಟಲು, ಷುಟ್ಜ್‌ಬಂದ್‌ನ ಸೆರೆ ಹಿಡಿದಿದ್ದ ಕೆಲವು ಕಮಾಂಡರ್‌ಗಳನ್ನು ಮರಣದಂಡನೆಗೆ ಗುರಿಪಡಿಸಿತು. ಓಟ್ಟೊನ ಸಹೋದ್ಯೋಗಿಗಳಾಗಿದ್ದ ಅವರಲ್ಲಿಬ್ಬರ ಬಗ್ಗೆ ಎಲ್ಲವನ್ನೂ ಹೇಳಿದ್ದನು. ಅವರ ಮರಣದಂಡನೆಯ ಸುದ್ದಿ ಕೇಳಿದಾಗ ಓಟ್ಟೊಗೆ ಮಾತ್ರವಲ್ಲ, ನನಗೂ ಗಾಬರಿಯೇ ಆಯಿತು. ಅದು ನನ್ನ ಮೇಲೆ ದೊಡ್ಡ ಪರಿಣಾಮವನ್ನುಂಟುಮಾಡಿತು. ಕಾರಣ ನಾನು ಮನವರಿಕೆ ಮಾಡಿಕೊಳ್ಳಲಾರಂಭಿಸಿದೆ, ನಾವು ಯಾವಾಗಲೂ ನಮ್ಮ ವಿಧಿಯ ನಿಯಂತ್ರಣದಲ್ಲಿಲ್ಲ ಎಂದು. ಎಲ್ಲಾ ಪ್ರತಿರೋಧವನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಫ್ಯಾಸಿಸ್ಟ್ ಶಕ್ತಿಗಳನ್ನು ಛೂ ಬಿಟ್ಟು ಚಾನ್ಸೆಲರ್ ಡಾಲ್‌ಫಸ್‌ನ ಯಶಸ್ಸಿನಿಂದಾಗಿ ನಾನು ಹೆಚ್ಚಿದ ಯಹೂದಿ ವಿರೋಧವನ್ನು, ನನ್ನ ತರಗತಿಯ ಬಾಲಕಿಯರಿಂದ ಮಾತ್ರವಲ್ಲ, ಅದಕ್ಕಿಂತ ಮುಖ್ಯವಾಗಿ ನಮ್ಮ ಪ್ರೌಢಶಾಲಾ ಶಿಕ್ಷಕರಿಂದಲೂ ಎದುರಿಸಬೇಕಾಗಿ ಬಂತು. ಯಾವುದು ಕ್ರಮ ಅಥವಾ ಕ್ರಮವಲ್ಲ ಎಂಬುದರ ನನ್ನ ಅರ್ಥೈಸುವಿಕೆ ಸರ್ವವ್ಯಾಪಿಯಾದುದೆಂದು ನಾನು ತಿಳಿದಿದ್ದೆ. ಆದರೆ, ನಮ್ಮ ಯಹೂದ್ಯೇತರ ಶಿಕ್ಷಕರು ಸಾಮಾನ್ಯವಾಗಿ ಯಹೂದಿ ವಿದ್ಯಾರ್ಥಿಗಳಿಗೆ, ಅದಕ್ಕಿಂತ ಹೆಚ್ಚಾಗಿ ನನಗೆ ನೀಡುತ್ತಿದ್ದ ಕ್ರಮಬದ್ಧವಲ್ಲದ ವರ್ತನೆಯಿಂದ ಆಘಾತವಾಗಿತ್ತು. ಯಹೂದಿ ವಿದ್ಯಾರ್ಥಿಯಾಗಿ ನನ್ನ ಯಹೂದಿಯೇತರ ಸಹಪಾಠಿಗಳಿಗಿಂತ ಎರಡು ಪಟ್ಟು ಚೆನ್ನಾಗಿ ನಡವಳಿಕೆ ತೋರಿ ಹಾಗೂ ಓದಿ ಒಳ್ಳೆಯ ಅಂಕವನ್ನು ಪಡೆಯಬೇಕೆಂಬ ವಿಷಯವನ್ನು ಒಪ್ಪಿಕೊಳ್ಳಬೇಕಾದ್ದು ಆವಶ್ಯಕವೆಂದು ಅಮ್ಮ ನನಗೆ ವಿವರಿಸಲು ಪ್ರಯತ್ನಿಸಿದ್ದಳು. ನನ್ನ ತರುಣ ಹಾಗೂ ಬಂಡೆಳುವ ಮನಸ್ಸಿಗೆ, ಇದು ಅಸಮಂಜಸತೆಯ ಪರಮಾವಧಿಯಾಗಿತ್ತು. ಆದರೆ ಪ್ರಚಲಿತವಾಗಿದ್ದ, ಯಹೂದಿ ವಿರೋಧಿ ಮನೋಭಾವವನ್ನು ಹತ್ತಿಕ್ಕಲು ನಾನು ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ನಾನು ಅನುಭವಿಸಿರದ ಯಾವುದೇ ಸಕಾರಾತ್ಮಕ ವಿಷಯಗಳಿಗಾಗಿ ನನ್ನನ್ನು ಹಿಂಸಿದ್ದಕ್ಕಾಗಿ ನಾನು ವಿರೋಧಿಸಬೇಕಾಗಿ ಬಂತು. ನನಗೆ ಗೊತ್ತಿದ್ದಷ್ಟೆಂದರೆ, ನನ್ನ ಬಗ್ಗೆ ತಾರತಮ್ಯ ಮಾಡಿದ್ದರು. ಏಕೆಂದರೆ, ನಾನು ನನ್ನ ಸಂಗಾತಿ ಯಹೂದಿಯೇತರ ವಿದ್ಯಾರ್ಥಿಗಳಿಗಿಂತ ವಿಭಿನ್ನವಾಗಿದ್ದೆ, ಆದರೂ ನನಗೆ ನನ್ನದೇ ಆದ ಸಕಾರಾತ್ಮಕ ಅನನ್ಯತೆಯಿರಲಿಲ್ಲ, ನಾನು ಎಲ್ಲಿಗೂ ಸೇರಿರಲಿಲ್ಲ ಎಂದು ನಾನು ಭಾವಿಸಿದೆ.

ಈ ಘಟನೆಗಳು ನಾನು ಯೌವನಾವಸ್ಥೆ ತಲುಪುವ ಹೊತ್ತಿಗೆ ಏಕಕಾಲಕ್ಕೆ ನಡೆದವು; ಅತ್ಯಂತ ಅನುಕೂಲಕರ ಪರಿಸ್ಥಿತಿಗಳಲ್ಲೂ ಕಷ್ಟಕರವಾದ ಸಮಯವೆ, ಈ ಅವಧಿಯಲ್ಲಿ ಅಮ್ಮನೊಂದಿಗೆ ನಾನು ಇನ್ನೂ ಹೆಚ್ಚಿನ ಸಾಮೀಪ್ಯವನ್ನು ಅನುಭವಿಸಲಾರಂಭಿಸುವ ಹೊತ್ತಿಗೆ, ನನ್ನ ಅನಾಕರ್ಷಕ ರೂಪದ ಬಗ್ಗೆ ಎಷ್ಟು ಖಚಿತಪಡಿಸಿಕೊಂಡೆನೆಂದರೆ, ಯಾವುದೇ ಹುಡುಗ ನನ್ನನ್ನು ಪ್ರೀತಿಸುವುದಿರಲಿ,

ಹತ್ತಿರ ಸಹ ಬರಬಹುದೆಂಬುದನ್ನು ನಾನು ಊಹಿಸಲಿಲ್ಲ. ಅದರಿಂದಾಗಿ, ನಾನು ಹುಡುಗರಲ್ಲಿ ಆಸಕ್ತಳಾಗಿರಲಿಲ್ಲ. ಗಂಡುಬೀರಿ ಲಕ್ಷಣಗಳನ್ನು ಪ್ರದರ್ಶಿಸತೊಡಗಿದೆ. ಆದರೆ, ನನಗೆ ೧೪ ವರ್ಷವಾಗುವ ಹೊತ್ತಿಗೆ ಕನ್ನಡಕವನ್ನು ಹಾಕಿಕೊಳ್ಳುವುದನ್ನು ನಿಲ್ಲಿಸಿದ ಮೇಲೆ ಕಣ್ಣು ಸರಿಹೋಗಿತ್ತು. ಬೇಸಿಗೆ ರಜದಲ್ಲಿ ನನಗಿಂತ ಒಂದೆರಡು ವರ್ಷ ದೊಡ್ಡ ಹುಡುಗರು ನನ್ನ ಹಿಂದೆ ಬಿದ್ದರು. ಅವರಿಗೆ ಉಂಟಾದ ಆಕರ್ಷಣೆಯೆಂದರೆ ನಾನು ತೋರಿದ ಸ್ವತಂತ್ರ ಮನಃಪ್ರವೃತ್ತಿ ಎಂದು ಊಹಿಸಿದೆ. ಅದಕ್ಕೆ ವಿರುದ್ಧವಾಗಿ ಅನೇಕ ಇತರ ನನ್ನ ವಯಸ್ಸಿನ ಹುಡುಗಿಯರು, ಹುಡುಗರು ಸುತ್ತುವರಿದಾಗ ಮೂರ್ಖತನದಿಂದ ಚೆಲ್ಲಾಟವಾಡುತ್ತಿದ್ದರು. ಅನೇಕ ಹುಡುಗರು ನನ್ನ ಬಗ್ಗೆ ಪ್ರಶಂಸೆ ತೋರಿದಾಗ, ನನ್ನನ್ನು ತಮಾಷೆ ಮಾಡುತ್ತಿರಬಹುದೆಂದು ಮೊದಮೊದಲು ತಿಳಿದಿದ್ದೆ. ನನ್ನ ರೂಪ ನಾನು ತಿಳಿದಷ್ಟು ಕಳಪೆಯೇನಿರಲಿಲ್ಲವೆಂದು ನನಗರಿವಾಗಲು ಸ್ವಲ್ಪ ಕಾಲ ಬೇಕಾಯಿತು. ನನ್ನ ಸ್ವಂತ ರೂಪಕ್ಕೆ ಹೊಂದಿಕೊಳ್ಳುವ ಹೊತ್ತಿಗೆ ನಾನು ಲಘು ಮನಸ್ಕಳಾದೆ. ನನ್ನ ಬಗ್ಗೆ ನಾನು ಖುಷಿಯಿಂದ ಇರಲಾರಂಭಿಸಿದೆ.

೧೯೩೭ರ ಬೇಸಿಗೆಯಲ್ಲಿ, ಪ್ಯಾರಿಸ್ ವರ್ಲ್ಡ್ ಎಕ್ಸಿಬಿಷನ್ ಅನ್ನು ಸಂದರ್ಶಿಸಲು ಯುವಜನರ ಗುಂಪಿನೊಂದಿಗೆ ಹೋದಾಗ ನನಗೆ ನನ್ನ ಬಾಯ್‌ಫ್ರೆಂಡ್ ವಿಲ್ಲಿಯ ಪರಿಚಯವಾಯಿತು. ಅವನೂ ಯಹೂದಿ, ನನಗಿಂತ ಮೂರು ವರ್ಷ ದೊಡ್ಡವನು, ಹೊಳೆಯುವ ಸ್ಫುರದ್ರೂಪಿ. ೧೯೩೪ರ ರಾಜಕೀಯ ಸ್ಥಿತ್ಯಂತರದಲ್ಲಿ, ಪ್ರೌಢಶಾಲೆಯಲ್ಲಿದ್ದಾಗ, ಸೋಷಿಯಲಿಸ್ಟ್ ವಿದ್ಯಾರ್ಥಿ ಚಳವಳಿಯ ನಾಯಕರಲ್ಲೊಬ್ಬ ನಾಗಿದ್ದನು. ಸೋಷಿಯಲಿಸ್ಟ್ ಬಂಡುಕೋರರ ಸೋಲಿನ ನಂತರ, ಅವನನ್ನು ಒಂದು ತಿಂಗಳ ಕಾಲ ಜೈಲಿಗೆ ಕಳುಹಿಸಲಾಗಿತ್ತು ಹಾಗೂ ಶಾಲೆಯಿಂದ ಹೊರ ಹಾಕಲಾಗಿತ್ತು. ನಾನು ಅವನನ್ನು ಮೊದಲು ಭೇಟಿ ಮಾಡಿದಾಗ ಸಣ್ಣ ಎಂಜಿನಿಯರಿಂಗ್ ಸಂಸ್ಥೆಯೊಂದರಲ್ಲಿ ತರಬೇತಿಯಲ್ಲಿದ್ದ. ಅದು ನಾನು ಓದುತ್ತಿದ್ದ ಪ್ರೌಢಶಾಲೆಯ ಬಳಿಯೇ ಇತ್ತು. ಅವನನ್ನು ನಾನು ಗಾಢವಾಗಿ ಪ್ರೀತಿಸಿದೆ. ಪ್ರತಿದಿನ ಶಾಲೆಯಿಂದ ನಾನು ಓಡಿ ಹೋಗಿ ಅವನ ಭೋಜನ ವಿರಾಮದಲ್ಲಿ ಹಾಗೂ ಸಂಜೆ ವೇಳೆಯಲ್ಲಿ ಭೇಟಿ ಮಾಡುತ್ತಿದ್ದೆ. ಅವನೊಡನೆ ನಾನು ಪ್ರಥಮ ಚುಂಬನದ ಖುಷಿಯನ್ನು ಗಳಿಸಿಕೊಂಡೆ. ಮುಂದಿನ ಕೆಲವು ತಿಂಗಳುಗಳಲ್ಲಿ, ತರುಣ ಪ್ರೇಮದ ಭಾವೋದ್ವೇಗದಲ್ಲಿ ಗಾಳಿಯಲ್ಲೇ ತೇಲುತ್ತಿದ್ದಂತೆ ಅನಿಸುತ್ತಿತ್ತು. ನನ್ನ ಶಿಕ್ಷಕರ ಯಹೂದಿ ವಿರೋಧವನ್ನೂ, ಯಹೂದಿ ವಿದ್ಯಾರ್ಥಿಗಳ ವಿರುದ್ಧದ ಅಸಮಂಜಸ ತಾರತಮ್ಯವನ್ನು ಒಪ್ಪಿಕೊಳ್ಳಲು ಸುಲಭವಾಯಿತು. ನನ್ನನ್ನು ಲವಲವಿಕೆಯಲ್ಲಿ ಆ ಪ್ರಿಯಕರನಿರಿಸಿದ್ದ, ಬದುಕು ರೋಮಾಂಚಕವಾಗಿತ್ತು. ವಿಲ್ಲಿ ಮತ್ತು ನಾನು ಕಚೇರಿಗಳಿಗೆ, ನಾಟಕಗಳಿಗೆ, ವಸ್ತುಪ್ರದರ್ಶನ ಸಭೆ ಸಮಾರಂಭಗಳಿಗೆ ಹೋಗಿ ಬಿಡುವಿನ ಪ್ರತಿ ಕ್ಷಣದಲ್ಲೂ

ಒಟ್ಟಿಗಿದ್ದೆವು. ನಾವಿಬ್ಬರೂ ಹೇಗೆ ಹೊಂದಿಕೊಂಡೆವೆಂದರೆ, ಮುಂದೆ ಮದುವೆಯಾಗುವ ಆಲೋಚನೆಯನ್ನೂ ಮಾಡಿದೆವು.

ನನ್ನ ಭವಿಷ್ಯದ ಆಲೋಚನೆಗಳನ್ನು ಪಕ್ಕಕ್ಕಿಡುವಂತಾಯಿತು. ಕಾರಣ, ನನ್ನ ಈ ಸಂಕ್ಷಿಪ್ತ ಹುಡುಗಿತನದ ಸಂತೋಷದ ದಿನಗಳು ಇದ್ದಕ್ಕಿದ್ದಂತೆ ೧೯೩೮ರ ಮಾರ್ಚ್ ೧೧ರಂದು ಕೊನೆಗೊಂಡಿತು, ಜರ್ಮನ್ ಸೈನಿಕರು ಆಸ್ಟ್ರಿಯಾದ ಗಡಿಯನ್ನು ದಾಟಿದಾಗ ಹಾಗೂ ಆಸ್ಟ್ರಿಯಾ ಹಿಟ್ಲರನ ಜರ್ಮನಿಯ ಭಾಗವಾದಾಗ.

* * * *

# ೩. ಸದ್ಯದ ಪ್ರೌಢವಯಸ್ಸು

ನಾನು ವೈದ್ಯೆಯಾಗಿ ವಿಲ್ಲಿಯನ್ನು ಮದುವೆಯಾಗುವ ಕನಸು ಒಂದೇ ರಾತ್ರಿಗೆ ಆದಿಯಾದಾಗ, ನನ್ನ ನಿಗದಿತ ಯೋಜನೆಗಳೆಲ್ಲಾ ಕೈತಪ್ಪುವಂತಾಯಿತು. ಹಿಟ್ಲರ್‌ನ ಜರ್ಮನಿ ಆಸ್ಟ್ರಿಯಾವನ್ನು ವಶಪಡಿಸಿಕೊಂಡ ಬೆಳಿಗ್ಗೆ, ನಾನು ವಿಲ್ಲಿಗೆ ಫೋನ್ ಮಾಡಲು ಯತ್ನಿಸಿದೆ. ಸಾಮಾನ್ಯವಾಗಿ ಅವನು ಫೋನ್‌ನಲ್ಲಿ ಉತ್ತರಿಸಲು ಉತ್ಸುಕನಾಗಿ ಬರುತ್ತಿದ್ದ. ಆದ್ದರಿಂದ ಫೋನ್‌ನ ಮತ್ತೊಂದು ಕಡೆಯಿಂದ ಅವನ ತಾಯಿಯ ಧ್ವನಿ ಕೇಳಿಸಿದಾಗ ನನಗೆ ಆಶ್ಚರ್ಯವಾಯಿತು. ನನ್ನ ಧ್ವನಿ ಕೇಳಿಸಿದಾಗ ಅವಳು ಉಸಿರುಕಟ್ಟುವ ರೀತಿಯಲ್ಲಿ, ಹೆಚ್ಚು ಕಡಿಮೆ ಬಿಕ್ಕುವ ಧ್ವನಿಯಲ್ಲಿ ವಿಲ್ಲಿಯಳನ್ನು ಹಿಟ್ಲರನ ಕಡೆಯ ಗುಂಪಿನವರು ಬಲವಂತವಾಗಿ ಕರೆದುಕೊಂಡು ಹೋದರು ಎಂದು ಹೇಳಿದಳು. ಅವನು ಬಿಡಿಸಿಕೊಳ್ಳಲೆತ್ನಿಸು ತ್ತಿದ್ದುದನ್ನು ಅವನ ಗೆಳೆಯರ ಒಂದು ಗುಂಪು ನಿಸ್ಸಹಾಯಕವಾಗಿ ಗಮನಿಸಿತು. ಆದರೆ, ಅವನನ್ನು ತಡೆದು ಮೂಟೆ ಕಟ್ಟಿದಂತೆ ಕಾರ್‌ನಲ್ಲಿ ದೂರ ಕರೆದುಕೊಂಡು ಹೋಗಲಾಗಿತ್ತು. ನಾನು ಏಳುಬೀಳು ರೈಲು ದಾರಿಯಲ್ಲಿದ್ದಂತೆ ಭಾಸವಾಯಿತು. ನನ್ನ ಹೊಟ್ಟೆ ಗಾಳಿಯ ಮಧ್ಯದಲ್ಲಿತ್ತು. ವಾಕರಿಕೆ ಮಾಡಬೇಕೆನ್ನಿಸಿತು. ಆದರೆ ಬರಲಿಲ್ಲ. ಏನಾದರೂ ಸಾಂತ್ವನ ಹೇಳೋಣವೆನ್ನಿಸಿತು. ಆದರೆ ಸಾಧ್ಯವಾಗಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಭಯಾನಕ ಸಿಂಹಸ್ವಪ್ನದಿಂದ ನಾನು ಎದ್ದು ಬರಬೇಕಾಗಿತ್ತು. ಆದರೆ ಸಾಧ್ಯವಾಗಲಿಲ್ಲ. ವಿಲ್ಲಿಯ ತಾಯಿಯ ನಿರ್ಧಾರ ಛಿದ್ರಗೊಂಡು, ಅವಳು ಕಣ್ಣೀರು ಸುರಿಸುತ್ತಾ ಕುಸಿದುಬಿದ್ದಳು. ತನ್ನ ಮಗನನ್ನು ಹುಡುಕಿಕೊಟ್ಟು, ಸಹಾಯ ಮಾಡುವಂತೆ ಬೇಡಿದಳು. ಆಕೆಯು ಬಿಕ್ಕಿ ಬಿಕ್ಕಿ ಅಳುವುದನ್ನು ನನ್ನಿಂದ ತಡೆಯಲಾಗಲಿಲ್ಲ. ನಾನೂ ಕಣ್ಣೀರು ಸುರಿಸುತ್ತಾ ಅವಳಿಗೆ ಭರವಸೆ ಕೊಟ್ಟೆ, ನನ್ನ ಕೈಲಾದುದನ್ನೆಲ್ಲಾ ಮಾಡುತ್ತೇನೆ ಎಂದು. ಓಟ್ಟೊ ಹಿಂತಿರುಗುವುದನ್ನೇ ಆತಂಕದಿಂದ ದಿನಪೂರ್ತಿ ಕಾಯುತ್ತಾ ಕುಳಿತೆ; ಅವನು ಬೀಗದ ಕೈಯಿಂದ ಬಾಗಿಲು ತೆರೆಯುವ ಸದ್ದು ಕೇಳಿ ಅವನೆಡೆಗೆ ಓಡಿದೆ. ನಾನಂತೂ ಗೊಂದಲದಲ್ಲಿದ್ದು, ನಾನೇನು ಹೇಳುತ್ತಿದ್ದೇನೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಓಟ್ಟೊಗೆ ಸ್ವಲ್ಪ ಸಮಯ ಬೇಕಾಯಿತು. ಏನಾಯಿತೆಂಬುದನ್ನು ಮನವರಿಕೆ ಮಾಡಿಕೊಂಡ ಮೇಲೆ, ಅವನು ತನ್ನ ಕೈಗಳಿಂದ ನನ್ನನ್ನು ತಬ್ಬಿಕೊಂಡು ಅಪ್ಪಿಕೊಂಡನು. ವಿಲ್ಲಿಯನ್ನು ಹುಡುಕಲು ಯಾರೂ ಏನನ್ನೂ ಮಾಡಲಾಗುವುದಿಲ್ಲವೆಂದು ಅವನು

ಹೇಳಿದನು. ಅದರಿಂದ ನಾನೂ ಕಠಿಣವಾದ ಪಾಠ ಕಲಿಯುವುದಿದೆ, ಬದುಕು ಎಂತಹ ದುಷ್ಟ ಆಟಗಳನ್ನು ಆಡಬಹುದು, ಅದರ ಮೇಲೆ ಯಾರಿಗೂ ನಿಯಂತ್ರಣವಿಲ್ಲ ಎಂಬ ಮಾತನ್ನೂ ಸೇರಿಸಿದನು. ಇಂತಹ ಸುದ್ದಿಯನ್ನು ನೀಡುತ್ತಿರುವುದಕ್ಕಾಗಿ ಓಟ್ಟೊವನ್ನು ದ್ವೇಷಿಸಿದೆ. ವಿಲ್ಲಿಯಿರದ ಜೀವನವನ್ನು ನನ್ನಿಂದ ಊಹಿಸಲೂ ಸಾಧ್ಯವಾಗಲಿಲ್ಲ. ವಿಲ್ಲಿಗಾಗಿ ನಮ್ಮ ಕನಸುಗಳಿಗಾಗಿ ಹಾಗೂ ನನಗಾಗಿ ಮರುಗಬೇಕೆನಿಸಿತು. ಜೀವನವೆಲ್ಲ ಬೆದರಬೇಕಾದ ಘಟನೆಗಳನ್ನು, ಬಿರುಗಾಳಿಗೆ ಮೈ ಒಡ್ಡಬೇಕಾದ ಪರಿಸ್ಥಿತಿಯಿದ್ದುದರಿಂದ ನಾನು ವಿಲ್ಲಿಯ ಪತ್ರಗಳನ್ನು ಓದಿದೆ. ಮತ್ತೆ ಮತ್ತೆ ಓದುವ ಹಾಗೂ ಅವನ ಫೋಟೋವನ್ನು ದಿಟ್ಟಿಸುವುದಕ್ಕು ಸಮಯವನ್ನು ಉಪಯೋಗಿಸಲು ಆಸ್ಪದ ವಿರಲಿಲ್ಲ.

ಅದೃಷ್ಟವಶಾತ್ ಅಪ್ಪ ಜನಮತ ಗಣನೆಯಲ್ಲಿ ಭಾಗವಹಿಸಲು ಯುಗೋಸ್ಲಾವಿಯಾದಿಂದ ಹಿಂತಿರುಗುವುದನ್ನು ನಿಲ್ಲಿಸಿದ್ದೆವು. ವ್ಯಂಗ್ಯವೆಂದರೆ, ಈ ಜನಮತ ನಡೆದದ್ದು ಆಸ್ಟ್ರಿಯಾದ ಜನತೆ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೊ ಅಥವಾ ಜರ್ಮನಿಯ ಭಾಗವಾಗಬೇಕೋ ಎಂಬುದನ್ನು ನಿರ್ಧರಿಸಲು. ಮತದಾನ ನಡೆಯುವ ದಿನಾಂಕ ನಿಗದಿಯಾಗಿದ್ದು ೧೯೩೮ರ ಮಾರ್ಚ್ ೧೩ ಭಾನುವಾರದಂದು. ಆದರೆ, ಆ ತಾರೀಖಿನ ಎರಡು ದಿನಗಳ ಮೊದಲು ಹಿಟ್ಲರ್, ಆಸ್ಟ್ರಿಯಾವನ್ನು ವಶಪಡಿಸಿಕೊಳ್ಳುವ ಮೂಲಕ ಆ ಜನಮತ ಗಣನೆಯನ್ನು ಮುಂಚೆಯೇ ನಿಲ್ಲಿಸಿದ್ದನು. ಹೀಗಾಗಿ ಅಪ್ಪ ಹಿಟ್ಲರನ ಆಳ್ವಿಕೆಯಲ್ಲಿ ಇರುವುದು ಹೇಗೆಂದು ವೈಯಕ್ತಿಕವಾಗಿ ಅನುಭವಿಸಲಿಲ್ಲ. ಅಮ್ಮ ಈ ಘಟನೆಗಳ ತಿರುವಿನಿಂದ ಆಘಾತಗೊಂಡು ಕುಗ್ಗಿಹೋದಳು. ಕುರ್ಟ್ ಕೂಡಾ ಅದೇ ಪ್ರಭಾವಕ್ಕೆ ಒಳಗಾದನು. ಆದರೆ, ಓಟ್ಟೊ ತಕ್ಷಣ ಧೈರ್ಯ ತುಂಬಿಕೊಂಡು ತನ್ನ ಕುಟುಂಬವನ್ನು ರಕ್ಷಿಸಲು ಯೋಜನೆಯನ್ನು ರೂಪಿಸತೊಡಗಿದ.

ಜರ್ಮನಿ, ಆಸ್ಟ್ರಿಯಾ ಒಂದುಗೂಡಿದ ಎರಡನೆಯ ದಿನ, ಅರ್ಮೆ, ಕುರ್ಟ್ ಮತ್ತು ನಾನು ಒಂದೆಡೆ ಕುಳಿತು ಮುಂದೇನಾಗಬಹುದೆಂದು ಆಲೋಚಿಸತೊಡಗಿದೆವು. ತಕ್ಷಣ ಕರೆಗಂಟೆ ಕೇಳಿಸಿತು. ನಮ್ಮ ಅನೇಕ ಯಹೂದಿ ಗೆಳೆಯರು ಬಂಧಿಸಲ್ಪಟ್ಟ ಸಂಗತಿ ಕೇಳಿದ್ದುದರಿಂದ, ನಾವು ಮಲಗುವ ಕೋಣೆಯಲ್ಲಿ ಅವಿತುಕೊಂಡೆವು, ಬಾಗಿಲಲ್ಲಿ ಯಾರಿದ್ದರೂ ಸುಮ್ಮನೆ ಹೊರಟುಹೋಗುವರು ಎಂಬ ಆಸೆಯಿಂದ. ತಕ್ಷಣ, ಪತ್ರಗಳ ಪೆಟ್ಟಿಗೆಯ ಮೂಲಕ ನಮಗೊಂದು ಧ್ವನಿ ಕೇಳಿಸಿತು, ಒಳಗೆ ಬರಮಾಡಿಕೊಳ್ಳಿ ಎಂಬ ಮನವಿ ಮಾಡುತ್ತ. ಆ ಧ್ವನಿ ಅಮ್ಮನ ಗೆಳತಿಯಾದ ಕ್ಯಾಮಿಲ್ಲಾ, ಕಾರ್ಲ್‌ಮಾರ್ಕ್ಸ್ ಹೂಫ್‌ನ ಏಕಮಾತ್ರ ಯೆಹೂದಿ ಅಂಗಡಿ ಮಾಲೀಕಳು. ಅದಕ್ಕೆ ನಾವುಗಳು ತಕ್ಷಣ ಅವಳನ್ನು ಒಳಗೆ ಬಿಟ್ಟುಕೊಂಡೆವು. ನಾಜಿ ದುಷ್ಕರ್ಮಿಗಳು ಅಂಗಡಿ ಕಡೆಗೆ ನುಗ್ಗುತ್ತಿರುವುದನ್ನು ಕಂಡು, ಬೇಗನೆ ದುಡ್ಡಿನ ಪೆಟ್ಟಿಗೆಯನ್ನು

ಖಾಲಿ ಮಾಡಿ, ಎಲ್ಲಾ ನಗದನ್ನು ತೆಗೆದುಕೊಂಡು, ಹಿಂಬಾಗಿಲಿನಿಂದ ತಪ್ಪಿಸಿಕೊಂಡು ಬಂದುದಾಗಿ ಕಣ್ಣೀರು ಸುರಿಸುತ್ತಾ ಹೇಳಿದಳು. ತನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲವೆಂದು ಖಾತರಿ ಮಾಡಿಕೊಂಡೇ ತಾನು ಬಂದುದಾಗಿ ಹೇಳಿದಳು. ನಾವೊಬ್ಬರೇ ಕ್ಯಾಮಿಲ್ಲಾಳ ಗೆಳತಿಯು ನೆರೆಹೊರೆಯಲ್ಲಿ ಅವಳಿಗೆ ಗೊತ್ತಿರುವವರಾದ್ದರಿಂದ ನಮ್ಮಲ್ಲಿಗೆ ಬಂದುದಾಗಿ ಅವಳು ಹೇಳಿದಳು. ನಮ್ಮ ಬಳಿ ದುಡ್ಡನ್ನು ಬಿಟ್ಟು, ಬೇಗನೆ ಅಂಗಡಿಗೆ ಹಿಂತಿರುಗಿದಳು. ಒಂದೆಡೆ, ನಾವು ಅವಳ ಧೈರ್ಯ ಹಾಗೂ ಚಿತ್ತ ಸ್ಥೈರ್ಯದಿಂದ ಪ್ರಭಾವಗೊಂಡರೆ, ಮತ್ತೊಂದೆಡೆ ಅವಳು ನಮ್ಮ ಫ್ಲಾಟ್‌ಗೆ ಬರುತ್ತಿರುವುದನ್ನು ಬೇರೆ ಯಾರಾದರೂ ಗಮನಿಸಿರಬೇಕೆಂದು ನಮಗೆ ತಕ್ಷಣ ಚಿಂತೆಯಾಯಿತು. ಅಮ್ಮ ಮತ್ತು ಕುರ್ಟ್ ನಿಶ್ಚೇಷ್ಟಿತರಾದಂತೆ ಕಂಡುಬಂದರು. ಆದರೆ, ನಾವು ಏನಾದರೂ ಮಾಡಲೇಬೇಕಾಗಿತ್ತು. ನಾನು ದುಡ್ಡಿನ ಕಂತೆಯನ್ನು ತೆಗೆದುಕೊಂಡೆ ಹಾಗೂ ಸುರಕ್ಷಿತವಾಗಿ ಬಚ್ಚಿಡುವ ಜಾಗವನ್ನು ನೋಡಿದೆ. ಸುಮಾರು ಒಂದು ಗಂಟೆಯ ನಂತರ ಕ್ಯಾಮಿಲ್ಲಾಳೇ ಬಾಗಿಲು ಬಡಿದಳು. ನಾವು ನಿಧಾನವಾಗಿ ಅದನ್ನು ತೆರೆಯುತ್ತಿದ್ದಂತೆ, ಅವಳು ಮುದ್ದೆಯಾಗಿ ಕುಸಿದುಬಿದ್ದಳು. ಅವಳನ್ನು ಸಿಕ್ಕಾಪಟ್ಟೆ ಹೊಡೆಯಲಾಗಿತ್ತು. ಹಾಗೂ ಅವಳ ಮುಖದ ಮೇಲಿನ ಗಾಯಗಳಿಂದ ರಕ್ತ ಒಸರುತ್ತಿತ್ತು. ತನ್ನ ಗೆಳತಿಯನ್ನು ಆ ಸ್ಥಿತಿಯಲ್ಲಿ ನೋಡುತ್ತಿದ್ದಂತೆಯೇ ಅಮ್ಮ ಗಾಬರಿಗೊಂಡು ನಡುಗಲಾರಂಭಿಸಿದಳು. ಏನನ್ನೂ ಮಾಡಲು ಅಸಮರ್ಥಳಾದಳು. ನಾಜಿಗಳಿಂದ ದೌರ್ಜನ್ಯಕ್ಕೆ ಒಳಗಾದ ಕ್ಯಾಮಿಲ್ಲಾಳನ್ನು ಕಂಡು ನನಗೂ ಆಘಾತವಾಯಿತು. ಆದರೆ, ನಾನು ವಿಭಿನ್ನವಾಗಿ ಪ್ರತಿಕ್ರಿಯಿಸಿದೆ. ನಾನು ಅದನ್ನು ಸಮಚಿತ್ತದಿಂದ ನೋಡಿ ಹತೋಟಿಗೆ ತಂದುಕೊಂಡು, ಎಲ್ಲರನ್ನೂ ಸಮಾಧಾನಪಡಿಸಿದೆ. ಗಾಯಗಳಿಗೆ ಪಟ್ಟಿ ಕಟ್ಟುತ್ತಾ, ನಾನು ಯಾವಾಗಲೂ ಕನಸು ಕಾಣುತ್ತಿದ್ದಂತೆ ವೈದ್ಯಳಾದೆನೋ ಅಥವಾ ನಾನು ಆ ವಾಸ್ತವ ಸ್ಥಿತಿಯಿಂದ ದೂರ ಹೋಗಬೇಕೆನ್ನಿಸಿತೋ ಅರ್ಥಮಾಡಿಕೊಳ್ಳಲು ಭಯಭೀತಳಾಗಿ?

ಕೆಲವು ಗಂಟೆಗಳ ನಂತರ, ನಾನು ಕ್ಯಾಮಿಲ್ಲಾಳನ್ನು ಮನೆಗೆ ಕರೆದುಕೊಂಡು ಹೋದೆ, ಹಾಗೂ ಅವಳ ಸಹಾಯಕಿಗೆ ನಮ್ಮಲ್ಲಿ ಸುರಕ್ಷೆಗಾಗಿ ಇಟ್ಟಿದ್ದ ದುಡ್ಡನ್ನು ಹಿಂತಿರುಗಿಸಿದೆ. ದಿನಗಳು ಕಳೆದಂತೆ ನಮ್ಮ ಹೆಚ್ಚು ಹೆಚ್ಚು ಯೆಹೂದಿ ಮಿತ್ರರನ್ನು ಸರಕ್ಕನೆ ಕರೆದುಕೊಂಡು ಹೋಗುತ್ತಿದ್ದರು ಅಥವಾ ತರುಣ ಸಮವಸ್ತ್ರಧಾರಿ ನಾಜಿಗಳಿಂದ ಭಯೋತ್ಪಾದನೆಗೆ ಒಳಗಾಗಿದ್ದರು. ಯಾರಾದರೂ ಬಾಗಿಲು ಬಡಿಯಬಹುದೆಂಬ ಭಯದಲ್ಲಿ ನಾವು ದಿನಗಳನ್ನು ಮನೆಯಲ್ಲಿ ಕಳೆದೆವು. ಆವರಿಸಿದ್ದ ಮೌನವನ್ನು ಮುರಿಯುವಂತೆ ಯಾರಾದರೂ ಮಾತನಾಡಿದರೆ, ನಾವು ಭಯದಿಂದ ಕುಣಿಯುವಂತಾಗುತ್ತಿತ್ತು. ನಮ್ಮ ಸುರಕ್ಷತೆಯನ್ನು ಮರುಕಳಿಸುವ ಸುದ್ದಿಗಾಗಿ ಹಾತೊರೆದು ರೇಡಿಯೋ ಸುತ್ತ ಹರಡಿಕೊಳ್ಳುತ್ತಿದ್ದೆವು. ಇಲ್ಲವೇ ಸೆನ್ಸಾರ್ ಆದ

ವೃತ್ತ ಪತ್ರಿಕೆಗಳನ್ನು ಓದುತ್ತಿದ್ದೆವು. ಅವುಗಳ ತುಂಬಾ ನಾಜಿಗಳು ನಡೆಸುತ್ತಿದ್ದ ದುಷ್ಕೃತ್ಯಗಳೇ ಇರುತ್ತಿದ್ದವು. ಹಗಲಿನಲ್ಲಿ ಹೇಗೋ ನಾನೇ ಧೈರ್ಯವಾಗಿಯೇ ಇರುತ್ತಿದ್ದೆ. ಆದರೆ, ರಾತ್ರಿ ಹೊತ್ತು ಧೈರ್ಯ ಉಡುಗಿ, ಹಾಸಿಗೆಯಲ್ಲಿ ಬಿಕ್ಕಿಬಿಕ್ಕಿ ಅಳುತ್ತಿದ್ದೆ. ಯಹೂದಿಗಳ ಮೇಲೆ ಏಕೆ ಇಷ್ಟೆಲ್ಲಾ ಹಲ್ಲೆಗಳು ನಡೆಯುತ್ತಿವೆ ಎಂಬ ಶಾಶ್ವತವಾದ ಪ್ರಶ್ನೆಯ ಬಗ್ಗೆ ಆಲೋಚಿಸುತ್ತಾ, ಮಾರನೆಯ ದಿನ ನಾನು ಎದ್ದೇಳು ವಂತಾಗದಿದ್ದರೆ ಒಳ್ಳೆಯದೇನೋ ಎಂಬ ಆಸೆಯೊಂದಿಗೆ ನಾನು ಸಾಮಾನ್ಯವಾಗಿ ನಿದ್ದೆ ಹೋಗುತ್ತಿದ್ದೆ.

ಇದಾದ ನಂತರ, ಹಿಟ್ಲರನ ವಿಜಯೋತ್ಸವ ಪ್ರವೇಶ ವಿಯೆನ್ನಾಗೆ ಆದ ದಿನ, ಓಟ್ಟೊ ತನ್ನ ಕೆಲವು ಗೆಳೆಯರನ್ನು ನೋಡುವ ಸಲುವಾಗಿ ಹೊರಗೆ ಹೋಗುವ ಸಾಹಸ ಮಾಡಿದನು. ಅವನು ನನಗೆ ಫೋನ್ ಮಾಡಿ, ಫ್ಯಾಸಿಸ್ಟ್ ಬಾಲಕಿಯರ ಸಂಘದ ಸಮವಸ್ತ್ರ ಧರಿಸಿ ಬರುವಂತೆ ಸಲಹೆ ಕೊಟ್ಟ: ಬಿಳಿ ಬ್ಲೌಸು, ನೌಕಾದಳ ಒಕ್ಕೂಟ ಸ್ಕರ್ಟ್, ಬಿಳಿಯ ಬಣ್ಣದ ಮಂಡಿವರೆಗಿನ ಕಾಲುಚೀಲ ಹಾಗೂ ಕಪ್ಪು ಬಣ್ಣದ ಷೂಗಳು ಅದನ್ನು ಧರಿಸಿದ ಮೇಲೆ, ಯುಗೋಸ್ಲಾವಿಯಾದ ರಾಯಭಾರ ಕಛೇರಿಗೆ 'ನಮ್ಮ ನಾಲ್ಕು ಪಾಸ್‌ಪೋರ್ಟ್‌ಗಳನ್ನು ತೆಗೆದುಕೊಂಡು ಹೋಗಿ, ಅವುಗಳಿಗೆ ವೀಸಾ ಪಡೆಯಲು ಮಿ. ಮೈದಾನಾಟ್ಜ್‌ರನ್ನು ನೋಡಬೇಕಾಗಿತ್ತು. ಮುಗ್ಧತೆಯಿಂದ, ಅದೆಲ್ಲವೂ ಬಹಳ ಸುಲಭ ಹಾಗೂ ನೇರವಾದ ಕೆಲಸವೆಂದು ನಾನು ಭಾವಿಸಿದೆ. ಯುಗೋಸ್ಲಾವಿಯಾದ ರಾಯಭಾರ ಕಛೇರಿಯ ವಿಳಾಸವನ್ನು ಓಟ್ಟೊ ನನಗೆ ನೀಡಿ, ಅಲ್ಲಿಗೆ ಹೋಗುವ ಬಗ್ಗೆ ನಿರ್ದೇಶನವನ್ನೂ ನೀಡಿದ. ಅಮ್ಮ ಗಾಬರಿಗೊಂಡು, ನಾನೊಬ್ಬಳೇ ನಗರದ ಒಳಗೆ ಒಂಟಿಯಾಗಿ ಹೋಗುವುದು ಬೇಡವೆಂದು ಮೆಲ್ಲಗೆ ಗೊಣಗುತ್ತಿದ್ದಳು. ಆದರೆ, ಓಟ್ಟೊ ನನ್ನನ್ನು ಅಪಾಯಕಾರಿ ಕೆಲಸಕ್ಕೆ ಕಳುಹಿಸುತ್ತಿಲ್ಲ ಎಂದು ಅಮ್ಮನಿಗೆ ಸಮಾಧಾನ ಹೇಳುತ್ತಿದ್ದೆ. ಟೆಲಿಫೋನ್‌ನಲ್ಲಿ ಅವನು ಅದು ಮಾಮೂಲಿ ಕೆಲಸವೆಂದು ಹೇಗೆ ಹೇಳಿದನೆಂದರೆ, ಅದರ ಬಗ್ಗೆ ಚಿಂತಿಸಬೇಕಾಗಿರಲಿಲ್ಲ. ನಾನು ಸ್ವಲ್ಪ ಅಳುಕಿದೆನಾದರೂ, ಓಟ್ಟೊ ಹೇಳಿದ ಕೆಲಸ ಎಂದು ಭಾವೋದ್ವೇಗಗೊಂಡೆ. ನಾನು ಒಳಮಹಡಿಗೆ ಹೋಗಿ ಗುಂಪು ಗುಂಪಾಗಿ ಜನ ಹಿಟ್ಲರ್‌ನನ್ನು ಸ್ವಾಗತಿಸುತ್ತಿದ್ದ ಕಡೆ ಸೇರಿಕೊಂಡೆ. ಅವನ ಭಾಷಣ ಕೇಳಲು ವಿಪುಲ ಸಂಖ್ಯೆಯಲ್ಲಿ ಸೇರಲು ಪ್ರೋತ್ಸಾಹ ನೀಡುವ ಸಲುವಾಗಿ ಸಾರ್ವಜನಿಕ ಸಾರಿಗೆ ಅಂದು ಉಚಿತ ಸೇವೆಯನ್ನು ನೀಡುತ್ತಿತ್ತು. ಹಿಟ್ಲರನಿಗೆ ಅಧಿಕೃತ ಸ್ವಾಗತ ನೀಡುವ ಸ್ಥಳ, ಷ್ವಾರ್ಜನ್ ಬರ್ಗ್ ಪ್ಲಾಜ್ ಯುಗೋಸ್ಲಾವಿಯಾದ ರಾಯಭಾರ ಕಛೇರಿಯ ಬಳಿ ಇತ್ತೆಂದು ನನಗೆ ಮನವರಿಕೆಯಾಗಿರಲಿಲ್ಲ. ಹಿಟ್ಲರನ ರಾವುತರ ಮೆರವಣಿಗೆ ಹೋಗುತ್ತಿದ್ದ ಸಮಯದಲ್ಲೇ ವಿಯೆನ್ನಾದ ಒಳನಗರವನ್ನು ಸುತ್ತುವರಿದ ರಿಂಗ್‌ಸ್ಟ್ರಾಸ್ ಉದ್ದಕ್ಕೂ ನಾವು ನಡೆದು ಹೋಗಬೇಕಿತ್ತು. ಸಾವಿರಾರು ಜನರ

ಗುಂಪು ಅಲ್ಲಿ ಸೇರಿತ್ತು. ಹಿಟ್ಲರನನ್ನು ನೋಡಿದ್ದೇ ಅವರೆಲ್ಲಾ ಒಟ್ಟಿಗೆ ತಮ್ಮ ಬಲಗೈಯನ್ನೆತ್ತಿ, 'ಹಿಟ್ಲರನಿಗೆ ಜಯವಾಗಲಿ' ಎಂದು ಸೆಲ್ಯೂಟ್ ಮಾಡಿದರು. ಎಲ್ಲರೂ ಒಂದೇ ಎಂಬಷ್ಟರಮಟ್ಟಿಗೆ, ಅವರು ಯಾವುದೋ ಮಂತ್ರಶಕ್ತಿಯ ಪ್ರಭಾವದಂತೆ ಒಂದಾಗಿದ್ದಂತೆ ಕಂಡುಬಂದಿತು. ಈ ಸಮೂಹ ಸನ್ನಿಗೆ ನಾನೂ ಒಳಗಾದಂತೆ ಭಯಗೊಂಡು, ನಾನು ಆ ಚೀತ್ಕಾರದೊಂದಿಗೆ ಬೆರೆತು, ಸೆಲ್ಯೂಟ್ ಮಾಡಿದೆ. ಹಿಟ್ಲರ್ ಮತ್ತು ಅವನ ಸಹಚರರು ಅಲ್ಲಿಂದ ಹೊರಟು ಜನಗಳ ಗುಂಪು ಚದುರಿದಂತೆ ಹಿಟ್ಲರನನ್ನು ಉತ್ಸಾಹಪೂರ್ಣವಾಗಿ ಸ್ವಾಗತಿಸಲು ನಾವೂ ಸೇರಿದ್ದಕ್ಕೆ ನನಗೇ ಆಶ್ಚರ್ಯವಾಯಿತು.

ಯುಗೋಸ್ಲಾವಿಯಾದ ರಾಯಭಾರ ಕಚೇರಿಗೆ ನಡೆದುಕೊಂಡು ಹೋಗುತ್ತಿದ್ದಾಗ, ಹಿಟ್ಲರನಿಗೆ ಜಯವಾಗಲಿ ಎಂದು ಹೇಗೆ ಹೇಳಲು ಸಾಧ್ಯವಾಯಿತು, ಹಿಟ್ಲರನ ಜರ್ಮನಿ ಆಸ್ಟ್ರಿಯಾವನ್ನು ವಶಪಡಿಸಿಕೊಳ್ಳಬಾರದಿತ್ತು ಎಂದು ನಾನು ನಂಬಿದ್ದಾಗ, ಎಂದು ನನ್ನನ್ನೇ ನಾನು ಪ್ರಶ್ನಿಸಿಕೊಳ್ಳತೊಡಗಿದೆ. ನನ್ನ ಯಹೂದಿ ಮಿತ್ರರಲ್ಲಿ ಯಾರಾದರೂ ನಾನು ಹಿಟ್ಲರನನ್ನು ವಿಯೆನ್ನಾಗೆ ಸ್ವಾಗತಿಸುವುದನ್ನು ನೋಡಿದ್ದಿದ್ದರೆ ನಾನು ಅವಮಾನಿತನಾಗುತ್ತಿದ್ದೆ. ಈ ವಿಶಾಲ ಹಿಟ್ಲರನ ಪರ ಜನಸಂದಣಿ ನಡುವೆ ನಾನೊಬ್ಬಳು ಮಾತ್ರ ಸೆಲ್ಯೂಟ್ ಮಾಡದೇ ಇದ್ದಿದ್ದರೆ, ಬಹುಶಃ ಪಕ್ಕದಲ್ಲಿ ನಿಂತ ಜನ ನನ್ನನ್ನು ಗಲ್ಲಿಗೇರಿಸುತ್ತಿದ್ದರೇನೋ ಎಂದು ನನಗೆ ನಾನೇ ಅಂದುಕೊಂಡೆ. ಬಹುಶಃ ನನ್ನ ಉದ್ದೇಶಪೂರ್ವಕವಲ್ಲದ ಹಾಗೂ ಸ್ವಪ್ರೇರಿತ ಭಾಗವಹಿಸುವಿಕೆಯು ನನ್ನ ಪ್ರಾಣವನ್ನುಳಿಸಿತೆನ್ನಬೇಕು.

ರಾಯಭಾರ ಕಚೇರಿಗೆ ತಲುಪುತ್ತಲೆ, ಜನಗಳ ಉದ್ದನೆಯ ಕ್ಯೂ ಅನ್ನು ನೋಡಿದೆ. ಅವರೆಲ್ಲಾ ವಾಸ್ತವವಾಗಿ ಯಹೂದಿಗಳೇ ಆಗಿದ್ದು, ಬಹುಶಃ ವೀಸಾಗಳ ಬಗ್ಗೆ ವಿಚಾರಿಸಲು ಬಂದಿದ್ದರೇನೋ! ನಾಜಿ ತರುಣ ವೇಷದಲ್ಲಿದ್ದ ನನ್ನನ್ನು ಅವರುಗಳು ನೋಡಿದರು ತಿರಸ್ಕಾರ ಹಾಗೂ ದ್ವೇಷದಿಂದ ಓರ್ವ ಬಾಲಕಿಯನ್ನು. ಆ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬಹುದೆಂಬುದು ನನಗರ್ಥವಾಗಲಿಲ್ಲ. ಆದ್ದರಿಂದ ಆ ಯೋಚನೆಯನ್ನು ಬಿಟ್ಟು, ಬಂದ ಕೆಲಸದ ಕಡೆ ಗಮನ ಕೊಟ್ಟೆ. ಕ್ಯೂ ಮೂಲಕ ನಾನು ಹೋಗಿ, ಅಲ್ಲಿ ಜನಸಂದಣಿಯನ್ನು ನಿಯಂತ್ರಿಸುತ್ತಿದ್ದ ಸುಂದರ ಕೂದಲಿನ ತರುಣ ಅಧಿಕಾರಿಯೊಬ್ಬನನ್ನು ಮಿ.ಮೈದಾನಾಟ್ಜ್‌ರವರನ್ನು ಎಲ್ಲಿ ಕಾಣಬಹುದೆಂದು ಕೇಳಿದೆ. ನಾನು ಅವರ ಕುಟುಂಬದ ಸ್ನೇಹಿತರಿರಬಹುದೆಂದುಕೊಂಡು, ಅವರು ನನ್ನನ್ನು ರಾಯಭಾರ ಕಚೇರಿ ಕಟ್ಟಡದ ಒಳ ಅಂಗಳಕ್ಕೆ ಕರೆದುಕೊಂಡು ಹೋದರು. ಅಲ್ಲಿನ ಸೊಗಸಾದ ಮಲ್ಲಿಯ ಕೂಟ ಕೂಡ ಆಶ್ಚರ್ಯದಿಂದ ನೋಡಿದ ನೆನಪಿದೆ. 'ರಾಯಭಾರಿಯ ಖಾಸಗಿ ವಸತಿ' ಎಂದು ಬರೆದಿದ್ದ ಬಾಗಿಲ ಬಳಿ ನಾವು ಬಂದೆವು. ಆ ಅಧಿಕಾರಿ ಬಾಗಿಲನ್ನು ಮೆಲ್ಲಗೆ ಬಡಿದನು. ಓರ್ವ ಎತ್ತರದ ಮನುಷ್ಯ

ಅದನ್ನು ತೆರೆದಾಗ, ನನ್ನ ಮಾರ್ಗದರ್ಶಿ ಒಳಕ್ಕೆ ನನ್ನನ್ನು ತಳ್ಳಿ "ಮಿ, ಮೈದಾನಾಟ್ಜ್, ಈ ತರುಣ ಮಹಿಳೆ ನಿಮ್ಮನ್ನು ವೈಯಕ್ತಿಕವಾಗಿ ಕಾಣಬೇಕೆಂದು ಹೇಳಿದಳು" ಎಂದು ಹೇಳಿದನು. ಹೀಗೆ ನನ್ನನ್ನು ಪರಿಚಯಿಸಿದ ನಂತರ ಹಿಂದಿನಿಂದ ಬಾಗಿಲನ್ನು ಮುಚ್ಚಿ ಅದೃಶ್ಯನಾದನು.

ಅತ್ಯಾಶ್ಚರ್ಯವೆಂದರೆ, ಈ ಎತ್ತರದ ಸ್ಫುರದ್ರೂಪಿ ಮಿ.ಮೈದಾನಾಟ್ಜ್ ಆಸ್ಟ್ರೇಲಿಯಾಕ್ಕೆ ಯುಗೋಸ್ಲಾವಿಯಾದ ರಾಯಭಾರಿ ಆಗಿದ್ದ ವ್ಯಕ್ತಿ. ಮೈದಾನಾಟ್ಜ್ ಯಾರು ಎಂಬುದನ್ನು ಓಟ್ಟೊ ನನಗೆ ಸರಿಯಾಗಿ ಹೇಳಿರಲಿಲ್ಲ. ನಾನೂ ಸಹ ಮೂರ್ಖತನದಲ್ಲಿ ಅವನನ್ನು ಕೇಳಲು ಮರೆತಿದ್ದೆ. ನಾನು ಹೇಗೆ ಅವರ ಹತ್ತಿರ ನಡೆದುಕೊಳ್ಳಬೇಕೆಂಬುದನ್ನು ಹೇಳದೆ, ಓಟ್ಟೋ ನನ್ನನ್ನು ರಾಯಭಾರಿಗಳ ಹತ್ತಿರವೇ ಕಳುಹಿಸುತ್ತಾನೆಂಬುದು ನನ್ನ ಮನಸ್ಸಿಗೆ ಬರಲೇ ಇಲ್ಲ. ನನಗೆ ಉಂಟಾದ ಆ ಸಂದರ್ಭವನ್ನು ನಾನು ನಂಬಲು ಸಾಧ್ಯವಾಗಲಿಲ್ಲ. ಹಾಗಾಗಿ ಕೆಲಸಮಯದವರೆಗೆ, ನಾನು ಮೂಕವಿಸ್ಮಿತಳಾಗಿ ನಿಂತೆ. ರಾಯಭಾರಿಯವರ ಎದುರಿಗೆ ನಾನೇ ಸುಧಾರಿಸಿಕೊಳ್ಳಲು ಹಾಗೂ ನನಗೆ ಉಂಟಾದ ತೀವ್ರ ಸಂಕೋಚವನ್ನು ಮರೆ ಮಾಚುವ ವ್ಯರ್ಥ ಪ್ರಯತ್ನದಲ್ಲಿ ನಾನು ಕೊಠಡಿ ತುಂಬಾ ಕಣ್ಣಾಡಿಸಿದೆ. ಅದೊಂದು ರೀತಿಯಲ್ಲಿ ಹಳೆಯ ನಗರದ ಮನೆಯ ಪ್ರತಿರೂಪವೇ ಆಗಿತ್ತು. ಆಲಂಕಾರಿಕ ಎತ್ತರದ ಮೇಲ್ಛಾವಣಿಗಳು ಹಾಗೂ ಕಿಟಕಿಗಳು, ನೆಲದಿಂದ ಮೇಲ್ಛಾವಣಿವರೆಗೂ ಕಸೂತಿಯುಕ್ತ ಪರದೆಗಳ ದಟ್ಟ ಬಣ್ಣಗಳು, ಸುಂದರವಾದ ಕೆತ್ತನೆಯುಳ್ಳ ಅನೇಕ ಕುರ್ಚಿ ಮೇಜುಗಳಿಗೆ ಪೂರಕವಾಗಿದ್ದುವು. ಅದೊಂದು ಆಕರ್ಷಕ ಕೊಠಡಿಯಾಗಿತ್ತು. ಆದರೆ ನಾನು ಗಮನಿಸಿದ್ದು ಅದು ಅಚ್ಚುಕಟ್ಟಾಗಿರಲಿಲ್ಲ. ಕಾಗದಗಳನ್ನು ನೆಲದ ಮೇಲೆಯೇ ಗುಡ್ಡೆ ಹಾಕಲಾಗಿತ್ತು ಹಾಗೂ ಮೇಜು ಕುರ್ಚಿಗಳ ತುಂಬಾ ಫೈಲ್‌ಗಳು ಪೇರಿಸಲ್ಪಟ್ಟಿದ್ದವು. ಕೊಠಡಿಯ ಮಧ್ಯದಲ್ಲಿ ಒಂದೇ ವಿಶಾಲ ಅರ್ಧ ತುಂಬಿದ ಪೆಟ್ಟಿಗೆ ಹಾಗೂ ಅನೇಕ ಖಾಲಿ ಪೆಟ್ಟಿಗೆಗಳಿದ್ದವು. ಮಿ. ಮೈದಾನಾಟ್ಜ್ ಆತುರದಲ್ಲಿ ಎಲ್ಲವನ್ನೂ ಪೇರಿಸುತ್ತಿದ್ದರು. ಆದರೂ ತಮ್ಮ ಕೆಲಸ ನಿಲ್ಲಿಸಿದ್ದರು. ನಾನು ಮಾತನಾಡುವುದಕ್ಕಾಗಿ ಕಾಯುತ್ತಾ ಸ್ವಲ್ಪ ಸಮಯದವರೆಗೆ ಪರಸ್ಪರ ಮುಖಾಮುಖಿಯಾಗಿ ಮೌನದಿಂದ ನಿಂತೆವು. ಅಷ್ಟರಲ್ಲಿ ಅವರೇ ಕೇಳಿದರು: "ನಾನೇನು ಮಾಡಬೇಕು ನಿಮಗೆ ಹೇಳಿ?" ನಾನು ಹೇಳಿದೆ (ಓಟ್ಟೊ ಹೇಳಿ ಕೊಟ್ಟಿದ್ದಂತೆ) ನನ್ನ ಕುಟುಂಬದವರಿಗಾಗಿ ವೀಸಾಗಳನ್ನು ಪಡೆಯಲು ಬಂದಿದ್ದೆ ಎಂದು, ಹೀಗೆ ಹೇಳಿ ನನ್ನ ಹ್ಯಾಂಡ್ ಬ್ಯಾಗ್‌ನಿಂದ ಪಾಸ್‌ಪೋರ್ಟ್‌ಗಳನ್ನು ತೆಗೆದು, ಅವರಿಗೆ ಕೊಡಲು ಪ್ರಯತ್ನಿಸಿದೆ. ಅವರು ಪಾಸ್‌ಪೋರ್ಟ್‌ಗಳನ್ನು ನೋಡಿದರು. ಗ್ರುನ್‌ವಾಲ್ಡ್ ಎಂಬ ಉಪನಾಮವನ್ನು ನೋಡಿ, ನಾವು ಯಹೂದಿಗಳೆಂದು ಅವರು ತಿಳಿಯಬಹುದೆಂದು. ಆದರೆ, ಅದರ ಬಗ್ಗೆ ಅವರು

ನಮ್ಮ ಭೇಟಿಯುದ್ದಕ್ಕೂ ಚಕಾರವೆತ್ತಲಿಲ್ಲ. ಈ ತರುಣಿಯ ರೂಪದಿಂದ ಆಸಕ್ತರಾದ ಅವರು ನಗುತ್ತಾ ಕೇಳಿದರು, ತಮ್ಮನ್ನು ಭೇಟಿ ಮಾಡುವಂತೆ ಯಾರು ಶಿಫಾರಸು ಮಾಡಿದ್ದರೆಂದು. ಅದಕ್ಕೆ ನನ್ನ ಅಣ್ಣ ಓಟ್ಟೊ ಎಂದು ಹೇಳುವುದು ಮೂರ್ಖತನ ವಾದೀತು ಎಂದು ನನಗೆ ಮನವರಿಕೆಯಾಯಿತು. ಆದ್ದರಿಂದ, ಆ ಕ್ಷಣಕ್ಕೆ ನನಗೆ ಹೊಳೆದಂತೆ ನನ್ನ ಚಿಕ್ಕಪ್ಪ, ಯುಗೋಸ್ಲಾವಿಯಾದಲ್ಲಿ ದೊಡ್ಡ ಕೈಗಾರಿಕೋದ್ಯಮಿ ಯಾಗಿದ್ದರು, ಅವರ ಹೆಸರು, ಅವರ ಭಾರಿ ಉದ್ಯಮ ಎಲ್ಲವೂ ಮಿ. ಮೈದಾನಾಟ್ಜ್‌ಗೆ ಪರಿಚಿತವಾಗಿರಬಹುದೆಂದು ಭಾವಿಸಿದೆ. ಈ ಉತ್ತರ ಅವರಿಗೆ ತೃಪ್ತಿದಾಯಕವಾದಂತೆ ಅನ್ನಿಸಿತು. ಆದರೆ ಅವರು ನಮ್ಮ ಚಿಕ್ಕಪ್ಪ ಅಥವಾ ಅವರ ಉದ್ಯಮದ ಬಗ್ಗೆ ಕೇಳಿದ್ದರೆ ಎಂದು ನಾನು ಕಂಡುಕೊಳ್ಳಲಿಲ್ಲ. ಏನೇ ಆದರೂ, ಅವರು ಮುಂದುವರಿದು ಹೇಳಿದರು, ಮಾಜಿ ರಾಯಭಾರಿಯಾಗಿ, ಯುಗೋಸ್ಲಾವಿಯಾಕ್ಕೆ ಹಿಂತಿರುಗು ವುದಾಗಿಯೂ, ಆಸ್ಟ್ರಿಯಾ ಈಗ ಸ್ವತಂತ್ರ ರಾಷ್ಟ್ರವಾಗಿಲ್ಲದೆ ಇರುವುದರಿಂದ, ರಾಯಭಾರ ವಿಷಯಗಳನ್ನು, ಕಾನ್‌ಸರ್ ಒಬ್ಬರು ನಡೆಸುವರೆಂದು, ಆದ್ದರಿಂದ ಅವರಿಗೆ ವೀಸಾಗಳನ್ನು ನೀಡಲು ಅಧಿಕಾರವಿಲ್ಲವೆಂದೂ ಹೇಳಿದರು.

ಇದನ್ನು ಕೇಳಿ ನನ್ನ ಹೃದಯ ಕುಗ್ಗಿತು. ದಿಕ್ಕು ತೋಚದಂತಾಯಿತು. ನಾನು ಬರಿಗೈಯಲ್ಲಿ ಹಿಂತಿರುಗಬೇಕಾಗಬಹುದೆಂಬುದನ್ನು ನಂಬಲೂ ಸಾಧ್ಯವಾಗಲಿಲ್ಲ. ನನಿಂದ ಓಟ್ಟೊಗೆ ನಿರಾಶೆಯುಂಟಾಗುತ್ತಿತ್ತು. ನನಗಂತೂ ಕಣ್ಣೀರು ಬರುವಂತಾಯಿತು. ಆದರೆ, ನಾನು ನನ್ನ ಮನಃಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಹಾಗೂ ವಿಸ್ತೃತವಾಗಿ ಯೋಚಿಸಬೇಕೆಂದು ಅನ್ನಿಸಿತು. ನನ್ನನ್ನು ಹತ್ತಿರದಿಂದ ಗಮನಿಸುತ್ತಿದ್ದ ಮಿ. ಮೈದಾನಾಟ್ಜ್ ಅವರಿಗೆ, ಅವರ ಕಣ್ಣೆದುರಿಗೆ ನನ್ನಲ್ಲಿ ಉಂಟಾಗುತ್ತಿದ್ದ ನಾಟಕೀಯ ಬದಲಾವಣೆಗಳು ಅರಿವಾಗಿರಬೇಕು. ವೀಸಾಗಳನ್ನು ಪಡೆಯದೆ ಇರುವ ಪರಿಣಾಮಗಳನ್ನು ನಾನು ಮನವರಿಕೆ ಮಾಡಿಕೊಂಡೆ. ಆರಂಭಿಕವಾಗಿ, ಅದು ಓಟ್ಟೊನನ್ನು ಆಶಾಭಂಗಗೊಳಿಸುವಂತಾದರೂ ಅದು ಉಳಿಯುವಿಕೆಯ ಪ್ರಶ್ನೆಯಾಗಿತ್ತು. ನಮ್ಮ ಪಾಸ್‌ಪೋರ್ಟ್‌ಗಳಿಗೆ ಸ್ಟಾಂಪ್ ಹಾಕಿ, ತಾರೀಖನ್ನು ನಮೂದಿಸಿಕೊಳ್ಳದೆ ಹೋಗಲು ಸಿದ್ಧಳಿರಲಿಲ್ಲ. ನನ್ನ ಸ್ವಾಗತದ ಅವಧಿ ಮೀರಿ ನಿಲ್ಲಲು ಭಯವಾಗುತ್ತಿತ್ತು. ಆದರೆ ನಾನು ವೀಸಾಗಳನ್ನು ಪಡೆಯಲೇಬೇಕಾಗಿತ್ತು. ನಾನು ಮೆಲ್ಲಗೆ, ಆದರೆ ದೃಢವಾಗಿ ಹೇಳಿಬಿಟ್ಟೆ, ನೀವು ಏನಾದರೂ ಮಾಡಬಹುದೆಂದು.. ಅದಕ್ಕವರು, ತಾವು ಸಹಾಯ ಮಾಡಲು ಸಾಧ್ಯವೆಂದು ನನಗೆ ನಂಬಿಕೆಯಿದ್ದರೆ, ಏನು ಮಾಡಲು ಸಾಧ್ಯ ಎಂಬುದನ್ನು ಪರಿಗಣಿಸುವುದಾಗಿ ಹೇಳಿದರು. ಆಗ ಅವರು ಇಳಿದು ಬಂದು, ತಮ್ಮ ಕೈಗಳನ್ನು ಮೆಲ್ಲನೆ ನನ್ನ ಭುಜದ ಮೇಲಿಟ್ಟು ಬಾಗಿಲವರೆಗೆ ಕರೆದೊಯ್ದರು. ಅದಕ್ಕೆ ಸೇರಿಕೊಂಡಂತಿದ್ದ ಖಾಸಗಿ ಕೊಠಡಿಯಲ್ಲಿದ್ದ ಕಾನ್‌ಸುಲಾರ್ ಕಛೇರಿಯಲ್ಲಿ, ನನ್ನನ್ನು

ತಮ್ಮ ಉತ್ತರಾಧಿಕಾರಿಗೆ ಪರಿಚಯ ಮಾಡಿಸಿದರು. 'ತರುಣ ವಿಯೆನ್ನಾ ಗರ್ಲ್‌ಫ್ರೆಂಡ್' ಎಂದು ನನ್ನನ್ನು ಉದ್ದೇಶಿಸಿ ಕರೆದ ಅವರು, ನಮ್ಮ ಯುಗೋಸ್ಲಾವಿಯಾದ ವೀಸಾಗಳು ಸಾಧ್ಯವಾದಷ್ಟು ಬೇಗನೆ ದೊರೆಯುವ ಹಾಗೆ ಸಹಾಯ ಮಾಡಬೇಕೆಂದು ತಮ್ಮ ಸಹೋದ್ಯೋಗಿಗೆ ತಿಳಿಸಿದರು. ಇಷ್ಟು ಹೇಳಿ, ನನ್ನ ಕೈ ಕುಲುಕಿ, ಶುಭವಾಗಲೆಂದು ಹಾರೈಸಿ ಹೊರಟರು. ನಾನು ಅವರನ್ನು ಆನಂತರ ನೋಡಿಲ್ಲ ಅಥವಾ ಅವರ ಬಗ್ಗೆ ಕೇಳಿಲ್ಲ. ಆದರೆ, ನಾನು ಅವರನ್ನು ಯಾವಾಗಲೂ ವಿಶ್ವಾಸದಿಂದ ಸ್ಮರಿಸಿದ್ದೇನೆ. ನಾವು ವೀಸಾಗಳನ್ನು ಪಡೆಯಲು ಅವರು ಕಾರಣಕರ್ತರಾದುದಲ್ಲದೆ, ನನಗೆ ಆವಶ್ಯಕವಾಗಿ ಬೇಕಾದ ಸಂದರ್ಭದಲ್ಲಿ ಶಕ್ತಿ ಮತ್ತು ದೃಢ ನಿರ್ಧಾರವನ್ನು ಪಡೆಯುವುದರಲ್ಲಿ ಸಹಾಯ ಮಾಡಿದರು.

ನಮಗೆ ವೀಸಾಗಳು ಸರಿಯಾಗಿ ದೊರೆಯುವುದಕ್ಕೆ ಕೆಲವು ತಿಂಗಳುಗಳೇ ಹಿಡಿದವು; ಈ ಮಧ್ಯದಲ್ಲಿ ಯುಗೋಸ್ಲಾವಿಯಾದ ರಾಯಭಾರ ಕಛೇರಿಗೆ ಹೋಗಲು ಹಿಂಬಾಗಿಲಿಂದ ಮುಕ್ತಪ್ರವೇಶದ ಸಾಧ್ಯತೆ ಇತ್ತು. ಕೊನೆಗೆ ನಾನು ನಮ್ಮ ವೀಸಾಗಳನ್ನು ಪಡೆದಾಗ ಮಾಜಿ ರಾಯಭಾರಿಯವರ ವೈಯಕ್ತಿಕ ಗೆಳತಿಯಾಗಲು ಹೇಗೆ ಸಾಧ್ಯವಾಗಿತ್ತೆಂದು ಕಾನ್ಸಲ್ ಅವರು ವಿಚಾರಿಸುವ ತವಕವನ್ನು ತಡೆದುಕೊಳ್ಳ ಲಾಗಲಿಲ್ಲ. ಅದಕ್ಕೆ ನಾನು ನಿಗೂಢ ನಗುವಿನಿಂದಲೇ ಉತ್ತರಿಸಿ ಸುಮ್ಮನಾದೆ. ಅದೆಲ್ಲಾ ಸಾಧ್ಯವಾದದ್ದು ಓಟ್ಟೋನ ಬುದ್ಧಿವಂತಿಕೆಯಿಂದ ಎಂದು ಅವನಿಗೆ ಮನವರಿಕೆ ಯಾಗಲಿಲ್ಲ. ರಾಯಭಾರ ಕಛೇರಿಯಿಂದ ಹಿಂದಿರುಗಿದಾಗ, ಮಿ.ಮೈದಾನಾಟ್ಜ್ ಅವರೊಂದಿಗಿನ ಮುಖಾಮುಖಿಯಲ್ಲಿ ನಾನು ಜಯಶೀಲಳಾದ ಬಗೆಯನ್ನು ವಿವರಿಸಿದೆ ಹಾಗೂ ಓಟ್ಟೋವನ್ನು ಹೇಗೆ ಅವರನ್ನು ಭೇಟಿ ಮಾಡಿ ಕೇಳಬೇಕೆಂದು ತಿಳಿಯಿತೆಂದು ಪ್ರಶ್ನೆ ಮೇಲೆ ಪ್ರಶ್ನೆ ಹಾಕಿದೆ. ತಾನು ಹಿಂದಿನ ವರ್ಷದ ಯುಗೊಸ್ಲಾವಿಯಾದ ವೀಸಾವನ್ನು ಪರೀಕ್ಷಿಸಿದ್ದಾಗಿ ದೊಡ್ಡ ನಗುವಿನಿಂದ ಹೇಳಿದ. ಅದನ್ನು ಸಹಿ ಮಾಡಿದ್ದವರು 'ಮೈದಾನಾಟ್ಜ್' ಎಂದಿತ್ತು. ಆದ್ದರಿಂದ ಅವರೇ ವೀಸಾ ನೀಡುವ ಜವಾಬ್ದಾರಿ ವ್ಯಕ್ತಿಯಿರಬಹುದೆಂದು ಊಹಿಸಿದ್ದನು. ಅಂದಿನಿಂದ, ಯಾವುದೇ ಏಜೆನ್ಸಿ ಅಥವಾ ಸಂಸ್ಥೆಯಿಂದ ಏನಾದರೂ ಬೇಕಿದ್ದರೆ, ಯಾವಾಗಲೂ ಅದರ ಮುಖ್ಯಸ್ಥರ ಹೆಸರನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇನೆ ಹಾಗೂ ಅವರನ್ನೇ ವೈಯಕ್ತಿಕವಾಗಿ ಸಂಪರ್ಕಿಸಿದ್ದೇನೆ.

ಒಕ್ಕೂಟದ ನಂತರ ಆಸ್ಟ್ರಿಯಾದ ಎಲ್ಲ ಶಾಲೆಗಳು ಎರಡು ವಾರಗಳವರೆಗೆ ಮುಚ್ಚಲ್ಪಟ್ಟಿದ್ದವು. ಅವುಗಳು ಪುನರಾರಂಭಗೊಂಡು, ನನ್ನ ಯಹೂದಿ ಗೆಳತಿಯರ ಚಿಕ್ಕ ದಂಡನ್ನು ಭೇಟಿ ಮಾಡಿದಾಗ, ನಾವುಗಳೆಲ್ಲಾ ಬಹಳ ಕಳೆಗುಂದಿದ್ದೆವು. ಯಹೂದಿ ವಿರೋಧಿ ದೌರ್ಜನ್ಯಗಳ ಅನುಭವಗಳನ್ನೂ, ಕಥೆಗಳನ್ನೂ ವಿನಿಮಯ ಮಾಡಿಕೊಂಡೆವು. ನಾವುಗಳು ನಮ್ಮ ತರಗತಿಗಳನ್ನು ಪ್ರವೇಶಿಸುತ್ತಿದ್ದಂತೆ ನಮ್ಮನ್ನು

ತಕ್ಷಣವೇ ನಮ್ಮ ಯಹೂದಿಯೇತರ ಸಹಪಾಠಿಗಳಿಂದ ಬೇರ್ಪಡಿಸಿ, ಕೊಠಡಿಯ ಹಿಂಬದಿಗೆ ಹೋಗುವಂತೆ ಆದೇಶಿಸಲಾಯಿತು. ಈಗ ಆರ್ಯನರನ್ನು ಯಹೂದಿ ವಿದ್ಯಾರ್ಥಿಗಳಿಂದ ಬೇರ್ಪಡಿಸುವ ಹೊಸ ಹಾಗೂ ಸ್ವಾಗತಾರ್ಹ ನಿಯಮಾವಳಿ ಬಂದಿದೆಯೆಂದು ನಮ್ಮ ಮುಖ್ಯೋಪಾಧ್ಯಾಯಿನಿಯವರು ಭಾಷಣ ಮಾಡುತ್ತಾ ಹೇಳಿದರು. ನಮ್ಮನ್ನು ಶಾಲೆಯಿಂದ ಹೊರಹೋಗುವಂತೆ ಆದೇಶಿಸಲಾಯಿತು. ನಾವು ಆಲ್‌ಬರ್ಟ್‌ಗಾಸ್‌ನಲ್ಲಿದ್ದ ಯಹೂದಿ ಪ್ರೌಢಶಾಲೆಗೆ ಬದಲಾವಣೆ ತೆಗೆದುಕೊಳ್ಳಬೇಕಾಯಿತು. ಅದು ಸ್ಥಳೀಯ ಯಹೂದಿ ಮಕ್ಕಳಿಗೆ ಸಹಶಿಕ್ಷಣದ ಶಾಲೆಯಾಗಿತ್ತು. ನಾವುಗಳು ಅದನ್ನು ನಂಬಲಾಗಲಿಲ್ಲ! ಶಿಕ್ಷಕರೆಲ್ಲಾ ಹೊಸದಾಗಿ ನೇಮಕಗೊಂಡ, ಯಾವುದೇ ಶಿಕ್ಷಕ ತರಬೇತಿ ಅಥವಾ ಅನುಭವ ಇಲ್ಲದ ತರುಣ ನಾಜಿಗಳು, ಹಾಗೂ ಅವರು ನಮ್ಮನ್ನು ಅಮಾನವೀಯವಾಗಿ ನಡೆಸಿಕೊಂಡರು. ಅದೆಲ್ಲಕ್ಕಿಂತ ಹೆಚ್ಚಾಗಿ, ನಾಜಿ ಆಕ್ರಮಣಕಾರರ ಒಂದು ಗುಂಪು, ನಮ್ಮ ಹೊಸ ಶಾಲೆಯ ಸ್ಥಳವೊಂದನ್ನು ಸ್ಥಾಪಿಸಿದ್ದರು. ಅಂದರೆ, ನಾವುಗಳು ಶಾಲೆಯಲ್ಲಿ ಮಾತ್ರ ನಾಜಿಗಳ ಮೂದಲಿಕೆಗೆ ಗುರಿಯಾಗಿದ್ದಲ್ಲದೆ ಶಾಲೆಗೆ ಹೋಗಿ ಬರುವ ದಾರಿಯಲ್ಲೂ ಅದೇ ತೊಂದರೆಯನ್ನನುಭವಿಸಬೇಕಾಗಿತ್ತು. ಆ ತರುಣ ನಾಜಿ ಆಕ್ರಮಣಕಾರರಿಗೆ ನಾವುಗಳು ಯಹೂದಿಗಳೆಂದು ತಿಳಿದಿತ್ತು. ಪ್ರತಿದಿನ ಬೆಳಿಗ್ಗೆ ನಮ್ಮಲ್ಲಿ ಕೆಲವರನ್ನು ಸುತ್ತುವರಿದು, ಅವರ ಬೂಟ್ ಪಾಲಿಷ್ ಮಾಡಿಸುತ್ತಿದ್ದರು ಅಥವಾ ಅವರ ಬೀರುಗಳನ್ನು ಅಥವಾ ಅವರ ವಸತಿಯ ಕೊಳಕು ನೆಲವನ್ನು ನಮ್ಮಿಂದ ಶುಚಿಗೊಳಿಸುತ್ತಿದ್ದರು. ಇಂಥಾ ಅನ್ಯಾಯದ ಬಗ್ಗೆ ನನಗೆ ಆಕ್ರೋಶವುಂಟಾಗಿತ್ತು. ಇಂಥಾ ಕೆಲಸ ಮಾಡಲು ನಾನೇನೂ ತಪ್ಪು ಮಾಡಿರಲಿಲ್ಲ. ಆದರೆ ಇಲ್ಲಿ ನಾನು ಬೂಟ್ ಪಾಲಿಶ್ ಮಾಡುತ್ತಿದ್ದೆ ಮತ್ತು ಶೌಚಾಲಯವನ್ನು ಶುಚಿಗೊಳಿಸುತ್ತಿದ್ದೆ. ಈ ನಾಜಿ ತರುಣರನ್ನು ಘಾಸಿಗೊಳಿಸಬೇಕೆಂದು ಕೋರಿದ್ದೆ. ಆದರೆ, ನಾವು ಶಕ್ತಿಹೀನರೆಂದು ಅರಿವಾಗಿತ್ತು; ಅವರ ಬಳಿ ಗನ್‌ಗಳು ಹಾಗೂ ಬೆತ್ತಗಳಿದ್ದವು. ಅವುಗಳನ್ನು ಉಪಯೋಗಿಸಲು ಅವರು ಹಿಂಜರಿಯುತ್ತಿರಲಿಲ್ಲ ಎಂದು ನಮಗೆ ಗೊತ್ತಿತ್ತು. ಇಂಥಾ ಘನತೆಯಿಲ್ಲದ ಕಾರ್ಯಗಳನ್ನು ಮಾಡಲು ಇಷ್ಟವಿದೆಯೆಂಬಂತೆ ನಟಿಸಲು ಕಲಿತೆ. ಆದರೆ, ಒಳಗೊಳಗೇ ನಾನು ಕುದಿಯುತ್ತಿದ್ದೆ. ನನ್ನ ಸಂತೋಷದಾಯಕ ಶಾಲಾ ದಿನಗಳಲ್ಲಿ ಸ್ನೇಹಿತರು, ದೀರ್ಘವಾದ ಚರ್ಚಾಗೋಷ್ಠಿಗಳು ಲೆತ್ನಿಕ್‌ಗಳೆಲ್ಲಿ? ನನಗೆ ಅವುಗಳಿಗೆಲ್ಲಾ ಉತ್ತರ ಬೇಕಾಗಿತ್ತು. ಇದ್ದಕ್ಕಿದ್ದಂತೆ ಅವು ಯಾವುವೂ ಇರಲಿಲ್ಲ.

ಯಹೂದಿಗಳೇ ಹೆಚ್ಚಾಗಿ ಸೇರುತ್ತಿದ್ದ ಈ ಶಾಲೆಗಳಲ್ಲಿ ಕಡಿಮೆ ಔಪಚಾರಿಕ ಶಿಕ್ಷಣವಿದ್ದರೂ, ಶಾಲಾ ಹಾಜರಾತಿ ಯಹೂದಿ ಮಕ್ಕಳಿಗೆ ಕಡ್ಡಾಯವಾಗಿತ್ತು. ನನ್ನ ಪ್ರೌಢಶಾಲೆಯಿಂದ ಕೇವಲ ಇಬ್ಬರು ಬಾಲಕಿಯರು ಮಾತ್ರ ನನ್ನೊಂದಿಗೆ

ಆಲ್ಬರ್ಟ್‌ಗಾಸ್ ಶಾಲೆಗೆ ಹೋಗಿದ್ದರು; ಮಿಕ್ಕವರನ್ನು ಅವರ ತಂದೆ ತಾಯಿಯರು ಅವರನ್ನು ಖಾಸಗಿ ಶಾಲೆಗಳಿಗೆ ಕಳುಹಿಸುವಷ್ಟು ಹಣವಂತರಾಗಿದ್ದರು. ಹಾಗಾಗಿ, ನನ್ನನ್ನು ಶಾಲೆಯಿಂದ ಬಲವಂತವಾಗಿ ಬಿಡಿಸಲಾಗಿತ್ತಲ್ಲದೆ, ನಾನು ಶಾಲೆಯ, ನನ್ನ ಆಪ್ತ ಗೆಳತಿಯರ ಸಂಪರ್ಕವನ್ನು ಕಳೆದುಕೊಂಡಿದ್ದೆ. ಒಂದಷ್ಟು ಹೊಸ ಗೆಳತಿಯರೊಂದಿಗೆ ಸ್ನೇಹ ಬೆಳೆಸಿಕೊಂಡೆ ಹಾಗೂ ನಾವು ರಾತ್ರಿಯಿಡೀ ಪಾರ್ಟಿಗಳನ್ನು ಬೇರೆ ಬೇರೆ ಮನೆಗಳಲ್ಲಿ ಮಾಡುವ ಮೂಲಕ ಯಥಾಸ್ಥಿತಿಯ ಸಾದೃಶ್ಯವನ್ನು ಸೃಷ್ಟಿಸಲು ಕಷ್ಟಪಟ್ಟು ಪ್ರಯತ್ನಿಸಿದೆವು. ಅಲ್ಲಿ ನಮ್ಮ ತಾರುಣ್ಯ ಪ್ರೀತಿಯ ನಂತರ ಅನ್ಯಾಯಗಳನ್ನು ಸರಿಪಡಿಸಲು ನಮ್ಮ ಹುಡುಗ ಗೆಳೆಯರನ್ನು ಬಾಚಿ ತಬ್ಬಿಕೊಳ್ಳುತ್ತಿದ್ದೆವು. ಶ್ರೀಮಂತ ಯಹೂದಿಯರನ್ನು ಬಾಚಿ ತಬ್ಬಿಕೊಳ್ಳುತ್ತಿದ್ದೆವು. ಶ್ರೀಮಂತ ಯಹೂದಿ ಕುಟುಂಬದವರೊಬ್ಬರ ಮಗ ಫ್ರೆಡ್ಡಿಯನ್ನು ನಾನು ನೋಡುತ್ತಿದ್ದೆ. ಲಿಲ್ಲಿಯೂ ಪ್ರೀತಿಯನ್ನು ಹಿಂತಿರುಗಿಸುತ್ತಾನೆಂದು ನಾವಿನ್ನೂ ಕನಸು ಕಾಣುತ್ತಿದ್ದರೂ ನಾನು ಅವನನ್ನು ಇಷ್ಟಪಟ್ಟೆ. ನಾವಿಬ್ಬರೂ ಸಾಧ್ಯವಾದಷ್ಟು ಹೊರಗಡೆ ಓಡಾಡುತ್ತಿದ್ದೆವು, ನಮ್ಮ ಮೇಲೆ ಹೇರಿದ್ದ ನಿರ್ಬಂಧಗಳ ನಡುವೆಯೂ. ಅವನು ಆಗ ವಾಸಿಸುತ್ತಿದ್ದುದು ನನಗೆ ಅರಮನೆಯೆಂದು ತೋರಿದ ದೊಡ್ಡ ಮನೆಯೊಂದರಲ್ಲಿ, ಹಾಗೂ ನನಗೆ ಅನೇಕ ಉಡುಗೊರೆಗಳನ್ನು ತಂದುಕೊಟ್ಟು ನಾನೊಬ್ಬ ರಾಣಿಯಂತೆ ಮೆರೆಯುವಂತೆ ಮಾಡಿದನು. ರಾತ್ರಿ ಹೊತ್ತಿನಲ್ಲಿ ನಾನು ಹೊರಗೆ ಇರುವ ಬಗ್ಗೆ ಅಮ್ಮನಿಗೆ ಚಿಂತೆಯಾಗುತ್ತಿತ್ತು. ಆದರೆ, ನಾನು ಮನೆಗೆ ಮರಳುವುದು ರಾತ್ರಿ ಹೊತ್ತಿಗಿಂತ ಹಗಲಲ್ಲಿ ಕ್ಷೇಮಕರ ಎಂದು ನಾನು ಒತ್ತಿಹೇಳುತ್ತಿದ್ದೆ. ನಾನು ನಮ್ಮ ಮನೆಯಲ್ಲಿ ಪ್ರಭಾವಿ ಸ್ಥಾನ ಪಡೆದಿದ್ದುದರಿಂದ, ಅಮ್ಮನಿಗೆ ಈ ೧೬ ವರ್ಷವೂ ತುಂಬಿರದ ಹುಡುಗಿಯ ಹಟಮಾರಿ ನಡವಳಿಕೆಯನ್ನು ಒಪ್ಪಿಕೊಳ್ಳದೆ ಬೇರೆ ಮಾರ್ಗವಿರಲಿಲ್ಲ.

ನಮ್ಮ ಶಾಲಾ ವರ್ಷದ ಕೊನೆಯ ದಿನದಂದು ನಮ್ಮ ತರುಣ ನಾಜಿ ಶಿಕ್ಷಕರೊಬ್ಬರು ತಮ್ಮ ಧಾಳಿ ಪಡೆಯ ಸೈನಿಕರ ಸಮವಸ್ತ್ರದಲ್ಲಿ ಕಾಣಿಸಿಕೊಂಡರು. ನಮ್ಮ ಶಾಲಾ ವರದಿಗಳನ್ನು ನೀಡುತ್ತಾ, ಅವರು ಹೇಳಿದರು, ಸ್ವಲ್ಪ ಹಗೆತನದ ಧಾಟಿಯಲ್ಲಿ "ನಿಮ್ಮಲ್ಲಿ ಕೆಲವರು ಮಾತ್ರ ಆಸ್ಟ್ರಿಯಾದಿಂದ ಹೊರಗಡೆ ಹೋಗ ಬೇಕಾಗಬಹುದೆಂದು ನಾನು ಭಾವಿಸುತ್ತೇನೆ. ಅಷ್ಟರಲ್ಲಿ ನಿಮ್ಮಲ್ಲಿ ಯಾರಾದರೂ ಹೊರಡಲು ಅನುವಾದರೆ ಅದರಿಂದ ಏನೂ ಆಗುವುದಿಲ್ಲ, ನೀವುಗಳೆಲ್ಲಾ ಚರಂಡಿಗೆ ಬೀಳಬೇಕಾಗಬಹುದು ನಿಮ್ಮ ಜಾಗದಲ್ಲೇ." ನಾನು ಅವರ ಕೊನೆಯ ಮಾತುಗಳನ್ನು ಕೇಳಿಸಿಕೊಂಡಾಗ, ಅವರು ಹೇಳಿದ್ದು ತಪ್ಪು ಎಂದು ನಾನು ಸಾಬೀತುಪಡಿಸುವುದಾಗಿ ಪ್ರತಿಜ್ಞೆ ಮಾಡಿದೆ. ವಿಯೆನ್ನಾದಲ್ಲಿನ ಕೊನೆಯ ಶಾಲಾ ಸಭೆಯ ನಂತರ, ಮಧ್ಯಾಹ್ನ ತನ್ನ ಮನೆಗೆ ಭೇಟಿ ನೀಡುವಂತೆ ಫ್ರೆಡ್ಡಿ ನೀಡಿದ್ದ ಆಹ್ವಾನವನ್ನು ಸಂತೋಷದಿಂದ ಒಪ್ಪಿಕೊಂಡೆ. ನಾವಿಬ್ಬರೂ ಒಟ್ಟಿಗೆ ಹತ್ತಿರದಲ್ಲೇ ಕುಳಿತೆವು ಹಾಗೂ ನನ್ನನ್ನು

ಚುಂಬಿಸಿದ ನಂತರ ಅವನು ನನ್ನ ಕಿವಿಯಲ್ಲಿ ಪಿಸುಗುಟ್ಟಿದ. "ನಾನು ಚರಂಡಿಯಲ್ಲೂ ನಿನ್ನನ್ನು ಪ್ರೀತಿಸುತ್ತೇನೆ!" ಈ ಮಾತು ನಾವಿಬ್ಬರೂ ಹೊಟ್ಟೆ ಹುಣ್ಣಾಗುವಷ್ಟು ನಗುವಂತೆ ಮಾಡಿದುವು. ಅದು ಆ ಹೊತ್ತಿಗೆ ಉಂಟಾಗಿದ್ದ ಉದ್ವೇಗದಿಂದ ಬಿಡುಗಡೆ ಹೊಂದಲು ಸಹಾಯ ಮಾಡಿತು.

ಮನೆಯಲ್ಲಿ ಜೀವನ ನಾಟಕೀಯವಾಗಿ ಬದಲಾಗಿತ್ತು. ಒಕ್ಕೂಟದ ನಂತರ ಅಮ್ಮ ವಿಭಿನ್ನ ವ್ಯಕ್ತಿಯಾಗಿದ್ದಳು ಹಾಗೂ ನಮ್ಮ ಸಂಬಂಧದಲ್ಲಿ ತಿರುಗುಮುರುಗು ಪಾತ್ರವಾಗಿತ್ತು. ಎಲ್ಲವನ್ನೂ ಅವಳಿಗೆ ಹೇಳಿಕೊಳ್ಳುವ ಮೂಲಕ ನಾನೇನೂ ನನ್ನ ಚಿಂತೆಗಳನ್ನು ಕಡಿಮೆ ಮಾಡಿಕೊಳ್ಳಲಿಲ್ಲ. ಕಾರಣ ಅವಳು ತನ್ನದರ ಜೊತೆಯಲ್ಲಿ ಹೆಚ್ಚುವರಿ ಚಿಂತೆಗಳನ್ನು, ಒಪ್ಪಿಕೊಳ್ಳುವಷ್ಟು ಭಾವೋದ್ವೇಗ ಶಕ್ತಿಯನ್ನು ಅವಳು ಕಳೆದುಕೊಂಡಿದ್ದಾಳೆಂದು ನನಗೆ ಮನವರಿಕೆಯಾಯಿತು. ನಾನು ನನ್ನ ಶಾಲೆಯ ಕೊನೆಯ ಸಭೆ ಬಗ್ಗೆ ಅವಳಿಗೆ ಹೇಳಲಾಗಲಿಲ್ಲ. ಅವಳು ತನ್ನ ತೋಳುಗಳು ನನ್ನನ್ನು ಬಳಸಿ ಸಮಾಧಾನಪಡಿಸಲಿ ಎಂದು ನಾನು ಬಯಸಿದ್ದರೂ ಸಹ, ಓಟ್ಟೊ ಕಡೆಗೆ ನಾನು ಭಾವಾವೇಶದ ಬೆಂಬಲಕ್ಕಾಗಿ ತಿರುಗಲು ಯತ್ನಿಸಿದೆ. ಆದರೆ, ಅವನು ನಮ್ಮ ಬದುಕನ್ನು ಸುಧಾರಿಸುವಲ್ಲಿ ಹಾಗೂ ನಮ್ಮ ಪಲಾಯನವನ್ನು ಏರ್ಪಡಿಸುವಲ್ಲಿ ಮಗ್ನನಾಗಿದ್ದನು. ಅದರಿಂದಾಗಿ ನಾನು ಭಾವೋನ್ಮುಖವಾಗಿ, ಸ್ವಾವಲಂಬಿಯಾಗಬೇಕಾಗಿತ್ತು. ಅಂದರೆ ಆಂತರಿಕವಾಗಿ ನಾನು ಭಯಗ್ರಸ್ತ ಹಾಗೂ ಮನನೋಯಿಸಲ್ಪಡುತ್ತಿದ್ದರೂ ನಾನು ಅಧಿಕವಾದ ಗಟ್ಟಿ ರಕ್ಷಣಾ ಕವಚವನ್ನು ಗಳಿಸಿಕೊಳ್ಳುತ್ತಿದ್ದೆ.

ವಿಯೆನ್ನಾದಲ್ಲಿ ನಾಜಿ ಸಮವಸ್ತ್ರ ಅಥವಾ ಕಡೆಯ ಪಕ್ಷ ಸ್ವಸ್ತಿಕ್ ಬಿಲ್ಲೆಯನ್ನು ಹೊಂದಿರದೆ ಓಡಾಡುವುದು ವಿಪರೀತ ಅಪಾಯಕಾರಿಯಾಗಿತ್ತು. ಅಲ್ಲದೆ, ನಾವು ಓಟ್ಟೋವಿನ ಓಡಾಟದ ಬಗ್ಗೆಯೂ ಚಿಂತೆ ಮಾಡುತ್ತಿದ್ದೆವು. ಒಕ್ಕೂಟದ ನಂತರ, ಲಂಡನ್ನಿನ ಯಹೂದಿ ಕಾರ್ ವರ್ತಕ ಮಿ. ಸೈಮನ್‌ನಿಂದ ಓಟ್ಟೊಗೆ ಪತ್ರವೊಂದು ಬಂದಿತು. ಹೇಗೆ ಅವನು ಸಹಾಯ ಮಾಡಬಹುದು ಎಂದು ಕೇಳಿ, ಅವರು ಹಿಂದಿನ ಬೇಸಿಗೆಯಲ್ಲಿ ಭೇಟಿ ಮಾಡಿ ಗೆಳೆಯರಾಗಿದ್ದರು. ಓಟ್ಟೊ ಮತ್ತು ಕುರ್ಟ್ ಆಸ್ಟ್ರಿಯಾದಲ್ಲಿ ಬಿಟ್ಟಿ ಪ್ರಯಾಣ ಮಾಡುತ್ತಿದ್ದಾಗ, ಹಾಗೂ ಮಿ. ಮತ್ತು ಮಿಸೆಸ್ ಸೈಮನ್ ಅವರನ್ನು ಕಾರ್‌ನಲ್ಲಿ ಕಂಡುಕೊಂಡು ಹೋದಾಗ. ಮಿ. ಸೈಮನ್‌ನ ಸಮ್ಮತಿಯಿಂದಲೇ ಓಟ್ಟೊ ಹಿಂದಿನ ತಾರೀಖಿನ ನಕಲಿ ಬಿಸಿನೆಸ್ ಪತ್ರವನ್ನು ಹಾಜರುಪಡಿಸಿ ವೀಸಾವನ್ನು ಪಡೆದು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದ. ಅವನು ಅಲ್ಲಿಂದ ಹೊರಡಲು ಸಾಧ್ಯವಾಯಿತೆಂದು ಸಂತೋಷಪಟ್ಟರೂ, ನಾವು ಬೀಳ್ಕೊಟ್ಟಾಗ, ಅನಿರ್ದಿಷ್ಟ ಅವಧಿಗೆ ನಾವು ಜೈಲು ಶಿಕ್ಷೆಯನ್ನನುಭವಿಸುತ್ತಿರುವವರ ಎದುರು ಓರ್ವ ಜೈಲುವಾಸಿ ಬಿಡುಗಡೆ ಹೊಂದಿದವನಂತೆ ಕಂಡುಬಂತು. ಓಟ್ಟೊ

ನಮ್ಮನ್ನೂ ಇಲ್ಲಿಂದ ಹೊರಡಿಸಲು ಎಲ್ಲಾ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ. ನಾನಂತೂ ನಿಬ್ಬೆರಗಾದೆ. ನನಗೆ ೧೬ ವರ್ಷ ವಯಸ್ಸು, ಯಾರದೇ ಬೆಂಬಲವಿಲ್ಲದೆ ಕುಟುಂಬದ ಜವಾಬ್ದಾರಿಯನ್ನು ಹೊರಬೇಕಾಗಿತ್ತು. ನನ್ನ ಬಾಲ್ಯ ಎಲ್ಲಿ ಹೋಗಿತ್ತು?

೧೯೩೮ರ ಮೇನಲ್ಲಿ ಓಟ್ಟೋವಿನ ನಿರ್ಗಮನದ ನಂತರ, ಅಮ್ಮ ಇನ್ನೂ ಗಾಢವಾದ ಹತಾಶೆಗೊಳಗಾದಳು. ನಮ್ಮ ಸುತ್ತ ನಡೆಯುತ್ತಿದ್ದ ಪ್ರತ್ಯೇಕ ನಾಜಿ ದೌರ್ಜನ್ಯಗಳು ಹೆಚ್ಚಾದವು. ಅಲ್ಲದೆ, ಬೆಳಕಿಗೆ ಬಾರದ ಅನೇಕ ದೊಡ್ಡ ದೌರ್ಜನ್ಯವೂ ಇವೆ ಎಂಬ ವದಂತಿಗಳು ಹೆಚ್ಚಿದವು. ಅಮ್ಮನಿಗಂತೂ ಅಪಾರ್ಟ್‌ಮೆಂಟ್ ಬಿಟ್ಟು ಹೊರಬರಲೂ ಹೆದರಿ ಒಳಗೇ ಅಡಗಿಕೊಂಡಿದ್ದಳು. ಕುರ್ಟ್ ಅಂತೂ ವಿಯೆನ್ನಾಗೆ ಹೋಗುವುದು ಬಹಳ ಅಪಾಯಕಾರಿಯೆಂದು, ಏನಾದರೂ ಆಗಬಹುದೆಂಬ ಅಂಜಿಕೆಯಲ್ಲಿದ್ದನು. ಇದರಿಂದ ನಾನೇ ಎಷ್ಟೋ ಕೆಲಸಗಳಿಗೆ ಹೋಗಬೇಕಾಗಿದ್ದಿತು. ಮಾತ್ರವಲ್ಲ, ಎಷ್ಟೋ ನಿರ್ಧಾರಗಳನ್ನೂ ತೆಗೆದುಕೊಳ್ಳಬೇಕಾಗಿತ್ತು. ನಾನು ಫ್ಲಾಟ್‌ನಿಂದ ಹೊರಹೋದಾಗಲೆಲ್ಲಾ, ಅಮ್ಮ ನಿಶ್ಚೇಷ್ಟಿತಳಾಗಿರುತ್ತಿದ್ದಳು. ಆದರೆ, ನಾನೇ ಆಹಾರ ಸಾಮಗ್ರಿಯನ್ನು ತರಬೇಕಾಗಿತ್ತು. ಅಲ್ಲದೆ ರಾಯಭಾರ ಕಛೇರಿಗೂ ಓಡಬೇಕಾಗಿತ್ತು, ನಮ್ಮ ವೀಸಾಗಳ ಸ್ಥಿತಿಯನ್ನು ವಿಚಾರಿಸಲು. ವಿಯೆನ್ನಾ ಹೇಗೆ ಹಿಟ್ಲರನ ಆಳ್ವಿಕೆಗೆ ಸ್ಪಂದಿಸುತ್ತಿದೆ ಎಂಬುದನ್ನು ತಿಳಿಯಲು ಕಾತರಳಾಗಿದ್ದೆ. ಒಮ್ಮೆ ನಾನು ನನ್ನ ನಿಜವಾದ ಗುರುತನ್ನು ಬಚ್ಚಿಡಲು ನಾಜಿ ತರುಣರ ಸಮವಸ್ತ್ರ ಧರಿಸಿ ಯಹೂದಿಗಳು ಇರುವ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ನಾಜಿಗಳು ತಮಗೆ ಹೊಸದಾಗಿ ಒದಗಿದ ಶಕ್ತಿಯನ್ನು ಪ್ರದರ್ಶಿಸುತ್ತಿದ್ದರೆಂದು ಕೇಳಿದ್ದೆ.

ವಯಸ್ಸಾದ ಸಂಪ್ರದಾಯಸ್ಥ ಯಹೂದಿಗಳನ್ನು, ತರುಣ ದಾಳಿ ಪಡೆಯ ಸೈನಿಕರು ಸುತ್ತುವರಿದು ತಮ್ಮ ಹ್ಯಾಟ್‌ಗಳನ್ನು ತೆಗೆಯುವಂತೆ ಆದೇಶಿಸಿ ಅದರ ಬದಲು ನೀರು ತುಂಬಿದ ಬಕೆಟ್‌ಗಳನ್ನು ನೀಡಿದ್ದನ್ನು ನಾನೇ ಕಣ್ಣಾರೆ ನೋಡಿದೆ. ಆಗ ಅವರುಗಳಿಗೆ ಬಕೆಟ್‌ನಿಂದ ಒಂದು ತೊಟ್ಟು ನೀರು ಚೆಲ್ಲದಂತೆ, ವೃತ್ತಾಕಾರದಲ್ಲಿ ಓಡುವಂತೆ ಹೇಳಲಾಯಿತು. ಅವರು ಓಡಿದಂತೆ ನೀರು ಚೆಲ್ಲಿತು ಹಾಗೂ ಅವರುಗಳನ್ನು ಕರುಣೆಯಿಲ್ಲದೆ ಹೊಡೆಯಲಾಯಿತು. ಕೊನೆಗೆ ಅವರುಗಳು ಒಬ್ಬರಾದ ಮೇಲೆ ಒಬ್ಬರು ಕುಸಿದು ನೀರು ಮತ್ತು ಬೆವರಿನಿಂದ ಒದ್ದೆಯಾಗಿ ನೆಲದ ಮೇಲೆ ಬಿದ್ದರು. ಅವರಿಗೆ ಶಿಕ್ಷೆ ನೀಡಿದ ಆ ತರುಣರಿಗೆ ಆ ದೃಶ್ಯ ತಮಾಷೆಯಾಗಿ ಕಂಡು, ಅವರೆಲ್ಲಾ ಜೋರಾಗಿ ನಕ್ಕರು. ಇದನ್ನೆಲ್ಲಾ ನಾನು ಅಲುಗಾಡದೆ ನಿಂತು ನೋಡಿದೆ. ಅವರನ್ನು ನಡೆಸಿಕೊಂಡ ರೀತಿಯಿಂದ ನನಗೆ ಆದ ಬೇಸರ ತೋರಿಸಿದ್ದಿದ್ದರೆ, ಅದರಿಂದ ನನಗೇ ತೊಂದರೆಯಾಗುತ್ತಿತ್ತು. ಈ ತರುಣ ಗೂಂಡಾಗಳ

ಅಮಾನವೀಯ ವರ್ತನೆಯಿಂದ ನಾನು ಆಘಾತಗೊಂಡೆ ಹಾಗೂ ಆ ವಯಸ್ಸಾದ ಜನ ವಿರೋಧಿಸಲು ಪ್ರಯತ್ನಿಸದೆ ಇದ್ದುದಕ್ಕೆ ನಿರಾಶೆಯೂ ಆಯಿತು. ಆದರದು ವ್ಯರ್ಥವಾಗುತ್ತಿತ್ತು ಎಂದು ಗೊತ್ತಿದ್ದರೂ ಆಗ ನಾನು ಕಂಡದ್ದು– ಅವರ ಕಣ್ಣುಗಳಲ್ಲಿನ ಹೊಳಪು, ಅವರಲ್ಲಿ ಯಾರೂ ಓಡುವ ಹಾಸ್ಯಾಸ್ಪದ ಸನ್ನಿವೇಶದಿಂದ ವಿಚಲಿತ ರಾಗಿರಲಿಲ್ಲ; ಅವರೆಲ್ಲರೂ ತಮ್ಮ ಆತ್ಮಗೌರವ ಹಾಗೂ ಘನತೆಯನ್ನು ಉಳಿಸಿಕೊಂಡಿದ್ದರು. ಅವರಿಗೆ ಶಿಕ್ಷೆ ಕೊಟ್ಟವರ ಬಗ್ಗೆ ಅವರಿಗೆ ಅನುಕಂಪ ಇದ್ದಂತೆ ಅವರ ಮುಖದಲ್ಲಿ ಅಭಿವ್ಯಕ್ತಿಯಿತ್ತು; ಅವರನ್ನು ಅವರು ಕ್ಷಮಿಸಿದ್ದರು. ಕಾರಣ, ಅವರುಗಳು ಆಯ್ಕೆಯಾಗಿದ್ದ ಜನ ಹಾಗೂ ಅವರ ಸ್ಥೈರ್ಯವನ್ನು ಮುರಿಯಲು ಅವರಿಗೆ ಹೆಚ್ಚು ಕಾಲ ಬೇಕಾಗಿತ್ತು.

ನಾನು ಮುಂದೆ ನಡೆದಂತೆ, ಮತ್ತೊಂದು ಯಹೂದಿಗಳ ಗುಂಪನ್ನು ಕಂಡೆ. ಈ ಸಲ ಅದೇ ತರಹದ ಅಗೌರವಕ್ಕೆ ಪಾತ್ರರಾದವರು ಅದನ್ನರಗಿಸಿಕೊಂಡವರು. ಅವರು ಪ್ರತಿಕ್ರಿಯಿಸಿದ ರೀತಿಯಲ್ಲಿ ವ್ಯತ್ಯಾಸವನ್ನು ಕಂಡೆ. ಅವರು ಸಂಪೂರ್ಣವಾಗಿ ಸೋಲನ್ನುಂಡವರಂತೆ ಕಂಡರು; ಅವರಿಗೆ ಶಿಕ್ಷೆ ನೀಡಿದವರು ಅಲ್ಲಿಂದ ಅದೃಶ್ಯರಾದ ನಂತರವೂ, ಅವರು ಒಂದುಗೂಡಲಾರದೆ ಅಲ್ಲೇ ಬಿದ್ದಿದ್ದರು. ಯಹೂದಿ ಯಾಗಿರುವುದು ಎಂದರೆ ಏನೆಂದು ಮೊದಲ ಬಾರಿಗೆ ನಾನು ಕಂಡುಕೊಂಡೆ. ನಾವೇನಾದರೂ ಜೀವಂತವಾಗಿ ಇರಲು ಸಾಧ್ಯವಾದರೆ, ನಾನು ನನ್ನ ಮಕ್ಕಳಲ್ಲಿ ಸಕಾರಾತ್ಮಕ ಯಹೂದಿ ಅನನ್ಯತೆಯನ್ನು ತುಂಬಲು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿದೆ.

ನಾವು ವಿಯೆನ್ನಾದಲ್ಲಿದ್ದಾಗ ಅಪ್ಪನಿಂದ ಕ್ರಮವಾಗಿ ಪತ್ರಗಳು ಬರುತ್ತಿದ್ದವು. ನಮ್ಮ ಬಗ್ಗೆ ಎಷ್ಟೊಂದು ಚಿಂತೆಯಾಗಿದೆ ಎಂದು ಪದೇ ಪದೇ ಬರೆಯುತ್ತಿದ್ದರು. ಓಟ್ಟೊ ಕೂಡ ಪತ್ರ ಬರೆದು, ನಾವುಗಳು ಅವನೊಂದಿಗೆ ಸೇರಲು ಅವನು ನಡೆಸುತ್ತಿದ್ದ ಪ್ರಯತ್ನಗಳನ್ನು ವಿವರಿಸುತ್ತಿದ್ದ. ನಮ್ಮನ್ನು ಅಪ್ಪ ಮರೆತಿರಲಿಲ್ಲ ಎಂದು ತಿಳಿಯಲು ಹಾಗೂ ನಮಗೆ ಹೊರ ಜಗತ್ತಿನಲ್ಲಿ ಸಂಪರ್ಕಗಳಿತ್ತು ಎಂದು ತಿಳಿಯಲು ಸಹಕಾರಿಯಾಗಿತ್ತು. ಆದರೆ, ಅದು ನಮ್ಮ ತಕ್ಷಣದ ಸಮಸ್ಯೆಗಳಿಗೆ ಸಹಾಯ ಮಾಡಲಿಲ್ಲ. ಓಟ್ಟೊ ಲಂಡನ್ನಿಗೆ ಹೋದ ನಂತರ ಮಿಲನ್‌ನಲ್ಲಿರುವ ತನ್ನ ಗೆಳೆಯ ನೊಬ್ಬನಿಂದ ತಿಳಿದುಬಂದಂತೆ, ಇಟಲಿಗೆ ವಿಮಾನದಲ್ಲಿ J ಎಂಬ ಕೆಂಪು ಅಕ್ಷರವಿರುವ ಪಾಸ್‌ಪೋರ್ಟ್ ಹಿಡಿದು ಹೋಗಬಹುದು ಎಂದು ತಿಳಿಸಿದ್ದನು. ಮೊದಲ ಪುಟದಲ್ಲಿ J ಎಂದಿದ್ದರೆ, ಅದನ್ನು ಹೊಂದಿದವರು ಜ್ಯೂ ಅಥವಾ ಯಹೂದಿಗಳು ಎಂದರ್ಥವಿತ್ತು. ರೈಲ್ವೆ ನಿಲ್ದಾಣಗಳಂತೆ, ವಿಮಾನ ನಿಲ್ದಾಣಗಳೂ ಗಡಿ ನಿಲ್ದಾಣಗಳೆಂದು ಇಟಲಿ ಸರ್ಕಾರ ಯೋಜನೆ ಹಾಕಿರಲಿಲ್ಲ. ಅಂದರೆ ರೈಲಿನಲ್ಲಿ ಬರುವ ವಲಸಿಗರು ಇಟಲಿಯನ್ನು ಪ್ರವೇಶಿಸಲು ಆಸ್ಪದವಿರಲಿಲ್ಲ. ಆದರೆ, ವಿಮಾನದಲ್ಲಿ ಆಂತರಿಕ

ನಿಲ್ದಾಣವನ್ನು ಪ್ರವೇಶಿಸಿರುವವರು ಎಂದು ಪರಿಗಣಿಸಲಾಗುತ್ತಿತ್ತು ಹಾಗೂ ನಿರ್ಬಂಧವಿಲ್ಲದೆ ದೇಶದಲ್ಲುಳಿಯಲು ಅವಕಾಶ ನೀಡಲಾಗಿತ್ತು. ಕುರ್ಟ್‌ನನ್ನು ಹೊರ ಕಳಿಸಲು ಈ ಅವಕಾಶ ನಮಗೆ ಬೇಕಾಗಿತ್ತು. ಅಪ್ಪನ ಕೋರಿಕೆ ಮೇರೆಗೆ, ನಮ್ಮ ಯುಗೋಸ್ಲಾವಿಯಾದ ವೀಸಾ ಬಂದು ಅವನನ್ನು ಸೇರುವವರೆಗೆ ಅಮ್ಮ ಮತ್ತು ನಾನು ವಿಯೆನ್ನಾದಲ್ಲೇ ಕಾಯುತ್ತಾ ಇದ್ದೆವು.

ಮತ್ತೊಮ್ಮೆ ನಾನು ನಾಜಿ ತರುಣರ ಮೇಲಂಗಿಯನ್ನು ಧರಿಸಿ, CIT ಇಟ್ಯಾಲಿಯನ್ ಟ್ರಾವೆಲ್ ಏಜೆನ್ಸಿಗೆ ಹೊರಟೆ. ಕುರ್ಟ್‌ಗೊಂದು ವಿಮಾನದ ಟಿಕೆಟ್ ಅನ್ನು ತರುವ ಪ್ರಯತ್ನದಿಂದ. ಇತರರಿಗೂ ಅದೇ ರೀತಿಯ ವಿಚಾರಗಳಿದ್ದಿರಬಹುದೆಂದು ನಾನು ಕಂಡುಕೊಂಡೆ. ಕಾರಣ ಮೊದಲನೆಯ ಲಭ್ಯ ವಿಮಾನವಿದ್ದುದು ೧೯೩೮ರ ಜೂನ್ ೨೯ರಂದು, ಮೂರು ವಾರಗಳ ನಂತರ. ಮರು ಆಲೋಚಿಸದೆ ನಾನು ಹಣವನ್ನು ನೀಡಿದೆ. ಮತ್ತೊಮ್ಮೆ ನಾನು ನನ್ನ ನಿಗದಿಪಡಿಸಿದ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದಕ್ಕೆ ನನ್ನ ಬಗ್ಗೆ ನಾನೇ ಸಂತೋಷಪಟ್ಟುಕೊಂಡು, ಕುರ್ಟ್‌ಗೆ ಟಿಕೆಟ್ ಅನ್ನು ನೀಡಿದೆ. ಅವನಾದರೋ, ಅಷ್ಟು ದೀರ್ಘಕಾಲ ಏಕೆ ಕಾಯಬೇಕೆಂದು ಹಕ್ಕೊತ್ತಾಯ ಮಾಡಿದ? ನನಗೆ ಕೋಪ ಬಂತು, ಯಾರೂ ಸಹ ನಾನು ಮಾಡಿದ್ದನ್ನು ಹೊಗಳುವುದಿರಲಿ, ಇಷ್ಟಪಡಲೂ ಇಲ್ಲ. ಕೃತಜ್ಞತೆ ಅಥವಾ ಅಭಿನಂದನೆಗಳನ್ನು ಪಡೆಯುವ ಬದಲು ತನಗಾಗಿ ಅವನು ತೋರಿದ ಸ್ವಾರ್ಥವನ್ನು ನಾನು ಎದುರಿಸಬೇಕಾಯಿತು. ಕೊನೆಗೆ ಅವನ ನಿರ್ಗಮನದ ದಿನ ಬಂತು, ಅಮ್ಮನಂತೂ ಹತಾಶೆಯಿಂದ ಕಣ್ಣೀರಿಟ್ಟಳು. ಅಮ್ಮ ನಮ್ಮಲ್ಲಿ ಯಾರೊಬ್ಬರಿಗೂ ಮತ್ತೊಬ್ಬರಿಗಿಂತ ಹೆಚ್ಚು ಪುಷ್ಟೀಕರಿಸದಿದ್ದರೂ, ಕುರ್ಟ್‌ಗೆ ಅವಳ ಹೃದಯದಲ್ಲಿ ವಿಶೇಷ ಸ್ಥಾನವಿತ್ತೆಂದು ಅವಳು ನನ್ನ ಬಳಿ ಒಪ್ಪಿಕೊಂಡಿದ್ದಳು. ಇದಕ್ಕೆ ಕಾರಣವೆಂದರೆ, ಅವನು ಹುಟ್ಟಿದ್ದು, ಮೊದಲ ಮಹಾಯುದ್ಧದ ಕೆಲವೇ ದಿನಗಳ ನಂತರ, ಅನೇಕ ತಿಂಗಳುಗಳವರೆಗೆ ಅಪ್ಪನಿಂದ ಯಾವುದೇ ಸುದ್ದಿ ಇಲ್ಲದೇ ಇದ್ದಾಗ, ಹಾಗೂ ಅವಳು ತನ್ನ ಮಗುವನ್ನೆತ್ತಿಕೊಂಡು ಹೋಗುತ್ತಿದ್ದಾಗ ಅದು ಬದುಕಿದೆಯೋ ಇಲ್ಲವೋ ಎಂಬುದನ್ನು ಅರಿಯದೆ ಇದ್ದಾಗ, ಎಂದು ಅವಳು ವಿವರಿಸಿದ್ದಳು. ಆಗ ಯಾವುದೇ ಮುನ್ಸೂಚನೆಯಿಲ್ಲದೆ ಅಪ್ಪ ಕುರ್ಟ್ ಹುಟ್ಟುವ ಹೊತ್ತಿಗೆ ಸರಿಯಾಗಿ ಬಂದಿದ್ದರು. (ಯುದ್ಧದಲ್ಲಿ ಸೋಲಿನ ಛಾಯೆಯಲ್ಲಿ ಇಟಲಿಯಲ್ಲಿದ್ದಾಗ, ಸೈನ್ಯವನ್ನು ತೊರೆದು ಹೆಂಡತಿಯೊಡನೆ ಪುನ ರ್ಮಿಲನಕ್ಕಾಗಿ ಬಂದಿದ್ದರು) ಇದು, ಕುರ್ಟ್ ಸ್ವತಃ ತನ್ನ ಗಂಡ ತನ್ನ ಬಳಿ ಇರುವ ಹಾಗೆ ಮಾಡಿದ್ದಾನೆಂದು ಅಮ್ಮನಿಗೆ ಅನಿಸಿತ್ತು. ಆದ್ದರಿಂದ, ಅವನಿಗಾಗಿ ಅವಳಿಗೆ ವಿಶೇಷ ಮೋಹ.

ಕುರ್ಟ್ ಹೊರಡುವುದನ್ನು ನೋಡುವುದು ಅಮ್ಮನಿಗೆ ಆಘಾತವೇ ಸರಿ

ಎಂದು ನನಗೆ ಗೊತ್ತಿತ್ತು. ಮತ್ತೆ ಅವನನ್ನು ನೋಡುವುದಿಲ್ಲವೇನೋ ಎಂಬ ಭಯದಿಂದ. 'ನಾನು ಕುರ್ಟ್‌ನೊಂದಿಗೆ ವಿಮಾನ ನಿಲ್ದಾಣಕ್ಕೆ ಹೋಗಲು ಯೋಚಿಸಿದೆ ಹಾಗೂ ಅಮ್ಮ ಮನೆಯಲ್ಲೇ ಇರಲೆಂದು ಅನಿಸಿತ್ತು. ಆದರೆ, ಅವಳೂ ಬರುವುದಾಗಿ ಹಠ ಹಿಡಿದಳು. ನಾವು ಮೂವರೂ ವಿಮಾನ ನಿಲ್ದಾಣದ ಬಸ್‌ಸ್ಟೇಷನ್‌ಗೆ ಟ್ಯಾಕ್ಸಿಯಲ್ಲಿ ಹೋದೆವು. ಆದರೆ ನಾವು ಅಲ್ಲಿಗೆ ಹೋದಾಗ, ವಿಮಾನದ ಟಿಕೆಟ್ ಇದ್ದವರು ಮಾತ್ರ ಬಸ್‌ನಲ್ಲಿ ಹೋಗಲು ಸಾಧ್ಯ ಎಂದು ತಿಳಿಯಿತು. ಯಾವುದೂ ಮತ್ತೆ ಸರಿ ಹೋಗುವುದಿಲ್ಲವೇನೋ ಎಂದೆನಿಸಿತು. ಬಸ್ ನಿಲ್ಲುವ ಕಡೆಯೇ ನಾವು ಬೀಳ್ಕೊಡಿಗೆ ಸಲ್ಲಿಸೋಣ ಎಂದು ನಾನು ಸಲಹೆ ಮಾಡಿದೆ. ಆದರೆ ಕುರ್ಟ್‌ನನ್ನು ವಿಮಾನ ನಿಲ್ದಾಣದಲ್ಲೇ ಬೀಳ್ಕೊಡಬೇಕು ಎಂದು ಅಮ್ಮ ಹಠ ಹಿಡಿದಳು. ಅಮ್ಮ ವಿಚಲಿತ ಳಾದುದನ್ನು ಕಂಡು, ಹಾಗೂ ಅವಳಿಗೆ ಅದರ ಬಗ್ಗೆ ಹೆಚ್ಚು ಬೇಸರವಾಗದಂತೆ ನಾನು ಟ್ಯಾಕ್ಸಿಯೊಂದನ್ನು ತೆಗೆದುಕೊಂಡು ಕುರ್ಟ್ ಹೋಗುತ್ತಿದ್ದ ಬಸ್ಸನ್ನು ಹಿಂಬಾಲಿಸಿದೆವು. ರಸ್ತೆಯಲ್ಲಿ ನಿಧಾನವಾಗುತ್ತಿದ್ದುದರಿಂದ ಅದು ಅಷ್ಟೊಂದು ಸುಲಭವಾದುದಾಗಿರಲಿಲ್ಲ. ನಾನು ಅಮ್ಮನೊಡನೆ ಟ್ಯಾಕ್ಸಿಯ ಹಿಂಬದಿಯಲ್ಲಿ ಕುಳಿತೆ. ಅವಳ ಕೈಯನ್ನು ಹಿಡಿದು, ಅವಳನ್ನು ಸಮಾಧಾನಪಡಿಸುತ್ತಾ, ನಾವು ಕಡೆಗೆ ವಿಮಾನ ನಿಲ್ದಾಣವನ್ನು ತಲುಪಿದಗ ಕುರ್ಟ್ ಟರ್ಮಿನಲ್ ಕಟ್ಟಡದಿಂದ ವಿಮಾನದ ಕಡೆ ಹೋಗುತ್ತಿರುವ ಹೊತ್ತಿಗೆ ಸರಿಯಾಗಿ ಹೋಗಿ ಅವನಿಗೆ ಕೈ ಬೀಸಿದೆವು. ನಂತರ ನಾವು ಮನೆ ಕಡೆಗೆ ದೀರ್ಘ ಪ್ರಯಾಣ ಬೆಳೆಸಿದೆವು. ಏನನ್ನೂ ಮಾತಾಡದ ಅಮ್ಮನಿಗಂತೂ ಸಿಕ್ಕಾಪಟ್ಟೆ ಆಘಾತವಾಗಿತ್ತೆಂದು ನನಗೆ ಗೊತ್ತಾಯಿತು. ಮನೆಗೆ ತಲುಪಿದೊಡನೆಯೇ ಅವನ ಫೋನ್ ಕರೆಗಾಗಿ ಆತಂಕದಿಂದ ಕಾದು ಕುಳಿತಳು. ಅವನು ಹೋಗಿ ತಲುಪಿದ್ದಕ್ಕಾಗಿ ಫೋನ್ ಕರೆ ಬಂದಾಗ, ಅದೊಂದು ದೊಡ್ಡ ಸಮಾಧಾನದ ಸಂಗತಿಯಾಗಿತ್ತು.

ನಾನೀಗ ಅಮ್ಮ ಮತ್ತು ನನ್ನ ಬಗ್ಗೆ ಮಾತ್ರ ಚಿಂತಿಸಬೇಕಾಗಿತ್ತು. ಯುಗೋಸ್ಲಾವಿಯಾದ ಕಾನ್ಸಲ್ ಕಛೇರಿಗೆ ಮೇಲಿಂದ ಮೇಲೆ ಭೇಟಿ ನೀಡಬೇಕಾಯಿತು. ಪ್ರತಿ ಸಾರಿಯೂ ನಮ್ಮ ವೀಸಾಗಳು ಇಷ್ಟರಲ್ಲೇ ದೊರೆಯುವುದೆಂದು ಹೇಳಿ ಸಾಗ್ಹಾಕುತ್ತಿದ್ದರು. ಕೊನೆಗೆ ಕುರ್ಟ್‌ನ ನಿರ್ಗಮನದ ಎರಡು ವಾರಗಳ ನಂತರ ನಾನು ವೀಸಾಗಳನ್ನು ಪಡೆದುಕೊಂಡೆ. ಈ ಸಂತೋಷದ ಸುದ್ದಿಯನ್ನು ತಿಳಿಸಲು ಫ್ರೆಡ್ಡಿ ಬಳಿ ಓಡಿಹೋದೆ. ವಾಸ್ತವವಾಗಿ ಅವನಿಗೇನೊ ಖುಷಿಯಾಯಿತು; ಆದರೆ ತನ್ನನ್ನು ಬಿಟ್ಟು, ದೂರ ಹೋಗುತ್ತಿರುವುದರ ಬಗ್ಗೆ ಅವನಿಗೆ ಚಿಂತೆ ಹೆಚ್ಚಾಯಿತು. ಅವನ ತಂದೆ–ತಾಯಿಗಳು ಅವನನ್ನು ಇಂಗ್ಲೆಂಡ್‌ಗೆ ಕಳುಹಿಸಲು ಪ್ರಯತ್ನಿಸುತ್ತಿದ್ದರು; ಅವರು ಯಶಸ್ವಿಯಾದರೋ ಎಂದು ನಾನು ಕಂಡುಕೊಳ್ಳಲಿಲ್ಲ.

ಫ್ರೆಡ್ಡಿ ಮನೆಯಿಂದ, ಸಂತೋಷದ ಸುದ್ದಿಯೊಡನೆ ಮನೆಗೆ ಓಡಿದೆ. ಅಮ್ಮನಿಗೆ

ಖುಷಿಯಾದರೂ, ಮರಳಿ ಮ್ಲಾನವದನಳಾದಳು. ಈ ವಿಷಯ ಅವಳನ್ನು ಹತಾಶೆ ಸ್ಥಿತಿಯಿಂದ ಮೇಲೆತ್ತಬಹುದೆಂದು ನಾನು ಭಾವಿಸಿದ್ದೆ. ಆದರೆ ಅದು ಯಾವುದೇ ಪರಿಣಾಮ ಬೀರಿದಂತೆ ಕಾಣಲಿಲ್ಲ. ಅವಳ ಒಂದೇ ಪ್ರತಿಕ್ರಿಯೆಯೆಂದರೆ ಎಲ್ಲ ಸಾಮಾನು ಸರಂಜಾಮುಗಳನ್ನು, ಅನೇಕ ವರ್ಷಗಳಿಂದ ಶೇಖರಿಸಿಟ್ಟದ್ದು ಸಾಗಿಸಬೇಕಾಗುವುದೆಲ್ಲಾ ಎಂಬುದು. ನಾವು ನಮ್ಮ ಬಟ್ಟೆಬರೆಗಳು ಹಾಗೂ ಕೆಲವೊಂದು ಇತರ ವಸ್ತುಗಳನ್ನು ಮಾತ್ರ ಸೂಟ್‌ಕೇಸ್‌ಗಳಲ್ಲಿ ಹಾಕಿಕೊಂಡು ಹೊರಡುವುದೆಂದು ನಾನು ಆಲೋಚಿಸಿದ್ದೆ. ಆದರೆ, ಈಗ ಮರಮುಟ್ಟುಗಳು ಹಾಗೂ ಇತರ ವಸ್ತುಗಳನ್ನು ಒಯ್ಯಲು ದೊಡ್ಡ ಧಾರಕಕ್ಕೆ ಹಾಕಿ ಕಂಪೆನಿಯವರಿಗೇ ಗೊತ್ತುಮಾಡಬೇಕಾಗಿತ್ತು. ಅಮ್ಮ ಮತ್ತು ನಾನು ಸಣ್ಣ ಪೆಟ್ಟಿಗೆಗಳಲ್ಲಿ ತುಂಬಿದೆವು. ಯಾವುದನ್ನು ಒಯ್ಯಬೇಕು, ಯಾವುದು ಬೇಡ ಎಂದು ನಾವು ವಿಂಗಡಿಸುತ್ತಿದ್ದಾಗ, ವಿಲ್ಲಿಯ ಪ್ರೇಮ ಪತ್ರಗಳನ್ನೊಳಗೊಂಡ ಒಂದು ಚಿಕ್ಕ ಪ್ಯಾಕೆಟ್ ಸಿಕ್ಕಿತು. ಅವನನ್ನು ಕರೆದುಕೊಂಡು ಹೋಗಿದ್ದುದರಿಂದ, ಅವನ ಬಗ್ಗೆ ಯಾವ ಸುದ್ದಿಯೂ ಇರಲಿಲ್ಲ. ಈ ವಿಷಯವನ್ನು ಹೇಳಲಾಗದಿದ್ದರೂ, ಅವನನ್ನು ಕೊಲೆ ಮಾಡಿರಬಹುದೆಂದು ನನ್ನ ಅಂತರಾಳದಲ್ಲಿ ನಾನು ಒಪ್ಪಿಕೊಂಡಿದ್ದೆ. ನಾನು ನನ್ನ ಜೀವನ ಏನಾಗುತ್ತಿತ್ತು ಎಂದು ಮನಃಪಟಲದಲ್ಲಿ ಕಂಡಾಗ, ನಾನು ಗಾಬರಿಯಿಂದ ನಿಂತೆ. ಬಿಕ್ಕಿಬಿಕ್ಕಿ ಅಳಲು ಆರಂಭಿಸಿದೆ. ಅವುಗಳಿಂದೇನೂ ಪ್ರಯೋಜನವಿಲ್ಲ ಈ ಹೊಸ ಜೀವನದಲ್ಲಿ ಎಂದು ಗೊತ್ತಿದ್ದರೂ, ಅವುಗಳನ್ನೆಲ್ಲಾ ಒಂದೊಂದಾಗಿ ಬಿಸಾಕಿದೆ. ಅದರೊಂದಿಗೆ ನನ್ನ ಸ್ವಲ್ಪ ಭಾಗವೂ ಪ್ರತಿಯೊಂದು ಪತ್ರದ ಜೊತೆ ಹೋಗಲಿ ಎಂದು, ಕೊನೆಯ ಪಕ್ಷ, ನಾಜಿಗಳ ಕೈಗೆ ಅವುಗಳು ಸಿಗುವುದಿಲ್ಲ. ಇನ್ನಷ್ಟು ವಿಂಗಡಿಸಿದಾಗ, ಅಮ್ಮನಿಗೆ ಕಂಡದ್ದು ಅಪ್ಪನಿಗೆ ಪ್ರಥಮ ಮಹಾಯುದ್ಧದಲ್ಲಿ ಮಾಡಿದ ಸೇವೆಗಾಗಿ ದೊರೆತ ಮೂರು ಪದಕಗಳು, ನಾವು ತಪ್ಪಿಸಿಕೊಂಡು ಬಲವಂತವಾಗಿ ಹೋಗುತ್ತಿದ್ದುದು ವ್ಯಂಗ್ಯವಾಗಿ ಕಂಡಿತು. ನಮ್ಮ ಪೆಟ್ಟಿಗೆಗಳನ್ನು ತೆರೆಯಬಹುದಾದ ಯಾವುದೇ ನಾಜಿಗೆ ಅಪ್ಪ ಓರ್ವ ಆಸ್ಟ್ರಿಯಾದ ಗುರುತಿಸಲ್ಪಟ್ಟ ಪ್ರಜೆ ಎಂಬುದನ್ನು ತೋರಿಸಲು ಅಮ್ಮ ಪದಕಗಳನ್ನು ದೊಡ್ಡ ಸೂಟ್‌ಕೇಸಿನ ಮುಚ್ಚಳದ ಅಡಿಯಲ್ಲಿಡಲು ನಿರ್ಧರಿಸಿದಳು. ಆದರೆ, ಅಂತಹವನಿಗೆ ಈಗ ಮೂಲ ಮಾನವೀಯ ಹಕ್ಕು ಆದ ಪೌರತ್ವವನ್ನು ನಿರಾಕರಿಸಲ್ಪಟ್ಟಿತು.

ಅಮ್ಮನಿಗೆ ಮೂರು ಚಿನ್ನದ ನಾಣ್ಯಗಳು ಸಿಕ್ಕಿತು, ವಿಂಗಡಣೆಯಲ್ಲಿ. ನಮಗೆ ಅವುಗಳನ್ನು ತೋರಿಸಿದ ಹಾಗೆ ನೆನಪು, ದೊಡ್ಡವರಾದ ಮೇಲೆ ಒಬ್ಬೊಬ್ಬರಿಗೂ ಒಂದೊಂದು ಎಂದು ಹೇಳಿದ್ದಳು. ಅವುಗಳ ಮೇಲೆ ಅವಳಿಗೆ ಎಷ್ಟೊಂದು ಪ್ರೀತಿಯೆಂದರೆ, ಅವುಗಳನ್ನು ಹಾಗೇ ಬಿಡಲು ಅವಳಿಗೆ ಮನಸ್ಸಿರಲಿಲ್ಲ. ಅವುಗಳೇನಾದರೂ ಸಿಕ್ಕಿದ್ದಿದ್ದರೆ ಅವುಗಳನ್ನು ಮುಟ್ಟುಗೋಲು ಹಾಕುತ್ತಿದ್ದರೇನೋ.

ಅದಕ್ಕೇ ಅದನ್ನು ನಮ್ಮ ಪ್ರಯಾಣಕ್ಕಾಗಿ ಸಿದ್ಧಪಡಿಸಿದ್ದ ಬ್ರೆಡ್ ಚೂರುಗಳ ಕೆಳಗೆ ಬಚ್ಚಿಟ್ಟೆವು. ಗಾರ್ಡ್ ಏನಾದರೂ ಸಂಶಯಗೊಂಡು ತನಿಖೆ ಮಾಡಿದರೆ, ಆ ನಾಣ್ಯಗಳನ್ನು ನುಂಗಿದರಾಯಿತು ಎಂದುಕೊಂಡೆವು.

೧೯೩೮ರ ಜುಲೈ ೨೩ರಂದು ಕಾರ್ಲ್‌ಮಾರ್ಕ್ಸ್ ಹಾಫ್‌ನಿಂದ ಹೊರಟೆವು. ನಾವು ಯಾರೂ, ನಾವು ಬಿಟ್ಟುಹೋಗುತ್ತಿದ್ದ ಮನೆ ಕಡೆ ನೋಡಿ ಒಂದು ತೊಟ್ಟು ಕಣ್ಣೀರು ಹಾಕಲಿಲ್ಲ. ಕಾರಣ ಇತ್ತೀಚಿನ ಕೆಲವು ತಿಂಗಳುಗಳಲ್ಲಿ, ಅದು ಮನೆಯಾಗಿರಲಿಲ್ಲ. ನಾವಿಬ್ಬರೂ ಬಿಡುಗಡೆಯನ್ನು ನಿರೀಕ್ಷಿಸುತ್ತಿದ್ದ ಜೈಲಿನಂತಿತ್ತು. ಕೆಂಪು ಗುಲಾಬಿಗಳ ಗೊಂಚಲು ಹಾಗೂ ತನ್ನ ಫೋಟೋವುಳ್ಳ ಕಾರ್ಡ್ ಒಂದನ್ನು ಹಿಡಿದು ಫ್ರೆಡ್ಡಿ ರೈಲ್ವೆ ನಿಲ್ದಾಣಕ್ಕೆ ಬಂದನು. ನಾನು ಅವನನ್ನು ಹಾಗೂ ಅವನ ಪ್ರೀತಿಯನ್ನು ನೆನಪಿಸಿಕೊಳ್ಳುತಿರಲಿ ಎಂದು, ಒಂದು ಕೊನೆಯ ಮುತ್ತು ಹಾಗೂ ಆಲಿಂಗನ ಅವನಿಂದಾದ ಬಳಿಕ, ನಾನು ಅಮ್ಮನೊಂದಿಗೆ ರೈಲು ಹತ್ತಿದೆ. ನಾವು ಪಕ್ಕದಲ್ಲೇ ಮೌನವಾಗಿ ಕುಳಿತೆವು, ಒಂದು ಮಾತನ್ನು ಆಡಲು ಭಯದಿಂದ ರೈಲು ಆಸ್ಟ್ರಿಯಾದ ಹಳ್ಳಿಗಾಡಿನ ಮೂಲಕ ಹಾದುಹೋದಾಗ, ನಮ್ಮ ಅಮೂಲ್ಯವಾದ ಊಟದ ಪ್ಯಾಕೆಟ್ ಅನ್ನು ಸುರಕ್ಷಿತವಾಗಿ ನಮ್ಮಲ್ಲಿರಿಸಿಕೊಂಡಿದ್ದೆವು. ಅದರಲ್ಲಿ ಬಚ್ಚಿಟ್ಟಿದ್ದ ನಾಣ್ಯಗಳನ್ನು ಯಾರಾದರೂ ನೋಡಿಬಿಡುತ್ತಾರೋ ಎಂಬ ಭಯದಿಂದ, ದುರದೃಷ್ಟವಶಾತ್, ನಾವು ರೈಲಿನ ಮುಂಭಾಗದಲ್ಲಿ ಕುಳಿತಿದ್ದೆವು, ಗಡಿಯ ಕಾವಲುಗಾರರು ಹಿಂದಿನಿಂದ ಹತ್ತಿದರು.

ಯುಗೋಸ್ಲಾವಿಯಾದ ಗಡಿಯ ನಂತರದ ಮೊದಲ ನಿಲ್ದಾಣದಲ್ಲಿ ಯಾವುದೇ ಕಾವಲುಗಾರರನ್ನು ಕಾಣುವ ಮೊದಲೇ ನಾವು ಇಳಿದೆವು. ನಮ್ಮ ಪ್ಯಾಕೆಟ್‌ಗಳನ್ನು ಹಿಡಿದುಕೊಂಡು, ಅಪ್ಪ ಹಾಗೂ ವಿಲ್ಲಿ ಚಿಕ್ಕಪ್ಪನ ತೋಳುಗಳಲ್ಲಿ ಬಿದ್ದೆವು. ನಮ್ಮ ಸಮಾಧಾನಕ್ಕೆ ಕಣ್ಣೀರು ಧಾರಾಕಾರವಾಗಿ ಸುರಿಯಿತು. ನಾವು ತಬ್ಬಿಕೊಳ್ಳದೆ ಇರಲಿಲ್ಲ. ನಾವು ತಪ್ಪಿಸಿಕೊಂಡಿದ್ದೇವೆ ಎಂಬುದನ್ನು ನಂಬಲಾಗಲಿಲ್ಲ. ವಿಲ್ಲಿ ಚಿಕ್ಕಪ್ಪ ತನ್ನ ಕಾರ್‌ನಲ್ಲಿ ನಮ್ಮನ್ನು ಕೂರಿಸಿಕೊಂಡು, ಹತ್ತಿರದ ಮರಿಬೊರ್ ಊರಿನ ತನ್ನ ಮನೆಗೆ ಕರೆದೊಯ್ದನು.

ನಾವು ರಾತ್ರಿ ತಡವಾಗಿ ತಲುಪಿದೆವು. ಹಾಗಾಗಿ ತಕ್ಷಣ ನಮ್ಮ ನಮ್ಮ ಕೊಠಡಿಗಳಿಗೆ ಕಳುಹಿಸಲಾಯಿತು. ಇದ್ದಕ್ಕಿದ್ದಂತೆ ನಾನು ಒಂಟಿಯಾದೆ. ನಿದ್ರಿಸಲು ಪ್ರಯತ್ನಿಸಿದೆ. ಆದರೆ ತಿಂಗಳುಗಳ ಕುಟುಂಬದ ಹೊರೆಯಿಂದ ಎಷ್ಟು ಆಯಾಸವಾಗಿ ತ್ತೆಂದರೆ, ಏನು ಮಾಡಬೇಕೆಂಬುದೇ ನನಗೆ ತೋಚಲಿಲ್ಲ. ವಿಯೆನ್ನಾದಿಂದ ಹೊರ ಬಂದ ಮೇಲೆ, ನನ್ನ ಪ್ರಯತ್ನಗಳಿಗಾಗಿ ನನಗೆ ಅಭೂತಪೂರ್ವ ಸ್ವಾಗತ ದೊರೆಯಬಹುದೆಂದು ಯೋಚಿಸಿದ್ದೆ. ಅಪ್ಪ ನನ್ನನ್ನು ಅಭಿನಂದಿಸಬೇಕು, ದೊಡ್ಡವಳೆಂಬುದಾಗಿ ನನ್ನನ್ನು ಪರಿಗಣಿಸಬೇಕೆಂದು ಹತಾಶಳಾಗಿ ಬಯಸಿದ್ದೆ.

ಆದರೆ, ತಮ್ಮ ಪುನರ್ಮಿಲನದ ಸಂತೋಷದಲ್ಲಿ, ನನ್ನ ತಂದೆತಾಯಿಯರು ನನ್ನ ಅವಶ್ಯಕತೆಗಳ ಬಗ್ಗೆ ಮರೆತಿದ್ದರು. ಮುಂದಿನ ದಿನಗಳಲ್ಲಿ, ನಾನು ಅಪ್ಪನ ಬಗ್ಗೆ ಸಂಶಯುಪಟ್ಟೆ. ಓರ್ವ ನಿಜವಾದ ದರ್ಪಿಷ್ಟನಾಗಿ, ತನ್ನ ತಾತ್ಕಾಲಿಕ ನಿಯಂತ್ರಣರಾಹಿತ್ಯವನ್ನು ಇಷ್ಟಪಡದೆ ಇರಬಹುದು ಹಾಗೂ ತನ್ನ ಪ್ರೀತಿಯ ಈ ಬೊಂಬೆ ತನ್ನ ಸಹಾಯವಿಲ್ಲದೆಯೇ ದೊಡ್ಡ ಪಲಾಯನವನ್ನು ಯೋಜಿಸಿದಳಲ್ಲಾ ಎಂಬುದನ್ನು ನಂಬಲು ಸಾಧ್ಯವಾಗದೆ ಇರಬಹುದೆಂದು, ಹಿಂದಿರುಗಿ ನೋಡಿದಾಗ, ಈ ಪುಟ್ಟ ಹುಡುಗಿಯನ್ನು ಬಿಟ್ಟಿರಲು ಹಾಗೂ ವಿಶ್ವಾಸಯುಕ್ತ ಹಾಗೂ ಸ್ವಯಂಪೂರ್ಣ ತರುಣ ಹೆಂಗಸಿನೊಂದಿಗೆ ಮತ್ತೆ ಸೇರುವ ಹಾಗಾಯಿತಲ್ಲಾ ಎಂದು ಕಷ್ಟವಾಗಿರಬಹುದೆಂದು ನನಗರಿವಾಯಿತು.

ನಾನು ಹಾಸಿಗೆಯಲ್ಲಿ ಮಲಗಿ ಅತ್ತಿಂದಿತ್ತ ಹೊರಳಾಡುವಾಗ, ಪಕ್ಕದಲ್ಲಿ ಯಾರಾರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು ಅನಿಸುತ್ತಿದ್ದಾಗ, ಆ ಬೆಳದಿಂಗಳಲ್ಲಿ ಫ್ರೆಡ್ಡಿ ಕೊಟ್ಟಿದ್ದ ಹೂಗಳನ್ನು ನೋಡಿದೆ. ಅವುಗಳಾಗಲೇ ಬಾಡುತ್ತಿತ್ತು. ನನಗಂತೂ ಅಳುವೇ ಬಂತು. ಬಿಸಿಯಾದ ದಪ್ಪ ಹನಿ ಕಣ್ಣೀರು ದಿಂಬನ್ನು ಒದ್ದೆಮಾಡುವಷ್ಟು, ನಾನು ನನ್ನ ಒಂದೇ ಒಂದು ಸಾಂತ್ವನ ಶಕ್ತಿಯನ್ನು ಬಿಟ್ಟು ಬಂದಿದ್ದೆ. ಮತ್ತೆ ನನಗ್ಯಾರೂ ಇರಲಿಲ್ಲ. ನಾನು ನನ್ನ ಸೋದರರನ್ನೂ, ನನ್ನ ಮನೆ, ನನ್ನ ಮಿತ್ರರು, ನನ್ನ ಶಾಲೆ, ನನ್ನ ಭವಿಷ್ಯ ಎಲ್ಲವನ್ನೂ ಕಳೆದುಕೊಂಡಿದ್ದೆ. ಕೊನೆಗೆ, ಬೆಳಗಿನ ಜಾವದಲ್ಲಿ ನಾನು ನಿದ್ರೆಹೋದೆ, ಆಯಾಸಗೊಂಡು ಹತಾಶೆಯಿಂದ ನನ್ನ ಜೀವನ ನನ್ನನ್ನು ಎತ್ತ ಕೊಂಡೊಯ್ಯುತ್ತದೆ ಎಂಬುದರ ಬಗ್ಗೆ ಆಶ್ಚರ್ಯಪಡುತ್ತಾ.

* * * *

# ೪. ಆಶ್ರಯವನ್ನರಸುತ್ತಾ...

ಮಾರನೆಯ ದಿನ ನಾನೆದ್ದೆ, ಭಯಗೊಂಡು, ಗೊಂದಲಕ್ಕೀಡಾಗಿ, ಬೆಳಿಗ್ಗೆಯ ಉಪಾಹಾರದ ಹೊತ್ತಿಗೆ ನಾನು ಭೇಟಿಯಾಗಿದ್ದು, ಹೊಸ ಅಮ್ಮನನ್ನು; ಬೆಳಗಾಗುವ ಹೊತ್ತಿಗೆ ಅವಳು ತನ್ನ ಸಮಚಿತ್ತವನ್ನು ಮತ್ತೆ ಪಡೆದುಕೊಂಡಂತೆ ಕಾಣಿಸಿತು. ಆದರೆ, ನಾನು ಮರಳಿ ಹಿಂದಕ್ಕೆ ಚಲಿಸದಂತಾಯಿತು. ನನ್ನ ಕೋಪೋದ್ರೇಕದಿಂದ, ಮೌನವಾಗಿ ಹಿಂದೆ ಸರಿದ ಅವಧಿಗೆ. ನನ್ನ ತಾಯಿ ತಂದೆಯರು, ನಾನು ಅನುಭವಿಸುತ್ತಿದ್ದುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು ಹಾಗೂ ನನ್ನ ನಡವಳಿಕೆಯು ನಾನು, ವಿಯೆನ್ನಾದಲ್ಲಿ ನೋಡಿದ್ದ ಹಾಗೂ ಅನುಭವಿಸಿದ್ದರ ಪ್ರತಿಫಲವೆಂದು ಭಾವಿಸಿದರು. ಪ್ರತಿ ಸಾರಿಯೂ ನಾನು ಹಿಟ್ಲರನ ಧ್ವನಿ ಅಥವಾ ಸುದ್ದಿ ಆಸ್ಟ್ರಿಯಾದಿಂದ ಕೇಳಿತೆಂದು ಹೆದರಿ ಕೂಗಿಕೊಂಡಾಗ, ಅದನ್ನು ನಾನೇ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಆದರೆ, ನನ್ನ ನಡವಳಿಕೆಯ ಮೇಲೆ ನನಗೆ ನಿಯಂತ್ರಣವಿರಲಿಲ್ಲ. ವಿಯೆನ್ನಾಗೋಸ್ಕರ ನಾನು ಗೋಳಿಡುತ್ತಿದ್ದೆ. ಅಲ್ಲದೆ, ಒಂದು ರೀತಿಯ ವಿಚಿತ್ರ ಬಯಕೆ ಉಂಟಾಗಿತ್ತು. ಯಹೂದಿ ವಿರೋಧಿ ಹಾಗೂ ದಮನಕಾರಿ ಹಿಟ್ಲರನ ಆಳ್ವಿಕೆಗೆ ಮರಳಿ ಹೋಗಲು. ನನ್ನ ಅಭಿಪ್ರಾಯವನ್ನಾಗಲಿ ಅಥವಾ ಸಹಾಯವನ್ನಾಗಲಿ ಯಾರೂ ಕೇಳುತ್ತಿಲ್ಲವೆಂಬುದಕ್ಕೆ ನನ್ನ ವಿರೋಧವಿತ್ತು. ನಾನು ತೀರ್ಮಾನ ಕೈಗೊಳ್ಳುವವಳೂ ಆಗಿರಲಿಲ್ಲ ಹಾಗೂ ನನ್ನನ್ನು ಇನ್ನೂ ಮಗು ಎಂದು ಪರಿಗಣಿಸುತ್ತಿದ್ದರು. ಮಗುವಿನಂತಾಗಿರದಿದ್ದರೂ, ನಾನು ಮತ್ತೊಮ್ಮೆ ಅಪ್ಪನ ಪ್ರೀತಿಪಾತ್ರ ಚಿಕ್ಕ ಮಗಳಾಗಿದ್ದೆನೇ ಹೊರತು, ನಾನಾಗಬೇಕೆಂದುಕೊಂಡಂತೆ ಸಲಹೆಗಾರ್ತಿ ಅಥವಾ ನಂಬಿಕಸ್ಥ ಗೆಳತಿಯಾಗಿರಲಿಲ್ಲ. ಅಪ್ಪ ತನ್ನ ತಾಳ್ಮೆ ಕಳೆದುಕೊಂಡು, ಕೂಗಾಡಿದಾಗ, ಅಮ್ಮ ನನ್ನೊಡನೆ ಮೆಲ್ಲಗೆ ಸಮಾಧಾನ ಮಾಡುತ್ತಿದ್ದಳು. ಯಾವುದೂ ಸರಿಯಾದ ಪರಿಣಾಮ ಬೀರಲಿಲ್ಲ.

ನಾಜಿ ಆಸ್ಟ್ರಿಯಾದಿಂದ ನಾವು ಕೈಗೊಂಡ ಪಲಾಯನ ಮಧುಚಂದ್ರ ಕೆಲವು ವಾರಗಳಿಗಿಂತ ಹೆಚ್ಚಾಗಿರಲಿಲ್ಲ. ವಿಲ್ಲಿ ಚಿಕ್ಕಪ್ಪನೊಡನೆ ಸ್ವಲ್ಪ ಕಾಲವಿದ್ದ ನಂತರ, ಅಪ್ಪ ತನ್ನ ಬಟ್ಟೆ ಮಾರುತ್ತಾ ತನ್ನ ಓಡಾಟವನ್ನು ಮುಂದುವರಿಸಿದರು. ನಾನು ಮತ್ತು ಅಮ್ಮ, ನಮ್ಮಮ್ಮನ ತಂಗಿ ಜೂಲಾ ಚಿಕ್ಕಮ್ಮ ಇದ್ದ ಜಗ್ರೇಬ್‌ನಲ್ಲಿ ತಂಗಿದೆವು. ಅಲ್ಲಿ ನನ್ನ ಚಿಕ್ಕಮ್ಮನ ಕುಟುಂಬದ ಭಾಗವಾಗಿ ಎಂದಿನಂತೆ ಜೀವನವನ್ನು ನಡೆಸುತ್ತಿದ್ದೆವು.

ನಾನು ನನ್ನ ಚಿಕ್ಕಮ್ಮನ ಮಗ ಗೆರ್ಟ್ ಹಾಗೂ ಅವನ ಗೆಳೆಯರ ಗುಂಪಿಗೆ ತೀರಾ ಹತ್ತಿರದವಳಾದೆ.

ಆ ಹೊತ್ತಿಗೆ ಅಪ್ಪ ಅನೇಕ ವರ್ಷಗಳವರೆಗೆ ವಾಣಿಜ್ಯ ಪ್ರಯಾಣಿಕರಾಗಿದ್ದರು, ವಿಲ್ಲಿ ಚಿಕ್ಕಪ್ಪನ ಕಂಪೆನಿಯನ್ನು ಖರೀದಿಸಿದ್ದ ಯುಗೋಸ್ಲಾವಿಯಾದ ಸಂಸ್ಥೆಯನ್ನು ಪ್ರತಿನಿಧಿಸುತ್ತಾ, ಯುಗೋಸ್ಲಾವಿಯಾದ ಕಾರ್ಮಿಕ ನೀತಿಗನುಗುಣವಾಗಿ ಅವರ ಮೇಲಧಿಕಾರಿಗಳು ಅವರಿಗೆ ಒಂದು ಪ್ರಮಾಣಪತ್ರವನ್ನು ನೀಡಿದ್ದರು. ಜೆಕೋಸ್ಲೋವಾಕಿಯಾದ ಉದ್ಯಮಕ್ಕಾಗಿ ಕೆಲಸ ಮಾಡುತ್ತಿದ್ದಾರೆಂದು, ಅವರು ಕಾಲ ಕಾಲಕ್ಕೆ ದೇಶದಿಂದಾಚೆಗೆ ಹೋಗಿ, ಆಸ್ಟ್ರಿಯಾಕ್ಕೆ ಹಿಂತಿರುಗುತ್ತಿದ್ದಾಗ, ಅವರಿಗೆ ಯಾವ ಸಮಸ್ಯೆಗಳೂ ಇರಲಿಲ್ಲ. ಆದರೆ ಆಸ್ಟ್ರಿಯಾವನ್ನು ನಾಜಿ ಆಕ್ರಮಣವಾದ ನಂತರ ಅವರು ಆಸ್ಟ್ರಿಯಾಕ್ಕೆ ಸುರಕ್ಷಿತವಾಗಿ ಹಿಂತಿರುಗಲಾಗಿರಲಿಲ್ಲ. ಹಾಗಾಗಿ ಯುಗೋಸ್ಲಾವಿಯಾದ ಪೊಲೀಸ್ ಅಧಿಕಾರಿಗಳಿಗೆ ವಿಷಯ ತಿಳಿಸದಂತೆ ನಾವು ಅಧಿಕ ಮೊತ್ತದ ಲಂಚವನ್ನು ನೀಡಬೇಕಾಗಿತ್ತು. ಕೊನೆಗೆ ಯುಗೋಸ್ಲಾವಿಯಾದಲ್ಲಿ ಕಾನೂನುಬಾಹಿರವಾಗಿ ಕೆಲಸ ಮಾಡಿದ್ದಕ್ಕಾಗಿ ಬಂಧಿಸಲಾಯಿತು ಹಾಗೂ ಆಸ್ಟ್ರಿಯಾಕ್ಕೆ ವಾಪಸ್ ಕಳುಹಿಸುವುದಾಗಿ ಬೆದರಿಕೆ ಒಡ್ಡಲಾಯಿತು. ಅವರ ಬಂಧನದ ವಿಷಯವನ್ನು ಫೋನ್ ಮೂಲಕ ತಿಳಿಸಲಾಯಿತು. ಹಾಗೂ ಅಪ್ಪನನ್ನು ಬಂಧಿಸಿದ ಊರಿನ ಯಹೂದಿ ಸಮುದಾಯದವರು ಜಾಮೀನು ನೀಡಿದ್ದಕ್ಕೆ, ಅವರನ್ನು ಸ್ಥಳೀಯ ಹೋಟೆಲ್‌ನಲ್ಲಿ ಪೊಲೀಸ್ ರಕ್ಷಣೆಯಲ್ಲಿ ಇಡಲಾಗಿದೆ ಎಂದು ನಮಗೆ ತಿಳಿಸಲಾಯಿತು. ಅದೇ ಸಮಯಕ್ಕೇ ನಮ್ಮ ಪ್ರವಾಸಿ ವೀಸಾಗಳು ಮುಗಿದುಹೋಗಿದ್ದವು. ನಾವುಗಳೂ ಕಾನೂನುಬಾಹಿರವಾಗಿ ಜಗ್ರೇಬ್‌ನಲ್ಲಿ ತಂಗಿದ್ದೆವು. ಪ್ರತಿಸಾರಿಯೂ ಕರೆಗಂಟೆಯ ಶಬ್ದ ಕೇಳಿದಾಗ, ಪೊಲೀಸರು ಬಂದರೇನೋ, ನಮ್ಮನ್ನು ಹಿಡಿದುಕೊಂಡು ಹೋಗಲು ಎಂಬ ಭಯದಿಂದ. ಅಮ್ಮ ಅದನ್ನು ಕೇಳಿಸಿಕೊಂಡಾಗ, ಅವಳಂತೂ ಬಿಕ್ಕಿಬಿಕ್ಕಿ ಅತ್ತಳು. "ಹಾಗಾದ್ರೆ ಇದೇ ಕೊನೆ, ಇದೇ ಕೊನೆ" ಎಂದು ಅಳುಕುತ್ತಾ, ಅಪ್ಪನನ್ನು ಬಂಧಿಸಲಾಗಿದೆ ಎಂದು ನಮಗೆ ತಿಳಿದಿತ್ತು. ಇನ್ನು ಕೆಲವೇ ದಿನಗಳಲ್ಲಿ ಪೊಲೀಸರು ನಮ್ಮನ್ನೂ ಹಿಡಿದು, ಆಸ್ಟ್ರಿಯಾಕ್ಕೆ ಕಳುಹಿಸುವ ಬೆದರಿಕೆ ಒಡ್ಡಬಹುದು ಎಂದುಕೊಂಡೆವು. ಅಷ್ಟು ಹೊತ್ತಿಗೆ, ಶಿಕ್ಷೆಯ ಶಿಬಿರದ ವದಂತಿಗಳು ಸಾಬೀತಾಗಿದ್ದವು. ಅಸ್ಟ್ರಿಯಾಕ್ಕೆ ಹಿಂತಿರುಗುವುದೆಂದರೆ, ತತ್‌ಕ್ಷಣದ ಗಡೀಪಾರು ಎಂಬುದು ಖಚಿತವಾಗಿತ್ತು.

ದುರದೃಷ್ಟವಶಾತ್, ಇತರರ ಆವಶ್ಯಕತೆಗಳ ಬಲಿಪಶುವನ್ನಾಗಿಸುವ ಅನೇಕ ಜನ ಈ ಜಗತ್ತಿನಲ್ಲಿದ್ದಾರೆ. ಯುಗೋಸ್ಲಾವಿಯದ ತುಂಬಾ ಅನೇಕ ಯಹೂದಿ ನಿರಾಶ್ರಿತರ ಕಷ್ಟಕೋಟಲೆಗಳನ್ನು ದುರುಪಯೋಗಪಡಿಸಿಕೊಂಡ ದುರುಳ ಹಾಗೂ ವಂಚಕರು ಇದ್ದರು. ಕೆಲವರು ಪರ್ಮಿಟ್ ವಿಸ್ತರಣೆ ಅಥವಾ ನಕಲಿ ಪಾಸ್‌ಪೋರ್ಟ್‌ಗಳನ್ನು ಕೊಡಿಸುವಂತೆ ನಟಿಸಲ್ಪೊರಟರೆ ಇತರರು ದಾಖಲೆಗಳನ್ನು ತಿದ್ದುವ

ಸಾಮರ್ಥ್ಯವಿದೆಯೆಂದು ಹೇಳಿಕೊಳ್ಳುತ್ತಿದ್ದರು. ಅಲ್ಲಿ ಎಷ್ಟು ಮಂದಿ ವಂಚಕರಿದ್ದರೆಂದರೆ, ಯಾರನ್ನು ನಂಬಬೇಕೆಂಬುದೇ ಸಾಧ್ಯವಾಗುತ್ತಿರಲಿಲ್ಲ. ಜಗ್ರೇಬ್‌ನಲ್ಲಿ ನನ್ನ ಚಿಕ್ಕಪ್ಪನ ಉದ್ಯಮದ ಸಂಪರ್ಕ ಹೊಂದಿದ್ದ, ನಲವತ್ತು ವರ್ಷ ವಯಸ್ಸಿನ, ಎತ್ತರವಾದ ಸ್ಫುರದ್ರೂಪಿ ವ್ಲಾಡಿಮಿರ್ ಎಂಬ ಮಾಜಿ ಪೊಲೀಸ್ ಅಧಿಕಾರಿ, ಉನ್ನತ ಅಧಿಕಾರಿಗಳ ಸಂಪರ್ಕವಿರುವವರು ಎಂದು ಹೇಳಿಕೊಳ್ಳುತ್ತಿದ್ದವರನ್ನು ನಾವು ಭೇಟಿ ಮಾಡಿದೆವು. ನಾನು ಅವನೊಂದಿಗೆ ದಲ್ಮಾತಿಯ ಎಂಬ ಸಣ್ಣ ಊರಿಗೆ ಹೋಗಿ ಒಂದು ವಾರದವರೆಗೆ ಇರಬೇಕು ಹಾಗೂ ಆ ಸಮಯದಲ್ಲಿ ಅವನು ನಮ್ಮ ವೀಸಾಗಳ ವಿಸ್ತರಣೆಯನ್ನು ಪಡೆಯುವುದಾಗಿ ಪ್ರಸ್ತಾವನೆಯೊಂದನ್ನು ಮುಂದಿಟ್ಟನು. ನೀಡಬೇಕಾದ ಅಧಿಕವಾದ ಲಂಚದ ಹಣವನ್ನು ಹೊಂದಿಸಲು ನಾವು ಸಾಕಷ್ಟು ಕಷ್ಟಪಟ್ಟೆವು. ಅದು ಬಿಟ್ಟು ಬೇರೆ ಮಾರ್ಗವಿಲ್ಲವೆಂದು ಮನವರಿಕೆಯಾಯಿತು. ವ್ಲಾಡಿಮಿರ್‌ರೊಂದಿಗೆ ತನ್ನ ಪುಟ್ಟ ಹುಡುಗಿ ಎಲ್ಲೋ ಹೋಗಬೇಕಲ್ಲ ಎಂಬ ಆಲೋಚನೆಯಿಂದಲೇ ಅಮ್ಮ ಗಾಬರಿಗೊಂಡಳು. ಆದರೆ, ನನ್ನನ್ನು ನಾನು ಚೆನ್ನಾಗಿ ನೋಡಿಕೊಳ್ಳಬಲ್ಲೆ ಎಂದು ಅವಳಿಗೆ ಭರವಸೆ ನೀಡಿದೆ. ವ್ಲಾಡಿಮೀರ್‌ಗೆ ನನ್ನ ಬಗ್ಗೆ ತನ್ನ ಮನಸ್ಸಿನಲ್ಲಿ ಏನಿದೆ ಎಂಬುದರ ಬಗ್ಗೆ ನಾನು ಆಲೋಚಿಸಲಿಲ್ಲ; ಭವಿಷ್ಯದ ಸವಾಲುಗಳನ್ನು ಎದುರಿಸುವುದರಲ್ಲಿ ನಾನೂ ಒಳಗೊಳ್ಳುವ ಬಗ್ಗೆ ಉದ್ವೇಗಗೊಂಡೆ. ನನ್ನೊಡನೆ ತಾನೂ ಬರುವುದಾಗಿ ಅಮ್ಮ ಪದೇಪದೇ ಹೇಳುತ್ತಿದ್ದಳು. ಆದರೆ, ವ್ಲಾಡಿಮಿರ್ ಮಾತ್ರ ನನ್ನೊಬ್ಬಳನ್ನೇ ಕಳುಹಿಸುವ ಹಾಗೆ ಅನೇಕ ವಾದಗಳನ್ನು ಮುಂದಿಟ್ಟನು.

ಅಮ್ಮ ಮತ್ತೊಮ್ಮೆ ಹತಾಶೆಯಿಂದ ಕಳೆಗುಂದಿದವಳಾದಾಗ, ನಾನು ಪರಿಸ್ಥಿತಿಯ ನಿಯಂತ್ರಣವನ್ನು ಕೈಗೆತ್ತಿಕೊಂಡೆ. ನನ್ನ ಚಿಕ್ಕಪ್ಪ ಚಿಕ್ಕಮ್ಮನಿಗೆ ಅವರ ಸೋದರನ ಮಗಳು ವಿಲಕ್ಷಣ ಸ್ಥಿತಿಯಿಂದ, ಪ್ರಶಾಂತ ಹಾಗೂ ಸಮರ್ಥ ಸಂಧಾನಕಾರಳಾಗಿ ಪರಿವರ್ತನೆಗೊಂಡಿದ್ದನ್ನು ಕಂಡು ಆಶ್ಚರ್ಯವನ್ನುಂಟುಮಾಡಿದೆ. ನಾನು ಕೋಪೋದ್ರೇಕ ಗೊಳ್ಳಲಿಲ್ಲ. ಅದರ ಬದಲು, ನಮ್ಮ ಸಮಸ್ಯೆಯನ್ನು ವ್ಲಾಡಿಮೀರನೊಡನೆ ಚರ್ಚಿಸಿದೆ, ಅವನು ತನ್ನ ಮುಂಚಿನ ಸಲಹೆ ಹೇಗೆ ಇತ್ತೀಚಿನ ಘಟನೆಗಳಿಂದ ಹಿಂದಕ್ಕೆ ಸರಿದಿತ್ತೆಂಬುದನ್ನು ಮನವರಿಕೆ ಮಾಡಿಕೊಂಡಿದ್ದನು. ನನ್ನನ್ನು ಚುಂಬಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ಪ್ರತಿಯಾಗಿ ಅಪ್ಪನನ್ನು ಜಗ್ರೇಬಿಗೆ ವರ್ಗಾವಣೆಗೊಳ್ಳಲು ಏರ್ಪಾಡು ಮಾಡುವಂತೆ ಹೇಳಿದೆ. ನಾವುಗಳು ಕೊನೆಯ ಪಕ್ಷ ಒಟ್ಟಿಗಿದ್ದು, ಪೊಲೀಸರು ನಮ್ಮನ್ನು ಆಸ್ಟ್ರಿಯಾದ ಗಡಿಗೆ ಕಳುಹಿಸುವ ಮುಂಚೆ ನಮ್ಮ ಆಯ್ಕೆಗಳನ್ನು ಚರ್ಚಿಸಬಹುದು ಎಂಬ ಕಾರಣದಿಂದ. ವ್ಲಾಡಿಮೀರ್‌ನೊಡನೆ ಕೈಕೊಂಡ ಈ ವ್ಯವಹಾರವನ್ನು ನಾನು ಯಾರಿಗೂ ತಿಳಿಸಲಿಲ್ಲ.

ಅಮ್ಮ ನನ್ನ ಮೇಲೆ ಮತ್ತೆ ಅವಲಂಬಿತಳಾಗಿದ್ದಳು. ಹಾಗೂ ನಮಗೆ

ಒಳ್ಳೆಯದಾಗುವ ಹಾಗೆ ಯಾವುದೇ ನಿರ್ಧಾರವನ್ನು ನಾನು ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಿದಳು. ನನಗೆ ಅವಳು ನಿಯಂತ್ರಣವನ್ನು ಇಷ್ಟು ಸುಲಭವಾಗಿ ನೀಡಬಹುದೆಂದು ನಾನು ಅಂದುಕೊಂಡಿರಲಿಲ್ಲ. ಹಾಗೂ ನಾನು ನಂಬಿದ್ದಕ್ಕಿಂತ ನನ್ನ ತಾಯಿ ಬಹಳ ದುರ್ಬಲಳಾಗಿದ್ದಳೆಂಬುದನ್ನು ಒಪ್ಪಿಕೊಳ್ಳಲು ಕಷ್ಟವಾಗಿತ್ತು. ಆದರೆ, ಬದಲಾಗುತ್ತಿದ್ದ ನಮ್ಮ ಸಂಬಂಧಗಳನ್ನು ಯೋಚಿಸಲು ನನಗೆ ಸಮಯ ವಿರಲಿಲ್ಲ. ಜಗ್ರೇಬ್ ರೈಲ್ವೆ ನಿಲ್ದಾಣದಲ್ಲಿ ಅಪ್ಪನ ಆಗಮನದ ವಿವರಗಳು ನಮಗೆ ತಿಳಿದಾಗ, (ಓರ್ವ ಪತ್ತೇದಾರನೊಂದಿಗೆ) ವ್ಲಾಡಿಮೀರ್‌ಗೆ ನನ್ನೊಡನೆ ರೈಲು ಬಳಿ ಬರಲು ಒತ್ತಾಯ ಮಾಡಿದೆ. ಕಾರಣ, ನಾವು ತಕ್ಷಣವೇ ಸ್ಥಳೀಯ ಪೊಲೀಸ್ ಸ್ಟೇಷನ್ನಿನಲ್ಲಿ ಜಾಮೀನು ದೊರೆಯುವಂತೆ ಮಾಡಿ, ಅಪ್ಪ ನಮ್ಮೊಂದಿಗೆ ಹಿಂತಿರುಗಲು ಸಾಧ್ಯವಾಗಲೆಂದು.

ಪ್ಲಾಟ್‌ಫಾರಂನಲ್ಲಿ ಅಪ್ಪನನ್ನು ನಾನು ನೋಡಿದಾಗ, ನನಗೆ ತೀವ್ರ ಆಘಾತವಾಯಿತು; ಒಂದು ಕಾಲದಲ್ಲಿ ಸ್ಫುರದ್ರೂಪಿ ಮತ್ತು ಹರ್ಷಚಿತ್ತನಾಗಿದ್ದ ಅಪ್ಪ ಈಗ ಅಸ್ತವ್ಯಸ್ತ ಹಾಗೂ ಪರಾಜಯಗೊಂಡಿದ್ದರು. ಜನಸಂದಣಿಯ ಮಧ್ಯದಿಂದ ಸ್ಟೇಷನ್ನಿನಲ್ಲಿ ನನ್ನೆದುರಿಗೆ ಮಂಡಿಯೂರಿ, ಗೋಳಾಡಿದರು. "ಏನಾಗಿದೆ ನೋಡು, ನಿಮ್ಮಪ್ಪನಿಗೆ, ನಾನೀಗ ಬಂಧಿ." ನಾನು ಮೆಲ್ಲಗೆ ಅವರನ್ನು ಸಮಾಧಾನಪಡಿಸಲೆತ್ನಿಸಿದೆ. ಆದರೆ ಅವರಿಗೆ ನಾನು ಹೇಳಬೇಕೆಂದಿದ್ದೆ: "ಈಗಲಾದರೂ ನಿಮಗೆ ಗೊತ್ತಾಗಿರಬೇಕಲ್ಲ, ಬೇಟೆಯಾಡಿ ಕಿರುಕುಳ ಕೊಡುವುದೆಂದರೆ, ಏನು ಎಂದು!" ಈಗ ನೀವು ಮೆಚ್ಚಬೇಕು. ಅಮ್ಮ, ಕುರ್ಟ್ ಹಾಗೂ ನನ್ನ ಪಲಾಯನವನ್ನು ಗೈಯಲು ನಾಜಿ ಆಸ್ಟ್ರಿಯಾದಿಂದ ಮಾಡಿದ ಸಾಧನೆಯನ್ನ. ಆದರೂ ಅವರು ನಾವುಗಳು ಅನುಭವಿಸಿದ್ದದ್ದನ್ನೆಲ್ಲಾ ಒಪ್ಪಿಕೊಳ್ಳಲಿಲ್ಲ. ಅಂದು ನನ್ನ ತಂದೆಯೊಂದಿಗೆ ಹೊಸ ಸಂಬಂಧದ ಆರಂಭ ಮುನ್ಸೂಚಕ ದಿನವಾಯಿತು. ನಾನು ಅಪ್ಪನನ್ನು ತೀವ್ರವಾಗಿಯೇ ಪ್ರೀತಿಸುತ್ತಿದ್ದೆ ಹಾಗೂ ಬಹಳಷ್ಟು ಪ್ರಶಂಸಿಸುತ್ತಿದ್ದೆ. ಆದರೆ ಅಷ್ಟೇ ನಾನು ಅವರನ್ನು ದ್ವೇಷಿಸುತ್ತಿದ್ದೆ ಹಾಗೂ ಬಯ್ಯುತ್ತಿದ್ದೆ. ಅವರು ಇನ್ನು ನನ್ನ ಅತಿ ಪ್ರಬಲ ಅಪ್ಪನಾಗಿರಲಿಲ್ಲ. ನಾನೂ ಸಹ ಅವರ ಮುದ್ದಿನ ಮಗಳಾಗಿರಲಿಲ್ಲ. ಈ ದ್ವಂದ್ವ ಪರಸ್ಪರವಾಗಿತ್ತು. ಅಪ್ಪ ಮುಕ್ತವಾಗಿ ನನ್ನ ಗಟ್ಟಿ ವ್ಯಕ್ತಿತ್ವವನ್ನೂ, ಭಾವೋದ್ವೇಗವಲ್ಲದ ದೃಷ್ಟಿಯನ್ನು ತೆಗಳುತ್ತಿದ್ದರು.

ಅಪ್ಪನಿಗೆ ಜಾಮೀನಿಗೆ ಏರ್ಪಾಟು ಮಾಡಿ, ನಾವೆಲ್ಲ ಮತ್ತೆ ಅಮ್ಮನೊಂದಿಗೆ ಜೂಲಾ ಚಿಕ್ಕಮ್ಮನ ಫ್ಲಾಟ್‌ನಲ್ಲಿ ಒಂದುಗೂಡಿದ ನಂತರ, ನಾವು ನಮಗೆ ಮುಕ್ತವಾಗಿದ್ದ ಅನೇಕ ಆಯ್ಕೆಗಳನ್ನು ಕಂಡುಹಿಡಿಯಲಾರಂಭಿಸಿದೆವು. ಏನಾದರೂ ಮಾಡಿ, ಹೆಚ್ಚು ಲಂಚ ಕೊಟ್ಟಾದರೂ, ಯುಗೋಸ್ಲಾವಿಯಾದಲ್ಲಿರುವುದರ ಅವಧಿ ವಿಸ್ತರಣೆಯನ್ನು ಖಾತರಿಯಾಗಿ ಪಡೆಯಬೇಕೆಂದು ಅಪ್ಪ ಒತ್ತಿ ಹೇಳುತ್ತಿದ್ದರು.

ಆದರೆ, ನಾನು ವಾದಿಸಿದೆ, ಇದು ಕೇವಲ ಅನಿವಾರ್ಯವಾದುದನ್ನು ಮುಂದೂಡಬಹುದಾದ್ದರಿಂದ ಅದು ನಿಷ್ಪ್ರಯೋಜಕ ಎಂದು. ಈ ಮಧ್ಯೆ ಯುಗೋಸ್ಲಾವಿಯಾದಲ್ಲಿನ ನಮ್ಮ ಸಂಬಂಧಿಕರು ಹಾಗೂ ಅವರ ಯಹೂದಿ ಗೆಳೆಯರೂ ಸಹ ಪರಿಹಾರವೊಂದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದರು. ಒಂದು ವಾರದ ರಿಯಾಯಿತಿ ಅವಧಿಯನ್ನು ಪೊಲೀಸರಿಗೆ ಹೇಳಿ ಕೊಡಿಸಲು ವ್ಲಾಡಿಮೀರ್ ಪ್ರಯತ್ನಿಸಿದ್ದರು. ಆದರೆ ಆ ನಂತರ ನಮ್ಮನ್ನೆಲ್ಲಾ ಆಸ್ಟ್ರಿಯಾದ ಗಡಿಗೆ ಬಲವಂತವಾಗಿ ಕಳುಹಿಸುವರೆಂದು ಅವರು ಒತ್ತಿ ಹೇಳುತ್ತಿದ್ದರು. ಅಪ್ಪ ಪ್ರತಿದಿನ ಪೊಲೀಸರಿಗೆ ವರದಿ ಮಾಡಿಕೊಳ್ಳಬೇಕಿತ್ತು. ಅದು ಅವರ ಆತ್ಮವಿಶ್ವಾಸದ ಕೊನೆಯ ಪಳೆಯುಳಿಕೆಗಳನ್ನು ಹಾಳುಮಾಡಿದಂತೆನಿಸಿತ್ತು. ಈ ರೀತಿ ಅವರನ್ನು ನೋಡುವುದನ್ನು ನಾನು ದ್ವೇಷಿಸಿದೆ. ಅವರ ಬಗ್ಗೆ ಅನುಕಂಪೆಯುಂಟಾಯಿತು. ಆದರೆ, ಅವರೇನಾದರೂ ಜನರ ಸಂಕಟವನ್ನು ವಿಯೆನ್ನಾದಲ್ಲಿ ನೋಡಿದ್ದಿದ್ದರೆ, ಎಂದು ನಾನು ಯೋಚಿಸುತ್ತಿದ್ದೆ. ಕ್ಯಾಮಿಲ್ಲಾ ಏಟು ತಿಂದದ್ದು, ಅವರ ಮಗಳು ಶೌಚಾಲಯವನ್ನು ಶುಚಿಗೊಳಿಸಿದ್ದು ಹಾಗು ಬೂಟ್ ಪಾಲಿಶ್ ಮಾಡಿದ್ದು; ಯಹೂದಿಗಳನ್ನು ರಸ್ತೆಯಲ್ಲೇ ಹೊಡೆದಿದ್ದು; ಅಂಗಡಿಗಳನ್ನು ಲೂಟಿ ಮಾಡಿ, ಮನೆಗಳನ್ನು ಹಾಳುಗೆಡವಿದ್ದನ್ನು.

ನಮ್ಮ ಈ ಸಂದಿಗ್ಧತೆಗೆ ಪರಿಹಾರ ಕಾಣಲು ಒಂದು ವಾರ ನಮಗೆ ಸಮಯ ಸಿಕ್ಕಿತು. ಜಗ್ರೇಬ್‌ನ ಎಲ್ಲಾ ಕೌನ್ಸಿಲ್ ಕಛೇರಿಗಳಲ್ಲಿ ನಾನು ಕ್ಯೂ ನಿಂತೆ. ಆದರೆ ಅವರು ನಮ್ಮ ಪಾಸ್‌ಪೋರ್ಟ್‌ಗಳ ಮೇಲೆ ದಪ್ಪಕ್ಷರದ J ಅನ್ನು ನೋಡುತ್ತಿದ್ದಂತೆ, ನಮಗೆ ಸಹಾಯ ಮಾಡಲು ಯಾರೂ ಸಿದ್ಧರಿರಲಿಲ್ಲ. ನಮ್ಮ ಗಡುವು ಮುಗಿಯಲು ಮೂರು ದಿನಗಳಿರುವಾಗ, ನನ್ನ ಚಿಕ್ಕಪ್ಪ ಉದ್ವೇಗದಿಂದ ಕೂಗುತ್ತಾ ಹೇಳಿದ: "ನಿಮಗೊಂದು ತಪ್ಪಿಸಿಕೊಳ್ಳುವ ಮಾರ್ಗವಿದೆ, ನೀವು ಆಲ್ಬೇನಿಯಾಕ್ಕೆ ಹೋಗಬಹುದು." ಅವನ ಯಹೂದಿ ಗೆಳೆಯ ಉದ್ಯಮಿಯೊಬ್ಬರಿಂದ ತಿಳಿದುಕೊಂಡಂತೆ, (ಅವರು ಅಲ್ಬೇನಿಯಾದ ವಾಣಿಜ್ಯ ಕನ್‌ಸೆಲ್ ಆಗಿದ್ದರು ಜಗ್ರೇಬ್‌ನಲ್ಲಿ) ಆಲ್ಬೇನಿಯಾದ ದೊರೆ ಜೊಗ್ ತನ್ನ ಚಕ್ರಾಧಿಪತ್ಯ ಮಹೋತ್ಸವವನ್ನು ೧೯೩೮ರಲ್ಲಿ ಆಚರಿಸುತ್ತಿದ್ದರು ಎಂದು ಹೇಳಿದ್ದನ್ನು ನಾನು ಕುತೂಹಲದಿಂದ ಕೇಳಿಸಿಕೊಂಡೆ. ಇದರಿಂದಾಗಿ 'ಜೆ' ಎಂಬ ಅಕ್ಷರವುಳ್ಳ ಪಾಸ್‌ಪೋರ್ಟ್‌ನವರಿಗೆ ಮುಕ್ತವಾಗಿ ನೀಡಿದ ಪ್ರವಾಸಿ ಕಾರ್ಡ್‌ನಿಂದ ಯಾರು ಬೇಕಾದರೂ ಆ ದೇಶಕ್ಕೆ ಭೇಟಿ ನೀಡಬಹುದಾಗಿತ್ತು. ಆಲ್ಬೇನಿಯಾ ಬಗ್ಗೆ ನಮಗೇನೂ ತಿಳಿದಿರಲಿಲ್ಲ. ಆದರೆ, ಅದು ಬೇರೆ ಮಾತು. ನನ್ನ ಭೂಗೋಳದ ಪಾಠಗಳಲ್ಲಿ, ಆಲ್ಬೇನಿಯಾ ಯುಗೋಸ್ಲಾವಿಯಾ ಮತ್ತು ಗ್ರೀಸ್ ನಡುವೆ, ಆಡ್ರಿಯಾಟಿಕ್ ತೀರದಲ್ಲಿರುವ ಪಾಳು ದೇಶ ಎಂದು ಓದಿದ್ದಷ್ಟೇ ನೆನಪಿನಲ್ಲಿತ್ತು. ಪಲಾಯನದ ಹಾದಿಯಲ್ಲಿ ಹೋಗುವ ಸಾಧ್ಯತೆ ಬಗ್ಗೆ ನಾನು ಉತ್ಸುಕಳಾದೆ. ಆದರೆ, ಹೀಗೆ ಗೊತ್ತಿಲ್ಲದ

ದಾರಿಯಲ್ಲಿ ಸಾಹಸ ಮಾಡುವುದು ಅವಿವೇಕತನದ್ದು ಎಂದು ಅಪ್ಪ ಹಠ ಹಿಡಿದರು. ಅಮ್ಮ ಮಾತ್ರ ಏನೂ ಹೇಳದೆ, ಮೂಕಳಾಗಿ ಕುಳಿತಳು. ಮುಖದ ಮೇಲೆ ನೋವಿನ ಅಭಿವ್ಯಕ್ತಿಯಿಂದ, ಆಸ್ಟ್ರಿಯಾ ಬಿಟ್ಟು ಯಾವ ದೇಶವಾದರೂ ಒಳ್ಳೆಯದೇ ಮತ್ತು ಶ್ರಮಶಿಬಿರಕ್ಕೆ ಕಳುಹಿಸುವುದಕ್ಕಿಂತ ಬೇರೆ ಯಾವುದಾದರೂ ಒಳ್ಳೆಯದೇ ಎಂದು ಅಪ್ಪನನ್ನು ಒಪ್ಪಿಸಲು ಪ್ರಯತ್ನಿಸಿದೆ. ನನ್ನ ಚಿಕ್ಕಪ್ಪಂದಿರು ಹಾಗೂ ಚಿಕ್ಕಮ್ಮಂದಿರು ನನ್ನ ಮಾತನ್ನು ಬೆಂಬಲಿಸಿದರು. ಓಟ್ಟೊ ಮತ್ತು ಕುರ್ಟ್‌ರೊಂದಿಗೆ ಪುನಃರ್ಮಿಲನ ಮಾಡುವ ಸಾಧ್ಯತೆಗಳು ಆಲ್ಬೇನಿಯಾಕ್ಕೆ ಹೋದರೆ ಹೆಚ್ಚು ಯುಗೋಸ್ಲಾವಿಯಾದಲ್ಲಿ ಕಾನೂನುಬಾಹಿರವಾಗಿ ಇರುವುದಕ್ಕಿಂತ ಎಂದು ನನ್ನ ತಂದೆ–ತಾಯಿಯರ ಮನ ಒಲಿಸಿದೆ. ಯಾರು ನಮಗೆ ಆಶ್ರಯ ಕೊಟ್ಟರೋ, ಅವರೂ ತೀವ್ರ ಅಪಾಯವನ್ನೆದುರಿಸಬಹುದೆನ್ನುವ ವಿಷಯವನ್ನು ಅವರು ನಿರ್ಲಕ್ಷಿಸಿದ್ದರು.

ಈ ಸಂಕಷ್ಟದ ದಿನಗಳಲ್ಲಿ ನಮಗೆ ಸಿಕ್ಕ ಒಂದೇ ಒಂದು ಒಳ್ಳೆಯ ಸುದ್ದಿಯೆಂದರೆ, ಕುರ್ಟ್‌ಗಾಗಿ ಓಟ್ಟೊ ಅವನನ್ನು ಇಂಗ್ಲೆಂಡ್‌ನಲ್ಲಿ ಸೇರಲು ಪರ್ಮಿಟ್ ಪಡೆದಿದ್ದಾನೆ ಎಂಬುದು. ಇದರರ್ಥ ನಮ್ಮ ಕುಟುಂಬದ ಹತ್ತಿರ ಇಬ್ಬರಾದರೂ ಸುಮಾರಾದ ಸುರಕ್ಷಿತ ಸ್ಥಳದಲ್ಲಿ ಇದ್ದರೆಂಬುದು. ಓಟ್ಟೊ ಒಂದಿಗೆ ಲಂಡನ್ನಿನಲ್ಲಿ ಸ್ವಲ್ಪ ಸಮಯ ಕಳೆದ ನಂತರ ಮ್ಯಾಂಚೆಸ್ಟರ್‌ನಲ್ಲಿ ಕೆಲಸ ಸಿಗುವುದು ಸುಲಭ ಎಂಬ ವಿಷಯ ಕೇಳಿ, ಅಲ್ಲಿಗೆ ಹೋಗಿದ್ದನು. ಅಲ್ಲಿ ಲಾಂಕಾಷೈರ್‌ನ ಜವಳಿ ಗಿರಣಿಗಳೊಂದರಲ್ಲಿ ನೇಕಾರನಾಗಿ ಉದ್ಯೋಗ ದೊರಕಿತ್ತು. ನಾನಂತೂ ಗೊಂದಲದಲ್ಲಿದ್ದೆ. ನಾನು ಅವರಿಗಾಗಿ ಹಾಗೂ ಅವರ ಸುರಕ್ಷತೆಗಾಗಿ ಸಂತೋಷವಾಗಿರಬೇಕಿತ್ತು. ಆದರೆ, ಅತ್ಯಂತ ಕಿರಿಯಳಾದ ನಾನು ನನ್ನ ತಂದೆ–ತಾಯಿಯರೊಂದಿಗೆ ಪರಿಸ್ಥಿತಿಯನ್ನು ನಿಭಾಯಿಸಬೇಕಾಗಿತ್ತು. ಎಂಥ ಅನ್ಯಾಯ ಎಂದು ಆಶ್ಚರ್ಯಪಟ್ಟೆ, ಅಲ್ಲದೆ ನಾವು ಒಂದು ಅಪಾಯಕಾರಿ ಹಾಗೂ ಅಜ್ಞಾತ ಸ್ಥಳದಿಂದ ಮತ್ತೊಂದು ಕಡೆಗೆ ಹೋಗುತ್ತಿದ್ದಂತೆ ಭಾಸವಾಗುತ್ತಿತ್ತು. ಇವೆಲ್ಲ ಎಲ್ಲಿಗೆ ಕೊನೆಗೊಳ್ಳುತ್ತದೆ ಎಂಬುದು ಅರ್ಥವಾಗಲಿಲ್ಲ. ಹಾಗೇ ಮುಂದುವರಿಯುತ್ತಿರಬೇಕೆಂದು ಮಾತ್ರ ಗೊತ್ತಿತ್ತು.

ನಾವು ಆಲ್ಬೇನಿಯಾಕ್ಕೆ ಹೋಗಲು ಅಪ್ಪ ಒಪ್ಪಿಕೊಂಡ ನಂತರ ನಮ್ಮ ಪ್ರಯಾಣಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಆದಷ್ಟು ಬೇಗ ಮಾಡಲಾರಂಭಿಸಿದೆ. ನಮ್ಮೊಂದಿಗೆ ಪ್ರಯಾಣ ಮಾಡಲು ಓರ್ವ ಪೊಲೀಸ್ ಪತ್ತೇದಾರಿಯನ್ನು ಕಳುಹಿಸುವ ಏರ್ಪಾಟು ಮಾಡಲು ವ್ಲಾಡಿಮಿರ್‌ಗೆ ಹೇಳಿದ್ದೆ. ಸ್ಪಲಾಟೂವರೆಗೆ ಹಾಗೂ ಆಲ್ಬೇನಿಯಾಕ್ಕೆ ಹಡಗು ಹತ್ತುವವರೆಗೆ, ಪಾಸ್‌ಪೋರ್ಟ್‌ಗಳನ್ನು ಒಯ್ಯಬೇಕಾಗಿತ್ತು. ಈ ಒಂದು ವಿಶೇಷ ರಕ್ಷಣೆಗಾಗಿ ನಾವು ಸಾಕಷ್ಟು ಖರ್ಚು ಮಾಡಬೇಕಾಗಿತ್ತು. ಆದರೆ, ಅದು ಉಚಿತವೇ ಎಂದೆಲ್ಲರೂ ಒಪ್ಪಿಕೊಂಡಿದ್ದೆವು. ನಾವು ಹೊರಡುವ ಮೊದಲು ವ್ಲಾಡಿಮೀರ್ ಮಾಡಿದ ಸೇವೆಗೆ ಎಷ್ಟು ನೀಡಬೇಕೆಂದು ಕೇಳಿದೆ. ಅವನಂತೂ

ಹೆಚ್ಚೇ ಕೇಳಿದಾಗ, ಅದರಲ್ಲಿ ಕಾಲುಭಾಗವನ್ನು ನಾನು ಕಡಿಮೆ ಮಾಡಿದೆ. ವ್ಲಾಡಿಮೀರನನ್ನು ಅಲ್ಲಿಯೇ ಬಿಟ್ಟಿದ್ದಕ್ಕೆ ಒಂದು ರೀತಿಯ ಸ್ವಾತಂತ್ರ್ಯ ಸಿಕ್ಕ ಹಾಗೆ ಆಯಿತು. ಅಸ್ವಸ್ಥ ಮನಸ್ಸಿನ ಸಂಕೇತದಂತಿದ್ದ ಅವನನ್ನು ಹೊರ ಹಾಕಲು ನಾನು ಕಾಯುತ್ತಿದ್ದೆ. ಜಗ್ರೇಬ್ ರೈಲು ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ನಿಂತಾಗ, ನಮ್ಮನ್ನು ಬೀಳ್ಕೊಡಲು ಬಂದಿದ್ದ ಅನೇಕ ನೆಂಟರು, ಮಿತ್ರರು ಹಾಗೂ ಹಿತೈಷಿಗಳು ನಮ್ಮನ್ನು ಸುತ್ತುವರಿದರು. ಕುಟುಂಬದ ಜೀವನವನ್ನು ಮತ್ತೊಮ್ಮೆ ಅನುಭವಿಸಲು ನಾನು ಬಂದಿದ್ದೆ. ಬ್ರಿಗಿಟನ್‌ನಲ್ಲಿ ನಾವಿದ್ದ ಸಮುದಾಯವನ್ನು ನೆನಪಿಗೆ ತರುತ್ತಿತ್ತು. ಕೊನೆಗೆ ವಿದಾಯ ಹೇಳಬೇಕಾಗಿ ಬಂದಾಗ, ನನಗೆ ದುಃಖವಾಯಿತು. ನಾವು ಅವರನ್ನು ಮತ್ತೆಂದೂ ಕಾಣುವುದಿಲ್ಲ ಎಂದು ನಮಗನಿಸಲಿಲ್ಲ. ಆಲ್ಬೇನಿಯಾ ಮೂಲಕ ನಮ್ಮ ಅಪಾಯಕಾರಿ ಪಲಾಯನವೊಂದೇ ನಮ್ಮ ಮುಕ್ತಿಯಾಗಿತ್ತು. ನಾವು ಬಿಟ್ಟವರೆಲ್ಲ ಮುಂದಿನ, ಕ್ರೊಷಿಯಾದ ಜರ್ಮನ್ ಆಕ್ರಮಣದಲ್ಲಿ ನಾಶಗೊಂಡರು.

ಯುಗೋಸ್ಲಾವಿಯಾದ ಹಣದ ನಿರ್ಬಂಧವು, ಪ್ರವಾಸಿಗರು ದೇಶದಿಂದಾಚೆಗೆ ಹೆಚ್ಚು ದೀನಾರ್‌ಗಳನ್ನು ತೆಗೆದುಕೊಂಡು ಹೋಗಲಾರದಂತೆ ನಿಷೇಧ ಹೇರಿದ್ದಿತ್ತು. ಹಾಗಾಗಿ ಆಲ್ಬೇನಿಯಾಕ್ಕೆ ತಲುಪಿದ ನಂತರ, ಹೋಟೆಲ್‌ಗಿರಲಿ, ಒಬ್ಬ ಕೂಲಿಗೂ ಕೊಡುವಷ್ಟು ದುಡ್ಡು ಇಲ್ಲದಿದ್ದರೆ ಏನು ಮಾಡುವುದೆಂದು, ನನ್ನ ತಂದೆ–ತಾಯಿ ಚಿಂತಿಸತೊಡಗಿದರು. ಜೂಲಿಯಾ ಚಿಕ್ಕಮ್ಮನ ಯಹೂದಿ ಗೆಳೆಯರೊಬ್ಬರ ಸಹಾಯದಿಂದ, ನಾವೆಲ್ಲಾ ಒಂದು ವಾರದವರೆಗಾದರೂ ನಿಭಾಯಿಸಿಕೊಂಡು ಹೋಗುವ ಸಲುವಾಗಿ, ಅಪ್ಪ ಸ್ವಲ್ಪ ದುಡ್ಡನ್ನು ಸ್ಟರ್ಲಿಂ ಗ್‌ಗೆ ಬದಲಾಯಿಸಿದರು. ಆದರೆ, ನಮ್ಮೊಂದಿಗೆ ಗಡಿಯವರೆಗೂ, ಓರ್ವ ಪೊಲೀಸ್ ಕಾವಲುಗಾರ ಬರುತ್ತಿದ್ದುದರಿಂದ, ಈ ದುಡ್ಡನ್ನು ಹೇಗೆ ನಮ್ಮ ಜತೆ ತೆಗೆದುಕೊಂಡು ಹೋಗುವುದು ಎಂಬ ಪ್ರಶ್ನೆ ಎದುರಾಯಿತು. ಅಮ್ಮ ಮತ್ತು ನಾನು ಆಗ ನೆನಪಿಸಿಕೊಂಡೆವು, ಇದೇ ಕಾರ್ಯತಂತ್ರವನ್ನುಪಯೋಗಿಸಿಕೊಂಡು, ಆಸ್ಟ್ರಿಯಾದಿಂದ ಹೊರಗೆ ನಮ್ಮ ಚಿನ್ನದ ನಾಣ್ಯಗಳನ್ನು ಹೇಗೆ ತೆಗೆದುಕೊಂಡು ಹೋಗಿದ್ದೆವು ಎಂದು. ನಮಗೆ ಹೇಗಿದ್ದರೂ ಉಡುಗೊರೆಯಾಗಿ, ಅನೇಕ ಚಾಕೊಲೇಟ್‌ಗಳ ಚೀಲ ಹಾಗೂ ಡಬ್ಬಿಗಳನ್ನು ನೀಡಲಾಗಿತ್ತು. ಅದರಲ್ಲೊಂದು ಚೀಲದಿಂದ ಚಾಕೊಲೇಟ್‌ಗಳನ್ನು ತೆಗೆದುಬಿಟ್ಟು, ಎಚ್ಚರಿಕೆಯಿಂದ ಮಡಿಸಿದ ಸ್ಟರ್ಲಿಂಗ್ ನೋಟುಗಳನ್ನು ಅದರಲ್ಲಿಟ್ಟು, ಪ್ಯಾಕ್ ಮಾಡಿದೆವು. ಅಮ್ಮ ಆ ಅಮೂಲ್ಯವಾದ ಚೀಲವನ್ನು ಚಾಕೊಲೇಟ್‌ನೊಂದಿಗೆ ತನ್ನ ಕೈಚೀಲದಲ್ಲಿರಿಸಿಕೊಂಡಳು.

ಸ್ಕಲಾಡೊವಿಗೆ ಬಂದ ದಿನ ದೀರ್ಘ ರೈಲು ಪ್ರಯಾಣದ ವೇಳೆ, ನಮ್ಮ ಪೊಲೀಸ್ ಸಂಗಾತಿಯೊಂದಿಗೆ ನಾನು ಹರಟಲಾರಂಭಿಸಿದೆ. ಕಂಪಾರ್ಟ್‌ಮೆಂಟಿನ ಹೊರಗಡೆಯ ಕಾರಿಡಾರ್‌ನಲ್ಲಿ ನಿಂತು; ನನ್ನ ತಂದೆತಾಯಿಯರು, ಮೌನದಿಂದ

ಕುಳಿತಿದ್ದರು ಪರಸ್ಪರ ದಿಟ್ಟಿಸುತ್ತಾ. ಅವನು ತನ್ನನ್ನು ಯಕೋಸ್ಲಾವ್ ಎಂದು ಪರಿಚಯಿಸಿಕೊಂಡ. ನಾನೂ ನನ್ನ ಹೆಸರು ಹೇಳಿದೆ. ನಮ್ಮ ಸಂಬಂಧವನ್ನು ಗಟ್ಟಿಗೊಳಿಸಲು ನಾನು ಬಾಗಿಲನ್ನು ತೆರೆದು, ಚಾಕೊಲೇಟ್‌ನ ಚೀಲವನ್ನು ಕೊಡಲು ಹೇಳಿದೆ. ನಮ್ಮ ಪೊಲೀಸ್ ಕಾವಲುಗಾರನಿಗೂ ಕೊಡೋಣವೆಂದುಕೊಂಡು, ಮೊದಲು ಅಮ್ಮ ಈ ಸಲಹೆಯಿಂದ ಗಾಬರಿಗೊಂಡಳು. ಆದರೆ ಎಲ್ಲಾ ಸರಿ ಹೋಗುವುದೆಂದು ನಾನು ಅವಳಿಗೆ 'ಕೈಸನ್ನೆ' ಮಾಡಿದೆ. ನಾವು ಬಚ್ಚಿಟ್ಟಿದ್ದ ದುಡ್ಡು ಕಾಣದ ಹಾಗೆ ಮಾಡಲು ಇದು ಅತಿ ಸುರಕ್ಷಿತ ಮಾರ್ಗವೆಂದುಕೊಂಡೆ. ಅದು ಸರಿಯಾಗಿತ್ತು. ನಮ್ಮ ಬಚ್ಚಿಟ್ಟ ದುಡ್ಡಿನ ಚೀಲದಿಂದ ಚಾಕೊಲೇಟನ್ನು ತೆಗೆದು ಕೊಳ್ಳುತ್ತಿದ್ದೇನೆಂಬ ವಿಷಯ ಅವನಿಗೆ ಗೊತ್ತಾಗಲಿಲ್ಲ. ನಮ್ಮೊಂದಿಗೆ ಗಡಿಯವರೆಗೆ ಏಕೆ ಬರುತ್ತಿದ್ದೇನೆಂಬುದರ ಅರಿವು ಅವನಿಗಿರಲಿಲ್ಲ. ನಾನು ನಮ್ಮ ಪರಿಸ್ಥಿತಿಯನ್ನು ವಿವರಿಸಿದಾಗ ಅವನು ತಪ್ಪಿತಸ್ಥನೆಂದು ಭಾವಿಸಿದಂತಾಯಿತು. ದೀರ್ಘ ರೈಲು ಪ್ರಯಾಣದಲ್ಲಿ, ನಾವು ಸಾಕಷ್ಟು ಮಾತನಾಡಿದೆವು, ತಮಾಷೆ ಮಾಡಿಕೊಂಡೆವು; ಆದರೆ ನಮ್ಮ ಸುರಕ್ಷತೆಯ ಬಗ್ಗೆ ಆಗಾಗ್ಗೆ ಪ್ರಶ್ನೆ ಹಾಕುತ್ತ ಆತಂಕವನ್ನು ವ್ಯಕ್ತಪಡಿಸಿದ; ನಿಜಕ್ಕೂ ಅವನಿಗೆ ಚಿಂತೆಯಾಗಿತ್ತು. ನಮ್ಮ ರೈಲು ನಿಲ್ದಾಣವನ್ನು ತಲುಪುವ ಸ್ವಲ್ಪ ಹೊತ್ತಿನ ಮುಂಚೆ, ನಾವಿನ್ನೂ ಕಾರಿಡಾರ್‌ನಲ್ಲಿ ನಿಂತಿದ್ದಾಗ, ಇದ್ದಕ್ಕಿದ್ದಂತೆ ನನ್ನ ಕಡೆ ತಿರುಗಿ, "ನಾವಿಬ್ಬರೂ ಮದುವೆಯಾಗೋಣ, ಆಗ ನೀನು ಮತ್ತು ನಿನ್ನ ತಂದೆತಾಯಿಯರು ಯುಗೊಸ್ಲಾವಿಯಾದಲ್ಲಿ ಮುಕ್ತವಾಗಿರಬಹುದು. ನಾನು ನಿಮ್ಮ ತಂದೆ ಬಳಿ ಮಾತನಾಡುತ್ತೇನೆ. ಸ್ವಲಾಡೋಗೆ ನೀವು ಹೋದ ತಕ್ಷಣ, ಬೇಕಾದ ಸಿದ್ಧತೆ ಮಾಡಿಕೊಳ್ಳಬಹುದು. ಆಮೇಲೆ, ನೀವು ಆಲ್ಬೇನಿಯಾಕ್ಕೆ ಹಡಗು ಹತ್ತ ಬೇಕಾಗುವುದಿಲ್ಲ. ಅವನು ಇದ್ದಕ್ಕಿದ್ದಂತೆ ಈ ಮದುವೆ ಪ್ರಸ್ತಾಪವನ್ನು ಮಾಡಿದಾಗ, ನನ್ನ ಕಣ್ಣಿನಲ್ಲಿ ಆಳವಾಗಿ ನೋಡಿದ. ನಾನು ನನ್ನ ಕುಟುಂಬಕ್ಕಾಗಿ ಅಷ್ಟೇ ಅಲ್ಲ, ನಮ್ಮ ಸುತ್ತ ನಡೆಯುತ್ತಿದ್ದ ಸಾರ್ವತ್ರಿಕ ಮಾನವೀಯ ನೋವಿಗೆ, ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಿದ್ದ. ಅವನ ಧೈರ್ಯವಾದ ಪ್ರಸ್ತಾವನೆ ಅದಕ್ಕೆ ಉತ್ತರವಲ್ಲ ಎಂಬುದು ನಮ್ಮಿಬ್ಬರಿಗೂ ಗೊತ್ತಿತ್ತು. ಆದರೆ, ಅದು ಕತ್ತಲ ಜಗತ್ತಿನಲ್ಲಿ ಬೆಳಕಿನ ಕಿರಣವಾಗಿತ್ತು. ನಾನು ಅವನನ್ನು ವಂದಿಸಿ ಅವನನ್ನು ಆಪ್ತವಾಗಿ ತಬ್ಬಿಕೊಂಡೆ, ನಾವಿಬ್ಬರೂ ಪರಸ್ಪರ ಬೀಳ್ಕೊಡುವ ಸಮಯ ಬರುವವರೆಗೆ. ನನ್ನ ತಂದೆ ತಾಯಿಯರಿಗೆ, ನಮ್ಮ ಪೊಲೀಸ್ ಸಂಗಾತಿಯೊಂದಿಗಿನ ನನ್ನ ಅನುಭವವನ್ನು ಹೇಳಲೇ ಇಲ್ಲ. ಆದರೆ ಅಷ್ಟು ಹೊತ್ತಿಗೆ, ಅನೇಕ ವಿಷಯಗಳ ಬಗ್ಗೆ ಅವರಲ್ಲಿ ಹೇಳುವುದನ್ನು ನಿಲ್ಲಿಸಿದ್ದೆ.

೧೯೩೮ರ ನವೆಂಬರ್ ೨೦ರಂದು ಅಡ್ರಿಯಾಟಿಕ್ ಕೋಸ್ಟಲ್ ಹಡಗನ್ನು

ಹತ್ತಿದೆವು. ಅಂದೇ ಓಟ್ವೊನಿನ ೨೬ನೆಯ ಹುಟ್ಟುಹಬ್ಬ; ಸ್ವಲಾಡೋನಿಂದ ಅವನಿಗೊಂದು ಶುಭಾಶಯ ಪತ್ರವನ್ನೂ ಕಳುಹಿಸಿದೆವು. ಯುಗೋಸ್ಲಾವಿಯಾದ ದಡಗಳು ದೂರದಲ್ಲಿ ಹಿಂದಕ್ಕೆ ಸರಿಯುವುದನ್ನು ಕಂಡಾಗ, ನಾನು ಬೇರುಗಳನ್ನು ಸಂಪೂರ್ಣವಾಗಿ ಕಳೆದುಕೊಂಡವಳಂತೆ ಭಾವಿಸಿದೆ. ನನ್ನೊಂದಿಗೆ ನನ್ನ ಕುಟುಂಬ ದಲ್ಲಿದ್ದಾಗ, ನಾನು ಎಲ್ಲಿದ್ದೇನೆಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಅದಕ್ಕೆ ವಿರುದ್ಧವಾಗಿ, ಅಪ್ಪನ ಯುಗೋಸ್ಲಾವಿಯಾದ ನಿರ್ಗಮನದಿಂದ ಅವರ ಜೀವನೋಪಾಯವನ್ನೇ ಬಿಟ್ಟು, ಅಜ್ಞಾತ ಸ್ಥಳಕ್ಕೆ ಹೋಗುವ ಸಾಹಸವಾಗಿದ್ದುದರಿಂದ ಅವರಿಗೆ ಅದು ಚಿಂತೆಯನ್ನುಂಟುಮಾಡಿತ್ತು. ಆದರೂ ನನಗೆ ಅದು ನನ್ನ ಸ್ವದೇಶದಿಂದ ದೂರ ಮತ್ತೊಂದು ಕಡೆಯ ಪ್ರಯಾಣವಾಗಿತ್ತು. ನಾನದನ್ನು ದ್ವೇಷಿಸಲು ಆರಂಭಿಸಿದ್ದೆ.

ಹಡಗಿನಲ್ಲಿ ಸಣ್ಣ ಮಗುವಿನೊಂದಿಗಿದ್ದ ಓರ್ವ ತರುಣ ಜರ್ಮನ್ ಯಹೂದಿ ದಂಪತಿಯನ್ನು ಭೇಟಿ ಮಾಡಿದೆವು. ಯುಗೋಸ್ಲಾವಿಯ ಮತ್ತು ಗ್ರೀಸ್ ನಡುವಿನ ದಡದಲ್ಲಿ ಅವರು ಪ್ರಯಾಣಿಸುತ್ತಿದ್ದುದು ಇದು ಎಂಟನೆಯ ಬಾರಿಯಾಗಿತ್ತು. ಈ ಏಟ್ರಿಯಾಟಿಕ್ ಹಡಗಿಗೆ ಟಿಕೆಟ್ ತೆಗೆದುಕೊಂಡರೆ, ಜರ್ಮನಿಯನ್ನು ತಪ್ಪಿಸಿಕೊಂಡು, ಹಡಗು ಮುಂದೆ ತಲುಪಲಿರುವ ಯಾವುದಾದರೊಂದು ದೇಶದಲ್ಲಿ ತಂಗಲು ಸಾಧ್ಯವಿದೆಯೆಂಬುದನ್ನು ಅವರು ಕೇಳಿದ್ದರು. ಅಯ್ಯೋ, ಅವರ ಆಸೆಗಳು ಈಡೇರಲಿಲ್ಲ. ಬೇರೆ ಯಾವುದೇ ದಡಕ್ಕೆ ಹೋಗಲು ನಿರ್ಬಂಧವಿತ್ತು. ಹಡಗಿನ ಕ್ಯಾಪ್ಟನ್ ಹಾಗೂ ಅದರ ಸಿಬ್ಬಂದಿಗೆ ಈ ತರುಣ ದಂಪತಿಯನ್ನು ಜರ್ಮನಿಗೆ ಮರಳಿ ಕಳುಹಿಸುವ ಜವಾಬ್ದಾರಿ ಹೊರಲು ವಾಸ್ತವವಾಗಿ ಮನಸ್ಸಿರಲಿಲ್ಲ. ಆದ್ದರಿಂದಲೇ ಅವರನ್ನು ಹಡಗಿನಲ್ಲೇ ಇರಲು ಆಸ್ಪದ ಕೊಟ್ಟಿದ್ದರು. ಅದಕ್ಕೆ ಪ್ರತಿಯಾಗಿ, ಈ ತರುಣ ದಂಪತಿ ಅಡುಗೆ ಕೋಣೆಯಲ್ಲಿ ಸಹಾಯ ಮಾಡುತ್ತಾ ಪ್ರಯೋಜಕರಾಗಿದ್ದರು. ಹೀಗೆ ಎಲ್ಲಿಯವರೆಗೆ ಅವರು ಇರಬಹುದೆನ್ನುವುದರ ಬಗ್ಗೆ ಅವರಿಗೆ ಮಾಹಿತಿಯಿರಲಿಲ್ಲ. ತನ್ನ ಗಂಡು ಮಗು ಹಡಗಿನಲ್ಲಿ ಅಂಬೆಗಾಲು ಇಡುತ್ತಾ, ದುರಂತದ ಛಾಯೆಯಿಲ್ಲದೆ ಸಂತೋಷದಿಂದ ಆಟವಾಡುತ್ತಿದ್ದುದನ್ನು ನೋಡಿ, ಅಳುತ್ತಿದ್ದ ಆ ತರುಣ ತಾಯಿಯನ್ನು ನಾನು ಆಗಾಗ್ಗೆ ನೋಡುತ್ತಿದ್ದೆ. ನಾವು ಆಲ್ಬೇನಿಯಾದ ಪ್ರವಾಸಿ ಕಾರ್ಡ್ ಬಗ್ಗೆ ಅವರಿಗೆ ತಿಳಿಸಿದೆವು. ಆದರೆ, ಅದಕ್ಕಾಗಿ ಅರ್ಜಿ ಸಲ್ಲಿಸಲು ಸ್ವತಃ ಆಲ್ಬೇನಿಯನ್ ಕಾನ್ಸುಲೇಟ್‌ಗೆ ಹೋಗಬೇಕೆಂದೂ ಆದರೆ ಅವರು ಎಲ್ಲಿಯೂ ಹಡಗಿನಿಂದ ಇಳಿಯಲು ಅವಕಾಶವಿಲ್ಲದ್ದರಿಂದ ಅರ್ಜಿ ಸಲ್ಲಿಸುವುದು ಅಸಾಧ್ಯವೆಂದು ಅವರಿಗೆ ತಿಳಿದಿತ್ತು. ಆದರೆ ಆಮೇಲೆ ಅವರಿಗೇನಾಯಿತು ಎಂದು ನನಗೆ ತಿಳಿಯಲೇ ಇಲ್ಲ; ಇಂತಹ ಅನೇಕ ಅಲ್ಪಕಾಲಿಕ ಮುಖಾಮುಖಿಯಂತೆ, ಅವು ನನ್ನ ತರುಣ ಮನಸ್ಸಿನ ಮೇಲೆ ಆಳವಾದ ಹಾಗೂ ಬಹುಕಾಲ ಇರುವ ಪ್ರಭಾವವುಂಟಾಯಿತು.

ನಾವು ಆಲ್ಬೇನಿಯಾದ ಬಂದರು, ಡರ್ರೆಸ್‌ನಲ್ಲಿ ಮಳೆ ಬೀಳುತ್ತಿದ್ದ ಬೆಳಿಗ್ಗೆ

ತಲುಪಿದೆವು. ನಮ್ಮ ಮನಸ್ಥಿತಿಯಂತೆಯೇ ಹವೆಯೂ ಅನುಕೂಲವಾಗಿತ್ತು. ಅದೊಂದು ವಿಕಾರವಾದ ಸ್ಥಳದಂತೆ ಕಂಡು ಬಂತು. ಆದರೆ ಅಲ್ಲಿ ನಾವು ಇಳಿಯಲೇ ಬೇಕು ಎಂದು ಗೊತ್ತಿತ್ತು. ಅಲ್ಲದೆ, ಆ ಸ್ಥಳದಲ್ಲೇ ನಾವು ತಂಗಿರಬೇಕಾಗಿತ್ತು, ಬೇರೆ ಒಳ್ಳೆಯ ಸ್ಥಳ ಸಿಗುವವರೆಗೆ. ಹಡಗಿನಲ್ಲಿ ಅಪ್ಪ ನಮ್ಮಲ್ಲಿನ ಸ್ವಲ್ಪ ಸ್ಟರ್ಲಿಂಗ್ ದುಡ್ಡನ್ನು ಆಲ್ಬೇನಿಯಾದ ದುಡ್ಡಿಗೆ ಬದಲಾಯಿಸಿದ್ದರು. ನಾವು ವಸತಿ ಕಂಡು ಕೊಳ್ಳುವವರೆಗೆ ಇರಲೆಂದು, ನಾವು ದಡದ ಮೇಲೆ ನಡೆಯುತ್ತಿದ್ದಾಗ, ಇಬ್ಬರು ಜರ್ಮನ್ ಯಹೂದಿಗಳನ್ನು ಕಂಡು ಆಶ್ಚರ್ಯವಾಯಿತು. ಅವರು ನಮ್ಮನ್ನು ಸ್ವಾಗತಿಸಿ, ಸುಮಾರು ೫೫ ಜನರ ಸಣ್ಣ ನಿರಾಶ್ರಿತರ ಸಮುದಾಯ ಡರ್ರೆಸ್‌ನಲ್ಲಿದೆ ಎಂದು ಹೇಳಿದರು. ನಾವೇ ಆಲ್ಬೇನಿಯಾಕ್ಕೆ ಮೊದಲು ಬರುವ ನಿರಾಶ್ರಿತರು ಎಂದು ತಿಳಿದಿದ್ದ ನನಗೆ ಈ ವಿಷಯ ಖುಷಿ ತರುವಂಥದಾಗಿರಲಿಲ್ಲ. ಇತರರು ಈಗಾಗಲೇ ಅನೇಕ ತಿಂಗಳುಗಳಿಂದ ಇದ್ದಾರೆಂದ ಮೇಲೆ, ನಮ್ಮ ತಂದೆ ತಾಯಿಯರು ತಿಳಿದಷ್ಟು ಕೆಟ್ಟ ಸ್ಥಳವೇನಲ್ಲ ಎಂದು ಯೋಚಿಸಿದೆ. ಬಂದರಿನ ಬಳಿಯಲ್ಲೇ ಇರುವ ಹೋಟೆಲ್ ಮೆಟ್ರೋಪೋಲ್‌ನಲ್ಲಿ ಸುಲಭ ದರದ ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಳ್ಳಬಹುದೆಂದು ನಮಗೆ ಸಲಹೆ ನೀಡಲಾಯಿತು. ನಮ್ಮ ಲಗೇಜನ್ನು ಹೋಟೆಲ್‌ಗೆ ಸ್ಥಳಾಂತರಿಸಿ, ನಮ್ಮ ಯಹೂದಿ ಮಾರ್ಗದರ್ಶಿಗಳೊಂದಿಗೆ ಅಲ್ಲಿ ಸಾಹಸದಿಂದ ಬೀಡುಬಿಟ್ಟೆವು.

ಮೆಟ್ರೋಪೋಲ್ ಹೋಟೆಲ್ ನನ್ನನ್ನು ಒಂದು ರೀತಿಯಲ್ಲಿ ಇದ್ದಕ್ಕಿದ್ದಂತೆ ವಾಸ್ತವ ಸ್ಥಿತಿಗೆ ತಂದಿತು. ನಾನು ನೋಡಿದ ಅತ್ಯಂತ ಗಲೀಜಾದ ಸ್ಥಳ ಅದಾಗಿತ್ತು. ಗೋಡೆಗಂಟಿಸಿದ ಕಾಗದವೆಲ್ಲಾ ಗೋಡೆಯಿಂದ ಕಿತ್ತುಬರುತ್ತಿತ್ತು. ಇಡೀ ಕಟ್ಟಡ ಥಂಡಿಯ ವಾಸನೆ ಹೊಡೆಯುತ್ತಿತ್ತು. ನಮಗೆ ತೋರಿಸಿದ ಕೊಠಡಿಯ ತುಂಬಾ ಹಳೆಯ, ಕೊಳಕು ಹಲಗೆಗಳು, ಬಿರುಕು ಬಿಟ್ಟ ಬೇಸಿನ್, ಮುರಿದ ಕುರ್ಚಿ ಮೇಜುಗಳು ಹಾಗೂ ಹಾಳಾದ ಕಿಟಕಿ ಚೌಕಟ್ಟುಗಳು. ತರುಣ ಹಾಗೂ ಸಾಹಸ ಶೀಲಳಾದ ನಾನೂ ಸಹ, ಅದರ ಬಗ್ಗೆ ಆಸಕ್ತಿ ತೋರಿಸಲು ಉತ್ಸಾಹವಾಗಲಿ, ಉತ್ತೇಜನವಾಗಲಿ ಇರಲಿಲ್ಲ. ಈ ಮಧ್ಯೆ ಅಮ್ಮ ಮತ್ತು ಅಪ್ಪ ಆಘಾತದಿಂದ ಬಿಳಿಚಿಕೊಂಡಿದ್ದರು, ಕುಸಿದುಬೀಳುವುದೊಂದು ಬಾಕಿ ಅಷ್ಟೇ. ಏನಾಗುತ್ತಿದೆ ಎಂಬುದನ್ನು ಮನಗಂಡು ಮೆಟ್ರೊಪೋಲ್ ಹೋಟೆಲ್ ದೊಡ್ಡದಲ್ಲದಿದ್ದರೂ, ಯಾವುದೇ ಶ್ರಮ ಶಿಬಿರಕ್ಕಿಂತ ಚೆನ್ನಾಗಿದೆಯೆಂದು ನಮ್ಮ ಹೊಸ ಯಹೂದಿ ಮಿತ್ರರು ನಮಗೆ ನೆನಪಿಸಿದರು. ಈ ಮಾತು ಸರಿಯಾದ ದೃಷ್ಟಿಕೋನದಿಂದ ಕೂಡಿದ್ದಿತು. ನಾನು ಕಷ್ಟಪಟ್ಟು ಭಯಾನಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಪಟ್ಟೆ.

ಡರ್ರೆಸ್ ಆಲ್ಬೇನಿಯಾದ ಒಂದು ಸಣ್ಣ ಪಟ್ಟಣ, ಇತರ ಅನೇಕ ಪಟ್ಟಣಗಳಂತೆ.

ಅದು ಬಡ, ಪಾಳುಬಿದ್ದ ದೇಶವಾಗಿತ್ತು. ಅನೇಕ ಗುಡಿಸಲುಗಳಿಂದ ತುಂಬಿದ ಪ್ರದೇಶವಾಗಿತ್ತು. ಜನ, ನಾನು ಊಹಿಸಿದ್ದಕ್ಕಿಂತ ಸಾಧ್ಯವಿಲ್ಲದ ಸ್ಥಿತಿಯಲ್ಲಿ ವಾಸಿಸುತ್ತಿದ್ದರು. ಜನಸಂಖ್ಯೆಯಲ್ಲಿ ಬಹುಸಂಖ್ಯಾತರು ಸಂಪ್ರದಾಯಸ್ಥ ಗ್ರೀಕರು, ಮಿಕ್ಕವರು ಮುಸ್ಲಿಮರು; ಅವೆರಡರಲ್ಲಿ ಯಾವ ಧರ್ಮವೂ ಮಹಿಳೆಯರು ರಸ್ತೆಗಳಲ್ಲಿ ಮುಕ್ತವಾಗಿ ಓಡಾಡಲು ಅಥವಾ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ನಿಷೇಧ ಹೇರಿತ್ತು. ಮುಕ್ತವಾಗಿ ಕಾಣಿಸಿಕೊಳ್ಳುತ್ತಿದ್ದವರೆಂದರೆ ಕೆಲವು ತರುಣ ಮಹಿಳೆಯರಲ್ಲಿ, ಕೆಲವು ವೇಶ್ಯೆಯರು ಮಾತ್ರ. ಅವರು ವೇಶ್ಯಾಗೃಹದಲ್ಲಿರುತ್ತಿದ್ದರೆಂದು ಆಮೇಲೆ ಗೊತ್ತಾಯಿತು. ನಾನಿನ್ನೂ ೧೬ ವರ್ಷ ವಯಸ್ಸಿನವಳಾಗಿದ್ದೆ. ಶಾಲಾ ಸಮವಸ್ತ್ರ ಹಾಗೂ ಮಂಡಿವರೆಗಿನ ಕಾಲುಚೀಲವನ್ನು ಧರಿಸುತ್ತಿದ್ದೆ. ನಾನು ಪಟ್ಟಣವನ್ನು ಏಕೆ ನೋಡಿ ಬರಬಾರದು ಎನ್ನಿಸಿತು. ನನ್ನ ತಂದೆತಾಯಿಯರು ಅದಕ್ಕೆ ನನ್ನನ್ನು ತಡೆದು ನಿಲ್ಲಿಸಲಿಲ್ಲ. ಅವರು ತಮ್ಮ ಅಂತಸ್ತಿನ ಬದಲಾವಣೆಯಿಂದ ಸಂಭ್ರಮಿಸಿ, ತಮ್ಮ ಪಾಲಿಗೆ ತಾವು ಇದ್ದುಬಿಟ್ಟಿದ್ದರು. ನಾನು ಬೀದಿಗಳಲ್ಲಿ ಓಡಾಡುತ್ತಿದ್ದಾಗ, ಕೆಲವು ಸ್ಥಳೀಯ ತರುಣರ ಗಮನವನ್ನು ಆಕ್ಷೇಪಿಸಿದ್ದೆನು. ನಾನು ವೇಶ್ಯಾಗೃಹದ ಹೊಸ ಸದಸ್ಯೆಯಲ್ಲ, ವಿಯೆನ್ನಾದಿಂದ ಬಂದವಳು. ತಂದೆ ತಾಯಿಯರೊಂದಿಗೆ ಇರುವವಳೆಂದು ಅವರಿಗೆ ಮನವರಿಕೆಯಾದಾಗ ಅವರು ನನ್ನನ್ನು ಅತಿ ಗೌರವದಿಂದ ಕಾಣತೊಡಗಿದರು. ನನಗೆ ಸರಳ ಸಂಭಾಷಣೆ ನಡೆಸಲು ಸಾಕಾಗುತ್ತಿತ್ತು. ನನ್ನ ತಂದೆ ತಾಯಿಯರು ಮತ್ತು ನಾನು ಸಂಜೆ ಹೊತ್ತು ಡರ್ರೆಸ್‌ನಲ್ಲಿದ್ದ ಒಂದೇ ಒಂದು ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದೆವು. ಹಾಗೆಯೇ ತರುಣರ ಗುಂಪೊಂದು ನಮ್ಮೊಂದಿಗೆ ಸೇರುತ್ತಿದ್ದಿತು. ರಾತ್ರಿಯವರೆಗೆ ಹರಟೆ ಹೊಡೆಯುತ್ತಿದ್ದೆವು. ಅಡಿಗೆಯವನು ಹಾಗೂ ಮಾಣಿ ಎರಡೂ ಆಗಿದ್ದ ಅದರ ಮಾಲೀಕ, ಈ ಹೊಸ ಗಿರಾಕಿಗಳಿಂದಾಗಿ ಹರ್ಷಗೊಂಡಿದ್ದ. ತಾನು ಅಡಿಗೆ ಕಲಿತುಕೊಂಡಿದ್ದು ವಿಯೆನ್ನಾದಲ್ಲಿ ಎಂದು ಹೆಮ್ಮೆಯಿಂದ ಹೇಳಿದ. ಅಡಿಗೆ ತಿನ್ನಲರ್ಹವಾಗಿದ್ದರೂ, ಶುಚಿತ್ವದ ಮಟ್ಟ ಮಾತ್ರ, ನಮ್ಮ ನಿರೀಕ್ಷೆಗಿಂತ ಕೆಳಮಟ್ಟದಲ್ಲಿತ್ತು. ಹಾಗಾಗಿ ನಾನು ಆ ಗಲೀಜಿಗೆ ಹೊಂದಿಕೊಳ್ಳಲು ಆರಂಭಿಸಿದ್ದೆ. ನಾನು ಮತ್ತು ಅಮ್ಮನ ಬಗ್ಗೆ ಆಸ್ಥೆ ತಾಳುವಂತೆ ಕಂಡನು. ಅವನು ವಿಶೇಷವಾಗಿ ತಯಾರಿಸಿದ್ದ ಮೀನು ಅಥವಾ ಮಾಂಸದ ಅಡಿಗೆ ರುಚಿ ನೋಡಲು ನಮ್ಮನ್ನು ನೆಲಮಾಳಿಗೆಗೆ ಕರೆದೊಯ್ದನು. ಶುಚಿತ್ವದ ಬಗ್ಗೆ ಅಮ್ಮ ಎಷ್ಟು ಗಡಿಬಿಡಿ ಮಾಡುತ್ತಿದ್ದರೆಂದು ತಿಳಿದು, ಅವಳು ನೆಲಮಾಳಿಗೆಗೆ ಇಳಿದು ಬರುವುದು ಬಹಳ ಅಪಾಯಕಾರಿ ಎಂದು ಹೇಳಿ, ನಾನೇ ಹೋಗುತ್ತಿದ್ದೆ. ಅಡುಗೆ ಮಾಡುತ್ತಿದ್ದ ಸ್ಥಳದ ಗತಿ ನೋಡಿದ್ದರೆ, ಅಮ್ಮ ಆಘಾತಗೊಂಡು ಮತ್ತೊಂದು ಚೂರನ್ನು ತಿನ್ನಲು ಒಪ್ಪುತ್ತಿರಲಿಲ್ಲವೇನೋ ಎನ್ನಿಸಿತು.

ಮೆಟ್ರೊಪೋಲ್ ಹೋಟೆಲ್‌ನಲ್ಲಿ ನಾವು ಕೆಲವು ವಾರಗಳವರೆಗೆ ತಂಗಿದೆವು.

ಆ ಸಮಯದಲ್ಲಿ ಇತರ ನಿರಾಶ್ರಿತರು ತಂಗಿದ್ದ ಆವರಣಕ್ಕೆ ಭೇಟಿ ಕೊಟ್ಟೆವು. ಅಲ್ಲಿ ಎಲ್ಲಾ ರೀತಿಯ, ವೃತ್ತಿಯ ಹಾಗೂ ರಾಷ್ಟ್ರೀಯತೆಯ ಜನರಿದ್ದರು. ಆದರೆ, ನಾವು ಯಾವುದೇ ರೀತಿಯ ಸಮಭಾವದ ಜನರನ್ನು ಭೇಟಿ ಮಾಡಲು ಉತ್ಸುಕರಾಗಿದ್ದೆವು. ಆಯ್ಕೆಗೊಂಡ ಸಮಿತಿಯವರು ನಡೆಸುತ್ತಿದ್ದ ಒಂದು ತರಹದ 'ಸಮುದಾಯ'ದಲ್ಲಿ ಅವರು ಒಟ್ಟಿಗೆ ವಾಸಿಸುತ್ತಿದ್ದರು. ಪ್ರತಿ ಕುಟುಂಬ ಅಥವಾ ಗುಂಪಿಗೆ ಒಂದು ಕೊಠಡಿಯಿತ್ತು. ಪ್ರತಿ ಸದಸ್ಯನಿಗೂ ನಿರ್ದಿಷ್ಟ ಕೆಲಸವನ್ನು ನಿಗದಿ ಮಾಡಲಾಗಿತ್ತು. ಮಹಿಳೆಯರು ಅಡುಗೆ ಮಾಡುತ್ತಿದ್ದರೆ, ಪುರುಷರು ಅಂಗಡಿಗೆ ಹೋಗುವುದು ಹಾಗೂ ಶುಚಿಗೊಳಿಸುವ ಕೆಲಸವನ್ನು ಮಾಡುತ್ತಿದ್ದರು. ಒಂದು ದಿನ ಸಮಿತಿಯವರು ನಮ್ಮನ್ನು ಊಟಕ್ಕೆ ಕರೆದು, ಅವರ ಆವರಣದಲ್ಲಿ ನಮಗೊಂದು ಕೊಠಡಿಯನ್ನು ನೀಡುವುದಾಗಿ ಹೇಳಿದರು. ನಾವು ನಮ್ಮ ಪರೀಕ್ಷೆಯ ಕೊನೆಯಲ್ಲಿ ತೇರ್ಗಡೆಯಾದೆವು. ಆದರೆ, ಇಷ್ಟು ಕಾಲ ಭಯಾನಕ ಮೆಟ್ರೊಪೋಲ್ ಹೋಟೆಲ್‌ನಲ್ಲಿರುವ ಹಾಗೆ ಮಾಡಿದ್ದಕ್ಕೆ ಅವರ ಬಗ್ಗೆ ನನಗೆ ಬಹಳ ಬೇಸರವಾಯಿತು. ಅಪ್ಪನ ತತ್‌ಕ್ಷಣದ ಪ್ರಶ್ನೆ ಈ ಅನುಕೂಲವನ್ನು ಕೇಳಿಸಿಕೊಂಡ ತಕ್ಷಣ ಎಂದರೆ, ನಾವೆಷ್ಟು ದುಡ್ಡು ಕೊಡ ಬೇಕಾಗುವುದು? ವಾಸ್ತವವಾಗಿ ಅಪ್ಪನಿಗೆ ನಾವು ಬರಿಗೈಯಾಗುತ್ತೇವೆಯೋ ಎಂಬ ಚಿಂತೆಯಾಗಿತ್ತು. ಆ ಆವರಣವನ್ನು ನಡೆಸುತ್ತಿದ್ದವರು ಅಮೆರಿಕದ ಅಂತರ ರಾಷ್ಟ್ರೀಯ ಯಹೂದಿ ಸಹಾಯ ಸಮಿತಿಯವರು ಎಂದು ಗೊತ್ತಾದ ತಕ್ಷಣ ಅಪ್ಪನ ಹೆದರಿಕೆ ಮಾಯವಾಯಿತು. ಪ್ರತಿ ನಿರಾಶ್ರಿತನಿಗೆ ದಿನಕ್ಕಿಷ್ಟು ಎಂಬಂತೆ ದುಡ್ಡು ಕಳುಹಿಸುತ್ತಿದ್ದರು.

ಮೆಟ್ರೋಪೋಲ್ ಅನ್ನು ಬಿಡುವುದು ಸಮಾಧಾನದ ವಿಷಯವಾಗಿತ್ತು; ನಮ್ಮ ಕೊಠಡಿ ಆವರಣದಲ್ಲಿ ಅರಮನೆಯಾಗಿರದಿದ್ದರೂ, ಅದು ಅರಮನೆಯಂತೆಯೇ ನಮ್ಮ ಪಾಲಿಗೆ ಇತ್ತು. ಅಪ್ಪ ಎಲ್ಲವನ್ನೂ ಹೊಂದಿಸಿ, ಕಿತ್ತಳೆ ಪೆಟ್ಟಿಗೆಗಳಿಂದ ಕುರ್ಚಿ ಮೇಜುಗಳನ್ನು ತಯಾರಿಸಲಾರಂಭಿಸಿದರು. ಹಾಗಾಗಿ, ನಮ್ಮ ಕೊಠಡಿ, ಹಾಸಿಗೆಗಳು, ಕುರ್ಚಿಗಳು, ಮೇಜು ಹಾಗೂ ಒಂದು ಬೀರುವಿನಿಂದ ಅಲಂಕೃತಗೊಂಡಿತು. ನಮ್ಮ ದಿನಭತ್ಯೆ ಬಹಳ ಕಡಿಮೆಯಿದ್ದು, ಎಚ್ಚರಿಕೆಯಿಂದ ಸರಿದೂಗಿಸಬೇಕಿತ್ತು. ಆವರಣದಲ್ಲಿದ್ದ ೫೫ ಜನ ನಿರಾಶ್ರಿತರ ಪೈಕಿ, ನಾವು ದಿನವೊಂದಕ್ಕೆ ಒಂದು ಪೌಂಡ್ ಕೊಬ್ಬಿನ ಪದಾರ್ಥವನ್ನು ಮಾತ್ರ ಕೊಳ್ಳಲು ಸಾಧ್ಯವಿತ್ತು. ಬ್ರೆಡ್, ಚೀಜ್ ಮತ್ತು ತರಕಾರಿಗಳನ್ನು ತಿನ್ನುತ್ತಿದ್ದೆವು. ಮೀನು ಮತ್ತು ಮಾಂಸ ಅಪರೂಪದ ಖಾದ್ಯಗಳಾಗಿದ್ದವು. ಹಣ್ಣುಗಳಂತೂ ನಾವು ಕೊಳ್ಳಲಾಗದಂತಹ ವೈಭವವಾಗಿತ್ತು. ನನ್ನ ಹೊಟ್ಟೆ ತಾಳ ಹಾಕುವುದಕ್ಕೆ ನಾನು ಹೊಂದಿಕೊಂಡೆ. ನಾನು ಒಪ್ಪಿಕೊಳ್ಳಲು ಇಷ್ಟಪಡದ ವಿಷಯವೆಂದರೆ, ಒಮ್ಮೊಮ್ಮೆ ಸಮುದಾಯದ ಆಹಾರ ಮಳಿಗೆಯಿಂದ ಬ್ರೆಡ್ ಅನ್ನು ಕದಿಯುತ್ತಿದ್ದೆ. ನಾನೊಮ್ಮೆ ಕಳ್ಳತನ ಮಾಡುತ್ತಿದ್ದಾಗ ಸಿಕ್ಕಿಬಿದ್ದು, ಸಮಿತಿಯೆದುರು ಅವಮಾನಿತಳಾಗಿದ್ದಕ್ಕೆ ಅಮ್ಮ ಮತ್ತು ಅಪ್ಪ ಬಹಳ ಬೇಸರ

ಮಾಡಿ ಕೊಂಡಿದ್ದರು; ಅವರಿಗೆ ಮಿಶ್ರಿತ ಭಾವೋದ್ವೇಗಗಳಿದ್ದುವು; ತಮ್ಮ ಮಗಳ ಬಗ್ಗೆ ಆಘಾತ ಕಳ್ಳಿ ಎಂದು; ಅಲ್ಲದೆ ತಮ್ಮ ಮಗುವಿಗೆ ತೀರ ಅಗತ್ಯ ವಸ್ತುವನ್ನೂ ಕೊಡಿಸಲಾಗದ ಬಗ್ಗೆ ತಪ್ಪಿತಸ್ಥ ಭಾವನೆ. ಆ ಸಮಯದಲ್ಲಿ ನಾನು ಅದನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಆದರೆ, ಆಗ ನಡೆದ ವಿಚಾರಣೆ ನನ್ನ ದಿನನಿತ್ಯದ ನಿರಾಶ್ರಿತ ಬದುಕಿನ ಭಾಗವೆಂಬುದಾಗಿ ಪರಿಗಣಿಸಿದೆ.

ಜೀವನ ಒಂದು ರೀತಿಯ ಬೇಸರದ ದಿನಚರಿಯಾಯಿತು. ಡರ್ರೆಸ್‌ನಲ್ಲಿ ಎಲ್ಲ ಕಡೆ ಏನಿದೆಯೆಂದು ತಿಳಿಯಲು ಓಡಾಡಿದ್ದೆ; ಅಲ್ಲಿ ಶಾಲೆಯಿರಲಿಲ್ಲ; ಓದಲು ಕೆಲವೇ ಪುಸ್ತಕಗಳೂ ಇರಲಿಲ್ಲ. ಇಬ್ಬರು ಸ್ಥಳೀಯ ಬಾಲಕಿಯರಿಗೆ, ಜರ್ಮನ್ ಮತ್ತು ಫ್ರೆಂಚ್ ಭಾಷೆಗಳನ್ನು ಹೇಳಿಕೊಡಲು ಕೇಳಿದಾಗ, ನನಗೆ ಖುಷಿಯಾಯಿತು. ಅವರು ಇತ್ತೀಚೆಗೆ ತಾನೆ ನಿಧನರಾಗಿದ್ದ ಆಲ್ಬೇನಿಯಾದ ಕ್ಯಾಬಿನೆಟ್ ಮಂತ್ರಿಯೊಬ್ಬರ ಮಕ್ಕಳಾಗಿದ್ದರು. ಅವರುಗಳು ಇಟಲಿಯಲ್ಲಿ ಓದಿದ್ದ ಬೋರ್ಡಿಂಗ್ ಸ್ಕೂಲ್‌ಗೆ ಹಿಂತಿರುಗುವುದು ಅವರ ತಾಯಿಗೆ ಬೇಡವಾಗಿತ್ತು. ಆ ಬಾಲಕಿಯರ ಸೋದರ, ಸ್ಥಳೀಯ ತರುಣರ ಪೈಕಿ ಒಬ್ಬನಾದ ಅವನೊಂದಿಗೆ ಸ್ನೇಹ ಬೆಳೆಸಿದ್ದೆ. ಹಾಗಾಗಿ ಅವನೇ ಈ ಸಲಹೆಯನ್ನು ನೀಡಿದ್ದನು. ನನ್ನ ಜೀವನದಲ್ಲಿ ಮೊದಲ ಬಾರಿಗೆ, ನಾನು ಹಣ ಸಂಪಾದಿಸುತ್ತಿದ್ದೆ. ಹಾಗೂ ನನ್ನ ಹೊಸ ಉನ್ನತ ಅಂತಸ್ತಿನಿಂದ ಪೂರ್ಣವಾಗಿ ಖುಷಿಪಟ್ಟೆ. ಆಲ್ಬೇನಿಯಾದಲ್ಲಿ ನಾನೊಬ್ಬಳೇ ನಿರಾಶ್ರಿತೆ ಕೆಲಸ ಮಾಡಿ ಸಂಪಾದಿಸುವಂತಾಗಿದ್ದು, ಕಾರಣ ನಾನೊಬ್ಬಳೇ ಸ್ಥಳೀಯರಲ್ಲಿ ಗೆಳೆಯರನ್ನು ಹೊಂದಿದ್ದವಳು. ಬೋಧಕ ಅನುಭವವನ್ನು ಹೊಂದಿರದ ನನಗೆ ಅದು ವಿಚಿತ್ರವಾಗಿ ಕಂಡಿತ್ತು ಹಾಗೂ ನನ್ನ ಇಬ್ಬರು ವಿದ್ಯಾರ್ಥಿನಿಯರೂ ನನಗಿಂತ ಕೆಲವು ವರ್ಷಗಳು ಮಾತ್ರ ಚಿಕ್ಕವರಾಗಿದ್ದರು. ನಮಗೆ ಸಾಮಾನ್ಯವಾದ ಭಾಷೆಯಿರಲಿಲ್ಲ. ಅವರು ಇಟ್ಯಾಲಿಯನ್ ಮತ್ತು ಆಲ್ಬೇನಿಯನ್ ಮಾತನಾಡಿದರೆ, ನಾನು ಜರ್ಮನ್ ಮತ್ತು ಅರ್ಧಂಬರ್ಧ ಫ್ರೆಂಚ್ ಭಾಷೆಯನ್ನು ಮಾತನಾಡುತ್ತಿದ್ದೆ. ನಾನು ಅವರಿಗೆ ಜರ್ಮನ್ ಮತ್ತು ಫ್ರೆಂಚ್ ಭಾಷೆಗಳನ್ನು, ಸಂಜ್ಞಾ ಭಾಷೆಗಳ ಹಾಗೂ ಸನ್ನೆ ಮೂಲಕ ಕಲಿಸಿದೆ. ಆ ಮೂಲಕ ನಾನೂ ಸ್ವಲ್ಪ ಇಟಾಲಿಯನ್ ಮತ್ತು ಸ್ವಲ್ಪ ಆಲ್ಬೇನಿಯನ್ ಭಾಷೆಗಳನ್ನು ಪರಿಚಯ ಮಾಡಿಕೊಂಡೆ. ಆಶ್ಚರ್ಯವೆಂದರೆ ಆ ಬಾಲಕಿಯರು ತಮ್ಮ ಪಾಠಗಳನ್ನು ಎಷ್ಟು ಇಷ್ಟಪಟ್ಟರೆಂದರೆ ಗಣಿತ ಶಾಸ್ತ್ರವನ್ನೂ ಸೇರಿಸಿ ಮತ್ತಷ್ಟು ಪಾಠಗಳನ್ನು ಸೇರಿಸಲು ಕೇಳಿಕೊಂಡರು.

ಜೀವನದಲ್ಲಿ ಒಂದು ಉದ್ದೇಶ ಕಂಡುಬಂತು. ಬೆಳಿಗ್ಗೆ ಹೊತ್ತು ನಾನು ಪಾಠ ಮಾಡುತ್ತಾ ಖುಷಿಪಟ್ಟೆ. ಕೆಲವೊಮ್ಮೆ ನನ್ನ ತರುಣ ವಿದ್ಯಾರ್ಥಿನಿಯರು, ನಾನು ಉತ್ತರಿಸಲಾರದ ಪ್ರಶ್ನೆಗಳನ್ನು ಕೇಳಿದಾಗ ನನಗೆ ಕೆಲವೊಮ್ಮೆ ನಗು ಬರುತ್ತಿತ್ತು. ಮಾರನೆಯ ದಿನ ಅವುಗಳನ್ನು ಉತ್ತರಿಸಲು ಅದೇ ಸಂಜೆ ನಾನು ಸಾಕಷ್ಟು ಸಿದ್ಧತೆ

ಮಾಡಿಕೊಳ್ಳಬೇಕಾಗಿತ್ತು. ಬೆಳಿಗ್ಗೆಗಳು ಕಳೆದುಹೋಗುತ್ತಿದ್ದವು. ಮಧ್ಯಾಹ್ನದಲ್ಲಿ ನಾನು ಸಾಮಾನ್ಯವಾಗಿ, ಆಲ್ಬೇನಿಯನ್ನರೇ ಆದ ತರುಣರ ಗುಂಪಿನೊಂದಿಗೆ ಸಮುದ್ರ ತೀರದ ಉದ್ದಕ್ಕೂ ವಿಹರಿಸುತ್ತಿದ್ದೆ. ಅವರಲ್ಲಿ ಕೆಲವರು ಮಾತ್ರ ನಿರಾಶ್ರಿತರೂ ಇದ್ದರು. ನಿರಾಶ್ರಿತ ತರುಣಿ ನಾನೊಬ್ಬಳೇ ಆಗಿ, ಆ ಗುಂಪಿನ ಆಕರ್ಷಕ ಬಿಂದು ನಾನಾಗಿದ್ದೆ. ಅದರ ಪ್ರತಿಯೊಂದು ಕ್ಷಣವನ್ನೂ ನಾನು ಆನಂದಿಸಿದೆ ಎಂದು ಹೇಳಿಕೊಳ್ಳಲು ನನಗೇ ಕೇಶವಾಗುತ್ತದೆ. ಕೆಲವು ವೇಳೆ ನನ್ನ ವಿದ್ಯಾರ್ಥಿನಿಯರ ಮನೆಗಳಿಗೆ, ಬೆಳಗ್ಗೆ ಪಾಠದ ನಂತರ ಮಹಿಳೆಯರ ವಸತಿಗಳಲ್ಲಿ ಕಾಲ ಕಳೆಯಲು ನನ್ನನ್ನು ಆಹ್ವಾನಿಸುತ್ತಿದ್ದರು. ಅವುಗಳು ಕುಟುಂಬದ ಮಹಿಳೆಯರ ಬಳಕೆಗಾಗಿ ಮಾತ್ರ ಮೀಸಲಾಗಿದ್ದವು; ಯಾವ ಪುರುಷರಿಗೂ ಕುಟುಂಬದ ಸದಸ್ಯರೇ ಆಗಿದ್ದರೂ ಪ್ರವೇಶವಿರಲಿಲ್ಲ. ಕೊಠಡಿಗಳೆಲ್ಲಾ ಬಣ್ಣಬಣ್ಣದ ಬಟ್ಟೆಗಳಿಂದ ಅಲಂಕೃತಗೊಂಡ, ಆರಾಮದಾಯಕ ಕುರ್ಚಿಗಳಿಂದ ತುಂಬಿದ್ದವು. ಗಾಜಿನ ಪೆಟ್ಟಿಗೆಗಳಲ್ಲಿ ಕುಟುಂಬದ ಒಡವೆಗಳೂ ಮತ್ತು ಥಳುಕು ಪಳಕಿನ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ನನ್ನನ್ನು ಅವರಲ್ಲೊಬ್ಬ ಮಹಿಳಾ ಅತಿಥಿಯಂತೆ ನೋಡಿಕೊಳ್ಳಲಾಗುತ್ತಿತ್ತು. ಪ್ರತಿ ಮಹಿಳೆಯೂ ಶೇಖರಿಸಿದ್ದ ನಿಧಿಯನ್ನು ಹೆಮ್ಮೆಯಿಂದ ತೋರಿಸಲಾಗುತ್ತಿತ್ತು. ಆಹ್ವಾನ ಪಡೆಯುವುದಕ್ಕೆ ನನಗೂ ಆನಂದವಾಗುತ್ತಿತ್ತು. ಕಾರಣ ನಾವು ಮೌನವಾಗಿರುತ್ತಿದ್ದುದೇ ಹೆಚ್ಚು, ಸುಮ್ಮನೆ ನಗುವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದವು. ಯಾವಾಗಲೂ ಕಡು, ಸಿಹಿ ಕಾಫಿ, ಬಟ್ಟಲಿನ ತುಂಬಾ ಸಕ್ಕರೆಯುಳ್ಳ ಕೇಕ್‌ನೊಂದಿಗೆ ದೊರೆಯುತ್ತಿತ್ತು. ನಾನು ಇಲ್ಲಿಗೆ ಬಂದಾಗ ಇದ್ದಂತೆ ಹಸಿದ ಹೊಟ್ಟೆಯಲ್ಲಿರಬೇಕಾಗಿರಲಿಲ್ಲ.

ಒಂದು ದಿನ ಬೆಳಿಗ್ಗೆ, ನಾನು ನನ್ನ ವಿದ್ಯಾರ್ಥಿನಿಯರಿಗೆ ಮಹಡಿ ಮೇಲಿನ ಕೊಠಡಿಯೊಂದರಲ್ಲಿ ಪಾಠ ಮಾಡುತ್ತಿದ್ದೆ. ಕೆಳಗಡೆಯಿಂದ ಇದ್ದಕ್ಕಿದ್ದಂತೆ ಕೂಗಾಟ ಮತ್ತು ಅರಚಾಟ ಕೇಳಿಸಿತು. ಅದರ ಧ್ವನಿಗಳಲ್ಲಿ ಅಪ್ಪನದೂ ಇದ್ದ ಹಾಗೆ ನಾನು ಗುರುತಿಸಿದೆ. ಅದಕ್ಕೆ ನಾವು ಕೆಳಗೆ ಇಳಿದು ಹೋದೆವು, ಏನಾಗುತ್ತಿದೆಯೆಂಬುದನ್ನು ನೋಡಲು. ಅಪ್ಪನನ್ನು ಸುತ್ತುವರಿದಿದ್ದ ಕುಟುಂಬದ ಅನೇಕ ಮಹಿಳೆಯರು, ಕೂಗಾಡುತ್ತಾ ನಮ್ಮಪ್ಪನನ್ನು ಬಾಗಿಲಿನಿಂದಾಚೆ ದೂಡುತ್ತಿದ್ದರು. ನನ್ನ ಅಪ್ಪ ಆ ಮಹಿಳೆಯರ ವಸತಿಯನ್ನು ಪ್ರವೇಶಿಸುವ ಧೈರ್ಯ ಮಾಡಿದುದಕ್ಕೆ ಅವರುಗಳು ಗಲಿಬಿಲಿಗೊಂಡಿದ್ದರು ಎಂದು ನನ್ನ ವಿದ್ಯಾರ್ಥಿನಿಯರು ವಿವರಿಸಿದರು. ಬಡಪಾಯಿ ಅಪ್ಪನಿಗೆ ಏನಾಗುತ್ತಿದೆ ಎಂಬುದೇ ಗೊತ್ತಿರಲಿಲ್ಲ. ತಕ್ಷಣವೇ ನಾನು ಅಪ್ಪನನ್ನು ಈ ಮಹಿಳೆಯರ ಆವೇಶದಿಂದ ಬಿಡಿಸಿ, ಹೊರಗೆ ಕರೆತಂದೆ, ಪುರುಷರಿಗೆ ನಿಷಿದ್ಧವಾಗಿದ್ದ ಸ್ಥಳಕ್ಕೆ ಹೇಗೆ ಅತಿಕ್ರಮಣ ಮಾಡಿದ್ದೀರೆಂದು ವಿವರಿಸುತ್ತಾ, ನನ್ನನ್ನು ಕಂಡು ಏದುಸಿರು ಬಿಡುತ್ತಾ, ಓಡಿ ಬಂದರು. ಏಕೆ ಬಂದೆ ಎಂದು ಹೇಳಲು ಕಷ್ಟಪಡುತ್ತಿದ್ದರು. ಅವರು ಆಡಿದ ಮಾತುಗಳಿಂದ ನಾನು ತಿಳಿದಿದ್ದೇನೆಂದರೆ, ಅವರನ್ನು ಪೊಲೀಸ್

ಅಧಿಕಾರಿಯು ತನ್ನ ಕಛೇರಿಗೆ ಬರಲು ಹೇಳಿದ್ದನಂತೆ. ಅಲ್ಲಿನ ಅಧಿಕೃತ ಭಾಷೆಯು ಫ್ರೆಂಚ್ ಆಗಿದ್ದುದರಿಂದ ಹಾಗೂ ಅಪ್ಪನಿಗೆ ಫ್ರೆಂಚ್ ಗೊತ್ತಿರಲಿಲ್ಲವಾದ್ದರಿಂದ, ಅವರಿಗೆ ಅನುವಾದಿಸಿ ಹೇಳಲು ನನ್ನ ಸಹಾಯ ಅತ್ಯಗತ್ಯವಾಗಿ ಬೇಕಿತ್ತು.

ತಕ್ಷಣವೇ ನಾನು ಬೇಗ ಹೊರಡಲು ಅನುಮತಿ ಪಡೆದು ಅಪ್ಪನೊಡನೆ ಟೌನ್‌ಹಾಲ್‌ಗೆ ನಡೆದೆ. ನಾನು ಊರಿನಲ್ಲಿ ನನ್ನ ತರುಣ ಮಿತ್ರರೊಡನೆ ಓಡಾಡುತ್ತಿದ್ದಾಗ ಪೊಲೀಸ್ ಅಧಿಕಾರಿ ಯಾರು ಎಂಬುದನ್ನು ನೋಡಿದ್ದೇ ಅವರ ಕಛೇರಿಗೆ ಹೋಗಿ ಅವರನ್ನು ಭೇಟಿ ಮಾಡಿದೆವು. ವಿಶಾಲವಾದ ಡೆಸ್ಕ್‌ನ ಹಿಂಬದಿಯಲ್ಲಿ ಕುಳಿತ ಆತ, ಕುಳ್ಳನಂತೆ ಕಂಡ. ಅವನೊಬ್ಬ ಹಾಸ್ಯಾಸ್ಪದ ವ್ಯಕ್ತಿಯಂತೆ ಕಂಡ. ಹಾಗೆಯೇ ಯಾವುದೇ ಬೆದರಿಕೆ ಹಾಕುವ ಪ್ರಜ್ಞೆ ಅವನಲ್ಲಿರಲಿಲ್ಲ. ನಮಗೆ ತನ್ನೆದುರಿಗೇ ಕುಳಿತುಕೊಳ್ಳಲು ಹೇಳಿದ. ನಿಮ್ಮಪ್ಪನಿಗೆ ಮಾತ್ರ ಹೇಳಿ ಕಳುಹಿಸಿದ್ದು, ನೀನೇಕೆ ಬಂದೆ ಎಂದು ನನ್ನನ್ನು ಪ್ರಶ್ನಿಸಿದ. ನಾನೇನಿದ್ದರೂ ದುಭಾಷಿಯಾಗಿ ಮಾತ್ರ ಬಂದಿದ್ದೇನೆಂದು ನಾನು ವಿವರಿಸಿದೆ. ತನ್ನ ಮುಂದೆ ಇರುವ ಫೈಲ್‌ಗಳ ಕಡೆ ಸಂಕೋಚದಿಂದ ತೋರಿಸಿ, ಸ್ವಲ್ಪ ಹೊತ್ತು ಮೌನವಾಗಿದ್ದ. ಅವನ ನಡವಳಿಕೆಯಿಂದ ನಾನು ಗೊಂದಲಕ್ಕೀಡಾದೆ. ನಮ್ಮನ್ನು ಆಲ್ಬೇನಿಯಾದಿಂದ ಹೊರ ಹಾಕಿದ್ದುದಕ್ಕೆ ಆತಂಕಗೊಂಡು, ಅಪ್ಪ ಏನಾಗುತ್ತಿದೆ ಎಂದು ಕೇಳಿದರು. ಆಗ ಆ ಅಧಿಕಾರಿ ನನ್ನ ಇರುವಿಕೆಯಿಂದ, ಕಾರಣ ಹೇಳಲು ತುಂಬಾ ಕಷ್ಟವಾಗುತ್ತಿದೆಯೆಂದು ಮತ್ತೆ ಮತ್ತೆ ಹೇಳಿದ. ನನ್ನಪ್ಪನಿಗೆ ನಾನು ದುಭಾಷಿಯಾಗಿರಬೇಕಾಗಿದೆ ಎಂದು ನಾನು ಮತ್ತೆ ಹೇಳಿದೆ. ಕೊನೆಗೆ ನನಗಾಗಿ ನಿಮ್ಮಪ್ಪ ಪರ್ಮಿಟ್ ಹೊಂದಿದ್ದಾರೆಯೇ ಎಂದು ಅಪ್ಪನನ್ನು ಕೇಳಲು ವಿನಂತಿ ಮಾಡಿಕೊಂಡ. ನನಗಾಗಿ ಯಾವ ತರಹದ ಪರ್ಮಿಟ್ ಅನ್ನು ಅಪ್ಪ ಪಡೆಯಬೇಕು ಎಂಬ ವಿಷಯವನ್ನು ಅರ್ಥಮಾಡಿಕೊಳ್ಳಲಾರದೆ, ಅಧಿಕಾರಿಯನ್ನು ವಿಶದವಾಗಿ ಹೇಳಲು ಕೇಳಿಕೊಂಡೆ. ಮತ್ತೊಂದು ದೀರ್ಘ ಮೌನದ ನಂತರ, ಆ ಅಧಿಕಾರಿ ಕೆಂಪಗಾಗುತ್ತಾ ಹೇಳಿದ, “ಆಲ್ಬೇನಿಯಾದಲ್ಲಿ ಕಾನೂನಿನ ಪ್ರಕಾರ ವೇಶ್ಯೆಯರನ್ನು ನಿಯಂತ್ರಿಸುವ ಪುರುಷರು, ಅವರಿಗಾಗಿ ಪರ್ಮಿಟ್‌ಗಳನ್ನು ಪಡೆದಿರಬೇಕು ಹಾಗೂ ವೇಶ್ಯೆಯರು ಸ್ಥಳೀಯ ವೈದ್ಯರಿಂದ ಕ್ರಮವಾಗಿ ಪರೀಕ್ಷೆಗೆ ಒಳಗಾಗಬೇಕು.” ಸ್ಥಳೀಯ ತರುಣರೊಂದಿಗಿನ ನನ್ನ ಮುಕ್ತ ನಡವಳಿಕೆಯಿಂದ ಪೊಲೀಸರು ನಾನೊಬ್ಬ ವೃತ್ತಿಪರ ವೇಶ್ಯೆಯೆಂದು ಹಾಗೂ ನಮ್ಮಪ್ಪ ನನ್ನ ಅನೈತಿಕ ಚಟುವಟಿಕೆಗಳಿಂದ ಹಣವನ್ನು ವಸೂಲಿ ಮಾಡುತ್ತಿರಬೇಕೆಂದು ಭಾವಿಸಿರಬೇಕೆಂದು ನನಗೆ ಮನವರಿಕೆಯಾಯಿತು.

ಆ ಅಧಿಕಾರಿ ತನ್ನನ್ನು ಕರೆಸಿದ್ದು ಏಕೆಂದು ವಿವರಿಸಬೇಕೆಂದು ಅಪ್ಪ ನನಗೆ ಒತ್ತಾಯ ಮಾಡುತ್ತಿದ್ದ. ನಾನು ನಿಜ ಹೇಳಿದರೆ ಅವರು ಆಕ್ರೋಶಗೊಳ್ಳುತ್ತಾರೆಂದೂ ಹಾಗೂ ಈ ಆಪಾದನೆಯನ್ನು ಅವರು ಅನುಭವಿಸಬೇಕಾಗಿ ಬರುವ ಮತ್ತೊಂದು

ಅಪಮಾನ ಎಂಬುದಾಗಿ ಪರಿಗಣಿಸಬಹುದೆಂದೂ ನನಗೆ ಗೊತ್ತಿತ್ತು. ಯಾವುದಕ್ಕೂ ಚಿಂತಿಸಬೇಕಾಗಿಲ್ಲ ಎಂದು ಕಛೇರಿಯಿಂದ ಹೊರನಡೆದ ನಂತರ ಎಲ್ಲವನ್ನೂ ವಿವರಿಸುವುದಾಗಿ ನಾನು ಅಪ್ಪನ ಕಿವಿಯಲ್ಲಿ ಮೆಲ್ಲಗೆ ಹೇಳಿದೆ. ಆಗ ನಾನು ಆ ಅಧಿಕಾರಿಗೆ, ನಾನು ಎಂದೂ ವೇಶ್ಯಾವಾಟಿಕೆಗೆ ತೊಡಗಿಲ್ಲ, ನಾನು ಇನ್ನೂ ಕನ್ಯೆಯಾಗಿಯೇ ಉಳಿದಿದ್ದೇನೆ. ವೈದ್ಯಕೀಯ ಪರೀಕ್ಷೆಗೆ ಒಳಗಾಗಲೂ ಸಿದ್ಧಳಿದ್ದೇನೆ ಹಾಗೂ ನಾನೇನಾದರೂ ಅವನು ಕೇಳಬೇಕೆಂದಿದ್ದ ಪ್ರಶ್ನೆಯನ್ನು ಸರಿಯಾಗಿ ವಿವರಿಸಿದರೆ, ನನ್ನ ಅಪ್ಪ ಅದನ್ನು ಅಕ್ಷಮ್ಯ ಅವಮಾನ ಎಂದು ತಿಳಿಯುವರು ಎಂದು ಸ್ಪಷ್ಟವಾಗಿ ಹೇಳಿಬಿಟ್ಟೆ. ಆಲ್ಬೇನಿಯಾದಿಂದ ಹೊರಗೆ ಎಲ್ಲೂ ಹೋಗಿಲ್ಲದ ಆ ಅಧಿಕಾರಿಗೆ, ವಿಯೆನ್ನಾದಲ್ಲಿ ತರುಣ ತರುಣಿಯರು, ಲೈಂಗಿಕ ಸಂಬಂಧಗಳನ್ನಿಟ್ಟುಕೊಳ್ಳದೆ ಅಥವಾ ಅದರಲ್ಲಿ ಆಸಕ್ತಿ ತೋರದೆ ಸಮೂಹ ಚಟುವಟಿಕೆ ಹಾಗೂ ಸುತ್ತಾಟದಲ್ಲಿ ತೊಡಗುವ ಪದ್ಧತಿಯಿದೆ ಎಂದು ಹೇಳಿದೆ. ಜಗತ್ತಿನ ಇತರ ದೇಶಗಳಲ್ಲಿ ಜೀವನದ ಬಗ್ಗೆ ಎಷ್ಟು ಆಸಕ್ತನಾದನೆಂದರೆ ಎಲ್ಲಾ ತರಹದ ಪ್ರಶ್ನೆಗಳನ್ನು ಕೇಳಲು ಆರಂಭಿಸಿದ. ನಾನು ಅವುಗಳನ್ನು ಸಾಧ್ಯವಾದ ರೀತಿಯಲ್ಲಿ ಉತ್ತರಿಸಲು ಪ್ರಯತ್ನಿಸಿದೆ. ಈ ಮಧ್ಯೆ, ನನ್ನ ಪಕ್ಕದಲ್ಲಿದ್ದ ಅಪ್ಪ ಚಡಪಡಿಸುತ್ತ, ನಾವೇನು ಮಾತನಾಡುತ್ತಿದ್ದೇವೆ ಎಂದು ತಿಳಿಯಲು ಆತಂಕಗೊಂಡಿದ್ದರು. ಕೊನೆಗೆ ಅಧಿಕಾರಿಯು ನಮ್ಮನ್ನು ಕಳುಹಿಸಿಬಿಟ್ಟನು. ವಿವೇಕರಹಿತವಾಗಿ ಮಾಡಿದ ಆರೋಪದ ಬಗ್ಗೆ ಕ್ಷಮೆ ಯಾಚಿಸಿದನು. ಅಲ್ಲದೆ, ಇಡೀ ಪ್ರಕರಣ ನಮ್ಮಿಬ್ಬರ ಮಧ್ಯೆ ರಹಸ್ಯವಾಗಿರಲಿ ಎಂದೂ ಒಪ್ಪಿಕೊಂಡೆವು. ಅಪ್ಪ ಹಾಗೂ ನಾನು ಕಛೇರಿಯಿಂದ ಹೊರಬಂದ ನಂತರ, ಅಪ್ಪನಿಗೆ ನಾನೊಂದು ಕತೆ ಕಟ್ಟಿ ಹೇಳಿದೆ. ನಿಮ್ಮನ್ನು ಒಕ್ಕೂಟದ ನಂತರ ವಿಯನ್ನಾದಲ್ಲಿ ಇಲ್ಲದ ಕಾರಣ ನೀವು ನಿಜವಾದ ನಿರಾಶ್ರಿತರೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಕಛೇರಿಗೆ ಕರೆ ಕಳುಹಿಸಿದ್ದರು ಎಂದು. ನಾವು ಸ್ನೇಹಮಯವಾಗಿ ಅಧಿಕಾರಿಯಿಂದ ಬೀಳ್ಕೊಟ್ಟ ಕಾರಣ ಸಮಸ್ಯೆ ಬಗೆಹರಿದಿರ ಬಹುದೆಂದು ಅಪ್ಪ ತಿಳಿದರು. ನಾನು, ಅಪ್ಪ ಅಥವಾ ಅಮ್ಮನಿಗಾಗಲಿ, ಪೊಲೀಸರು ಕರೆ ಕಳುಹಿಸಿದ ನಿಜವಾದ ಕಾರಣವನ್ನು ತಿಳಿಸಲಿಲ್ಲ.

ಆ ನಂತರ ಅಧಿಕಾರಿಯು ನಾನು ಓಡಾಡುತ್ತಿದ್ದಾಗ ನನ್ನ ಸಂಗಾತಿಗಳಾಗಿದ್ದ ತರುಣರ ಗುಂಪನ್ನು ಸೇರಿದ್ದನು. ನಾನಂತೂ ಡರ್ರೆಸ್‌ನ ಕಿಂದರಿಜೋಗಿಯಂತೆ ಭಾವಿಸಿದೆ. ಕಾರಣ, ನನ್ನನ್ನು ಹಿಂಬಾಲಿಸುತ್ತಿದ್ದ ತರುಣರ ಸಂಖ್ಯೆ ಪ್ರತಿ ದಿನವೂ ಹೆಚ್ಚಾಗುತ್ತಿತ್ತು. ನಾನು ನನ್ನ ಜನಪ್ರಿಯತೆಯ ಬಗ್ಗೆ ಆನಂದಿಸಿದೆ. ಗಂಡಸರಿಗೆ, ಮಧ್ಯ ಯೂರೋಪಿಯನ್ನರ ಜೀವನದ ಬಗ್ಗೆ ತಿಳಿಯುವುದು ಹಾಗೂ ಓರ್ವ ತರುಣಿಯ ಬಗ್ಗೆ ನಿಷ್ಕಾಮ ಸಂಬಂಧವನ್ನು ಹೊಂದುವ ಹೊಸ ಅನುಭವ ಉಂಟಾಯಿತು. ಆಲ್ಬೇನಿಯಾದಲ್ಲಿ ನಾನು ಹೊಸ ಜೀವನವನ್ನು ಆರಂಭಿಸಲು

ಪ್ರಯತ್ನಿಸುತ್ತಿದ್ದೇನೆ. ನಾನು ನನ್ನ ಹೊಸ ವಾತಾವರಣಕ್ಕೆ ಹೆಚ್ಚು ಹೊಂದಿಕೊಂಡಂತೆ, ನನ್ನ ತಂದೆ ತಾಯಿಯರು ಹೆಚ್ಚು ಅಸಂತೋಷವನ್ನು ಹೊಂದಿದವರಾದರು. ನಮ್ಮ ಹೊಸ ಜೀವನ ಮಾರ್ಗದ ನಿರಾಕರಣೆ ಮಾಡುತ್ತಿದ್ದರು. ನಮ್ಮ ಜೀವನವು ನನ್ನ ಮೇಲಿನ ಅವಲಂಬನೆ ಹಾಗೂ ಯೆಹೂದಿ ಸಹಾಯದಿಂದ ಹತಾಶೆಗೊಂಡು ನಾಟಕೀಯವಾಗಿ ಬದಲಾವಣೆಯಾಗಿದೆ ಎಂಬ ಆಘಾತದಲ್ಲಿದ್ದರು.

ಆವರಣದ ಜೀವನ ನಿರಾಶಾದಾಯಕವಾಗಿತ್ತು. ದೈನಂದಿನ ಕೈ ಕೆಲಸಕ್ಕಿಂತ ಹೆಚ್ಚಾಗಿ ತೊಡಗಿಸಿಕೊಳ್ಳುವಂತಹದ್ದೇನೂ ಇರಲಿಲ್ಲ. ನಮ್ಮ ಹಣ ಮತ್ತು ಆಹಾರವನ್ನು ಎಲ್ಲಾ ಸದಸ್ಯರು ಸಮಾನವಾಗಿ ಹಂಚಿಕೊಳ್ಳುತ್ತಿದ್ದುದರಿಂದ ಅದೊಂದು ಸಮಾನತಾ ಜೀವನವಾಗಬೇಕಿತ್ತು. ಆದರೆ, ಕೆಲವರು ಇತರರಿಗಿಂತ ಹೆಚ್ಚು ಸಮಾನರೆಂದು ಪರಿಗಣಿತವಾಗಬೇಕೆಂದು ಬಗೆದಿದ್ದ ಒಳಜಗಳ ಆರಂಭವಾಯಿತು. ಬೃಹತ್ ಜರ್ಮನ್ ಕಾರ್ ಉದ್ಯಮದಲ್ಲಿ ಹಿರಿಯ ಎಂಜಿನಿಯರ್ ಆಗಿದ್ದವರ ಹೆಂಡತಿ ಮಿಸೆಸ್ ಗ್ರೀನ್‌ಬರ್ಗ್ ತನ್ನನ್ನು ಮಿಸೆಸ್ ಎಂಜಿನಿಯರ್ ಎಂದೇ ಸಂಬೋಧಿಸಬೇಕೆಂದು ಹಠ ಹಿಡಿದಿದ್ದರು. ಅಲ್ಲದೆ, ಮತ್ತೊಬ್ಬ ನಿರಾಶ್ರಿತನು ಮರೆತೋ ಅಥವಾ ಉದ್ದೇಶಪೂರ್ವಕವಾಗಿ ಆಕೆಯನ್ನು ಕೇವಲ ಮಿಸೆಸ್ ಗ್ರೀನ್‌ಬರ್ಗ್ ಎಂದು ಕರೆದಿದ್ದಕ್ಕೆ ಆಕ್ರೋಶಗೊಂಡಿದ್ದಳು. ಆವರಣದಲ್ಲಿನ ವಾತಾವರಣ ಅನೇಕ ವೇಳೆ ಉದ್ವಿಗ್ನವಾಗುತ್ತಿ, ವಿಭಿನ್ನ ಕುಟುಂಬಗಳ ನಡುವೆ ನಿರಂತರ ಘರ್ಷಣೆ ನಡೆಯುತ್ತಿದ್ದುದರಿಂದ.

ಒಮ್ಮೊಮ್ಮೆ ನಾವು ನಮ್ಮ ಉಳಿವಿಗಾಗಿ ಓಡಿಹೋಗಬೇಕೆನ್ನುವಷ್ಟರ ಮಟ್ಟಿಗೆ ಅವರು ತಮ್ಮ ದಾರಿಯಿಂದಾಚೆ ಹೋಗುತ್ತಿದ್ದರು. ಅತ್ಯಂತ ಹೆಚ್ಚು ವಾಸ್ತವ ಹಾಗೂ ಸ್ಪರ್ಧಾತ್ಮಕ ವ್ಯತ್ಯಾಸಗಳಲ್ಲೊಂದು ಎಂದರೆ, ಧಾರ್ಮಿಕವಾಗಿ ಸಲಹಿದುದರ ಮಟ್ಟ ಅದು ನಿಜವಾದ ಸಂಪ್ರದಾಯಸ್ಥ ಎಂಬುದರಿಂದ ಹಿಡಿದು ಹೊಂದಿಕೊಂಡು ಹೋಗುವ ಯಹೂದಿಗಳವರೆಗೆ ವ್ಯಾಪಿಸಿತ್ತು. ಸಂಪ್ರದಾಯಸ್ಥ ಗುಂಪು ಯಹೂದಿ ಧರ್ಮದ ವಿಧಿಗೆ ಅನುಗುಣವಾದ ಅಡಿಗೆ ಮನೆಯನ್ನು ನಡೆಸಬೇಕೆಂದು ಸಂಪ್ರದಾಯಸ್ಥ ಗುಂಪು ಒತ್ತಿ ಹೇಳಿದರೆ, ಹೊಂದಾಣಿಕೆಯ ಯಹೂದಿಗಳು, ಈಗ ನಮ್ಮ ಜೀವನದ ಸ್ಥಿತಿಯಲ್ಲಿ ಇದು ಅನಾವಶ್ಯಕ ವೈಭವ ಎಂದು ವಾದಿಸುತ್ತಿದ್ದರು. ಇದು ದೈನಂದಿನ ಚರ್ಚೆಯಾದರೆ, ಯಹೂದಿ ಹಬ್ಬಗಳನ್ನು ಆಚರಿಸಲು ಎಲ್ಲರೂ ಒಪ್ಪಿಕೊಂಡರು. ನನ್ನ ಜೀವನದಲ್ಲಿ ಮೊದಲ ಬಾರಿಗೆ, ಹನೂಕ ಆಚರಣೆ ಬಗ್ಗೆ ತಿಳಿದುಕೊಂಡೆ. ಮೇಣದ ಬತ್ತಿ ಹಚ್ಚುವ ಹಾಗೂ ಹಬ್ಬದ ವಾತಾವರಣವನ್ನು ಸಮಗ್ರವಾಗಿ ಆನಂದಿಸಿದೆವು. ಈ ಯಹೂದಿ ಆಚರಣೆಗಳು ಅವಳ ಬಾಲ್ಯದ ಭಾಗವಾಗಿದ್ದುದರಿಂದ, ಅವಳಂತೂ ಉತ್ಸಾಹದಿಂದ ಅರಳುತ್ತಿದ್ದಳು.

ಹನೂಕಾ ಆಚರಣೆ ಅಗತ್ಯವಾಗಿ ಒಂದುಗೂಡಿಸುವ ಅನ್ಯಮನಸ್ಕತೆಯನ್ನು

ನೀಡಿತು. ಆದರೆ, ಅದು ಮುಗಿದ ತಕ್ಷಣ ನಾವು ಆರ್ದ್ರ ಹತಾಶೆಗೆ ಮರಳಿದೆವು. ಆಲ್ಬೇನಿಯಾದಲ್ಲಿ ನಮ್ಮ ಇರುವಿಕೆ ಕೊನೆಗೊಳ್ಳುತ್ತಿದೆ ಎಂದು ತಿಳಿದಾಗ, ಪ್ರತಿ ಕುಟುಂಬವೂ ವೀಸಾ ಹಾಗೂ ಪರ್ಮಿಟ್‌ಗಳನ್ನು ಪಡೆಯಲು ಹತಾಶೆಯ ಪ್ರಯತ್ನಗಳನ್ನು ಹೆಚ್ಚಿಸಲು, ಯಾವ ದೇಶ ಯಹೂದಿಗಳನ್ನು ಸೇರಿಸಿಕೊಳ್ಳಲು ಸಿದ್ಧವಿತ್ತೋ ಆ ದೇಶಕ್ಕೆ ಹೋಗಲು, ಅನೇಕರು ಅಮೆರಿಕಾಕ್ಕೆ ತೆರಳಲು ವೀಸಾಗೆ ಅರ್ಜಿ ಸಲ್ಲಿಸಿದರು. ಆದರೆ, ಇದಕ್ಕೆ ಬೇಕಾದ ಅಫಿಡವಿಟ್ ಪಡೆಯುವುದು ಕಷ್ಟವಾಗಿತ್ತು. ಕೋಟಾ ಸಂಖ್ಯೆಯೂ ಬೇಕಾಗಿತ್ತು. ಇಂಗ್ಲೆಂಡ್‌ಗೆ ಹೋಗಲು ಬ್ರಿಟಿಷ್ ಗೃಹ ಕಛೇರಿಯಿಂದ ಪರ್ಮಿಟ್ ಬೇಕಾಗಿತ್ತು. ಪುರುಷರಿಗೆ ಇದು ದೊರೆಯುವುದು ಕಷ್ಟವಾಗಿತ್ತು. ನಮ್ಮ ಬ್ರಿಟಿಷ್ ಪರ್ಮಿಟ್‌ಗಳನ್ನು ಪಡೆಯಲು ಓಟ್ಟೊ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದನು. ತನ್ನ ಕೆಲವು ಇಂಗ್ಲಿಷ್ ಮಿತ್ರರಿಗೆ ಅವನಿಗಾಗಿ ಆಂತರಿಕ ಪರ್ಮಿಟ್ ಪಡೆಯುವಂತೆ ಹೇಳಿದ್ದ ಹಾಗೂ ಓರ್ವ ಕೇಶ ವಿನ್ಯಾಸಗಾರನಿಗೆ ನನ್ನನ್ನು ತರಬೇತಿಗಾಗಿ ನೇಮಕ ಮಾಡಿಕೊಳ್ಳುವಂತೆ ಏರ್ಪಾಡು ಮಾಡಿದೆ. ೧೯೭೪ರ ಜನವರಿಯಲ್ಲಿ ಅವನು ನಮ್ಮ ಪ್ರವೇಶ ಪರ್ಮಿಟ್‌ಗಳು ಮಂಜೂರಾಗಿರುವ ಕಾರಣ, ನಾವು ಆದಷ್ಟು ಬೇಗನೆ ಇಂಗ್ಲೆಂಡ್‌ಗೆ ಪ್ರಯಾಣ ಮಾಡಲು ಸಿದ್ಧರಾಗಬೇಕೆಂದು ಕೇಬಲ್ ಕಳುಹಿಸಿದನು. ಅಪ್ಪ ನರಳುತ್ತಿದ್ದ ಹತಾಶೆಯ ಆಳವನ್ನು ಅವನು ಮನವರಿಕೆ ಮಾಡಿಕೊಳ್ಳಲಿಲ್ಲ. ಅಪ್ಪನೂ ಅಷ್ಟೇನು ತಲೆ ಕೆಡಿಸಿಕೊಳ್ಳದೆ, ಓಟ್ಟೊ ಎಷ್ಟು ಕಷ್ಟ ಪಟ್ಟಿರಬಹುದು ವೀಸಾ ಪಡೆಯಲು ಎಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ. ಇಷ್ಟೊಂದು ಕೃತಘ್ನರಾಗಿರುವುದಕ್ಕೆ ನಾನು ತರಾಟೆಗೆ ತೆಗೆದುಕೊಂಡಾಗ, ಅಪ್ಪ ಕಣ್ಣೀರು ತಂದುಕೊಂಡು, "ನೀವಿಬ್ಬರೂ ಹೋಗಿ ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ. ನಾನು ಯಾರಿಗೆ ಒಳ್ಳೆಯವನಲ್ಲ, ಇಲ್ಲೊ ಎಲ್ಲೋ ನಾನು ಸಾಯುತ್ತೇನೆ" ಎಂದರು. ಅಮ್ಮ, ಅಪ್ಪನನ್ನು ಸಮಾಧಾನಪಡಿಸಲೆತ್ನಿಸಿದಳು. ನಾವು ನಮ್ಮ ಪ್ರಯಾಣವನ್ನು ಸಾಧ್ಯವಾದಷ್ಟು ಮುಂದೂಡಬೇಕು, ಅಪ್ಪನಿಗೂ ವೀಸಾ ದೊರೆಯುವವರೆಗೆ ಎಂದು ನಾನು ನಿರ್ಧರಿಸಿದೆ. ಆದರೆ, ಅದಕ್ಕೆ ಓಟ್ಟೊ ಸಹಮತ ವ್ಯಕ್ತಪಡಿಸಲಿಲ್ಲ. ಕಾರಣ, ಅವನು ಸಾಕಷ್ಟು ಕಸರತ್ತು ಮಾಡಿದ್ದನು. ಆಮೇಲೆ ನಮಗೆ ಅವನು ತಿಳಿಸಿದಂತೆ, ನಮ್ಮ ಪರ್ಮಿಟ್‌ಗಳು ೧೯೩೯ರ ಏಪ್ರಿಲ್ ೩೦ರಂದು ಅಂತ್ಯಗೊಳ್ಳುತ್ತಿತ್ತು. ಆ ಹೊತ್ತಿಗೆ ಅಮ್ಮ ಮತ್ತು ನಾನು ಇಂಗ್ಲೆಂಡ್ ತಲುಪಬೇಕು. ಇಲ್ಲದಿದ್ದರೆ, ಹೊಸ ವೀಸಾಗಳನ್ನು ಏರ್ಪಾಡು ಮಾಡಲು ಅಸಾಧ್ಯವಾಗುವುದೆಂದು ಎಚ್ಚರಿಕೆ ನೀಡಿದನು. ಅಪ್ಪನಿಗಾಗಿ ಪರ್ಮಿಟ್ ಪಡೆಯಲು ಅವನು ಎಲ್ಲಾ ಪ್ರಯತ್ನ ಮಾಡುತ್ತಿರುವುದಾಗಿ ಮತ್ತೆ ಮತ್ತೆ ಹೇಳಿದ. ಆದರೆ, ಅದನ್ನು ಪುರುಷರಿಗೆ ಪಡೆಯುವುದು, ಮಹಿಳೆಯರಿಗೆ ಪಡೆಯುವುದಕ್ಕಿಂತ ಕಷ್ಟವಾಗಿತ್ತು. ಅಮ್ಮ ಮತ್ತು ನಾನು ೧೯೩೯ರ ಫೆಬ್ರವರಿ ಮಾರ್ಚ್ ಪೂರ್ತ ಡರ್ರೆಸ್‌ನಲ್ಲಿಯೇ ಉಳಿದೆವು.

ಇಂಗ್ಲೆಂಡ್‌ಗೆ ಹೋಗಲು ನಮಗೆ ಪರ್ಮಿಟ್ ಇತ್ತೆಂಬ ವಿಷಯ, ನಮ್ಮ ಸಂಗಾತಿ ನಿರಾಶ್ರಿತರಲ್ಲಿ ಸಾಕಷ್ಟು ಹೊಟ್ಟೆಕಿಚ್ಚು ಹುಟ್ಟಿಸಿತ್ತು. ಈ ಸ್ಥಳ ಬಿಟ್ಟು ಹೋಗಲು ಅವಕಾಶವಿರುವವರು ಏಕೆ ತಾನೆ ಆಲ್ಬೇನಿಯಾದಲ್ಲಿ ಉಳಿದುಕೊಳ್ಳುತ್ತಾರೆ ಎಂದು ಅವರು ಅರ್ಥ ಮಾಡಿಕೊಳ್ಳಲಾರದವರಾಗಿದ್ದರು. ಅವರ ಹೊಟ್ಟೆಕಿಚ್ಚು ಎಷ್ಟು ವ್ಯಾಪಿಸಿತೆಂದರೆ, ಯಹೂದಿ ಸಹಾಯವು ಅತ್ಯಂತ ಜರೂರಿನ ಆವಶ್ಯಕತೆಗೇ ಹೊರತು ನಮ್ಮಂತಹವರಿಗಲ್ಲ ಎಂಬ ಕಾರಣದಿಂದ ಅಮ್ಮ ಮತ್ತು ನನ್ನನ್ನು ಹೊರಹಾಕುವುದಾಗಿ ಸಮಿತಿ ಬೆದರಿಕೆಯನ್ನು ಒಡ್ಡಿತು. ಕೊನೆಗೆ ಅಪ್ಪನ ಹೆಚ್ಚುತ್ತಿದ್ದ ಆತ್ಮಹತ್ಯಾ ಬೆದರಿಕೆಯಿಂದಾಗಿ ನಾವುಗಳು ಅಲ್ಲೇ ಉಳಿಯಲು ಆಸ್ಪದ ನೀಡಿದರು. ಅಪ್ಪನ ತಡರಾತ್ರಿಯ ಗೋಳು ಅವರಿಗೆ ಗೊತ್ತಿತ್ತು.

೧೯೩೯ರ ಫೆಬ್ರವರಿಯಲ್ಲಿ ಒಂದು ದಿನ ಓರ್ವ ಇಟಲಿಯ ತರುಣ, ನಮ್ಮ ಪ್ರವಾಸಿ ತಂಡದ ಸದಸ್ಯನೊಬ್ಬ, ಇಟಲಿಯ ಕಾನ್ಸಲ್ ಜರ್ಮನ್ ಭಾಷೆ ಕಲಿಸುವ ಸಂಬಂಧ ನನ್ನನ್ನು ಭೇಟಿ ಮಾಡಲು ಉತ್ಸುಕರಾಗಿದ್ದಾರೆಂದು ಹೇಳಿದನು. ನನ್ನ ಬೆಳಗಿನ ಪಾಠದ ನಂತರ ನಾನು ಕಾನ್ಸಲ್‌ರವರನ್ನು ಭೇಟಿ ಮಾಡಿದೆ. ವಾರಕ್ಕೆ ಮೂರು ಗಂಟೆಗಳು ಅವರಿಗೆ ಪಾಠ ಮಾಡಲು ಒಪ್ಪಿಕೊಂಡೆ. ಅದಕ್ಕಾಗಿ ಅವರು ನೀಡಿದ ಅಲ್ಪ ಸಂಭಾವನೆಯನ್ನು ಕೃತಜ್ಞತಾ ಭಾವದಿಂದ ಸ್ವೀಕರಿಸಿದೆ. ಈ ಆಕಸ್ಮಿಕ ಭೇಟಿಯು ನಮ್ಮ ಯೋಜನೆಗಳಿಗೆ ಇಷ್ಟೊಂದು ಪೂರಕವಾಗುವುದೆಂದು ನನಗೆ ತಿಳಿದಿರಲಿಲ್ಲ.

* * * *

# ೫. ಮಹಾ ಪಲಾಯನ

೧೯೩೯ರ ಈಸ್ಟ್ ಹಬ್ಬದ ಸ್ವಲ್ಪ ಮೊದಲು, ಮುಸ್ಸೋಲಿನಿ ಆಲ್ಬೇನಿಯಾವನ್ನು ಆಕ್ರಮಿಸಿದ. ದೇಶದ ರಕ್ಷಣಾ ಸಾಮರ್ಥ್ಯ ಹೀನಾಯಯವಾಗಿ ದುರ್ಬಲವಾಗಿದ್ದಿತು. ಅದರ ಸೈನ್ಯದಲ್ಲಿ ಅರ್ಧ ಡಜನ್ ಮೆಷಿನ್ ಗನ್‌ಗಳಿಗಿಂತ ಹೆಚ್ಚೇನೂ ಇರಲಿಲ್ಲ ಹಾಗೂ ಅದರ ನೌಕಾದಳದಲ್ಲಿ ದೊರೆ ಜೋಗ್‌ಗೆ ಸೇರಿದ ವೈಯಕ್ತಿಕ ಹಡಗು ಮಾತ್ರ ಇತ್ತು. ನನ್ನ ಆಲ್ಬೇನಿಯಾದ ಮಿತ್ರರು ತಮ್ಮ ಸ್ವಾತಂತ್ರ್ಯ ಎಷ್ಟು ಪ್ರಮುಖವಾಗಿತ್ತೆಂದು ನನಗೆ ಹೇಳಿದರು. ಆದರೆ, ಕೆಲವೇ ಅಸ್ತ್ರಗಳು ಹಾಗೂ ಬೆರಳೆಣಿಕೆಯಷ್ಟು ಜನ ಸೈನಿಕರನ್ನು ಸೇನೆಯಲ್ಲಿಟ್ಟುಕೊಂಡು ಅವರೇನೂ ಮಾಡುವಂತಿರಲಿಲ್ಲ.

ವಿಶಾಲವಾದ ಇಟಲಿ ಯುದ್ಧನೌಕೆಗಳು ದಿಗಂತದಲ್ಲಿ ಕಾಣಿಸಿಕೊಂಡಾಗ ಡರೆಸ್‌ನ ಸ್ಥಿತಿ ಅರಾಜಕವಾಯಿತು. ಶ್ರೀಮಂತ ನಿವಾಸಿಗಳೆಲ್ಲಾ ಆತುರಾತುರದಲ್ಲಿ ದೇಶದ ಒಳಗಡೆ ಸೇರಿಕೊಂಡರು. ಅಗತ್ಯ ವಸ್ತುಗಳನ್ನು ಸಂಗ್ರಹಿಸಲು ಜನ ಅಂಗಡಿಗಳಿಗೆ ದಾಳಿ ನಡೆಸುತ್ತಿದ್ದರು. ಕಿಟಕಿ ಮೂಲಕವೇ ಬಸ್ಸಿನೊಳಗೆ ನುಗ್ಗುತ್ತಿದ್ದರು. ಹಾಗೂ ಬಸ್ ನಿಲ್ದಾಣ, ದೂರದ ಊರುಗಳಿಗೆ ಹೋಗುವ ಜನರಿಂದ ತುಂಬಿ ತುಳುಕುತ್ತಿತ್ತು. ನಮ್ಮ ಆವರಣದ ನಿವಾಸಿಗಳಿಗೆ ಮನೆ ಖಾಲಿ ಮಾಡಲು ಸೂಚಿಸಲಾಗಿತ್ತು. ಕಾರಣ ಅದು ಇದ್ದುದು ಡೆರೆಸ್‌ನಲ್ಲಿನ ಕೇವಲ ಎರಡು ಮೆಷಿನ್ ಗನ್‌ಗಳನ್ನು ಸಂಗ್ರಹಿಸಿದ್ದ ಪೊಲೀಸ್ ಠಾಣೆಯ ಪಕ್ಕದಲ್ಲಿ. ಆದ್ದರಿಂದ ಅದು ಇಟಲಿ ಜನರ ಸ್ವಾಭಾವಿಕ ಗುರಿಯಾಗಬಹುದಾಗಿತ್ತು.

ಇಟಲಿಯನ್ನರ ಆಕ್ರಮಣ ಶುಭ ಶುಕ್ರವಾರ ಆರಂಭವಾಗಬಹುದೆಂದು ನಿರೀಕ್ಷಿಸಲಾಗಿತ್ತು. ಹಿಂದಿನ ಸಂಜೆಯೇ ಊರು ಖಾಲಿಯಾಗಿತ್ತು; ಆಲ್ಬೇನಿಯಾದ ಕೆಲವೊಂದು ಸೈನಿಕರ ವಿನಃ ಅಲ್ಲಿ ಯಾರೊಬ್ಬರೂ ಇರಲಿಲ್ಲ. ಮುಂದಿನ ಆಯ್ಕೆಗಳನ್ನು ಚರ್ಚಿಸುತ್ತಾ ನಾವು ನಮ್ಮ ಆವರಣದಲ್ಲಿ ತುರ್ತು ಸಭೆ ನಡೆಸುತ್ತಿದ್ದೆವು. ಸಾಕಷ್ಟು ಬಿಸಿಬಿಸಿ ಚರ್ಚೆಯ ನಂತರ, ಡರ್ರೆಸ್‌ನಲ್ಲಿಯೇ ಇರುವುದಕ್ಕಿಂತ ಬೇರೆಯೇನೂ ಮಾಡಲು ಸಾಧ್ಯವಿಲ್ಲ ಹಾಗೂ ಇಟಲಿಯನ್ನರು ಹೇಗೆ ನಮ್ಮನ್ನು ನೋಡಿಕೊಳ್ಳುತ್ತಾರೆ ಎನ್ನುವುದು ನಮಗೆ ವಾಸ್ತವವಾಯಿತು. ಏನಾದರೂ ಕದನ ಆರಂಭವಾದರೆ, ಓಡಿಹೋಗಿರುವ ಮಾಲೀಕರ ಮನೆಯ ನೆಲಮಾಳಿಗೆಯಲ್ಲಿ ಆಶ್ರಯ

ಪಡೆಯುವುದೆಂದು ನಿರ್ಧರಿಸಿದೆವು. ನಾವು ಯಾರೊಬ್ಬರೂ ಆ ರಾತ್ರಿ ಮಲಗಲಿಲ್ಲ; ಅನಿವಾರ್ಯವಾದುದಕ್ಕೆ ಆತಂಕದಿಂದ ಕಾಯುತ್ತಾ ಸಿದ್ಧರಾಗಿ ಕುಳಿತೆವು. ಶಾಂತವಾಗಿರಲು ನಾನು ಕಷ್ಟಪಟ್ಟು ಪ್ರಯತ್ನಿಸಿದೆ. ಆದರೆ ಮತ್ತೆ ನಾನೇ ಆಶ್ಚರ್ಯಪಟ್ಟೆ ಏಕೆ? ಆಲ್ಬೇನಿಯಾದಲ್ಲಿ ಸುರಕ್ಷಿತ ತಾಣವೊಂದನ್ನು ಸ್ಥಾಪಿಸಲು ನಾನು ಎಷ್ಟು ಸಮಯ ಹಾಗೂ ಶಕ್ತಿಯನ್ನು ವಿನಿಯೋಗಿಸಿದ್ದೆ. ಆದರೂ ಇಲ್ಲಿ ಮತ್ತೊಮ್ಮೆ ನಮ್ಮ ಜೀವಗಳ ಬಗ್ಗೆಯೇ ಚಿಂತೆಯಾಗುತ್ತಿತ್ತು. ಇಟಾಲಿಯನ್ನರೂ, ಜರ್ಮನರಂತೆ ಯಹೂದಿ ವಿರೋಧಿಗಳೂ ಹಾಗೂ ಹಿಟ್ಲರನಂತೆ ಅವರೂ ನಮ್ಮನ್ನು ನಿರ್ಮೂಲನ ಮಾಡಲಿಚ್ಛಿಸುತ್ತಾರೋ ಎಂದು ನನಗೆ ಗೊತ್ತಿರಲಿಲ್ಲ. ಅಪ್ಪನಿಂದಾಗಿ ನಾವು ಇಂಗ್ಲೆಂಡಿಗೆ ಹೋಗುವ ಅವಕಾಶವನ್ನು ಕೈಬಿಟ್ಟೆವು. ನಮ್ಮನ್ನು ಈಗ ಕರೆಯುವವರಾರು? ಪ್ರಶ್ನೆಗಳು ನನ್ನ ತಲೆಯಲ್ಲಿ ಒಂದೇ ಸಮನೆ ಹರಿದಾಡಿದವು, ನನ್ನ ತಲೆ ತಿರುಗುವವರೆಗೆ.

ಬೆಳಗಾಗುತ್ತಿದ್ದಂತೆಯೇ, ಸೂರ್ಯನ ಮೊದಲ ಕಿರಣಗಳು ಕಿಟಕಿ ಮೂಲಕ ತೂರಿ ಬರುತ್ತಿದ್ದಂತೆ, ಮೊದಲ ಸುತ್ತಿನ ಬಂದೂಕು ಶಬ್ದ ಕೇಳಿಸಿತು. ಓರ್ವ ಪೊಲೀಸ್ ಪೇದೆ ಓಡಿ ಬಂದು ಹೊರನಡೆಯಿರೆಂದು ನಮಗೆ ಹೇಳಿದ. ಅದಕ್ಕೆ ನಾವು ಕುರುಡು ಭಯದಿಂದ ಸುತ್ತುವರಿದು, ರಾತ್ರಿಯೆಲ್ಲಾ ಇದಕ್ಕಾಗಿ ಕಾದರೂ ಸಹ, ನಾವೆಷ್ಟೂ ಸಿದ್ಧ ಮಾಡಿಕೊಳ್ಳಲಿಲ್ಲವೆಂಬುದು ಮನವರಿಕೆಯಾಯಿತು. ನಮ್ಮ ಮನಸ್ಸಿನ ತುಂಬಾ ಪ್ರಶ್ನೆಗಳು ಸುಳಿದಾಡಿದವು. ನಾವು ಮರಳಿ ಈ ಬದಲಿ ಮನೆಗೆ ಹಿಂತಿರುಗುತ್ತೇವೆಯೆ? ನಮ್ಮ ಎಲ್ಲಾ ಪ್ರಾಪಂಚಿಕ ಸ್ವತ್ತುಗಳಿಗೇನಾಗಬಹುದು? ನಾವು ಪ್ಯಾಕ್ ಮಾಡಬೇಕೆ? ನಮ್ಮ ಆತುರದಲ್ಲಿ ಸುಲಭವಾಗಿ ಕೊಂಡೊಯ್ಯು ವಂಥದನ್ನು ಮಾತ್ರ ತೆಗೆದುಕೊಳ್ಳಲು ಒಪ್ಪಿಕೊಂಡೆವು. ನಾನು ನನ್ನ ಇಷ್ಟವಾದ ಟೋರ್‌ಬರ್ಗ್ ವಿರಚಿತ The Student Gender has Finished ಪುಸ್ತಕವನ್ನು ಬಾಚಿಕೊಂಡೆ ಹಾಗೂ ಹಿಂದಿರುಗಿ ನೋಡದೆ ಬಾಗಿಲ ಮೂಲಕ ಓಡಿದೆ.

ನಮ್ಮ ತಲೆಯ ಮೇಲೆ ಬಂದೂಕು ಗುಂಡು ಹೊಡೆಯುತ್ತಿದ್ದಂತೆ ನಾವು ನಮ್ಮ ಮನೆಗಳ ಹಿಂದಿನ ವಿಶಾಲ ಹೊಲಗಳಲ್ಲಿ ಓಡಿದೆವು. ನಾವು ಸುರಕ್ಷಿತ ಜಾಗದ ಕಡೆ ಓಡಿದಾಗ, ನಮ್ಮ ಗುಂಪಿನ ವಯಸ್ಸಾದವರು ನಮ್ಮೊಂದಿಗೆ ಓಡಲು ಕಷ್ಟ ಪಡುತ್ತಿದ್ದರು. ಬೇಲಿಗಳನ್ನು ಹತ್ತಲು ಅವರಿಗೆ ಸಹಾಯ ಮಾಡಬೇಕಿತ್ತು. ಮತ್ತೆ ಕೆಲವರನ್ನು ಅಕ್ಷರಶಃ ಎತ್ತಿಕೊಂಡು ಹೋಗಬೇಕಿತ್ತು. ಕೊನೆಗೆ ಸೂಕ್ತವಾದ ಸುರಕ್ಷಿತ ಸ್ಥಳವೆಂದು ಗುರುತಿಸಿದ್ದ ವಿಶಾಲವಾದ ಮನೆಯನ್ನು ತಲುಪಿ ಬಾಗಿಲು ಬಡಿದೆವು. ಮನೆಯನ್ನು ಕಾಯಲು ಬಿಟ್ಟಿದ್ದ ನೌಕರರು, ಶಬ್ದ ಕೇಳಿ ಆಶ್ಚರ್ಯದಿಂದ, ಮನಸ್ಸಿಲ್ಲದೆ ಬಾಗಿಲು ತೆರೆದರು. ಬಾಗಿಲ ಚಿಲಕ ಸರಿಯುತ್ತಿದ್ದಂತೆ ನಾವು ನುಗ್ಗಿದೆವು. ನಾವು ಒಳಹೋಗದಂತೆ ಅವರು ನಮ್ಮನ್ನು ತಡೆಯಲು ಪ್ರಯತ್ನಿಸಿದರು. ಆದರೆ ನಾವು ಅವರಿಗಿಂತ ಹೆಚ್ಚು ಜನರಿದ್ದುದರಿಂದ ಬೇಗನೆ ಅವರನ್ನು ಅಡಗಿಸಿದೆವು.

ನಾವು ಸೀದಾ ನೆಲಮಾಳಿಗೆಗೆ ಹೋಗಿ ಅಲುಗಾಡದೆ ಮುದುರಿಕೊಂಡು ಕುಳಿತೆವು, ಗುಂಡಿನ ಹೊಡೆತ ನಿಲ್ಲಲೆಂದು ಕಾಯುತ್ತಾ. ಈ ರೀತಿ ನಾವು ಕೆಲವು ಗಂಟೆಗಳ ವರೆಗೆ ಕುಳಿತೆವು. ಆದರೆ, ಆ ತಳಮಳವನ್ನು ತಡೆಯಲಾಗಲಿಲ್ಲ. ಹಾಗಾಗಿ, ನಮ್ಮ ಏಕಾಗ್ರತಾ ಭಂಗ ಮಾಡಲು, ನಾವುಗಳೊಬ್ಬೊಬ್ಬರೂ ಯಾವ ಒಂದು ವಸ್ತುವನ್ನು ನಾವು ತೆಗೆದುಕೊಂಡು ಬಂದಿದ್ದೆವು ಆವರಣ ಬಿಟ್ಟಾಗ ಎಂಬುದನ್ನು ತಿಳಿದುಕೊಳ್ಳಲು ನಿರ್ಧರಿಸಿದೆ. ಒಬ್ಬ ವ್ಯಕ್ತಿ ತನ್ನ ರೇಜರ್ ಅನ್ನು ಎಳೆದುಕೊಂಡು ಬಂದಿದ್ದ. ಮುಖಕ್ಷೌರ ಮಾಡಿಕೊಂಡರೆ, ಇಂತಹ ಸಂದಿಗ್ಧ ಬದುಕಿನಲ್ಲಿ ಎಲ್ಲವೂ ಸಹಜ ಸ್ಥಿತಿಯಲ್ಲಿದೆ ಎಂಬ ಭಾವನೆ ಬರಬಹುದು ಎಂದು. ಅವನ ನಿಯಂತ್ರಣದಿಂದ ಕೈತಪ್ಪಿದ್ದರೂ, ಅವನು ಮಾತ್ರ ತನ್ನ ವೈಯಕ್ತಿಕ ಅಂತಸ್ತು ಜಾರುವುದು ಅವನಿಗೆ ಇಷ್ಟವಿರಲಿಲ್ಲ. ಇತರ ಅನೇಕರು, ಪಾಸ್‌ಪೋರ್ಟ್ ಮತ್ತು ಇತರ ದಾಖಲೆಗಳನ್ನು ಪರ್ಸ್ ನಲ್ಲಿಟ್ಟುಕೊಂಡು ಬಂದಿದ್ದರು. ಮತ್ತೆ ಕೆಲವರು ಮೊದಲ ಮಹಾಯುದ್ಧದಲ್ಲಿ ನೀಡಲಾಗಿದ್ದ ಪದಕ ಅಥವಾ ಪ್ರಮಾಣ ಪತ್ರಗಳನ್ನು ತಂದಿದ್ದರು, ಅವರು ಹಿಂದೆ ಮೌಲಿಕ ಕೆಲಸವನ್ನು ಮಾಡಿದ್ದರೆಂಬುದನ್ನು ತೋರಿಸಲು.

ಇಟಲಿ ಮತ್ತು ಆಲ್ಬೇನಿಯಾದ ಸೈನಿಕರ ನಡುವಣ ಗುಂಡಿನ ವಿನಿಮಯ ಮುಗಿದು ಕೆಲವು ಗಂಟೆಗಳೂ ಮುಗಿದಿರಲಿಲ್ಲ. ಊರು ಸ್ಮಶಾನ ಸದೃಶವಾಯಿತು. ಊರ ತುಂಬಾ ಹೆಣಗಳ ರಾಶಿ ಬಿದ್ದಿರಬಹುದೆಂದು ನಾನು ಊಹಿಸಿದೆ, ನಾನು ಕಾರ್ಲ್‌ಮಾರ್ಕ್ಸ್ ಹಾಫ್‌ನಲ್ಲಿ ನೋಡಿದ್ದಂತೆ, ನನ್ನ ಎಂದಿನ ಕುತೂಹಲದಿಂದ ನಾನು ಕಿಟಕಿ ಮೂಲಕ ನೋಡಲು ಮಹಡಿ ಹತ್ತಿ ಹೋದೆ. ಅನೇಕ ಆಲ್ಬೇನಿಯಾದ ಸೈನಿಕರು ಹರಿದ ಸಮವಸ್ತ್ರದಲ್ಲಿ, ಸಮುದ್ರ ದಂಡೆಯಿಂದಾಚೆ ಬೆಟ್ಟದಿಂದ ಇಳಿದು ಬರುತ್ತಿದ್ದುದನ್ನು ನೋಡಿದೆ. ನಾನು ತಕ್ಷಣವೇ ಈ ವಿಷಯವನ್ನು ನೆಲಮಾಳಿಗೆಯಲ್ಲಿ ಮುದುರಿ ಕುಳಿತಿದ್ದ ಜನರ ಗುಂಪಿಗೆ ತಿಳಿಸಿದೆ. ನಾವೀಗ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಚರ್ಚಿಸಿದೆವು. ನಾವು ನೆಲಮಾಳಿಗೆಯಲ್ಲೇ ಇದ್ದು, ಇಟಾಲಿಯನ್ನರಿಗಾಗಿ ಕಾಯಬೇಕು ಅಥವಾ ನಾವು ನಮ್ಮ ಮನೆಗಳಿಗೆ ತೆರಳಿ, ಅಲ್ಲಿಂದ ಶರಣಾಗಬೇಕು. ಇವೆರಡೂ ಕ್ರಮಗಳ ಬಗ್ಗೆ ನಾವೇ ನಿರ್ಧರಿಸಬೇಕೆಂದು ಕೊಂಡೆವು. ಎರಡನೆಯ ಆಯ್ಕೆಗೇ ಗೆಲುವು ಸಿಕ್ಕಿತು. ನಮ್ಮಲ್ಲೆಲ್ಲಾ ನನಗೊಬ್ಬಳಿಗೇ ಇಟಾಲಿಯನ್ ಭಾಷೆ ಮಾತನಾಡಲು ಸಾಧ್ಯವಿದ್ದುದರಿಂದ, ಒಂದು ಬಿಳಿ ಬಣ್ಣದ ಕರವಸ್ತ್ರವನ್ನು ಕಟ್ಟಿದ್ದ ವಾಕಿಂಗ್ ಕೋಲನ್ನು ಬೀಸುತ್ತಾ ನಮ್ಮ ಮೆರವಣಿಗೆಯ ನಾಯಕತ್ವವನ್ನು ವಹಿಸಲು ನನ್ನನ್ನು ಕೇಳಲಾಯಿತು. ಮೌನದಲ್ಲಿ ಮೆಟ್ಟಿಲುಗಳನ್ನು ಹತ್ತಿ, ಮುಕ್ತ ರಸ್ತೆ ಕಡೆಗೇ ನಡೆದೆವು. ಏನಾಗುವುದೋ ಎಂಬ ಭಯದಿಂದ. ನನ್ನ ತಾಯಿ–ತಂದೆಯರು ನಾನು ನಮ್ಮ ತಂಡದ ನಾಯಕತ್ವ ವಹಿಸುವುದಕ್ಕೆ ಒಪ್ಪಿಕೊಳ್ಳಬೇಡ ಎಂದಿದ್ದರು. ಸೈನಿಕರಿಂದ ಆಕ್ರಮಣವಾದಲ್ಲಿ ನನಗೇ ಅವರ ಗುಂಡೇಟು ಮೊದಲು

ತಗಲಬಹುದೆಂಬ ಭಯದಿಂದ. ನನ್ನಂತಹ ಚಿಕ್ಕ ಹುಡುಗಿಯನ್ನು ಮೆರವಣಿಗೆಯ ಮುಂದೆ ಕಳುಹಿಸುವುದು ಬೇಡ ಎಂದು ಇತರರನ್ನೂ ಬೇಡಿಕೊಂಡಿದ್ದರು. ಆದರೆ, ನಮ್ಮಲ್ಲಿರುವ ಏಕಮಾತ್ರ ಇಟಾಲಿಯನ್ ಭಾಷೆ ಬಲ್ಲ ಸದಸ್ಯೆ ಮುಂಚೂಣಿಯಲ್ಲಿರಬೇಕೆಂದು ಎಲ್ಲರೂ ಒಪ್ಪಿಕೊಂಡಿದ್ದರು.

ನಾವು ನಮ್ಮ ಮನೆಯ ದಿಕ್ಕಿನಲ್ಲೇ ಹೊರಟೆವು, ರಸ್ತೆ ತುಂಬ ನಾವುಗಳು ಮಾತ್ರ ಇದ್ದೇವೆಂಬ ಅರಿವಿನಿಂದ. ಆಗಾಗ್ಗೆ ಮನೆಗಳ ಪಕ್ಕದಲ್ಲಿ ತೆವಳುತ್ತಿದ್ದ ಆಲ್ಬೇನಿಯಾದ ಸೈನಿಕರನ್ನು ನೋಡಿದೆವು. ಅವರನ್ನು ಹಿಂಬಾಲಿಸುತ್ತಿದ್ದ ಇಟಲಿ ಸೈನಿಕರಿಂದ ಬಚ್ಚಿಟ್ಟುಕೊಳ್ಳುತ್ತಿದ್ದರು. ನಮ್ಮ ಕಾಲಿನ ಶಬ್ದವನ್ನು ಜನ ಕೇಳುತ್ತಿದ್ದಂತೆ, ಕಿಟಕಿಯ ಹಿಂಬದಿಯಿಂದ ಮುಖಗಳು ಇಣುಕಿದವು, ಏನಾಗುತ್ತಿತ್ತು ಎಂಬುದನ್ನು ತಿಳಿಯುವ ಕುತೂಹಲದಿಂದ. ಮರೆಯಿಂದ ಗುಂಡು ಹಾರಿಸುವವನು ಮಾತ್ರ ಆವರಿಸಿದ ವಿಚಿತ್ರ ಮೌನವನ್ನು ಮುರಿದ. ತಕ್ಷಣ ಇಟಲಿಯ ಸೈನಿಕರು ನಮ್ಮ ಕಡೆ ಬರುತ್ತಿದ್ದುದನ್ನು ನೋಡಿ, ನಮ್ಮ ನಡಿಗೆ ಮಂದಗತಿಗೆ ತಿರುಗಿತು. ನಿರೀಕ್ಷೆಯಂತೆ ಆದರೆ ನಾವು ಮುಂದಕ್ಕೆ ಚಲಿಸುತ್ತಲೇ ಇದ್ದೆವು. ನಮ್ಮ ನಡುವಿನ ಅಂತರ ಕಡಿಮೆಯಾದಂತೆ, ನಾನು ನಮ್ಮನ್ನು ಇಟಲಿ ಸೈನ್ಯಕ್ಕೆ ಹೇಗೆ ಪರಿಚಯಿಸಬೇಕೆನ್ನುವುದನ್ನು ಮನಸ್ಸಿನಲ್ಲೇ ಇಟಲಿ ಭಾಷೆಯಲ್ಲಿ ಬಾಯಿ ಪಾಠ ಮಾಡಿಕೊಂಡೆ. ತಕ್ಷಣವೇ ನಾವು ಒಂದು ಮೂಲೆ ತಿರುಗಿದಾಗ ಸುಮಾರು ಒಂದು ಡಜನ್ ಇಟಲಿಯ ಸೈನಿಕರು ಕೋವಿಯ ತುದಿಯ ಅಲಗನ್ನು ಹಿಡಿದು ಕಾಣಿಸಿಕೊಂಡರು. ಇಂಥಾ ವಿಚಿತ್ರ ಗುಂಪು ರಸ್ತೆಯುದ್ದಕ್ಕೂ ಓಡಾಡುತ್ತಿರುವುದನ್ನು ನೋಡಿ, ಅವರಿಗೆ ಇನ್ನೂ ಹೆಚ್ಚು ಆಶ್ಚರ್ಯವಾದಂತೆ ಅನ್ನಿಸಿತು. ಕೋವಿಯ ಅಲಗನ್ನು ನಮ್ಮೆದುರಿಗೆ ಬೀಸುತ್ತಾ, “ನಿಲ್ಲಿ, ಕೈಗಳನ್ನು ತಲೆಯ ಮೇಲೆ ಇಟ್ಟುಕೊಳ್ಳಿ” ಎಂದು ಆದೇಶ ನೀಡಿದರು. ನಾನಂತೂ ಆಘಾತಗೊಂಡೆ. ಆದರೆ, ನಾನು ನನ್ನ ಯಥಾಸ್ಥಿತಿಯನ್ನು ಕಾಪಾಡಿ ಕೊಳ್ಳಲು ಯತ್ನಿಸಿದೆ. ತಕ್ಷಣವೇ ಆ ಸೈನಿಕನ ಆದೇಶವನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದೆ. ಆಗ ಓರ್ವ ಅಧಿಕಾರಿ ನನ್ನ ಬಳಿ ಬಂದು ನಾವು ಯಾರು ಎಂದು ಕೇಳಿದ. ನಾನು ಬಾಯಿಪಾಠ ಮಾಡಿಕೊಂಡಿದ್ದ ಭಾಷಣವನ್ನಾರಂಭಿಸಿದೆ. ತೆದೇಚಿ (ಜರ್ಮನ್‌ನಲ್ಲಿ) ಎಂಬ ಶಬ್ದವನ್ನು ಕೇಳಿದ ತಕ್ಷಣ, ಉತ್ಸಾಹದಿಂದ ನನ್ನ ಕೈಕುಲುಕಿದ, ಅತಿಯಾದ ಸಂತೋಷದಿಂದ, ‘ಜರ್ಮನರು ಮತ್ತು ಇಟಾಲಿಯನ್ನರು ಮಿತ್ರರು’ ಎಂದು ಕೂಗಿದ.

ಆ ನಂತರ, ನಮ್ಮ ಕೈಗಳನ್ನು ಕೆಳಗಿಳಿಸಲು ಹೇಳಿದ. ನನ್ನ ಪೂರ್ವ ತಯಾರಿತ ವಿವರಣೆಯನ್ನು ಮುಗಿಸಲು ಆಸ್ಪದ ಕೊಡದಿದ್ದುದರಿಂದ, ವಾಸ್ತವವಾಗಿ ನಾವುಗಳು ಯಹೂದಿ ನಿರಾಶ್ರಿತರೆಂಬುದನ್ನು ಮನವರಿಕೆ ಮಾಡಿಕೊಳ್ಳಲಿಲ್ಲ. ನಾವುಗಳು ಒಂದು ದೊಡ್ಡ ಮನೆಯಲ್ಲಿ ಒಟ್ಟಿಗಿರುವ ಸಣ್ಣ ಗುಂಪಿನವರು, ಆ ಬೆಳಿಗ್ಗೆಯೇ

ನಾವು ಗುಂಡಿನ ಶಬ್ದ ಕೇಳಿ ಹೊರಗೆ ಬಂದಿದ್ದು, ಮನೆಗೆ ಹಿಂತಿರುಗಿ ಹೋಗುತ್ತಿದ್ದೇವೆಂದು ಹೇಳಬೇಕೆಂದು ಆ ಹೊತ್ತಿನಲ್ಲಿ ನಿರ್ಧರಿಸಿದೆ. ಜರ್ಮನರು ಮತ್ತು ಇಟಾಲಿಯನ್ನರ ನಡುವೆ ಇರುವ ಸ್ನೇಹವನ್ನು ಅವನು ಮತ್ತು ಅವನ ಸೈನಿಕರು ಗೌರವಿಸುವುದಾಗಿ ನನಗೆ ಭರವಸೆ ನೀಡಿದ. ನಾವು ಜರ್ಮನ್ ಹಾಗೂ ಆಸ್ಟ್ರಿಯಾ ಪಾಸ್‌ಪೋರ್ಟ್‌ಗಳನ್ನು ಹೊಂದಿದ್ದರೂ, ನಾಜಿ ಆಳ್ವಿಕೆಯಲ್ಲಿ ನಮ್ಮನ್ನು ಜರ್ಮನ್ ಪ್ರಜೆಗಳೆಂದು ಪರಿಗಣಿಸುತ್ತಿಲ್ಲವೆಂದು ಹೇಳುವುದು ಸರಿಯಲ್ಲವೆಂದು ನನಗನ್ನಿಸಿತು. ನಾವು ಮನೆಗೆ ಹಿಂತಿರುಗಲು ಓರ್ವ ಕಾವಲಿನವನನ್ನು ಕಳುಹಿಸುವುದಾಗಿ ಹೇಳಿದ. ಆದರೆ, ನಮ್ಮ ಮನೆ ಆಕ್ರಮಣದ ನಡುವೆಯೂ ದೃಢವಾಗಿತ್ತಾದರೂ ನಮ್ಮ ಪಕ್ಕದ ಪೊಲೀಸ್ ಠಾಣೆಯೂ ಯುದ್ಧದ ನೌಕೆಯಿಂದ ಹೊಡೆದ ಒಂದು ಷೆಲ್ ದಾಳಿಗೆ ನೇರವಾಗಿ ತುತ್ತಾಗಿತ್ತು.

ನಮ್ಮ ಗೈರು ಹಾಜರಿಯಲ್ಲಿ ಯಾರಾದರೂ ಅನಪೇಕ್ಷಿತ ಅತಿಥಿಗಳು ಇದ್ದಾರೋ ಎಂದು ತಮ್ಮವರು ನಮ್ಮ ಕೊಠಡಿಗಳನ್ನು ಶೋಧನೆ ಮಾಡಬೇಕೆಂದು ಆ ಅಧಿಕಾರಿ ಒತ್ತಾಯ ಮಾಡಿದನು. ಒಂದು ತಂಡದ ಸೈನಿಕರ ಕಾವಲಿನಲ್ಲಿ ನಮ್ಮ ಗುಂಪಿನ ಇತರರು ಹೊರಗಡೆ ಆತಂಕದಿಂದ ಕಾಯುತ್ತಿದ್ದಾಗ, ಇತರ ಸೈನಿಕರಿಗೆ ಮನೆಯ ಸುತ್ತ ತೋರಿಸಲು ಹೇಳಲಾಯಿತು. ಬೀರುಗಳು ಹಾಸಿಗೆಯ ಕೆಳಗೆ ಹಾಗೂ ಎಲ್ಲಾ ಪೆಟ್ಟಿಗೆಗಳನ್ನು ಅವರು ಶೋಧಿಸಿದಾಗ, ಅವರು ಏನನ್ನು ಹುಡುಕಬಹುದು ಎಂದು ಗಾಬರಿಯಾಯಿತು. ಆಲ್ಬೇನಿಯಾದ ಪೊಲೀಸನೊಬ್ಬ ಪಕ್ಕದ ಮನೆಯಿಂದ ನಮ್ಮ ಮನೆಯಲ್ಲಿ ಬಚ್ಚಿಟ್ಟುಕೊಂಡಿರಬೇಕು ಅಥವಾ ಕೊನೆಯ ಪಕ್ಷ ಅವರ ಆಯುಧಗಳನ್ನಾದರೂ ಬಚ್ಚಿಟ್ಟಿರಬೇಕು ಎಂದು ತಕ್ಷಣ ಯೋಚಿಸಿದೆ. ಇಟಲಿಯ ಸೈನಿಕರಿಗೆ ಏನಾದರೂ ಸಿಕ್ಕರೆ ಅವರಿಗೆ ಅದನ್ನು ವಿವರಿಸುವುದು ಅಸಾಧ್ಯ ಎನ್ನುವುದು ನನಗೆ ಖಚಿತವಾಗಿತ್ತು. ಅದೃಷ್ಟವಶಾತ್, ಏನೂ ಸಿಗಲಿಲ್ಲ ನಾವು ಮನೆಯ ಒಳಗಡೆ ಹೋಗಲು ಅಪರಾಂಶ ಸಿಕ್ಕಿತು. ನಮ್ಮ ಕಾವಲಿಗೆ ಇಬ್ಬರು ಸೈನಿಕರನ್ನು ಬಿಟ್ಟು, ಮಿಕ್ಕ ಸೈನ್ಯ ಹೊರಟುಹೋಯಿತು. ಈ ಕಾವಲುಗಾರರು ನಮ್ಮನ್ನು ರಕ್ಷಿಸಲು ಇದ್ದರೋ ಅಥವಾ ನಮ್ಮನ್ನು ಬಂಧಿಸಲು ಇದ್ದರೋ ಎಂಬುದು ಖಾತರಿಯಾಗಲಿಲ್ಲ. ತಲ್ಲಣವನ್ನು ಶಮನಗೊಳಿಸಲು ಅವರೊಂದಿಗೆ ಮಾತುಕತೆಗೆ ಇಳಿಯಲು ನಿರ್ಧರಿಸಿದೆ. ಓರ್ವ ಸೈನಿಕ ನೇಪಲ್ಸ್ ಬಳಿಯ ರೈತ ಕುಟುಂಬಕ್ಕೆ ಸೇರಿದವನು ಎಂದು ಹೇಳಿದರೆ, ಮತ್ತೊಬ್ಬ ಮಿಲಾನ್‌ಗೆ ಸೇರಿದವನೆಂದು ಹೇಳಿದ. ಇಬ್ಬರೂ ಅಪ್ಪಟ ಕ್ಯಾಥೊಲಿಕರು, ಶುಭ ಶುಕ್ರವಾರದ ದಿನ ಕದನ ನಡೆಸಿದ್ದಕ್ಕೆ ಕೋಪ ವ್ಯಕ್ತಪಡಿಸಿದ್ದರು. ಜರ್ಮನರನ್ನು ಭೇಟಿ ಮಾಡಿದ್ದಕ್ಕಾಗಿ ಬಹಳ ಖುಷಿಯಾಯಿತೆಂದು ಮತ್ತೆ ಮತ್ತೆ ಆ ಸೈನಿಕರು ಹೇಳಿದರು ಹಾಗೂ ನಮಗೆ ಯಾವುದೇ ತೊಂದರೆಯುಂಟು ಮಾಡುವುದಿಲ್ಲವೆಂದು ಭರವಸೆ ಕೊಟ್ಟರು. ಹಿಟ್ಲರನ ಮಿತ್ರರು, ಅವನ ಶತ್ರುಗಳಿಗೆ

ಸಹಾಯ ಮಾಡುವಂತಹ ಪರಿಸ್ಥಿತಿಗೆ ನಗಬೇಕೆನ್ನಿಸಿತು. ಆದರೆ, ನನ್ನನ್ನು ತೀವ್ರವಾಗಿ ಗಮನಿಸುತ್ತಿದ್ದರೆಂಬುದು ನನಗೆ ಗೊತ್ತಿತ್ತು.

ಕೊನೆಗೆ, ದಿನದ ಘಟನೆಗಳ ನಂತರ ಆಯಾಸಗೊಂಡು ಮನೆಯ ಹಿಂದಿನ ನಮ್ಮ ಕೊಠಡಿಗೆ ಹಿಂತಿರುಗಿದೆವು. ನಾನಿನ್ನೂ ಬಾಗಿಲು ಹಾಕುತ್ತಿದ್ದಂತೆಯೇ ಕಿಟಕಿಯ ಹೊರಗಡೆಯಿಂದ ಸಿಳ್ಳೆ ಶಬ್ದ ಕೇಳಿಸಿತು. ನಾನು ಇಣುಕಿ ಹೊರಗೆ ನೋಡಿದೆ. ಅಲ್ಲೊಬ್ಬ ತರುಣ ತನ್ನ ಒಳ ಉಡುಪುಗಳಲ್ಲೇ ನಿಂತು, ಕಟ್ಟಿ ಇಟ್ಟಿದ್ದ ಸಮವಸ್ತ್ರದ ಮೂಟೆ ಕಡೆ ಕೈತೋರಿಸಿದ. ಇಟಾಲಿಯನ್ನರಿಂದ ಬಂಧನಕ್ಕೆ ಒಳಗಾಗದೆ ತಪ್ಪಿಸಿಕೊಂಡು ಹೋಗಲು ತನಗೆ ನಾಗರಿಕ ಉಡುಪು ಕೊಡಬೇಕೆಂದು ಅವನು ನನ್ನನ್ನು ಬೇಡಿಕೊಂಡ. ಅವನಿಗೆ ಸಹಾಯ ಮಾಡುವುದು ಅಪಾಯಕಾರಿಯೆಂದು ಹಾಗೂ ನಮ್ಮ ಬಳಿ ಹೆಚ್ಚು ಬಟ್ಟೆಯಿಲ್ಲವೆಂದು ಗೊತ್ತಿದ್ದರೂ, ನಾನು ಅವನಿಗಾಗಿ ಬಟ್ಟೆ ಹುಡುಕುತ್ತಾ, ಅವನಿಗೆ ಬಚ್ಚಿಟ್ಟುಕೊಳ್ಳುವಂತೆ ಕೈಸನ್ನೆ ಮಾಡಿದೆ. ನನ್ನ ತಂದೆಯವರ ಒಂದು ಜತೆ ಪೈಜಾಮಾ ಎಳೆದುಕೊಂಡು ಕಿಟಕಿಯಿಂದಾಚೆ ಎಸೆದೆ. ಅವನು ತಕ್ಷಣ ಅದನ್ನು ಧರಿಸಿ ಹಿಂದಿನ ರಸ್ತೆಗಳಲ್ಲಿ ಅದೃಶ್ಯನಾದನು. ಅವನು ತಪ್ಪಿಸಿಕೊಳ್ಳಲು ಸಾಧ್ಯವಾಯಿತೆ ಎಂದು ನಾನು ತಿಳಿದುಕೊಳ್ಳಲಿಲ್ಲ. ಆದರೆ, ಕೊನೆಯ ಪಕ್ಷ ಆಲ್ಬೇನಿಯಾದ ಜನ ನಮ್ಮ ಬಗ್ಗೆ ತೋರಿಸಿದ ಕರುಣೆಯನ್ನು ಹಿಂತಿರುಗಿಸಲು ಪ್ರಯತ್ನಪಟ್ಟೆ. ಡರ್ರೆಸ್ ಪಟ್ಟಣವನ್ನು ಸುತ್ತುವರಿಯಲು ಇಟಲಿಯ ಸೇನೆಗೆ ಕೇವಲ ಒಂದು ದಿನ ಸಾಕಾಯಿತು. ಮಾರನೆಯ ಬೆಳಿಗ್ಗೆ ಅವರ ಒಂದು ದೊಡ್ಡ ಸೈನಿಕರ ದಳ ಆಲ್ಬೇನಿಯಾದ ರಾಜಧಾನಿ ತಿರಾನವನ್ನು ವಶಪಡಿಸಿ ಕೊಂಡಿತು. ಪಟ್ಟಣದ ತುಂಬಾ ದೊಡ್ಡ ಭಿತ್ತಿಪತ್ರಗಳನ್ನು ಅಲ್ಲದೆ, ಎಲ್ಲಾ ಪ್ರತಿರೋಧವು ನಿಲ್ಲದಿದ್ದರೆ, ಕಟ್ಟುನಿಟ್ಟಿನ ಕರ್ಫ್ಯೂವನ್ನು ಜಾರಿಗೊಳಿಸಲಾಗುವುದೆಂದು ತಿಳಿಸುವ ಲೌಡ್ ಸ್ಪೀಕರ್‌ಗಳುಳ್ಳ ವ್ಯಾನ್‌ಗಳು ರಸ್ತೆಯ ತುಂಬಾ ಓಡಾಡಿದವು. ನಮ್ಮ ಇಬ್ಬರು ಕಾವಲುಗಾರರನ್ನು ವಾಪಸ್ ಕರೆಸಿಕೊಂಡು ನಮ್ಮನ್ನು ನಾವೇ ನೋಡಿಕೊಳ್ಳಬೇಕಾಯಿತು. ಹೊಸದಾಗಿ ಸ್ಥಾಪಿತವಾದ ಇಟಲಿಯ ಅಧಿಕಾರದವರ ಗಮನಕ್ಕೆ ಬೀಳದಂತೆ ನಮ್ಮ ಪಾಡಿಗೆ ನಾವು ಸುಮ್ಮನಿದ್ದೆವು. ನನ್ನ ಇಬ್ಬರು ವಿದ್ಯಾರ್ಥಿನಿಯರಿಗೆ ಪಾಠ ಹೇಳುವುದನ್ನು ಮುಂದುವರಿಸಿದೆ. ಆದರೆ, ನನ್ನ ಮಧ್ಯಾಹ್ನದ ನಡಿಗೆಯನ್ನು ನನ್ನ ಹಿಂಬಾಲಕರ ಗುಂಪಿನೊಂದಿಗೆ ಮಾಡುತ್ತಿದ್ದುದನ್ನು, ನನ್ನ ತಂದೆತಾಯಿಯರಿಗೆ ಚಿಂತೆಯನ್ನುಂಟು ಮಾಡದಿರಲು ನಿಲ್ಲಿಸಬೇಕಾಯಿತು.

ಆಲ್ಬೇನಿಯಾದ ಆಕ್ರಮಣದ ಕೆಲವು ದಿನಗಳ ನಂತರ, ನಮ್ಮ ಮನೆಯ ಮುಂದೆ ಸರ್ಕಾರಿ ಕಾರೊಂದು ಬಂದು ನಿಂತಿತು. ಡ್ರೈವರ್ ನನ್ನ ಹೆಸರಿನಲ್ಲಿದ್ದ ಕಾಗದ ಒಂದನ್ನು ನೀಡಿದನು. ಅದರಲ್ಲಿ ಏನಿರಬಹುದೆಂಬ ಸುಳಿವು ನಮಗಾರಿಗೂ

ಇರಲಿಲ್ಲ. ನಾವೆಲ್ಲ ಕೆಟ್ಟದ್ದರ ಬಗ್ಗೆಯೇ ಭಯಗೊಂಡೆವು. ನಾನು ಅದನ್ನು ನಿಧಾನವಾಗಿ ತೆರೆದೆ. ಎಲ್ಲರ ಕಣ್ಣುಗಳು ನನ್ನೆಡೆಗೆ ತಿರುಗಿದ್ದನ್ನು ಭಾವಿಸಿಕೊಂಡೆ. ಅದು ಇಟಲಿಯ ಕಾನ್‌ಸಲ್ ಅವರಿಂದ ಎಂದು ತಿಳಿದಾಗ, ನಾನು ನಿಟ್ಟುಸಿರು ಬಿಟ್ಟೆ. ನಾನು ಜರ್ಮನ್ ಭಾಷೆ ಕಲಿಸುತ್ತಿದ್ದ ಆತ, ಈಗ ಮೊದಲ ಇಟ್ಯಾಲಿಯನ್ ಗೌವರ್ನರ್ ಆಗಿ ಆಲ್ಬೇನಿಯಾದಲ್ಲಿ ನೇಮಕಗೊಂಡಿದ್ದನು. ಈಗ ಅವನು ಮೊದಲಿಗಿಂತ ಹೆಚ್ಚಾಗಿ ಭಾಷೆಯ ಮೇಲೆ ಸಾಕಷ್ಟು ಪ್ರಭುತ್ವವನ್ನು ಹೊಂದಲು ಉತ್ಸುಕನಾಗಿದ್ದುದರಿಂದ ನಾನು ನನ್ನ ಜರ್ಮನ್ ಭಾಷೆಯ ಪಾಠಗಳನ್ನು ಮುಂದುವರಿಸುವಂತೆ ಕೋರುತ್ತಾ ಬರೆದಿದ್ದನು. ನಾನು ಹೊಸ ಗವರ್ನರ್‌ನೊಂದಿಗಿನ ಕೆಲಸಕ್ಕೆ ಹಿಂತಿರುಗಿದಾಗ, ಸಮಿತಿಯ ಪ್ರತಿನಿಧಿಗಳು, ಅವರುಗಳಿಗೆಲ್ಲಾ ಒಳ್ಳೆಯ ಮಾತನ್ನು ಹೇಳುವಂತೆ ಕೇಳಿಕೊಂಡರು. ಅವನ ಅಧಿಕೃತ ನಿವಾಸಕ್ಕೆ ಹೋಗುವ ಮಾರ್ಗದಲ್ಲಿ ಅನೇಕ ಪರಿವೀಕ್ಷಣಾ ಸ್ಥಳಗಳಿದ್ದವು. ಆದ್ದರಿಂದ, ಗೌವರ್ನರ್‌ರವರ ವೈಯಕ್ತಿಕ ಗೆಳತಿಯೆಂಬ ದಾಖಲೆ ಪತ್ರವನ್ನು ನನಗೆ ನೀಡಲಾಯಿತು. ಹೀಗಾಗಿ, ಆಲ್ಬೇನಿಯಾದ್ಯಂತ ಪ್ರಯಾಣಿಸಲು ಮುಕ್ತವಾದ ಪರವಾನಗಿ ಸಿಕ್ಕಿತ್ತು. ಆ ದಾಖಲೆ ಪತ್ರದ ತುಂಬ ಆಕರ್ಷಕ ಸ್ಟಾಂಪ್‌ಗಳು ಮತ್ತು ಸಹಿಗಳಿದ್ದವು. ಹಾಗಾಗಿ ಕಾವಲಿನವರು ನನ್ನನ್ನು ಮುಂದೆ ಬಿಡಲು ಬಹಳ ಸಹಕಾರಿಯಾಗಿತ್ತು. ನಾನು ಗವರ್ನರ್‌ರವರನ್ನು ಭೇಟಿ ಮಾಡಿದಾಗ, ಅವರು ಎಂದಿನಂತೆ ಆಕರ್ಷಕವಾಗಿಯೇ ಕಂಡರು. ನನ್ನ ಗೈರು ಹಾಜರಿಯಲ್ಲೂ ಜರ್ಮನ್ ಭಾಷೆಯನ್ನು ಅಧ್ಯಯನ ಮಾಡುತ್ತಿದ್ದುದಾಗಿ ಹೇಳಿದರು. ನಾನು ಅಲ್ಲಿಂದ ಹೊರಡುತ್ತಿದ್ದಂತೆ, ನಮ್ಮ ನಿರಾಶ್ರಿತರ ಸಮುದಾಯ, ಹೊಸಾ ಇಟಾಲಿಯನ್ ಆಳ್ವಿಕೆಯು ಜರ್ಮನರಂತೆ, ಯಹೂದಿ ವಿರೋಧಿ ಆಗುವ ಸಾಧ್ಯತೆ ಬಗ್ಗೆ ಆತಂಕಗೊಂಡಿತ್ತೆಂದು ಪ್ರಸ್ತಾಪಿಸಿದೆ. ತನಗೆ ಅದಿಕಾರವಿರುವಷ್ಟು ಕಾಲ, ನಮಗ್ಯಾರಿಗೂ ತೊಂದರೆಯಾಗುವುದಿಲ್ಲವೆಂದು ಅವರು ಭರವಸೆ ನೀಡಿದರು. ಅದರಂತೆ ಅವರು ತನ್ನ ಮಾತನ್ನು ನೆರವೇರಿಸಿದರು. ನಾವೂ ಸಹ ಸರ್ಕಾರದಲ್ಲಿನ ಬದಲಾವಣೆಯಿಂದ ಯಾವುದೇ ತೊಂದರೆಯಿಲ್ಲದೆ ಹಾಗೆಯೇ ಮುಂದುವರೆದೆವು.

ಆಲ್ಬೇನಿಯಾದ ಮುಸೊಲಿನಿಯ ಆಕ್ರಮಣವು, ದೇಶದ ಹೊರಗಡೆ ತಾತ್ಕಾಲಿಕವಾಗಿ ಎಲ್ಲಾ ನಾಗರಿಕ ಪ್ರಯಾಣವನ್ನು ಸ್ಥಗಿತಗೊಳಿಸಿದಾಗ ನಾನು ಮತ್ತು ಅಮ್ಮ ಭಯಭೀತರಾದೆವು. ನಮ್ಮ ಪ್ರವೇಶ ಅನುಮತಿಯು ಕೊನೆಗೊಳ್ಳುವ ಏಪ್ರಿಲ್ ಅಂತ್ಯದ ಹೊತ್ತಿಗೆ ನಾವು ಇಂಗ್ಲೆಂಡ್‌ನಲ್ಲಿರಬೇಕಾಗಿತ್ತು. ನಾವು ಪ್ರಯಾಣಿಸುವ ವಾಸ್ತವ ವಾಯುಮಾರ್ಗವು ಇಟಲಿ ಮತ್ತು ಫ್ರಾನ್ಸ್‌ನ ಮೂಲಕವಾಗಿತ್ತು. ಆದರೆ, ಹಂಗಾಮಿ ಪ್ರಯಾಣಿಕರೂ ಸಹ ಫ್ರೆಂಚ್ ವೀಸಾಗಳನ್ನು ಪಡೆಯಬೇಕಾಗಿತ್ತು. ಕೆಂಪಕ್ಷರದಲ್ಲಿ ದೊಡ್ಡದಾಗಿ J ಎಂದು ಬರೆದಿದ್ದ ಪಾಸ್‌ಪೋರ್ಟ್‌ಗಳಿಗೆ ಅದನ್ನು

ನೀಡುತ್ತಿರಲಿಲ್ಲ. ನನ್ನ ಆಲ್ಬೇನಿಯಾದ ಪರಿವಾರದ ಸದಸ್ಯನಾಗಿದ್ದ ಡರ್ರೆಸ್‌ನ ಒಬ್ಬನೇ ಒಬ್ಬ ಏಜೆಂಟ್ ಆಗಿದ್ದವನು ಏಪ್ರಿಲ್ ೨೦ರಂದು ಹೊರಡುವ ಫ್ರೈಟರ್ ವಿಮಾನದಲ್ಲಿ ನೇಪಲ್ಸ್‌ನಿಂದ ಹೊರಟು, ಇಂಗ್ಲೆಂಡ್‌ಗೆ ಒಂಬತ್ತು ದಿನಗಳ ನಂತರ ತಲುಪ ಬಹುದೆಂದು ತಿಳಿಸಿದ. ನಮಗೆ ಬೇರೆ ಆಯ್ಕೆಗಳಿಲ್ಲದ ಕಾರಣ, ನಾವು ಅವನ ಸಲಹೆಯನ್ನು ಒಪ್ಪಿಕೊಂಡೆವು. ಅದರಂತೆ, ಅವನೇ ಅಮ್ಮ ಮತ್ತು ನನಗಾಗಿ ಪ್ರಯಾಣಕ್ಕೆ ಬುಕ್ ಮಾಡಿದ. ಆ ಏರ್ಪಾಟಿನಂತೆ, ಡರ್ರೆಸ್‌ನಲ್ಲಿ, ಬಾರಿವರೆಗೆ ಹಡಗಿನಲ್ಲಿ ಹೊರಟೆವು. ಅಲ್ಲಿಂದ ನಾವು ನೇಪಲ್ಸ್‌ಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದೆವು, ಇಂಗ್ಲೆಂಡ್‌ಗಾಗಿ ಫ್ರೈಟರ್ ವಿಮಾನವನ್ನು ಏರಲು.

ಅಪ್ಪನನ್ನು ಬೀಳ್ಕೊಡುವುದಂತೂ, ನನ್ನ ಜೀವನದ ಅತ್ಯಂತ ಕಠಿಣವಾದ ಕ್ಷಣಗಳಲ್ಲೊಂದಾಗಿತ್ತು. ನಮ್ಮ ಜತೆಗೇ ಅವರು ಬಂದುಬಿಡಲಿ ಎಂದು ಹತಾಶೆಯಿಂದ ಬಯಸಿದ್ದೆ. ಅಪ್ಪನನ್ನು ಅಲ್ಲಿಯೇ ಬಿಡುವುದಕ್ಕೆ ನನಗೆ ತಪ್ಪಿತಸ್ಥಳೆಂಬ ಭಾವನೆ ಯುಂಟಾಗಿತ್ತು. ನಾವಿಬ್ಬರೂ ಪರಸ್ಪರ ಆಲಂಗಿಸಿಕೊಂಡೆವು. ನಾನು ಅವರನ್ನು ಮತ್ತೆ ನೋಡುತ್ತೇನೋ ಇಲ್ಲವೊ ಎಂದು ಆಶ್ಚರ್ಯಪಟ್ಟಿದ್ದು ಉಂಟು. ನಮ್ಮನ್ನು ಮತ್ತೆ ನೋಡುವುದಿಲ್ಲವೆಂದೇ ಅವರು ನಿರ್ಲಿಪ್ತರಾದಂತೆ ಕಂಡುಬಂದಿತು. ಹಡಗು ಹೊರಡಬೇಕೆನ್ನುವಷ್ಟರಲ್ಲಿ, ಕೊನೆಯ ಬಾರಿಗೆ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡು ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಭರವಸೆ ಕೊಡು ಎಂದು ಹೇಳಿದರು. ನಾವು ಪ್ಲಾಟ್‌ಫಾರಂ ಮೇಲೆ ನಿಂತು ನಮ್ಮನ್ನು ಬೀಳ್ಕೊಡಲು ಬಂದಿದ್ದ ಜನಗಳ ಸಮೂಹಕ್ಕೆ ಕೈಬೀಸಿದೆವು. ಹಡಗು ಬಂದರಿನಿಂದ ನಿಧಾನವಾಗಿ ಚಲಿಸುತ್ತಿದ್ದಂತೆ, ಅಲ್ಲಿದ್ದವರ ಆಕೃತಿ ಸಣ್ಣದಾಗುತ್ತಾ ಹೋಯಿತು. ಅಮ್ಮ ಮತ್ತು ನಾನು ಪರಸ್ಪರ ತಬ್ಬಿಕೊಂಡು ನಿಂತೆವು. ಬಿಕ್ಕಿ ಬಿಕ್ಕಿ ಅಳುತ್ತಾ, ಅಪ್ಪನ ಆಕೃತಿ ದೂರದಿಂದ ಅದೃಶ್ಯವಾದಾಗ, ನಾವಿಲ್ಲದೆ ಅಪ್ಪ ತಾವಾಗಿ ಹೇಗೆ ಇರುತ್ತಾರೋ ಎಂದು ನಮಗೆ ಚಿಂತೆಯಾಯಿತು. ಸಮಿತಿಯವರಿಗೂ ಅವರನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಅವರೊಂದಿಗೆ ಮಾತನಾಡಿದ್ದೆ. ಎಷ್ಟು ದುಃಖವಾದರೂ, ಸ್ವಲ್ಪ ಸಮಾಧಾನವೂ, ಉದ್ವೇಗವೂ ಉಂಟಾಯಿತು. ನಮ್ಮ ಪಲಾಯನದ ಮುಂದಿನ ಹಂತ ತೆರೆದು ಕೊಳ್ಳುತ್ತಿದ್ದಂತೆ, ಓಟ್ಟೊ ಮತ್ತು ಕುರ್ಟ್‌ರೊಂದಿಗೆ ನಾವು ಮತ್ತೆ ಸೇರುವ ಕಾಲ ಸನ್ನಿಹಿತವಾಗುತ್ತಿದೆ ಎಂದು ಅಮ್ಮನಿಗೆ ಹೇಳಿ ಖುಷಿಪಡಿಸಲು ಪ್ರಯತ್ನಿಸಿದೆ. ಬಾರಿ ಮತ್ತು ನೇಪಲ್ಸ್‌ಗೆ ನಮ್ಮ ಪ್ರಯಾಣ ಯಾವುದೇ ಅಹಿತಕರ ಘಟನೆಯಿಲ್ಲದೆ ನಡೆಯಿತು. ನನ್ನ ಪ್ರವಾಸಿ ಏಜೆಂಟ್ ಕಾಯ್ದಿರಿಸಿದ್ದ ಹೋಟೆಲ್‌ಗೆ ನಾವು ನಡೆದೆವು. ತಾತ್ಕಾಲಿಕ ಹಾಸಿಗೆ ಮೇಲೆ ಮಲಗಿ, ಪೆಟ್ಟಿಗೆಗಳ ಮೇಲೆಯೇ ಕುಳಿತು ದಿನ ತಳ್ಳುತ್ತಿದ್ದ ನಮಗೆ ಆ ಸ್ಥಳ ಅರಮನೆಯಂತೆ ಕಂಡಿತು. ಅನೇಕ ತಿಂಗಳುಗಳ ನಂತರ ಮೊದಲ ಬಾರಿಗೆ ಒಳ್ಳೆಯ ಊಟ ಮಾಡಿದಂತಾಯಿತು. ತಟ್ಟೆ ಪೂರ್ತಿ ಊಟ ಮಾಡುವುದೇ

ಹೊಟ್ಟೆಗೆ ಕಷ್ಟವಾಯಿತು. ಹೊಸದಾಗಿ ದೊರೆತ ಸ್ವಾತಂತ್ರ್ಯದಿಂದ ನಾನು ಸಂಭ್ರಮಗೊಂಡು, ತಲೆಸುತ್ತು ಬಂದಂತಾಯಿತು. ಆದರೆ, ಅಮ್ಮನಿಗಂತೂ ಅಪ್ಪನನ್ನು ಬಿಟ್ಟು ಬಂದಿದ್ದಕ್ಕೆ ಕಳವಳಗೊಳ್ಳುತ್ತಲೇ ಇದ್ದಳು.

ಬೆಳಿಗ್ಗೆ ನಾನು ಮಾಡಿದ ಮೊದಲ ಕೆಲಸವೆಂದರೆ, ಇಂಗ್ಲೆಂಡಿಗೆ ಹೋಗಲು ನಮ್ಮ ಹತ್ತಿರ ಟಿಕೆಟ್ ಇದ್ದುದರಿಂದ, ಹಡಗು ಹೊರಡುವ ಸ್ಥಳಕ್ಕೇ ಹೋಗುವ ಧೈರ್ಯ ಮಾಡಿದೆ. ಓರ್ವ ಅಧಿಕಾರಿ, ಫ್ರೈಟರ್ ಮೂರು ವಾರ ತಡವಾಗಿದೆಯೆಂದೂ ನೇಪಲ್ಸ್‌ನಿಂದ ಇಂಗ್ಲೆಂಡ್‌ಗೆ ತಲುಪುವ ಬೇರೆ ಹಡಗು ತಿಂಗಳ ಕೊನೆಯ ಮುಂಚೆ ಇಲ್ಲವೆಂದು ಹೇಳಿದ. ನನಗಂತೂ ಆಘಾತವಾಯಿತು. ಇಲ್ಲಿನ ತಾತ್ಕಾಲಿಕ ಬದುಕಿನಿಂದ ನಾನು ಬೇಸತ್ತಿದ್ದೆ. ಇದನ್ನು ಹೇಳಲು ಬೇರೆ ಯಾರೂ ಇರಲಿಲ್ಲ. ಅಮ್ಮನ ಬಳಿ ಈ ವಿಷಯವನ್ನು ಚರ್ಚಿಸುವುದರಲ್ಲಿ ಅರ್ಥವಿರಲಿಲ್ಲ. ಅಂತರರಾಷ್ಟ್ರೀಯ ಯಹೂದಿ ನೆರವು ಸಮಿತಿಯು ನಮಗೆ ನಮ್ಮ ಪ್ರಯಾಣದ ಹಣವನ್ನು ಒದಗಿಸಿತ್ತು. ನಾನು ಡರ್ರೆಸ್‌ನಲ್ಲಿ ಭೇಟಿ ಮಾಡಿದ್ದ ನನ್ನ ಯಹೂದಿ ಗೆಳೆಯರೊಬ್ಬರು ತನ್ನ ಲಂಡನ್ ಬ್ಯಾಂಕ್ ಖಾತೆಗೆ ಜಮಾ ಮಾಡಲು ಹಣ ನೀಡಿದ್ದುದರಿಂದ, ನಮ್ಮ ಬಳಿ ಸಾಕಷ್ಟು ಹಣವೂ ಇತ್ತು. ಅಗತ್ಯ ಬಿದ್ದರೆ, ಅದರಲ್ಲಿ ಸ್ವಲ್ಪ ಭಾಗ ಅಥವಾ ಎಲ್ಲವನ್ನೂ ಬಳಸುತ್ತೇವೆ ಎಂದು ಮಾತುಕೊಟ್ಟರೆ ಮಾತ್ರ ಅದನ್ನು ನನಗೆ ನೀಡುವುದಾಗಿ ಹೇಳಿದ್ದನು. ಹಣಕಾಸು ನಿರ್ಬಂಧವನ್ನು ತಪ್ಪಿಸಲು, ನಾವು ಹಣವನ್ನು ಕಾಗದದಲ್ಲಿ ಸುತ್ತಿ, ಅದರ ಸುತ್ತ ಹೆಣೆಯುವ ಉಣ್ಣೆದಾರ ಕಟ್ಟಿ ಬಚ್ಚಿಟ್ಟಿದ್ದೆವು. ನಮ್ಮ ಸೂಟ್‌ಕೇಸ್‌ಗಳಲ್ಲಿ ಆ ದಾರದ ಉಂಡೆಗಳನ್ನು ಇಟ್ಟಿದ್ದೆವು. ನಾನು ಹೋಟೆಲ್ ಬಿಡುವ ಮುಂಚೆ ಒಂದನ್ನು ಮತ್ತೆ ಪಡೆದೆ. ಹಣವಿದ್ದರೂ ಅದರಿಂದ ಏನು ಮಾಡಬೇಕೆಂದು ಗೊತ್ತಿರಲಿಲ್ಲ. ಹಾಗಾಗಿ ನಾನು ಹತ್ತಿರದ ಬೆಂಚಿನ ಮೇಲೆ ಕುಳಿತು ಸಾಧ್ಯವಾದ ಬೇರೆ ದಾರಿಗಳ ಬಗ್ಗೆ ಪರಿಗಣಿಸುತ್ತಾ ಹೋದೆ. ನೇಪಲ್ಸ್‌ನಲ್ಲಿ ನಮಗೆ ಗೊತ್ತಿರುವವರಾರೂ ಇಲ್ಲದ್ದರಿಂದ, ಮುಂದಿನ ದಾರಿ ಅಸ್ಪಷ್ಟವೆಂದು ಕಂಡುಬಂತು.

ಯಾವುದಾದರೂ ಸುಳಿವು ಅಥವಾ ದಾರಿ ಸಿಗಬಹುದೇನೋ ಎಂದು ನನ್ನ ಕಣ್ಣುಗಳು ಹುಡುಕುತ್ತಿದ್ದಾಗ, ರಸ್ತೆಯಲ್ಲಿ ನನಗೆ ತಕ್ಷಣ ಕಂಡದ್ದು, ಸಿಐಟಿಯ ಒಂದು ಶಾಖೆ. ಇಟ್ಯಾಲಿಯನ್ ಟ್ರಾವೆಲ್ ಬ್ಯೂರೊ. ನಾನು ಸೀದಾ ಒಳಗೆ ಹೋಗಿ ನಮ್ಮ ದುಃಸ್ಥಿತಿಯನ್ನು ಕರುಣಾಮಯಿ ಗುಮಾಸ್ತೆಗೆ ವಿವರಿಸಿದೆ. ಮೊದಲು ಅವನು ಈ ತರುಣಿಯ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ, ನಾನು ಇಂಗ್ಲೆಂಡಿಗೆ ಹೋಗುವ ವೀಸಾಗಳು ಹಾಗೂ ಸ್ವಲ್ಪ ಹಣವನ್ನು ನೀಡಿದಾಗ, ಫ್ರಾನ್ಸ್ ಮೂಲಕ ವಿಮಾನದಲ್ಲಿ ಹೋಗಲು ಟಿಕೇಟುಗಳನ್ನು ಕಾಯ್ದಿರಿಸುವುದಾಗಿ ಭರವಸೆ ನೀಡಿದ. ಫ್ರಾನ್ಸ್‌ನ ಅಧಿಕಾರಿಗಳು ನಿರಾಶ್ರಿತರಿಗೆ ಪ್ರಯಾಣದ ವೀಸಾವನ್ನು

ನೀಡಲು ನಿರಾಕರಿಸಿದ್ದರೆಂದು ನಾನು ಹೇಳಿದ್ದನ್ನು ಅವರು ನಂಬಲಿಲ್ಲ; ಆದರೆ, ಫ್ರಾನ್ಸ್‌ನ ಕೌನ್ಸಿಲ್ ಕಛೇರಿಗೆ ನಾನು ಮಾಡಿದ ಶೀಘ್ರ ಕರೆಯಿಂದ ನಾನು ಹೇಳಿದ್ದು ಸರಿಯೆಂದು ಖಚಿತವಾಯಿತು. ಅಲ್ಲದೆ, ನಾನು ಏನು ಹೇಳುತ್ತಿದ್ದೇನೆಂಬುದು ಅವನಿಗೆ ಸರಿಯೆನ್ನಿಸಿತು. ಆಗ ನನಗೆ ಕುಳಿತುಕೊಳ್ಳಲು ಹೇಳಿ ಇತರ ಸಾಧ್ಯತೆಗಳನ್ನು ಪರಿಶೀಲಿಸತೊಡಗಿದ. ನನ್ನನ್ನು ಬಹಳ ಕಾಲದವರೆಗೆ ಕಾಯಿಸಿದ ಮೇಲೆ, ನಾವು ಲಂಡನ್ ನಗರವನ್ನು ೧೯೩೯ರ ಏಪ್ರಿಲ್ ಮುಂಚೆ ತಲುಪುವ ಸಾಧ್ಯತೆಯಿರುವ ಒಂದೇ ದಾರಿಯೆಂದರೆ, ರೋಮ್‌ನಿಂದ ಮಿಲನ್, ಫ್ರಾಂಕ್‌ಫರ್ಟ್, ಕೊಲೊನ್, ರಾಟರ್‌ಡಾಮ್ ಹಾಗೂ ಆಮ್‌ಸ್ಟರ್‌ಡಂ ಮೂಲಕ ಕೆಎಲ್‌ಎಂನಲ್ಲಿ ವಿಮಾನದಲ್ಲಿ ಹೋಗುವುದು ಎಂದು ವಿವರಿಸಿದ. ಜರ್ಮನಿಯ ಮೂಲಕ ಹಾದುಹೋಗುವ ವಿಚಾರಕ್ಕೆ ನನಗೆ ಭಯವಾಯಿತು. ಆದರೆ, ಅದು ಬಿಟ್ಟು ಬೇರೆ ದಾರಿಯಿರಲಿಲ್ಲ, ಸಮಾಲೋಚಿಸಲೂ ಸಹ ಬೇರೆ ಯಾರೂ ಇರಲಿಲ್ಲ. ಹಾಗಾಗಿ ನಾನು ಅಪಾಯವನ್ನೆದುರಿಸಲು ನಿರ್ಧರಿಸಿದೆ. ಇಟಲಿಯ ಗುಮಾಸ್ತನು ಕಠಿಣ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡ. ನಾನು ಬಿಲ್ಲನ್ನು ಪಾವತಿ ಮಾಡಿ, ಟಿಕೆಟ್‌ಗಳನ್ನು ತೆಗೆದುಕೊಂಡ ಮೇಲೆ ನನ್ನ ಕೈಯನ್ನು ತನ್ನ ಕೈಯಲ್ಲಿರಿಸಿ, “ಒಳ್ಳೆಯದಾಗಲಿ, ನೀವುಗಳು ಇಂಗ್ಲೆಂಡ್ ಸುರಕ್ಷಿತವಾಗಿ ತಲುಪಲಿ ಎಂದು ನಾನು ಪ್ರಾರ್ಥಿಸುತ್ತೇನೆ” ಎಂದು ಹೇಳಿದ.

ನಾನು ಹೋಟೆಲ್‌ಗೆ ಹಿಂದಿರುಗುವ ದಾರಿಯಲ್ಲಿ, ನಾವು ಜರ್ಮನಿ ಮೂಲಕ ಇಂಗ್ಲೆಂಡ್‌ಗೆ ವಿಮಾನದಲ್ಲಿ ಬರುತ್ತಿದ್ದೇವೆ ಎಂದು ಓಟ್ಟೊಗೆ ಕೇಬಲ್ ಮಾಡಿದೆ. ನಾವೇನಾದರೂ ತಲುಪದಿದ್ದರೆ, ನಾವೆಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆಂದು ಗೊತ್ತಾಗಲಿ ಎಂದು. ಒಂದೆಡೆ, ನಮ್ಮನ್ನು ಕೊಲೊನ್‌ನಲ್ಲಿ ತಡೆದರೆ, ಯಾರೇನೂ ಮಾಡುವಂತಿಲ್ಲ ಎಂದು ನನಗೆ ಗೊತ್ತಿತ್ತು. ಆದರೂ ಮತ್ತೊಂದೆಡೆ, ನನಗೆ ಓಟ್ಟೊವಿನ ಸಾಮರ್ಥ್ಯದಲ್ಲಿ ಎಷ್ಟು ನಂಬಿಕೆಯಿತ್ತೆಂದರೆ, ಅವನು ನಮ್ಮನ್ನು ಹೇಗಾದರೂ ಮಾಡಿ ಬಿಡಿಸುತ್ತಾನೆ ಎಂದು ನಾನು ನಂಬಿದ್ದೆ. ನಾನಂತೂ ಹತಾಶೆಯಿಂದ ಅಳಬೇಕಿತ್ತು ಹಾಗೂ ಯಾರಾದರೂ ನನ್ನನ್ನು ತಮ್ಮ ಕೈಗಳಿಂದ ಬಳಸಿ ನನ್ನನ್ನು ಸಮಾಧಾನಪಡಿಸಲಿ ಎಂದು ಅನಿಸುತ್ತಿತ್ತು. ಆದರೆ, ಅಮ್ಮನನ್ನು ನೋಡಿಕೊಳ್ಳಬೇಕಾದರೆ, ನಾನೇ ನನ್ನ ಕಷ್ಟವನ್ನು ಪರಿಹರಿಸಿಕೊಳ್ಳಬೇಕಾಗಿತ್ತು. ನನ್ನ ಸಹೋದರರೊಂದಿಗೆ ಆಗುವ ಪುನರ್ಮಿಲನದ ಬಗ್ಗೆ ನಾನು ನಿಗಾ ವಹಿಸಲು ಪ್ರಯತ್ನಿಸಿದೆ. ಅಮ್ಮ ಹೋಟೆಲ್ ಕೊಠಡಿಯಲ್ಲಿ ಹೆಜ್ಜೆ ಹಾಕುತ್ತಿದ್ದಾಗ, ದೀರ್ಘವಾದ ಸಮುದ್ರ ಪ್ರಯಾಣದ ಬದಲು, ಲಂಡನ್ನಿಗೆ ವಿಮಾನದಲ್ಲಿ ಹೋಗಲು ಏರ್ಪಾಟು ಮಾಡಿರುವುದಾಗಿ ಖುಷಿಯಿಂದ ಉದ್ಘೋಷಿಸಿದೆ. ನಂತರ ಆಲೋಚಿಸಿ, ನಾವು ಜರ್ಮನಿಯ ಮೂಲಕ ಹಾದು ಹೋಗುವುದಕ್ಕಿಂತ, ವೈಮಾನಿಕ ಪ್ರಯಾಣದ ಅಪಾಯಗಳ ಬಗ್ಗೆಯೇ ಅಮ್ಮನಿಗೆ

ಹೆಚ್ಚು ಚಿಂತೆಯಾದಂತೆ ಕಂಡುಬಂದಿತು. ಆದರೂ ಅಮ್ಮನಿಗೆ ನಾನು ಧೈರ್ಯ ಹೇಳಿದೆ.

೧೯೩೯ರ ಏಪ್ರಿಲ್ ೨೦ರ ಉಳಿದ ಭಾಗವನ್ನು ನೇಪಲ್ಸ್‌ನಲ್ಲಿ ಕಳೆದೆವು. ಅಂದು ಹಿಟ್ಲರನ ಜನ್ಮದಿನವಾಗಿತ್ತು. ನಗರದಾದ್ಯಂತ ಜನ್ಮದಿನದ ಶುಭಾಶಯದ ಭಿತ್ತಿಪತ್ರಗಳು ರಾರಾಜಿಸುತ್ತಿದ್ದುವು. ಅಮ್ಮನನ್ನು ಕೆಲವು ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋದೆ. ಕಾರಣ, ಜರ್ಮನಿಯಲ್ಲಿ ಏನಾದರೂ ಸರಿಹೋಗದಿದ್ದರೆ, ಇಟಲಿಯ ನಮ್ಮ ಸ್ವಲ್ಪ ಕಾಲದ ತಂಗುವಿಕೆಯಾದರೂ ಹರ್ಷದಾಯಕವಾಗಿರಲಿ ಎಂದು. ಅದೇ ರಾತ್ರಿ ನಾವು ರೋಂಗೆ ರಾತ್ರಿ ರೈಲಿನಲ್ಲಿ ಪ್ರಯಾಣಿಸಿ ಮುಂಜಾನೆ ಬೇಗನೆ ಲಂಡನ್ನಿಗೆ KLM ವಿಮಾನವನ್ನು ಹತ್ತಿದೆವು.

ವಿಮಾನದಲ್ಲಿ ಪ್ರಯಾಣ ಮಾಡಿದ್ದು ನಾನು ಅದೇ ಮೊದಲ ಸಲ. ಹಾಗಾಗಿ ಎಂಜಿನ್ ಮೇಲೇರಲು ಸನ್ನದ್ಧವಾದಾಗ, ನಾನು ಅತಿಯಾದ ಖುಷಿಯಲ್ಲಿದ್ದೆ. ದುರದೃಷ್ಟವಶಾತ್, ಅಮ್ಮ ನನ್ನ ಉದ್ವೇಗದಲ್ಲಿ ಭಾಗಿಯಾಗಲಿಲ್ಲ. ಸುಮ್ಮನೆ ಕಣ್ಣು ಮುಚ್ಚಿಕೊಂಡು, ತನಗೆ ತಾನೇ ಏನನ್ನೋ ಹೇಳಿಕೊಳ್ಳುತ್ತಾ ಕುಳಿತುಕೊಂಡಳು. ಸಾಯಲೂ ಸಿದ್ಧಳಾಗಿದ್ದಂತೆ ಅವಳು ಕಂಡಳು. ಕಾರಣ ವಿಮಾನವೇರಿ ಸುರಕ್ಷವಾಗಿ ಇಳಿಯಬಹುದೆಂದು ಅವಳು ನಂಬಿರಲಿಲ್ಲ. ನಾನು ಮಿಲಾನ್ ನಿಲ್ದಾಣ ತಲುಪಿದಾಗ, ವೈಮಾನಿಕ ಪ್ರಯಾಣ ತಾನು ಹೆದರಿದ್ದಷ್ಟು ಅಪಾಯಕಾರಿಯಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡು ವಿಶ್ರಮಿಸಿದಳು. ನಾನು ಜರ್ಮನಿಗೆ ಪ್ರಯಾಣಿಸುವ ಬಗ್ಗೆ ಹೆಚ್ಚಾಗಿಯೇ ಆತಂಕಗೊಳ್ಳಲಾರಂಭಿಸಿದೆ. ಅಮ್ಮನಿಗೆ ಆ ಚಿಂತೆ ಹೆಚ್ಚಿಸದಂತೆ ಪ್ರಯತ್ನಿಸಿದೆ. ಮಿಲಾನ್ ನಿಲ್ದಾಣದಲ್ಲಿ ಅವಳು ತೋರಿದ ಧೈರ್ಯದಲ್ಲಿ ನಾನೂ ಭಾಗಿಯಾದಂತೆ ನಟಿಸಿದೆ. ಆದರೆ ಮನಸ್ಸಿನಾಳದಲ್ಲಿ ನನಗೆ ಹೆದರಿಕೆ ಇದ್ದೇ ಇತ್ತು.

ನಾವು ವಿಮಾನವನ್ನು ಮತ್ತೆ ಹತ್ತಿದಾಗ, ನಮ್ಮ ಕಠಿಣ ಪರಿಸ್ಥಿತಿಯನ್ನು ಸ್ಟೂವರ್ಟ್‌ಗೆ ವಿವರಿಸಲು ಪ್ರಯತ್ನಿಸೋಣವೆಂದುಕೊಂಡೆ. ವಿಮಾನ ಜರ್ಮನಿಯಲ್ಲಿ ಇಂಧನ ನವೀಕರಣಕ್ಕಾಗಿ ನಿಂತಾಗ, ಪ್ರಯಾಣಿಕರು ವಿಮಾನದಲ್ಲೇ ಕುಳಿತಿರಬಹುದು ಎಂದು ಅವನು ನನಗೆ ಧೈರ್ಯ ತುಂಬುತ್ತಾನೆಂದುಕೊಂಡಿದ್ದೆ. ಆದರೆ, ಇದು ಸಾಧ್ಯವಿಲ್ಲ ಎಂದು ವಿನಯವಾಗಿಯೇ ಹೇಳಿದ; ಎಲ್ಲಾ ಪ್ರಯಾಣಿಕರು ಕೆಳಗಿಳಿಯ ಬೇಕು ಹಾಗೂ ಅವರ ಪಾಸ್‌ಪೋರ್ಟ್‌ಗಳನ್ನು ಪರಿಶೀಲಿಸಬೇಕೆಂದು ಜರ್ಮನಿಯ ಅಧಿಕಾರಿಗಳು ಒತ್ತಿಹೇಳಿದ್ದರಂತೆ. ಅದಕ್ಕೆ ನಾವೇನೂ ಮಾಡುವ ಹಾಗಿರಲಿಲ್ಲ. ನನ್ನ ಮುಖ ಕಿರಿದಾಯಿತು. ಕಣ್ಣೀರು ಬಂತು. ಈಗ ನಮ್ಮವರಿಗೇ ನಾನು ಮೋಸ ಮಾಡಿದಂತಾಯಿತು. ಇಂಥಾ ಅಪಾಯಕಾರಿ ಕ್ರಮವನ್ನು ಕೈಗೊಂಡಿದ್ದಕ್ಕೆ ನನ್ನನ್ನು ನಾನೇ ಶಪಿಸಿಕೊಂಡೆ. ಆದರೆ, ಅದೊಂದೇ ಸಾಧ್ಯವಾದ ಆಯ್ಕೆ ಎಂಬುದು

ವಾಸ್ತವವಾಗಿ ನನಗೆ ಗೊತ್ತಿತ್ತು. ಆಗ ಸ್ಟೂವರ್ಟ್ ನಮಗೇನಾದರೂ ಸಹಾಯ ಬೇಕಾ ಎಂದು ನನ್ನನ್ನು ಮೆಲ್ಲಗೆ ಕೇಳಿದನು. ನಾನು ಅವನಿಗೆ ಪಾಸ್‌ಪೋರ್ಟ್‌ಗಳನ್ನು (ಕೆಂಪಕ್ಷರದಲ್ಲಿ J ಎಂದು ಬರೆದಿದ್ದನ್ನು) ಇಂಗ್ಲೆಂಡಿನ ವೀಸಾಗಳನ್ನು ತೋರಿಸಿ ಓಟ್ಟೋವಿನ ವಿಳಾಸವನ್ನೂ ಕೊಟ್ಟೆ. ನಮ್ಮನ್ನು ಲಂಡನ್ನಿಗೆ ಹೋಗಲು ಅನುಮತಿ ನೀಡದಿದ್ದರೆ, ಓಟ್ಟೋಗೆ ತಿಳಿಸಬೇಕೆಂದೂ ಹೇಳಿದೆ. ಕೆಎಲೆಂ ಸ್ಟೂವರ್ಟ್, ಜರ್ಮನ್ ಅಧಿಕಾರಿಗಳು ಯಹೂದಿಗಳ ಬಗ್ಗೆ ಮಾಡುವ ವರ್ತನೆಯನ್ನು ಖಚಿತಪಡಿಸ ಲಾದದ್ದನ್ನು ತಿಳಿದಿದ್ದನು. ಅವನು ಅನೇಕ ಶ್ರಮ ಶಿಬಿರಗಳಲ್ಲಿ ಪಾಡುಪಟ್ಟವರು ಜರ್ಮನಿಯ ಅನೇಕ ವಿಮಾನನಿಲ್ದಾಣಗಳಲ್ಲಿ ಹತ್ತಿದ್ದನ್ನು ನೋಡಿದ್ದನು. ಅವರುಗಳ ದುಃಸ್ಥಿತಿ ಕಂಡು, ಅವನು ಆಘಾತಗೊಂಡಿದ್ದನು. ಅವರುಗಳು ನೋಡಲು ತೀರಾ ದುರ್ಬಲ ಹಾಗೂ ಕೃಶಗೊಂಡಿದ್ದರು. ಅವರ ಕಣ್ಣುಗಳು ಒಳಹೋಗಿದ್ದನ್ನೂ ಚರ್ಮ ಹಳದಿ ಬಣ್ಣಕ್ಕೆ ತಿರುಗಿದ್ದನ್ನೂ ನೋಡಿದ್ದನು. ಅವನು ಅದನ್ನೆಲ್ಲಾ ವಿವರಿಸಿದ ಮೇಲೆ ತನ್ನ ತಲೆಯನ್ನು ದುಗುಡದಿಂದ ತೂಗಿದ. ಎಲ್ಲಾ ಹೇಳಿದ ಮೇಲೆ, ನಾವು ನಮ್ಮ ಊರು ತಲುಪುವಂತೆ ಸಾಧ್ಯವಾದದ್ದನ್ನೆಲ್ಲಾ ಮಾಡುವುದಾಗಿ ಮೆಲ್ಲನೆ ನನ್ನ ಕಿವಿಯಲ್ಲಿ ಹೇಳಿದ.

ನಾವು ಫ್ರಾಂಕ್‌ಫರ್ಟ್ ಕಡೆ ಇಳಿಯುತ್ತಿದ್ದಂತೆ, ನಾವು ಜರ್ಮನ್ ಪಾಸ್‌ಪೋರ್ಟ್ ನಿಯಂತ್ರಣ ಕಛೇರಿಗೆ ಹೋಗಬೇಕಾಗಬಹುದೆಂದು ಸಾಧ್ಯವಾದ ಮಟ್ಟಿಗೆ ಮೆಲ್ಲಗೆ ಹೇಳಿದೆ. ಅದರ ಇಂಗಿತಾರ್ಥ ಅವಳಿಗೆ ಆದಂತೆ ಕಾಣಲಿಲ್ಲ. ಕಾರಣ, ಅವಳು ಯಾವುದೇ ಚಿಂತೆಯನ್ನು ವ್ಯಕ್ತಪಡಿಸಲಿಲ್ಲ. ನಾವು ಅಲ್ಲಿ ಇಳಿದು, ಸ್ವಸ್ತಿಕ್ ಗುರುತಿನ ಧ್ವಜಗಳನ್ನು, ನಾಜಿ ಸಮವಸ್ತ್ರದ ಅಧಿಕಾರಿಗಳನ್ನು ಎಲ್ಲ ಕಡೆ ನೋಡಿದ ಮೇಲೆ ನಾವು ಎದುರಿಸಬಹುದಾದ ಅಪಾಯದ ಸಂಶಯವಾಯಿತು. ನಾನು ಅವಳ ಕೈಹಿಡಿದು, ಯಾವ ಭಯವನ್ನು ತೋರದೆ ತಲೆಯೆತ್ತಿ ನಡೆಯುವಂತೆ ಮೆಲುನುಡಿಯಲ್ಲಿ ಹೇಳಿದೆ. ನಮ್ಮ ಸರದಿ ಬಂದಾಗ, ನಮ್ಮ ಪಾಸ್‌ಪೋರ್ಟ್‌ಗಳನ್ನು ನೋಡಿದ ಅಧಿಕಾರಿ ಹೇಳಿದ, "ಹಿಂತಿರುಗಿ ಬಂದ ವಲಸಿಗರು" ಎಂದು. ನಾವು ಲಂಡನ್ನಿಗೆ ಹೋಗುವ ಮಾರ್ಗದಲ್ಲಿದ್ದೇವೆಂದೂ, ಜರ್ಮನಿಗೆ ಹಿಂತಿರುಗುವ ಉದ್ದೇಶವಿಲ್ಲವೆಂದೂ ತಕ್ಷಣ ನಾನು ವಿವರಿಸಿದೆ. ಆಗ ಅವನು ನಮ್ಮ ಇಂಗ್ಲೆಂಡಿನ ವೀಸಾಗಳನ್ನು ಪರಿಶೀಲಿಸಿ, ನಾವು ಹೋಗುವಂತೆ ಅನುಮತಿ ಕೊಟ್ಟ. ನಾವು ವಿಮಾನವನ್ನು ಮತ್ತೆ ಏರಿದಾಗ, ನಾನು ಸಮಾಧಾನದ ನಿಟ್ಟುಸಿರುಬಿಟ್ಟೆ. ಸ್ಟೂವರ್ಟ್‌ನೊಂದಿಗೆ ದೊಡ್ಡ ನಗುವನ್ನು ವಿನಿಮಯ ಮಾಡಿಕೊಂಡೆ. ನಮಗೆ ಎಲ್ಲವೂ ಸರಿ ಹೋದುದರ ಬಗ್ಗೆ ಅವನು ನಿಜವಾಗಿಯೂ ಖುಷಿಗೊಂಡಂತೆ ಕಂಡುಬಂದಿತು. ಆದರೂ ಅವನು ಕೊಲೋನ್‌ನಲ್ಲಿ ಆಗಬಹುದಾದ ಕೆಟ್ಟ ನಡವಳಿಕೆ ಬಗ್ಗೆ ಸಿದ್ಧವಾಗಿರುವಂತೆ ನನಗೆ ಎಚ್ಚರಿಕೆ ನೀಡಿದ, ಅಲ್ಲಿನ ಅಧಿಕಾರಿಗಳು ಕಠಿಣ

ವಾಗಿರುವುದಕ್ಕೆ ಕುಪ್ರಸಿದ್ಧರು ಎಂದು ಗೊತ್ತು ಎಂದು.

ನಾವು ಕೊಲೊನ್ ತಲುಪುತ್ತಿದ್ದಂತೆ ಬಾಗಿಲುಗಳು ತೆರೆದುಕೊಂಡವು. ನಮ್ಮ ಹೆಸರುಗಳನ್ನು ಮೈಕ್ ಮೂಲಕ ಕರೆದದ್ದು ಕೇಳಿಸಿತು. ವಿಶೇಷ ಕಛೇರಿಯೊಂದರಲ್ಲಿ ವರದಿ ಮಾಡಿಕೊಳ್ಳಲು ನಮಗೆ ಸೂಚಿಸಲಾಯಿತು. ಅದನ್ನು ಕೇಳಿ ಎದ್ದು ನಡೆಯಲೂ ಅಶಕ್ತಳಾದೆ. ನನಗಂತೂ ವಿಪರೀತ ಭಯವಾಯಿತು. ಎಲ್ಲಾ ತಪ್ಪಾಗಿದ್ದು ನನ್ನಿಂದಲೇ. ನಾನು ನೇಪಲ್ಸ್‌ನಲ್ಲೇ ಇದ್ದು, ಇಂಗ್ಲೆಂಡ್‌ಗೆ ಹೋಗಲು ಸುರಕ್ಷಿತವಾದ ದಾರಿಯನ್ನು ಕಂಡುಕೊಳ್ಳಬೇಕಿತ್ತು. ಓಟ್ಟೋವನ್ನು ಸಂಪರ್ಕಿಸಿ ಏನು ಮಾಡಲೆಂದು ಸಮಾಲೋಚಿಸ ಬೇಕಿತ್ತು. ಅಪ್ಪನನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ. ಆದರೆ, ನಮ್ಮನ್ನು ಇಬ್ಬರು ಮಹಿಳಾ ನಾಜಿ ಅಧಿಕಾರಿಗಳೊಂದಿಗೆ, ಕೊಲೊನ್ ವಿಮಾನ ನಿಲ್ದಾಣದ ಮೂಲಕ ಕರೆದೊಯ್ಯುತ್ತಿದ್ದಾಗ, ಈ ಎಲ್ಲಾ ಉಗ್ರ ಟೀಕೆ ಹೆಚ್ಚು ಕಾಲ ನಿಲ್ಲಲಿಲ್ಲ. ಕೇವಲ ಒಂದು ಮೇಜು ಮತ್ತು ಒಂದು ಕುರ್ಚಿಯಿದ್ದ ಚಿಕ್ಕ ಕೊಠಡಿಗೆ ನಮ್ಮನ್ನು ಕರೆದೊಯ್ದರು. ಮೊದಲು ಅವರ ಗಟ್ಟಿ ನೀಲಿ ಕಣ್ಣುಗಳು ಅಮ್ಮನ ಕಡೆ ದಿಟ್ಟಿಸಿದವು. ಅವಳಂತೂ ಎಷ್ಟು ಹೆದರಿದ್ದಳೆಂದರೆ, ತನ್ನ ಮೈಯ ನಡುಗುವಿಕೆಯನ್ನು ನಿಯಂತ್ರಿಸಲೂ ಆಗುತ್ತಿರಲಿಲ್ಲ. ನಂತರ ಅವರ ದೃಷ್ಟಿ ನನ್ನ ಮೇಲೆ ಬಿದ್ದಿತು. ನಾನೂ ಅವರ ಕಡೆ ದೃಷ್ಟಿ ಬೀರಿ, ಯಾವುದೇ ಹೆದರಿಕೆಯಿಲ್ಲವೆಂದು ತೋರಿಸಲೆತ್ನಿಸಿದೆ. ಮತ್ತೆ ನಮ್ಮನ್ನು 'ಹಿಂತಿರುಗಿದ ವಲಸೆಗಾರರು' ಎಂದು ಕರೆಯಲಾಯಿತು. ನಾವು ಇಂಗ್ಲೆಂಡ್‌ಗೆ ಹೋಗುವ ದಾರಿಯಲ್ಲಿದ್ದೇವೆ ಎಂದು ನಾನು ಮತ್ತೊಮ್ಮೆ ಅವರಿಗೆ ವಿವರಿಸಿ, ನಮ್ಮ ಪಾಸ್‌ಪೋರ್ಟ್‌ನಲ್ಲಿ ಇಂಗ್ಲೆಂಡಿನ ವೀಸಾಗಳಿದ್ದುದನ್ನು ತೋರಿಸಿದೆ. ಅವರಲ್ಲೊಬ್ಬರು ನಮ್ಮ ಪಾಸ್‌ಪೋರ್ಟ್‌ಗಳನ್ನು ಕಸಿದುಕೊಂಡು, ಕೊಠಡಿಯಿಂದ ಆಚೆ ಹೋದರು. ಅವಳ ಸಂಗಾತಿಯೊಬ್ಬಳು ನಮ್ಮನ್ನು ಪರಿವೀಕ್ಷಿಸಲು ಉಳಿದಳು. ಮೊದಲ ಅಧಿಕಾರಿ ನಮ್ಮ ದಾಖಲೆಗಳ ಸಹಿತ ಹಿಂತಿರುಗಿ ಬಂದಾಗ, ಉಗ್ರ ಧ್ವನಿಯಲ್ಲಿ, ಅವಳು ಆದೇಶಿಸಿದಳು. "ನೀವು ಯಹೂದಿಗಳೆಲ್ಲಾ, ದೇಶದಿಂದಾಚೆ ಕದ್ದು ಸಾಗಿಸುವುದನ್ನೆಲ್ಲಾ ನಾವು ನೋಡಬೇಕು." ಸದ್ಯ ನಾವು ತಂದಿದ್ದ ಉಣ್ಣೆ ನೂಲಿನ ಉಂಡೆಗಳು ಸೂಟ್‌ಕೇಸಿನಲ್ಲಿ ತುಂಬಿಟ್ಟಿದ್ದು, ಅದು ನಮ್ಮ ಲಗ್ಗೇಜಿನೊಂದಿಗೇ ಇದ್ದುವು.

ಕೆಲವೇ ನಿಮಿಷಗಳಲ್ಲಿ ನಾನಲ್ಲಿ ನಿಲ್ಲಬೇಕಾಯಿತು. ಪೂರ್ಣ ನಗ್ನಳಾಗಿ, ಅಮ್ಮನ ಬೆರಳುಗಳು ಹೇಗೆ ನಡುಗುತ್ತಿದ್ದುವೆಂದರೆ, ತನ್ನ ಬೆಲ್ಟನ್ನು ಬಿಚ್ಚಿಕೊಳ್ಳ ಲಾಗಲಿಲ್ಲ. ಅವಳಿಗೆ ಸಹಾಯ ಮಾಡಲು ನಾನು ಹೋದಾಗ, ಇಬ್ಬರು ಅಧಿಕಾರಿಣಿಯರಲ್ಲಿ ಚಿಕ್ಕವಳು ನನ್ನನ್ನು ತಳ್ಳುತ್ತಾ ಹೇಳಿದಳು. ಆ ಹಾಳಾದ ಯಹೂದಿ ಹೆಂಗಸು ತಾನೇ ಎಲ್ಲವನ್ನು ಬಿಚ್ಚಲಿ ಎಂದು, ಎಷ್ಟೇ ಭಯಗೊಂಡರೂ, ಅವರ ಅಮಾನವೀಯ ವರ್ತನೆ ನಮ್ಮನ್ನು ಕೋಪೋದ್ರಿಕ್ತರನ್ನಾಗಿ ಮಾಡಿತು. ನನ್ನ

ಭಾವನೆಗಳನ್ನು ನಾನು ನಿಯಂತ್ರಿಸಲು ಹಾಗೂ ಸಂಕೋಚವನ್ನು ತೋರಿಸದಂತೆಯೂ ಪ್ರಯತ್ನಿಸಿದೆ. ಅವರು ಮಾತ್ರ ನಾನು ನಗ್ನಳಾಗಿ ನಿಂತಿದ್ದುದನ್ನು ದಿಟ್ಟಿಸುತ್ತಲೇ ಇದ್ದರು. ನಂತರ, ನಮ್ಮ ಎಲ್ಲಾ ಬಟ್ಟೆಯನ್ನು ಒಂದೊಂದಾಗಿ ಪರಿಶೀಲಿಸತೊಡಗಿದರು. ಪ್ರತಿಯೊಂದು ಜೇಬನ್ನು ಖಾಲಿ ಮಾಡಿದರು. ಪ್ರತಿಯೊಂದು ಹೊಲಿಗೆ ಮತ್ತು ಕಾಲರ್ ಅನ್ನು ಪರಿಶೀಲಿಸಿದರು. ನನ್ನ ಬ್ಯಾಗನ್ನು ಹುಡುಕಿದಾಗ, ಆಲ್ಬೇನಿಯಾದ ಇಟಾಲಿಯನ್ ಗೌರ್ನರ್, ಡರ್ರೆಸ್‌ನ ಸುತ್ತಮುತ್ತ ಮುಕ್ತ ವಿಹಾರಕ್ಕಾಗಿ ಕೊಟ್ಟಿದ್ದ ಅನುಮತಿ ಪತ್ರ ಸಿಕ್ಕಿತು. ಅನೇಕ ಮೊಹರುಗಳೂ ಮತ್ತು ಸ್ಟಾಂಪ್‌ಗಳಿದ್ದ ಅಧಿಕೃತ ಪ್ರಮಾಣಪತ್ರದಂತಿದ್ದ ಪತ್ರ. ಅದನ್ನು ಅವರು ಬಹಳ ಆಸಕ್ತಿಯಿಂದಲೇ ನೋಡಿದರು. ಅದರಿಂದ ಅವರಿಗೆ ಒಳ್ಳೆಯ ಅಭಿಪ್ರಾಯವೇ ಬಂದಿತೆಂದು ಕಾಣುತ್ತದೆ.

ಅವರು ಹೇಳಿದಂತೆ, ನಾನು ಆ ದಾಖಲೆ ಪತ್ರವನ್ನು ಭಾಷಾಂತರಿಸಿದೆ. ಆ ಇಬ್ಬರು ನಾಜಿ ಅಧಿಕಾರಿಣಿಯರಲ್ಲಿ, ವಯಸ್ಸಾದವಳು ನನ್ನ ಭುಜವನ್ನು ಅಲ್ಲಾಡಿಸುತ್ತಾ ನೀನೇನಾದರೂ ಸುಳ್ಳು ಹೇಳಿದ್ದರೆ, ನಿನಗೆ ಶಿಕ್ಷೆ ಕಾದಿದೆ ಎಂದು ಕೂಗಾಡಿದಳು. ಈ ಪ್ರಮಾಣಪತ್ರ ನಮ್ಮನ್ನು ರಕ್ಷಿಸುವುದೆಂದು ತಕ್ಷಣ ತಿಳಿದು ನಾನವಳಿಗೆ ನಿಧಾನವಾಗಿ ಹೇಳಿದೆ. ಅವರಲ್ಲೇ ಒಬ್ಬ ಅಧಿಕಾರಿಯನ್ನು ಕರೆದು, ಆ ದಾಖಲಾತಿಯನ್ನು ಭಾಷಾಂತರಿಸಲು ಹೇಳಿ ನಾನು ಹೇಳಿದ್ದುದನ್ನು ಪರಿಶೀಲಿಸಿ ಎಂದು. ಇದಲ್ಲದೆ, ಈ ಪ್ರಮಾಣಪತ್ರದ ಅನೇಕ ಪ್ರತಿಗಳು ಬೇರೆ ಕಡೆ ಇವೆ ಎಂದೂ ಹೇಳಿದೆ. ಒಂದು ಆಲ್ಬೇನಿಯಾದ ಗೌರ್ನರ್‌ರೊಂದಿಗೆ ನಾವು ಇಂಗ್ಲೆಂಡಿಗೆ ಈ ವಿಮಾನದಲ್ಲಿ ಹೋಗುತ್ತಿರುವುದನ್ನು ತಿಳಿದಿರುವವರು; ಮತ್ತೊಂದು ಡರ್ರೆಸ್‌ನಲ್ಲಿರುವ ಲಂಡನ್ನಿನ ವಿಮಾನ ನಿಲ್ದಾಣವನ್ನು ತಲುಪುತ್ತಿದ್ದಂತೆ ನಮ್ಮನ್ನು ಭೇಟಿ ಮಾಡಲು ಬರುವ ನನ್ನ ಸೋದರನೊಂದಿಗೆ, ಈ ದೀರ್ಘ ಚರ್ಚೆಯುದ್ದಕ್ಕೂ, ಅಮ್ಮ ಮತ್ತು ನಾನು ಯಾವ ಬಟ್ಟೆಯಿಲ್ಲದೆ ಹಾಗೇ ನಿಂತಿದ್ದೆವು. ಅಮ್ಮನ ಮೈಯಂತೂ ಗಾಳಿಯಲ್ಲಿನ ಎಲೆಯಂತೆ ನಡುಗುತ್ತಿತ್ತು.

ಆ ಹಿರಿಯ ಅಧಿಕಾರಿ, ನಮಗೆ ಬಟ್ಟೆ ಹಾಕಿಕೊಳ್ಳಲು ಹೇಳಿ ಆ ದಾಖಲೆ ಪತ್ರವನ್ನು ತೆಗೆದುಕೊಂಡು ಹೊರಡಲು ಆದೇಶಿಸಿದಳು. ನಾನು ನನ್ನ ಗಡಿಯಾರವನ್ನು ಧರಿಸಿದ ಮೇಲೆ ಗೊತ್ತಾಯಿತು. ಈ ಮುಖಾಮುಖಿ ಎರಡು ಗಂಟೆಗಳಿಗೂ ಹೆಚ್ಚು ಕಾಲ ನಡೆದಿತ್ತು ಎಂದು. ಹಾಗೂ ನಮ್ಮ ವಿಮಾನ ಕೊಲೊನ್ ನಿಲ್ದಾಣದಲ್ಲಿ ಇರಬೇಕಾದ್ದು ಕೇವಲ ೪೫ ನಿಮಿಷ ಮಾತ್ರ. ಎಲ್ಲಾ ವಿಧಿ ಬರೆದಂತೆ ಎಂದು ನಾನು ನಂಬಲಾರಂಭಿಸಿದ್ದೆ. ನಾವು ಒಂದು ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವಷ್ಟರಲ್ಲಿ ಇನ್ನೊಂದರಲ್ಲಿ ಸಿಕ್ಕಿಹಾಕಿಕೊಳ್ಳುವವರಿದ್ದೆವು. ಒಂದೇ ಸಮನೆ ನಾನು ಪರೀಕ್ಷೆಗೆ ಒಳಗಾಗುತ್ತಿದ್ದೆ. ಯಾವ ಹಂತದಲ್ಲಿ ನಾನು ಕೊನೆಗೆ ಅನುತ್ತೀರ್ಣಳಾಗುತ್ತೇನೋ ಎಂದು ಯೋಚಿಸುತ್ತಿದ್ದೆ. ಈ ಮಧ್ಯೆ ವಿಮಾನ ಖಂಡಿತವಾಗಿ ನಾವಿಲ್ಲದೆಯೇ

ಹೊರಟುಹೋಗಿರುತ್ತದೆ ಎಂದುಕೊಂಡೆ. ಹಾಗಿದ್ದರೆ ಏನು ಮಾಡುವುದು ಎಂದು ನನ್ನ ಮನಸ್ಸು ಯೋಚಿಸುತ್ತಿತ್ತು. ಹತ್ತೇ ನಿಮಿಷಗಳಾದರೂ, ಅನಂತವೆಂದು ಕಂಡು ಬಂದ ನಂತರ, ಆ ನಾಜಿ ಮಹಿಳೆ ಹಿಂತಿರುಗಿ ಬಂದಳು. ಉಗ್ರವಾದ ಧ್ವನಿಯಲ್ಲಿ ವಿಮಾನವನ್ನು ಹತ್ತಲು ನಮಗೆ ಹೇಳಿದಳು. ಸಮಾಧಾನವೇನೋ ಸಿಕ್ಕಿತು. ಆದರೆ ನಮ್ಮ ವಿಷಮ ಪರೀಕ್ಷೆಯ ಪರಿಣಾಮ ನನ್ನಮ್ಮನ ಮೇಲೆ ಎಷ್ಟಾಗಿತ್ತೆಂದರೆ, ನಾನಂತೂ ಕುಸಿದುಬೀಳುವಂತಾಗಿದ್ದೆ. ಅವಳ ಮುಖವಂತೂ ಕಾಗದದಂತೆ ಬಿಳಿಚಿಕೊಂಡಿತ್ತು. ಅವಳಿನ್ನೂ ನಡುಗುತ್ತಿದ್ದಳು. ಕುಬ್ಜಳಾಗಿ ಕಾಣುತ್ತಿದ್ದಳು. ನಮ್ಮಮ್ಮನಿಗೆ ಇಂಥಾ ಗತಿ ಕಾಣಿಸಿದ ಹೆಂಗಸನ್ನು ಕೊಂದುಬಿಡಬೇಕೆನ್ನಿಸಿತ್ತು. ನಿಜವಾಗಿ ಹೇಳಬೇಕೆಂದರೆ, ಅವಳು ನರಳುವುದನ್ನು ನೋಡಿ ಸಂತೋಷಪಡುತ್ತಿದ್ದೆ. ಅದರ ಬದಲು, ಇಂಗ್ಲೆಂಡಿಗೆ ಹೋಗುವ ವೀಸಾಗಳು ಇದ್ದ ನಮ್ಮ ಪಾಸ್‌ಪೋರ್ಟ್‌ಗಳನ್ನು ಹಿಂತಿರುಗಿಸಲು ಹೇಳಿದೆ. ಅದಕ್ಕೆ ಅವಳು ಸುಮ್ಮನೆ ನಕ್ಕಳು. ನನ್ನನ್ನು ಕೊಠಡಿಯಿಂದ ಆಚೆಗೆ ತಳ್ಳಿದಳು. ಪ್ರಯಾಣ ಮುಂದುವರಿಸಲು ಅವಕಾಶ ಕೊಟ್ಟಿದ್ದೇ ಅದೃಷ್ಟ ಎಂದು ತಿಳಿದುಕೊಳ್ಳಲು ಹೇಳಿ ಯಾವುದೇ ಒತ್ತಾಯ ಮಾಡಕೂಡದೆಂದು ಖಡಾಖಂಡಿತವಾಗಿ ಹೇಳಿಬಿಟ್ಟಳು.

ಕಿಟಕಿಯ ಮೂಲಕ ನಮ್ಮ ಕೆಎಲ್‌ಎಂ ವಿಮಾನ ಜಲ್ಲಿ ಹಾಸಿನ ಮೇಲೆ ಇದ್ದುದು ಕಾಣಿಸಿತು. ಮೆಟ್ಟಿಲ ಮೇಲೆ ಸ್ಟೂವರ್ಟ್ ನಿಂತಿದ್ದನು. ನಾವು ಅಲ್ಲಿಗೆ ಸಮೀಪಿಸುತ್ತಿದ್ದುದನ್ನು ಸ್ಟೂವರ್ಟ್ ನೋಡಿದಾಗ, ಅವನು ನಮ್ಮನ್ನ ಎದುರ್ಗೊಳ್ಳಲು ಮೆಟ್ಟಿಲಿನಿಂದ ಇಳಿದು, ವಿಶಾಲ ನಗುವಿನಿಂದ ದೀರ್ಘಕಾಲದಿಂದ ಕಳೆದುಹೋದ ನೆಂಟರಂತೆ ಸ್ವಾಗತಿಸಿದ. ನಾವು ಮತ್ತೆ ಪ್ರಯಾಣಿಸಲು ಅನುಮತಿ ನೀಡಿದ್ದರಾದರೂ, ನಮ್ಮ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ನಾನು ಅವರಿಗೆ ತಕ್ಷಣ ತಿಳಿಸಿದೆ. ಮೊದಲು ಆಸೀನರಾಗಿರಿ ಎಂದು ಹೇಳಿ, ಪಾಸ್‌ಪೋರ್ಟ್‌ಗಳನ್ನು ಬಿಡುಗಡೆ ಮಾಡುವಂತೆ ಜರ್ಮನ್ ಅಧಿಕಾರಿಗಳ ಮನವೊಲಿಸುವುದಾಗಿ ತಿಳಿಸಿದನು. ಅಮ್ಮ ಮತ್ತು ನಾನು ನಮ್ಮ ಆಸನದ ಕಡೆಗೆ ಏರುದಾರಿಯಲ್ಲಿ ನಡೆದಾಗ, ಇತರ ಪ್ರಯಾಣಿಕರು ಚಪ್ಪಾಳೆ ತಟ್ಟಿ ನಮ್ಮನ್ನು ಮತ್ತೆ ನೋಡಲು ಹರ್ಷ ವ್ಯಕ್ತಪಡಿಸಿದರು. (ಅವರಲ್ಲನೇಕರು ಡಚ್ ಅಥವಾ ಇಂಗ್ಲೀಷರು ಇದ್ದರು.) ವಿಮಾನವನ್ನು ನಮಗಾಗಿ ತಡಮಾಡಲಾಗಿತ್ತು. ಹಾಗೂ ನಮ್ಮ ಸಹ ಪ್ರಯಾಣಿಕರಿಗೆ ಕಾರಣವನ್ನು ನೀಡಲಾಗಿತ್ತು ಎಂದು ನಂತರದಲ್ಲಿ ನಮಗೆ ಗೊತ್ತಾಯಿತು. ಆ ಭಯಾನಕ ನಾಜಿ ಮಹಿಳೆಯರ ಹಿಡಿತದಿಂದ ಬಿಡಿಸಿಕೊಂಡಿದ್ದಕ್ಕೆ ಸಮಾಧಾನ ವಾಗಿದ್ದರೂ, ಇಂಗ್ಲೆಂಡಿಗೆ ಪಾಸ್‌ಪೋರ್ಟ್‌ಗಳಿಲ್ಲದೆ ಹೋದರೆ, ಏನಾಗಬಹುದೆಂಬ ಚಿಂತೆ ನನ್ನನ್ನು ಕಾಡಿತು; ಯುಗೋಸ್ಲಾವಿಯಾದಿಂದ ಆಲ್ಬೇನಿಯಾಕ್ಕೆ ಹಡಗಿನಲ್ಲಿ ಪ್ರಯಾಣಿಸುವಾಗ ಭೇಟಿ ಮಾಡಿದ್ದ ಜರ್ಮನ್ ದಂಪತಿಗಳಿಗೆ ಎಲ್ಲೂ ಇಳಿಯಲು

ಅವಕಾಶವಿಲ್ಲದೆ, ಸಮುದ್ರದಲ್ಲೇ ಹೋಗುವಂತಾದ ಗತಿಯೇ ನಮಗೂ ಆಗಬಹುದೆಂದು ನನಗೆ ಭಯವಾಯಿತು. ಈ ಆಲೋಚನೆಯಲ್ಲೇ ಮುಳುಗಿದ್ದ ನಾನು, ಸ್ಟೂವರ್ಟ್ ನಮ್ಮ ವಿಮಾನದ ಕಡೆಗೆ, ಕೈಯಲ್ಲಿ ಏನೋ ಹಿಡಿದುಕೊಂಡು ಬೀಸುತ್ತಾ ಧಾವಿಸಿ ಬಂದುದನ್ನು ಗಮನಿಸಿರಲಿಲ್ಲ. ಅವನು ಎರಡೆರಡು ಮೆಟ್ಟಿಲನ್ನು ಹತ್ತಿಕೊಂಡು ಬರುತ್ತಿದ್ದುದನ್ನು ನೋಡಿದಾಗ, ಅವನನ್ನು ಮಾತನಾಡಿಸಲು ಬಾಗಿಲ ಕಡೆಗೆ ಧಾವಿಸಿದೆ. ಅವನು ಹೆಮ್ಮೆಯಿಂದ, ನಮ್ಮ ಪಾಸ್‌ಪೋರ್ಟ್‌ಗಳನ್ನು ನನ್ನ ಕೈಗೆ ನೀಡಿದ. ಆಗ ನಾನು ಎರಡೂ ಕೈಗಳನ್ನೆತ್ತಿ ಅವನನ್ನು ಆಲಂಗಿಸಿ, ಚುಂಬಿಸಿದೆ. ಇತರ ಅನೇಕ ಪ್ರಯಾಣಿಕರು 'ಅವನೊಬ್ಬ ತಮಾಷೆ'ಯ ಒಳ್ಳೆ ಮಿತ್ರ ಎಂಬ ಹಾಡನ್ನು ಒಟ್ಟಿಗೆ ಹಾಡಿದರು.

ಕೆಲವೇ ನಿಮಿಷಗಳಲ್ಲಿ ನಾವು ಗಾಳಿಯಲ್ಲಿ ವಿಹರಿಸುತ್ತಿದ್ದೆವು. ಹಿಂದಿನ ಕೆಲವು ಗಂಟೆಗಳ ಅನುಭವ ದುಸ್ವಪ್ನದಂತೆ ತೋರಿತು. ತನಗೆ ತಾನೇ ಗೊಣಗುತ್ತ ಕುಳಿತ ಅಮ್ಮನನ್ನು ನೋಡಿದಾಗ, ಅವಳು ಆ ದುಸ್ವಪ್ನವನ್ನು ಕೆಲಕಾಲ ಮತ್ತೆ ಅನುಭವಿಸುತ್ತಾಳೆಂದೆನಿಸಿತು. ನಾನು ನನ್ನ ಆಸನದಲ್ಲಿ ಕುಳಿತು ದಿನದ ಘಟನೆ ಗಳನ್ನೆಲ್ಲಾ ಮೆಲುಕು ಹಾಕಿದೆ. ನಾನು ಗೌರ್ನರ್‌ರವರನ್ನು ಸಂಪರ್ಕಿಸಿ ಅವರ ದೂರ ದೃಷ್ಟಿಯುಳ್ಳ ಮಾತುಗಳಿಗಾಗಿ ನೋಡಿಕೊಳ್ಳುವುದು ಅವನಿಗೇನೂ ಗೊತ್ತಿರಲಿಲ್ಲ. ನಮ್ಮ ಉಳಿವಿಗಾಗಿ ನಾವು ಕೃತಜ್ಞತೆ ಸಲ್ಲಿಸಬೇಕಾದ ವ್ಯಕ್ತಿಗಳ ಹೆಸರಿನ ಪಟ್ಟಿ ಉದ್ದವಾಗುತ್ತಿತ್ತು.

ಸ್ಟೂವರ್ಟ್ ಎಲ್ಲರನ್ನೂ ಕೂರಿಸಿದ ತಕ್ಷಣ ನಾನವನನ್ನು ಹಿಡಿದುಕೊಂಡೆ. ಅವನು ಹೇಗೆ ನಮ್ಮ ಪಾಸ್‌ಪೋರ್ಟ್‌ಗಳನ್ನು ಮರಳಿ ಪಡೆದಿದ್ದ ಎಂಬುದನ್ನು ತಿಳಿದುಕೊಳ್ಳುವ ಕುತೂಹಲವುಂಟಾಯಿತು. ಎಲ್ಲಾ ಪ್ರಯಾಣಿಕರು ತಂತಮ್ಮ ಪಾಸ್‌ಪೋರ್ಟ್‌ಗಳನ್ನು ಹೊಂದಿರದಿದ್ದರೆ, ಕ್ಯಾಪ್ಟನ್ ವಿಮಾನವನ್ನೇರಲು ನಿರಾಕರಿಸುವುದಾಗಿ ಹೇಳಿದ್ದನೆಂದು ಅವನು ವಿವರಿಸಿದ. ಜರ್ಮನ್ ಅಧಿಕಾರಿಗಳ ಜತೆ ಸ್ವಲ್ಪ ಹೊತ್ತು ವಾದಿಸಿದ ಮೇಲೆ ಅವರು ನಮ್ಮ ಪಾಸ್‌ಪೋರ್ಟ್‌ಗಳನ್ನು ಹಿಂತಿರುಗಿಸಲು ಕೊನೆಗೂ ಒಪ್ಪಿದರಂತೆ. ಕೊಲೋನ್‌ನಲ್ಲಿ ನಿಂತಾಗ ನಮಗೆ ಆದ ಅನುಭವಗಳನ್ನು ಅವನಿಗೆ ಹೇಳಿದೆ. ಅವರು ನಡೆಸಿಕೊಂಡ ವಿವರಗಳನ್ನು ನನ್ನಿಂದ ಕೇಳಿದಾಗ ಅವನಿಗೆ ಆಘಾತವಾಯಿತು.

ನಾವು ಆಮ್‌ಸ್ಟರ್‌ಡಂ ತಲುಪಿದಾಗ, ವಿಮಾನವನ್ನು ಬದಲಿಸಬೇಕಾಯಿತು. ಹಾಗಾಗಿ ಸ್ಟೂವರ್ಟ್‌ನಿಂದ ವಿದಾಯಗೊಂಡೆವು. ಅವನ ಕೈಕುಲುಕುತ್ತಾ ಕೃತಜ್ಞತೆಯನ್ನು ಅರ್ಪಿಸಿದೆ. ಆದರೆ ನಾನು ನಮ್ಮ ಲಂಡನ್ ತಲುಪುವ ಬಗ್ಗೆ ಎಷ್ಟೊಂದು ಮಗ್ನಳಾಗಿದ್ದೆ ನೆಂದರೆ, ಅವನ ಹೆಸರನ್ನಾಗಲಿ ಅಥವಾ ಅವನನ್ನೆಲ್ಲಿ ಸಂಪರ್ಕ ಮಾಡಬಹುದು ಎಂಬ ವಿವರಗಳನ್ನು ಕೇಳುವುದನ್ನು ಮರೆತುಬಿಟ್ಟೆ. ಅಮ್ಮ ತನ್ನ ಕೈಯನ್ನು ಅವನ

ಕಡೆ ಚಾಚಿದಾಗ, ಅವನು ಅದಕ್ಕೆ ಮುತ್ತಿಟ್ಟು, ಪ್ರಯಾಣದ ಅವಧಿಯಲ್ಲಿ ಪಟ್ಟ ತೊಂದರೆಯಿಂದ ಅವನು ವಿಷಾದಿಸಿದ್ದನ್ನು ಮೆಲ್ಲಗೆ ಹೇಳಿದ. ಆಗಿನಿಂದ ನಾನು ಅವನು ಏನಾದ, ದ್ವಿತೀಯ ಮಹಾಯುದ್ಧದಲ್ಲಿ ಬದುಕುಳಿದನೆ ಎಂದು ಯೋಚಿಸುತ್ತಲೇ ಇದ್ದೇನೆ.

ರೋಮ್‌ನ್ನು ಬೆಳಿಗ್ಗೆ ಏಳು ಗಂಟೆಗೆ ಬಿಟ್ಟು, ಕೊನೆಗೆ ಲಂಡನ್ ವಿಮಾನ ನಿಲ್ದಾಣದಲ್ಲಿ ಸಂಜೆ ಸುಮಾರಿಗೆ ಐದು ಗಂಟೆಗೆ ಬಂದಿಳಿದೆವು. ಬ್ರಿಟನ್ನಿನ ವಲಸೆ ಅಧಿಕಾರಿಯನ್ನು ನೋಡಲು ಹಾಗೂ ನಮ್ಮ ಲಗ್ಗೇಜನ್ನು ಮರಳಿ ಪಡೆಯಲು ಸಾಲು ನಿಂತ ಮೇಲೆ, ನಮ್ಮನ್ನು ಪ್ರವೇಶ ಸ್ಥಳಕ್ಕೆ ಬಿಡಲಾಯಿತು. ಜನಗಳ ಗುಂಗಿನಲ್ಲಿ ಓಟ್ಟೊವಿಗಾಗಿ ನಾನು ಹುಡುಕಾಡಿದೆ. (ನಮ್ಮ ಎಲ್ಲಾ ಸಾಹಸವನ್ನು ಕೇಳಿದ ಮೇಲೆ ಅವನು ನನ್ನ ಮೇಲೆ ಉಂಟುಮಾಡುವ ಪ್ರಶಂಸೆ ಹಾಗೂ ದೊಡ್ಡ ಮಾತಿಗೆ ಒಳಗೊಳಗೇ ನಾನು ಕಾತರಳಾಗಿದ್ದೆ.) ಅವನಾಗಲಿ, ಕುರ್ಟ್ ಆಗಲಿ ಕಾಣಿಸಲಿಲ್ಲ. ನನಗಂತೂ ಅದನ್ನು ನಂಬಲಾಗಲಿಲ್ಲ. ನಾವುಗಳು ಇಂಗ್ಲೆಂಡ್‌ಗೆ ಬರಲು ಎಷ್ಟು ಕಷ್ಟಪಟ್ಟಿದ್ದೆವು, ನಮ್ಮನ್ನು ಭೇಟಿ ಮಾಡಲೂ ಅವರು ಬಂದಿರಲಿಲ್ಲ ಎಂದರೆ ! ನನಗಂತೂ ಅಳು ಬರುವ ಹಾಗಾಯಿತು. ಆದರೆ ಕಣ್ಣೀರೇ ಬರಲಿಲ್ಲ. ನನ್ನ ಎಂದಿನ ಅಭ್ಯಾಸದಂತೆ, ಓಟ್ಟೊವನ್ನು ಹುಡುಕಲು ಹೋಗುವ ಮೊದಲು, ಅಮ್ಮನನ್ನು ಕುರ್ಚಿಯಲ್ಲಿ ಕುಳ್ಳಿರಿಸಿದೆ. ನನಗೆ ಒಂದೂ ಇಂಗ್ಲಿಷ್ ಪದ ಗೊತ್ತಿರದೆ ಇದ್ದುದರಿಂದ, ಏನು ಮಾಡುವುದು ಅಥವಾ ನನ್ನ ಸೋದರನನ್ನು ಎಲ್ಲಿ ಹುಡುಕುವುದು, ಯಾರನ್ನು ಕೇಳುವುದು ಎಂಬುದು ಗೊತ್ತಾಗಲಿಲ್ಲ. ಆಗ ನಾನೊಬ್ಬ ಮಹಿಳೆಯನ್ನು ಡಿಸ್ಕ್ ಹಿಂದೆ ಕುಳಿತಿದ್ದವಳನ್ನು ಪತ್ತೆ ಹಚ್ಚಿದೆ. ಅವಳ ಬಳಿ ದಪ್ಪಕ್ಷರದ 'ಯಹೂದಿ ನೆರವು ಸಮಿತಿ' ಎಂಬ ಘೋಷಣೆಯ ಒಂದು ಭಿತ್ತಿಪತ್ರವಿತ್ತು. ಮೆಲ್ಲನೆ ಅವಳ ಬಳಿ ಹೋಗಿ, ಜರ್ಮನ್ ಬರುತ್ತದೆಯೆ ಎಂದು ಕೇಳಿದೆ. ಅವಳು ತಲೆಯೆಲ್ಲಾಡಿಸಿದಳು. ನಮ್ಮ ಕಥೆಯನ್ನು ಕೇಳಿ, ತನ್ನ ಕೈಗಳಿಂದ ನನ್ನನ್ನು ಬಳಸಿ, ನಾವು ಇಂಗ್ಲೆಂಡ್‌ನಲ್ಲಿ ಸುರಕ್ಷಿತವಾಗಿರಬಹುದೆಂದು ಹೇಳಿದಳು. ನನಗೂ ಅದನ್ನೇ ಕೇಳಬೇಕೆನ್ನಿಸಿತ್ತು. ಓಟ್ಟೊವಿನ ಲಂಡನ್ ವಿಳಾಸ ಗೊತ್ತಿದೆಯೆ ಎಂದು ನನ್ನನ್ನು ಕೇಳಿ, ವಿಮಾನ ನಿಲ್ದಾಣದ ವಾಹನದಿಂದ ನಗರಕ್ಕೆ ತೆರಳಿ ಅಲ್ಲಿಂದ ಟ್ಯಾಕ್ಸಿಯಲ್ಲಿ ಓಟ್ಟೊವಿನ ವಿಳಾಸದ ಕಡೆ ಹೋಗಬಹುದೆಂದು ಸೂಚಿಸಿದಳು. ಅಷ್ಟು ಹೊತ್ತಿಗೆ. ಓಟ್ಟೊವಿಗೆ ಏನಾದರೂ ಆಗಿರಬಹುದೆಂಬ ಚಿಂತೆ ಶುರುವಾಯಿತು. ಅವನಿಗೆ ನಮ್ಮ ವಿಮಾನದ ಆಗಮನದ ಬಗ್ಗೆ ತಪ್ಪು ಮಾಹಿತಿ ಕೊಟ್ಟಿರಬಹುದೆಂದೂ, ಹಾಗಾಗಿ ಅವನು ವಿಮಾನ ನಿಲ್ದಾಣದ ದಾರಿಯಲ್ಲಿರಬಹುದೆಂದೂ, ಅವಳು ನನ್ನಲ್ಲಿ ಧೈರ್ಯ ತುಂಬಿದಳು. ನಾವು ಇನ್ನೂ ಸ್ವಲ್ಪ ಹೊತ್ತು ಕಾದು ನೋಡಬಹುದೆಂದುಕೊಂಡೆವು. ಆದರೆ, ಅಮ್ಮ ಮಾತ್ರ ಓಟ್ಟೊ ವಿಳಾಸಕ್ಕೆ ಆದಷ್ಟು ಬೇಗ ಹೋಗಬೇಕೆಂದು

ಹೇಳಿದಳು. ವಿಮಾನ ನಿಲ್ದಾಣದ ವಾಹನಕ್ಕಾಗಿ ನಮ್ಮ ಟಿಕೆಟ್‌ಗಳನ್ನು ಕೊಳ್ಳಬೇಕೆಂದು ಒತ್ತಾಯ ಮಾಡಿ ಟ್ಯಾಕ್ಸಿಗಾಗಿ ದುಡ್ಡನ್ನೂ ನೀಡಿದಳು. ನಾನು ಅವಳಿಗೆ ವಂದಿಸಿದೆ. ಅಮ್ಮನೊಂದಿಗೆ ನಿಲ್ದಾಣವನ್ನು ಬಿಟ್ಟೆ, ನಮಗೆ ತೋರಿದ ಕರುಣೆಗಾಗಿ ಮಾತೇ ಹೊರಡದಂತಾಗಿತ್ತು.

ನಗರದ ಕೊನೆ ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ನಾನು ಲಂಡನ್ನಿನ ಮೊದಲ ಮಂದ ನೋಟವನ್ನು ಕಂಡೆ. ಡರ್‌ರೆಸ್‌ಗಿಂತ ಅದು ವಿಶಾಲವಾಗಿರುವಂತೆ ಕಂಡುಬಂತು. ರಸ್ತೆಗಳುದ್ದಕ್ಕೂ ಸಣ್ಣ ಮನೆಗಳು, ಅವುಗಳ ಮುಂದೆ ಕರವಸ್ತ್ರದಷ್ಟು ಆಕಾರದ ಕೈತೋಟಗಳು, ವಿಯೆನ್ನಾದಲ್ಲಾದರೂ ಬರೀ ವಿಶಾಲವಾದ ಅಪಾರ್ಟ್‌ಮೆಂಟ್ ಸಮುಚ್ಚಯಗಳಿದ್ದವು. ಈ ಹೊಸ ತರಹದ್ದನ್ನು ನೋಡುವಲ್ಲಿ ನಾನು ಬೊಂಬೆಯಂಗಡಿಯಲ್ಲಿನ ಮಗುವಿನಂತಿದ್ದೆ. ಕೆಂಪು ಬಣ್ಣದ ಮಹಡಿಯ ಬಸ್‌ಗಳನ್ನು ಆಶ್ಚರ್ಯದಿಂದ ನೋಡಿದ ನನಗೆ ಅವು ಚಕ್ರಗಳ ಮೇಲಿನ ಸಣ್ಣ ಮನೆಗಳಂತೆ ಕಂಡವು. ಸೈನಿಕರ ಗೈರುಹಾಜರಿ ನನಗೆ ಆಶ್ಚರ್ಯವನ್ನುಂಟುಮಾಡಿತು. (ನಮಗಂತೂ ಎಲ್ಲಾ ಕಡೆ ಸೈನಿಕರನ್ನು ನೋಡುವುದೇ ಅಭ್ಯಾಸವಾಗಿ ಹೋಗಿತ್ತು.) ನಾವು ಟ್ಯಾಕ್ಸಿಯಲ್ಲಿ ಕುಳಿತ ತಕ್ಷಣ, ಓಟ್ಟೋವಿನ ವಿಳಾಸವುಳ್ಳ ಕವರ್ ಒಂದನ್ನು ಚಾಲಕನಿಗೆ ತೋರಿಸಿ ನನ್ನ ಮೊದಲ ಇಂಗ್ಲಿಷ್ ಪದಗಳನ್ನು ಅವನಿಗೆ ಹೇಳಿದೆ. ತಪ್ಪುತಪ್ಪಾಗಿ "ಇಂಗ್ಲಿಷ್ ಬರಲ್ಲ" ಎಂದು. ನಾನು ಮುಂದುಗಡೆಯೇ ಕುಳಿತೆ. ಕಿಟಕಿಯಾಚೆ, ಸರಿಯಾದ ರಸ್ತೆಯ ಹೆಸರನ್ನು ಹುಡುಕುತ್ತಾ, ತಕ್ಷಣ ನನಗೆ ಕಂಡದ್ದು, ಓಟ್ಟೋ ವಾಸಿಸುತ್ತಿದ್ದ "ಮಾರ್ಚ್‌ಮಂಟ್ ಬೀದಿ" ಹಾಗೂ ವಿಯೆನ್ನಾದವನೆಂದು ನನಗೆ ಗೊತ್ತಿದ್ದ ಜೋಚಿ, ಓಟ್ಟೋನೊಡನೆ ಫ್ಲಾಟ್‌ನಲ್ಲಿದ್ದನೆಂದು ತಿಳಿದಿತ್ತು. 'ನಿಲ್ಲಿಸು' ಎಂದು ನಾನು ಕರೆದಾಗ, ಜೋಚಿ ನಮ್ಮನ್ನು ನೋಡಿ ಆಶ್ಚರ್ಯಗೊಂಡು, ತಕ್ಷಣವೇ ಎಲ್ಲವನ್ನು ನೋಡಿಕೊಳ್ಳಲು ತೊಡಗಿಕೊಂಡ. ಓಟ್ಟೋ ಚೆನ್ನಾಗಿದ್ದಾನೆ ಎಂದು ನಮಗೆ ಭರವಸೆ ಕೊಟ್ಟು, ತನಗೆ ಗೊತ್ತಿರುವಂತೆ ವಿಮಾನ ನಿಲ್ದಾಣಕ್ಕೆ ಹೋಗಿದ್ದಾನೆ, ನಮ್ಮನ್ನು ಎದುರುಗೊಳ್ಳಲು ಎಂದು ಹೇಳಿದ. ಹತ್ತಿರವಿದ್ದ ತನ್ನ ತಂದೆತಾಯಿಯರ ಫ್ಲಾಟ್‌ಗೆ ಜೋಚಿ ನಮ್ಮನ್ನು ಕರೆದೊಯ್ದಾಗ, ನಮಗೆ ಒಳ್ಳೆಯ ಸ್ವಾಗತ ದೊರೆಯಿತು. ಅಲ್ಲಿಂದ ವಿಮಾನ ನಿಲ್ದಾಣಕ್ಕೆ ಫೋನ್ ಮಾಡಿ, ನಾವುಗಳು ಆಗಲೇ ಸುರಕ್ಷಿತವಾಗಿ ತಲುಪಿದ್ದೇವೆಂಬ ಸುದ್ದಿಯನ್ನು ಓಟ್ಟೋಗೆ ತಿಳಿಸಿದ. ನಾವು ತಾಳ್ಮೆಗೆಟ್ಟು ಕಾಯುತ್ತಿದ್ದಾಗ, ಇಂಗ್ಲೆಂಡಿಗೆ ತಪ್ಪಿಸಿಕೊಂಡು ಬಂದಿದ್ದ ವಿಯೆನ್ನಾದ ನಿರಾಶ್ರಿತರು ನಮ್ಮನ್ನು ಸೇರಿಕೊಂಡರು. ಹಾಗೂ ಜರ್ಮನ್ ಶ್ರಮ ಶಿಬಿರದಲ್ಲಿನ ತಮ್ಮ ಭಯಾನಕ ಅನುಭವಗಳನ್ನು ನಿವೇದಿಸಿದರು. ನಾನು ನಮ್ಮ ದೊಡ್ಡ ಪಲಾಯನದ ಬಗ್ಗೆ ಹೇಳಲು ಕಾತರಳಾಗಿದ್ದೆ. ಆದರೆ, ನಾವೇ ಅತ್ಯಂತ ಅದೃಷ್ಟಶಾಲಿಗಳು ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದೆ. ಕೊನೆಗೆ ಓಟ್ಟೋ ಅಲ್ಲಿಗೆ ಬಂದಾಗ, ನಮ್ಮ ಕೊಲೊನ್

ವಿಮಾನನಿಲ್ದಾಣದ ಘಟನೆಯನ್ನು ಸೂಕ್ಷ್ಮವಾಗಿ ತಿಳಿಸಿದೆ. ಓಟ್ಟೋ ಆಗ ನನ್ನನ್ನು ತಬ್ಬಿಕೊಂಡು, ಪ್ರಶಂಸೆಯಿಂದ ಹೇಳಿದ: "ಎಂಥಾ ಹುಡುಗಿ ಆಗಿಬಿಟ್ಟಿದೀಯಾ ನೀನು?" ಎಂದು. ಕೊನೆಗೂ ನಾನು ಬಹಳ ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಗುರುತಿಸುವಿಕೆ ನನ್ನ ಪಾಲಿಗೆ ಬಂದಿತ್ತು.

ತನ್ನ ಸಂಕಷ್ಟಗಳ ನಡುವೆಯೂ ಅಮ್ಮ ಓಟ್ಟೋನನ್ನು ನೋಡಿದ್ದೇ ಚೇತರಿಸಿಕೊಂಡಳು. ನಂತರದ ಕೆಲವು ವಾರಗಳಲ್ಲಿ ಅಪ್ಪನಿಗೂ ವೀಸಾವನ್ನು ದೊರಕಿಸಿ ಕೊಡುವುದಾಗಿ ಹೇಳಿದಾಗ ಅತಿಯಾಗಿ ಸಂತೋಷಗೊಂಡಳು. ಇತ್ತೀಚಿನ ದಿನಗಳಲ್ಲಿ ಮೊದಲ ಬಾರಿಗೆ ನಾನು ಸ್ವಲ್ಪ ವಿಶ್ರಮಿಸಿಕೊಂಡೆ. ನಮ್ಮ ಕೆಲವು ವಿಯೆನ್ನಾದ ಮಿತ್ರರು, ಹಿಟ್ಲರ್ ಪೂರ್ವ ಆಸ್ಟ್ರಿಯಾದ ಜೀವನಕ್ಕೆ ನಾನು ಒಗ್ಗಿದ್ದಂತೆ– ಅದೇ ರೀತಿಯ ಕುಟುಂಬ ಜೀವನವನ್ನು ಸ್ಥಾಪಿಸಿದರೆಂದು ಕೇಳಿ ನನಗೆ ಉತ್ತೇಜನ ವಾಯಿತು. ಯುಗೋಸ್ಲಾವಿಯಾ ಮತ್ತು ಆಲ್ಬೇನಿಯಾದಲ್ಲಿನ ನಮ್ಮ ನಿರಾಶ್ರಿತ ಬದುಕು ಎಷ್ಟೊಂದು ಅತಂತ್ರವಾಗಿತ್ತೆಂದರೆ, ಮತ್ತೆ ಎಂದಿನ ಜೀವನವನ್ನು ನಡೆಸುವ ಬಗ್ಗೆ ನಾನು ಆಸೆಯನ್ನೇ ಬಿಟ್ಟುಬಿಟ್ಟಿದ್ದೆ. ಇಂಗ್ಲೆಂಡಿನಲ್ಲಿ ನಮ್ಮ ಜೀವನ ಸುಗಮವಾಗದಿದ್ದರೂ, ಆಲ್ಬೇನಿಯಾದಲ್ಲಿ ಖಂಡಿತವಾಗಿ ನಾವು ಸುರಕ್ಷಿತವಾಗಿರಬಹುದೆಂದು ಓಟ್ಟೋ ನನಗೆ ಧೈರ್ಯ ತುಂಬುತ್ತಲೇ ಇದ್ದ. ಪ್ಯಾಕ್ ಮಾಡುವ ಒಂದು ಉದ್ಯೋಗವನ್ನೂ ಅವನು ಹುಡುಕಿಕೊಂಡಿದ್ದ. ಆದರೆ, ವಿಯೆನ್ನಾದಲ್ಲಿ ಎಂಜಿನಿಯರಿಂಗ್ ಪದವಿ ಮಾಡಿಕೊಂಡಿದ್ದ ಅವನ ಈ ವಿಷಯ ಕೇಳಿ ನಮಗೆ ಆಘಾತವಾಗಿತ್ತು. ಅನೇಕ ನಿರಾಶ್ರಿತರು ಕೌಶಲ್ಯರಹಿತ ಉದ್ಯೋಗದಲ್ಲೇ ತೊಡಗಿಸಿಕೊಂಡಿದ್ದಾರೆಂದೂ ಅವರ ವಿದ್ಯಾರ್ಹತೆ ಮತ್ತು ಪದವಿಗಳು ಗಣನೆಗೆ ಬರುತ್ತಿಲ್ಲವೆಂದೂ ಅವನು ವಿವರಿಸಿದ. ಅವನ ಕೆಲಸಕ್ಕೆ ಒಳ್ಳೆಯ ಸಂಬಳ ಬರುತ್ತಿತ್ತು. ನಾನು ಮತ್ತು ಅಮ್ಮ ಇಬ್ಬರೂ ಹತ್ತಿರದ ಭೋಜನಶಾಲೆಯಲ್ಲಿರಲು ಮೊದಲು ಕೆಲವು ದಿನಗಳಿಗಾಗುವಷ್ಟು ನೀಡಲು ಅವನು ಹಣವನ್ನು ಕೂಡಿಹಾಕಿದ್ದನು. ಸರಿಯಾದ ಹಾಸಿಗೆಯಲ್ಲಿ ಮಲಗುವ, ಒಳ್ಳೆಯ ಊಟ ಹಾಗೂ ಯಾವುದೇ ಬೆದರಿಕೆಯಿಲ್ಲದೆ ಇರುವಂತಹ ಸ್ಥಿತಿಯ ಬಗ್ಗೆ ನಮಗೆ ಸಾಕಷ್ಟು ಸಂಭ್ರಮ ಉಂಟಾಗಿತ್ತು.

ಮಾರನೆಯ ದಿನ ಕುರ್ಟ್ ಮ್ಯಾಂಚೆಸ್ಟರ್‌ನಿಂದ ಬಂದು ನಮ್ಮೊಂದಿಗಿದ್ದನು. ಅವನು ವಿಭಿನ್ನ ವ್ಯಕ್ತಿಯಾಗಿ ಕಂಡ, ಮುಂಚಿನ ಅಚ್ಚರಿಯನ್ನು ಕಳೆದುಕೊಂಡಿದ್ದ. ನಮ್ಮ ಕುಟುಂಬದ ಪುನರ್ಮಿಲನ ಒಂದು ಸಂತೋಷದಾಯಕ ಸಂದರ್ಭವಾಯಿತು, ಆಲಂಗಿಸುತ್ತಾ, ಚುಂಬಿಸುತ್ತಾ. ಆದರೆ ಅಪ್ಪನ ಗೈರುಹಾಜರಿ ಎದ್ದು ಕಾಣುತ್ತಿತ್ತು. ಆ ಸಂಜೆ ನಾವು ಆಕ್ಸ್‌ಫರ್ಡ್ ರಸ್ತೆಯಿಂದ ರೀಜೆಂಟ್ ರಸ್ತೆ ಪಿಕಾಡಿಲಿ ಸರ್ಕಸ್‌ವರೆಗೆ ನಡೆದಾಡಿದೆವು. ಅದು ನನ್ನ ಸೋದರರು ಹೇಳಿದಂತೆ, ಜಗತ್ತಿನ ಕೇಂದ್ರ ಭಾಗವಾಗಿತ್ತು.

ಅಲ್ಲಿ, ಆಕಾಶವನ್ನು ಬೆಳಗಿಸಿದ ಲೈಟ್‌ಗಳು, ಇತ್ತೀಚಿನ ಫ್ಯಾಷನ್ ಲೋಕವನ್ನು ಪ್ರತಿಬಿಂಬಿಸುವ ದೊಡ್ಡ ಅಂಗಡಿಗಳು, ವಿಶಾಲವಾದ ರಸ್ತೆಗಳು ಹಾಗೂ ಸದಾ ಓಡಾಡುವ ಜನಸಂದಣಿಯನ್ನು ನೋಡಿ, ನಾನಂತೂ ಸಮ್ಮೋಹನಗೊಂಡಿದ್ದೆ. ನನ್ನ ಸಂಭ್ರಮವನ್ನು ಗಮನಿಸಿ, ಎಲ್ಲಕ್ಕಿಂತ ಮುಖ್ಯವಾಗಿ, ನಾನು ಇಂಗ್ಲಿಷ್ ಕಲಿಯುವ ಬಗ್ಗೆ ಗಮನ ಹರಿಸಬೇಕೆಂದು ಓಟ್ಟೊ ನನಗೆ ತಿಳಿಸಿದ. ನಾನು ಒಪ್ಪಿದೆ. ಹೇಗೆ ವೈದ್ಯಳಾಗಲು, ನಾನು ಓದಲು ಆರಂಭಿಸಬೇಕೆಂದು ನಾನಾಗಲೇ ನನ್ನ ತಲೆಯಲ್ಲಿ ವಿಚಾರ ಮಾಡುತ್ತಿದ್ದೆ. ನಾನು ಮೇಲೆ ಬಂದ ವೈಭವದ ಬಗ್ಗೆ ಕನಸು ಕಾಣುತ್ತಿದ್ದೆ. ಆ ಸಂಜೆ, ನಾಜಿ ಮುಷ್ಕರ ನಿರತರ ಗುಂಪಿನಿಂದ ಮೆರವಣಿಗೆ ಇತ್ತು. ನಾನದನ್ನು ನಂಬಲಾಗಲಿಲ್ಲ. ಅವರು ಸ್ವಸ್ತಿಕ್ ಗುರುತು ಉಳ್ಳ ಭಿತ್ತಿಪತ್ರಗಳನ್ನು ಕೊಂಡೊಯ್ಯುತ್ತಾ ವಿಯೆನ್ನಾದಲ್ಲಿ ನಾನು ಕೇಳಿದ ಘೋಷಣೆಗಳನ್ನೇ ಕೂಗುತ್ತಿದ್ದರು. ನನಗೊಂದು ರೀತಿಯ ಹೊಡೆತ ವುಂಟಾಯಿತು– ಕಷ್ಟಪಟ್ಟು ತಪ್ಪಿಸಿಕೊಂಡರೂ ಇಂಗ್ಲೆಂಡಿನ ರಸ್ತೆಗಳಲ್ಲಿ, ಶತೃಗಳ ಜತೆ ಮುಖಾಮುಖಿಯಾಗಬೇಕಾಯಿತು. ನನ್ನ ಅತ್ಯುತ್ಸಾಹ ಒತ್ತೆಯಾಯಿತು. ನನ್ನ ಕನಸುಗಳು ಅದೃಶ್ಯವಾದುವು. ನಾನು ಶೂನ್ಯಳಾದೆ. ಆ ಮುಷ್ಕರ ನಿರತರ ಬಗ್ಗೆ ಯಾರೂ ಹೆಚ್ಚು ಗಮನ ನೀಡಲಿಲ್ಲ. ಆದರೆ, ಅವರು ಕರಿನೆರಳನ್ನು ಹಾಸಿದ್ದರು. ಇಂಗ್ಲೆಂಡಿನಲ್ಲಿ ಜೀವನ ಹೇಗಿರುತ್ತದೋ ಎಂದು ನಾನು ಯೋಚಿಸದೇ ಇರಲು ಸಾಧ್ಯವಾಗಲಿಲ್ಲ.

* * * *

# ೬. ಜವಾಬ್ದಾರಿಗಳನ್ನು ಹೊರುತ್ತಾ...

ಭೋಜನಶಾಲೆಯಲ್ಲಿ ಸ್ವಲ್ಪ ದಿನ ತಂಗಿದ ನಂತರ, ನಾವು ಪೂರ್ತಿ ಸೌಲಭ್ಯವನ್ನೊಳಗೊಂಡಿದ್ದ ತಾಲಿಸ್ಟಾಕ್ ಚೌಕದಲ್ಲಿದ್ದ ಎರಡು ಕೊಠಡಿಗಳ ಫ್ಲಾಟ್ ಒಂದಕ್ಕೆ ಸ್ಥಳಾಂತರಗೊಂಡೆವು. ಅಮೆರಿಕಕ್ಕೆ ಹೋಗಿದ್ದ ಓಟ್ಟೋವಿನ ಕೆಲವು ಗೆಳೆಯರು ಅದನ್ನು ಅವನಿಗೆ ಬಿಟ್ಟುಕೊಟ್ಟಿದ್ದರು. ಎರಡು ಕೊಠಡಿಗಳು ಬಹಳ ಕಿರಿದಾಗಿದ್ದವು. ಮೊದಲು ಒಂದೇ ಕೊಠಡಿಯಾಗಿತ್ತು. ಪ್ರತ್ಯೇಕ ಅಡಿಗೆ ಮನೆಯಿರಲಿಲ್ಲ. ಮೂಲೆಯಲ್ಲೊಂದು ಚಿಕ್ಕ ಸ್ಟೌ ಇತ್ತು, ಬಚ್ಚಲಮನೆ ಹಾಗೂ ಶೌಚಾಲಯವನ್ನು ಅದೇ ಮಹಡಿಯಲ್ಲಿದ್ದ ಇತರ ಮೂವರೂ ಬಳಸುತ್ತಿದ್ದರು. ಕುರ್ಚಿ ಮೇಜುಗಳು ವಿಯೆನ್ನಾದಿಂದ ಬಂದಿದ್ದವು, ನಮಗೆ ಬೇಕಾದುದೆಲ್ಲವನ್ನೂ ಒದಗಿಸಿತ್ತು. ಆಲ್ಬೇನಿಯಾದ ಬೆತ್ತಲೆ ಪೆಟ್ಟಿಗೆಗೆ ಹೋಲಿಸಿದರೆ, ನಮ್ಮ ಹೊಸಾ ಫ್ಲಾಟ್ ವೈಭವಯುತವಾಗಿತ್ತು. ಅಮ್ಮ ತನ್ನ ಶಕ್ತಿಯನ್ನು ಮತ್ತೆ ಪಡೆದುಕೊಂಡಿದ್ದಳು. ಮಾರುಕಟ್ಟೆಗೆ ಹೋಗುವುದು ಹಾಗೂ ಹೊಸದಾಗಿ ಕಂಡುಕೊಂಡ ಸ್ವಾತಂತ್ರ್ಯದಿಂದ ಖುಷಿಪಡುತ್ತಿದ್ದಳು. ಆದರೂ, ಅಪ್ಪನಿಂದ ಪತ್ರ ಬಂದದ್ದೇ, ಅವಳು ಮರಳಿ ಹತಾಶ ಸ್ಥಿತಿಗೆ ಬಂದುಬಿಟ್ಟಳು. ಅವರ ಪತ್ರಗಳು ಅವರ ಸ್ಥಿತಿಯನ್ನು ತೋರುತ್ತಿದ್ದವು. ಅವುಗಳಿಗೆ ಉತ್ತರಿಸುವುದೇ ಅಸಾಧ್ಯವಾಗಿತ್ತು.

ನಾನು ಮೊದಲು ಲಂಡನ್ನಿನ ರಸ್ತೆಗಳಲ್ಲಿ ಓಡಾಡುತ್ತಾ, ಅಂಗಡಿಗಳಲ್ಲಿ ಪ್ರದರ್ಶಿತವಾಗಿದ್ದುದನ್ನು ಅನ್ವೇಷಿಸುತ್ತಾ, ಅವುಗಳ ಬಗ್ಗೆ ಆಶ್ಚರ್ಯಗೊಳ್ಳುತ್ತಾ ಕೆಲವು ದಿನಗಳನ್ನು ಕಳೆದೆ. ಜೀವನದ ಎಷ್ಟೊಂದು ರಂಗು ಹಾಗೂ ಶಕ್ತ್ಯುತ್ಸಾಹವನ್ನು ಕಳೆದುಕೊಂಡಿದ್ದೆ ಎಂದು ಮನವರಿಕೆ ಮಾಡಿಕೊಂಡೆ. ಈಗ ಅದನ್ನು ಸಂಭ್ರಮಿಸಿದೆ. ಆದರೆ, ಅದೇ ಹೆಚ್ಚು ಕಾಲ ಇರುವುದಿಲ್ಲ. ಬೇಗನೆ ನನ್ನ ಭವಿಷ್ಯವನ್ನು ಎದುರಿಸಬೇಕಾಗುತ್ತದೆ ಎಂದು ಅರಿವಾಯಿತು.

ಅಮ್ಮನ ಕೌಟುಂಬಿಕ ಕೆಲಸವೆನ್ನುವುದು ಅವಳಿಗೆ ಪ್ರವೇಶದ ಅನುಮತಿಯನ್ನು ಪಡೆಯುವ ಒಂದು ತಂತ್ರವಾಗಿತ್ತು; ಅದು ನನ್ನ ಕೇಶಾಲಂಕಾರದ ತರಬೇತಿಗೂ ಅನ್ವಯವಾಗುತ್ತದೆಂದು ನಾನು ಭಾವಿಸಿದೆ. ಆದರೆ, ಓಟ್ಟೋ ಆಲೋಚಿಸಿದ್ದೇ ಬೇರೆ. ನನ್ನ ಮೊದಲ ವಾರಾಂತ್ಯದಲ್ಲಿ, ಮಿ. ಕೊಹೆನ್ ಅವರನ್ನು ನಾನು ಭೇಟಿ ಮಾಡಿ, ಅವರ ಪ್ರಾಂಗಣದಲ್ಲಿ ಕೆಲಸ ಆರಂಭಿಸಲು ಅವಶ್ಯಕ ಏರ್ಪಾಟುಗಳನ್ನು ಮಾಡುವಂತೆ

ನನಗೆ ಒತ್ತಿ ಹೇಳಿದ. ಅಮ್ಮನೂ ಬರಬೇಕೆಂದು ನಿರ್ಧರಿಸಿದಳು. ಹಾಗಾಗಿ ನಾವು ಮೂವರೂ ಪೂರ್ವಾಂತ್ಯದ ಕಡೆಗೆ ಹೊರಟೆವು. ಅಲ್ಲೊಂದು ಶಿಥಿಲವಾದ ಕೇಶಾಲಂಕಾರದ ಅಂಗಡಿ ತೋರಿಸಿ, ಅದೇ ನನ್ನ ಹೊಸ ಕೆಲಸದ ಸ್ಥಳ ಎಂದು ಪರಿಚಯಿಸಿದ. ನನಗೆ ಆಘಾತವಾಯಿತು– ನಾನು ಓದಬೇಕೆಂದುಕೊಂಡಿರುವುದು ಏನಾಗುತ್ತದೆ?– ಈ ಕೆಲಸಕ್ಕಿಂತ ಅದೇ ವಾಸಿ– ನಾನು ಜೀವನಪೂರ್ತಿ ಕೇಶಾಲಂಕಾರದಲ್ಲಿ ಹೆಂಗಸರ ಕೇಶವನ್ನು ಸರಿ ಮಾಡುತ್ತಿರುವುದಿಲ್ಲ. ನನಗಂತೂ ಓಡಿ ಹೋಗಬೇಕೆಂದೆನಿಸಿತು. ಓಟ್ಟೊ ನನ್ನನ್ನು ರಸ್ತೆಯಲ್ಲಿ ಎಳೆದುಕೊಂಡು ಬರದಿದ್ದರೆ, ನಾನು ಆ ಸ್ಥಳದಲ್ಲಿ ಕಾಲನ್ನು ಇರಿಸುತ್ತಿರಲಿಲ್ಲ. ಓಟ್ಟೊ ನಮ್ಮನ್ನು ಒಳಕ್ಕೆ ಕರೆದೊಯ್ದ. ಅಲ್ಲಿ ನಾವು ಮಿ. ಕೊಹೆನ್ ಅವರನ್ನು ಮುಖಾಮುಖಿಯಾದೆ. ನಾನು ಅವರನ್ನು ದಿಟ್ಟಿಸಿ ನೋಡಲಾರದೆ ನನ್ನ ಪಾದಗಳನ್ನು ನೋಡುತ್ತಾ ನಿಂತೆ. ಓಟ್ಟೊ ಅವರೊಂದಿಗೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದನು. ನನ್ನನ್ನು ತಿವಿಯುತ್ತಾ ನನ್ನ ಹೊಸ ಉದ್ಯೋಗದಾತರಿಗೆ ವಿಧೇಯಳಾಗಿರಬೇಕು ಎಂದು, ಜರ್ಮನ್ ಭಾಷೆಯಲ್ಲಿ ತಿಳಿಸಿದನು. ನಾನು ತಿರಸ್ಕರಿಸಿದೆ. ಅದೃಷ್ಟವಶಾತ್, ಅಮ್ಮ ನನ್ನ ಭಾವನೆಗಳಿಗೆ ಅನುಕಂಪೆ ತೋರುತ್ತಿದ್ದಳು. ಆದರೂ ಹಟಮಾರಿಯಾಗದೆ ಆ ಕೆಲಸಕ್ಕೂ ಪ್ರಯತ್ನ ಪಡು ಎಂದು ನನಗೆ ಹೇಳಿದಳು. ನಾನು ಕೆಲಸಕ್ಕೆ ಸೇರದಿದ್ದರೆ, ಹಣಕಾಸು ಇಂಗಿತದ ಬಗ್ಗೆ, ಅವಳಿಗೆ ವಾಸ್ತವವಾಗಿಯೇ ಚಿಂತೆ ಇತ್ತು.

ಮಿ. ಕೊಹೆನ್‌ರೊಂದಿಗೆ ಸ್ವಲ್ಪ ಹೊತ್ತು ಓಟ್ಟೊ ಮಾತನಾಡಿದ ನಂತರ, ನನ್ನ ಕಡೆ ತಿರುಗಿ, ಏನಾದರೂ ಪ್ರಶ್ನೆಗಳಿವೆಯಾ ಎಂದು ನನ್ನನ್ನು ಗಡಸು ಧ್ವನಿಯಲ್ಲಿ ಕೇಳಿದನು. ನನ್ನ ಕರ್ತವ್ಯಗಳೇನು ಎಂದು ನಾನು ತಿಳಿದುಕೊಳ್ಳಬೇಕೆಂದು ಉತ್ತರಿಸಿದೆ. ನಾನು ನೆಲ ಸಾರಿಸಿ, ಬೇಸಿನ್‌ಗಳನ್ನು ತೊಳೆದು, ಬ್ರಶ್‌ಗಳನ್ನು ಮತ್ತು ಬಾಚಣಿಗೆಗಳನ್ನು ತೊಳೆದು, ಸಹಾಯ ಮಾಡಬೇಕಾಗಬಹುದೆಂದು ತಿಳಿದಾಗ, ನನಗಂತೂ ಅಳಬೇಕೆನ್ನಿಸಿತು. ಅದಕ್ಕೆ ಪ್ರತಿಯಾಗಿ ನನಗೆ ವಸತಿ ಮತ್ತು ಭೋಜನ ಹಾಗೂ ವಾರಕ್ಕೆ ಆರು ಪೆನ್ನಿಗಳು ಸಿಗುವುದೆಂದು ತಿಳಿಸಲಾಯಿತು. ಅದು ಅಮ್ಮನನ್ನು ನೋಡಿ ಬರಲು ಬಸ್ ಚಾರ್ಜ್‌ಗೂ ಸಾಕಾಗುತ್ತಿರಲಿಲ್ಲವೆಂದು ನನಗೆ ಗೊತ್ತಾಯಿತು. ಈ ಜಿಪುಣತನದಿಂದ ನನಗೆ ಆಘಾತವಾದರೂ, ಆಶ್ಚರ್ಯವಾಗಲಿಲ್ಲ. ಆಗ ನನ್ನ ದುಃಖ ಕೋಪಕ್ಕೆ ತಿರುಗಿತು. ಈ ಷರತ್ತಿಗೆ ಒಪ್ಪಿಕೊಳ್ಳುವುದಕ್ಕಿಂಥ ಹಸಿವಿನಿಂದಿರುವುದೇ ಒಳ್ಳೆಯದೆಂದು ನಿರ್ಧರಿಸಿದೆ. ನಾನು ಇಂಗ್ಲೆಂಡ್‌ಗೆ ಬರಲು ಸಹಾಯ ಮಾಡಿದ್ದಕ್ಕಾಗಿ ಮಿ. ಕೊಹೆನ್‌ಗೆ ಕೃತಜ್ಞತೆ ಸಲ್ಲಿಸಲು ಹೇಳು ಎಂದು ಓಟ್ಟೊಗೆ ತಿಳಿಸಿದೆ. ಆದರೆ, ನನಗೆ ಬೇರೆ ಆಕಾಂಕ್ಷೆಗಳಿವೆಯಾದ್ದರಿಂದ, ಅವರ ಅಂಗಡಿಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ತಿಳಿಸಲು ಹೇಳಿದೆ. ಓಟ್ಟೊ ನನ್ನ ಮನಸ್ಸನ್ನು ಬದಲಿಸಲು ಯತ್ನಿಸಿದ. ಅಲ್ಲದೆ, ಅದೂರೊಂದಿಗೆ, ನಾನು ಓರ್ವ ಸಂಕೋಚದ ಹುಡುಗಿ,

ಅವನನ್ನು ಬಿಟ್ಟುಬರಲು ಭಯ ಎಂದು ನಂಬುವಂತೆ, ಮಿ. ಕೊಹೆನ್‌ಗೆ ಮೆಲುದನಿಯಲ್ಲಿ ಹೇಳಿದ. ನಾನು ಹಟಮಾರಿ ಎಂದು ಕೊನೆಗೆ ಅವನಿಗೆ ಅರಿವಾದಾಗ, ನಾನು ಕೇಶಾಲಂಕಾರ ಕಲಿಯಬೇಕಾಗಿಲ್ಲ ಎಂದು ವಿವರಿಸಿದ. ಮಿ. ಕೊಹೆನ್‌ರವರು ಇದರಿಂದ ಕುಪಿತರಾಗಲಿಲ್ಲ. ಕಾರಣ, ಈ ಉದ್ಯಮದಲ್ಲಿ ಅವರ ಐದು ಹೆಣ್ಣು ಮಕ್ಕಳೂ ಸಹಾಯ ಮಾಡುತ್ತಿದ್ದರೆಂದು ಓಟ್ಟೊ ನಂತರ ತಿಳಿಸಿದ. ಮತ್ತೊಬ್ಬ ಚಿಕ್ಕ ಹುಡುಗಿಯನ್ನು ಈ ಕೆಲಸಕ್ಕೆ ನೇಮಿಸಿಕೊಳ್ಳಬಹುದು, ಅದರಲ್ಲೂ ಈ ಹೆಚ್ಚುವರಿ ಕೆಲಸಕ್ಕೆ ಹೆಚ್ಚೇನೂ ಕೊಡಬೇಕಾಗುವುದಿಲ್ಲವಾದ್ದರಿಂದ ಎಂದು ಅವನು ಆಲೋಚಿಸಿದ್ದ. ಅಲ್ಲದೆ, ಇದು ಸುಲಭವಾದ ಒಂದು ಸಹಾಯಾರ್ಥ ಕಾರ್ಯವಾಗುತ್ತಿದ್ದುದರಿಂದ. ಓಟ್ಟೊನನ್ನು ಸಂಕೋಚಕ್ಕೆ ಸಿಕ್ಕಿಹಾಕಿಸಿದ್ದೆನೆಂದು ನನಗೆ ಗೊತ್ತಾಯಿತು. ಅವನ ಯೋಜನೆಗಳನ್ನು ಹಾಳು ಮಾಡಿದ್ದಕ್ಕೆ ನಾನು ಅಪರಾಧಿಯಂತೆ ಭಾವಿಸಿದೆ. ಆದರೆ, ನಾನು ಸರಿಯಾದ ನಿರ್ಧಾರವನ್ನೇ ತೆಗೆದುಕೊಂಡೆನೆಂದು ದೃಢಪಟ್ಟಿದ್ದೆ.

ನಾವು ಅಂಗಡಿಯನ್ನು ಬಿಡುತ್ತಿದ್ದಂತೆ, ಅವರ ಕ್ಷಮೆ ಕೋರುವಂತೆ ಓಟ್ಟೊಗೆ ಹೇಳಿದೆ. ಅವನು ಅರ್ಥ ಮಾಡಿಕೊಂಡು ನನ್ನನ್ನು ಕ್ಷಮಿಸುತ್ತಾನೆಂದು ತಿಳಿದಿದ್ದೆ. ಆದರೆ, ನಾನು ಬಾಯಿ ಬಿಡುವ ಮೊದಲೇ, ನನ್ನ ಹೆಗಲ ಮೇಲೆ ಕೈ ಹಾಕಿ, ನಾನು ಅಲ್ಲಿಯವರೆಗೆ ಕೇಳದೆ ಇದ್ದಂತಹ ಆಕ್ರೋಶದ ಧ್ವನಿಯಲ್ಲಿ ಗದರಿದ: “ಸ್ವಲ್ಪ ಕೇಳಿಲ್ಲಿ, ಇಂಗ್ಲೆಂಡ್‌ಗೆ ನಿಮ್ಮ ವೀಸಾ ಪಡೆಯಲು ಎಷ್ಟು ಕಷ್ಟವಾಯಿತು ಅಂತ ನಿನಗೇನಾದರೂ ಗೊತ್ತಾ? ನಿನ್ನ ಅರ್ಜಿಯನ್ನು ಪ್ರಾಯೋಜಿಸಲು ಎಷ್ಟು ಜನರನ್ನು ಕೇಳಬೇಕಾಯಿತು ಅನ್ನೋದು ನಿನಗೇನಾದರೂ ಗೊತ್ತೇನು? ಯಾವುದೋ ಕಾರಣಕ್ಕೆ, ಲಕ್ಷಾಂತರ ಹುಡುಗಿಯರು ಕೈಕಾಲು ಹಿಡಿದರೆ ಕೊಡುವ ಅವಕಾಶವನ್ನು ನೀನು ಸುಮ್ನೆ ಬಿಸಾಕಿದ್ದೀಯ. ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ನೀನು ಜಿಗಿಯಬಹುದು ಅಂತ ತಿಳಿದಿದ್ರೆ, ಅದು ತಪ್ಪು. ನೀನೆಷ್ಟು ಸ್ವಾರ್ಥಿ ಅಂತ ನಂಗೆ ನಂಬಕ್ಕೇ ಆಗ್ತಾ ಇಲ್ಲಾ, ಅಪ್ಪ ಅಮ್ಮ ಅವರ ಗತಿ ಏನಾಗ್ಬೇಡ? ಅವರು ಹೇಗೆ ಯಾವ ಆಧಾರದ ಮೇಲೆ ಇರ್‍ತಾರೆ? ನಾನು ಹೇಳ್ತಾ ಇದೀನಿ, ನಿನ್ನ ಪಾಡು ನಿನಗೆ!” ಇದೇ ಧಾಟಿಯಲ್ಲಿ ಅವನು ಹೀಗೇ ಗದರುತ್ತಿದ್ದರೆ, ನಾನು ಸುಮ್ನೆ ಕೇಳ್ತಾ ಇದ್ದೆ ಅತಿಯಾದ ಕೋಪದಿಂದ, ನಾನು ಆಲ್ಬೇನಿಯಾದಲ್ಲಿ ಎಷ್ಟೊಂದು ಕಷ್ಟಪಟ್ಟೆ ಅಂತ ಅವನಿಗೆ ಗೊತ್ತಿಲ್ವಾ? ನನ್ನನ್ನು ಸ್ವಾರ್ಥಿ ಅಂತ ಕರೆಯಕ್ಕೆ ಅವನಿಗೆ ಎಷ್ಟು ಧೈರ್ಯ? ನಾನು ಈ ಸಣ್ಣ ಕೆಲಸಾನ ಯಾಕೆ ಒಪ್ಕೋಬೇಕು, ಅಮ್ಮನಿಗೆ ಮನೆ ಕೆಲಸ ಮಾಡಕ್ಕೆ ವೀಸಾ ಕೊಟ್ಟಿರೋವಾಗ?

ನಾನು ಅವನ ಸಹಾಯವಿಲ್ಲದೆ ಹೇಗೆ, ನಾವು ತಪ್ಪಿಸಿಕೊಂಡು ಬಂದ ದಾರಿಯಲ್ಲಿ ವಿಯೆನ್ನಾದಿಂದ ಲಂಡನ್ನಿಗೆ ಯುಗೋಸ್ಲಾವಿಯ, ಆಲ್ಬೇನಿಯಾದಲ್ಲೆಲ್ಲಾ ಎಷ್ಟು ಘಟನೆಗಳಲ್ಲಿ ನಾನೇ ನಿಭಾಯಿಸಿಕೊಂಡು ಬಂದೆ ಅಂತ ಅವನಿಗೆ ಜ್ಞಾಪಿಸಿದೆ.

ಹೀಗೇ ಮುಂದೆಯೂ ಇರಬಲ್ಲೆ ಅಂತ ಕೂಡ ಹೇಳಿದೆ. ನನ್ನ ಮಾತುಗಳನ್ನು ಹೇಳಿ ನಾನು ಮೌನಿಯಾದೆ, ಈ ಸಲ ಹೇಗೆ ನಿಭಾಯಿಸ್ತೀನಿ ಅಂತ ಆಶ್ಚರ್ಯ ಪಡುತ್ತಾ. ಇಂಗ್ಲಿಷ್ ಓದಿ ಬರೆಯೋದು ಇರಲಿ, ನಾನು ಇಂಗ್ಲಿಷ್‌ನಲ್ಲಿ ಸಂಭಾಷಣೆ ಕೂಡಾ ಮಾಡಕ್ಕೆ ಆಗ್ತಾ ಇರಲಿಲ್ಲ. ಆದರೆ ಅವನಿಲ್ಲದೆ, ನಾನು ದಾರಿ ಹುಡುಕ್ಕೊತೀನಿ ಅಂತ ನನಗೆ ನಾನೇ ಹೇಳಿಕೊಂಡೆ. ನಾನು ಏನು ಅನ್ನೋದನ್ನ ಅವನಿಗೆ ತೋರಿಸ್ತೀನಿ!

ಮಾರನೆಯ ಬೆಳಿಗ್ಗೆ ಲಂಡನ್ನಿನಲ್ಲಿರುವ ಯಹೂದಿ ನಿರಾಶ್ರಿತರ ಸಂಸ್ಥೆ ಪ್ರಧಾನ ಕಛೇರಿ ಬ್ಲೂಮ್ಸ್‌ಬರಿ ಹೌಸ್‌ಗೆ ನಾನು ಹೊರಟೆ. ನಾನು ತಕ್ಷಣವೇ ನನ್ನ ಉದ್ಯೋಗ ಅನ್ವೇಷಣೆಗೆ ತೊಡಗಬೇಕಾಗಿದ್ದುದರಿಂದ, ನಾನು ಕಾಣಿಸಿಕೊಳ್ಳ ಬೇಕೆಂಬುದು ನನ್ನ ಆಸೆಯಾಗಿತ್ತು. ಆ ವಾರಾಂತ್ಯದಲ್ಲಿ ಉದ್ಯೋಗವೊಂದನ್ನು ಹೊಂದುವ ಗುರಿಯನ್ನು ನನಗೆ ನಾನೇ ಹಾಕಿಕೊಂಡಿದ್ದೆ. ಆದರೆ, ಆ ಬೆಳಿಗ್ಗೆ ಪ್ರವೇಶದ್ವಾರದಲ್ಲಿ ಏನೋ ಗದ್ದಲ ಇದ್ದುದರಿಂದ, ನಾನು ಒಳಗೆ ಹೋಗಲಾಗಲಿಲ್ಲ. ಇತ್ತೀಚಿನ ಮಕ್ಕಳ ಸಾರಿಗೆಯೊಂದು ಆಗ ತಾನೆ ಜರ್ಮನಿಯಿಂದ ಬಂದಿತ್ತೆಂದು ನಾನು ಪತ್ತೆ ಮಾಡಿದೆ. ಒಳ್ಳೆಯ ಬಟ್ಟೆ ಧರಿಸಿದ್ದ ಸುಮಾರು ೨೦೦ ಮಂದಿ ಬಾಲಕ ಬಾಲಕಿಯರು ತಮ್ಮ ಹೆಸರಿನ ಕಾರ್ಡನ್ನು ಕತ್ತಿಗೆ ಕಟ್ಟಿಕೊಂಡಿದ್ದರು. ಅವರ ಸಾಕು ತಂದೆತಾಯಿಯರು ಅವರುಗಳನ್ನು ಅವರ ಹೊಸ ಮನೆಗಳಿಗೆ ಕರೆದುಕೊಂಡು ಹೋಗಲು ಯತ್ನಿಸುತ್ತಿದ್ದುದರಿಂದ, ಅವರಲ್ಲಿ ಅನೇಕ ಮಕ್ಕಳು ಬಿಕ್ಕಿ ಅಳುತ್ತಾ ಅಥವಾ ಅರಚುತ್ತಿದ್ದರು. ಅವರ ಸಂಕಟವನ್ನು ನನಗೆ ನೋಡಲು ಕಷ್ಟವಾಯಿತು. ಆದರೆ, ಅವರ ಕರುಣಾಪೂರಿತ ಕೂಗು ನನ್ನ ಕಿವಿಗಳಲ್ಲಿ ಅನುರಣಿಸುತ್ತಿತ್ತು. ಅವರ ತಂದೆತಾಯಿಯರನ್ನು ಬಿಟ್ಟಿರುವುದು ಎಷ್ಟು ಕಷ್ಟವಿರಬಹುದೆಂದು ನಾನು ಊಹಿಸಿದೆ. ಅಲ್ಲದೆ, ಅವರನ್ನು ಈ ಮಕ್ಕಳು ಮತ್ತೆ ನೋಡಲು ಸಾಧ್ಯವೆ ಎಂದು ಮನವರಿಕೆ ಮಾಡಿಕೊಂಡೆ. ತಮ್ಮ ಮಕ್ಕಳನ್ನು ತಮ್ಮ ನಿಯಂತ್ರಣವಿಲ್ಲದ ವಿಧಿಗೆ ಬಿಡಲು ಹಾಗು ಅವರನ್ನು ಮತ್ತೆ ನೋಡುವ ಆಸೆಯಿಲ್ಲದುದರ ಬಗ್ಗೆ ಅವರ ತಂದೆ ತಾಯಿಯರಿಗೆ ಎಷ್ಟು ಕಷ್ಟವಾಗಿರಬೇಡ! ಅವರು ನನ್ನ ಸ್ವಂತ ಮಕ್ಕಳಾಗಿದ್ದಿದ್ದರೆ ಆಗುವ ಕಷ್ಟದಂತೆ ಆ ನೋವನ್ನು ಅನುಭವಿಸಿದೆ. ಆ ರಾತ್ರಿ ಅವರ ಕೃಶವಾದ ಮುಖಗಳು ಹಾಗೂ ಶೂನ್ಯ ಕಣ್ಣುಗಳು ನನ್ನೆದುರು ಬಂದಾಗ ಸಿಂಹಸ್ವಪ್ನದಂತೆ ಆಯಿತು. ಅವರ ಕಿರಿಚಾಟಗಳು, ಅವರ ಹೆಸರುಗಳನ್ನು ಕೂಗುತ್ತಾ, ಮೌನವನ್ನು ಭೇದಿಸಿದವು. ಅನೇಕ ವರ್ಷಗಳವರೆಗೆ ಇದೇ ಸಿಂಹಸ್ವಪ್ನ ಮುಂದುವರೆಯ ಬಹುದು.

ನಾನು ಅಲ್ಲಿಂದ ಹೊರಟು ಬಂದಾಗ, ನನ್ನ ಕುಟುಂಬದ ಅನೇಕರೊಂದಿಗೆ ತಪ್ಪಿಸಿಕೊಂಡು ಬಂದ ಅದೃಷ್ಟದ ಬಗ್ಗೆ ನಾನು ತಪ್ಪಿತಸ್ಥಳೆಂಬ ಭಾವನೆಯುಂಟಾಯಿತು.

ಎಷ್ಟೇ ಕಷ್ಟವಾಗಿದ್ದರೂ, ನಾನು ನನ್ನ ಕಾಲಮೇಲೆ ನಿಂತಿರಲಿಲ್ಲ. ನಾನೂ ಯಾರಿಗಾದರೂ ಸಹಾಯ ಮಾಡಬೇಕೆಂದರೆ, ನಾನು ಸಂಪಾದನೆ ಮಾಡಲು ಆರಂಭಿಸಿ, ನನ್ನ ಕೊಡುಗೆಯನ್ನು ನೀಡಬೇಕು ಎಂದುಕೊಂಡೆ. ನಾನು ಬ್ಲೂಮ್ಸ್‌ಬರಿ ಹೌಸ್‌ನ ಯುವಜನ ಕಛೇರಿ ಮೆಟ್ಟಿಲುಗಳನ್ನು ಎರಡೆರಡು ಒಟ್ಟಿಗೆ ಏರಿ, ಹದಿಹರೆಯದವರ ಸಾಲಲ್ಲಿ ನಿಂತೆ. ತಾಳ್ಮೆಗೆಟ್ಟು ನಾನಲ್ಲಿ ನಿಂತಾಗ ಒಂದಾದ ಮೇಲೊಬ್ಬರು, ತಮ್ಮ ಶಿಕ್ಷಣವನ್ನು ಮುಂದುವರಿಸಬೇಕೆನ್ನುವವರ ವಿಷಯ ಕೇಳಿಸಿತು. ನಾನು ವೈದ್ಯಳಾಗಬೇಕೆಂಬ ನನ್ನ ಕನಸು ನೆರವೇರಲು ಕಾಯಬೇಕು ಎಂದು ನಾನಾಗಲೇ ನಿರ್ಧರಿಸಿದೆ– ನಾನು ಸ್ವಲ್ಪ ದುಡ್ಡನ್ನು ಸಂಪಾದಿಸಬೇಕು. ಒಂದು ವರ್ಗಕ್ಕಿಂತ ಕಡಿಮೆ ಅವಧಿಗೆ ಮೊದಲು, ನಾನು ನನ್ನ ಜೀವನಗತಿಯ ಬಗ್ಗೆ ದೃಢವಾಗಿದ್ದೆ ಎಂದು ನಂಬಲು ಸಾಧ್ಯವಿರಲಿಲ್ಲ. ಆದರೆ, ನನ್ನ ಶಿಕ್ಷಣ, ಬದುಕನ್ನು ಸಂಪಾದಿಸಲು ಬೇಕಾದ ಸರಳ ಕೌಶಲ್ಯಗಳನ್ನು ಕೂಡ ನನಗೆ ಕಲಿಸಿರಲಿಲ್ಲ ಎಂದು ನಾನು ಕೋಪಗೊಂಡೆ.

ನನ್ನನ್ನು ಕೊನೆಗೆ ಕಛೇರಿಗೆ ಕರೆದಾಗ, ಡೆಸ್ಕ್‌ನ ಹಿಂದುಗಡೆ ಇದ್ದ ಆ ಕರುಣಾಳು ಹೆಂಗಸು, ನಾನು ವಿದ್ಯಾರ್ಥಿವೇತನಕ್ಕಾಗಿ ಕೇಳಿಕೊಂಡು ಬಂದ ಮತ್ತೊಬ್ಬ ವಿದ್ಯಾರ್ಥಿಯೇ ಎಂದು ನನ್ನನ್ನು ಕೇಳಿದಳು. ಜೋರಾಗಿ 'ಇಲ್ಲಾ' ಎಂದು ಹೇಳುವ ಮೂಲಕ ನಾನು ಅವಳನ್ನು ಆಶ್ಚರ್ಯಗೊಳಿಸಿದೆ. ಸಂಪಾದನೆ ಮಾಡಲು ನನಗೊಂದು ಉದ್ಯೋಗ ಬೇಕು ಎಂದೂ ವಿವರಿಸಿದೆ. ಅದನ್ನು ಕೇಳಿ ಅವಳು ಸಂತೋಷಪಟ್ಟಳು ಹಾಗೂ ನನಗೆ ಸೂಕ್ತವಾದದ್ದನ್ನು ಖಂಡಿತ ಹುಡುಕುವುದಾಗಿ ಹೇಳಿದಳು.

೧೯೪೦ ವಸಂತಕಾಲ, ದ್ವಿತೀಯ ಮಹಾಯುದ್ಧದ ಆರಂಭದ ಕೆಲವು ತಿಂಗಳುಗಳ ಮೊದಲು, ಬ್ರಿಟಿಷ್ ಆರ್ಥಿಕತೆಯಲ್ಲಿ, ಕಾರ್ಮಿಕ ಅದರಲ್ಲೂ ಕೌಶಲ್ಯರಹಿತ ಕೆಲಸಗಾರ್ತಿಯರ ಕೊರತೆಯಿತ್ತು. ಬ್ಲೂಮ್ಸ್‌ಬರಿಯಲ್ಲಿ ಅನೇಕ ಯಹೂದಿ ಸಂಸ್ಥೆಗಳು ಕೆಲಸ ಖಾಲಿಯಿರುವ ಬಗ್ಗೆ ಜಾಹಿರಾತು ನೀಡಿದ್ದವು. ನನ್ನ ವೈಯಕ್ತಿಕ ವಿವರಗಳನ್ನು ತೆಗೆದುಕೊಂಡ ಮೇಲೆ, ನನಗೆ ಒಂದು ಡಜನ್ ಸಂಸ್ಥೆಗಳ ಹೆಸರು ಹಾಗೂ ವಿಳಾಸಗಳ ಪಟ್ಟಿಯನ್ನು ನೀಡಲಾಯಿತು. ಉದ್ಯೋಗ ಪಡೆಯುವುದು ಅಷ್ಟೇನೂ ಕಷ್ಟವಲ್ಲ ಎಂದು ಅನ್ನಿಸಿತು. ನನ್ನ ಬೆಳಗಿನ ಕೆಲಸದಿಂದ ನಾನು ಖುಷಿಗೊಂಡು, ಕಛೇರಿಯನ್ನು ಬಿಟ್ಟಾಗ, ಗಾಳಿಯಲ್ಲೇ ನಡೆಯುತ್ತಿರುವಂತೆ ಭಾಸವಾಯಿತು. ನನ್ನ ಈ ಸಂತೋಷದ ಸುದ್ದಿಯನ್ನು ಅಮ್ಮನಿಗೆ ತಿಳಿಸಲು ಮನೆಗೆ ಧಾವಿಸಿದೆ, ಹೆಸರುಗಳ ಮತ್ತು ವಿಳಾಸಗಳ ಪಟ್ಟಿಯನ್ನು ನೋಡಿ ಅವಳು ಸಂತೋಷಗೊಳ್ಳಬಹುದೆಂದು ಆಲೋಚಿಸಿದೆ. ಆದರೆ ಅವಳಂತೂ ಅಳಲು ಪ್ರಾರಂಭಿಸಿದಳು. ನನ್ನನ್ನು ತಬ್ಬಿಕೊಂಡು ನನಗಾಗಿ ತಾನು ಆಶಿಸಿದ್ದು ಇದಲ್ಲ ಎಂದು ಗೋಳಾಡಿದಳು. ನಮ್ಮಪ್ಪನೂ ಇದನ್ನು ನನಗಾಗಿ ಬಯಸಿರಲಿಲ್ಲ ಎಂದಳು. ನಾನು ಅವಳನ್ನು ಸಮಾಧಾನಪಡಿಸಲು

ಪ್ರಯತ್ನಿಸಿದೆ. ಆದರೆ, ತೀವ್ರವಾಗಿ ಹತಾಶೆಗೊಂಡೆ. ಯಾವುದನ್ನೂ ಸರಿಯಾಗಿ ಮಾಡಲು ನನ್ನಿಂದಾಗಲಿಲ್ಲ. ನನ್ನ ಉದ್ಯೋಗದ ಯೋಜನೆಗಳನ್ನು ಪ್ರಸ್ತಾಪಿಸುವ ಮೊದಲು, ಓಟ್ವೊ ತನ್ನ ಕೆಲಸದಿಂದ ಹಿಂತಿರುಗುವುದನ್ನೇ ಕಾಯಲು ನಿರ್ಧರಿಸಿದೆ. ಅವನು ಮನೆಗೆ ಬರುತ್ತಿದ್ದಂತೆ, ನನ್ನ ಪಟ್ಟಿಯನ್ನು ಅವನ ಮುಂದೆ ಜಂಭದಿಂದ ಹಿಡಿದೆ. ತನ್ನ ಕೈಗಳಿಂದ ನನ್ನನ್ನು ಬಳಸಿ, ಅಭಿನಂದಿಸಬಹುದೆಂದು ಎಣಿಸಿದೆ. ಅವನು ಉತ್ಸಾಹವಿಲ್ಲದೆ ನನ್ನ ಕಡೆ ನೋಡಿ, ಉದ್ಯೋಗ ಹುಡುಕಲು ಬಸ್ ದರವನ್ನು ಹೇಗೆ ಹೊಂದಿಸುತ್ತೀಯೆಂದು ಕೇಳಿದನು. ನಾನು ನನ್ನ ಮೊದಲ ವಾರದ ಸಂಬಳದಿಂದ ಹಿಂತಿರುಗಿಸುವುದಾಗಿ ಅವನಿಗೆ ಮಾತು ಕೊಟ್ಟೆ. ಆಗವನು ನಕ್ಕು, ನಾನು ವಾರಕ್ಕೆ ಎಷ್ಟು ಸಂಪಾದನೆ ಮಾಡಬಹುದೆಂಬ ನಿರೀಕ್ಷೆಯನ್ನಿಟ್ಟು ಕೊಂಡಿದ್ದೀಯಾ ಎಂದು ಕೇಳಿದನು. ನಾನಂತೂ ಗಾಬರಿಯಿಂದ ಮೌನಕ್ಕೆ ಶರಣಾದೆ. ನಾನು ಅತ್ಯಂತ ಮುಖ್ಯವಾದ ವಾಸ್ತವವಾದ ಪ್ರಶ್ನೆಯನ್ನೇ ಕೇಳಲು ಮರೆತುಬಿಟ್ಟಿದ್ದೆ. ಓಟ್ವೊ ಕೃತಕವಾಗಿ ನಕ್ಕಾಗ, ನನ್ನ ಮೂರ್ಖತನಕ್ಕೆ ನಾನೇ ಕೋಪಗೊಂಡೆ.

ಮಾರನೆಯ ಬೆಳಿಗ್ಗೆ ಒಂದು ಭೂಪಟ, ಓಟ್ವೊ ಕೊಟ್ಟಿದ್ದ ಸೂಚನೆಗಳು ಹಾಗೂ ಬಸ್ ಪ್ರಯಾಣಕ್ಕಾಗಿ ಸ್ವಲ್ಪ ಹಣವನ್ನು ತೆಗೆದುಕೊಂಡು ಬೇಗನೇ ಹೊರಟೆ. ಇಂಗ್ಲಿಷ್ ಗೊತ್ತಿಲ್ಲದೆ ಇದ್ದುದರಿಂದ, ಓಟ್ವೊ ಕೊಟ್ಟಿದ್ದ ಚೀಟಿಯನ್ನು ಬಸ್ ಕಂಡಕ್ಟರ್‌ಗೆ ತೋರಿಸಿ, ನನಗೆ ಬೇಕಾದ ನಿಲ್ದಾಣದ ಹೆಸರು ಹೇಳಿ ಯಾವಾಗ ಇಳಿಯಬೇಕೆಂದು ಹೇಳಿ ಎಂದೆ. ಇಂಗ್ಲಿಷ್ ಪದವೊಂದನ್ನು ಮಾತನಾಡಲಾರದ ಅನೇಕ ಪ್ರಯಾಣಿಕರು ಬರುವುದು ಬಸ್ ಕಂಡಕ್ಟರ್‌ಗಳಿಗೆ ಅಭ್ಯಾಸವಾಗಿಹೋಗಿತ್ತು. ಹಾಗಾಗಿ ಅವರು ಇಂಥವರು ತಮ್ಮ ಸ್ಥಳಕ್ಕೆ ಹೋಗಲು ಹೆಚ್ಚಿನ ಸಹಾಯ ಮಾಡುತ್ತಿದ್ದರು. ನನ್ನ ಪಟ್ಟಿಯ ಪ್ರಕಾರ ಮೊದಲ ಕಾರ್ಖಾನೆಗೆ ಸುಲಭವಾಗಿ ಹೋದೆ. ಸ್ವಾಗತ ಕಛೇರಿಯಲ್ಲಿ ಬ್ಲೂಮ್ಸ್‌ಬರಿ ಹೌಸ್‌ನಲ್ಲಿ ನೀಡಿದ್ದ ಪರಿಚಯ ಪತ್ರವನ್ನು ತೋರಿಸಿದೆ. ಸ್ವಾಗತಕಾರಿಣಿ ನನ್ನನ್ನು ನೋಡಿ, ಪ್ರಶ್ನೆಯೊಂದನ್ನು ಕೇಳಿದಳು. ಆದರೆ, ನನಗೆ ಅದು ಅರ್ಥವಾಗಲಿಲ್ಲ. ವಾಸ್ತವವಾಗಿ ನನಗೆ ಇಂಗ್ಲಿಷ್ ಮಾತನಾಡಲು ಬರುವುದಿಲ್ಲ ಎಂದು ಅವಳಿಗೆ ಹೊಳೆದಿರಲಿಲ್ಲ. ಅದಕ್ಕೇ ನಾನು ಕಿವುಡಿ ಎಂದು ಅವಳು ನಿರ್ಧರಿಸಿದ್ದಳೇನೋ, ಅವಳು ಪ್ರಶ್ನೆಯನ್ನು ಗಟ್ಟಿಯಾಗಿ ಪುನರುಚ್ಚರಿಸಿದ್ದಳು. ಅವಳೆಷ್ಟು ಗಟ್ಟಿಯಾಗಿ ಕೂಗಿದರೂ, ಅವಳೇನು ಕೇಳುತ್ತಿದ್ದಾಳೆ ಎಂದು ನನಗೆ ಅರ್ಥವಾಗುವುದಿಲ್ಲ ಎಂದು ನಾನವಳಿಗೆ ಅರ್ಥ ಮಾಡಿಸಲು ಪ್ರಯತ್ನಿಸಿದೆ. ಆದರೆ, ನನ್ನ ಪ್ರಯತ್ನಗಳು ಅವಳ ಕೋಪವನ್ನು ಹೆಚ್ಚಿಸಿದಂತೆ ಕಂಡುಬಂದವು. ಕೊನೆಗೆ, ನನ್ನನ್ನು ಹಿಂದಿನ ಕೊಠಡಿಗೆ ಬರಲು ಹೇಳಿದಾಗ, ಅಲ್ಲಿಗೆ ಓರ್ವ ವ್ಯಕ್ತಿ ಬಂದನು. ಅವನು ನನ್ನ ಕಾರ್ಡನ್ನು ನೋಡಿದಾಗ ತಕ್ಷಣ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತನ್ನನ್ನು

ಹಿಂಬಾಲಿಸುವಂತೆ ನನಗೆ ಸನ್ನೆ ಮಾಡಿದನು. ಅಲ್ಲಿ ಯಂತ್ರಗಳು ಕೆಲಸ ಮಾಡುವ ಶಬ್ದ ಕೇಳಿಸಿತು. ಸುಮಾರು ನಲವತ್ತು ಹುಡುಗಿಯರು ಒಟ್ಟಿಗೆ ಕಪ್ಪು ಕನ್ನಡಕ ಮಾಡುತ್ತಿದ್ದ ಯಂತ್ರಗಳ ಮಧ್ಯೆ ನಾನು ನಿಂತಿದ್ದೆ. ನನಗಂತೂ ನಗು ತಡೆಯಲಾರದಾಯಿತು. ನಾನಂತೂ ಜೀವನದಲ್ಲಿ ಎಂದೂ ಯಂತ್ರವೊಂದನ್ನು ಚಾಲೂ ಮಾಡಿರಲಿಲ್ಲ. ಆದರೆ, ಇಲ್ಲಿ ಅದಕ್ಕಾಗಿ ಸಂಬಳ ಪಡೆಯುವ ನಿರೀಕ್ಷೆಯಲ್ಲಿದ್ದೆ. ಅಲ್ಲಿನ ವ್ಯವಸ್ಥಾಪಕರು ತಕ್ಷಣ ಹುಡುಗಿಯ ರಲ್ಲೊಬ್ಬಳನ್ನು ಕರೆದು ನಾನೇನು ಮಾಡಬೇಕು ಎಂಬುದನ್ನು ತೋರಿಸಲು ಹೇಳಿದರು. ಆ ಯಂತ್ರದ ವಶೀಕರಣ ಚಲನೆಯಿಂದ ನಾನು ಸಮ್ಮೋಹನಗೊಂಡಂತೆ ನೋಡಿದೆ. ನಾನು ದಿನಗಟ್ಟಲೆ ಬೇರೇನೂ ಮಾಡದೆ, ಈ ಮೀಟುಗೋಲನ್ನು ಅನೇಕ ಬಾರಿ ಒತ್ತುತ್ತ ಇರುವುದನ್ನು ನನ್ನಿಂದ ಊಹಿಸಿಕೊಳ್ಳಲಾಗಲಿಲ್ಲ. ಅಲ್ಲಿಂದ ಹೊರಟಾಗ ಆ ಕನ್ನಡಕದ ಕಾರ್ಖಾನೆಯಲ್ಲಿ ಕೆಲಸ ಮಾಡುವುದು ಸಾಧ್ಯವಿಲ್ಲ ಎಂದು ಅವನಿಗೆ ವಿವರಿಸಲು ಪ್ರಯತ್ನಿಸಿದೆ. ನನ್ನ ಪಟ್ಟಿಯಲ್ಲಿನ ಮುಂದಿನ ಕಾರ್ಖಾನೆಯನ್ನು ಹುಡುಕ ಬೇಕೆಂದಾಗ, ನನ್ನ ಗೆಲುವಿನ ಮನಃಸ್ಥಿತಿ ಬದಲಾಯಿತು. ತರಬೇತಿ ಕೇಶಾಲಂಕಾರಳಾಗುವುದೇನೂ ಕೆಟ್ಟದಲ್ಲ ಎಂದು ನಾನು ಆಲೋಚಿಸಲು ಆರಂಭಿಸಿದೆ.

ಆ ಬೆಳಿಗ್ಗೆ ನಾನು ಇತರ ಐದು ಕಾರ್ಖಾನೆಗಳನ್ನು ನೋಡಿದೆ. ಎಲ್ಲಾ ಮೊದಲನೆಯದರ ತರಹವೇ ಇತ್ತು. ನನಗಂತೂ ನಿರಾಶೆ ಹೆಚ್ಚಾಯಿತು. ನಾನು ಕೆಲಸವೊಂದನ್ನು ಹುಡುಕಬೇಕಿತ್ತು. ಆದರೆ, ಅದೆಲ್ಲವೂ ಎಷ್ಟೊಂದು ಬೇಸರ ತರಿಸುವ ಮತ್ತು 'ಆತ್ಮಭಂಜಕ' ಎಂದೆನಿಸಿತು. ಮುಂದಿನ ಕಛೇರಿಗೆ ಹೋಗುತ್ತಿದ್ದಂತೆಯೇ, ನಾನು ಪ್ರಯತ್ನವನ್ನಾದರೂ ಮಾಡೋಣವೆಂದು ನಿರ್ಧರಿಸಿದೆ. ಮತ್ತೊಮ್ಮೆ ಸ್ವಾಗತಕಾರಿಣಿ ನನಗೆ ಅರ್ಥವಾಗುವಂತೆ ಕೂಗಿ ಹೇಳಿದಳು. ಅದೃಷ್ಟವಶಾತ್, ಆ ಕಾರ್ಖಾನೆಯ ಮಾಲೀಕ ಮಿ. ರೆಡ್‌ಫೋರ್ಡ್, ಓಡಾಡಲು ಬಂದವರು, ಆ ಕೂಗಾಟವೆಲ್ಲಾ ಏಕೆ ಎಂದು ವಿಚಾರಿಸಿದರು. ನನ್ನ ಕಡೆ ತಿರುಗಿ, ನನ್ನನ್ನು ಯಿದ್ದಿಶ್ ಭಾಷೆಯಲ್ಲಿ ಮಾತನಾಡಿಸಿದಾಗ, ಅದು ಜರ್ಮನ್ ಭಾಷೆಯಂತೆಯೇ ಇದ್ದುದರಿಂದ ನನಗೆ ಅರ್ಥವಾಯಿತು. ಆಗ ಅವನು ನನ್ನನ್ನು ತನ್ನ ಕಛೇರಿಗೆ ಬರಮಾಡಿಕೊಂಡನು. ಅಲ್ಲಿ ನಾನು ಆರಾಮದಾಯಕ ಕುರ್ಚಿಯಲ್ಲಿ ಕುಸಿದು ಕುಳಿತೆ. ನನ್ನ ವಲಸೆ ಸಮಯದಲ್ಲಿ ನನ್ನ ಅನುಭವದ ಬಗ್ಗೆ ಅವನ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಾಗ, ನಾನು ಆ ಕೊಠಡಿಯ ಸುತ್ತ ಕಣ್ಣಾಡಿಸಿದೆ. ಹಾಗೆ ನೋಡಿದ್ದನ್ನೆಲ್ಲಾ ಇಷ್ಟಪಟ್ಟೆ. ಅವನು ಒಂದು ದೊಡ್ಡ ಎಕ್ಸಿಕ್ಯೂಟ್ ಡೆಸ್ಕ್‌ನ ಹಿಂಬದಿಯಲ್ಲಿ ಕುಳಿತಿದ್ದನು. ಅದರ ಮೇಲೆ ಎರಡು ಟೆಲಿಫೋನ್‌ಗಳಿದ್ದವು. ಒಂದು ದಂತದ್ದು, ಒಂದು ಕೆಂಪು ಬಣ್ಣದ್ದು. ಕಛೇರಿಯು ವೈಭವ, ಶ್ರೀಮಂತಿಕೆ ಹಾಗೂ ಯಶಸ್ಸನ್ನು ಪ್ರತಿಬಿಂಬಿಸುತ್ತಿತ್ತು. ಅದು ನನ್ನ ಜೀವನದ ಶೂನ್ಯತನದ ನಂತರ ಮನಸ್ಸಿಗೆ ಬಹಳ ಮುದ ನೀಡಿತು. ಇಂಥಾ

ವಾತಾವರಣದಲ್ಲಿ ನಾನು ಕೆಲಸ ಮಾಡುತ್ತಿರುವಂತೆ ಊಹಿಸಿಕೊಂಡೆ. ಅವನು ನನಗೆ ಕೆಲಸ ಕೊಡಿಸಬಹುದೆಂದು ಆಶಿಸಿದೆ. ಹಾಗಾಗಿ, ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವಿಯಾ ಎಂದು ಕೇಳಿದಾಗ, ನಾನು ತಕ್ಷಣ ಖುಷಿಯಿಂದ ಒಪ್ಪಿಕೊಂಡೆ. ನನ್ನ ನೂತನ ಉತ್ಸಾಹದಲ್ಲಿ ನಾನು ಮಾಡಬೇಕಾದ ಕೆಲಸವೇನು, ಎಷ್ಟು ಸಂಬಳ ಕೊಡುತ್ತೀರಿ ಎಂಬುದನ್ನೇ ಕೇಳಲು ಸಂಪೂರ್ಣವಾಗಿ ಮರೆತುಬಿಟ್ಟೆ. ಮಿ. ರೆಡ್‌ಫೋರ್ಡ್ ಅವರು ನನ್ನನ್ನು ಸಿಬ್ಬಂದಿ ಕೊಠಡಿಗೆ ಕರೆದುಕೊಂಡು ಹೋಗಿ, ಅನುವಾದಕರಾಗಿ, ಕೆಲಸ ಮಾಡಲು ನನ್ನೊಂದಿಗೆ ಬಹಳ ಹೊತ್ತು ಉಳಿದರು. ನಾನು ಅಲ್ಲಿಂದ ಮನೆಗೆ ಹೊರಟಾಗ ಮುಂದಿನ ಸೋಮವಾರ ಬೆಳಿಗ್ಗೆ ೮ ಗಂಟೆಗೆ ಕಾರ್ಖಾನೆಯ ಮೊದಲ ಮಹಡಿಯಲ್ಲಿರುವ ಅಧಿಕಾರಿಣಿಗೆ, ಕರ್ತವ್ಯದ ಮೇಲೆ ವರದಿ ಮಾಡಿಕೊಳ್ಳಬೇಕೆಂದು ತಿಳಿಯಿತು.

ನನ್ನ ಚೈತನ್ಯ ಮರಳಿ ಬಂತು, ನಾನು ಉತ್ಸಾಹದಿಂದ ಹಿಂತಿರುಗಿ ಅಮ್ಮನಿಗೆ ನನ್ನ ಹೊಸಾ ಕೆಲಸದ ಬಗ್ಗೆ ಸಂತೋಷಕರವಾದ ಸುದ್ದಿಯನ್ನು ನೀಡಿದೆ. ಆಮೇಲೆ ನಾನು ಅದೇ ಸುದ್ದಿಯನ್ನು ಓಟ್ಟೊಗೆ ತಿಳಿಸಿದಾಗ, ನನ್ನ ಕೆಲಸ ಏನು, ಎಷ್ಟು ವೇತನ ಕೊಡುತ್ತಾರೆ ಎಂದು ಕೇಳದಷ್ಟೂ ಮೂರ್ಖಳು ಎಂದರೆ ನಂಬಲು ಆಗುತ್ತಿಲ್ಲ ಎಂದು ಜರೆದ. ನಾನು ಬಹಳ ಸಣ್ಣವಳು ಮತ್ತು ನಮ್ರ ಎಂದು ಭಾವಿಸಿದೆ. ನಾನು ನನ್ನ ಆತ್ಮಸ್ಥೈರ್ಯವನ್ನು ತಂದುಕೊಂಡು, ಮಿ. ರೆಡ್‌ಫೋರ್ಡ್ ನನ್ನ ಬಗ್ಗೆ ಎಷ್ಟು ಒಳ್ಳೆಯವರಾಗಿದ್ದರು. ಹಾಗೂ ಅವರ ಕಾರ್ಖಾನೆ ಎಷ್ಟು ಚೆನ್ನಾಗಿ ನಡೆಯುತ್ತಿರುವಂತೆ ಕಾಣಿಸುತ್ತಿದೆ ಎಂದೆಲ್ಲಾ ಹೇಳತೊಡಗಿದೆ. ಅಲ್ಲಿ ಎಂತಹುದೇ ಕೆಲಸ ಮಾಡಬೇಕಾಗಿದ್ದರೂ, ಅದು ನಾನು ತಿರಸ್ಕರಿಸಿದ ಇತರ ಕೆಲಸಗಳಷ್ಟು ಕೆಟ್ಟದಾಗಿರಲು ಸಾಧ್ಯವಿಲ್ಲ ಎಂದು ನಾನು ಆಲೋಚಿಸಿದ್ದೆ. ಓಟ್ಟೊ ಸುಮ್ಮನೆ ವಿಡಂಬನೆಯಿಂದ ನಕ್ಕು ಹೇಳಿದ, “ಕಾದು ನೋಡೇ, ಹುಡುಗಿ” ಎಂದು.

ಮಾರನೆಯ ದಿನ ನಾನು ಬ್ಲೂಮ್ಸ್‌ಬರಿ ಹೌಸ್‌ನ ಯುವಜನ ಅಧಿಕಾರಿಗೆ ನನ್ನ ಕೆಲಸದ ಬಗ್ಗೆ ವರದಿ ನೀಡಲು ಹಿಂತಿರುಗಿದಾಗ, ಆ ದಯಾಮಯಿ ಮಹಿಳೆ ನನಗೆ ವಾರಕ್ಕೆ ೧೫ ಷಿಲ್ಲಿಂಗ್ಸ್ ಪಾವತಿ ಮಾಡುವುದಾಗಿ ಹೇಳಿದಳು. ಇದು ಎಷ್ಟು ಚಿಕ್ಕ ಮೊತ್ತ ಎಂದು ನನಗರಿವಿರಲಿಲ್ಲ. ನಂತರದಲ್ಲಿ ಅವಳು, ನನಗೆ ವಾರದ ಭತ್ಯೆಯಾಗಿ, ಹೆಚ್ಚುವರಿ ೧೫ ಷೆಲ್ಲಿಂಗ್ಸ್ ಅನ್ನು ಪಡೆಯಲು ಏರ್ಪಾಡು ಮಾಡುವುದಾಗಿ ಹೇಳಿದಾಗಲೇ, ಅದು ಎಷ್ಟು ಸಣ್ಣ ಮೊತ್ತ ಎಂದು ಮನವರಿಕೆಯಾಯಿತು. ವಾರಕ್ಕೆ ೩೦ ಷೆಲ್ಲಿಂಗ್ಸ್ ನನ್ನ ಖರ್ಚಿಗೆ ಎಂದು ಓಟ್ಟೊ ಪರಿಗಣಿಸಬಹುದೆಂದು ಮಾತ್ರ ನಾನು ಆಶಿಸಿದೆ.

ನಾನು ನನ್ನ ಉದ್ಯೋಗಪಥವನ್ನು ಆರಂಭಿಸಿದ ದಿನ ಓಟ್ಟೊ ಹೇಳಿದ್ದು

ಎಷ್ಟು ಸರಿ ಎಂದು ಮನವರಿಕೆ ಮಾಡಿಕೊಂಡೆ. ನಾನು ನೋಡಿದ ಇತರ ಕಾರ್ಖಾನೆಗಳಿಗಿಂತ, ಇದು ಭಿನ್ನವಾಗಿರಲಿಲ್ಲ. ವಿಶಾಲವಾದ ಕಟ್ಟಡದಲ್ಲಿ ಮೂರು ಮಹಡಿಗಳಿದ್ದವು. ಪ್ರತಿಯೊಂದರಲ್ಲೂ ಸುಮಾರು ಒಂದು ನೂರು ಮಹಿಳೆಯರು ವಿದ್ಯುಚ್ಚಾಲಿತ ಹೊಲಿಗೆ ಯಂತ್ರಗಳ ಬಳಿ ಇದ್ದರು. ತಕ್ಷಣವೇ ಕೆಲಸ ಆರಂಭವಾಗುವ ಸೂಚನೆಯ ಗಂಟೆ ಶಬ್ದ ಕೇಳಿಸಿತು. ತಮ್ಮ ತಮ್ಮ ಯಂತ್ರಗಳ ಬಳಿ ಸರಿಯಾದ ಸಮಯಕ್ಕೆ ಧಾವಿಸಿದ ಮಹಿಳೆಯರು ನನ್ನನ್ನು ತಳ್ಳಿಕೊಂಡು ಹೋದರು. ಮೊದಲೇ ತಿಳಿಸಿದ್ದಂತೆ, ನಾನು ಮೊದಲ ಮಹಡಿಯಲ್ಲಿ ಮಹಿಳಾ ಅಧಿಕಾರಿಣಿ(ಫ್ಲೋರ್ ಲೇಡಿ)ಯನ್ನು ಹುಡುಕಿಕೊಂಡು ಹೋದೆ. ಅವಳಂತೂ ದಯಾಳು, ತರುಣ ಹೆಂಗಸು ಸನ್ನೆಯ ಭಾಷೆಯ ಮೂಲಕವೇ ನನ್ನನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದಳು. ನನ್ನ ಮೇಲೆ ಕೂಗುವುದಾಗಲಿ, ಅರಚುವುದಾಗಲಿ ಮಾಡಲಿಲ್ಲ. ಸಮಾಧಾನದಿಂದ, ನಾನೆಂದೂ ಹೊಲಿಗೆ ಯಂತ್ರವನ್ನು ಬಳಸುವುದನ್ನು ಕಲಿತಿರಲಿಲ್ಲ. ಆದರೆ, ಅದಕ್ಕೆ ಪ್ರಯತ್ನಿಸುತ್ತೇನೆ ಎಂದು ವಿವರಿಸಿದೆ. ಸಾಲಾಗಿ ಹತ್ತು ಯಂತ್ರಗಳಿದ್ದ ಒಂದು ಬೆಂಚ್ ಕಡೆಗೆ ತನ್ನನ್ನು ಹಿಂಬಾಲಿಸಲು ನನಗೆ ಸನ್ನೆ ಮಾಡಿದಳು. ಆದರೆ, ಅದರಲ್ಲಿ ಅರ್ಧವೆಲ್ಲಾ ಖಾಲಿಯಾಗಿತ್ತು. ಅವುಗಳಲ್ಲೊಂದು ಸಣ್ಣ ಕುರ್ಚಿಯ ಮೇಲೆ ಕುಳಿತೆ, ನನ್ನ ಮೊದಲ ಹೊಲಿಗೆ ಪಾಠಕ್ಕೆ ಸಿದ್ಧಳಾಗಿ, ಅವಳು ಕೌಶಲ್ಯದಿಂದ ಸೂಜಿಯನ್ನು ಚುಚ್ಚಿದಾಗ, ಅವಳ ವಿಚಿತ್ರವಾದ ಕೈಗಳನ್ನು ಗಮನಿಸಿದೆ. ತನ್ನ ಬಲಗೈಯಲ್ಲಿ ಎರಡು ಬೆರಳುಗಳು ಮಾತ್ರ ಇತ್ತು ಎಂದು ತಿಳಿಯಿತು. ನಾನು ಹಿಂದೆ ಸರಿದು ನಾನು ನನ್ನ ಮೊದಲ ಬೆರಳನ್ನು ಕಳೆದುಕೊಳ್ಳಲು ಎಷ್ಟು ಕಾಲ ಬೇಕಾಗಬಹುದೆಂದು ಆಶ್ಚರ್ಯಪಟ್ಟೆ.

ವಾರಗಳ ತರುವಾಯ, ನಿಜವಾಗಿ ಏನಾಗಿತ್ತು ಎಂಬುದನ್ನು ಕಂಡುಕೊಂಡೆ. ಅವಳ ಹೊಲಿಗೆ ಯಂತ್ರದ ಬೆಲ್ಟ್ ಮುರಿದುಹೋಗಿತ್ತು. ಓರ್ವ ಯಂತ್ರದ ರಿಪೇರಿ ಮಾಡುವವನನ್ನು ಕರೆಯುವ ಬದಲು, ಸಮಯ ಉಳಿಸುವ ಉದ್ದೇಶದಿಂದ ತಾನೇ ರಿಪೇರಿ ಮಾಡಲು ಪ್ರಯತ್ನಿಸಿದ್ದಳು. ಸಮಯ ಅಮೂಲ್ಯವಾದುದು, ರಿಪೇರಿ ಮಾಡುವವರಿಗೆ ತುಂಡು ಲೆಖ್ಖದಲ್ಲಿ ಹಣ ಕೊಡುತ್ತಿದ್ದರು. ಹಾಗಾಗಿ ಅವರ ಯಂತ್ರಗಳು ಕೆಲಸ ಮಾಡದೆ ಇದ್ದಾಗ, ಸಮಯವನ್ನು ವ್ಯರ್ಥ ಮಾಡಲು ಇಷ್ಟವಿರಲಿಲ್ಲ. ಯಂತ್ರದಲ್ಲಿ ಬೆಲ್ಟನ್ನು ಮತ್ತೆ ಜೋಡಿಸಲು ಬೆಂಚಿನ ಕೆಳಗಡೆಯಿಂದ ಹತ್ತಿದ್ದಳು. ಹಾಗೆ ಮಾಡುವಾಗ, ಚಲಿಸುವ ಚಕ್ರದಲ್ಲಿ ಅವಳ ಕೈ ಸಿಕ್ಕಿಹಾಕಿಸಿಕೊಂಡಿದ್ದಳು. ಎಲ್ಲರಿಗೂ ಆಘಾತವಾಗಿತ್ತು, ಆದರೆ ಅವಳು ತನ್ನನ್ನು ಮುಖ್ಯ ಅಧಿಕಾರಿಣಿಯಾಗಿ ಬಡ್ತಿ ನೀಡಿದ್ದಕ್ಕೆ ಮಿ. ರೆಡ್‌ಫೋರ್ಡ್ ಅವರನ್ನು ಹೊಗಳುತ್ತಿದ್ದಳು, ಅವಳು ಕಾರ್ಖಾನೆಯ ನಿಯಮಗಳನ್ನು ಮುರಿದಿದ್ದರೂ ಸಹ. ಅದನ್ನು ಕೇಳಿ, ಅವನು ಅದಕ್ಕಿಂತ ಬೇರೇನನ್ನೂ ಮಾಡಲು ಸಾಧ್ಯವಾಗಲಿಲ್ಲ ಎಂದುಕೊಂಡೆ.

ಅವರ ಸ್ವಂತ ಕಛೇರಿಯ ವೈಭವವನ್ನು ನೋಡಿದ್ದ ನನಗೆ, ಅದೆಲ್ಲ ಶೋಷಣೆ ಎಂಬ ಕಾರಣದಿಂದ ಅದನ್ನು ವಿರೋಧಿಸುವಂತಾಗಿತ್ತು. ಆದರೂ, ನನ್ನ ಜತೆಯ ಕೆಲಸಗಾರರು ಯಾರೂ ನನ್ನ ಭಾವನೆಗಳಲ್ಲಿ ಭಾಗಿಯಾಗಿರಲಿಲ್ಲ.

ನನ್ನ ಕೆಲಸದ ಮೊದಲ ವಾರಾಂತ್ಯಕ್ಕೆ, ನನಗೆ ೧೫ ಷಿಲ್ಲಿಂಗ್‌ಗಳ ಸಂಬಳ ದೊರೆಯಿತು. ನಮ್ಮ ಮನೆ ಖರ್ಚಿಗೆ ನಾನು ಕೊಡುಗೆಯನ್ನು ನೀಡಬಹುದು ಎಂದು ನನಗೆ ಹೆಮ್ಮೆಯುಂಟಾಯಿತು. ಹತ್ತು ಷಿಲ್ಲಿಂಗ್‌ಗಳನ್ನು ಅಮ್ಮನಿಗೆ ನೀಡಿದಾಗ ಅವಳು ನನ್ನನ್ನು ದೊಡ್ಡದಾಗಿ ಆಲಂಗಿಸಿಕೊಂಡಳು. ಓಟ್ಟೋ ನೀಡಿದ್ದ ಬಸ್ ಖರ್ಚನ್ನು ಅವನಿಗೆ ಹಿಂತಿರುಗಿಸಿದಾಗ, ನನ್ನ ಹಣೆಗೆ ಮುತ್ತಿಡುವ ಮೂಲಕ ಪ್ರತಿಫಲ ಸಲ್ಲಿಸಿದ. ಅದೊಂದು ರೀತಿಯ ಸಾಧನೆಯೇ ಆಗಿ, ನನ್ನ ಮಾತಿಗೆ ತಕ್ಕಂತೆ ನಡೆದುಕೊಂಡಿದ್ದಕ್ಕೆ ನಾನೇ ನನ್ನನ್ನು ಅಭಿನಂದಿಸಿಕೊಂಡೆ. ಆ ಮೊದಲ ವಾರ ಅತ್ಯಂತ ಕಠಿಣವಾಗಿತ್ತು. ಯಂತ್ರದ ಬಳಿ ದಿನಕ್ಕೆ ಎಂಟು ಗಂಟೆಗಳ ಕಾಲ ಕುಳಿತಿದ್ದರಿಂದ, ನನ್ನ ತಲೆಯೂ ಸೂಜಿಯಷ್ಟೇ ತಿರುಗುತ್ತಿತ್ತು. ಕೆಲವು ವಾರಗಳ ನಂತರ, ಅಲ್ಲಿ ಬಹಳ ಕಾಲದಿಂದ ಕೆಲಸ ಮಾಡುತ್ತಿದ್ದ ಅನೇಕ ಯಹೂದಿ ನಿರಾಶ್ರಿತರಿಗೆ ನನ್ನನ್ನು ಪರಿಚಯ ಮಾಡಿಕೊಟ್ಟಿದ್ದುದರಿಂದ ಕಾರ್ಖಾನೆಯಲ್ಲಿ ನನ್ನ ಕೆಲಸ ಮಾಡಲು ಖುಷಿಯಾಯಿತು. ಯಂತ್ರದ ಕೆಲಸವನ್ನು ನಾನು ಎಷ್ಟು ಬೇಗ ಕಲಿತಿದ್ದರ ಬಗ್ಗೆ ನನಗೇ ಆಶ್ಚರ್ಯವುಂಟಾಯಿತು. ಎರಡನೆಯ ವಾರಾಂತ್ಯದ ಹೊತ್ತಿಗೆ, ನಾನು ತುಂಡುಲೆಕ್ಕಕ್ಕೆ ಒಪ್ಪಿಕೊಂಡಿದ್ದರೆ ಹೆಚ್ಚು ದುಡಿಯಬಹುದಾಗಿತ್ತು ಎಂದು ನಾನು ಲೆಕ್ಕ ಹಾಕಿದೆ. ಅದರ ಮಾರನೆಯ ವಾರ, ಸಮಯದ ದರದಲ್ಲಿಲ್ಲದಿದ್ದರೆ, ನಾನು ನನ್ನ ಸಂಬಳದ ಎರಡರಷ್ಟನ್ನು ಪಡೆಯಬೇಕಾಗಿತ್ತು ಎಂದು ಲೆಕ್ಕ ಹಾಕಿದೆ. ನನ್ನನ್ನು ತುಂಡು ಲೆಕ್ಕದ ರೀತಿಗೆ ವರ್ಗಾವಣೆ ಮಾಡುವಂತೆ, ಆಡಳಿತ ವರ್ಗಕ್ಕೆ ಮನವಿ ಮಾಡಿದೆ. ಒಂದು ತಿಂಗಳ ನಂತರ, ಕಾರ್ಖಾನೆಯಲ್ಲಿ ನನ್ನನ್ನು ಅನುಭವಿ ಯಂತ್ರಗಾರ ಎಂದು ಕರೆದು, ತುಂಡು ದರದ ಪ್ರಕಾರ ಸಂಬಳ ಕೊಟ್ಟಮೇಲೆ, ನಾನು ವಾರಕ್ಕೆ ಮೂರು ಪೌಂಡ್‌ಗಿಂತ ಹೆಚ್ಚಾಗಿ ಸಂಪಾದಿಸಲು ಆರಂಭಿಸಿದೆ. ನಂತರದಲ್ಲಿ, ನನ್ನ ಸಂಬಳ ವ್ಯತ್ಯಾಸವಾಗುತ್ತಾ ಬಂದಿತು. ನನ್ನ ಕೆಲಸದ ಗತಿಯ ವ್ಯತ್ಯಾಸಕ್ಕಿಂತಲೂ ನಮಗೆ ನೀಡಿದ ವಿಭಿನ್ನ ರೀತಿಯ ಕೆಲಸದ ಫಲದಿಂದಾಗಿ. ಉದಾಹರಣೆಗೆ, ಕಪ್ಪು ರೇಷ್ಮೆ ಒಳ ಉಡುಪಿನ ಮೇಲೆ ಕಪ್ಪು ಜರಿಯನ್ನು ಹೊಲೆಯುವುದರಿಂದ ಅದನ್ನೇ ಬಣ್ಣದ ಬಟ್ಟೆಗಳನ್ನು ಹೊಲೆಯುವುದು ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು. ಆದರೂ, ಸಂಬಳ ಮಾತ್ರ ಒಂದೇ ಆಗಿತ್ತು. ಆ ಅನ್ಯಾಯದ ಬಗ್ಗೆ ನನಗಂತೂ ಸಾಕಷ್ಟು ದುಗುಡವುಂಟಾಗಿತ್ತು. ಕೆಲವು ತಿಂಗಳುಗಳಲ್ಲೇ ಕಾರ್ಖಾನೆಯಲ್ಲಿ ಕೆಲಸ ಮಾಡುವುದು, ಕೇವಲ ಆದಾಯದ ಮೂಲ ಮತ್ತು ಆತ್ಮಗೌರವವಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಾಗಿ, ಒಂದು ಸಾಮಾಜಿಕ

ಸಂದರ್ಭವಾಯಿತು.

ನನ್ನ ಮಿತ್ರರು ಹಿಟ್ಲರನ ಪ್ರಜಾವಿರೋಧಿ ಆಳ್ವಿಕೆಯಿಂದ ತಪ್ಪಿಸಿಕೊಂಡು ಬಂದ ಸಂದರ್ಭಗಳಲ್ಲಿ ಪಡೆದ ಅನುಭವಗಳನ್ನು ಕೇಳುವುದು ನನಗೆ ಹರ್ಷ ತರುತ್ತಿತ್ತು. ನನ್ನ ಗೆಳತಿ ರೂತ್ ತಾನು ಹೇಗೆ ಜರ್ಮನಿಯಿಂದ ಕ್ಯೂಬಾಕ್ಕೆ ತಪ್ಪಿಸಿಕೊಂಡು ಬಂದಳೆಂದು ಹೇಳಿದಳು. ಆದರೆ, ಕ್ಯೂಬಾ ತಲುಪಿದಾಗ ಅಲ್ಲಿನ ಅಧಿಕಾರಿಗಳು, ಅಲ್ಲಿಳಿಯಲು ಅನುಮತಿ ನಿರಾಕರಿಸಿದರಂತೆ. ಅವರಿಗೆಲ್ಲಾ ನಕಲಿ ಪರ್ಮಿಟ್ಟುಗಳನ್ನು ಮಾಡಲಾಗಿತ್ತಂತೆ. ಹಾಗಾಗಿ ಅವರು ಸಮುದ್ರಕ್ಕೆ ಯೋಗ್ಯವಲ್ಲದ ದೋಣಿಯಲ್ಲಿ ಸಿಕ್ಕಿಹಾಕಿಕೊಂಡಿದ್ದರಂತೆ. ಸಮುದ್ರದ ಮೇಲೆ ಕೆಲವು ವಾರಗಳು ಕಳೆದ ನಂತರ, ಏನಾಗಬಹುದೆಂದು ಗೊತ್ತಿಲ್ಲದೆ, ಕೆಲವರು ಆತ್ಮಹತ್ಯೆಯನ್ನೂ ಮಾಡಿಕೊಂಡರಂತೆ. ಅಮೆರಿಕದ ಯಹೂದಿ ಜಂಟಿ ಹಂಚಿಕೆ ಸಮಿತಿಗೆ ಕರೆ ಕಳಿಸಿ, ಅಮೆರಿಕ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಒಬ್ಬೊಬ್ಬರು ಮೂರನೇ ಒಂದರಷ್ಟು ಪ್ರಯಾಣಿಕರನ್ನು, ಮಾನವೀಯ ಆಧಾರದ ಮೇರೆಗೆ ಒಪ್ಪಿಕೊಳ್ಳಬೇಕೆಂದು ಏರ್ಪಾಡು ಮಾಡಿತು. ರೂತ್ ಅಮೆರಿಕಾಕ್ಕೆ ಹೋಗ ಬೇಕೆಂದಿದ್ದಳಂತೆ. ಆದರೆ, ಅವರಿಗೆ ಆಯ್ಕೆಯನ್ನು ನೀಡದಿದ್ದುದರಿಂದ, ಇಂಗ್ಲೆಂಡ್‌ಗೆ ಕಳುಹಿಸಲಾಯಿತು.

ನಾನು ನೋಡಿದಾಗ ರೂತ್‌ಗೆ ೧೮ ವರ್ಷ. ಎತ್ತರವಾದ, ಕಪ್ಪು ಕೂದಲಿನ, ಸ್ವಲ್ಪ ದಪ್ಪವಾದ ಆದರೆ ನಗು ಮತ್ತು ಪ್ರಾಪಂಚಿಕ ವಿವೇಕವುಳ್ಳವಳಾಗಿದ್ದಳು. ಆ ವಿಧಿವತ್ತಾದ ಪ್ರಯಾಣದಲ್ಲಿ ತನ್ನ ಆಪ್ತ ಸ್ನೇಹಿತನೊಂದಿಗೆ ಕಳೆದ ಸಮಯದ ಬಗ್ಗೆ ಅನೇಕ ವೇಳೆ ಹೇಳುತ್ತಿದ್ದಳು. ಅವನ ಫೋಟೋವನ್ನು ಹಿಡಿದುಕೊಂಡು ಬಂದು, ಅದರ ಕಡೆ ಪ್ರೀತಿಯಿಂದ ದಿಟ್ಟಿಸುತ್ತಿದ್ದಳು. ಜೀವನದಲ್ಲಿ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದೆಂದರೆ, ಅವನೇ ಮೊದಲ ವ್ಯಕ್ತಿ. ಬೆಚ್ಚಗಿನ ರಾತ್ರಿಯಲ್ಲಿ ತಾವಿಬ್ಬರೂ ಹಡಗಿನ ಮೇಲುಭಾಗದಲ್ಲಿ ಒಟ್ಟಿಗೆ ಮಲಗಿ, ಮದುವೆಯಾಗಿ ಮಕ್ಕಳನ್ನು ಪಡೆದು, ಸಂಯೋಗದಿಂದ ಇರುವಂತೆ ಭವಿಷ್ಯದ ಕನಸು ಕಾಣುತ್ತಿದ್ದೆವೆಂದು ಹೇಳಿದಳು. ಆಮೇಲೆ ಏನಾಯಿತು ಅಂತ ಕೇಳಿದೆ. ನಿರಾಶ್ರಿತರನ್ನು ಬೇರೆ ಬೇರೆ ದೇಶಗಳಿಗೆ ನಿಯೋಜಿಸುವ ಸಮಯದಲ್ಲಿ, ಅವನನ್ನು ಫ್ರಾನ್ಸ್‌ಗೆ ಕಳುಹಿಸಲಾಯಿತು ಎಂದೂ ಅವಳು ವಿವರಿಸಿದಳು. ಅವಳು ಜೀವನದ ಬಗ್ಗೆ ಇಂತಹ ತಾತ್ವಿಕ ನಿಲುವು ಹೊಂದಿದ್ದರಿಂದ ಅವಳನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಲೇ ಇಲ್ಲ. ಸಂತೋಷವನ್ನು ಎಲ್ಲಾದರೂ, ಯಾವಾಗಲಾದರೂ ಸರಿಯೆ ಪಡೆದುಕೊ ಎಂದೂ ಯಾವಾಗಲೂ ಹೇಳುತ್ತಿದ್ದಳು. ಅವಳ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಗೂ ಅವರವರ ಜೀವಿತಾವಧಿಯಲ್ಲಿ ಕೆಲವು ಕ್ಷಣಗಳ ನಿಜವಾದ ಸಂತೋಷ ಮಾತ್ರ ಇರುತ್ತದೆ. ಅವುಗಳನ್ನು ಬಿಟ್ಟರೆ, ಸುವರ್ಣಾವಕಾಶ ಕಳೆದುಕೊಂಡಂತೆಯೇ.

ಜುಲೈನಲ್ಲಿ ಒಂದು ದಿನ, ಕೈಯಲ್ಲಿ ಪತ್ರವೊಂದನ್ನು ಹಿಡಿದುಕೊಂಡು

ಸಂಭ್ರಮದಿಂದ ಕೆಲಸಕ್ಕೆ ಬಂದಳು. ಅವಳ ಆಪ್ತ ಗೆಳೆಯನಿಂದ ಕೊನೆಗೂ ಸುದ್ದಿ ಬಂದಿತ್ತು. ದಿನಪೂರ್ತಿ ಅವಳು ಖುಷಿಯಾಗಿದ್ದು, ತಮ್ಮ ಪ್ರಣಯಕಾರಿ ಪುನರ್ಮಿಲನಕ್ಕೆ ಸಿದ್ಧಳಾಗಿದ್ದಳು. ಆದರೆ, ಯುದ್ಧ ಘೋಷಿಸಲ್ಪಟ್ಟಾಗ, ಪರಸ್ಪರ ಸಂಪರ್ಕ ಕಡಿದುಕೊಂಡರು. ಎರಡು ವರ್ಷಗಳ ನಂತರ ಮತ್ತೆ ನಾನು ರೂತ್‌ಳನ್ನು ಭೇಟಿಮಾಡಿದಾಗ, ಅವಳು ವೃದ್ಧ ಕನ್ಯೆಯ ಜೀವನಕ್ಕೆ ಒಪ್ಪಿಕೊಂಡುಬಿಟ್ಟಿದ್ದಳು. ಕೆಲವು ಕ್ಷಣಗಳ ಸಂತೋಷವನ್ನು ಅನುಭವಿಸಿದ್ದುದೇ ಅದೃಷ್ಟ, ಯಾವುದೇ ವ್ಯಕ್ತಿಗೆ ಜೀವನದಲ್ಲಿ ಇನ್ನೇನು ಬೇಕು ಎಂದು ತಾತ್ವಿಕವಾಗಿ ಕೇಳಿದಳು.

ನಾನು ಕೆಲಸ ಆರಂಭಿಸಿದ ಮೇಲೆ, ನನ್ನ ಇಂಗ್ಲಿಷ್ ಗಣನೀಯವಾಗಿ ಸುಧಾರಿಸಿತು. ಆದರೆ, ಅದು ಇನ್ನೂ ಕೃತಕವೆಂಬುವ ಹಾಗಿತ್ತು. ಹಾಗಾಗಿ, ಕ್ರೈಸ್ತ ಮಿತ್ರ ಮಂಡಲಿಯ ಒಂದು ಗುಂಪಿನವರು ನಮಗಾಗಿ ಸಂಜೆ ತರಗತಿಗಳನ್ನು ನಡೆಸುವ ಆಹ್ವಾನವನ್ನು ವಿಸ್ತರಿಸಿದಾಗ, ನಾನು ಅದನ್ನು ಸ್ವಾಗತಿಸಿದೆ. ನಮ್ಮ ಶಿಕ್ಷಕರು ಜರ್ಮನಿಯಿಂದ ಇತ್ತೀಚೆಗೆ ತಾನೆ ರಕ್ಷಿಸಲ್ಪಟ್ಟು ಯಹೂದಿಯೇತರ ಜರ್ಮನ್ ಪತ್ರಿಕೋದ್ಯಮಿ ಟೈಮ್ಸ್‌ನಲ್ಲಿದ್ದವರು. ಹಿಟ್ಲರ್ ಮತ್ತು ಅವನ ಸಿದ್ಧಾಂತಗಳನ್ನು ಖಂಡಿಸಿ ಲೇಖನವೊಂದನ್ನು ಪ್ರಕಟಿಸಿದ್ದರಿಂದ, ಅವರ ಜೀವಕ್ಕೆ ಭಾರೀ ಅಪಾಯವಿತ್ತು. ಎರಡೂ ಭಾಷೆ ಗೊತ್ತಿದ್ದುದರಿಂದ, ಅವರು ನಮಗೆ ಇಂಗ್ಲಿಷ್ ಕಲಿಸಲು ಅರ್ಹರಾಗಿದ್ದರು. ಮತ್ತೊಮ್ಮೆ ಕಲಿಯುವ ಅವಕಾಶ ಸಿಕ್ಕಿದ್ದಕ್ಕಾಗಿ ನನಗೆ ಖುಷಿಯಾಯಿತು. ಅವರ ಪಾಠ ಕೇಳುವುದನ್ನೇ ಎದುರು ನೋಡುತ್ತಿದ್ದೆ. ನನ್ನ ಭಾವೋದ್ರೇಕವನ್ನು ಕಂಡು, ಅವರು ನನಗಾಗಿ ಹೆಚ್ಚು ಗಮನ ನೀಡಲಾರಂಭಿಸಿದರು. ಕೆಲವು ವಾರಗಳ ನಂತರ, ನನ್ನನ್ನು ಪಕ್ಕಕ್ಕೆ ಕರೆದು, ನಿನ್ನಲ್ಲಿ ಹೆಚ್ಚು ಸಾಮರ್ಥ್ಯವಿದೆ ಎಂದು ಭಾವಿಸಿರುವುದಾಗಿ ಹೇಳಿದರು. ವೈದ್ಯಳಾಗಬೇಕೆನ್ನುವ ನನ್ನ ಮುಂಚಿನ ಮಹದಾಸೆಯ ವಿಚಾರ ಅವರಿಗೆ ಹೇಳಿದೆ. ಆಗ ಅವರು ಉತ್ಸುಕರಾಗಿ ತಮಗೆ ಗೊತ್ತಿರುವ ಲಂಡನ್ ವಿಶ್ವವಿದ್ಯಾಲಯದ ವೈದ್ಯಕೀಯ ಪ್ರಾಧ್ಯಾಪಕರೊಬ್ಬರು ಭರವಸೆಯುಳ್ಳ ತರುಣ ನಿರಾಶ್ರಿತರ ಶಿಕ್ಷಣಕ್ಕಾಗಿ ಹಣಕಾಸು ನೀಡುವ ತನ್ನ ಉದ್ದೇಶವನ್ನು ವ್ಯಕ್ತಪಡಿಸಿದ್ದರೆಂದು ಹೇಳಿದರು. ಮತ್ತೊಮ್ಮೆ ನಾವು ಭೇಟಿಯಾದಾಗ ಅವರು "ನನ್ನ ಮಿತ್ರರಾಗಿರುವ ಆ ಪ್ರಾಧ್ಯಾಪಕರು ನಿನ್ನನ್ನು ಭೇಟಿ ಮಾಡಲು ಆಸಕ್ತರಾಗಿದ್ದಾರೆ. ನಾನು ಅವರ ಟೆಲಿಫೋನ್ ಸಂಖ್ಯೆಯನ್ನು ಬರೆದಿಟ್ಟಿದ್ದೇನೆ. ಅವರನ್ನು ಎಲ್ಲಿ, ಯಾವಾಗ ಭೇಟಿ ಮಾಡಬಹುದೆಂದು ನೀನು ಏರ್ಪಾಡು ಮಾಡಿಕೊ. ನೀನು ವೈದ್ಯಳಾಗಬೇಕೆಂಬ ನಿನ್ನ ಅಭಿಲಾಷೆಯಿಂದ ಅವರು ಸಂಪನ್ನಗೊಂಡರೆ, ಆ ಕೆಲಸವನ್ನು ನೀನು ಮಾಡಬಲ್ಲೆಯೆಂಬ ಭರವಸೆ ನನಗಿದೆ. ಆಗ ಅವರು ನಿನಗೆ ಪ್ರಾಯೋಜಕತ್ವ ತೋರಿಸುತ್ತಾರೆ. ಈ ಯಂತ್ರದ ಕೆಲಸವನ್ನು ನಿಲ್ಲಿಸಬಹುದು" ಎಂದು ಹೇಳಿದರು. ಇದು ನಿಜವೇ ಎಂದು ನಾನು

ಕೇಳುವಂತಾಯಿತು. ಇದನ್ನು ನಾನು ನಂಬಲಾಗದೆ ಓಟ್ಟೊ ಮತ್ತು ಅಮ್ಮ ನನಗಾಗಿ ಕಾಯುತ್ತಿದ್ದುದರಿಂದ ಮನೆಗೆ ಹೋದೆ, ನಾನು ಕೇಳಿದ್ದ ಸುದ್ದಿಯನ್ನು ಅವರಿಗೆ ಮುಟ್ಟಿಸಿದೆ. ಅವರಿಬ್ಬರೂ ನನ್ನ ಕಡೆ ನೋಡಿದರು. ಅವರು ನನ್ನ ಸಂತೋಷದಲ್ಲಿ ಏಕೆ ಭಾಗಿಯಾಗಲಿಲ್ಲ ಎಂದು ಆಶ್ಚರ್ಯಪಟ್ಟೆ. ಓಟ್ಟೊ ಆಗ ಮೆಲ್ಲಗೆ ಹೇಳಿದ: "ನಿನ್ನ ತಾಯಿಯ ಗತಿ ಏನು? ನಿನ್ನ ಪ್ರಾಯೋಜಕರು ನಿನ್ನ ಅಮ್ಮನನ್ನು ಪರಿಗಣಿಸಿಲ್ಲ ಈ ವ್ಯವಹಾರದಲ್ಲಿ. ನಿನ್ನ ಆರ್ಥಿಕ ಸಹಾಯವಿಲ್ಲದೆ ಅವಳು ಹೇಗೆ ತಾನೆ ನಿಭಾಯಿಸಿಯಾಳು? ನಿನ್ನ ವಿಷಯ ಮಾತ್ರ ನೀನು ಆಲೋಚಿಸುತ್ತೀಯ. ನಿನ್ನ ಕುಟುಂಬಕ್ಕೆ ನೀನು ಮಾಡಬೇಕಾದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಮರೆತು ಬಿಟ್ಟಿರುವಂತೆ ಕಾಣುತ್ತೆ." ಓಟ್ಟೊವಿನ ಮಾತು ಹೊಟ್ಟೆಗೆ ತಿವಿದಂತಾಯಿತು. ನಾನು ಈ ಯಂತ್ರದ ಕೆಲಸ ಜೀವನಪರ್ಯಂತ ಮಾಡಿಕೊಂಡಿರಬೇಕೆಂದು ಹೇಳುತ್ತಾರೆಂದು ನಂಬಿರಲಿಲ್ಲ. ನಾನಂತೂ ಹೀಗೆ ಸಿಕ್ಕಿಹಾಕಿಕೊಂಡಿದ್ದಕ್ಕೆ ಕೋಪಗೊಂಡೆ. ನನ್ನ ಬಗ್ಗೆ ಅವರು ಹೆಮ್ಮೆಪಡಬಹುದು ಎಂದುಕೊಂಡಿದ್ದೆ. ಅದರ ಬದಲು ಸ್ವಾರ್ಥಿ ಎಂದು ನಾನು ಅನ್ನಿಸಿಕೊಳ್ಳಬೇಕಾಯಿತು. ಮುಂದಿನ ತರಗತಿಯಲ್ಲಿ, ನನ್ನ ಪರಿಸ್ಥಿತಿಯನ್ನು ಶಿಕ್ಷಕರಿಗೆ ವಿವರಿಸಿದೆ. ಅವರು ನಾನು ಕೊಟ್ಟ ಕಾರಣಗಳಿಂದ ನಿರಾಶೆಗೊಂಡರು.

ವಾರಗಳು ಕಳೆದಂತೆ, ನಾನು ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತನಾಡು ವಂತಾದೆ. ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಇಂಗ್ಲಿಷ್ ಬಲ್ಲ ಕೆಲಸಗಾರರೊಂದಿಗೆ ಪರಿಚಯ ಮಾಡಿಕೊಂಡೆ. ಅವರಲ್ಲಿ ಬಹಳ ಮಂದಿ ತರುಣಿಯರು, ಕೆಲವರು ಇತ್ತೀಚೆಗೆ ಮದುವೆಯಾದವರು, ಇನ್ನೂ ಮಕ್ಕಳಿಲ್ಲದವರು, ನನ್ನೆದುರಿನ ಬೆಂಚ್‌ನಲ್ಲಿ ಗ್ಲಾದಿರ್ ಮತ್ತು ಮೇರಿ ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದರು.

ಇಪ್ಪತ್ತರ ವಯಸ್ಸಿನಲ್ಲಿದ್ದ ಅವರು ಹಸನ್ಮುಖಿ ಹಾಗೂ ಸ್ನೇಹಶೀಲರಾಗಿದ್ದರು. ಅಗತ್ಯಬಿದ್ದಾಗ ಬಹಳ ಸಹಾಯ ಮಾಡುತ್ತಿದ್ದರು. ಅನೇಕ ವೇಳೆ, ಮೂರು ನಾಲ್ಕು ದಿನಗಳಾಗುವಷ್ಟು ಕಪ್ಪು ಬಿಳಿ ಉಡುಪುಗಳನ್ನು ಹೊಲಿಯಲು ನನಗೆ, ಹಾಗೂ ಅವರಿಗೆ ನಸುಗೆಂಪು ಬಣ್ಣದ್ದು ಕೊಟ್ಟಾಗ, ಅವರಾಗಿಯೇ ನನ್ನ ಕಣ್ಣಿಗಾಗುವ ಆಯಾಸವನ್ನು ತಡೆಯಲು, ಕೆಲಸವನ್ನು ನನ್ನಿಂದ ಬದಲಾಯಿಸಿಕೊಳ್ಳುತ್ತಿದ್ದರು. ಹೀಗೆ ಮಾಡುವುದು ಕಾರ್ಖಾನೆಯ ನಿಯಮಕ್ಕೆ ವಿರುದ್ಧವಾದರೂ ಅದರ ಬಗ್ಗೆ ನಾನಾಗಲಿ, ಅವರಾಗಲಿ, ಗಮನ ಕೊಡಲಿಲ್ಲ. ನನ್ನ ಇಂಗ್ಲೆಂಡಿನ ಸಹ ಕಾರ್ಯಕರ್ತರು ನನ್ನನ್ನು ಸಮಾನವಾಗಿ ಒಪ್ಪಿಕೊಳ್ಳಲು ಸಿದ್ಧರಿದ್ದದ್ದು, ಐಕ್ಯತೆ ಹಾಗೂ ಒಳ್ಳೆಯ ಸ್ವಭಾವದ ಭಾವನೆಯನ್ನು ಉಂಟುಮಾಡಿತ್ತು.

ಇಂಗ್ಲೆಂಡಿನಲ್ಲಿ ತಂಗಿದ್ದ ಮೊದಲ ಕೆಲವು ತಿಂಗಳುಗಳ ಅವಧಿಯಲ್ಲಿ, ಕೆಲಸಕ್ಕೆ ಹೋಗುವುದು ಒಂದೇ ಸಂತೋಷದಾಯಕವಾದ, ಸಾಮಾಜಿಕ ಪ್ರೇರಣೆಯಾಗಿತ್ತು.

ಅಮ್ಮನೊಂದಿಗೆ ಇದ್ದ ಫ್ಲಾಟ್‌ನಲ್ಲಿ ಉಂಟಾಗಿದ್ದ ದುಃಖದ ವಾತಾವರಣಕ್ಕೆ ಹೋಲಿಸಿದರೆ, ಕಾರ್ಖಾನೆಯ ಕೆಲಸದಲ್ಲಿದ್ದ ನಿರಾಳ ಜೀವನವನ್ನು ನಾನು ಆನಂದಿಸಿದೆ. ನಾನು ಯಂತ್ರ ಕೌಶಲ್ಯವನ್ನು ಬೇಗನೆ ಕಲಿತಿದ್ದುದರಿಂದ, ಬೇಗನೆ ಕೆಲಸ ಮಾಡುವವಳೆಂದು ಕರೆಸಿಕೊಂಡು ಒಳ್ಳೆಯ ಸಂಬಳ ಪಡೆಯುವವಳೂ ಆದೆ ನಮ್ಮ ವಿಭಾಗದಲ್ಲಿ. ಹಾಗಾಗಿ, ಒಮ್ಮೊಮ್ಮೆ ನಾನು ಕೆಲಸದಿಂದ ವಿಶ್ರಾಂತಿ ಪಡೆದು, ಕೆಲಸದ ಸಾಮಾಜಿಕ ಆಯಾಮಗಳನ್ನು ಆನಂದಿಸಿದೆ. ಅನೇಕ ತರುಣ ಮಹಿಳೆಯರ ಪರಿಚಯವಾಗಿ, ಅವರೆಲ್ಲ ನಿಜವಾದ ಗೆಳತಿಯರಾದರು. ನನ್ನ ಬಗ್ಗೆ ನಾನು ಹೆಚ್ಚಾಗಿ ಹೊರಗೆಡಹದಿದ್ದರೂ, ಇತರರ ಬಗ್ಗೆ ಸಾಕಷ್ಟು ತಿಳಿದುಕೊಂಡೆ.

ಕೆಲಸದಿಂದ ಆಯಾಸಗೊಂಡರೂ, ಹಸನ್ಮುಖಿಯಾಗಿ ಹಿಂತಿರುಗಿದರೆ, ಅಮ್ಮ ಮತ್ತು ಅನೇಕ ವೇಳೆ ಓಟ್ಟೊ ಉಂಟುಮಾಡಿದ್ದ ಸಮಸ್ಯೆಗಳನ್ನು ಎದುರಿಸ ಬೇಕಾಗಿತ್ತು. ನಮ್ಮ ಫ್ಲಾಟ್ ಜರ್ಮನ್ ಶ್ರಮ ಶಿಬಿರದಿಂದ ಹೊರಬಂದ ನಿರಾಶ್ರಿತರ ತಾಣವಾಗಿತ್ತು. ನಾನು ಬಾಗಿಲ ಬೀಗ ಹಾಕುವಾಗಲೆಲ್ಲಾ, ಕೊನೆ ಪಕ್ಷ, ಗುಳಿಬಿದ್ದ ಕಣ್ಣುಗಳ, ತಲೆ ಬೋಳಿಸಿಕೊಂಡ ಒಬ್ಬನನ್ನಾದರೂ ನೋಡಲು ಸಿದ್ಧಳಿರುತ್ತಿದ್ದೆ. ಅವರು ನಾಜಿ ಬಲಿಪಶುಗಳ ಸಂಕೇತದಂತೆ ತೋರುತ್ತಿದ್ದರು. ಅವರೊಂದಿಗೆ ನಾನು ಸಂಘರ್ಷಕ್ಕೆ ಇಳಿಯಲು ಸಿದ್ಧಳಿರಲಿಲ್ಲ. ಆದರೆ, ಓಟ್ಟೊವಿನ ಹಳೆಯ ಮಿತ್ರರು ಹಾಗೂ ಸಹೋದ್ಯೋಗಿಗಳನ್ನು ಭೇಟಿ ಮಾಡುವ ನನ್ನ ದ್ವಂದ್ವದ ಬಗ್ಗೆ ನಾನು ಯಾರಲ್ಲಿಯೂ ಹೇಳುವ ಧೈರ್ಯ ಮಾಡಲಿಲ್ಲ. ಅತ್ಯಂತ ಅಮಾನವೀಯ ಸ್ಥಿತಿಯಲ್ಲಿ ಅವರು ಹೇಗೆ ಬದುಕಿ ಬಂದರು ಎಂದು ನಾನು ಕೇಳಬೇಕೆನ್ನಿಸಿದ್ದು ನಿಜಕ್ಕೂ ವಿಚಿತ್ರವಾಗಿತ್ತು. ಆದರೂ ಅಂಥ ಸ್ಥಿತಿ ಉಂಟಾಗಲು ಅವರು ಆಸ್ಪದ ಕೊಟ್ಟಿದ್ದಕ್ಕೆ ನಾನು ಅವರನ್ನು ಬೈದುಕೊಂಡೆ.

ಕಾರ್ಲ್ ಒಂದು ದಿನ ಬಂದಾಗ, ನಾನು ಅವನ ಕತೆಯನ್ನು ಕೇಳಲು ಆಸಕ್ತಳಾದೆ. ಅವನು ವಿಯೆನ್ನಾದಲ್ಲಿ ದೊಡ್ಡ ಪೇಟೆಂಟ್ ಎಂಜಿನಿಯರ್ ಆಗಿದ್ದುದಷ್ಟೇ ಅಲ್ಲ, ಹಿಟ್ಲರ್ ಆಸ್ಟ್ರಿಯಾವನ್ನು ವಶಪಡಿಸಿಕೊಳ್ಳುವ ಮೊದಲು, ಅವನೊಬ್ಬ ಕಲಾವಿದ ಮತ್ತು ಸಂಗೀತಗಾರನೂ ಆಗಿದ್ದನು. ೧೯೩೮ರ ಶರತ್‌ಕಾಲದಲ್ಲಿ, ವಿಯೆನ್ನಾದ ಯಹೂದಿಗಳನ್ನು ಬೀದಿಬೀದಿಗಳಲ್ಲಿ ಬಂಧಿಸುತ್ತಿದ್ದಾಗ, ಅವನನ್ನು ಎಳೆದುಕೊಂಡು ಹೋಗಿ ದಾಚೌ ಎಂಬ ಜರ್ಮನ್ ಶ್ರಮಶಿಬಿರವೊಂದರಲ್ಲಿ ಹಾಕಿ, ಎಂಟು ತಿಂಗಳುಗಳಿಗೂ ಹೆಚ್ಚಾಗಿ ಬಂಧಿಸಲಾಗಿತ್ತು ಎಂದು ವಿವರಿಸಿದನು. ಕಾರ್ಲ್ ನಮ್ಮ ಮನೆಗೆ ಊಟಕ್ಕೆ ಬಂದ ರಾತ್ರಿ ಹೊತ್ತು ಅವನು ಹೇಳುತ್ತಿದ್ದ ಎಲ್ಲಾ ದೌರ್ಜನ್ಯಗಳನ್ನು ಹೇಗೆ ಸಹಿಸಿಕೊಂಡು ಇದ್ದೀಯೇ ಎಂದು ನಾನು ಪ್ರಶ್ನೆ ಹಾಕಿದೆ. ತನ್ನ ವಿವೇಕವನ್ನು ಕಾಪಾಡಿಕೊಳ್ಳಲು ಅನೇಕ ವಿಭಿನ್ನ ವಿಧಾನಗಳಿವೆ ಎಂದೂ ಅವನು ವಿವರಿಸಿದನು. ತನ್ನ ಅನುಭವಗಳು ಹಾಗೂ ಅವಲೋಕನಗಳ ವಸ್ತುನಿಷ್ಠ

ದಾಖಲೆಯನ್ನು ಸಂರಕ್ಷಿಸಲು ಮಾನಸಿಕ ದಿನಚರಿಯನ್ನು ಮಾಡಿಕೊಂಡಿದ್ದನೆಂದೂ, ಪ್ರತಿ ರಾತ್ರಿ ಮಲಗುವ ಮುಂಚೆ ಆ ದಿನಗಳ ಘಟನೆಗಳನ್ನೆಲ್ಲಾ ನೆನಪಿನಲ್ಲಿ ಮರುಕಳಿಸುವಂತೆ ಮಾಡುತ್ತಿದ್ದನೆಂದೂ ಹೇಳಿದ. ಅನೇಕ ತಿಂಗಳುಗಳ ನಂತರವೂ ಅವನು ತನ್ನ ಮಾನಸಿಕ ದಿನಚರಿಯಲ್ಲಿ ಮಾಡಿಕೊಂಡಿದ್ದ ನಮೂದುಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದ. ಅವನ ಅನೇಕ ದೈನಂದಿನ ವರದಿಗಳು ಅವನ ಅತಿಯಾದ ಹಸಿವಿನ ಮೇಲೆ ಕೇಂದ್ರೀಕೃತವಾಗಿದ್ದವು. ಒಮ್ಮೊಮ್ಮೆ ಶಿಬಿರದ ಕಾವಲುಗಾರರ ಕ್ಯಾಂಟಿನ್‌ನಿಂದ ಎಸೆಯಲ್ಪಟ್ಟ ಕಸದಲ್ಲಿದ್ದ ಚೂರು ಪಾರನ್ನೂ ಆರಿಸಿಕೊಳ್ಳುತ್ತಿದ್ದುದನ್ನು ಕುರಿತಾಗಿತ್ತು. ಅದನ್ನೂ ಅವನು ಗುಟ್ಟಾಗಿ ಮಾಡಬೇಕಿತ್ತು. ಕಾರಣ ಅವನು ಸಿಕ್ಕಿಹಾಕಿಕೊಂಡ ಅನೇಕ ಸಂದರ್ಭಗಳಲ್ಲಿ ಅವನನ್ನು ಶಿಕ್ಷಿಸಲಾಗಿತ್ತು. ತನ್ನ ಜೀವನದ ಸಂತಸದ ಕ್ಷಣಗಳನ್ನು ಪುನರನುಭವಿಸುವಂತೆ, ತನ್ನ ನೆನಪನ್ನು ಚುರುಕುಗೊಳಿಸಿದ್ದ. ಕಾರ್ಲ್ ಹೆಮ್ಮೆಯಿಂದ ನನಗೆ ಹೇಳಿದ: "ನನ್ನ ಚೈತನ್ಯವು ಶಿಬಿರದ ಮುಳ್ಳಿನ ಬೇಲಿಯನ್ನು ವಿದ್ಯುತ್ ಪ್ರವಾಹವಾಗದಂತೆ, ಭೇದಿಸಿಕೊಂಡು ಹೋಯಿತು. ಚೈತನ್ಯವು ಮುಕ್ತವಾದುದು. ಅವುಗಳನ್ನು ಬಂಧಿಸಲು ಸಾಧ್ಯವಿಲ್ಲ." ಕಾರ್ಲ್‌ನಿಂದಾಗಿ ನಾನು ಮನಸ್ಸಿನ ಶಕ್ತಿಯಲ್ಲಿ ನಂಬಿಕೆ ಇಡಲಾರಂಭಿಸಿದೆ.

ವಾರಗಳು, ತಿಂಗಳುಗಳು ಕಳೆದಂತೆ, ನಮಗೆ ಅಪ್ಪನ ಬಗ್ಗೆ ಚಿಂತೆ ಹೆಚ್ಚಾಯಿತು. ಅವರು ಯಾವಾಗ ನಮ್ಮನ್ನು ಇಂಗ್ಲೆಂಡಿನಲ್ಲಿ ಸೇರಬಹುದು ಎಂಬುದರ ಬಗ್ಗೆ ಸುದ್ದಿ ಇರಲಿಲ್ಲ. ಅವರನ್ನು ಆಲ್ಬೇನಿಯಾದಲ್ಲೇ ಬಿಟ್ಟರೆ ಅವರು ಇನ್ನು ಹೆಚ್ಚು ಮಂಕಾಗಿ ಧೈರ್ಯ ಕಳೆದುಕೊಳ್ಳಬಹುದೆಂದು ನನಗೆ ಗೊತ್ತಿತ್ತು. ಅವರ ಆ ಮನಃಸ್ಥಿತಿಗೆ ಅಪ್ಪನನ್ನು ದೂಷಿಸುವುದು ಸರಿಯಲ್ಲವೆಂದು ನನಗೆ ಅರಿವಾಗಿದ್ದರೂ, ಅವರು ಬರೆಯುತ್ತಿದ್ದ ಕರುಣಾಪೂರಿತ ಪತ್ರಗಳನ್ನು ದ್ವೇಷಿಸದೆ ಇರಲು ಸಾಧ್ಯವಿರಲಿಲ್ಲ. ಅವುಗಳಿಗೆ ನಾವು ಸಕಾರಾತ್ಮಕವಾಗಿಯೇ ಉತ್ತರಿಸಬೇಕಿತ್ತು. ಅಪ್ಪನೂ ಕಾರ್ಲ್‌ನಂತೆಯೇ ಇರಲು ಏಕೆ ಸಾಧ್ಯವಾಗಲಿಲ್ಲ ಎಂದು ಆಶ್ಚರ್ಯಪಡುತ್ತಿದ್ದೆ. ಕೊನೆಗೆ, ಅಪ್ಪನ ಪರ್ಮಿಟ್ ಸಿಕ್ಕ ಸುದ್ದಿ ನಮಗೆ ದೊರೆಯಿತು. ಕೆಲವೇ ವಾರಗಳಲ್ಲಿ ಅವರು ಲಂಡನ್ ತಲುಪಿದರು. ಕುರ್ಟ್ ಸಹ ನಮ್ಮ ಕುಟುಂಬದ ಮತ್ತೊಂದು ಪುನರ್ಮಿಲನದಲ್ಲಿ ಭಾಗಿಯಾದನು. ಕೆಲವು ದಿನಗಳವರೆಗಾದರೂ ಜೀವನ ಚಿಂತೆಯಿಂದ ಮುಕ್ತವಾಯಿತು. ನಾವು ಐವರು ಸಂಯುಕ್ತ ಕುಟುಂಬವಾಗಿದ್ದಕ್ಕೆ ಸಂತೋಷಪಟ್ಟೆವು. ಅನೇಕ ನಿರಾಶ್ರಿತರಿಗೆ ದಕ್ಕದೆ ಇದ್ದದ್ದು ಅದೃಷ್ಟವಶಾತ್ ನಾವು ಸಾಧಿಸಿದ್ದೆವು. ಆ ಸಮಯದಲ್ಲಿ ನಮ್ಮ ಬಾಳ ಕ್ಷಿತಿಜದಲ್ಲಿ ಉಂಟಾದ ಒಂದೇ ಒಂದು ಕಾರ್ಮೋಡವೆಂದರೆ ಓಟ್ಟೊ ಒಂದು ವಾರದ ನಂತರ ಆಸ್ಟ್ರೇಲಿಯಾಕ್ಕೆ ತೆರಳಬೇಕಾಗಿ ಬಂದದ್ದು. ಆದರೂ ನಾನು ರೂತ್‌ನ ಜೀವನ ದರ್ಶನವನ್ನು ನೆನಪಿಸಿಕೊಂಡು ಅದನ್ನೇ ಇದ್ದುದರಲ್ಲಿ ಚೆನ್ನಾಗಿ ಉಪಯೋಗಿಸಿಕೊಂಡೆ.

ಓಟ್ಗೊ ಹೊರಡುತ್ತಿರುವುದರ ಬಗ್ಗೆ ನನಗೆ ಮಿಶ್ರಿತ ಭಾವನೆಗಳಿದ್ದವು; ನನ್ನ ಉದ್ಯೋಗದ ವಿಚಾರವಾಗಿ ನಾನು ಅವನಿಂದ ಸ್ವಲ್ಪ ಬೇರ್ಪಟ್ಟಿದ್ದರೂ, ನಾನು ಅವನನ್ನು ಆರಾಧಿಸುತ್ತಿದ್ದೆ. ಅವನ ಮಾರ್ಗದರ್ಶನ ಮತ್ತು ಬೆಂಬಲವನ್ನು ಬಯಸುತ್ತಿದ್ದೆ. ಆದರೂ, ಅವನು ನಮ್ಮನ್ನು ಬಿಟ್ಟು ಹೋಗುತ್ತಿರುವ ಬಗ್ಗೆ ಕೋಪಗೊಂಡೆ. ಅಮ್ಮ ಅಪ್ಪನ ಜವಾಬ್ದಾರಿಯನ್ನು ನನ್ನ ಮೇಲೆ ಬಿಟ್ಟು ಹೋಗುತ್ತಿರುವ ಅವನಿಗೆ ನನ್ನನ್ನು ಸ್ವಾರ್ಥಿ ಎಂದು ಕರೆಯಲು ಎಷ್ಟು ಧೈರ್ಯ ! ನಮ್ಮ ಕುಟುಂಬವನ್ನು ಇಂಗ್ಲೆಂಡಿನಲ್ಲಿ ಒಟ್ಟುಗೂಡಿಸಲು ಅಷ್ಟೊಂದು ಕಷ್ಟಪಟ್ಟ ಮೇಲೆ ನಾವು ಮತ್ತೆ ಇಷ್ಟು ಬೇಗ ವಿಭಜನೆಯಾಗುತ್ತಿರುವುದನ್ನು ನನಗೆ ನಂಬಲಾಗಲಿಲ್ಲ. ಓಟ್ಗೊ ನಮಗೆ ಭರವಸೆ ಕೊಡಲಾರಂಭಿಸಿದ. ಮುಂಗಡವಾಗಿ ತಾನು ಆಸ್ಟ್ರೇಲಿಯಾಕ್ಕೆ ಹೋಗಿ ಅನಂತರ ನಾವುಗಳು ಅವನನ್ನು ಹಿಂಬಾಲಿಸಲು ವ್ಯವಸ್ಥೆ ಮಾಡುತ್ತೇನೆಂದು, ಅವನ ಭರವಸೆಗಳನ್ನು ನಾವು ಹತಾಶೆಯಲ್ಲೂ ನಂಬುತ್ತೇವೆಂದುಕೊಂಡರೂ, ದೂರದಲ್ಲಿದ್ದ ಯುದ್ಧದ ಬೆದರಿಕೆಯಿಂದ ಅವನು ಅವುಗಳನ್ನು ಈಡೇರಿಸುತ್ತಾನೆಯೇ ಎಂಬ ಸಂದೇಹಗಳು ಉಂಟಾದುವು.

ಓಟ್ಗೊವಿನ ನಿರ್ಗಮನದಿಂದಾಗಿ ನನ್ನ ಜೀವನದಲ್ಲಿ ದೊಡ್ಡ ಶೂನ್ಯ ವುಂಟಾಯಿತು. ನಾನು ನಮ್ಮ ಸಮಸ್ಯೆಗಳೆಲ್ಲವನ್ನೂ ಅವನ ಬಳಿ ಚರ್ಚಿಸಿ, ಅವನ ಸಲಹೆಯನ್ನು ಪಡೆಯುತ್ತಿದ್ದೆ. ಅವನೀಗ ಹೊರಟುಹೋದ ಮೇಲೆ ನಾನೇ ನಾನಾಗಿದ್ದೆ. ಏನು ಮಾಡಬೇಕೆಂದು ಅಮ್ಮ ಹೇಳುವುದನ್ನು ಬಹಳ ಹಿಂದೆಯೇ ನಿಲ್ಲಿಸಿದ್ದಳು. ಈಗ ಅವಳು ನನ್ನಿಂದ ಮಾರ್ಗದರ್ಶನಕ್ಕಾಗಿ ಕಾದಳು. ಅಪ್ಪನಿಂದ ಹೆಚ್ಚು ಸಹಾಯವೇನಿರಲಿಲ್ಲ. ಕಾರಣ, ತಮ್ಮ ಪುನರ್ಮಿಲನದ ಕೆಲವು ದಿನಗಳ ಮಧುಚಂದ್ರ ಮುಗಿದ ಮೇಲೆ ಅವರು ತನ್ನ ಹತಾಶ ಸ್ಥಿತಿಗೆ ಮರಳಿದರು. ಯುಗೋಸ್ಲಾವಿಯವನ್ನು ಬಿಟ್ಟಾಗಿನಿಂದ ತನ್ನ ಹೆಂಡತಿ ಮಕ್ಕಳನ್ನು ಸಾಕಲಾರದ್ದಕ್ಕೆ ಅವರಿಗೆ ಅಪರಾಧಿ ಭಾವನೆ ಉಂಟಾಗಿತ್ತು. ತನಗೊಂದು ಉದ್ಯೋಗ ದೊರೆಯುವುದು ಅಸಾಧ್ಯ ಎಂಬ ವಿಷಯದ ಬಗ್ಗೆ ಅವರಿಗೆ ಕೋಪವಿತ್ತು. ಅದೇ ನಾನು ಚಿಕ್ಕ ಹುಡುಗಿಯಾದರೂ ಆಗಲೇ ಯಂತ್ರ ಕುಶಲಿಯಾಗಿ, ಕುಟುಂಬದ ಏಕಮಾತ್ರ ಆದಾಯ ಸಂಪಾದಿಸುವವಳಾಗಿದ್ದೆ. ಪಾಪ, ಅಮ್ಮ ಅವರಲ್ಲಿ ಉತ್ಸಾಹ ಮೂಡಿಸುವ ಕಷ್ಟಕರವಾದ ಕೆಲಸದಲ್ಲಿದ್ದಳು. ಪ್ರತಿ ರಾತ್ರಿಯೂ ಅವರು ಮಲಗುವ ಮುನ್ನ, ಹೇಳುತ್ತಿದ್ದುದೆಂದರೆ "ನಾಳೆ ಬೆಳಿಗ್ಗೆ, ನಾನು ಮತ್ತೆ ಎದ್ದೇಳಬೇಕಾಗದಿದ್ದರೆ ಸಾಕು" ಎಂದು. ಅವನು ತನ್ನ ಮಕ್ಕಳಿಂದ ನಿರೀಕ್ಷಿಸುತ್ತಿದ್ದ ಗೌರವವನ್ನು ನೀಡಬೇಕೆಂದು ಅಮ್ಮ ನನಗೆ ಪದೇ ಪದೇ ಹೇಳುತ್ತಿದ್ದಳು. ಅವರ ಮುದ್ದಿನ ಮಗಳಾಗಿರಲು ನಾನು ಕಷ್ಟಪಟ್ಟೆ. ಆದರೆ, ನಮ್ಮ ಪಾತ್ರಗಳು ತಿರುಗುಮುರುಗುವಿನಿಂದಾಗಿ ಅದು ಕಷ್ಟವಾಗಿತ್ತು. ಕಾರಣ ನಾನೊಬ್ಬ ಅನ್ನ ಸಂಪಾದಿಸುವವಳು ಮಾತ್ರವಲ್ಲ, ಅವರ

ವ್ಯಾಖ್ಯಾನಕಾರಳು ಹಾಗೂ ಇಂಗ್ಲಿಷ್ ಶಿಕ್ಷಕಿಯೂ ಆಗಿದ್ದೆ. ಅಪ್ಪನಂತೂ ನೀರಿನಿಂದ ಬೇರ್ಪಟ್ಟ ಮೀನಿನಂತಾಗಿದ್ದರು. ಮತ್ತೊಮ್ಮೆ ನಾನು ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊರಬೇಕಾಯಿತು. ನನ್ನ ಜೀವನ ನನ್ನದಾಗುತ್ತದೆಯೇ ಎಂದು ಆಶ್ಚರ್ಯಪಟ್ಟೆ.

* * * *

## ೭. ಯುದ್ಧದ ಸಮಯ

ಅದು ೧೯೩೯ರ ಸೆಪ್ಟೆಂಬರ್. ಮಿತ್ರರಾಷ್ಟ್ರಗಳು ಕೊನೆಗೂ ಹಿಟ್ಲರನ ವಿರುದ್ಧ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದರಲ್ಲಿದ್ದವು. ಆದರೂ ಯುದ್ಧದ ಪ್ರಾರಂಭದ ಬಗೆಗೆ ನಾವು ಸಮ್ಮಿಶ್ರ ಭಾವನೆಗಳನ್ನು ಹೊಂದಿದ್ದೆವು. ತಾನು ಉಂಟುಮಾಡಿದ ಎಲ್ಲ ಬವಣೆಗಳ ನಂತರವಾದರೂ ಹಿಟ್ಲರನು ಸೋಲುವುದನ್ನು ನೋಡಲು, ನಿಸ್ಸಂಶಯವಾಗಿಯೂ ನಾವೆಲ್ಲರೂ ಕಾತರರಾಗಿದ್ದೆವು. ಆದರೆ, ಅದೇ ವೇಳೆಗೆ ಜರ್ಮನಿಯ ಆಳ್ವಿಕೆಯಲ್ಲಿ ಉಳಿದುಹೋಗಿ, ತಪ್ಪಿಸಿಕೊಳ್ಳುವ ಅವಕಾಶವೂ ಹೇಗೂ ಇಲ್ಲದೇ ಹೋಗಿದ್ದ ನಮ್ಮ ಅನೇಕ ಮಿತ್ರರು ಹಾಗೂ ಕುಟುಂಬಗಳ ಬಗೆಗೆ ನಾವು ಕಾಳಜಿಯನ್ನು ಹೊಂದಿದ್ದೆವು. ಅಮ್ಮನ ಹೆಚ್ಚಿನ ಬಂಧುಗಳೆಲ್ಲರೂ ಇನ್ನೂ ಯುಗೋಸ್ಲೋವಿಯಾದಲ್ಲೂ ಅಪ್ಪನ ಬಂಧುಗಳು ಇನ್ನೂ ಜೆಕೋಸ್ಲೋವಾಕಿಯಾದಲ್ಲೂ ಇದ್ದರು. ಅವರುಗಳು ಅಲ್ಲಿಂದ ಹೊರಡಲು, ಅವರ ಪ್ರವೇಶಾನುಮತಿಯನ್ನು ಪಡೆದುಕೊಳ್ಳಲು ನಾವೂ ಅವರಿಗೆ ಸಹಾಯ ಮಾಡಬೇಕೆಂದು ಹಲವು ಕಛೇರಿಗಳನ್ನು ಸುತ್ತಿದೆವು. ಆದರೆ, ಅರ್ಜಿಗಳ ವಿಷಯದಲ್ಲಿ ಅಧಿಕಾರಿಗಳ ಕಾರ್ಯವಿಧಾನವು ಅತಿ ಬೇಸರಪಡಿಸುವಷ್ಟು ನಿಧಾನವಾಗಿದ್ದಿತು. ಈಗಂತೂ ಯುದ್ಧವೂ ಸಹ ಪ್ರಾರಂಭವಾಗಿದ್ದು, ಅವರುಗಳು ಬಹುತೇಕ ಖಂಡಿತ ವಾಗಿಯೂ ಕ್ಯಾಂಪ್‌ಗಳಲ್ಲಿ ಸತ್ತುಹೋಗುತ್ತಾರೆಂದು ನಾವು ಭಯಭೀತರಾದೆವು. ಶೀಘ್ರದಲ್ಲೇ ಪ್ರಾರಂಭವಾಗಲಿರುವ ಯುದ್ಧದಿಂದ, ಆಸ್ಟ್ರೇಲಿಯಾದಲ್ಲಿ ಓಟ್ಟೊವನ್ನು ಸೇರಬೇಕೆನ್ನುವ ನಮ್ಮ ಯೋಜನೆಗಳನ್ನು ಮುಂದಕ್ಕೆ ಹಾಕಿಕೊಳ್ಳಬೇಕಾಗುತ್ತದೆ ಎಂದಾಗಿತ್ತು.

ನಾವು ಇಂಗ್ಲೆಂಡಿನಲ್ಲೇ ಇರಬೇಕಾಗುತ್ತದೆ ಎಂದು ನಮ್ಮನ್ನು ನಾವೇ ಸಮಾಧಾನ ಪಡಿಸಿಕೊಂಡೆವು. ಯುದ್ಧಕ್ಕೆ ಸಿದ್ಧರಾದೆವು. ಇಂಗ್ಲೆಂಡಿನ ಇತರ ಕುಟುಂಬಗಳಂತೆ ನಾವೂ ನಮ್ಮ ಮನೆಯ ಕಿಟಕಿಗಳ ಬಾಗಿಲುಗಳನ್ನು ಮುಚ್ಚಿದೆವು.

ಆದರೆ, ನಾವು ಹೊರದೇಶೀಯ ನ್ಯಾಯಾಲಯಗಳಿಗೆ ಹೋಗಬೇಕಾಗುತ್ತಿತ್ತು. ಅಲ್ಲಿ ಜರ್ಮನಿಯ ಪ್ರತಿ ನಮ್ಮ ರಾಜನಿಷ್ಠೆ, ಅಂತೆಯೇ ಒಕ್ಕೂಟದ ಹೋರಾಟಕ್ಕೆ (ಉದ್ದೇಶ) ನಮ್ಮ ನಿಷ್ಠೆಯನ್ನು ಪರೀಕ್ಷಿಸಲಾಗುತ್ತಿತ್ತು. ಬ್ರಿಟಿಷ್ ನಾಗರಿಕರಿಗೆ ಈ ರಗಳೆ ಇರುತ್ತಿರಲಿಲ್ಲ. ನಾವಂತೂ ಸ್ಪಷ್ಟವಾಗಿಯೂ ಅಸಂಗತ ವಿಧಿ ವಿಕೋಪ ಸನ್ನಿವೇಶದಲ್ಲಿದ್ದೆವು. ಕಾರಣ, ನಾವುಗಳು ನಮ್ಮ ಜರ್ಮನಿಯ

ಪಾಸ್‌ಪೋರ್ಟ್‌ನೊಂದಿಗೆ ಇಲ್ಲಿಗೆ ಬಂದಿದ್ದೆವು. ಹಾಗಾಗಿ ಇಂಗ್ಲೆಂಡ್ ಈಗ ಯುದ್ಧ ಮಾಡುತ್ತಿರುವ ಒಂದು ದೇಶದ ನಾಗರಿಕರಾಗಿಯೇ ಉಳಿದಿದ್ದೆವು. ಆದರೂ ನಮ್ಮಲ್ಲಿ ಪ್ರತಿಯೊಬ್ಬರ ಪಾಸ್‌ಪೋರ್ಟ್‌ನ ಮುಖ ಪುಟದಲ್ಲೂ ಒಂದು ದೊಡ್ಡ ಕೆಂಪು ಬಣ್ಣದ 'ಜೆ' ಅಕ್ಷರವಿದ್ದು, ಅದು ನಾವುಗಳು ಜ್ಯೂಗಳೆಂದೂ, ಅದರಿಂದಾಗಿ ಜರ್ಮನಿಯಲ್ಲಿ ಅನಪೇಕ್ಷಿತ ಪ್ರಜೆಗಳಾಗಿ ನಮ್ಮನ್ನು ನೋಡ ಲಾಗುತ್ತಿರುವುದೆಂದೂ ಸೂಚಿಸುತ್ತಿತ್ತು. ಇದು ಬ್ರಿಟಿಷ್ ನ್ಯಾಯಪದ್ಧತಿ(ಕ್ರಮ)ಯನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಿತು. ಬಹಳ ಚರ್ಚೆಯಾದ ನಂತರ, ನಮ್ಮ ನೋಂದಣಿ ಪತ್ರ(ಕಾರ್ಡುಗಳ)ಗಳ ಮೇಲೆ ನಮ್ಮನ್ನು 'ಸ್ನೇಹಭಾವದ ಶತ್ರುದೇಶೀಯರು' ಎಂದು ಹೆಸರಿಸಲಾಯಿತು.

ಯುದ್ಧದ ಮೊದಲ ಕೆಲವು ತಿಂಗಳುಗಳಲ್ಲಿ ಜೀವನವು ಎಂದಿನಂತೆ ಸಾಮಾನ್ಯವಾಗಿ ಸಾಗಿತು. ನಾನು ಒಬ್ಬ ಯಂತ್ರಗಾರ್ತಿ (ಹೊಲಿಗೆ ಕೆಲಸ ಮಾಡುವವ ಳಾಗಿ)ಯಾಗಿ ಕೆಲಸ ಮುಂದುವರೆಸಿದೆ. ಆಗಲೇ ನನ್ನ ತಾಯಿ ತಂದೆಯರು ಇಂಗ್ಲಿಷ್ ಪಾಠಗಳನ್ನು ಕಲಿಯುತ್ತಾ ಮನೆಗೆಲಸಗಳನ್ನೂ ನೋಡಿಕೊಳ್ಳುತ್ತಿದ್ದರು. ಕರ್ಟ್‌ನು ಇನ್ನೂ ಮ್ಯಾಂಚೆಸ್ಟರನಲ್ಲಿಯೇ ಇದ್ದನು. ನಮ್ಮಿಂದ ದೂರವಾಗುತ್ತಿರುವ ಭಾವನೆಯು ಅತಿಹೆಚ್ಚಾಗಿ ಅವನು ನಮ್ಮೆಲ್ಲರನ್ನೂ ಮ್ಯಾಂಚೆಸ್ಟರ್‌ಗೆ ಕರೆಸಿಕೊಳ್ಳುವ ಸಾಧ್ಯತೆಯನ್ನು ಹುಡುಕತೊಡಗಿದನು ಹಾಗಾದರೆ, ನಾವೆಲ್ಲರೂ ಮತ್ತೊಮ್ಮೆ ಒಟ್ಟಾಗಿ ಇರುವಂತಾಗುತ್ತದೆ ಎಂದು. ಈ ವಿಷಯವನ್ನು ನಮಗೆ ಮನಗಾಣಿಸಲು ಪ್ರಯತ್ನಿಸಬೇಕೆಂದೇ ಅವನು ಲಂಡನ್‌ಗೆ ಬಂದನು. ಏಕೆಂದರೆ, ನಾವು ನಮ್ಮ ಎರಡು ರೂಮುಗಳ ಫ್ಲಾಟ್‌ಗೆ ಕೊಡುತ್ತಿರುವ ಬಾಡಿಗೆಗಿಂತಲೂ ಕಡಿಮೆ ಬಾಡಿಗೆಗೆ ಅವನೊಂದು ಸುಂದರವಾದ ಮನೆಯನ್ನು ಅದಾಗಲೇ ನೋಡಿದ್ದನು. ಸೈನಿಕರ ಸಮವಸ್ತ್ರಗಳಿಗಾಗಿ ಸರ್ಕಾರವು ನೀಡುವ ಗುತ್ತಿಗೆಗಳ ಪ್ರತಿಫಲವಾಗಿ ಮ್ಯಾಂಚೆಸ್ಟರ್‌ನಲ್ಲಿ ಎಲ್ಲೆಲ್ಲೂ ಕೈಗಾರಿಕೆಗಳು ಹುಟ್ಟಿಕೊಳ್ಳು ತ್ತಿರುವುದರಿಂದ ಅಲ್ಲಿ ಒಬ್ಬ ಯಂತ್ರಗಾರ್ತಿಯಾಗಿ ನನಗೆ ಕೆಲಸ ಸಿಗುವುದು ಸುಲಭವೆಂದು ಅವನು ಹೇಳಿದನು. ಅಪ್ಪನಿಗೂ ಕೆಲಸ ಸಿಗುವುದು ಸಾಧ್ಯವಾಗ ಬಹುದೆಂದೂ ಸಹ ಅವನು ಸೂಚನೆ ಕೊಟ್ಟನು. ಇದು ನಿರ್ಣಾಯಕ ಪರಿಸ್ಥಿತಿ ಯಾಗಿತ್ತು. ಅಂತೆಯೇ ಒಂದೆರಡೇ ವಾರಗಳಲ್ಲಿ ನಾವೆಲ್ಲರೂ ಸಾಟ್‌ಫೋರ್ಡ್‌ಗೆ (ಸ್ಯಾಟ್‌ಫರ್ಡ್) ಹೋಗುವವರಿದ್ದೆವು. ಒಳ್ಳೆಯ ಸಂಬಳ ಬರುವ ಕೆಲಸವೂ, ಮಿತ್ರರ ಸಮೂಹವೂ ಇದ್ದುದರಿಂದ ನನಗೆ ಲಂಡನ್ ಬಿಟ್ಟು ಹೊರಡಲು ದುಃಖವಾಗಿತ್ತು. ಆದರೆ, ನಾನೇನಾದರೂ ಹೇಳಿದ್ದಿದ್ದರೆ ನನ್ನ ಅಡ್ಡ ಮಾತನ್ನು ಸುಮ್ಮನೆ ತಳ್ಳಿಹಾಕಲಾಗುತ್ತಿತ್ತು ಎಂದು ನನಗೆ ತಿಳಿದಿತ್ತು.

ಸ್ಯಾಟ್‌ಫೋರ್ಡ್‌ನಲ್ಲಿನ ಚಿಕ್ಕ ಬೀದಿಯೊಂದರಲ್ಲಿ ನಾವು ನೆಲೆಸಲು ಕರ್ಟ್‌ನು ತನ್ನ ಶಕ್ತಿ ಮೀರಿ ನಮಗೆ ಸಹಾಯ ಮಾಡಿದ. ಆ ಬೀದಿಯಲ್ಲಿ ಮುಖ್ಯವಾಗಿ

ಹೆಚ್ಚು ಜನ ಯಹೂದಿಗಳೇ ನೆಲೆಸಿದ್ದರು. ಅದು ತಾರಸಿಯ ಮನೆಯಾಗಿತ್ತು. ಅಲ್ಲೇ ಮುಂದೆ ಒಂದು ಪುಟ್ಟದಾದ ಆದರೆ ಸುಂದರವಾದ ಹೂದೋಟವೂ ಇತ್ತು. ಬಹಳ ಬೇಗನೇ ನಾವು ಆ ಮನೆಗೆ ಹೊಂದಿಕೊಂಡೆವು. ಬೇರು ಕಿತ್ತು ಬಂದ ಸ್ಥಿತಿಯು ನನಗೆ ರೂಢಿಯಾಗಲಾರಂಭಿಸಿತು. (ಬೇರು ಕಿತ್ತು ಬಂದವಳಾಗಿ ಈಗ ನಾನು ಹೊಂದಿಕೊಳ್ಳತೊಡಗಿದೆ). ಅದರಿಂದ ಬಹಳ ಬೇಗನೇ ಜೀವನವು ಒಂದು ಪರಿಚಿತ ನಿತ್ಯ ಕ್ರಮದಲ್ಲಿ ನೆಲೆಯಾಯಿತು ಯಂತ್ರಗಾರ್ತಿಯಾಗಿಯೇ ನನಗೆ ಇನ್ನೊಂದು ಕೆಲಸ ಸಿಕ್ಕಿತು. ಅಲ್ಲಿ ಭೂಸೇನೆಯ ಕಾರ್ಯಕಾರಿ ವರ್ಗಕ್ಕೆ ಡೆನಿಮ್ ಬಟೆಯ ಟ್ರೌಸರ್ಸ್‌ಗಳನ್ನು (ಪ್ಯಾಂಟುಟ್ಟೆ, ಷರಾಯಿ) ಸಿದ್ಧಪಡಿಸಲಾಗುತ್ತಿತ್ತು. ಹತ್ತಿರದ ಯಹೂದಿ ತರಕಾರಿ ಅಂಗಡಿಯವನಿಂದ ಬಿಟ್ಟಿಯಾಗಿ ಸಂಗ್ರಹಿಸಿದ್ದ ಕಿತ್ತಳೆ ಪೆಟ್ಟಿಗೆಗಳಿಂದ ಪೀಠೋಪಕರಣಗಳನ್ನು ಮಾಡುವುದರಲ್ಲಿ ಅಪ್ಪ ಕಾರ್ಯಮಗ್ನರಾದರು. ಅಮ್ಮ ಮನೆಯ ಸುತ್ತಲು ಅವ್ಯವಸ್ಥಿತವಾಗಿ, ಆದರೆ, ಹಿತವಾಗಿ ತೋಟದ ಕೆಲಸ ಮಾಡಿಕೊಂಡಿರುತ್ತಾ, ಅದನ್ನೊಂದು ಮನೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಳು. ತನಗೆ ಬೇಕಾದುದನ್ನು ತರಲು ಜಾಗರೂಕತೆಯಿಂದ ಮನೆಯಿಂದ ಹೊರಗೆ ಹೋಗುವ ಧೈರ್ಯ ಮಾಡಿದಳು.

ನಾವು ಬಂದ ಕೂಡಲೇ, ಗ್ರೇಟ್‌ಬ್ರಿಟನ್‌ನಲ್ಲಿ ನಡೆಯುವ 'ಯಂಗ್ ಆಸ್ಟ್ರಿಯಾ'ದ ಸಭೆಯೊಂದಕ್ಕೆ ಕರ್ಟ್ ನನ್ನನ್ನು ಆಹ್ವಾನಿಸಿದನು. ಯುವ ಆಸ್ಟ್ರಿಯನ್ ನಿರಾಶ್ರಿತರು ರೂಪಿಸಿದ ಯುವ ಸಮುದಾಯವು ಇದಾಗಿದ್ದು, ಕರ್ಟ್‌ನು ಇದರ ಒಬ್ಬ ಪ್ರಮುಖ ಸದಸ್ಯನಾಗಿದ್ದನು. ಅವನು ತನ್ನ ಅನೇಕ ಗೆಳೆಯರಿಗೆ ನನ್ನನ್ನು ಪರಿಚಯಿಸಿದನು. ಈ ವರ್ಷಗಳಲ್ಲಿ ಮೊಟ್ಟ ಮೊದಲ ಬಾರಿಗೆ ನಾನು ನನ್ನನ್ನೇ ಆಸ್ವಾದಿಸತೊಡಗಿದೆ. ಜೊತೆಗೆ ಒಂದು ರೀತಿಯ ಸಾಮಾಜಿಕ ಜೀವನವನ್ನು ಹೊಂದಿದವಳಾದೆ. ಲಂಡನ್‌ನಲ್ಲಿ ನಾನು ಎಂತಹ ಸನ್ಯಾಸಿನಿ ಜೀವನವನ್ನು ನಡೆಸುತ್ತಿದ್ದೆ ಎಂದು ಅರಿತುಕೊಂಡ ನಾನು ಅದಕ್ಕೆ ಪ್ರತೀಕಾರ ಮಾಡುವಂತೆ ನನ್ನ ಹೊಸ ಸಾಮಾಜಿಕ ಜೀವನಕ್ಕೆ ನನ್ನನ್ನೇ ತೆತ್ತುಕೊಂಡೆ. ಲಂಡನ್‌ನಲ್ಲಿ ನನ್ನ ಕೈಗಾರಿಕಾ (ಫ್ಯಾಕ್ಟರಿ ಜೀವನ) ಜೀವನವೇ ನನ್ನ ಸಾಮಾಜಿಕ ಜೀವನವಾಗಿತ್ತು. ಆದರೆ, ಸ್ಯಾಟ್‌ಫೋರ್ಡ್‌ನಲ್ಲಿ ಅದನ್ನು ನಾನು ಹೊಟ್ಟೆ ಹೊರೆಯುವ ಒಂದು ಮಾರ್ಗವಾಗಿ ಮಾತ್ರ ನೋಡುತ್ತ, ನನ್ನ ಮನರಂಜನೆಯನ್ನು ಬೇರೆಡೆಯಲ್ಲಿ ಕಂಡುಕೊಂಡೆ. ನಾನು ಕಂಡಿದ್ದುದಕ್ಕಿಂತಲೂ, ಕರ್ಟ್‌ನು ಬಹಳ ಹೆಚ್ಚಾಗಿಯೇ ಸಂತೋಷದಿಂದಲೂ ಆರೋಗ್ಯದಿಂದಲೂ ಇದ್ದನು. ನಾವು ಪ್ರತ್ಯೇಕವಾಗಿದ್ದಾಗ ಅವನು ಮನ ಬಿಚ್ಚಿ ಮಾತನಾಡುತ್ತಿದ್ದನು. ನಾವು ನಮ್ಮ ಜೀವನದಲ್ಲಿ ಮೊಟ್ಟ ಮೊದಲಿಗೆ, ನಿಜಕ್ಕೂ ಚೆನ್ನಾಗಿ ಹೊಂದಿಕೊಂಡಿದ್ದೆವು. ಅವನ ಸ್ಫುರದ್ರೂಪು ಅನೇಕ ಹುಡುಗಿಯರನ್ನು ಆಕರ್ಷಿಸಿದ್ದಿತು. ಅವರುಗಳು ಅವನ ಹೃದಯಕ್ಕೆ ದಾರಿ ಅವನ ತಂಗಿಯ ಜೊತೆ ಗೆಳೆತನ ಬೆಳೆಸುವುದರಲ್ಲಿದೆ ಎಂದು

ಭಾವಿಸಿದ್ದರು. ಹೀಗಾಗಿ, ಒಯ್ಯಾರ ನಿಪುಣೆಯಾಗಿದ್ದ ನಾನು ಹುಡುಗರಲ್ಲಷ್ಟೇ ಅಲ್ಲದೆ, ಬಹಳ ಬೇಗನೇ ಆ ಗುಂಪಿನ ತರುಣಿ ಸದಸ್ಯೆಯರಲ್ಲೂ ಜನಪ್ರಿಯಳಾದೆ.

ಇಂಥ ಆಸ್ವಾದನೀಯ ಜೀವನಕ್ಕೆ ನಾನು ಹೊಂದಿಕೊಳ್ಳುತ್ತಿರುವಾಗಲೇ, ಮಿತ್ರ ರಾಷ್ಟ್ರಗಳ ಅದೃಷ್ಟವು ಬದಲಾಯಿತು. ಫ್ರಾನ್ಸ್ ಸೋತಿತು. ಇದು ಬ್ರಿಟಿಷ್ ಸರಕಾರ ವರ್ಗವನ್ನು ಒಂದು ಮೊಂಡ ಭೀತಿಗೆ (ಗುಪ್ತ ಭೀತಿ) ನೂಕಿತು. ತಮ್ಮ ನಡುವೆ ಇರಬಹುದಾದ ಜರ್ಮನ್ ಗೂಢಚಾರರಿಗೆ ಹೆದರಿ, ಯಾರು 'ಸ್ನೇಹಭಾವದ ಶತ್ರುದೇಶೀಯರು' ಎಂದು ನೋಂದಾಯಿಸಲ್ಪಟ್ಟಿದ್ದರೋ ಅವರನ್ನು ಒಳಗೊಂಡಂತೆ ಅವರು ಎಲ್ಲ 'ಶತ್ರುಪರದೇಶಿಯ' ಪುರುಷರನ್ನು ನಿರ್ಬಂಧಿತ ಕ್ಯಾಂಪುಗಳಲ್ಲಿರಿಸಿದರು. ಅಪ್ಪ ಮತ್ತು ಕರ್ಟ್ ಇಬ್ಬರೂ ಇತರ ಸಾವಿರಾರು ಜ್ಯೂಯಿಷ್ (ಯಹೂದಿ) ನಿರಾಶ್ರಿತರೊಡನೆ ಅನೇಕ ನಿರ್ಬಂಧಿತ (ಪ್ರದೇಶದ) ಕ್ಯಾಂಪುಗಳನ್ನು ಹಾದು ಕೊನೆಗೆ ಐಲ್ ಆಫ್ ಮ್ಯಾನ್‌ನಲ್ಲಿ ಬೇಲಿಯೊಳಗಿನ ವಸತಿಗೃಹಗಳಿಗೆ ಹೋದರು. ಮತ್ತೊಮ್ಮೆ ನಾನು ಅಮ್ಮನನ್ನು ಮನೆವಾರ್ತೆಯನ್ನು ನೋಡಿಕೊಳ್ಳಬೇಕಾಯಿತು. ಹೇಗಾದರೂ ವಿಯೆನ್ನಾದಲ್ಲಿದ್ದುದ ಕ್ಕಿಂತ ಈ ಸಾರಿ ಇದು ಬಹಳ ಸುಲಭವಾಗಿದ್ದಿತು. ಕಾರಣ ಇಲ್ಲಿ ನಾನು ಪ್ರೌಢಳೂ, ಹೆಚ್ಚು ಅನುಭವವುಳ್ಳವಳೂ ಆಗಿದ್ದು, ಬಹಳ ಜನ ಆತ್ಮೀಯ ಸ್ನೇಹಿತರನ್ನು ಮಾಡಿ ಕೊಂಡಿದ್ದೆ. ಅವರೆಲ್ಲರೂ ನನಗೆ ಸಹಾಯ ಮಾಡಿದರು.

ಎಲ್ಲ ಹುಡುಗರೂ ನಿರ್ಬಂಧಿಸಲ್ಪಟ್ಟ ಕಾರಣದಿಂದಾಗಿ ನಮ್ಮ ಯುವ ಸಮುದಾಯವು ಒಂದಾಗಿಬಿಟ್ಟಿತ್ತು. ಆದರೆ, ಕೆನ್ ಮತ್ತು ಅರ್ನ್ಸ್ಟ್‌ರನ್ನು ನಮಗೆ ತಿಳಿಯದ ಕಾರಣಗಳಿಂದಾಗಿ ಪೊಲೀಸರು ಕರೆದೊಯ್ದಿರಲಿಲ್ಲ. ಆದರೂ ಗ್ರೇಟ್ ಬ್ರಿಟನ್‌ನಲ್ಲಿ ಯಂಗ್ ಆಸ್ಟ್ರಿಯಾ ಚಟುವಟಿಕೆಗಳನ್ನು ಮುಂದುವರಿಸಲು ಹುಡುಗಿಯರು ಸರ್ವಾನುಮತದಿಂದ ನಿರ್ಧರಿಸಿದರು. ನಮ್ಮ ಮನೆಯಲ್ಲಿ ಸಭೆಗಳನ್ನು ನಡೆಸಬಹುದೆಂದು ಅಮ್ಮನೂ ಒಪ್ಪಿದಳು. ಎಲ್ಲ ಪರದೇಶಿಯರ ಮೇಲೂ ಕರ್ಫ್ಯೂವನ್ನು ವಿಧಿಸಿದ್ದರಿಂದ ನಮ್ಮ ಸಾಮಾಜಿಕ ಜೀವನವು ಸಾಕಷ್ಟು ಗಂಭೀರವಾಗಿಯೇ ನಿರ್ಬಂಧಕ್ಕೊಳಪಟ್ಟಿತ್ತು. ಅದರಿಂದಾಗಿ ಪ್ರತಿಯೊಬ್ಬರೂ ಪ್ರತಿ ರಾತ್ರಿ ಹತ್ತು ಗಂಟೆಗೆಲ್ಲಾ ಅವರವರ ನೋಂದಾಯಿತ ವಿಳಾಸ ಗಳಲ್ಲಿನ ಮನೆಯೊಳಗಿರಬೇಕಾಗಿತ್ತು. ಅಮ್ಮ ಮತ್ತು ನಾನು ನಮ್ಮಷ್ಟಕ್ಕೆ ನಾವು ಒಳಗಿದ್ದು, ಆಗಾಗ ರಾತ್ರಿ ಬಹಳ ಹೊತ್ತಿನವರೆಗೂ ಹರಟುವ ಹಾಗಾಯಿತು. ಒಂದು ರೀತಿಯಲ್ಲಿ ನಮ್ಮ ಅಂತರಂಗದ ವಿಷಯಗಳನ್ನು ಹಂಚಿಕೊಂಡೆವು ಇದು, ಕಳೆದ ಕೆಲವು ವರ್ಷಗಳಿಂದ ಅವಳ ಸಾಮರ್ಥ್ಯ ಮತ್ತು ಬೆಂಬಲವನ್ನು ನಾನದೆಷ್ಟು ಕಳೆದುಕೊಂಡಿದ್ದೆ ಎಂದು ನಾನು ಅರಿಯುವ ಹಾಗೆ ಮಾಡಿತು. ನಾನೂ ಸಹ ಇವಾ ಮತ್ತು ಮಿರಿಯಂ ಎಂಬ ಎರಡು ಹುಡುಗಿಯರಿಗೆ ಬಹಳ ಹತ್ತಿರದವಳಾದೆ.

ಅವರಿಬ್ಬರೂ ತಾವು ಕರ್ಟ್‌ನನ್ನು ಪ್ರೀತಿಸುತ್ತಿರುವುದಾಗಿಯೂ ಒಪ್ಪಿಕೊಂಡರು. ಅವನ ನಿರ್ಬಂಧದ ಸಮಯದಲ್ಲಿ ಅವರು ನನ್ನ ಆಪ್ತ, ಅಮೂಲ್ಯ ಗೆಳತಿಯರಾದರು.

ಒಂದು ದಿನ ನಾನು ಇವಾಳೊಡನೆ ಹರಟೆ ಹೊಡೆಯುತ್ತಿದ್ದಾಗ ಅವಳು ತಾನಿನ್ನೂ ಓದಬೇಕೆಂದುಕೊಂಡಿರುವುದಾಗಿಯೂ, ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯಬೇಕೆಂದಿರುವುದಾಗಿಯೂ ಅಂತರಂಗ ಬಿಚ್ಚಿ ಹೇಳಿಕೊಂಡಳು. ಅವಳು ಮಹತ್ವಾಕಾಂಕ್ಷಿಯಾಗಿದ್ದು, ತನ್ನ ಸಾಮರ್ಥ್ಯವನ್ನು ನಿರೂಪಿಸುವ ಒಂದು ಅವಕಾಶಕ್ಕಾಗಿ ಕಾದಿದ್ದಳು. ಅವಳ ಮಾತುಗಳನ್ನು ಕೇಳುತ್ತಿದ್ದಾಗ, ಕೇವಲ ಜೀವನ ನಿರ್ವಹಣೆಗಾಗಿ ಕೆಲಸ ಮಾಡುತ್ತಿರುವುದರ ಬಗ್ಗೆ ನಾನೆಷ್ಟು ಬೇಸತ್ತುಹೋಗಿದ್ದೇನೆ ಎಂಬುದರ ಅರಿವು ನನಗಾಯಿತು. ನನಗೆ ಹೆಚ್ಚಿನ ಉತ್ತೇಜನ, ಹೆಚ್ಚಿನ ಮಟ್ಟದ ಒಂದು ಅಪೇಕ್ಷೆಯು ಬೇಕಿದ್ದಿತು. ನಾನು ಹಣ ಸಂಪಾದನೆ ಮಾಡುವುದನ್ನು ಮುಂದುವರಿಸಲೇಬೇಕೆಂದು ನನಗೆ ಗೊತ್ತಿತ್ತು. ಅದರಿಂದ ನನಗಿದ್ದ ಒಂದೇ ಮಾರ್ಗವೆಂದರೆ ರಾತ್ರಿ ಶಾಲೆಗೆ ಹೋಗುವುದು. ಆದರೆ, ಅದು ನಾನು ವೈದ್ಯಕೀಯವನ್ನು ಓದುವುದಕ್ಕೆ ಅಡ್ಡಿಯಾಗುತ್ತಿತ್ತು. ಆದರೂ ಯಾವುದಾದರೂ ಒಂದು ವಿಷಯಕ್ಕೆ ನೋಂದಾಯಿಸಿಕೊಳ್ಳಲು ನಾನು ನಿರ್ಧರಿಸಿದ್ದೆ.

ನಾನು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಯು ಅನುಕೂಲಕರವಾಗಿ ಸ್ಟ್ಯಾಟ್‌ಫೋರ್ಡ್ ಟೆಕ್ನಿಕಲ್ ಕಾಲೇಜಿನ ಬಳಿಯೇ ಇದ್ದಿತು. ಈ ಕಾಲೇಜು ವಿವಿಧ ರೀತಿಯ ಸಂಜೆಯ ತರಗತಿಗಳನ್ನು ನಡೆಸುತ್ತಿತ್ತು. ೧೯೪೦ರ ಬೇಸಗೆಯ ಪ್ರಾರಂಭದಲ್ಲೇ ಒಂದು ದಿನ ನಾನು ನನ್ನ ಮಧ್ಯಾಹ್ನದ ಊಟದ ಸಮಯದಲ್ಲಿ ಕಾಲೇಜಿಗೆ ಧಾವಿಸಿದೆ. ಅಲ್ಲಿ ರಾಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರನ್ನು ಕಾಣಬೇಕೆಂದು ಆಗ್ರಹಿಸಿದೆ. ನನ್ನ ವಿನಂತಿಯಿಂದ ಚಕಿತನಾದ ಆಡಳಿತ ಸಹಾಯಕನು ನನ್ನನ್ನು ರಸಾಯನಶಾಸ್ತ್ರದ ಪ್ರೊಫೆಸರರ ಆಫೀಸಿಗೆ ಕರೆತಂದ. ಐವತ್ತರ ಗಡಿಯೊಳಗಿದ್ದ ಆತನು ಕರುಣಾಶಾಲಿಯಾಗಿ ಕಾಣುತ್ತಿದ್ದ ಮನುಷ್ಯನಾಗಿದ್ದ. ನನಗಾಗಿ ತಾನೇನು ಮಾಡಬಹುದು ಎಂದು ನನ್ನನ್ನು ಕೇಳಿದ. ನನಗೆ ಸಾಮಾನ್ಯವಾಗಿ ರಸಾಯನಶಾಸ್ತ್ರದ ಬಗೆಗೆ ಆಸಕ್ತಿ ಇದ್ದು, ವಿಶೇಷವಾಗಿ ಔಷಧ ಶಾಸ್ತ್ರದಲ್ಲಿ ನನ್ನ ಆಸಕ್ತಿ ಹೆಚ್ಚೆಂದು ಹೇಳಿ, ಅವನಿಗೆ ವಿಯೆನ್ನಾ ಶಾಲೆಯಲ್ಲಿನ ನನ್ನ ರಿಪೋರ್ಟ್ಸ್‌ನ್ನು ತೋರಿಸಿದೆ. ಅವನು ನನ್ನ ನಿರ್ಧಾರದಿಂದ ಪ್ರಸನ್ನನಾಗಿ ನನ್ನ ಜೊತೆ ಸ್ವಲ್ಪ ವಿರಾಮವಾಗಿಯೇ ಮಾತಿಗೆ ತೊಡಗಿದ. ಅಲ್ಲಿಯವರೆಗೆ ನಾನು ಸರಿಯಾದ ಸಮಯಕ್ಕೆ ಕೆಲಸಕ್ಕೆ ವಾಪಸಾಗಬೇಕೆನ್ನುವ ತವಕ ನನ್ನಲ್ಲಿ ಹೆಚ್ಚಾಯಿತು. ಕೊನೆಗೆ ನಾನು ನನ್ನ ಊಟದ ಸಮಯವು ಇನ್ನೇನು ಮುಗಿಯುವುದರಲ್ಲಿದೆಯೆಂದೂ, ನಾನು ನನ್ನ ಕೆಲಸಕ್ಕೆ ಕೂಡಲೇ ವಾಪಸಾಗಬೇಕಾಗಿದೆಯೆಂದೂ ಬೇರೆ ದಾರಿ ಇಲ್ಲದೆ ಅವನಲ್ಲಿ ವಿವರಿಸಿ ಹೇಳಲೇಬೇಕಾಯಿತು. ಆದರೆ, ನಾನು ಸ್ಥಳೀಯ ರಾಸಾಯನಿಕ ಕಂಪೆನಿಯೊಂದರಲ್ಲಿ

ಕೆಲಸ ಮಾಡುತ್ತಿರುವವಳೆಂದೂ, ಅದರಿಂದಲೇ ನನಗೆ ರಸಾಯನಶಾಸ್ತ್ರವನ್ನು ಓದುವುದರಲ್ಲಿ ಆಸಕ್ತಿ ಇರುವುದೆಂದೂ ಅವನು ಭಾವಿಸಿದ್ದ. ತಾನು ನನ್ನ ಮಾಲಿಕರ ಜತೆ ಮಾತಾಡಿ ನಾನು ಕಾಲೇಜಿನಿಂದ ತಡವಾಗಿ ಹೋಗಿ ಕೆಲಸ ಮಾಡಬಹುದೆನ್ನುವುದನ್ನು ತೀರ್ಮಾನ ಮಾಡುವೆನೆಂದು ಶಾಂತನಾಗಿ ನನಗೆ ಭರವಸೆ ನೀಡಿದ. ಆದರೆ, ವಾಸ್ತವವಾಗಿ ನಾನೇನು ಕೆಲಸ ಮಾಡುತ್ತಿದ್ದೇನೆಂದು ಹೇಳಿದಾಗ ಅದನ್ನು ಅವನು ನಂಬಲಾರದೆ ಹೋದ. ಕೊನೆಗೂ ನಾನು ಅವನಿಂದ ಬಿಡಿಸಿಕೊಂಡು ಕಾಲೇಜಿನಿಂದ ಧಾವಿಸಿ ಹೊರಗೆ ಬಂದಾಗ ಆ ಪ್ರೊಫೆಸರನು ನನ್ನನ್ನು ಕೂಗಿ ಆ ದಿನ ರಾತ್ರಿಯೇ ನಾನು ನೋಂದಾಯಿಸಿ ಕೊಳ್ಳುವುದನ್ನು ಖಚಿತ ಮಾಡಬೇಕೆಂದು ತಿಳಿಸಿದನು. ನಾನು ಫ್ಯಾಕ್ಟರಿಗೆ ಓಡಿಬಂದೆ. ನಾನು ಹಿಂದಿರುಗುವ ವೇಳೆಗೆ ಸರಿಯಾಗಿ ಸಿಳ್ಳು ಊದುವುದು ಕೇಳಿಸಿತು.

ನಾನು ವಿಜಯಿಯಾದಂತೆ ಭಾಸವಾಯಿತು. ಕಾಲೇಜಿಗೆ ಪ್ರವೇಶ ಪಡೆಯಲು ನನಗೆ ಅರ್ಹತೆ ಇಲ್ಲ ಎನ್ನುವುದು ನನ್ನ ಚಿಂತೆಯಾಗಿತ್ತು. ಆದರೆ, ಈಗ ಇದ್ದಕ್ಕಿದ್ದಂತೆ ನನ್ನ ಮುಂದೆ, ನಾನು ಮುಂದೆಂದಿಗೂ ಮುಚ್ಚಿಹೋಗಿವೆ ಎಂದು ಭಾವಿಸಿದ್ದ ಬಾಗಿಲುಗಳು ತೆರೆದುಕೊಳ್ಳುತ್ತಿರುವುದನ್ನು ನಾನು ನೋಡಬಹುದಿತ್ತು. ನಾನು ಎಲ್ಲ ಪರೀಕ್ಷೆಗಳಲ್ಲೂ ಉತ್ತೀರ್ಣಳಾಗೇ ತೀರುವಂತೆ ಕಷ್ಟಪಟ್ಟು ಓದಬೇಕು ಎಂದು ಶಪಥ ಮಾಡಿದೆ. ನನ್ನ ಶ್ರೇಣಿಗಳನ್ನು (ಗ್ರೇಡ್ಸ್) ನೋಡಿದಾಗ ಅವರು ನಾನು ಔಷಧೀಯ ಶಾಸ್ತ್ರವನ್ನು (ಮಡಿಸಿನ್) ಓದಲು ಸಮ್ಮತಿಸುತ್ತಾರೆ ಎಂದು ಆಶಿಸಿದ್ದೆ. ಅಮ್ಮನಿಗೂ ಖುಷಿಯಾಗಿರುವಂತೆ ತೋರಿತು. ನನ್ನ ಉತ್ಸಾಹವನ್ನು ಕುಗ್ಗಿಸುವವರಾರೂ ಇಲ್ಲದೆ, ಒಮ್ಮೆಲೇ ನಾನು ನನ್ನ ಸಂತೋಷವನ್ನು ಹಂಚಿಕೊಳ್ಳುವಂತಾಯಿತು. ನಾವಿಬ್ಬರೂ ವಿಯೆನ್ನಾದಲ್ಲಿ ಬಹಳ ಕಾಲ ಜೊತೆಯಾಗಿದ್ದುದರಿಂದ ಮೊದಲಾಗಿ ಅವಳು ಜೀವನವನ್ನು ಸಾಕಷ್ಟು ಕಂಡಿದ್ದಳು. ಅಂತೆಯೇ ಹುಡುಗಿಯ ವಿದ್ಯಾಭ್ಯಾಸದ ವಿಷಯದಲ್ಲಿ ಅವಳ ಮುಂಚಿನ ಅಭಿಪ್ರಾಯಗಳನ್ನು ಅವಳು ಬದಲಾಯಿಸಿಕೊಂಡಿದ್ದುದನ್ನು ಕಂಡು ನನಗೆ ಸಂತೋಷವಾಯಿತು. ನಾನು ಬೆಳಗಿನ ಸಮಯದಲ್ಲಷ್ಟೇ ಅಲ್ಲದೆ, ವಾರದಲ್ಲಿ ಮೂರು ದಿನಗಳ ಸಂಜೆಗಳಲ್ಲಿಯೂ ಅವಳನ್ನು ಮನೆಯಲ್ಲಿ ಒಬ್ಬಳನ್ನೇ ಬಿಟ್ಟು ಹೋದರೂ, ಎಲ್ಲಿಯವರೆಗೆ ಇದೆಲ್ಲವೂ ಒಂದು ಒಳ್ಳೆಯ ಉದ್ದೇಶಕ್ಕಾಗಿ ಎಂದು ತನಗೆ ತಿಳಿದಿರುವುದೋ, ಅಲ್ಲಿಯವರೆಗೆ ತಾನು ಅನ್ಯಥಾ ಭಾವಿಸುವುದಿಲ್ಲವೆಂದು ಅವಳು ನನಗೆ ಭರವಸೆ ನೀಡಿದಳು.

ನಾನು ನನ್ನ ವ್ಯಾಸಂಗದ ಯೋಜನೆಗಳನ್ನು ಅವಳಲ್ಲಿ ಚರ್ಚಿಸಿದೆ. ಅವಳು ನನ್ನ ಜೊತೆ ಸೇರುವ ನಿರ್ಧಾರ ಮಾಡಿದ್ದಳು. ಕಳೆದ ಮೂರು ವರ್ಷಗಳಲ್ಲಿ ಮೊದಲ ಬಾರಿಗೆ ನಾನು ಆ ಸೆಪ್ಟೆಂಬರ್‌ನಲ್ಲಿ ನನ್ನ ಮೊದಲ ತರಗತಿಯ

ಕೊಠಡಿಯನ್ನು ಪ್ರವೇಶಿಸಿದೆ. ಉಪನ್ಯಾಸಕರು ತಮ್ಮ ಉಪನ್ಯಾಸವನ್ನು ಪ್ರಾರಂಭಿಸುತ್ತಿದ್ದಂತೆಯೇ ಅವರ ಪ್ರತಿಯೊಂದು ಪದವನ್ನು ನಾನು ಮಂತ್ರಮುಗ್ಧಳಾಗಿ ಕೇಳಿದೆ; ಹಲವು ವರ್ಷಗಳ ಬರಗಾಲದ ನಂತರದ ಮಳೆಯ ಮೊದಲ ಹನಿಯಂತಿತ್ತು. ರೋಮಾಂಚನದೊಡನೆ ಮತ್ತೇರಿದಂತಾಗಿತ್ತು ನನಗೆ. ನಾನು ಆ ರಾತ್ರಿ ಕುಡಿದವಳಂತೆ ಮನೆಗೆ ನಡೆದು ಹೋದೆ; ಒಂದು ರೀತಿಯಲ್ಲಿ ನಾನು ಸಂತೋಷದ ಮತ್ತಿನಲ್ಲಿದ್ದೆ; ಹೊಸ ಹೊಸ ವಿಷಯಗಳನ್ನು ಅರಿಯುವ ಅನುಭವದ ಮತ್ತಿನಲ್ಲಿದ್ದೆ; ವಿಭಿನ್ನ ಜೀವನವೊಂದರ ಕನಸಿನ ಮತ್ತಿನಲ್ಲಿದ್ದೆ.

ನನ್ನ ಪಾಲಿಗೆ ಆ ತಿಂಗಳುಗಳು ಓದಿನಲ್ಲಿ ಸಂತೋಷದಿಂದ ವೇಗವಾಗಿ ಕಳೆದುಹೋಗುತ್ತಿರುವಂತೆ ಆಗಿತ್ತು. ಆದರೆ ಅಮ್ಮನಿಗೆ ಪ್ರತಿ ರಾತ್ರಿಯೂ ಅನಂತ ವಾಗಿರುವಂತೆ ಕಾಣುತ್ತಿತ್ತು. ಪ್ರತಿರಾತ್ರಿಯೂ ಸೈರನ್ನುಗಳು ಕೂಗುತ್ತಿದ್ದವು. ನಾನು ಮನೆಗೆ ಹಿಂದಿರುಗಿದಾಗ ಭಯದಿಂದ ಕುಗ್ಗಿದ ಅಮ್ಮ, ಅಂಕೆ ಮೀರಿ ನಡುಗುತ್ತಾ ಮೇಜಿನಡಿಯಲ್ಲಿ ಸೇರಿಕೊಂಡಿರುವುದನ್ನು ಕಾಣುತ್ತಿದ್ದೆ. ಕನಿಷ್ಠಪಕ್ಷ ಬಾಂಬುಗಳ ದಾಳಿಯು ಸ್ವಲ್ಪ ಕಡಿಮೆಯಾಗುವತನಕ ನಾನು ನನ್ನ ಓದನ್ನು ಬಿಟ್ಟುಬಿಡುವುದಾಗಿ ಹೇಳಿದೆ; ಆದರೆ ಅಮ್ಮನು ಆ ಮಾತನ್ನು ಕೇಳುವುದಿಲ್ಲವೆಂದಾಗ ನನಗೆ ಸಂತೋಷ ವಾಯಿತು. ಅಬಾಧಿತವಾಗಿ ನನ್ನ ಓದು ಮುಂದುವರೆದದ್ದಕ್ಕೆ ನಾನು ಕೃತಜ್ಞಳಾಗಿದ್ದೆ. ಇದು ಒಂದು ಸಂಜೆಯವರೆಗೆ ಮಾತ್ರವಾಗಿತ್ತು. ಆ ಒಂದು ಸಂಜೆ ಕರ್ಫ್ಯೂ ನಿರ್ಬಂಧಗಳನ್ನು ಸೋಲಿಸುವ ಸಲುವಾಗಿ (ಕರ್ಫ್ಯೂ ನಿರ್ಬಂಧಗಳಿಗೆ ಪ್ರತಿಯಾಗಿ) ನಡೆದ ವಾಯು ಧಾಳಿಯ ಮಧ್ಯದಲ್ಲೇ ಮನೆಗೆ ಓಡಿ ಬಂದ ನಾನು, ನಮ್ಮ ಮನೆಯ ಪ್ರವೇಶದ್ವಾರದ ಹಜಾರದಲ್ಲಿ ಮೆಟ್ಟಿಲುಗಳ ಕೆಳಗೆ ಪ್ರಜ್ಞಾಹೀನಳಾಗಿ ಬಿದ್ದಿದ್ದ ಅಮ್ಮನನ್ನು ಕಂಡೆ. ಅವಳ ಮುಖ ಮತ್ತು ತೋಳುಗಳ ಮೇಲಿದ್ದ ತರಚು ಗಾಯಗಳನ್ನು ಕಂಡು, ಅವಳು ಮೆಟ್ಟಿಲಿನಿಂದ ಕೆಳಗೆ ಬಿದ್ದಿರಬೇಕೆಂದು ನನಗೆ ಅನ್ನಿಸಿತು. ನಮ್ಮ ಮನೆಯ ಕೆಳಗಿನ ಅಂತಸ್ತಿನಲ್ಲಿದ್ದ ಹಾಸಿಗೆಯ ಮೇಲೆ; ಅವಳನ್ನು ಎತ್ತಿ ಮಲಗಿಸಲು ಪ್ರಯತ್ನಿಸಿದೆ. ಆದರೆ, ನಾನೊಬ್ಬಳೇ ಅವಳನ್ನು ಎತ್ತುವುದು ನನಗೆ ಅಸಾಧ್ಯವಾಯಿತು. ಅವಳು ಅಷ್ಟು ಭಾರ ಹೇಗಾದಳು ಎಂದು ನನಗೆ ಆಶ್ಚರ್ಯವಾಯಿತು. ಒಂದು ಒದ್ದೆ ಬಟ್ಟೆಯನ್ನು ಅವಳ ಮೇಲೆ ಹಾಕಿ ಅವಳಿಗೆ ಪ್ರಜ್ಞೆ ಬರಿಸೋಣವೆಂದು ನಾನು ಆ ಫ್ಲಾನೆಲ್‌ನ್ನು ಅವಳ ಹಣೆಯ ಮೇಲಿಟ್ಟೆ. ಆಗ ಅವಳು ಗುಳುಗುಳು ಶಬ್ದವನ್ನು ಹೊರಡಿಸಿದ್ದು, ನನ್ನನ್ನು ಬೆಚ್ಚಿ ಬೀಳಿಸಿತು. ಹತ್ತಿರವೇ ಯಾರಾದರೂ ಇದ್ದು ನಾನು ಅವರ ಸಲಹೆ ಕೇಳುವಂತಿದ್ದರೆ ಎಂದು ಬಹಳವೇ ಆಶಿಸಿದೆ. ಆದರೆ ಮನೆಯಲ್ಲಿ ಅಮ್ಮನ ಜೊತೆ ನಾನೊಬ್ಬಳೇ ಇದ್ದೆ ಮತ್ತು ನಾವಿಬ್ಬರೂ ಭಯಂಕರವಾದ ವಾಯುಧಾಳಿಯ ಮಧ್ಯದಲ್ಲಿದ್ದೆವು. ಒಂದೇ ಸಮನೆ ಬಾಂಬುಗಳು ಸ್ಫೋಟಿಸುತ್ತಿರುವುದನ್ನು ನಾನು ಕೇಳುತ್ತಿದ್ದೆ. ಅವುಗಳು ಹತ್ತಿರದಲ್ಲೇ ಭೀಕರವಾದ

ಸ್ಫೋಟ ಆಗುತ್ತಿರುವಂತೆ ಕೇಳುತ್ತಿತ್ತು. ಹಜಾರದಲ್ಲಿದ್ದ ದೀಪಗಳನ್ನು ಆರಿಸದೆ ನನಗೆ ಬಾಗಿಲನ್ನು ತೆರೆಯುವ ಧೈರ್ಯ ಮಾಡಲಾಗಲಿಲ್ಲ. ಆದರೆ, ನಾನು ಸಹಾಯ ಕೇಳಲು ಹೋದಾಗ ಅವಳೊಬ್ಬಳನ್ನೇ ಕತ್ತಲಲ್ಲಿ ಬಿಟ್ಟು ಹೋಗುವುದೂ ನನಗೆ ಬೇಕಿರಲಿಲ್ಲ. ನಾನು ಅವಳ ತಲೆಯ ಅಡಿಗೆ ಒಂದು ದಿಂಬನ್ನಿಟ್ಟೆ. ಅವಳ ಶರೀರವನ್ನು ಹೊದಿಕೆಯಿಂದ ಮುಚ್ಚಿದೆ. ಹಾಗೆ ಮಾಡಿ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಅವಳಿಗೆ ಆರಾಮವಾಗುವಂತೆ ಮಾಡಿದೆ. ಕೊನೆಗೆ ದೀಪಗಳನ್ನು ಆರಿಸಲು ನಿರ್ಧರಿಸಿದೆ, ಬಾಗಿಲನ್ನು ತೆರೆದು ಹೊರಹೋಗಿ ವಾಯು ಧಾಳಿಯ ಸಮಯದಲ್ಲಿ ಸಹಾಯ ಮಾಡುವ ಕಾವಲುಗಾರರಲ್ಲಿಗೆ ಹೋದೆ. ಅವರು ಹತ್ತಿರದಲ್ಲೇ ಇದ್ದು ಗಾಯಾಳುಗಳಿಗೆ, ಮನೆ ಇಲ್ಲದವರಿಗೆ ಕಳೆದುಕೊಂಡವರಿಗೆ ಸಹಾಯ ಮಾಡುತ್ತಿರುತ್ತಾರೆಂಬುದು ನನಗೆ ತಿಳಿದಿತ್ತು. ಒಬ್ಬ ಕಾವಲುಗಾರನು ಬೇಗನೇ ನನ್ನ ಬಳಿಗೆ ಬಂದ. ಮನೆಗೆ ಕಿಚ್ಚಿಡಿವ ಬಾಂಬೊಂದು ನಮ್ಮ ಮನೆಯ ಮೇಲೆ ಬಿದ್ದಿರಬಹುದೆಂದು ಭಾವಿಸಿ, ಆ ಬಾಂಬು ಎಲ್ಲಿ ಬಿದ್ದಿತು ಎಂದು ನನ್ನನ್ನು ಕೇಳಿದ. ನಾನು ನನ್ನ ಅಮ್ಮನಿಗಾಗಿರುವ ಅಪಘಾತವನ್ನು ಅವನಿಗೆ ಹೇಳಿ, ಅವಳನ್ನು ಆಸ್ಪತ್ರೆಗೆ ಕರೆದೊಯ್ಯಲು ನನಗೊಂದು ಆ್ಯಂಬುಲೆನ್ಸ್ ಬೇಕಾಗಿದೆ ಎಂದಾಗ, ಸಕಾರಣವಿಲ್ಲದೆ ನಾನು ಅವನಿಗೆ ತೊಂದರೆ ಕೊಡುತ್ತಿರುವೆನೆಂದು ನನ್ನ ಮೇಲೆ ಕೂಗಾಡಲು ಪ್ರಾರಂಭಿಸಿದ. ವಾಯು ಧಾಳಿಗೆ ತುತ್ತಾದವರ ಕಾಳಜಿ ಮಾಡುವುದೇ ಕಾವಲುಗಾರನ ಸರ್ವ ಪ್ರಥಮ ಕರ್ತವ್ಯ ಎಂದು ನನಗೆ ತಿಳಿದಿರಲಿಲ್ಲವೇ? ಮುಂದೇನು ಮಾಡಬೇಕು ಎಂದು ತಿಳಿಯದೆ, ಚಳಿಯಲ್ಲಿ ನಡುಗುತ್ತಾ ಅಲ್ಲಿ ನಾನು ನಿಲ್ಲುವಂತೆ ಮಾಡಿ ತನ್ನ ಮಾತುಗಳನ್ನು ಹೇಳಿ ರೇಗಿ ಕೂಗಾಡುತ್ತಾ ಅವನು ಹೊರಟುಹೋದ. ನಮ್ಮ ಅಕ್ಕಪಕ್ಕದವರನ್ನು ಎಚ್ಚರಿಸೋಣ ವೆಂದುಕೊಂಡೆ. ಆದರೆ ಬೇಡವೆಂದು ಸುಮ್ಮನಾದೆ. ಏಕೆಂದರೆ ಅಮ್ಮನ ಹೃದಯ ದುರ್ಬಲವಾಗಿದ್ದಿತು. ಒಂದು ವೇಳೆ ವಾಯು ಧಾಳಿಯ ಮಧ್ಯದಲ್ಲಿ ನಾನೇನಾದರೂ ಗಂಟೆ ಬಾರಿಸಿದರೆ ಅವಳಿಗೆ ಅದರಿಂದ ಹೃದಯಾಘಾತವಾಗಬಹುದಿತ್ತು. ಆದರೆ ಅದು ನಾನು ಮಾಡಬಹುದಾದ ಕೊನೆಯ ಕೆಲಸವಾಗಿತ್ತು. ಅದರಿಂದ ನಾನು ಮನೆಗೆ ವಾಪಸ್ಸಾದೆ. ಅಮ್ಮನು ಸ್ವಲ್ಪ ಹೆಚ್ಚಾಗಿಯೇ ಆರಾಮವಾಗಿ ಉಸಿರಾಡು ತ್ತಿದ್ದುದರಿಂದ, ಎಲ್ಲವೂ ನಿಚ್ಚಳವಾಗಿದೆ ಎನ್ನುವ ಶಬ್ದ ಬರುವ ತನಕ ನಾನು ಕಾದೆ. ಅನಂತರ ವಾಯುಧಾಳಿಯ ಕಾವಲುಗಾರರಲ್ಲಿ ಹೆಚ್ಚು ಕರುಣಾಶಾಲಿಯಾದವನನ್ನು ಹುಡುಕುತ್ತಾ ಇನ್ನೊಮ್ಮೆ ರಸ್ತೆಗಿಳಿಯುವ ಸಾಹಸ ಮಾಡಿದೆ. ಕೆಲವು ನಿಷ್ಫಲ ಪ್ರಯತ್ನಗಳ ಅನಂತರ ಒಬ್ಬನು ನನಗೆ ಸಿಕ್ಕಿದ. ಅವನು ಒಂದು ಆ್ಯಂಬುಲೆನ್ಸನ್ನು ಕರೆಯುವುದಾಗಿ ಮಾತುಕೊಟ್ಟ. ನಾನು ಮನೆಗೆ ಹಿಂದಿರುಗಿದಾಗಲೇ ದೃಢ ಮನಸ್ಕಳಾಗಿರಲು ನಾನದೆಷ್ಟು ಪ್ರಯತ್ನಿಸಿದೆ ಎಂದು ನನಗೆ ಅರಿವಾದದ್ದು. ಆದರೆ ಅಮ್ಮನ ಪಕ್ಕ ಮಲಗಿ ಅವಳನ್ನು ಅಪ್ಪಿಕೊಂಡು

ಗಟ್ಟಿಯಾಗಿ ಕೂಗಿ ನನ್ನ ಹೃದಯವನ್ನು ಹಗುರಮಾಡಿಕೊಳ್ಳುವುದೇ ಈಗ ನನಗೆ ಬೇಕಾದದ್ದು.

ಹಾಗೆ ನಾನು ಕಡಿಮೆ ಎಂದರೂ ಒಂದರ್ಧ ಗಂಟೆ ಮಲಗಿದ್ದಿರಬೇಕು. ಅಷ್ಟರಲ್ಲಿ ಯಾರೋ ಬಾಗಿಲು ಬಡಿಯುವ ಶಬ್ದವು ಕೇಳಿಸಿತು. ಲೆಟರ್ ಬಾಕ್ಸ್‌ನ ಮೂಲಕ ಆ್ಯಂಬುಲೆನ್ಸ್ ಬಂದಿದೆ ಎಂದು ಒಂದು ಧ್ವನಿಯು ಕೂಗುತ್ತಿದ್ದುದೂ ಕೇಳಿಸಿತು. ನಾನು ಆ ವ್ಯಕ್ತಿಗಳನ್ನು ಹಜಾರಕ್ಕೆ ಬರಮಾಡಿದೆ. ಅವರುಗಳು ಅಮ್ಮನನ್ನು ಮೆಲ್ಲಗೆ ಸ್ಟ್ರೆಟರ್‌ನ ಮೇಲೆ ಮಲಗಿಸಿದರು. ಆಗ ಅವಳ ಮುಖವು ವಿಚಿತ್ರವಾಗಿ ಅಸಮಪಾರ್ಶ್ವವಾಗಿ ಕಾಣುತ್ತಿರುವುದನ್ನು ನಾನು ಗಮನಿಸಿದೆ. ಬಲಭಾಗವು ಎಡಭಾಗಕ್ಕಿಂತ ಕೆಳಗಿದ್ದಿತು. ಇದು ಅವಳು ಮೆಟ್ಟಿಲುಗಳ ಮೇಲಿನಿಂದ ಕೆಳಗೆ ಬಿದ್ದಾಗ ಅವಳಿಗಾದ ಗಾಯುಗಳ ಪರಿಣಾಮ ವಿರಬಹುದೇ ಎಂದು ಸೋಜಿಗಪಡುತ್ತಾ ಅವಳನ್ನೇ ಹಿಂಬಾಲಿಸಿ ನಾನು ಆ್ಯಂಬುಲೆನ್ಸ್ ಒಳಗೆ ಕುಳಿತೆ. ಆ್ಯಂಬುಲೆನ್ಸ್ ಉದ್ದಕ್ಕೂ ಅವಶೇಷಗಳಿಂದ ತುಂಬಿಹೋಗಿದ್ದ ರಸ್ತೆಗಳಲ್ಲಿ ಸಾಗಬೇಕಾಗಿದ್ದುದರಿಂದ, ಆಸ್ಪತ್ರೆಯನ್ನು ನಾವು ತಲುಪುವ ಮೊದಲು ಸಮಯವು ಅನಂತವೋ ಎನಿಸುವಂತಾಗಿತ್ತು. ಅಮ್ಮನನ್ನು ಯುದ್ಧದ ಗಾಯಗಳು ಎಂದಲ್ಲದೆ, ಅಪಘಾತದಲ್ಲಿ ಗಾಯಗೊಂಡವಳು ಎಂದು ಆಸ್ಪತ್ರೆಗೆ ಸೇರಿಸಿಕೊಂಡದ್ದಾಯಿತು. ಅಂದರೆ ಸಿಬ್ಬಂದಿಯು ವಾಯುಧಾಳಿಯಲ್ಲಿ ಗಾಯಗೊಂಡವರನ್ನೇ ಮೊದಲು ನೋಡಿ ಅನಂತರ ಅಮ್ಮನನ್ನು ನೋಡಲು ಬರುವವರೆಗೂ ನಾವು ಕಾದಿರಬೇಕಿತ್ತು ಎಂದರ್ಥ. ಅವಳು ನನ್ನ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಾಳೆಯೋ ಇಲ್ಲವೋ ನನಗಂತೂ ಗೊತ್ತಿರಲಿಲ್ಲ. ಆದರೆ, ನಾನು ಮಾತ್ರ ಮೆಲ್ಲಗೆ ಅವಳ ತಲೆಯನ್ನೇ ತಟ್ಟುತ್ತಾ, ಹೇಗೆ ನಾನು ಎಲ್ಲವನ್ನು ಸ್ಪಷ್ಟಪಡಿಸುತ್ತೇನೆಂದೂ ಅಂತೆಯೇ ಅವಳೂ ಬಹಳ ಬೇಗನೆ ಮತ್ತೆ ಮೊದಲಿನಂತಾಗುತ್ತಾಳೆಂದು ಹೇಳುತ್ತಾ ಕುಳಿತೆ. ಅವಳ ಪಕ್ಕದಲ್ಲಿ ನಾನಿರುವುದು ಅವಳಿಗೆ ಬೇಕಾಗಿದ್ದಾಗ ನಾನು ಕಾಲೇಜಿನಲ್ಲಿದ್ದುದಕ್ಕೆ ನನಗೆ ಬಹಳ ಅಪರಾಧಿಭಾವದ ಅನುಭವವಾಗಿತ್ತು. ಅವಳಿಗೆ ತರಚುಗಾಯವಾಗಿದ್ದ ಜಾಗಗಳನ್ನು ಬಿಟ್ಟರೆ, ಅವಳು ಒಂದು ಕಾಗದದ ಬಿಳಿ ಹಾಳೆಯಂತೆ ಕಾಣುತ್ತಿದ್ದಳು. ಅವಳ ತುಟಿಗಳು ಎಂದಿನಂತೆ ಅವುಗಳ ಕೆಂಪು ಬಣ್ಣದಲ್ಲಿರದೆ, ಗಾಢ ನೀಲಿ ಬಣ್ಣದವಾಗಿದ್ದವು. ಅವಳ ಮುಖ ಇನ್ನೂ ವ್ಯವಸ್ಥೆಗೆಟ್ಟಂತೆ ಕಾಣುತ್ತಿದ್ದಿತು. ನಾನು ಅವಳ ಪ್ರತಿಯೊಂದು ಚಲನವಲನವನ್ನೂ ಗಮನಿಸುತ್ತಿದ್ದೆ. ಅವಳು ತನ್ನ ಕಣ್ಣುಗಳನ್ನು ತೆರೆಯಲು ಪ್ರಾರಂಭಿಸಿ, ಏಳುವುದರಲ್ಲಿದ್ದಳು. ಅವಳು ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದಳು. ಆದರೆ, ಯಾವುದೇ ಪದಗಳನ್ನು ಸ್ಪಷ್ಟವಾಗಿ ಹೇಳಲು ಶಬ್ದಗಳನ್ನು ಒಟ್ಟಾಗಿ ಸೇರಿಸಲು ಅಸಮರ್ಥಳಂತೆ ಕಾಣುತ್ತಿದ್ದಳು.

ಕೊನೆಗೂ ಒಬ್ಬ ಡಾಕ್ಟರನು ಅವಳನ್ನು ಪರೀಕ್ಷಿಸಲು ಬಂದ. adsideನ

ಹೊರಗೆ ಕಾಯಲು ನನಗೆ ಹೇಳಿದ. ಅವನು ನನ್ನಲ್ಲಿಗೆ ಬರುವವರೆಗೂ ನಾನು ಕಳವಳದಿಂದ ಅತ್ತಿಂದಿತ್ತ ಶತಪಥ ತಿರುಗುತ್ತಿದ್ದೆ. ಅವನು ಬಂದು ಅಮ್ಮ ಅಲ್ಪ ಪ್ರಮಾಣದ ಪಾರ್ಶ್ವವಾಯು ಪೀಡಿತಳಾಗಿದ್ದಾಳೆಂದೂ, ಅದರಿಂದಲೇ ನಾನು ಗಮನಿಸಿದ್ದಂತೆ ಅವಳ ಮುಖವು ವಾಯುಪೀಡಿತವಾಗಿರುವುದೆಂದೂ (ಒಂದೆಡೆಗೆ ತಿರುಗಿಕೊಂಡಂತೆ ಇರುವುದೆಂದೂ) ವಿವರಿಸಿದ. ಈ ಪಾರ್ಶ್ವವಾಯುವೇ ಅವಳು ಬೀಳಲು ಕಾರಣವಾಯಿತೋ ಅಥವಾ ಅವಳು ಮೆಟ್ಟಿಲಿನಿಂದ ಕೆಳಗೆ ಬಿದ್ದುದರ ಪರಿಣಾಮವೆ ಇದೋ, ಇದ್ಯಾವುದನ್ನೂ ಖಚಿತವಾಗಿ ಹೇಳಲು ಅವನು ಅಸಮರ್ಥನಾಗಿದ್ದ. ಅದು ಹೇಗೇ ಆಗಿದ್ದರೂ ಎರಡು ಅಥವಾ ಮೂರು ವಾರಗಳಲ್ಲಿ ಅವಳು ಸಂಪೂರ್ಣವಾಗಿ ಗುಣಮುಖಳಾಗುವಳೆಂದು ಅವನು ನನಗೆ ಭರವಸೆ ಕೊಟ್ಟ. ಆದರೆ, ಅದು ಅವಳಿಗೆ ಸಂಪೂರ್ಣವಾಗಿ ವಿಶ್ರಾಂತಿ ದೊರೆತು, ಅವಳಿಗೆ ಯಾವ ಚಿಂತೆಗಳೂ ತೊಂದರೆ ಮಾಡದಿದ್ದರೆ ಮಾತ್ರ ಎಂದೇ ಹೇಳಿದ. ಅವಳು ಗುಣಮುಖಳಾಗಲು ನಾನು ಈ ನಿಬಂಧನೆಗಳ ಬಗೆಗೆ ಭರವಸೆ ಕೊಡಬಲ್ಲೆನೇ ಎಂದು ಡಾಕ್ಟರನು ನನ್ನನ್ನು ಕೇಳಿದಾಗ, ಅವನು ವಿನೋದ ಮಾಡುತ್ತಿರಬೇಕೆಂದು ನಾನು ಭಾವಿಸಿದೆ. ಅವಳು ಪ್ರತಿಸಾರಿ ವಾಯುಧಾಳಿಯ ಎಚ್ಚರಿಕೆಯನ್ನು ಕೇಳಿದಾಗಲೂ ಅಸ್ವಸ್ಥಳಾದರೆ ನಾನಾದರೂ ಹೇಗೆ ತಾನೆ ಅವಳನ್ನು ಶಾಂತಳನ್ನಾಗಿರಿಸುವುದು ಸಾಧ್ಯವಿತ್ತು ? ದಿನದ ೨೪ ಗಂಟೆಗಳೂ ನಾನು ಅವಳನ್ನು ನೋಡಿಕೊಳ್ಳುವ ಕೆಲಸವನ್ನು ಹೇಗೆ ತಾನೆ ಮಾಡಬಲ್ಲವಳಾಗಿದ್ದೆ. ನಮ್ಮಿಬ್ಬರ ಹೊಟ್ಟೆ ಹೊರೆಯಲು ನಾನು ಕೆಲಸಕ್ಕೆ ಹೋಗಲೇ ಬೇಕಾಗಿರುವುದರಿಂದ? ಒಂದು ಸಮಯದಲ್ಲಿ ಒಂದರ ಬಗೆಗೆ ಯೋಚಿಸಿ ಕಾಳಜಿ ಮಾಡಿದರೆ ಮಾತ್ರ ನಾನು ನಿಭಾಯಿಸಬಹುದು, ಇರುವುದು ಇದೊಂದೇ ಮಾರ್ಗ ಎಂದು ನಾನು ನಿರ್ಧರಿಸಿದೆ. ಇಲ್ಲವಾದರೆ ನಾನು ಹೆಚ್ಚು ಚಿತ್ತಸ್ವಾಸ್ಥ್ಯ ಕುಂದಿದವಳಾಗಿ ಏನೂ ಮಾಡಲಾಗದವಳಾಗುತ್ತೇನೆ ಎನಿಸಿತು. ನಮ್ಮನ್ನು ಆ್ಯಂಬುಲೆನ್ಸ್‌ನಲ್ಲಿ ಮನೆಗೆ ಕರೆದುಕೊಂಡು ಹೋಗುವ ವ್ಯವಸ್ಥೆಯಾಗುವ ಮುನ್ನ ಅಮ್ಮನು ಆಸ್ಪತ್ರೆಯಲ್ಲೇ ಕೆಲವು ಗಂಟೆಗಳ ಕಾಲ ನಿದ್ರೆ ಮಾಡುವುದು ಉತ್ತಮವೆಂದು ಡಾಕ್ಟರನು ಸೂಚಿಸಿದ. ಅದಕ್ಕಾಗಿ ನಾನು ಅವನನ್ನು ಬಹಳವಾಗಿ ವಂದಿಸಿದೆ. ದಾದಿಯು ಬಂದು ಅಮ್ಮನಿಗೆ ನಿದ್ರೆ ಬರುವ ಔಷಧಿಯನ್ನು ಕೊಟ್ಟಳು. ಅಮ್ಮನು ಮಲಗಿದಳು. ನಾನು ಅವಳ ಪಕ್ಕದಲ್ಲಿ ಕುರ್ಚಿಯ ಮೇಲೆ ಕುಳಿತು ಅವಳ ಅನಾರೋಗ್ಯವನ್ನು ನಾನು ಹೇಗೆ ನಿಭಾಯಿಸುವೆನೋ ಎಂದು ಚಿಂತಿಸ ತೊಡಗಿದೆ. ತನ್ನ ಕುಟುಂಬವನ್ನೇ ಮೊದಲು ಎಂದು ತಿಳಿದು ತನ್ನ ಹಿತಾಸಕ್ತಿಯನ್ನು ಕಡೆಗಣಿಸುತ್ತಿದ್ದ ಅವಳು, ಯಾವಾಗಲೂ ಒಬ್ಬ ಆದರ್ಶಪ್ರಾಯಳಾದ ತಾಯಿಯಾಗಿದ್ದಳು. ನಿಜಕ್ಕೂ ಅವಳೆಂಥಾ ಅಪೂರ್ವ ವ್ಯಕ್ತಿ ಎಂದು ಅವಳ ನಿಶ್ಶಕ್ತವಾದ ಶರೀರವನ್ನು ನೋಡುತ್ತಾ ನಾನು ಯೋಚಿಸಿದೆ

ಮತ್ತು ಅವಳನ್ನೇ ಕಳೆದುಕೊಂಡು ಬಿಡುವ ಯೋಚನೆ ಮಾತ್ರದಿಂದಲೇ ನಾನು ಅದೆಷ್ಟು ಹೆದರಿದ್ದೆ ಎಂದು ಅರಿತೆ. ನಮ್ಮೆಲ್ಲರ ಜೀವನದಲ್ಲೂ ಅವಳು ಮಾರ್ಗದರ್ಶಕಳಾಗಲು ಅಂತೆಯೇ ಗೆಳತಿಯೂ, ಸಂಗಾತಿಯೂ ಆಗಲು ಪ್ರಯತ್ನಿಸಿದ್ದಳು. ಜೀವನದಲ್ಲಿ ಅವಳು ಪಟ್ಟ ಬವಣೆಗಳ ನಂತರವೂ ಅವಳ ಬಗೆಗೆ ಬಹಳ ಕ್ರೂರಿಯೂ, ಕೃತಜ್ಞಳೂ ಆಗಿದ್ದುದಕ್ಕೆ ನನ್ನನ್ನೇ ನಾನು ಶಪಿಸಿಕೊಂಡೆ. ಕೆಲವು ಗಂಟೆಗಳ ನಂತರ ನಾವು ಮನೆಗೆ ಬಂದೆವು. ಆ್ಯಂಬುಲೆನ್ಸ್‌ನ ವ್ಯಕ್ತಿಗಳು ಅವಳನ್ನು ಎತ್ತಿ ಹಾಸಿಗೆಯ ಮೇಲೆ ಮಲಗಿಸುವಾಗ 'ನಾನು ನಿನ್ನೆ ಉಪವಾಸ ಮಾಡಿರಲಿಲ್ಲ' ಎಂದು ಅಮ್ಮ ಮೊದಲ ಬಾರಿಗೆ ಅವಳಿಗೆ ಅಪಘಾತವಾದ ನಂತರ ಕೇಳುವಂಥ ಪದಗಳನ್ನು ಉಚ್ಚರಿಸಿದಳು. ಇದನ್ನು ಕೇಳಿದ ನಾನು ಅವಳ ಮನಸ್ಸು ಇನ್ನೂ ಪ್ರಕ್ಷುಬ್ಧವಾಗಿರುವುದೇನೋ ಎಂದು ಮೊದಲು ಯೋಚಿಸಿದೆ. ಆದರೆ ತಾನೇನು ಹೇಳುತ್ತಿದ್ದೇನೆ ಎಂದು ಸ್ವತಃ ಅವಳಿಗೆ ಸ್ವಲ್ಪವೂ ತಿಳಿದಿರಲಿಲ್ಲ. ಆದರೆ ಅವಳು ಅದೇ ವಾಕ್ಯವನ್ನು ಹಲವು ಸಾರಿ ಮತ್ತೆ ಮತ್ತೆ ಹೇಳಿದಾಗ ಅವಳು ನನಗೆ ಏನನ್ನು ಹೇಳಲು ಪ್ರಯತ್ನಿಸುತ್ತಿದ್ದಾಳೆ ಎಂದು ಅರಿವಾಗಲು ಪ್ರಾರಂಭವಾಯಿತು. ಅವಳಿಗೆ ಅಪಘಾತವಾದದ್ದು 'ಯಹೂದಿಗಳ ಪ್ರಾಯಶ್ಚಿತ್ತದ ದಿನ', 'ಯೋಮ್‌ಕಿಪುರ್'ನ (ಯಾಮ್‌ಕಿಪರ್) ಸಂಜೆ. ಆ ದಿನ ಯಹೂದಿಗಳೆಲ್ಲರೂ ಉಪವಾಸ ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ತನ್ನ ಮಕ್ಕಳನ್ನು ಬೆಳೆಸುವುದರಲ್ಲಿ ಅಮ್ಮ ಯಾವಾಗಲೂ ಅಪ್ಪನ ನಿರೀಶ್ವರ ವಾದವನ್ನು ಸ್ವೀಕರಿಸಿದ್ದರೂ ನನಗೆ ನೆನಪಿರುವಂತೆ ಅವಳು ಯಾವಾಗಲೂ 'ಯೋಮ್‌ಕಿಪರ್' ದಿನ ಉಪವಾಸ ಮಾಡುತ್ತಿದ್ದಳು. ಸಂಪ್ರದಾಯವಾದಿ ಯಹೂದಿಗಳಾಗಿದ್ದ ತನ್ನ ತಂದೆತಾಯಿಗಳ ಸ್ಮರಣಾರ್ಥವಾಗಿ ತಾನು ಹಾಗೆ ಮಾಡುವುದಾಗಿ ಅವಳು ನಮಗೆ ವಿವರಿಸುತ್ತಿದ್ದಳು. ಒಂದು ವೇಳೆ ದೇವರ ಅಸ್ತಿತ್ವವೇನಾದರೂ ಇದ್ದಲ್ಲಿ, ತಾನು ಈ ಉಪವಾಸವನ್ನು ಒಂದು ರೀತಿಯಲ್ಲಿ ಜೀವವಿಮೆಯ ಪಾಲಿಸಿಯಂತೆ ಮಾಡುತ್ತಿದ್ದೇನೆಂದು ಅವಳೆಂದೂ ಒಪ್ಪುತ್ತಿರಲಿಲ್ಲ. ಆ ವರ್ಷ ಅವಳು ತಾನು ಉಪವಾಸ ಮಾಡುವುದನ್ನು ನಿರಾಕರಿಸಿದ್ದಳು. ನಾಜಿಗಳ ಆಳ್ವಿಕೆಯಲ್ಲಿ ಲಕ್ಷಾಂತರ ಯಹೂದಿಗಳು ಅನುಭವಿಸುತ್ತಿರುವ ಕ್ರೌರ್ಯದಿಂದ ದೇವರು ಇಲ್ಲದಿರಬಹುದೆಂದು ತನಗೆ ಖಾತ್ರಿ ಮಾಡಿರುವುದೆಂದು ಅನಂತರ ಅವಳು ನನ್ನಲ್ಲಿ ಹೇಳಿದ್ದಳು. ಒಂದು ವೇಳೆ ದೇವರೊಬ್ಬನಿದ್ದಿದ್ದರೆ ಅವನು ಮುಗ್ಧರು ಹಿಂಸೆಗೊಳಗಾಗುವುದನ್ನು ಬಿಡುವ ಬದಲು, ನಿಶ್ಚಯವಾಗಿಯೂ ತಪ್ಪಿತಸ್ಥರನ್ನು ಶಿಕ್ಷಿಸುತ್ತಿದ್ದನು ಎಂದೂ ಹೇಳಿದ್ದಳು. ಅವಳು ತನಗಾದ ಅಪಘಾತವನ್ನು ದೇವರ ಅಸ್ತಿತ್ವದ ಬಗ್ಗೆ ತನ್ನ ಸಂಶಯಕ್ಕಾಗಿ ಅವನು ತನಗಿತ್ತ ಶಿಕ್ಷೆ ಎಂದು ಅವಳು ತಿಳಿದಿದ್ದಾಳೆ ಎಂದು ನಾನು ಅರಿತೆ. ಆ ದಿನದಿಂದ ಅವಳು ಯಾವಾಗಲೂ ಉಪವಾಸ ಮಾಡುತ್ತಿದ್ದಳು.

ಅಮ್ಮನು ಬಹಳ ಕ್ಷೋಭೆಗೊಳಗಾಗಿದ್ದಳು. ಮನೆಯಲ್ಲಿ ತಾನು ವಿಶ್ರಾಂತಿ ತೆಗೆದುಕೊಳ್ಳಲು ತಯಾರಾಗುವ ಮುಂಚೆಯೇ ಒಂದು ಯಹೂದಿ ಪ್ರಾರ್ಥನಾ ಪುಸ್ತಕವನ್ನು ನೋಡಲೇಬೇಕೆಂದು ಆಗ್ರಹ ಮಾಡಿದಳು. ನಾನು ಮೇಜಿನ ಖಾನೆಗಳನ್ನು ಹುಡುಕಿ, ಕೊನೆಗೆ ಹಳೆಯದೊಂದು ಪುಸ್ತಕವನ್ನು ಕಂಡು, ಅವಳಿಗೆ ಅದನ್ನು ಕೊಟ್ಟೆ. ಅವಳು ಗಂಭೀರವಾಗಿ ಅದನ್ನು ತನ್ನ ಕೈಗೆ ತೆಗೆದುಕೊಂಡು ತನ್ನ ಕಣ್ಣುಗಳನ್ನು ಮುಚ್ಚಿದಳು. ಯಾವ ಸರ್ವಶಕ್ತನಲ್ಲಿ ಅವಳು ಮತ್ತೊಮ್ಮೆ ತನ್ನ ನಂಬಿಕೆಯನ್ನಿಟ್ಟಳೋ ಆ ದೇವರೊಡನೆ ಶಾಂತಿಸಂಧಾನ ಮಾಡಿಕೊಳ್ಳಲೆಂದು ಅವಳು ಒಂದು ಪ್ರಾರ್ಥನೆಯನ್ನು ಹೇಳಿದಳು.

ದಿನಗಳು ನಿಧಾನವಾಗಿ ಕಳೆದಂತೆ ಹಲವಾರು ಮಿತ್ರರು ಹಾಗೂ ಅಕ್ಕ ಪಕ್ಕದವರು ನಮಗೆ ಸಹಾಯ ನೀಡುವ ಪ್ರಸ್ತಾವದೊಡನೆ ನಮ್ಮಲ್ಲಿಗೆ ಭೇಟಿ ನೀಡಿದರು. ಅವಳನ್ನು ಭೇಟಿ ಮಾಡಲು ಯಾರನ್ನೂ ನಾನು ಏಕೆ ಒಳಗೆ ಬಿಡುತ್ತಿಲ್ಲ ಎಂದು ಅಮ್ಮ ವಿಸ್ಮಿತಳಾದಳು. ಆದರೆ ಅವಳಿಗೆ ತನಗಾದ ಪಾರ್ಶ್ವವಾಯುವಿನ ಸಂಗತಿ ತಿಳಿಯದಿರುವುದೇ ಉತ್ತಮವೆಂದು ನಾನು ನಿರ್ಧರಿಸಿದ್ದೆ. ಅವಳನ್ನು ಭೇಟಿ ಮಾಡುವವರು ಅವಳು ಒಂದು ರೀತಿ ವಿಚಿತ್ರವಾಗಿ ಕಾಣುವುದರ ಬಗೆಗೇನಾದರೂ ಟೀಕೆ ಮಾಡಬಹುದು ಎಂದು ನಾನು ಚಿಂತಿತಳಾಗಿದ್ದೆ. ತನಗೆ ಪಾರ್ಶ್ವವಾಯು ಬಡಿದಿದೆ ಎಂದು ಅವಳಿಗೇನಾದರೂ ತಿಳಿದುಹೋದರೆ, ಅದು ಅವಳು ಗುಣಮುಖಳಾಗುವುದರ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟುಮಾಡುವುದು ಎಂದು ನನಗೆ ನಿಶ್ಚಯವಾಗಿಯೂ ಅನ್ನಿಸಿದ್ದಿತು. ಅದರಿಂದಾಗಿ ಅವಳು ಕನ್ನಡಿ ನೋಡಬೇಕೆಂದಾಗ ನಾನು ಅವಳ ಮುಖದ ಪಾರ್ಶ್ವವಾಯು ಮತ್ತು ಗೊಜಗೊಜ ಮಾತು ಅವಳು ಬಿದ್ದುದರಿಂದ ಮತ್ತು ಅದರಿಂದಾದ ಪರಚು ಗಾಯಗಳಿಂದ ಆಗಿರುವುದು ಮಾತ್ರ ಎಂದು ನಾನವಳಿಗೆ ವಿವರಿಸಿದೆ.

ಆ ಸಂಜೆ ಕೌಶಲದ ಕೆಲಸ, ಓದು ಹಾಗೂ ಅಮ್ಮನನ್ನು ನೋಡಿಕೊಳ್ಳುವುದು, ಈ ಮೂರೂ ಕೆಲಸಗಳನ್ನು ನಾನು ಈಗ ಹೇಗೆ ನಿಭಾಯಿಸಬಲ್ಲೆ ಎನ್ನುವುದರ ಚರ್ಚೆ ಮಾಡಲು, ಇವಾ ಮತ್ತು ಮಿರಿಯಮ್‌ರನ್ನು ಸಂಕಟಸಮಯದ ಮಾತುಕತೆಗೆ ಕರೆಸಿ, ಎಲ್ಲಾ ಸಂಭಾವ್ಯಗಳನ್ನು ಚರ್ಚಿಸಿದ ನಂತರ, ನಾನು ಬೆಳಗಿನ ವೇಳೆಯಲ್ಲಿ ಮಾತ್ರ ಕೆಲಸ ಮಾಡಲು ಏರ್ಪಾಟು ಮಾಡಿಕೊಳ್ಳುವುದು ಎನ್ನುವ ತೀರ್ಮಾನಕ್ಕೆ ಬಂದೆನು. ಕಾರಣ, ಒಂದು ವೇಳೆ ನಾನು ಯಾವುದೇ ವಿರಾಮವನ್ನು ತೆಗೆದುಕೊಳ್ಳದೆ ಒಂದೇ ಸಮನೆ ಕೆಲಸ ಮಾಡಿದಲ್ಲಿ ನನ್ನ ಪೂರ್ಣ ಸಮಯದ ಸಂಬಳದಲ್ಲಿ ಬಹುಶಃ ಶೇ. ೭೫ನ್ನು ಗಳಿಸಬಹುದು ಎಂದು ನಾವು ಲೆಕ್ಕ ಹಾಕಿದ್ದೆವು. ಅನಂತರ ಹತ್ತಿರದ ಒಂದು ಯೂತ್ ಹಾಸ್ಟೆಲ್‌ನಲ್ಲಿ ವಾಸವಿದ್ದು ಅಲ್ಲಿಯೂ ಊಟ–ವಸತಿಗೆಂದು ಹಣ ತೆರುತ್ತಿದ್ದ ನನ್ನ ಇಬ್ಬರು ಗೆಳತಿಯರೂ ನಮ್ಮ ಮನೆಗೆ ಬಂದು ನಮ್ಮೊಡನೆ

ಇರುವುದು ಎಂದು ಒಪ್ಪಿ ನಿರ್ಧರಿಸಿದೆವು. (ಅವರು ಅಲ್ಲಿ ಕೊಡುವ ಹಣವನ್ನು ಇಲ್ಲಿ ಕೊಟ್ಟಾಗ) ನನ್ನ ಆದಾಯದಲ್ಲಾಗುವ ಕೊರತೆಯನ್ನು ತುಂಬಲು ಅವರು ಹೀಗೆ ಮಾಡಬೇಕಿತ್ತು. ಅಂದರೆ, ಅವರು ಅಮ್ಮನನ್ನು ನೋಡಿಕೊಳ್ಳಲು ಹಾಗೆಯೇ ಮನೆಗೆಲಸಗಳನ್ನು ಹಂಚಿಕೊಳ್ಳಲು ನನಗೆ ಸಹಾಯ ಮಾಡಬಹುದಾಗಿತ್ತು ಎಂದರ್ಥ. ಬಹಳ ಚರ್ಚೆಯ ನಂತರ ಇವಾ ಮತ್ತು ನಾನು ನಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕೆಂದು ನಿರ್ಧರಿಸಿದೆವು. ಇದು ಬಹಳ ಅನ್ಯಾಯದ್ದಾಗಿ ತೋರಿತು; ನಾನು ನನ್ನ ಕನಸುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ, ದಿವ್ಯವಾದ ಕೆಲವು ಕ್ಷಣಗಳವರೆಗೆ ಅವುಗಳನ್ನು ಅಪ್ಪಿ ಹಿಡಿದಿದ್ದೆ. ಕೇವಲ ಅವುಗಳು ನನ್ನ ಬೆರಳುಗಳಿಂದ ಜಾರಿಹೋಗಲಿ ಎಂದು ! ಯಾವಾಗಲೂ ನನ್ನ ಭರವಸೆಗಳನ್ನು ನಿರೀಕ್ಷೆಗಳನ್ನು ಹೆಚ್ಚಿಸುವುದು ಕೇವಲ ಕೂಡಲೇ ಅವುಗಳನ್ನು ನಾಶಮಾಡಲಿಕ್ಕೆಂದೇ ಒಂದು ಕೆಟ್ಟ ಭೂತವು ನನ್ನೊಡನೆ ಆಟವಾಡುತ್ತಿರುವುದೋ ಎಂದು ನಾನು ವಿಸ್ಮಿತಳಾದೆ. ನನಗೆ ಅಳಬೇಕೆನಿಸಿತು. ಆದರೆ ನನ್ನ ಕಣ್ಣೀರು ಅಮ್ಮನು ಗುಣಮುಖಳಾಗಲು ಸಹಾಯ ಮಾಡುವುದಿಲ್ಲ ಎಂಬುದು ನನಗೆ ತಿಳಿದಿತ್ತು.

ಮಾರನೆಯ ದಿನ ಇವಾ ಮತ್ತು ಮಿರಿಯಮ್‌ರು ತಾವು ಉದ್ದೇಶಿಸಿದ ವಿಳಾಸ ಬದಲಾವಣೆಯನ್ನು ದಾಖಲಿಸಲು ಹೋದರು. ಆದರೂ ಆ ಪೋಲೀಸಿನವನು ಹಿಂಭಾಗದ ಒಂದು ಕಛೇರಿಗೆ ಹೋಗಿ, ಕೆಲವೇ ನಿಮಿಷಗಳಲ್ಲಿ ವಾಪಸಾದವನೇ, ಯಾವ ಮನೆಯಲ್ಲಿ ಭೂಗತ ರಾಜಕೀಯ ಸಭೆಗಳು ನಡೆಯುವವೋ ಆ ಮನೆಗೆ ಅವರಿಬ್ಬರೂ ವಾಸ ಮಾಡಲು ಹೋಗುವುದಕ್ಕೆ ಅನುಮತಿಯನ್ನು ನಿರಾಕರಿಸಲಾಗಿದೆ ಎಂದು ಹೇಳಿದ. ಈ ಸುದ್ದಿಯನ್ನು ಕೇಳಿದಾಗ ನಾನು ಸ್ತಂಭೀಭೂತಳಾದೆ. ನಮ್ಮ ಆಸ್ಟ್ರಿಯನ್ ಯುವಸಮುದಾಯವನ್ನು ಹೀಗೆ ವಿಧ್ವಂಸಕ ಎಂದು ಪರಿಗಣಿಸಲಾಗಿದೆ ಎನ್ನುವುದನ್ನು ನನಗೆ ನಂಬುವುದೇ ಸಾಧ್ಯವಿರಲಿಲ್ಲ. ಒಂದು ಶಕ್ತಿಯುತ ಸಾಮಾಜಿಕ ಅಂಶವನ್ನು ಅಲ್ಲಗಳೆಯಲಾಗಿದೆಯಲ್ಲದೆ, potentially ಅಪಾಯಕಾರಿ ಎಂದೂ ತಿಳಿಯಲಾಗಿದೆ ಎಂದು ಮಾತ್ರವೇ ನಾನು ಊಹಿಸಿದೆ. ಆ ದಿನಗಳಲ್ಲಿ ನಾವು ಮಾಡಿದ್ದೆಲ್ಲವೂ ಅಪಾಯಕಾರಿಯಾಗಿ ಕಾಣುವ ಸಾಧ್ಯತೆ ಇತ್ತು. ಇಂಗ್ಲೆಂಡ್‌ನಲ್ಲಿ ಯಾವ ಜರ್ಮನನ ಮೇಲ್ಮೆಯೂ ರಕ್ಷಣಾಪಡೆಯನ್ನು ಅತ್ಯಂತ ಜಾಗರೂಕರನ್ನಾಗಿ ಮಾಡುತ್ತಿತ್ತು. ಮತ್ತೊಮ್ಮೆ ಪ್ರತಿ ಸಾರಿ ಬಾಗಿಲ ಕರೆ ಗಂಟೆ ಬಾರಿಸಿದಾಗಲೂ ನಾನು ಕಂಗಾಲಾಗುವುದು, ಪೋಲೀಸನೊಬ್ಬ ಅಲ್ಲಿ ನಿಂತಿದ್ದು, ನನ್ನನ್ನು ಕರೆದುಕೊಂಡು ಹೋಗಲು ಕಾದಿದ್ದಾನೆಂದು ನಿರೀಕ್ಷಿಸುವುದು ಪ್ರಾರಂಭವಾಯಿತು.

ನಂತರದ ಕೆಲವು ವಾರಗಳು ಅಸ್ಪಷ್ಟತೆಯಲ್ಲಿ ಉರುಳಿಹೋದವು. ನನಗೆ ಸಾಕಾಗಿಹೋಗಿತ್ತು. ಬಹಳ ಹೊತ್ತು ತದೇಕಚಿತ್ತಳಾಗಿ ಇರಬೇಕಾಗಿದ್ದುದರಿಂದ

ನನ್ನ ಕಣ್ಣುಗಳಿಗೆ ಬಹಳವೇ ಆಯಾಸವಾಗಿದ್ದಿತು. ಮತ್ತು ನನ್ನ ತಲೆ ನೋಯುತ್ತಿದ್ದಿತು. ನಿರ್ದಯವಾದ ವಾಯುಧಾಳಿಯಿಂದ ಬೆದರುತ್ತಿದ್ದ ಅಮ್ಮನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾ ಇಡೀ ರಾತ್ರಿಯನ್ನು ನಾನು ಕಳೆಯುತ್ತಿದ್ದೆ ನಾದ್ದರಿಂದ ವಿಶ್ರಾಂತಿ ತೆಗೆದುಕೊಳ್ಳಲು ನನಗೆ ಬಹಳ ಕಡಿಮೆ ಸಮಯವೇ ಸಿಕ್ಕುತ್ತಿದ್ದುದು. ಕೊನೆಗೆ ನಾನು ನಿದ್ರೆ ಮಾತ್ರೆಗಳ ಡಾಕ್ಟರ ಚೀಟಿಯನ್ನು ಪಡೆದುಕೊಳ್ಳುವಲ್ಲಿ ಸಫಲಳಾದೆ. ಇದರಿಂದಾಗಿ ಬಹಳವೇ ಅಗತ್ಯವಿದ್ದ ವಿಶ್ರಾಂತಿಯುನ್ನು ಒಬ್ಬರೂ ಪಡೆದುಕೊಳ್ಳುವಂತಾಯಿತು. ಅಮ್ಮನಿಗೆ ಅಪಘಾತವಾದ ಎರಡು ವಾರಗಳಲ್ಲೇ ಅವಳ ಮುಖದ ಪಾರ್ಶ್ವವಾಯುವು ಬಹಳಮಟ್ಟಿಗೆ ಸಂಪೂರ್ಣವಾಗಿ ಮಾಯವೇ ಆಗಿತ್ತು. ಅವಳೇ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳಲು ಬಿಡುವುದು ನನಗೆ ಸಾಧ್ಯವಾಯಿತು. ಅಮ್ಮನಿಗಾದ ಪಾರ್ಶ್ವವಾಯುವಿನ ಬಗೆಗೆ ನಾನು ಅಪ್ಪ, ಕರ್ಟ್ ಮತ್ತು ಒಟ್ಟೊನೊಡನೆ ಎಂದೂ ಹೇಳಲೇ ಇಲ್ಲ. ಆದರೆ, ಅವಳು ಬಹಳ ನೋವಾಗುವ ರೀತಿಯಲ್ಲಿ ಬಿದ್ದಳೆಂದು ಮಾತ್ರ ಅವರಿಗೆ ಹೇಳಿದೆ. ಸಹಾಯ ಮಾಡುವ ಸಾಧ್ಯತೆಯ ಬಗೆಗೆ ಅವರಿಗೆ ಏನೂ ಮಾಡಲು ಇರಲಿಲ್ಲವಾದ ಕಾರಣ, (ಅವರಿಗೆ ಸಹಾಯ ಮಾಡಲು ಹೇಗೂ ಸಾಧ್ಯವಾಗದ ಕಾರಣ) ಅವರಿಗೆ ಇದನ್ನೇ ಹೇಳಿ ಅನವಶ್ಯಕವಾಗಿ ಚಿಂತೆಗೀಡುಮಾಡುವುದರಲ್ಲಿ ಅರ್ಥವಿಲ್ಲ ಎಂದು ನಾನೇ ತರ್ಕಿಸಿದೆ.

ನಾನು ಪೋಲೀಸರಿಗೆ ಬಹಳ ಹೆದರುತ್ತಿದ್ದೆನಾದರೂ, ನಮ್ಮ ಯುವ ಸಮುದಾಯದ ಸಭೆಗಳನ್ನು ನಮ್ಮ ಮನೆಯಲ್ಲಿ ಮುಂದುವರೆಸಲು ನಿರ್ಧರಿಸಿದೆ. ಏಕೆಂದರೆ, ಅವರು ನನಗೆ ಮತ್ತು ಅಮ್ಮನಿಗೆ ಇಬ್ಬರಿಗೂ ಸ್ವಲ್ಪ ಅವಕಾಶವನ್ನೇ ಕೊಟ್ಟಿದ್ದರು. ನಾನು ನಿರೀಕ್ಷಿಸಿದ್ದಂತೆ, ಇಬ್ಬರು ಪೋಲೀಸರು ಬಂದು ನಮ್ಮ ಸಭೆಗಳಲ್ಲಿ ನಾವೇನು ಮಾಡಿದೆವು ಎಂದು ನಾನು ಬಾಗಿಲು ತೆರೆದಾಗ ವಿಚಾರಣೆ ಮಾಡುವ ದಿನವು ಬಹಳ ಬೇಗನೇ ಬಂದಿತು. ಅನೈತಿಕವಾದ ರಾಜಕೀಯ ಸಭೆಗಳನ್ನು ವ್ಯವಸ್ಥೆಗೊಳಿಸಿದ್ದಕ್ಕಾಗಿ ನನ್ನನ್ನು ಅನುಮಾನಿಸಿ ದಸ್ತಗಿರಿ ಮಾಡುತ್ತಾರೆ ಎನ್ನುವ ನನ್ನ ಭಯವನ್ನು ಅವರ ಪ್ರಶ್ನೆಗಳು ಖಾತ್ರಿ ಮಾಡಿದವು. ಆ ಪೋಲೀಸರು ಹೊರಟ ಕೂಡಲೇ ನಾನು ಆ ಗುಂಪಿನಲ್ಲಿ ನನ್ನ ಗೆಳೆಯರನ್ನು ಕಂಡು ಅವರ ಸಲಹೆಯನ್ನು ಕೇಳಲು ಧಾವಿಸಿದೆ. ಪೋಲೀಸರು ನನ್ನನ್ನು ಅನುಮಾನಿಸಿ, ಹಿಂಸೆಗೊಳಪಡಿಸದಂತೆ ನಾನು ಒಂದು ಸಾರ್ವಜನಿಕ ಮುಸುಕನ್ನು ಕಂಡುಕೊಳ್ಳುವ ಅಗತ್ಯವಿದೆಯೆಂದು ಅವರು ಅಭಿಪ್ರಾಯಪಟ್ಟರು. ಅನೇಕ ಉಪಾಯಗಳು ನಮಗೆ ಹೊಳೆದವು. ಆದರೆ ಪ್ರತಿಯೊಂದೂ ಹಿಂದಿನದಕ್ಕಿಂತ ಹೆಚ್ಚು ಹಾಸ್ಯಾಸ್ಪದವಾಗಿರುತ್ತಿತ್ತು. ಕೊನೆಗೆ ಕೆನ್ ನಾವಿಬ್ಬರೂ ಮದುವೆಯಾದರೆ ಪೋಲೀಸ ಕಣ್ಣಿಗೆ ಮಣ್ಣೆರಚಿ ನಾನು ಯಾವುದೇ ವಿಧ್ವಂಸಕ ರಾಜಕೀಯಕ್ಕಿಂತಲೂ ಪ್ರೇಮ ಮತ್ತು ಮದುವೆಗಳಲ್ಲೆ

ಹೆಚ್ಚು ಆಸಕ್ತಳಾಗಿದ್ದೆ ಎಂದು ಅವರು ನಂಬುವ ಹಾಗೆ ಮಾಡಬಹುದು ಎಂದ. ಇದೊಂದು ಅದ್ಭುತವಾದ ಉಪಾಯವೆಂದು ಗುಂಪಿನ ಎಲ್ಲರಿಗೂ ಅನ್ನಿಸಿತು. ಆದರೂ ನಾನು ಮಾತ್ರ ಸಂದಿಗ್ಧಕ್ಕೊಳಗಾದೆ. ಆಗ ನಾನು ಕೇವಲ ಹದಿನೆಂಟು ವರ್ಷದವಳಾಗಿದ್ದೆ. ಪ್ರಪಂಚದ ರೀತಿ ನೀತಿಗಳಲ್ಲಿ ಪ್ರೌಢಳಂತೆ ಕಂಡರೂ, ಪ್ರೇಮ–ಸಂಬಂಧಗಳ ವಿಷಯಕ್ಕೆ ಬಂದಾಗ ನಾನು ಒಬ್ಬ ಅನನುಭವಿಯಾಗಿದ್ದೆ. ಕೆನ್‌ನು ಬುದ್ಧಿವಂತನೂ, ಸಭ್ಯನೂ ಹಾಗೂ ಸಾಕಷ್ಟು ಸ್ಫುರದ್ರೂಪಿಯೂ ಆಗಿರುವಂತೆ ಕಂಡ. ಆದರೆ, ರಾಗಭಾವಗಳಲ್ಲಿ ನನ್ನನ್ನು ತಣ್ಣಗಿರಿಸಿದ್ದ. ಈಗ ನಾನೇನು ಮಾಡಬೇಕು ಎಂದು ಯೋಚಿಸುತ್ತಾ ರಾತ್ರಿ ಎಚ್ಚರವಿದ್ದು ಮಲಗಿದ್ದಾಗ, ನನ್ನೊಳಗೆ ಸಿಟ್ಟು ಮೇಲಾಗಿದ್ದಂತೆ ನನಗೆ ಭಾಸವಾಯಿತು. ನನಗಾಗಿ ನಾನು ಆರಿಸಿದ್ದು ಯಾವುದನ್ನೂ ನನ್ನ ಜೀವನದಲ್ಲಿ ನಾನು ಹೋಗುವ ಹಾಗಿಲ್ಲವೇ? ನನ್ನ ಭವಿಷ್ಯವು ಬಹಳಷ್ಟರ ಮಟ್ಟಿಗೆ ನನ್ನ ಹಿಡಿತದಲ್ಲಿಲ್ಲವೆಂಬಂತೆ ಕಾಣಿಸಿತು: ಮೊದಲಿಗೆ ನನ್ನ ವೃತ್ತಿಜೀವನ, ಅನಂತರ ವಿದ್ಯಾಭ್ಯಾಸ, ಈಗ ನನ್ನ ಪತಿಯ ಆಯ್ಕೆಯ ವಿಷಯದಲ್ಲೂ ಸಹ, ಇವಾ ಮತ್ತು ಮಿರಿಯಮ್‌ರು ಕೆನ್‌ನ ಪ್ರಸ್ತಾಪವನ್ನು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡುತ್ತಿದ್ದರು. ಕೆನ್‌ನೂ ಸಹ ಪುಸ್ತಕಗಳ ಹಾಗೂ ಹೂವುಗಳ ಸಣ್ಣಪುಟ್ಟ ಉಡುಗೊರೆಗಳನ್ನು ತಂದು ಕೊಡುವುದರ ಮೂಲಕ ನಾನು ಅವನನ್ನು ಮದುವೆಯಾಗುವಂತೆ ನನ್ನನ್ನು ಮೆಚ್ಚಿಸಲು ಪ್ರಯತ್ನಿಸತೊಡಗಿದ.

ಕೆಲವು ದಿನಗಳವರೆಗೆ ನಾನು ಯಾವ ನಿರ್ಧಾರಕ್ಕೂ ಬರದವಳಾದೆ. ಆದರೆ, ಪೋಲೀಸರ ಎರಡನೇ ಭೇಟಿಯು ನಾನು ಒಂದು ನಿರ್ಧಾರಕ್ಕೆ ಬರುವಂತೆ ಮಾಡಿತು. ಮಾರನೆಯ ದಿನವೇ ನಾನು ಅಮ್ಮನಿಗೆ ಕೆನ್ ಮತ್ತು ನಾನು ಪ್ರೀತಿಸತೊಡಗಿದ್ದೇವೆಂದೂ, ಮದುವೆಯಾಗಲು ಯೋಚಿಸುತ್ತಿದ್ದೇವೆಂದೂ ಘೋಷಿಸಿದೆ. ಇದನ್ನು ನಾನು ಉದ್ವೇಗದಿಂದ ಹೇಳಲು ಯತ್ನಿಸಿದೆ. ಆದರೆ ಒಳಗೊಳಗೇ ಅಳುತ್ತಿದ್ದೆ. ಆದರೆ ಯಾರಾದರೂ ಒಬ್ಬರು ನಾನು ಅವನನ್ನು ಮದುವೆಯಾಗಬಾರದೆಂದು ಹೇಳಲಿ ಎಂದು ಅಸಾಧ್ಯವಾಗಿ ನಿರೀಕ್ಷಿಸುತ್ತಿದ್ದೆ. ಆದರೆ ಹಾಗೆ ಯಾರೂ ಹೇಳಲೇ ಇಲ್ಲ. ನನ್ನ ಕುಟುಂಬದ ಎಲ್ಲರಿಗೂ ನನ್ನ ನಿರ್ಧಾರವು ಆಶ್ಚರ್ಯಕರವಾಗಿ ಸಂಪ್ರೀತಿಯಾಗಿತ್ತು. ಇನ್ನು ಹಿಂದಿರುಗುವುದು ಇರಲಿಲ್ಲ.

ನಾನೂ ಕೆನ್‌ನೂ ಬಹಳಷ್ಟು ಪರಸ್ಪರ ಸಂಧಿಸತೊಡಗಿದೆವು. ನಾವಿಬ್ಬರೂ ಸ್ಥಳೀಯ ಸಿನಗಾಗ್‌ನ (ಯಹೂದಿಗಳ ಪ್ರಾರ್ಥನ ಮಂದಿರ) ರೆಬ್ಬೈನ್ನು ಕಂಡು ಮದುವೆಯ ವ್ಯವಸ್ಥೆಗಳ ಬಗೆಗೆ ಸಮಾಲೋಚಿಸಿದೆವು. ಇದಾದ ಕೆಲವೇ ದಿನಗಳಲ್ಲಿ ಅಪ್ಪ ಮತ್ತು ಕರ್ಟ್ ಇಬ್ಬರೂ ತಮ್ಮ ನಿರ್ಬಂಧಿತ ಕ್ಯಾಂಪ್‌ನಿಂದ ಬಿಡುಗಡೆ ಹೊಂದಿ ಮನೆಗೆ ವಾಪಸಾದರು. ಇದು ನನಗೆ ಬಹಳಷ್ಟು ಸುಲಭವಾಗುವ ಹಾಗೆ ಮಾಡಿತು. ನಾನು ಸರಿಯಾದದ್ದನ್ನೇ ಮಾಡುತ್ತಿದ್ದೇನೆಂದು ನನಗೆ ನಾನೇ ಖಾತರಿ

ಮಾಡಿಕೊಂಡೆ. ಈಗ ಕೆನ್ ಬಗೆಗೆ ನನ್ನ ಮನದಲ್ಲೂ ಭಾವನೆಗಳನ್ನು ನಾನೇ ಸೃಷ್ಟಿಸಿಕೊಳ್ಳಲು ಪ್ರಾರಂಭಿಸಿದೆ. ಅದರಿಂದಲೇ ಮದುವೆಯ ನಂತರ ನಾನು ಅವನ ಜತೆ ಇರಬೇಕೆಂದು ಅವನು ಆಗ್ರಹಪಡಿಸಿದಾಗ ನಾನು ಕೂಡಲೇ ಒಪ್ಪಿಕೊಂಡೆ. ನಮ್ಮ ಮದುವೆಯ ನಂತರವೂ ನಾನು ಮತ್ತು ಕೆನ್ ನನ್ನ ತಂದೆತಾಯಿಗಳ ಜೊತೆಯಲ್ಲೇ ಇರಬೇಕು ಎನ್ನಲು ನನ್ನ ತಂದೆ ತಾಯಿಗಳಿಗೆ ಯಾವ ಕಾರಣವೂ ಇರಲಿಲ್ಲ. ಆದರೆ ಮದುವೆಯ ನಂತರ ನಮ್ಮ ಜೀವನವನ್ನು ನಾವೇ ಪ್ರಾರಂಭ ಮಾಡುವ ಅಗತ್ಯವಿದೆ ಎಂದು ನಾವು ಒತ್ತಿ ಹೇಳಿದೆವು. ಸಿನಗಾಗ್‌ನ ಮಹಿಳಾ ಸಮಾಜವು ನಮ್ಮ ಮದುವೆಯು ಬಹಳ ರೋಮಾಂಚಕವೆಂದು ತಿಳಿದು, ಯಹೂದಿ ನಿರಾಶ್ರಿತರು ಆರ್ಥಿಕ ಸಂಕಷ್ಟಗಳನ್ನೆದುರಿಸುತ್ತಿರುವುದನ್ನು ಪರಿಗಣಿಸಿ ತಾವು ವಿವಾಹದ ಆರತಕ್ಷತೆಯನ್ನು ವ್ಯವಸ್ಥೆ ಮಾಡುವುದಾಗಿ ಹೇಳಿದರು. ನಾವು ಮದುವೆಗೆ ತಯಾರಾಗಿದ್ದುದರಿಂದ ಪ್ರೀತಿಸುತ್ತಿರುವ ಒಂದು ಯುವ ಜೋಡಿಯ ಪಾತ್ರವನ್ನು ನಿರ್ವಹಿಸಿದೆವು: ಕೈ ಕೈ ಹಿಡಿದುಕೊಂಡೆವು, ಅಪ್ಪಿಕೊಂಡೆವು ಮತ್ತು ಚುಂಬಿಸಿದೆವು ಸಹ. ನನಗಂತೂ ಇದೆಲ್ಲವೂ ಪಾತ್ರದ ನಿಭಾವಣೆಯಾಗಿತ್ತು. ಕೆನ್‌ಗೂ ಸಹ ಅಂತೆಯೇ ಎಂದು ನಾನು ಮನಗಂಡೆ.

ನಮ್ಮ ಮದುವೆಯು ೧೯೪೧ರ ಜೂನ್ ೨೧ರಂದು ಎಂದು ನಿರ್ಧಾರವಾಯಿತು. ಅದು ಹಿಟ್ಲರನ ಸೇನೆಯು ಸೋವಿಯತ್ ಒಕ್ಕೂಟವನ್ನು ಮುತ್ತುವ ದಿನವಾಗುವುದರಲ್ಲಿತ್ತು. ನಾನು ಕಷ್ಟಪಟ್ಟು ಒಂದು ಹೊಸ ಸೂಟನ್ನೂ, ಒಂದು ಚಿಕ್ಕ ಹ್ಯಾಟನ್ನೂ ಕೊಂಡುಕೊಳ್ಳಲು ಸಾಕಾಗುವಷ್ಟು ಹಣ ಕೂಡಿಸಿಕೊಂಡೆ. ಸಿನಗಾಗನಲ್ಲಿ ಕಾಣಿಸಿಕೊಳ್ಳುವವರೆಗೂ ನಾನು ಪಾತ್ರವಾಗಿ ಕಾಣುತ್ತಿದ್ದೇನೆ ಎಂದು ತಿಳಿದಿದ್ದೆ. ನಾನು ಸಾಂಪ್ರದಾಯಿಕವಾದ ಶ್ವೇತವರ್ಣದ ಉಡುಪನ್ನೇ ಧರಿಸಿಲ್ಲವೆಂದು ಮಹಿಳಾ ಸಮಾಜದವರು ತಮ್ಮ ನಿರಾಸೆಯನ್ನು ಮುಚ್ಚಿಡದಾದರು. ಮೊದಲೇ ಹೀಗಾಗುವುದೆಂದು ತಮಗೆ ತಿಳಿದಿದ್ದರೆ ತಾವೇ ಒಂದು ಉಡುಪನ್ನು ಕೊಡಿಸುತ್ತಿದ್ದುದಾಗಿ ಹೇಳುತ್ತಲೇ ಇದ್ದರು. ಬಹಳ ಬೇಗನೇ ಅವರೊಂದು ತಾತ್ಕಾಲಿಕ ಅವಗುಂಠನವನ್ನು ಮಾಡಿದರು. ನಾನು ಅಪ್ಪನೊಡನೆ ಸಿನಗಾಗನ್ನು ಪ್ರವೇಶಿಸಿದೆ. ತಾವು ಹೇಗೆ ಭೇಟಿಯಾದೆವು, ತಮ್ಮ ಮದುವೆಯು ಹೇಗೆ ಒಂದು ವಿಭಿನ್ನ ರೀತಿಯದ್ದಾಗಿತ್ತು ಎಂದು ಅಮ್ಮನು ನನಗೆ ಹೇಳುತ್ತಿದ್ದ ಕಥೆಗಳನ್ನೆಲ್ಲ ನಾನು ಜ್ಞಾಪಿಸಿಕೊಂಡೆ. ಪಕ್ಕದಲ್ಲಿದ್ದ ಕೆನ್‌ನತ್ತ ದೃಷ್ಟಿ ಹಾಯಿಸಿದೆ; ನಾನೇನು ಮಾಡುತ್ತಿದ್ದೇನೆ ಎಂದು ಚಕಿತಳಾದೆ. ಆದರೆ ಯಾವುದನ್ನು ಬದಲಾಯಿಸಲೂ ಆಗ ಬಹಳ ತಡವಾಗಿದ್ದಿತು.

ಆರತಕ್ಷತೆಯಲ್ಲಿ ಕೆನ್‌ನ ಭಾಷಣ ಬಹಳ ಚುಟುಕಾಗಿತ್ತು. ಮತ್ತದು ಅವನ ಬಲವನ್ನು ತೋರಿಸಿದ್ದಿತು. ಅವನಾಗಲೇ ನನ್ನನ್ನು ಮೋಸಗೊಳಿಸಿದ್ದಾನೆ ಎಂದು

ನನಗನ್ನಿಸಿತು. ಅದನ್ನು ಅಲ್ಲಿಗೇ ಬಿಡುವುದು ಬೇಕಿಲ್ಲದೆ ನಾನೂ ಕೂಡಲೇ ಕೆಲವು ಮಾತುಗಳನ್ನಾಡಲು ಎದ್ದುನಿಂತೆ. ಆ ದಿನಗಳಲ್ಲಿ ಇಂಥದು ಕೇಳರಿಯದ್ದಾಗಿತ್ತು. ಆರತಕ್ಷತೆಯು ಮುಗಿಯುವುದು ಮತ್ತು ನನ್ನ ವೈವಾಹಿಕ ಜೀವನ ಪ್ರಾರಂಭವಾಗುವುದು ನನಗೆ ಬೇಕಿರಲಿಲ್ಲ. ಹೇಗಾದರೂ, ಅದು ನನಗೆ ತಿಳಿಯುವ ವೇಳೆಗೆ ಕೆನ್ ಮತ್ತು ನಾನು ನಮ್ಮ ಒಂದು ರೂಮಿನ ಮನೆಯ ದಾರಿಯಲ್ಲಿದ್ದೆವು. ನಾವಿಬ್ಬರೇ ಏಕಾಂತ ದಲ್ಲಿರುವಂತಾದ ಕೂಡಲೇ ಕೆನ್ ನನ್ನನ್ನು ತನ್ನ ತೋಳುಗಳಿಂದ ಬಳಸಿದ, ಪ್ರೀತಿ ಮಾಡಲು ಪ್ರಯತ್ನಿಸಿದ. ಇದು ಕೇವಲ ಅವನಿಗೆ ಸ್ಪಷ್ಟ ಗೋಚರವಾದ ನಟನೆ ಆಗಿರಲಿಲ್ಲವೆಂದು ಇದ್ದಕ್ಕಿದ್ದಂತೆಯೇ ಭೀಕರವಾಗಿ ನನ್ನ ಅರಿವಿಗೆ ಬಂದಿತು.

ಅಂತೆಯೇ ಮದುವೆಗೆ ಅವನ ಪ್ರಸ್ತಾವವೂ ನಾನಂದುಕೊಂಡಂತೆ ಕೇವಲ ಮುಸುಕು ಎಂಬುದೂ ಆಗಿರಲಿಲ್ಲ. ಏನು ಯೋಚಿಸಬೇಕೆಂದೇ ನನಗೆ ತಿಳಿಯಲಿಲ್ಲ. ನಾನಿನ್ನೂ ಕನ್ಯೆಯಾಗಿದ್ದೆ. ನನ್ನ ಸಹೋದ್ಯೋಗಿ ಯಂತ್ರಗಾರ್ತಿಯರಿಂದ ನಾನು ಈ ಬಗ್ಗೆ ಬಹಳಷ್ಟು ಕೇಳಿದ್ದೆನಾದರೂ (ಯಾರು ಆಗಾಗ ಅತ್ಯಂತ ಆತ್ಮೀಯತೆಯಿಂದ, ಸಲಿಗೆಯಿಂದ ಆಪ್ತ ವಿಷಯ ವಿವರಗಳನ್ನು ಚರ್ಚಿಸುವುದರಲ್ಲಿ ತಮ್ಮ ದಿನಗಳನ್ನು ಕಳೆಯುತ್ತಿದ್ದರೋ, ಅಂಥವರು) ನನಗೆ ವೈಯಕ್ತಿಕವಾಗಿ ಲೈಂಗಿಕ ಅನುಭವವಿರಲಿಲ್ಲ. ಕೆನ್ ನಯನಾಜೂಕಿಲ್ಲದವನಾಗಿದ್ದ. ಅನಾಗರಿಕವಾಗಿ ನನ್ನ ಮೇಲೆ ಮುಗಿಬಿದ್ದ. ನಾನು ಅದು ಮುಗಿಯುವುದನ್ನೇ ಕಾಯುತ್ತಾ ಮಲಗಿದ್ದೆ. ನಾವು ಪರಸ್ಪರರಿಂದ ದೂರ ಉರುಳಿಕೊಂಡಂತೆಯೇ ನಾನು ಅಳುತ್ತಾ ಈ ಗೋಜಲಿಗೆ ನಾನು ಸಿಕ್ಕಿಕೊಂಡದ್ದಾದರೂ ಹೇಗೆ ಎಂದು ಶಾಂತಳಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಹಿಂದೆಂದೂ ನನಗೆ ಭಾಸವಾಗದಿದ್ದಂತೆ ಒಂದು ರೀತಿಯಲ್ಲಿ ನಾನು ಬಲೆಗೆ ಸಿಕ್ಕಿಕೊಂಡಂತೆ ಅನ್ನಿಸಿತು.

ಮಾರನೆ ದಿನ ಬೆಳಿಗ್ಗೆ ತಿಂಡಿ ತಿನ್ನುವಾಗ ಅವನು ನನ್ನಲ್ಲಿ ಮದುವೆ ಪ್ರಸ್ತಾಪ ವನ್ನಿಟ್ಟಿದ್ದೇಕೆ ಎಂದು ಕೆನ್‌ಗೆ ಆ ಕಾರಣವನ್ನು ನೆನಪಿಸಿದೆ. ಭಯಂಕರ ಮುಜುಗರವಾಗಿದ್ದು, ನಾವಿಬ್ಬರು ಒಬ್ಬರನ್ನೊಬ್ಬರು ನೋಡುತ್ತ ಇರಲಿಲ್ಲ. ನಾವು ಗಂಡ–ಹೆಂಡಿರಂತೆ ಒಟ್ಟಾಗಿ ಬದುಕಲಾಗುವುದಿಲ್ಲವೆಂದು ನಾನು ಅವನಿಗೆ ಹೇಳಿದಾಗ ಅವನು ನಿರಾತಂಕಗೊಂಡಂತೆ ನನಗನ್ನಿಸಿತು. ಯುದ್ಧ ನಡೆಯುವ ಸಮಯದ ವರೆಗೆ ನಾವು ಗೆಳೆಯರಂತೆ ಸರಳವಾಗಿ ಒಟ್ಟಾಗಿರೋಣ ಎಂದು ಒಪ್ಪಿದೆವು. ಆದರೂ ಪ್ರತಿ ರಾತ್ರಿಯೂ ಒಂದೇ ಹಾಸಿಗೆಯನ್ನು ಹಂಚಿಕೊಳ್ಳುವುದು ನಮ್ಮಿಬ್ಬರಿಂದ ಸುಂಕ ವಸೂಲಿ ಮಾಡುವುದಿತ್ತು. ನನ್ನ ಭಾವನೆಗಳ ಜೊತೆಗೆ ಮೇಳೈಸದ ಆಸೆಗಳಿಗೆ ನನ್ನ ತಾರುಣ್ಯದ ಶರೀರವು ಆಶ್ರಯ ನೀಡಿತು. ನನಗೆ ಹೊಟ್ಟೆಯ ಸಮಸ್ಯೆ ಪ್ರಾರಂಭವಾಗಿ ನಾನು ತಿನ್ನುವುದನ್ನೇ ನಿಲ್ಲಿಸಿದೆ. ಅಂತೆಯೇ ಬಹಳಷ್ಟು ತೂಕವನ್ನು ಕಳೆದುಕೊಂಡೆ. ನನ್ನ ತಂದೆತಾಯಿಗಳಿಗೆ ಇದೇ ದೊಡ್ಡ ಚಿಂತೆಯಾಯಿತು.

ನನಗಾಗುತ್ತಿರುವ ತೊಂದರೆಯಾದರೂ ಏನು ಎಂದು ತನ್ನಲ್ಲಿ ಹೇಳಬೇಕೆಂದು ಅಮ್ಮ ನನ್ನ ಮನವೊಲಿಸಿ ಕೇಳುವ ಪ್ರಯತ್ನದಲ್ಲೇ ಹಲವು ಗಂಟೆಗಳನ್ನು ಕಳೆದಳು. ಆದರೆ ಬಂಧನಕ್ಕೊಳಗಾಗುತ್ತೇನೆಂಬ ಭಯದಿಂದ ನಾನು ಕೆನ್‌ನ ಮದುವೆಯಾದೆ ಎಂದು ಅವಳಿಗೆ ನಾನು ಹೇಗೆ ತಾನೆ ಹೇಳಲು ಸಾಧ್ಯವಿದ್ದಿತು? ಕಾರಣ ಅವಳ ಯೋಗಕ್ಷೇಮವನ್ನು ಅವಳಿಗೇ ನೋಡಿಕೊಳ್ಳಲು ಬಿಟ್ಟುಬಿಡಬೇಕಾದೀತು ಎಂದು ನಾನು ಭಯಗೊಂಡಿದ್ದೆ.

ಕೆಲವೇ ತಿಂಗಳುಗಳ ಅನಂತರ ಅದೃಷ್ಟವಶಾತ್ ಕೆನ್‌ನು ಸ್ವ ಇಚ್ಛೆಯಿಂದ ಸೇವೆಗೆ ಸೇರಿಕೊಂಡ ಮತ್ತು ಎಂಜಿನಿಯರಿಂಗ್ ಸೇನಾಂಗದ ಸೇವೆ ಸಲ್ಲಿಸಲು ಹೊರಟುಹೋದ. ಅವನ ನಿರ್ಗಮನವು ನನಗೊಂದು ದೊಡ್ಡ ನಿರಾಳವಾಯಿತು. ಬೇಗನೇ ನಾನು ನನ್ನ ಆರೋಗ್ಯವನ್ನು ಮತ್ತೆ ಪಡೆದುಕೊಂಡೆ. ಪೋಲೀಸರು ನನ್ನ ಪಾಡಿಗೆ ನಾನಿರಲು ನನ್ನನ್ನು ಬಿಟ್ಟರು. ಏಕೆಂದರೆ ಕೆನ್‌ನನ್ನು ಮದುವೆಯಾದದ್ದು ಒಂದು ರೀತಿಯಲ್ಲಿ ನನ್ನ ಮದುವೆಗೆ ಒಂದು ಸಾಧಾರವನ್ನು ದೊರಕಿಸಿಕೊಟ್ಟಿತ್ತು.

ಹಲವು ನಿರ್ಬಂಧಿತ ಕ್ಯಾಂಪುಗಳಲ್ಲಿದ್ದ ಉಳಿದ ನಮ್ಮ ಯುವ ಸಮುದಾಯವು ಬಿಡುಗಡೆಯಾದ ಕಾರಣದಿಂದ ಮ್ಯಾಂಚೆಸ್ಟರಿನಲ್ಲಿ ಒಂದು ಆಸ್ಟ್ರಿಯಾ ಹೌಸ್‌ವು ಸ್ಥಾಪಿತವಾಯಿತು. ಆಗ ನಮ್ಮ ತರುಣ ಸಮುದಾಯದ ಸಭೆಗಳು ಅಲ್ಲಿ ನಡೆದವು. ಮತ್ತೊಮ್ಮೆ ನಾನು ಆಸ್ಟ್ರಿಯನ್ ಸಮುದಾಯದ ಕ್ರಿಯಾಶೀಲ ಸದಸ್ಯಳಾದೆ. ಈಗ ನಾನು ಬ್ರಿಟಿಷ್ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಒಬ್ಬ ಸೈನಿಕನ ಪತ್ನಿಯಾಗಿದ್ದೆ. ಆದ್ದರಿಂದ ಸಂಶಯಾತೀತಳಾಗಿದ್ದೆ. ಈ ಸಭೆಗಳಲ್ಲೊಂದು ಸಭೆಯಲ್ಲಿ ನಾನು ಅರ್ನ್ಸ್ಟ್‌ನನ್ನು ಮತ್ತೊಮ್ಮೆ ನೋಡಿದೆ; ಅವನು ಎತ್ತರವಾಗಿದ್ದು, ಸ್ಫುರದ್ರೂಪಿಯಾಗಿದ್ದ. ಅಲ್ಲದೆ, ಅವನು ವಿಯೆನ್ನಾದಿಂದ ಬಂದಿದ್ದ. ಅವನು ತನ್ನ ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ಬೆಂಬಲವಾಗಲು ಒಬ್ಬ ಪ್ರಾಯೋಜಕರನ್ನು ಕಂಡುಹಿಡಿದುಕೊಳ್ಳುವಷ್ಟು ಅದೃಷ್ಟಶಾಲಿಯಾಗಿದ್ದನೆಂದು ನನಗೆ ತಿಳಿಯಿತು. ಅದರಿಂದಲೇ ಅವನು ತನ್ನ ವಿಶ್ವವಿದ್ಯಾನಿಲಯದ ಸ್ಕಾರ್ಫ್‌ನ್ನು ಯಾವಾಗಲೂ ಪ್ರದರ್ಶಿಸುತ್ತಿದ್ದ. ನಾನು ಕೂಡಲೇ ಅವನತ್ತ ಆಕರ್ಷಿತಳಾದೆ. ಕಾರಣ ನನ್ನಲ್ಲಿ ಇಲ್ಲದ, ಆದರೆ ನನಗೆ ಬೇಕಾದ ಎಲ್ಲವನ್ನೂ ಅವನು ಪ್ರತಿನಿಧಿಸುತ್ತಿದ್ದ. ನಾವು ಆಗಿಂದಾಗ್ಗೆ ಭೇಟಿಯಾಗತೊಡಗಿದೆವು. ನಾವಿಬ್ಬರೂ ಒಟ್ಟಿಗಿರಬಹುದಾದ ಸಮಯಕ್ಕಾಗಿ ನಾನೇ ಎದುರುನೋಡುವಂತಾದೆ; ಅದೆಷ್ಟೆಂದರೆ ಅದಕ್ಕಿಂತಲೂ ಸ್ವಲ್ಪ ಬೇರೆಯದೇನನ್ನೋ ನಾನು ಯೋಚಿಸಲು ಪ್ರಾರಂಭಿಸಿದೆ. ಒಂದು ಸಂಜೆ ನಾವಿಬ್ಬರೂ ಅಕ್ಕ ಪಕ್ಕದಲ್ಲಿ ನಡೆದು ಹೋಗುತ್ತಿದ್ದಾಗ, ಇದ್ದಕ್ಕಿದ್ದಂತೆಯೇ ನಿಂತು ಮುಖಾಮುಖಿಯಾಗಲು ತಿರುಗಿದೆವು. ಅವನು ನನ್ನನ್ನು ಚುಂಬಿಸಲು ಹತ್ತಿರ ಬರಸೆಳೆದುಕೊಂಡಂತೆ, ನಾನು ಪ್ರಬಲವಾದ ಭಾವನೆಗಳ ಆವೇಗಕ್ಕೊಳಗಾಗಿ ಅವನ ಬಾಹುಗಳೊಳಗೆ ಹಾಗೆಯೇ ಕರಗಿಹೋದೆ. ಅವನು ನನ್ನನ್ನು ದೀರ್ಘವಾಗಿ

ಚುಂಬಿಸಿದ. ನಾನೂ ಅವನನ್ನು ಆವೇಶದಿಂದ, ಮತ್ತೆ ಚುಂಬಿಸಿದೆ. ಇದು ನಮ್ಮಿಬ್ಬರನ್ನೂ ಚಕಿತರನ್ನಾಗಿಸಿತು. ನಾನು ಅವನನ್ನು ಪ್ರೀತಿಸುತ್ತಿದ್ದೇನೆಂದು ನನಗೆ ಒಮ್ಮೆಲೇ ತಿಳಿಯಿತು. ಅಂತೆಯೇ ನನ್ನ ಕಿವಿಗಳಲ್ಲಿ ಅರ್ನ್ಸ್ಟ್‌ನ ಅಸ್ಪಷ್ಟ ಮಾತುಗಳಿಂದ ಆ ಪ್ರೀತಿಯು ಪರಸ್ಪರ ವಿನಿಮಯವಾಗಿದೆ ಎಂದೂ ತಿಳಿಯಿತು. ನಾವು ಹೊರಡುವಾಗ ಮಾರನೆಯ ದಿನ ಸಂಜೆಯೂ ಮತ್ತೆ ಭೇಟಿಯಾಗುವ ಯೋಜನೆ ಹಾಕಿಕೊಂಡೆವು. ನಾನು ಮನೆಗೆ ತೇಲಿಬಂದೆ. ನನ್ನಲ್ಲಿ ಮೊಟ್ಟ ಮೊದಲಬಾರಿಗೆ ನಿಜಕ್ಕೂ ಜೀವಂತಿಕೆ ಇರುವಂತೆ ಅನ್ನಿಸಿತು. ನಾನು ಅರ್ನ್ಸ್ಟ್‌ನನ್ನು ಸಾಕಷ್ಟು ಹೆಚ್ಚಾಗಿಯೇ ಹಚ್ಚಿಕೊಂಡಿರುವುದನ್ನು ನನ್ನ ತಂದೆ ತಾಯಿ ಬಹಳ ಬೇಗನೇ ಗಮನಿಸಿದರು. ಅವನನ್ನು ಅವರು ಇಷ್ಟಪಟ್ಟರೂ, ತಮ್ಮ ಮಗಳು ಅವಳ ಪತಿಗೆ ಮೋಸ ಮಾಡುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. ಹೇಗಾದರೂ ಇದೇನೂ ನನ್ನನ್ನು ತಡೆಯಲಿಲ್ಲ; ಅದೇನೇ ಇದ್ದರೂ ಅರ್ನ್ಸ್ಟ್ ಬಗೆಗಿನ ನನ್ನ ಪ್ರೇಮ ಪ್ರತಿದಿನವೂ ಹೆಚ್ಚುತ್ತಾ ಹೋಯಿತು. ನಮ್ಮನ್ನು ಬೇರ್ಪಡಿಸುತ್ತಿದ್ದ ಕೆಲಸವು ಒಂದು ಅನವಶ್ಯಕವಾದ ಅನಿಷ್ಟವಾಯಿತು. ಅವನ ಬಾಹುಗಳೊಳಗೆ ನನ್ನನ್ನು ಸೇರಿಸುವ ಬಿಡುಗಡೆಯ ಅಂತಿಮ ಗಂಟೆಯ ಬಾರಿಸುವಿಕೆಗಾಗಿ ನಾನು ಹಾತೊರೆದೆ. ಅವನು ಪದವಿ ಪಡೆದು ಸೇನೆಯನ್ನು ಸೇರುವತನಕವೂ ನಾವಿಬ್ಬರೂ ಬಹಳಷ್ಟು ಸಂಜೆಗಳನ್ನು ಒಟ್ಟಿಗೆ ಕಳೆದೆವು. ಅದೃಷ್ಟವಶಾತ್ ಅವನು ಮ್ಯಾಂಚೆಸ್ಟರ್‌ನಲ್ಲೇ ಇರುವಂತಾಯಿತು. ಆದ್ದರಿಂದ ನಾವಿಬ್ಬರೂ ಸಾಕಷ್ಟು ಸಾರಿ ಪರಸ್ಪರರನ್ನು ನೋಡುವಂತಾದೆವು.

ಮದುವೆಯಾಗಲು ನಾವಿಬ್ಬರೂ ಯೋಜನೆಗಳನ್ನು ಹಾಕಿಕೊಳ್ಳ ಲಾರಂಭಿಸಿದೆವು. ಎಷ್ಟು ಬೇಗ ನನ್ನ ವಿಚ್ಛೇದನವು ಆಗಬಹುದೆಂದು ತಿಳಿದುಕೊಳ್ಳಲು ಪ್ರಯತ್ನಿಸಿದೆವು. ನಮ್ಮ ಸಂಬಂಧದ ಬಗ್ಗೆ ನಾವು ಸಾಕಷ್ಟು ಮುಕ್ತರಾಗಿದ್ದೆವು. ನಮ್ಮ ಯುವ ಸಮುದಾಯದ ಗೆಳೆಯರಲ್ಲಿ ಹಲವು ಮಂದಿ ಪ್ರದರ್ಶಿಸುತ್ತಿದ್ದ ವಿಕ್ಟೋರಿಯಸ್ ಮನೋಭಾವವನ್ನು ನಾವು ಅವಾಕ್ಕಾಗುವಂತೆ ಆಶ್ಚರ್ಯಕ್ಕೀಡು ಮಾಡಿದೆವು. ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದಾದವನೆಂದು ನಾನು ಭಾವಿಸಿದ್ದ ಕರ್ಟ್‌ನೂ ಸಹ ನನ್ನ ಮೇಲೆ ಆಕ್ರಮಣ ಮಾಡಿದ. ಆ ಸಮಯದಲ್ಲಿ ನಮ್ಮ ಯುವ ಸಮುದಾಯಕ್ಕೆ ಅವನು ನಾಯಕನಾಗಿದ್ದ. ತನಗೆ ಹೇಗನ್ನಿಸಿತು ಎಂಬುದರ ಬಗ್ಗೆ ನನ್ನ ಜೊತೆ ಪ್ರತ್ಯೇಕವಾಗಿ ಮಾತನಾಡುವುದನ್ನು ಬಿಟ್ಟು ಸಮಿತಿಯ ಮುಂದೆ ಚೆನ್ನಾಗಿ ನನಗೆ ಛೀಮಾರಿ ಹಾಕಿದ. ಜೊತೆಗೆ ಅರ್ನ್ಸ್ಟ್‌ನೊಡನೆ ನಾನು ಹೊರಗೆ ಹೋಗುವುದನ್ನು ನಿಲ್ಲಿಸದಿದ್ದರೆ ಅರ್ನ್ಸ್ಟ್ ಮತ್ತು ನಾನು ಇಬ್ಬರನ್ನೂ ಹೊರಗೆ ಹಾಕಬೇಕಾಗುತ್ತದೆ ಎಂದೂ ಹೇಳಿದ. ನಾನು ಅರ್ನ್ಸ್ಟ್‌ನನ್ನು ಭೇಟಿಯಾಗುವುದನ್ನೇ ನಿಲ್ಲಿಸಿ, ಲಂಡನ್‌ಗೆ ವಾಪಸಾಗಬೇಕೆಂದೂ, ಅಲ್ಲಿನ ಚಳುವಳಿಯನ್ನು ನಾನು ಸೇರಲು ಅಪ್ಪಣೆ ನೀಡಲಾಗುವುದೆಂದೂ ಸಲಹೆ ನೀಡಿದ. ನಾನು ಕೋಪಾವಿಷ್ಟಳಾದೆ. ನನ್ನೊಡನೆ

ಹಾಗೆ ಮಾತನಾಡಲು ಎಷ್ಟು ಧೈರ್ಯ ಅವನಿಗೆ ! ಅವನು ನನ್ನನ್ನೇ ಅವಮಾನಿಸಿದಂತೆ, ನೋಯಿಸಿದಂತೆಯೂ ನಾನು ಅವನಿಗೆ ಅವಮಾನಿಸಿ ನೋಯಿಸಬೇಕೆನಿಸಿ, ನಮ್ಮ ಮನೆಯಲ್ಲಿ ನಾನೊಬ್ಬಳೇ ಕೆಲಸ ಮಾಡಿ ಸಂಪಾದಿಸುವವಳೆಂದು ಅವನಿಗೆ ನೆನಪಿಸಿ, ಆದ್ದರಿಂದ ಅವನೀಗ ಸೂಚಿಸುತ್ತಿರುವುದೇನೋ ಅದು ಹಾಸ್ಯಾಸ್ಪದವಾಗಿದೆಯೆಂದೂ ಹೇಳಿದೆ. ಅನಂತರ ನಾನು ನನ್ನ ರಾಜೀನಾಮೆಯನ್ನೇ ಸಲ್ಲಿಸಿ, ಕೋಪದಿಂದ ನಡುಗುತ್ತಾ ಮನೆಗೆ ಓಡಿಬಂದೆ. ನನ್ನ ಕೆನ್ನೆಯ ಮೇಲೆ ಕಣ್ಣೀರಿಳಿಯುತ್ತಿದ್ದಿತು. ಈ ಘಟನೆಯು ನಮ್ಮಿಬ್ಬರ ಸಂಬಂಧದಲ್ಲಿ ಎಂದೂ ಸರಿಪಡಿಸಲಾಗದ ಬಿರುಕು ಮೂಡಿಸುವುದೆಂದು ಕರ್ಟ್‌ನಿಗೆ ಎಂದೂ ತಿಳಿಯಲೇ ಇಲ್ಲ. ನಾನು ಅವನನ್ನು ಎಂದಿಗೂ ಕ್ಷಮಿಸುವುದಿಲ್ಲ.

ಮಾರನೆಯ ದಿನ, ಅರ್ನ್ಸ್ಟ್‌ನನ್ನು ಕಂಡಕೂಡಲೇ ಬಿಕ್ಕುತ್ತಾ ಅವನ ಬಾಹುಗಳಲ್ಲಿ ಕುಸಿದೆ. ನಾನು ನನಗಾದ ಅನುಭವವನ್ನು ವಿಸ್ತರಿಸಿ ಹೇಳಿದ ಕೂಡಲೇ ಅವನೂ ಕರ್ಟ್‌ನಿಗೆ ತನ್ನ ರಾಜೀನಾಮೆಯನ್ನೇ ಕಳುಹಿಸಿದ. ಈ ಸಮಯದಲ್ಲಿ ಕೆನ್‌ನೂ ರಜೆಯ ಮೇಲೆ ಊರಿಗೆ ಬರುವುದಿತ್ತು. ನಾನು ಅಧೀರಳಾಗಿದ್ದೆ. ಕಾರಣ, ನಾನು ನನ್ನ ಮತ್ತು ಅರ್ನ್ಸ್ಟ್‌ನ ಸಂಬಂಧದ ಬಗೆಗೆ ಅವನಿಗೇನನ್ನೂ ಹೇಳಿರಲಿಲ್ಲ. ಅವನು ಸಿಕ್ಕಾಗ ಪ್ರತ್ಯೇಕವಾಗಿಯೇ ಹೇಳಬೇಕೆಂದಿದ್ದೆ. ನಮ್ಮ ಮದುವೆಯು ಹೆಸರಿಗೆ ಮಾತ್ರವೇ ಎಂದು ಕೆನ್‌ಗೆ ತಿಳಿದಿತ್ತಾದ್ದರಿಂದ ಈ ವಿಷಯದ ಬಗ್ಗೆ ಯಾವುದೇ ವಿನಾಪದವನ್ನು ನಾನು ನಿರೀಕ್ಷಿಸಿರಲಿಲ್ಲ. ನಾನು ಹೇಗೆ ವಿಚ್ಛೇದನವನ್ನು ಪಡೆಯಬಹುದು ಎಂಬುದರ ಬಗ್ಗೆ ಅರ್ನ್ಸ್ಟ್‌ನು ವಕೀಲರೊಬ್ಬರಲ್ಲಿ ಸಮಾಲೋಚಿಸಿದ್ದ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅವನೂ, ಕೆನ್ ಮತ್ತು ನಾನು ಒಟ್ಟಿಗೇ ಸೇರಿ ನಮ್ಮ ಸಂಬಂಧವನ್ನು ಸ್ನೇಹಶೀಲವಾಗಿ ಸರ್ವಸಮ್ಮತವಾಗಿ ಪರಿಹರಿಸಿಕೊಳ್ಳಬೇಕೆಂದು ಅವನೇ ಒತ್ತಾಯ ಮಾಡಿದ್ದ. ಕೊನೆಗೆ, ಅದು ಇನ್ನೂ ಯುದ್ಧದ ಸಮಯವಾಗಿದ್ದುದರಿಂದ, ಬೇಗನೇ ಕೆನ್‌ನಿಗೆ ಸಾಗರದಾಚೆಯಲ್ಲಿ ಸಾಗರದಾಚೆಗೆ ಪೋಸ್ಟಿಂಗ್ ಸಿಗುವ ಸಂಭವವಿತ್ತು. ಆದ್ದರಿಂದ ನಾವು ಕಾರ್ಯಪ್ರವೃತ್ತರಾಗಲೇಬೇಕಿತ್ತು. ಕೆನ್ ಮನೆಗೆ ವಾಪಸಾದ ನಂತರದ ಭಾನುವಾರವೇ ತಾನೂ ರಜೆ ಪಡೆದು ಬರುವುದಾಗಿ ಅರ್ನ್ಸ್ಟ್‌ನು ನನಗೆ ಮಾತುಕೊಟ್ಟ. ಈಗ ನಾನು ತವಕದಿಂದ ಕೆನ್ ಬರುವುದನ್ನೇ ಕಾದೆ. ಅಂತೆಯೇ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಈ ವ್ಯವಹಾರವನ್ನೆಲ್ಲ ಮುಗಿಸಿ, ನಿಭಾಯಿಸಬೇಕೆಂದು ಕಾತರಳಾಗಿದ್ದೆ.

ಪ್ರೀತಿಯಿಂದ ಕೆನ್‌ನನ್ನು ಮತ್ತೆ ಸ್ವಾಗತಿಸಿದೆ. ಆದರೆ ದುರದೃಷ್ಟವಶಾತ್ ಅವನು ಅದನ್ನು ಅವನಿಗಾಗಿ ನಾನು ಸ್ವಲ್ಪವಾದರೂ ನನ್ನ ಭಾವನೆಗಳನ್ನು ತೋರ್ಪಡಿಸುತ್ತಿದ್ದೇನೆಂದು ತಪ್ಪಾಗಿ ಗ್ರಹಿಸಿದ. ಆ ರಾತ್ರಿ ಅವನು ನನ್ನನ್ನು ಪ್ರೀತಿ ಮಾಡಲು ಹವಣಿಸಿದಾಗ, ನಾನು ಅದನ್ನು ನಿರಾಕರಿಸಿದಾಗ, ಅವನು ಬಹಳವೇ

ಅಶಾಂತನಾದ. ಕೇವಲ ಇನ್ನು ಕೆಲವೇ ಗಂಟೆಗಳಲ್ಲಿ ಅರ್ನ್ಸ್ಟ್‌ನು ಬರುತ್ತಾನೆ, ನಾವಿಬ್ಬರೂ ಪರಸ್ಪರ ಪ್ರೀತಿಸುತ್ತಿರುವುದನ್ನು, ಮುಕ್ತವಾಗಿ ಒಪ್ಪಿಕೊಳ್ಳಬಹುದು ಎಂದು ನಾನು ಯೋಚಿಸುತ್ತಲಿದ್ದೆ. ಬೆಳಗಾಗುವುದನ್ನೇ ನಾನು ಕಾತರದಿಂದ ಕಾದಿದ್ದೆ. ಸೂರ್ಯನು ಹುಟ್ಟಿದಂತೆ, ಬಾಗಿಲು ಬಡಿಯುವ ಶಬ್ದ ಕೇಳುವ ಆಶಯದೊಂದಿಗೆ ನಾನು ಬಾಗಿಲತ್ತ ನೋಡಲು ಪ್ರಾರಂಭಿಸಿದೆ. ಭಾನುವಾರದ ಬೆಳಗು ಬಂದಿತು ಹಾಗೆಯೇ ಹೋಯಿತು. ಗಂಟೆಗಳು ನಿಧಾನವಾಗಿ ಉರುಳಿದಂತೆ ಅವನು ಬರುವುದಿಲ್ಲವೆಂದು ನಾನು ತಿಳಿದೆ. ಕೊನೆಗೆ ನಾನು ಸನ್ನಿವೇಶದ ಬಿಗುವಿನ ಆಯಾಸವನ್ನು ತಡೆಯಲಾರದೆ ಹೋದೆ. ಅತ್ತ ಕೆನ್ ಮತ್ತು ನನ್ನ ತಂದೆ ತಾಯಿಗಳೊಡನೆ ಅರ್ನ್ಸ್ಟ್‌ನನ್ನು ನಾನು ಪ್ರೀತಿಸುತ್ತಿರುವುದಾಗಿ ಒಪ್ಪಿಕೊಂಡೆ. ಕೆನ್ ಕೋಪಾವಿಷ್ಟನಾದ, ನೊಂದ, ನನ್ನ ಮಾತನ್ನು ನಂಬದೇ ಹೋದ. ಇವೆಲ್ಲವೂ ಒಂದೇ ಸಮಯದಲ್ಲಿ ಆಯಿತು. ಅಲ್ಲಿಂದ ಓಡಿಹೋಗುವುದೇ ಅವನ ಮೊದಲ ಪ್ರತಿಕ್ರಿಯೆಯಾಗಿತ್ತು. ನೇರವಾಗಿ ತನ್ನ ಗಂಟುಮೂಟೆ ಕಟ್ಟಲು ಪ್ರಾರಂಭಿಸಿದ. ಅಮ್ಮನು ಅವನನ್ನು ತಡೆಯಲು ಯತ್ನಿಸಿದಳು. ಅಂತೆಯೇ ನನ್ನ ಜವಾಬ್ದಾರಿಗಳನ್ನು ನಾನು ಒಪ್ಪಿಕೊಳ್ಳುವಂತೆ ಮಾಡಲೂ ಪ್ರಯತ್ನಿಸಿದಳು. ಆ ಇಡೀ ರಾತ್ರಿ ಅಳುತ್ತಿದ್ದೆ, ಕೆನ್ ಖಿನ್ನನಾಗಿ ಕುಳಿತಿದ್ದ. ಅಮ್ಮನು ಬಿಸಿ ಚಹ ತಂದುಕೊಟ್ಟಳು. ಮರುದಿನ ಬೆಳಗ್ಗೆ ಕೆನ್ ಹೊರಟ. ಹೊರಡುವ ಮುನ್ನ ಅರ್ನ್ಸ್ಟ್ ಯುವ ಸೇನೆಯ ತುಕಡಿಗೆ ಸೇರಿದವ ನೆಂದೂ, ಅವನು ಎಲ್ಲಿಗೆ ಸೇರಿದವನೆಂದೂ ತಿಳಿಸಬೇಕೆಂದು ಆಗ್ರಹಪಡಿಸಿದ. ಹಿಂದಿನ ದಿನದ ಘಟನೆಗಳಿಂದ ಬಹಳವೇ ಆಯಾಸಗೊಂಡಿದ್ದೆ. ನನಗೆ ಆ ಸಮಯದಲ್ಲಿ ಅವುಗಳ ಬಗೆಗೆಲ್ಲ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ.

ಅರ್ನ್ಸ್ಟ್‌ಗೆ ಏನಾಯಿತು, ಅವನೇಕೆ ಮತ್ತೆ ಬರಲೇ ಇಲ್ಲ ಎಂಬುದು ನನಗೆ ಎಂದಿಗೂ ತಿಳಿಯಲೇ ಇಲ್ಲ. ಯುದ್ಧದಲ್ಲಿರುವಾಗ ಅವನು ಕಣ್ಮರೆಯಾಗಿರಬಹುದು ಅಥವಾ ಗಾಯಗೊಂಡಿರಬಹುದು ಎಂಬುದನ್ನು ನಾನು ನಂಬಲಿಚ್ಛಿಸಿದ್ದೆ. ಕಾರಣ, ಅವನು ಸಾಕಷ್ಟು ನನ್ನನ್ನು ಪ್ರೇಮಿಸಿಲ್ಲದಿರಬಹುದು ಎಂಬ ಯೋಚನೆಯನ್ನೇ ನನ್ನಿಂದ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. ಹೇಗಾದರೂ, ಕೆಲವು ವಾರಗಳ ನಂತರ ಅವನಿಂದ ನನಗೊಂದು ಪತ್ರ ಬಂದಿತು. ಅದರಲ್ಲಿ ಅವನು ಕೆನ್‌ನು ತನ್ನ ಮೇಲೆ ಅವನ ಪತ್ನಿಯನ್ನು ಅವನಿಂದ ದೂರಮಾಡಲು ಪ್ರಯತ್ನಿಸು ತ್ತಿರುವುದಾಗಿ ನಾನು ಅರ್ಥ ಮಾಡಿಕೊಳ್ಳುತ್ತೇನೆಂದು ತಾನು ಆಶಿಸುವುದಾಗಿ ಬರೆದಿದ್ದ. ನಾನು ನಾಶವಾಗಿದ್ದೆ. ಯಾವ ಪ್ರೇಮವನ್ನು ಎಂದೆಂದಿಗೂ ಇರುವಂಥದು ಎಂದು ಪ್ರಮಾಣ ಮಾಡಿದ್ದೆನೋ, ಅದೇ ಪ್ರೇಮವನ್ನು ಅರ್ನ್ಸ್ಟ್ ಅಷ್ಟು ತಣ್ಣಗೆ, ಅಷ್ಟು ಸುಲಭವಾಗಿ ತೊರೆದಿದ್ದಾನೆಂದು ನಾನು ನಂಬಿರಲಿಲ್ಲ. ನಾನು ಅವನನ್ನು ದ್ವೇಷಿಸಿದೆ. ನಾನು ಬಹಳವಾಗಿ ಗೊಂದಲಕ್ಕೊಳಗಾಗಿದ್ದೆ; ನನ್ನ ಜೀವನವನ್ನೆಲ್ಲ ಯಾರ ಜೊತೆಯಲ್ಲಿ ಕಳೆಯಬೇಕೆಂದು

ಇಚ್ಛಿಸಿದ್ದೆನೋ, ಅವನನ್ನು ಪ್ರೀತಿಸುವುದನ್ನು ಹೇಗೆ ತಾನೆ ನಾನು ಬಿಡಬಲ್ಲವಳಾಗಿದ್ದೆ? ನಾನು ಅವನನ್ನು ಮತ್ತೊಮ್ಮೆ ನೋಡಲಿಚ್ಛಿಸಲಿಲ್ಲ. ನನ್ನ ಮೊದಲ ಪ್ರೇಮದ ನಂತರ ಈಗ ನಾನು ಭಾವನಾಶೂನ್ಯಳಾಗಿದ್ದೆ. ನನ್ನ ತಂದೆ ತಾಯಿಗಳು ಪ್ರೀತಿಸಿದ, ಸೂಕ್ಷ್ಮವಾದ, ಅವರ ರಕ್ಷಣೆಯ ಅಗತ್ಯವಿರುವ ಮಗುವಾಗಿ ನಾನು ಯಥಾಸ್ಥಿತಿಗೆ ಬಂದೆ. ಅರ್ನ್ಸ್‌ನ ಪತ್ರದಿಂದ ನನಗಾದ ಆಘಾತದಿಂದ ಚೇತರಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬಂತಾಗಿದ್ದ ನಾನು ಮತ್ತೊಬ್ಬ ಪುರುಷನನ್ನು ನಂಬಲು ಬಹಳ ಕಾಲವೇ ಬೇಕಾಯಿತು. ನಾನು ನನ್ನ ಪ್ರಿಯತಮನಿಂದ ಮಾತ್ರವೇ ಮೋಸಕ್ಕೊಳಗಾಗಿರಲಿಲ್ಲ. ನನ್ನ ಪತಿಯಿಂದ ಮತ್ತು ನನ್ನ ಅಣ್ಣನಿಂದಲೂ ಮೋಸ ಹೋಗಿದ್ದೆ. ಆ ಕ್ಷಣದಿಂದಲೇ ನಾನು ಇನ್ನೆಂದೂ ಹೀಗೆ ಇಷ್ಟೊಂದು ನೋವು ಮಾಡಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ ಎಂದು ತೀರ್ಮಾನಿಸಿದೆ. ನಾನು ನನ್ನ ಸುತ್ತಲಿನ ಕೋಶದ ಬಿರುಕನ್ನು ತೆರೆದಿಟ್ಟಿದ್ದೆ, ಅದರಿಂದ ನಾನು ಭಾರೀ ಬೆಲೆಯನ್ನೇ ತೆರಬೇಕಾಯಿತು. ಅದೇ ತಪ್ಪನ್ನು ನಾನು ಪುನಃ ಮಾಡುವವಳಾಗಿರಲಿಲ್ಲ.

* * * *

# ೮. ಪ್ರಬಲ ನಿರೀಕ್ಷೆಗಳು

ಜೀವನವನ್ನು ಸಾಗಿಸುವ ಯೋಚನೆಗೆ ಹೊಂದಿಕೊಳ್ಳುವುದು ನನಗೆ ಕಷ್ಟಕರವಾಗಿ ಕಂಡಿತು. ಅದರಿಂದಾಗಿ ಜೀವನಕ್ಕೊಂದು ಉದ್ದೇಶವನ್ನು ಕಂಡು ಕೊಳ್ಳಲು ಹೆಣಗಿದೆ. ನನಗೋಸ್ಕರವೇ ಒಂದು ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುವುದರಲ್ಲಿ ಅರ್ಥವಿಲ್ಲ ಎನಿಸಿತು. ಕಾರಣ ಪ್ರತಿ ಸಾರಿ ನಾನು ನನ್ನ ಜೀವನದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದಾಗಲೆಲ್ಲ ಅದು ದುಃಖಕರವಾಗಿ ತಪ್ಪಾಗಿ ಸಾಗುತ್ತಿತ್ತು. ಮಿರಿಯಮ್ ಮಾತ್ರವೇ ನನಗೀಗ ಏಕಮಾತ್ರ ಸಮಾಧಾನ ವಾಗಿದ್ದಳು. ಕಾರಣ ತನ್ನ ಬಿಡುಗಡೆಯ ಕೆಲವು ತಿಂಗಳುಗಳ ನಂತರ, ಕರ್ಟ್‌ನು ಇವಾಳನ್ನು ಮದುವೆಯಾದದ್ದರಿಂದ ಬೇಸರಗೊಂಡಿದ್ದಳು. ನಾವಿಬ್ಬರೂ ಬಹಳ ಹತ್ತಿರವಾದೆವು. ಪ್ರೀತಿಯಲ್ಲಿ ಮತ್ತು ಜೀವನದಲ್ಲಿ ನಮಗಾದ ನಿರಾಸೆಯನ್ನೇ ಚರ್ಚಿಸುತ್ತಾ ಹಲವು ಗಂಟೆಗಳನ್ನು ಕಳೆದೆವು. ಯಂತ್ರಗಾರ್ತಿಯರಾಗಿ ನಾವು ಕೆಲಸ ಪಡೆದು ಕೊಳ್ಳುವಷ್ಟು ಸಂಭಾಳಿಸಿದೆವು. ಅಕ್ಕಪಕ್ಕದಲ್ಲೇ ಕೆಲಸ ಮಾಡುತ್ತಾ ಇದ್ದುದು ನಮ್ಮ ನಿರಾಕರಣೆಯ ಮನೋಭಾವದೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡಿತ್ತು. ಇದೂ ಹೆಚ್ಚು ಕಾಲ ಉಳಿಯಲಿಲ್ಲ. ಒಬ್ಬ ಯಂತ್ರಗಾರ್ತಿ ಯಾಗಿ ನನ್ನಲ್ಲಿ ದಿನದಿಂದ ದಿನಕ್ಕೆ ಅತೃಪ್ತ ಭಾವವು ಹೆಚ್ಚುತ್ತಾ ಹೋಯಿತು. ಅದರಿಂದಾಗಿ ಈ ಕೆಲಸದಿಂದ ನಾನು ತಪ್ಪಿಸಿಕೊಳ್ಳುವಂತೆ ಮಾಡಬಲ್ಲ ಗಂಟೆಯ ಶಬ್ದಕ್ಕಾಗಿ ನಾನು ಹಂಬಲಿಸಿದೆ. ಮಿರಿಯಮ್‌ಗೂ ಸಹ ಹಾಗೆಯೇ ಭಾಸವಾಗಿತ್ತು. ಹೀಗಾಗಿ ಮುಂದಿನ ಕೆಲವು ತಿಂಗಳುಗಳನ್ನು ನಾವು ಒಂದು ಕೈಗಾರಿಕೆಯಿಂದ ಮತ್ತೊಂದಕ್ಕೆ ಹೋಗುತ್ತಾ, ಆ ಏಕತಾನತೆಯ ಬೇಸರದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದೆವು. ಒಂದು ಸ್ಥಳದಲ್ಲಿ ನಾವಿಕರ ಬೊಂಬೆಗಳನ್ನು ಹೊಲೆದೆವು; ಇನ್ನೊಂದೆಡೆ ವಾಯುಧಾಳಿಯ ರಕ್ಷಕರಿಗೆ ಕೋಟುಗಳನ್ನು ಮಾಡುತ್ತಾ ಸಾಗಣೆಪಟ್ಟಿಯ ಕೆಲಸ ಮಾಡಿದೆವು.

ಈ ನಿರಂತರ ಬದಲಾವಣೆಗಳು, ಒಂದು ವೇಳೆ ನಾವು ಎಂದಿಗೂ ಕೈಗಾರಿಕೆಗಳಿಂದ ತಪ್ಪಿಸಿಕೊಳ್ಳಬೇಕೆಂದಿದ್ದರೆ, ಏನನ್ನಾದರೂ ಪರಿಣಾಮಕಾರಿ ಯಾದುದನ್ನು ಮಾಡಬೇಕಾದ ಅವಶ್ಯಕತೆ ಇದೆ ಎಂದು ನಮಗೆ ಮನವರಿಕೆ ಮಾಡಿದವು. ನಾವು ನಮ್ಮ ಶಾಲೆಯ ಪ್ರಗತಿಪತ್ರಗಳನ್ನು ಪರಿಶೀಲಿಸಿದೆವು. ನಾವಿಬ್ಬರೂ

ಗಣಿತದಲ್ಲಿ ಚೆನ್ನಾಗಿ ಮಾಡಿದ್ದೇವೆ ಎಂದು ಕಂಡುಕೊಂಡೆವು. ನಾವು ಅರ್ಹ ಅಭ್ಯರ್ಥಿಗಳಾಗಿ ಕೆಲಸಗಳ ವಿಚಾರಗಳನ್ನು ಯೋಚಿಸಲು ಪ್ರಯತ್ನಿಸಿದೆವು. ಇದು ಗಂಟೆಗಳನ್ನು ತೆಗೆದುಕೊಂಡಿತು; ವಾಸ್ತವ ವಾಗಿಯೂ ನಮ್ಮ ಅರ್ಹತೆ ಎಷ್ಟು ಕಿರಿದಾಗಿದೆ ಎಂದು ತಿಳಿದು ನಮ್ಮ ಬಗೆಗೇ ನಗಾಡಿಕೊಂಡೆವು. ಕೊನೆಗೆ ನಾವು ಒಳ್ಳೆಯ ಕಕೂಲಿಗಳ ಗುಮಾಸ್ತೆಯರಾಗಬಹುದು ಎಂದು ನಾನು ಸೂಚಿಸಿದೆ. 'ಕೆಲಸದ ವಿನಿಮಯ'ಕ್ಕೆ ನಾವು ಹೋದಾಗ ನಮ್ಮನ್ನು ಒಂದು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಕಾರ್ಖಾನೆಗೆ ಕಳುಹಿಸಲಾಯಿತು. ಅಲ್ಲಿ ನಮ್ಮನ್ನು ಸಂದರ್ಶಿಸಲಾಯಿತು. ನಮ್ಮಿಬ್ಬರಿಗೂ ಅಂಕಗಣಿತದಲ್ಲಿ ಒಂದು ಕಿರು ಪರೀಕ್ಷೆಯನ್ನು ನೀಡಲಾಯಿತು. ನಮ್ಮಿಬ್ಬರಿಗೂ ಆಶ್ಚರ್ಯವಾಗುವಂತೆ ಕೂಡಲೇ ಅವರು ಇಬ್ಬರಿಗೂ ಕೆಲಸ ಕೊಟ್ಟರು. ಒಂದು ಬಟ್ಟೆ ಹೊಲೆದರೆ ಇಂತಿಷ್ಟು ಸಂಬಳ ಎಂದು ಯಂತ್ರ ಗಾರ್ತಿಯರಾಗಿ ನಾವು ಈವರೆಗೆ ಸಂಪಾದಿಸುತ್ತಿದ್ದುದಕ್ಕಿಂತಲೂ ಸಾಕಷ್ಟು ಹೆಚ್ಚಾಗಿಯೇ ಈ ಕೆಲಸದ ಸಂಬಳವಿತ್ತು. ನಾವಿಬ್ಬರೂ ಚಕಿತರಾಗಿ ಮುಖ ಮುಖ ನೋಡಿ ಕೊಂಡೆವು. ನಮ್ಮ ಅದೃಷ್ಟವನ್ನು ನಂಬಲಾರ ದಂತಿದ್ದೆವು. ಜೋರಾಗಿ ನಕ್ಕೆವು; ಇಷ್ಟು ಸುಲಭವಾಗಿತ್ತೆ ಇದು ! ಲಾಟರಿಯಲ್ಲಿ ಮೊದಲ ಬಹುಮಾನ ಗೆದ್ದೆವೋ ಎಂಬಂತಾಗಿತ್ತು ನಮಗೆ.

ನಾನು ಷಾಪ್‌ಫ್ಲೋರ್‌ನಿಂದ ಕಛೇರಿಯ ಕೆಲಸಕ್ಕೆ ಹೋದಂತೆ ಜೀವನವು ಬೇರೆಯದೇ ಆದ ಒಂದು ದಿನಚರಿಯನ್ನು ಕಂಡಿತು. ಬೆಳಗಿನ ೮ ಗಂಟೆಗೆ ಬದಲಾಗಿ ಕೆಲಸದ ದಿನವು ೯ ಗಂಟೆಗೆ ಪ್ರಾರಂಭವಾಗುತ್ತಿತ್ತು. ಯಂತ್ರಗಳ ನಿರಂತರ ಶಬ್ದವಿಲ್ಲದೆ ಸುತ್ತಲಿನ ವಾತಾವರಣವು ಹೆಚ್ಚು ಶಾಂತಯುತ ವಾಗಿದ್ದಿತು. ನಾವು ನಮ್ಮ ಕೈಗಳ ಬದಲಾಗಿ ಬುದ್ಧಿಯನ್ನು ಉಪಯೋಗಿಸುತ್ತಿದ್ದೆವು. ನನಗೆ ನನ್ನ ಹೆಗಲ ಮೇಲಿನಿಂದ ಭಾರೀ ಭಾರವೊಂದನ್ನು ಇಳಿಸಿದಂತೆ ಅನ್ನಿಸಿತು. ಕಾರಣ ನನ್ನ ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ನಾನು ಇನ್ನೆಂದೂ ಕೊಟ್ಟ ಸಮಯಕ್ಕೆ ಮೊದಲೇ ಮಾಡಿ ಮುಗಿಸಲು ಪ್ರಯತ್ನಿಸಬೇಕಿರಲಿಲ್ಲ. ಒಂದು ಸಿದ್ಧ ಉಡುಪನ್ನು ಹೊಲೆದು ಅದರ ಸಂಖ್ಯೆಯನ್ನೇರಿಸುತ್ತಾ ಬರುವ ಗಳಿಕೆಯನ್ನು ಲೆಕ್ಕ ಹಾಕುತ್ತಾ ಕೆಲಸ ಮಾಡುವುದು ಎಷ್ಟು ಆಯಾಸದಾಯಕವಾಗಿತ್ತು ಎನ್ನುವುದು ನನ್ನ ಅರಿವಿಗೆ ಬಂದಿತು. ಸಂಬಳ ಸಂಪಾದಿಸುವ, ಸಾರ್ವಜನಿಕ ರಜೆಗಳ ದಿನಕ್ಕೂ ಹಣ ಪಡೆಯುವ ಐಷಾರಾಮಿಯನ್ನು ಒಪ್ಪಿಕೊಳ್ಳಲು ನನಗೆ ಕಷ್ಟಕರವಾಗಿ ಕಂಡಿತು. ನನ್ನಲ್ಲಾದ ಬದಲಾವಣೆಯು ಅಮ್ಮನಿಗೆ ಸಂತೋಷ ತಂದಿದ್ದಿತು. ಈಗ ನಾನು ಹೆಚ್ಚು ಆರಾಮವಾಗಿದ್ದೆ, ಅಮ್ಮನ ನಿರೀಕ್ಷೆಯಂತೆ ನನ್ನ ವಯಸ್ಸಿನ ಹುಡುಗಿಯೊಬ್ಬಳು ಹೇಗಿರಬೇಕೋ ಅದಕ್ಕಿಂತಲೂ ಹೆಚ್ಚಾಗಿದ್ದೆ.

ಯುದ್ಧದ ತೀವ್ರತೆ ಹೆಚ್ಚಿದಂತೆಲ್ಲಾ, ಸನ್ನಿವೇಶದ ಬಿಗುವು ಕಡಿಮೆಯಾಗಿ

ನಮಗೆ ಸುಲಭವಾಯಿತು. ಅಪ್ಪನಿಗೆ ಪ್ಯಾಕರ್ ಆಗಿ ಒಂದು ಕೆಲಸ ಸಿಕ್ಕಿತು. ತನ್ನ ಘನತೆಗೆ ಅದು ಕಡಿಮೆಯಾದ ಕೆಲಸವೆಂದು ಅವರು ದೂರಿದರೂ, ಆ ಕೆಲಸವು ಕೆಲವು ದಿನಗಳನ್ನು ಆಕ್ರಮಿಸಿ, ಮನೆಗೊಂದು ಆದಾಯ ತಂದಿತು. ಯುದ್ಧದ ಮೊದಲ ದಿನಗಳಲ್ಲಿ ಜರ್ಮನಿಯ ಫ್ಯಾಸಿಸ್ಟ್‌ಗಳು ಎಲ್ಲೆಡೆಯಲ್ಲೂ ಗೆಲ್ಲುತ್ತಿದ್ದಾಗ ಒಂದು ವೇಳೆ ನಾವು ನಾಜಿಗಳ ಕೈಯಲ್ಲಿ ಪುನಃ ಸಿಕ್ಕಿಬಿದ್ದರೇನು ಗತಿಯಾಗುವುದೋ ಎಂಬ ಭೀತಿಯಲ್ಲಿದ್ದೆವು. ಎರಡನೇ ಮುಂಚೂಣಿಯು (ಸೆಕೆಂಡ್ ಫ್ರಂಟ್) ಸ್ಥಾಪಿತವಾಗುವ ತನಕ ನಾವು ಸುರಕ್ಷಿತರಾಗಿರುತ್ತೇವೆ ಎಂಬುದನ್ನು ಹೇಗೋ ನಮಗೆ ನಂಬಲು ಸಾಧ್ಯವಿರಲಿಲ್ಲ. (ಮಿತ್ರ ರಾಷ್ಟ್ರಗಳು ಜರ್ಮನರನ್ನು ಹಿಮ್ಮೆಟ್ಟಿಸುವತನಕ/ ಮಿತ್ರರಾಷ್ಟ್ರಗಳು ಜರ್ಮನರನ್ನು ಹಿಮ್ಮೆಟ್ಟಿಸುತ ಒತ್ತಡ ಹೇರುವ ತನಕ) ಆಗ ನಮ್ಮ ಕುಟುಂಬಗಳ ಬಗೆಗೆ, ಉಳಿದ ಸ್ನೇಹಿತರುಗಳ ಬಗೆಗಿನ ನಮ್ಮ ಚಿಂತೆಗಳಿಗೆ 'ಧ್ವನಿ' ಕೊಡಲು ಪ್ರಾರಂಭಿಸಿದೆವು. ಅವರಿಗೆಲ್ಲಾ ಏನಾಗಿರಬಹುದು ಎಂಬುದು ನಮ್ಮೆಲ್ಲರಿಗೂ ಚಿಂತೆಯಾಗಿದ್ದರೂ ಈ ಮೊದಲು ನಾವು ಇವರುಗಳ ಬಗೆಗೆ ಹೆಚ್ಚು ಮಾತನಾಡುತ್ತಿರಲಿಲ್ಲ. ಅವರೆಲ್ಲರೂ ಬದುಕಿರಲು ಸಾಧ್ಯವಿಲ್ಲದಿರಬಹುದು ಎಂಬ ಯೋಚನೆಯೇ ಭಯಾನಕವಾದುದಾಗಿತ್ತು.

ಕೊನೆಗೂ ಯುದ್ಧವು ಮುಗಿಯಿತು. ಬೀದಿಗಳು ಜನರಿಂದ ತುಂಬಿಹೋದವು. ಜನ ವಿಜಯೋತ್ಸವವನ್ನಾಚರಿಸಿದರು ನಾನೂ ಅದರಲ್ಲಿ ಸೇರಿಕೊಳ್ಳಲು ಪ್ರಯತ್ನಿಸಿದೆ. ಆದರೆ ಸಂಪೂರ್ಣವಾಗಿ ಭಾವುಕಳಾಗಿದ್ದೆ. ಅಪರಿಚಿತರೂ ಬೀದಿಗಳಲ್ಲಿ ಪರಸ್ಪರ ಅಪ್ಪಿಕೊಂಡರು, ಚುಂಬಿಸಿದರು. ಜನ ಸಂತೋಷದಿಂದ ಹಾಡುತ್ತಿದ್ದರು, ಕುಣಿಯುತ್ತಿದ್ದರು. ಅರೆ'ಪಾನ'ಮತ್ತನಾಗಿದ್ದ ಒಬ್ಬ ನಾವಿಕನು ಜನಸಂದಣಿಯಿಂದ ನುಗ್ಗಿ ಸಮೀಪ ಬಂದ. ಅವನು ನನ್ನನ್ನು ಚುಂಬಿಸಲು ಯತ್ನಿಸಿದ. ನಾನು ಪ್ರತಿಕ್ರಿಯಿಸದೆ ಹೋದಾಗ ಅವನು ಗೇಲಿ ಮಾಡಿ, ನನ್ನನ್ನು ಒಂದು ತಣ್ಣನೆಯ ಮೀನೆಂದು ಕರೆದ. ಅಥವಾ ನಿಜಕ್ಕೂ ನಾನು ಜರ್ಮನರ ಬಗೆಗೆ ಆರ್ದ್ರಳಾಗಿದ್ದೆನೋ? ನಾನು ಭಯಭೀತಳಾಗಿದ್ದೆ. ಅಂತೆಯೇ ಪಕ್ಕದ ಬೀದಿಯೊಂದರಲ್ಲಿ ತಪ್ಪಿಸಿಕೊಳ್ಳಲು ಯತ್ನಿಸಿದೆ. ವಿಯೆನ್ನಾದಲ್ಲಿ ನಾನು ಕಂಡಿದ್ದ ಜನಸಂದಣಿಯ ಗಲಭೆಯು ನನ್ನನ್ನು ಗುಂಪಿನ ಬಗೆಗೆ ಬಹಳ ಆಳವಾದ ಭಯವನ್ನೇ ಬೇರೂರಿಸಿದ್ದಿತು. ನಾನು ಹಿಂದಿನ ಬೀದಿಯಲ್ಲೇ ಉಳಿದು ಮನೆಯ ದಾರಿ ಹಿಡಿದೆ.

ಜನರ ವಿಜಯೋತ್ಸವದ ಆನಂದದಲ್ಲಿ ನಾನೇಕೆ ಪಾಲ್ಗೊಳ್ಳಲಿಲ್ಲ ಎನ್ನುವುದನ್ನು ನಾನೇ ಅರ್ಥಮಾಡಿಕೊಳ್ಳದಾದೆ. ಅದು ನನ್ನ ಮನಸ್ಸಿಗೆ ಕೇವಲ ಒಂದು ದೊಡ್ಡ ವ್ಯತಿರಿಕ್ತ ಪರಮಾವಧಿ (anticlimax). ಯುದ್ಧದ ಸಮಯದಲ್ಲಿ ಪ್ರತಿಯೊಬ್ಬರೂ ಪ್ರತಿಯೊಂದಕ್ಕೂ 'ಯುದ್ಧದ ಸಮಯದ ವರೆಗೆ ಮಾತ್ರ' ಎಂದು ಹೇಳುತ್ತಿದ್ದರು. ಇದು ಶಾಂತಿಯು ನಮ್ಮ ಎಲ್ಲ ಸಮಸ್ಯೆಗಳಿಗೂ ಕ್ರಿಸಿಸಿಯಾವನ್ನು ಕೊಡುತ್ತದೆ

ಎಂದುಕೊಂಡು ಹೇಳಿದಂತೆ. ಈಗ ಯುದ್ಧವು ಮುಗಿದಿದೆ, ಮುಂದೇನು? ನನ್ನ ಸ್ವಂತ ಜೀವನವನ್ನೇ ಅದು ಹೇಗೆ ಭಿನ್ನವಾಗಿ ಮಾಡಬಲ್ಲದು? ನಾನು ೨೧ ವರ್ಷದವಳು, ನನ್ನ ತಂದೆತಾಯಿಗಳ ಜೊತೆಯಲ್ಲಿರುವವಳು. ಯಂತ್ರಗಾರ್ತಿಯಾಗಿ ಹಾಗೂ ಕೂಲಿ ಗುಮಾಸ್ತಳಾಗಿ ಕೆಲಸ ಮಾಡುವುದರಲ್ಲಿ ಮಾತ್ರ ನನ್ನ ಕುಶಲತೆ ಇರುವುದು. ನನ್ನಲ್ಲಿ ಯಾವ ನಿರೀಕ್ಷೆಗಳೂ ಇರಲಿಲ್ಲ. ಯುದ್ಧವು ತಡೆಯೊಡ್ಡಿ ನಿಲ್ಲಿಸಿದ ಜೀವನಕ್ಕೆ ಮರಳಿ ಹೋಗಬೇಕೆಂದಿರುವವರೇ ನಮ್ಮ ಸುತ್ತಮುತ್ತಲೂ ಇದ್ದವರು, ಅವರಂತೆ ನನಗೆ ಮರಳಿಹೋಗಲು ಏನೂ ಇರಲಿಲ್ಲ. ನಾನು ನನ್ನ ಶಾಲಾ ದಿನಗಳಿಗಾಗಲಿ ಅಥವಾ ನನ್ನ ಬಾಲ್ಯಕ್ಕಾಗಲೀ ಎಂದೆಂದೂ ಹಿಂದಿರುಗು ವಂತಿರಲಿಲ್ಲ. ನನ್ನ ಕೆಲವು ಜರ್ಮನ್ ಹಾಗೂ ಆಸ್ಟ್ರಿಯನ್ ಮಿತ್ರರು ಮನೆಗೆ ವಾಪಸಾಗುವ ಸಾಧ್ಯತೆಗಳ ಬಗೆಗೆ ಚರ್ಚಿಸಿದರು. ಆದರೆ ಎಲ್ಲಿ ನಾನು ಪ್ರತಿಯೊಬ್ಬನನ್ನೂ ಒಬ್ಬ ನಾಜಿ ಎಂದೂ, ನಾನು ಕಣ್ಣಾರೆ ಕಂಡಿದ್ದ ದುಷ್ಕೃತ್ಯಗಳಲ್ಲಿ ಭಾಗಿ ಇರಬಹುದೆಂದೂ ಸಂದೇಹಿಸುತ್ತಿದ್ದೆನೋ ಅಲ್ಲಿನ ಜೀವನವನ್ನು ನಾನು ಎದುರಿಸಲಾರದವಳಾಗಿದ್ದೆ.

ಯುದ್ಧವಾದ ಅನಂತರ ಬಹಳ ಬೇಗನೇ, ಆಕ್ರಮಿತ ಪ್ರದೇಶಗಳಲ್ಲಿ ಉಳಿದು ಹೋದವರನ್ನು ಹುಡುಕಲು ಪ್ರಯತ್ನಿಸುವುದರಲ್ಲಿ ಸಹಾಯ ಮಾಡಲು ಒಂದು ಯಹೂದಿಗಳ ನೆಲೆಗಾಣಿಸುವ ಕಛೇರಿಯು ಸ್ಥಾಪಿತ ಪ್ರಾರಂಭವಾಯಿತು. ನಾವೆಲ್ಲರೂ ಅಲ್ಲಿ ಸರದಿಯ ಸಾಲಿನಲ್ಲಿ ನಿಂತು ನಮ್ಮ ಬಂಧುಗಳು ಹಾಗೂ ನಮ್ಮ ಮಿತ್ರರಲ್ಲಿ ಅನೇಕರ ಹೆಸರುಗಳ ಪಟ್ಟಿಯನ್ನು ಕೊಟ್ಟು ಬಂದೆವು. ಸುದ್ದಿಗಾಗಿ ನಾವು ಕಾತರದಿಂದ ದಿನದಿನವೂ ಕಾದೆವು. ಆದರೆ ಯಾವ ಕಾನ್ಸನ್ಟ್ರೇಷನ್ ಕ್ಯಾಂಪ್‌ನಲ್ಲಿ ಅವರ ಹೆಸರನ್ನು ಕಡೆಯದಾಗಿ ಕೇಳಲಾಗಿತ್ತೋ ಅಲ್ಲಿಂದಾಚೆಗೆ ಅವರನ್ನು ಹುಡುಕುವುದು ಸಾಧ್ಯವಾಗದ ಕಾರಣ ಅವರೆಲ್ಲರೂ ಆಯಾ ಕಾನ್ಸ್‌ನ್ಟ್ರೇಷನ್ ಕ್ಯಾಂಪ್‌ಗಳಲ್ಲೇ ಸತ್ತುಹೋಗಿರಬಹುದೆಂದುಕೊಳ್ಳಲಾಯಿತು. ಇದು ಒಬ್ಬರಾದ ನಂತರ ಮತ್ತೊಬ್ಬರು ಎಂದು ಎಲ್ಲರ ವಿಷಯದಲ್ಲಿಯೂ ಹೀಗೇ ಆಯಿತು. ನಮ್ಮ ಕಾಯುವಿಕೆಯೂ ಅಲ್ಲಿಗೇ ಮುಗಿಯಿತು. ಅಮ್ಮ-ಅಪ್ಪನಿಗೆ ದಿಗ್ಭ್ರಾಂತಿಯಾಗಿ ಅವರು ಜೀವಚ್ಛವಗಳಂತಾದರು. ಜರ್ಮನಿಯಲ್ಲಿ ಏನಾಯಿತು, ಆ ಕ್ರೌರ್ಯದ ಪ್ರಮಾಣ ನನ್ನ ಅಜ್ಜಿಯನ್ನು ಗ್ಯಾಸ್ ಛೇಂಬರ್‌ಗೆ ಇತರರೊಡನೆ ನಡೆಸಲಾಯಿತು ಎಂದು ನಾವು ಕೇಳಿದಾಗ ನನ್ನ ಅಪ್ಪ ಬಿಳಿಚಿಕೊಂಡರು. ಅನೇಕ ಗಂಟೆಗಳವರೆಗೆ ಮಾತನಾಡಲು ಸಾಧ್ಯವಾಗದೆ ಮುಷ್ಟಿ ಬಿಗಿಹಿಡಿದು ಕುಳಿತರು. ನಾಜಿಗಳ ಕೈಗೆ ಸಿಕ್ಕಿ ಸತ್ತ ಎಷ್ಟೋ ಮಂದಿ ಸಂಬಂಧಿಗಳನ್ನು ನಾನು ತಿಳಿದಿರಲಿಲ್ಲವಾದ್ದರಿಂದ ಸರ್ವೇ ಸಾಮಾನ್ಯ ದುಃಖದ ಒಂದು ವಿಚಿತ್ರ ನೆವ ನನ್ನಲ್ಲಿತ್ತು. ನಾಜಿಗಳಿಗೆ ಸಿಕ್ಕಿ ಕಗ್ಗೊಲೆಯಾದ ಲಕ್ಷಗಟ್ಟಲೆ ಇತರರಿಗಾಗಿ ನಾನು ದುಃಖಿಸಿದಷ್ಟು ಈ ಬಂಧುಗಳ ನಷ್ಟಕ್ಕೆ ದುಃಖಿಸಲಿಲ್ಲ.

ನನ್ನ ತಂದೆ–ತಾಯಿಗಳ ಕಷ್ಟವನ್ನೇ ನೋಡಲು ನಾನು ದ್ವೇಷಿಸುತ್ತಿದ್ದೆನಾದ್ದರಿಂದ ನನಗೆ ದುಃಖವಾಗುವ ಬದಲಾಗಿ ಕೋಪ ಬಂದಿತು.

ಆಸ್ಟ್ರಿಯನ್ ಆಗಿ ನನ್ನನ್ನು ಗುರ್ತಿಸಬಹುದಾದ ಎಲ್ಲವನ್ನು ತ್ಯಜಿಸಲು ನಾನು ನಿರ್ಧರಿಸಿದೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಾನು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದೆ. ಯಾವುದೇ ತೊಂದರೆ ಇಲ್ಲದೆ, ನನಗೆ ಪೌರತ್ವವೇ ಲಭಿಸಿತು ಜರ್ಮನ್‌ನ ಟ್ರೂಡ್ ಎನ್ನುವುದರಿಂದ ನನ್ನ ಹೆಸರನ್ನು ಅದಕ್ಕಿಂತಲೂ ಹೆಚ್ಚಾಗಿ ಇಂಗ್ಲಿಷ್ ಹೆಸರಿನಂತೆ ಕೇಳಿಸಬಹುದಾದ ಹೆಸರಿಗೆ ಬದಲಾಯಿಸಿಕೊಳ್ಳಲು ಸಹ ನಿರ್ಧರಿಸಿದೆ. ನನಗಾಗಿ ಒಂದು ಸರಿಯಾದ ಹೆಸರಿಗಾಗಿ ನಾನು ಹುಡುಕಿ, ಹುಡುಕುತ್ತಲೇ ಇದ್ದೆ. ಕೊನೆಗೆ ಮಿರಿಯಮ್ 'ಸ್ಕಾರ್ಲೆಟ್' ಎಂಬ ಹೆಸರನ್ನು ಸೂಚಿಸಿದಳು. ನಾವಿಬ್ಬರೂ 'ಗಾನ್ ವಿಥ್ ದ ವಿಂಡ್' ಪುಸ್ತಕವನ್ನೋದಿ, ಸಿನೆಮಾವನ್ನು ನೋಡಿದ್ದೆವು. ಅದನ್ನು ಇಷ್ಟಪಟ್ಟಿದ್ದೆವು. ಸ್ಕಾರ್ಲೆಟ್ ಓಹರಳ ಒಂದು ಎಳೆ ನನ್ನಲ್ಲಿದೆ ಎಂದು ಮಿರಿಯಮ್ ನನಗೆ ನಂಬಿಕೆಯುಂಟು ಮಾಡಿದಳು: ಕೊನೆಯವರೆಗೂ ಓರ್ವ ಹೋರಾಟಗಾರ್ತಿಯೇ ಸ್ಕಾರ್ಲೆಟ್ ಓಹರ!

ನನ್ನ ಹೊಸ ಹೆಸರೂ ಸಹ ನನಗೊಂದು ಹೊಸ ಅಸ್ತಿತ್ವವನ್ನು ಕೊಟ್ಟಿತ್ತು. ನಾನು ಗಾನ್ ವಿಥ್‌ದ ವಿಂಡ್‌ನ್ನು ಅನೇಕ ಸಾರಿ ಓದಿದ್ದೆ. ಸ್ಕಾರ್ಲೆಟ್‌ಳ ದೃಢ ನಿರ್ಧಾರ ಹಾಗೂ ಯಶ ಗಳಿಸುವ ವಿಶ್ವಾಸವಿದ್ದ ಕೆಲವಂಶ ವನ್ನಾದರೂ ಹೀರಿಕೊಳ್ಳಲು ಪ್ರಯತ್ನಿಸಿದ್ದೆ. ನನ್ನ ನಾಜಿ ಗುರುವು ಹೇಳಿದ್ದು ತಪ್ಪೆಂದು ಸಾಧಿಸಿ ತೋರಿಸಬೇಕೆಂದು ಬಹುವಾಗಿ ಅಂದುಕೊಂಡಿದ್ದೆ. ಅವನು ಭವಿಷ್ಯ ನುಡಿದಂತೆ, ನಾನೇನು ಗಟಾರದಲ್ಲಿ ಕೊನೆಗಾಣುವುದಿಲ್ಲ. ಆದರೆ, ನನ್ನ ಜೀವನದಿಂದ ಏನಾದರೂ ಮಾಡಲು ಹೋರಾಡುತ್ತೇನೆ ಎಂದು ಸಾಧಿಸ ಬಯಸಿದ್ದೆ. ಅದೇನೆಂದು ನನಗೂ ಆಗ ತಿಳಿದಿರಲಿಲ್ಲ. ನನಗೆ ಜೀವನದಲ್ಲಿ ಪುರುಷರಿಂದಾಗಿ ಬಹಳವೇ ಕೆಟ್ಟ ಕೆಟ್ಟ ಅನುಭವಗಳಾಗಿದ್ದವು. ಸೇನೆಯ ಸೈನಿಕರು ಚದುರಿದಾಗ ಕೆನ್ ವಾಪಸಾದ. ನಮ್ಮ ಮದುವೆಗೆ ಮತ್ತೊಂದು ಅವಕಾಶ ಕೊಡೋಣವೇ ಎಂದು ಸೂಚಿಸಿದ. ಆದರೆ, ನಾನು ನೀರಸವಾಗಿ ನಿರಾಕರಿಸಿದೆ. ನಾವಿಬ್ಬರೂ ಇನ್ನೂ ವಿಚ್ಛೇದಿತರಲ್ಲ ಎಂಬುದನ್ನು ನಾನು ಗಣನೆಗೆ ತಂದುಕೊಳ್ಳಲಿಲ್ಲ. ಕಾರಣ, ನಾನೆಂದಾದರೂ ವಿವಾಹ ಮಾಡಿಕೊಳ್ಳಲು ಇಚ್ಛಿಸಬಹುದು ಎಂಬುದನ್ನು ಊಹಿಸಿಕೊಳ್ಳಲೂ ಸಹ ನನ್ನಿಂದ ಸಾಧ್ಯವಿರಲಿಲ್ಲ. ಮದುವೆ ಮಕ್ಕಳು ಎನ್ನುವ ಪ್ರಶ್ನೆಯೇ ಇರಲಿಲ್ಲ. ಫ್ಯಾಸಿಸಂ ಹಾಗೂ ಅದು ಪ್ರತಿನಿಧಿಸುವ ವರ್ತನೆ (brainwashing)ಯು ಸಂಪೂರ್ಣವಾಗಿ ನನ್ನನ್ನು ಭ್ರಮನಿರಸನಳನ್ನಾಗಿಸಿ, ಒಬ್ಬ ರಾಜಕೀಯಾಸಕ್ತಳಾಗುವುದನ್ನು ತಪ್ಪಿಸಿತು. ನನ್ನ ತಂದೆ ತಾಯಿಗಳನ್ನು ನೋಡಿಕೊಳ್ಳುವುದೊಂದೇ ನನ್ನ ಏಕೈಕ ಗುರಿ ಎನ್ನುವುದನ್ನು ನಾನು ಒಪ್ಪಿಕೊಳ್ಳದಾದೆ ಮತ್ತು ಅದರಿಂದಾಗಿ ಒಂದು ಅರ್ಥವನ್ನು ನನ್ನ ಜೀವನಕ್ಕೆ

ಕಂಡುಕೊಳ್ಳುವ ಹೋರಾಟವನ್ನು ಮುಂದುವರೆಸಿದೆ. ನಾನೊಬ್ಬ ಬೇಸತ್ತ ಆಶಾಭಂಗಕ್ಕೊಳಗಾದ ಅವಿವಾಹಿತಳಾಗುತ್ತಿರುವುದನ್ನು ನಾನೇ ಕಾಣಬಹುದಿತ್ತು. ನನ್ನ ವಯಸ್ಸಿಗಿಂತಲೂ ಹೆಚ್ಚು ವಯಸ್ಸಾದಂತೆ ಹಿರಿಯಳಂತೆ ಜೀವನದಲ್ಲಿ ಯಾವುದೇ ಸಂತೋಷವಿಲ್ಲದವಳಂತೆ. ನನ್ನ ಮಾನಸಿಕ ಸ್ವಾಸ್ಥ್ಯವನ್ನು ಸರಿಯಾಗಿಟ್ಟುಕೊಳ್ಳಲು ಬಹಳವಾಗಿ ಹೆಣಗಿದೆ. ಆದರೆ, ನನ್ನ ಭಯಗಳನ್ನು ಚರ್ಚಿಸಲು ನನಗೆ ಯಾರೂ ಇರಲಿಲ್ಲ. ಕರ್ಟ್‌ನನ್ನು ನಾನು ಮಾತನಾಡಿಸುತ್ತಲೇ ಇರಲಿಲ್ಲ. ನನ್ನ ಜೊತೆ ಸ್ವಲ್ಪ ಸಮಯ ಕಳೆಯಬೇಕೆಂದಿದ್ದ ಇವಾಳು, ಅವನ ಜೊತೆಗಿನ ತನ್ನ ಜೀವನದಲ್ಲಿ ಮುಳುಗಿಹೋಗಿದ್ದಳು. ಮಿರಿಯಮ್ ಲಂಡನ್‌ಗೆ ಹೊರಟುಹೋದಳು. ಅವಳಿಗೆ ಆಸ್ಟ್ರಿಯಾಗೆ ವಾಪಸಾಗಬೇಕೆಂಬ ಆಶಯವಿದ್ದಿತು. ನಮ್ಮಿಬ್ಬರಲ್ಲೂ ಈಗ ಭಿನ್ನವಾದ ಹೆಬ್ಬಯಕೆಗಳಿದ್ದುದರಿಂದ ನಾವಿಬ್ಬರೂ ದುಃಖದಿಂದಲೇ ಬೇರೆಬೇರೆಯಾದೆವು. ನಾನು ಮಾತನಾಡಬಹುದಾದ ಒಂದೇ ವ್ಯಕ್ತಿ ಈಗ ಉಳಿದಿದ್ದುದು ಅಮ್ಮ ಮಾತ್ರ. ನಾನೀಗ ಕಷ್ಟಕರವಾದ ಒಂದು ಹಂತದಲ್ಲಿದ್ದೇನೆ ಎಂದು ಅರಿತುಕೊಳ್ಳುವಷ್ಟು ಸೂಕ್ಷ್ಮಗ್ರಾಹಿ ಅವಳಾಗಿದ್ದಳು. ಆದರೆ, ಅಪ್ಪನನ್ನು ಸಂತೋಷವಾಗಿರಿಸುವ ಪ್ರಯತ್ನದಲ್ಲೇ ಅವಳು ತನ್ನ ಬಹಳ ಶಕ್ತಿಯನ್ನು ವ್ಯಯಮಾಡುತ್ತಿದ್ದಳು. ಯುದ್ಧದ ಕೊನೆಯ ನಂತರದ ವ್ಯತಿರಿಕ್ತ ಅಂತ್ಯವು ನನಗಾದುದಕ್ಕಿಂತ ಹೆಚ್ಚಾಗಿ ಅವರಿಗೆ ಕೆಟ್ಟದಾಗಿ ಪರಿಣಮಿಸಿತ್ತು. ವಿಯೆನ್ನಾಗೆ ವಾಪಸಾಗಲು ಅಲ್ಲೇನೂ ಇರಲಿಲ್ಲ. ಅಂತೆಯೇ ಅವರಿಬ್ಬರನ್ನು ಇಂಗ್ಲೆಂಡ್‌ನಲ್ಲೇ ಇರಿಸಿಕೊಳ್ಳಲು, ಇಲ್ಲಿ ಬಹಳ ಸ್ವಲ್ಪವೇ ಇದ್ದದ್ದು. ನಾವಿನ್ನೆಂದೂ ಚೇತರಿಸಿಕೊಳ್ಳಲೂ ಆಗದ ಹಾಗೆ ಹಿಟ್ಲರನು ನಮ್ಮಿಂದ ಒಂದನ್ನು ದೋಚಿಕೊಂಡಿದ್ದ: ಅದು ನಮ್ಮ ಸಾಮಾನ್ಯ ಜೀವನ. ನನ್ನ ಸಮಸ್ಯೆಗಳನ್ನು ನನ್ನ ತಂದೆತಾಯಿಗಳ ಮೇಲೆ ಹೊರಿಸುವುದು ನನ್ನಿಂದಾಗಲಿಲ್ಲ. ನನ್ನ ಆಶಾಭಂಗಗಳನ್ನು ಬಿಚ್ಚಿ ಹೇಳಿಕೊಳ್ಳುವಂಥ ಗೆಳೆಯರು ನನಗಿರಲಿಲ್ಲ. ಅಂತೆಯೇ ನಾನು ಮತ್ತೆ ಸೋಮಾರಿಯೂ ಆದೆ. ಆಟೋಪೈಲಟ್‌ನಲ್ಲಿ ನಾನು ಕೆಲಸಕ್ಕೆ ಹೋಗಲಾರದೆ ಹೋಗುವವಳಾದೆ. ಕುಶಲಿಯಾದ ಕಾಸ್ಟಿಂಗ್ ಗುಮಾಸ್ತೆಯಾಗಿ ನನಗೆ ಬಡ್ತಿ ಸಿಕ್ಕಿದರೂ ನನಗಿನ್ನೂ ಎಂಥದೋ ಬೇಸರ. ಒಂದು ಮಾನವ ಕ್ಯಾಲ್ಕ್ಯುಲೇಟರ್‌ನಂತೆ ನಾನು ಕೆಲಸ ಮಾಡುತ್ತಿದ್ದೆ, ಸಂಪೂರ್ಣವಾಗಿ ಯಂತ್ರದಂತೆ ಆಗಿಹೋಗಿದ್ದೆ. ನನಗೆ ಜನರೊಂದಿಗಿನ ಮಾತುಕತೆ ಬೇಕಾಗಿತ್ತು. ಇತರರ ಉತ್ತೇಜನ ಬೇಕಿತ್ತು. ಈ ಭಾವನೆಯು ನಾನು ಯಂತ್ರಗಳ ಜೊತೆಗಿದ್ದು ಕೆಲಸ ಮಾಡುವುದಕ್ಕಿಂತ, ಜನರ ಜೊತೆಗಿದ್ದು ಮಾಡಬಹುದಾದಂಥ ಕೆಲಸ ಒಂದಕ್ಕೆ ತರಬೇತಿ ಪಡೆದುಕೊಳ್ಳಬೇಕೆಂಬ ಯೋಚನೆ ಮೂಡಿಸಿತು. ಒಂದು ದೊಡ್ಡ ಸಂಸ್ಥೆಯಲ್ಲಿ ನಾನು ಕಾರ್ಯಕಾರಿ ವರ್ಗದ ವ್ಯವಸ್ಥಾಪಕಳಾಗಲು ತರಬೇತಿ ಪಡೆಯಬೇಕೆಂದು ನಿರ್ಧರಿಸಿದೆ. ಇದಕ್ಕೆ ನಾನು ಸಂಜೆಯ ತರಗತಿಗಳಿಗೆ ಹೋಗಬೇಕಾದ ಅಗತ್ಯವಿದೆ ಎಂದು ಕೂಡಲೇ

ಕಂಡುಕೊಂಡೆ. ಮ್ಯಾಂಚೆಸ್ಟರ್ ಕಾಲೇಜ್ ಆಫ್ ಟೆಕ್ನಾಲಜಿಗೆ ನೋಂದಾಯಿಸಿಕೊಳ್ಳಲೆಂದು ಹೋದೆ. ಕೈಗಾರಿಕಾ ಆಡಳಿತ ವಿಭಾಗದ ಮುಖ್ಯಸ್ಥರು ನನ್ನೊಡನೆ ಮಾತಾಡಿದರು. ಅವರು ರಾತ್ರಿ ಶಾಲೆಯ ನಾಲ್ಕು ವರ್ಷಗಳ ಕೋರ್ಸ್ ತೆಗೆದುಕೊಳ್ಳಲು ಹೇಳಿದರು. ಇದು ಕೇವಲ ಕಾರ್ಯಕಾರಿ ವರ್ಗದ ವ್ಯವಸ್ಥಾಪಕ ಶಿಕ್ಷಣ ಮಾತ್ರವಾಗಿರದೆ ಒಂದು ಡಿಪ್ಲೊಮಾಗೆ ಸಹಕಾರಿಯಾಗುವು ದೆಂದು, ಹಾಗಾದರೆ ನಾನು ಒಂದು ವರ್ಷಕ್ಕೆ ಆರು ವಿಷಯಗಳನ್ನು ತೆಗೆದುಕೊಂಡು, ಒಂದು ವಾರದಲ್ಲಿ ಮೂರು ರಾತ್ರಿಗಳು ಎರಡು ಒಂದು ಗಂಟೆಯು ತರಗತಿಗಳಿಗೆ ಹಾಜರಾಗಬೇಕಾಗುವುದೆಂದು ಹೇಳಿದರು. ಈ ಡಿಪ್ಲೊಮಾ ಕೋರ್ಸ್‌ನ್ನು ಪ್ರಥಮವಾಗಿ ಪ್ರಾರಂಭಿಸಿರುವ ಮೊದಲ ವರ್ಷ ಇದಾಗಿದ್ದು, ಹದಿನೈದು ಮಂದಿ ವಿದ್ಯಾರ್ಥಿಗಳು ಮಾತ್ರ ನೋಂದಾಯಿಸಿಕೊಂಡಿದ್ದರು, ನನ್ನನ್ನು ಬಿಟ್ಟು ಇನ್ನೊಬ್ಬಳು ಹೆಂಗಸು ಮಾತ್ರವೇ ಅಲ್ಲಿದ್ದುದು. ಕೆಲವು ವಾರಗಳ ನಂತರ ನನ್ನ ಮನಸ್ಸು ಹೊಸ ಹೊಸ ಸವಾಲುಗಳಿಗೆ ತೆರೆದುಕೊಂಡಂತೆ ನನ್ನ ಚೈತನ್ಯವು ಗಗನಕ್ಕೆ ಹಾರಿತು. ನಾನು ಬಹಳ ಕಾತರದಿಂದ ನನ್ನ ತರಗತಿಗಳಿಗೆ ಹಾಜರಾದೆ. ಹಾಗೆಯೇ ನನ್ನ ವ್ಯಾಸಂಗದಲ್ಲಿ ಮುಳುಗಿಹೋದೆ. ಅಲ್ಲಿನ ವಿದ್ಯಾರ್ಥಿಗಳಲ್ಲಿ ನಾನೊಬ್ಬಳೇ ಇಂಗ್ಲಿಷನ್ನು ಹಿಂದೆಂದೂ ಓದಿಲ್ಲದಿದ್ದ ಕಾರಣ, ಅದನ್ನು ಸರಿಯಾಗಿ ಕಲಿಯಲೇಬೇಕೆನ್ನುವುದು ನನ್ನ ಹಠವಾಗಿತ್ತು. ನಾನು ಅದಕ್ಕೆ ಅಂಟಿಕೊಂಡೆ. ಆದರೆ ಬಹಳ ಬೇಗನೇ ತರಗತಿಯಲ್ಲಿ ಎಲ್ಲರನ್ನೂ ಮೀರಿಸಿದೆ. ಹೇಗೇ ಆದರೂ ನನ್ನ ವೃತ್ತಿಜೀವನವನ್ನು ನನ್ನ ವ್ಯಾಸಂಗದೊಡನೆ ಸರಿತೂಗಿಸಿಕೊಂಡು ಹೋಗುವುದು ದಿನದಿಂದ ದಿನಕ್ಕೆ ಹೆಚ್ಚು ಕಷ್ಟವಾಗುತ್ತಿತ್ತು. ಆದ್ದರಿಂದ ನಾನು ಸ್ಥಳೀಯ ಪತ್ರಿಕೆಯಲ್ಲಿ ಒಂದು ಜಾಹೀರಾತನ್ನು ಕೊಟ್ಟೆ. ಅದು ಹೀಗಿತ್ತು: 'ವ್ಯವಸ್ಥಾಪಕ ಕೌಶಲ್ಯ ಹಾಗೂ ಕಾರ್ಯನಿವಾಹಕ ಸಾಮರ್ಥ್ಯವಿರುವ, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳ ಜ್ಞಾನವಿದ್ದು ಕೆಲಸ ಮಾಡಬಲ್ಲ ಯುವತಿಯು ಸವಾಲೊಡ್ಡುವ ಕೆಲಸ ಅರಸುತ್ತಿದ್ದಾಳೆ.' ಇದಕ್ಕೆ ಆರು ಉತ್ತರಗಳು ಬಂದಾಗ ನಾನು ವಿಸ್ಮಿತಳಾದೆ. ನಾನು ಅನೇಕ ಸಂದರ್ಶನಗಳಿಗೆ ಹೋದೆ. ಬ್ರಿಟಿಷ್ ನೇಯ್ದ ವಸ್ತ್ರಗಳ ಯಂತ್ರಗಳನ್ನು ಅನೇಕ ಐರೋಪ್ಯ ರಾಷ್ಟ್ರಗಳಿಗೆ ಮಾರುತ್ತಿದ್ದ ಒಂದು ರಫ್ತು ಕಂಪೆನಿಗೆ 'ಕಾರ್ಯದರ್ಶಿ'ಯಾಗಿ ಕೆಲಸ ಮಾಡಲು ನಿರ್ಧರಿಸಿದೆ. ಅಲ್ಲಿನ ಯಜಮಾನನು, ತನ್ನ ಬಹಳ ಸಮಯವನ್ನು ಪ್ರಯಾಣದಲ್ಲೇ ಕಳೆಯುವುದರಿಂದ ಯಾರನ್ನು ತಾನು ನಂಬಿ ಆ ದೇಶದಲ್ಲಿ ಒಳಬರುವ ಆರ್ಡರ್‌ಗಳನ್ನು ಸರಿಯಾಗಿ ನೀಡುವವರೂ ಅಂತೆಯೇ ಯಂತ್ರಗಳನ್ನು ರಫ್ತು ಮಾಡಲು ಅಗತ್ಯವಾದ ಹಡಗುಗಳ ವ್ಯವಸ್ಥೆ ಮಾಡಬಲ್ಲ ಒಬ್ಬರು ತನಗೆ ಬೇಕಾಗಿತ್ತೆಂದು ನನಗೆ ವಿವರಿಸಿದನು. ಈ ರೀತಿಯ ಕೆಲಸವು ನನಗೆ ಚೆನ್ನಾಗಿ ಒಪ್ಪುತ್ತದೆ ಎಂದು ನಾನು ಯೋಚಿಸಿದೆ. ಅದರಿಂದ ಮ್ಯಾಂಚೆಸ್ಟರ್‌ನ ಮಧ್ಯಭಾಗದಲ್ಲಿರುವ ಸುಂದರವಾದ ಒಂದು ಹೊಸ

ಕಛೇರಿಗೆ ತಾಂತ್ರಿಕ ಸಂಸ್ಥೆಯಿಂದ ಸಂತೋಷವಾಗಿಯೇ ನಾನು ಬದಲಾಯಿಸಿಕೊಂಡೆ. ನನ್ನ ಹೊಸ ಕೆಲಸಕ್ಕೆ ಕೆಲಸದ ಪ್ರಮಾಣಕ್ಕಿಂತ, ಗುಣಮಟ್ಟದ ಅಗತ್ಯವಿತ್ತು. ಹಾಗಾಗಿ ಇದು ನಾನು ನನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು ನನಗೆ ಹೆಚ್ಚಿನ ಸಮಯವನ್ನು ಕೊಟ್ಟಿತು. ಬಹಳಷ್ಟು ದಿವಸಗಳು ಜರ್ಮನ್ ಅಥವಾ ಫ್ರೆಂಚ್ ಭಾಷೆಯಲ್ಲಿ ಕೆಲವು ಪತ್ರಗಳನ್ನು ಬರೆಯುವುದು ಮತ್ತು ಕೆಲವು ಟೆಲಿಫೋನ್ ಕರೆಗಳನ್ನು ಮಾಡುವುದು ಬಿಟ್ಟರೆ, ಇದಕ್ಕಿಂತ ಹೆಚ್ಚಿನದಾಗಿ ನಾನೇನೂ ಕೆಲಸ ಮಾಡುವುದು ಇರುತ್ತಿರಲಿಲ್ಲ. ಆದರೂ ತನ್ನ ವ್ಯವಹಾರವನ್ನು ತ್ವರಿತ ಗತಿಯಲ್ಲಿ ನಾನು ನಿರ್ವಹಿಸುತ್ತಿರುವ ಪ್ರಯತ್ನವು ನನ್ನ ಯಜಮಾನನಿಗೆ ಬಹಳ ಸಂತೋಷವಾಗಿತ್ತು. ಅವನು ಪ್ರತಿ ಕ್ರಿಸ್‌ಮಸ್‌ನಲ್ಲಿಯೂ ಧಾರಾಳವಾಗಿ ಬೋನಸ್ ನೀಡಿ ನನ್ನನ್ನು ಬಹುಮಾನಿಸುತ್ತಿದ್ದ.

ಶಿಕ್ಷಣವು ಮುಗಿಯುತ್ತ ಬಂದಂತೆಲ್ಲ ಈ ಡಿಪ್ಲೊಮಾದಿಂದ ನಾನೇನು ಮಾಡುತ್ತೇನೆ, ಅಂತೆಯೇ ನನ್ನ ಸಮಯವನ್ನು ನಾನು ಹೇಗೆ ತುಂಬಿಕೊಳ್ಳುತ್ತೇನೆ ಎಂದು ಕಾತರಳಾಗಿ ಪುನಃ ಚಡಪಡಿಸತೊಡಗಿದೆ. ವಾಸ್ತವವಾಗಿಯೂ ನಾನು ಪರ್ಸೊನೆಲ್ ಮ್ಯಾನೇಜರ್ ಆಗಬೇಕೆಂದಿದ್ದೇನೆಯೇ ಎಂದು ನನಗೇ ಗೊತ್ತಿರಲಿಲ್ಲ. ಮತ್ತೊಮ್ಮೆ ನನಗಾಗಿ ನಿರ್ಧಾರವು ಮಾಡಲ್ಪಟ್ಟಿತು. ನಾನು ಅರ್ಥ ಶಾಸ್ತ್ರವನ್ನು ನನ್ನ ಕೊನೆಯ ವರ್ಷದಲ್ಲಿ ಓದಿದೆ. ಅರ್ಥಶಾಸ್ತ್ರದ ಉಪನ್ಯಾಸಕನು ನಿಜಕ್ಕೂ ತೀಕ್ಷ್ಣಬುದ್ಧಿಯವನಾಗಿದ್ದಾನೆಂದು ಅರಿತೆ. ಅವನು ನ್ಯೂ ಕ್ಯಾಸೆಟ್‌ನಿಂದ ಬಂದ ಓರ್ವ ಮಾಜಿ ಗಣಿಗಾರಿಕೆಯವನು. ಅವನನ್ನು ಅವನ ಟ್ರೇಡ್ ಯೂನಿಯನ್, ರಸ್ಕಿನ್ ಕಾಲೇಜ್ ಆಕ್ಸ್‌ಫರ್ಡ್‌ಗೆ ಪ್ರಾಯೋಜಿಸಿದ್ದಿತು. ಅನಂತರ ಅವನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ವೇತನವನ್ನು ಗಳಿಸಿಕೊಂಡ. ಅರ್ಥಶಾಸ್ತ್ರದಲ್ಲಿ ನಮ್ಮ ಕಾಲಾವಧಿ ಪರೀಕ್ಷೆಗಳ ನಂತರ ಅವನು ನನ್ನನ್ನು ಅಲ್ಲೇ ಉಳಿಯಲು ಹೇಳಿದ. ಅವನಿಂದ ಏನನ್ನು ನಿರೀಕ್ಷಿಸಬೇಕೆನ್ನುವ ಕಲ್ಪನೆಯೂ ನನಗಿರಲಿಲ್ಲ. ನಾನು ಅರ್ಥಶಾಸ್ತ್ರವನ್ನೋದಲು ವಿಶ್ವವಿದ್ಯಾನಿಲಯಕ್ಕೆ ಹೋಗಬೇಕು ಎಂದು ಅವನು ಸಲಹೆ ಮಾಡಿದಾಗ ನಾನು ತಬ್ಬಿಬ್ಬಾದೆ.

ವಿಶ್ವವಿದ್ಯಾನಿಲಯಕ್ಕೆ ಸೇರಿಕೊಂಡು ಓದುವುದು ಯಾವಾಗಲೂ ನನ್ನ ಒಂದು ರಹಸ್ಯವಾದ ಮಹತ್ವಾಕಾಂಕ್ಷೆ ಆಗಿದ್ದುದು. ಆದರೆ ಅದಕ್ಕೆ ಧ್ವನಿ ಕೊಡಲು ನಾನೆಂದೂ ಧೈರ್ಯ ಮಾಡಿರಲಿಲ್ಲ. ನಾನು ನನ್ನ ಸಂಜೆಯ ತರಗತಿಗಳಿಗೆ ಹೋಗುವಾಗಲೆಲ್ಲ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಹೊಟ್ಟೆಕಿಚ್ಚಿನಿಂದ ನೋಡುತ್ತಿದ್ದೆ. ಅವರುಗಳ ಉದ್ದದ ವಿಶ್ವವಿದ್ಯಾನಿಲಯದ ಸ್ಕಾರ್ಫುಗಳನ್ನು ಸಾಧನೆಯ ಸಂಕೇತಗಳಾಗಿ ಸಂವೇದಿಸುತ್ತಿದ್ದೆ. ನಾನೇ ಒಂದು ಸ್ಕಾರ್ಫನ್ನು ಖರೀದಿಸಬೇಕೆಂದು ಗಂಭೀರವಾಗಿ ಯೋಚಿಸಿದ್ದೆ. ಅದನ್ನು ಧರಿಸಿ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳಲು ಪ್ರಯತ್ನವನ್ನಾದರೂ ಪಟ್ಟರೆ ಅದು ಸಾಧ್ಯವಾದೀತೆಂದು ನಾನು ದೃಢವಾಗಿದ್ದೆ. ನನ್ನ ಉಪನ್ಯಾಸಕರು

ಹೇಳಿದ ಮಾತುಗಳಿಂದ ನನ್ನ ಮುಖಸ್ತುತಿ ಮಾಡುತ್ತಿದ್ದಾರೆಂದು ಭಾವಿಸಿದೆ. ಆದರೆ ನಿಜಕ್ಕೂ ಅದರಿಂದ ಬಹಳವಾಗಿ ಪ್ರೋತ್ಸಾಹಿತಳು ಆದೆ. ಆದರೆ ದಿನವಿಡೀ ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪಾಠ ಪ್ರವಚನಗಳಿಗೆ ನಾನು ಹಾಜರಿರಲು ಸಾಧ್ಯವಾಗಬಹುದಾದ ಯಾವುದೇ ದಾರಿ ನನಗೆ ಕಾಣಲಿಲ್ಲ. ನಾನು ಯಾವುದಾದರೊಂದು ವಿದ್ಯಾರ್ಥಿ ವೇತನಕ್ಕೆ ಅರ್ಹಳೆನಿಸಬಹುದು ಎಂದು ನಾನೆಂದೂ ತಿಳಿದಿರಲಿಲ್ಲ. ಹಾಗೊಂದು ವೇಳೆ ಅರ್ಹತೆಯನ್ನು ಗಳಿಸಿದರೂ, ಅದು ನನ್ನ ತಂದೆ–ತಾಯಿಯನ್ನು ಸಲುಹಲ ಸಾಕಾಗುತ್ತದೆ ಎಂದೂ ಅಂದುಕೊಂಡಿರಲಿಲ್ಲ. ನನ್ನ ಉಪನ್ಯಾಸಕರು ನನ್ನ ಮನದ ಸಂಶಯಗಳನ್ನು ತೊಡೆದುಹಾಕಲು ಯತ್ನಿಸಿ, ರಸ್ಕಿನ್ ಕಾಲೇಜಿಗೆ ಅರ್ಜಿ ಸಲ್ಲಿಸಲು ಬಲವಾಗಿ ಶಿಫಾರಸು ಮಾಡಿದರು. ಅವರೇ ಸ್ವತಃ ಅವರ ವಿದ್ಯಾಭ್ಯಾಸದ ಕ್ರಮವನ್ನು ಅಲ್ಲಿ ಪ್ರಾರಂಭ ಮಾಡಿದ್ದರು. ರಸ್ಕಿನ್ ಕಾಲೇಜಿನಲ್ಲಿ ಒಮ್ಮೆ ಒಂದು ಸ್ಥಾನವನ್ನು ಗಳಿಸಿದರೆ, ವಿದ್ಯಾರ್ಥಿ ವೇತನವು ತಾನೇ ತಾನಾಗಿ ಬರುವುದು ಎಂದು ಭರವಸೆ ನೀಡಿದ ಉಪನ್ಯಾಸಕರು, ನನ್ನಂತೆ ವಿಶೇಷ ಪರಿಶ್ರಮ ಮಾಡುವವರ ವಿಷಯದಲ್ಲಿ ಅಧಿಕಾರಿಗಳು ಅನುದಾನವನ್ನು ಹೆಚ್ಚು ಮಾಡಲೂ ಸಿದ್ಧರಾಗಬಹುದು ಎಂದು ಹೇಳಿದರು.

ನಾವಿಬ್ಬರೂ ಸುಮಾರು ಒಂದು ಗಂಟೆ ಮಾತನಾಡಿದೆವು. ಆ ಸಮಯದಲ್ಲಿ ಆತ ನನ್ನ ಪ್ರಖರವಾದ ಹೊಸ ಭವಿಷ್ಯವನ್ನು ಚಿತ್ರಿಸಿದ. ರಸ್ಕಿನ್ ಕಾಲೇಜಿನಲ್ಲಿ ನಾನು ಒಂದು ಡಿಪ್ಲೊಮಾವನ್ನೇ ಪಡೆಯಬಹುದಾಗಿತ್ತು. ಆದರೆ, ಅಲ್ಲಿಂದ ನಾನು ವಿಶ್ವವಿದ್ಯಾನಿಲಯಕ್ಕೆ ಹೋಗಲು ಅರ್ಜಿ ಸಲ್ಲಿಸಬಹುದು ಎಂದು ಆತ ವಿನಂತಿಸಿದ. ಅವನು ಈ ವಿಷಯವನ್ನು ನನಗೆ ಅದೆಷ್ಟು ಮನಗಾಣಿಸಿದನೆಂದರೆ, ನನ್ನ ಪ್ರವೇಶಾತಿಗಾಗಿ ನಾನು ಸಲ್ಲಿಸುವ ಅರ್ಜಿಯ ಜೊತೆಗೆ, ರಸ್ಕಿನ್ ಕಾಲೇಜಿಗೆ ಒಂದು ಪ್ರಬಂಧವನ್ನು ಸಲ್ಲಿಸಲು ನಾನು ಒಪ್ಪಿದೆ. ಮುಂದಿನ ವಾರವೇ ನಾನು, ವಾರದ ಕೊನೆಯ ದಿನಗಳಲ್ಲಿ ಒಂದು ಪ್ರಬಂಧವನ್ನು ಸಿದ್ಧಪಡಿಸಲು ಪ್ರಯತ್ನಿಸುವ ಸಲುವಾಗಿ ಜ್ವರವೇರಿದವಳಂತೆ  ಕೆಲಸ ಮಾಡಿದೆ.

ನಾನೇನು ಮಾಡುತ್ತಿರುವೆನೆಂದು ಅಮ್ಮನಿಗೆ ಹೇಳುವ ಧೈರ್ಯ ನನ್ನಲ್ಲಿರಲಿಲ್ಲ. ಕಾರಣ, ಒಂದು ವೇಳೆ ನಾನು ದೂರ ಹೋದರೆ, ತಾನು ಹಾಗೂ ಅಪ್ಪನೂ ಹೇಗೆ ಸಂಭಾಳಿಸುವುದು ಎಂದು ಸುಮ್ಮನೆ ಚಿಂತಿಸುತ್ತಾಳೆ ಎಂದು ನನಗೆ ತಿಳಿದಿತ್ತು. ದುಡಿದು ತರುವುದರಲ್ಲಿ ಮನೆಯಲ್ಲಿ ನಾನೇ ಪ್ರಮುಖಳು. ಮಾತ್ರವಲ್ಲ, ಮನೆಗೆ ಬಹಳ ಅಗತ್ಯವಿರುವ ರಕ್ಷಕಿ. ಅವರಿಬ್ಬರೂ ಎದುರಿಸಿದ ಕಷ್ಟಗಳು ಮತ್ತು ಆಶಾಭಂಗಗಳು (ಕೆಡುಕಿನ ಪರಿಸ್ಥಿತಿಗಳು) ಮತ್ತು ಅದನ್ನು ಪರಸ್ಪರ ಒಪ್ಪಿಕೊಳ್ಳುವುದರಲ್ಲಿ ಅವರ ಅಸಮರ್ಥತೆ ಅವರನ್ನು ಹಾಗೆ ಮಾಡಿಸಿತ್ತು. ಆದರೆ ಅದರಲ್ಲೂ ಅಪ್ಪನಂತೂ ಬಹಳ ಮುಂಗೋಪಿ. ತುಂಬ ಸಣ್ಣಪುಟ್ಟ ವಿಷಯಗಳಲ್ಲೂ ಆಗುತ್ತಿದ್ದ

ಭಿನ್ನಾಭಿಪ್ರಾಯಗಳು ಬಹಳ ದೊಡ್ಡ ವಾದಕ್ಕೆ ಏರಿಬಿಡುತ್ತಿತ್ತು. ಆಗ ಅಪ್ಪ ತಾನೀಗ ದುಡಿದು ತರುವುದಿಲ್ಲವೆಂದು ಯಾರೂ ತನ್ನ ಮಾತು ಕೇಳುವುದಿಲ್ಲವೆಂದು ಅರಚಿ, ಮನೆಯಿಂದಾಚೆಗೆ ಬಿರುಗಾಳಿಯಂತೆ ಹೊರಟು ತನ್ನ ಹಿಂದೆ ಬಾಗಿಲನ್ನು ದಡಾರನೆ ಹಾಕಿಕೊಂಡು ಹೋಗುತ್ತಿದ್ದರು. ಅಪ್ಪನು ಹೀಗೆ ರೇಗಿ ಹಾರಾಡಿದಾಗ ಮಾತಾಡದೆ ಸುಮ್ಮನಾಗುವುದು ಉತ್ತಮ ಎಂದು ಅಮ್ಮ ಅರಿತಿದ್ದಳು. ಅಂತೆಯೇ ತನ್ನೆಲ್ಲ ಶಕ್ತಿಯೂ ಹರಿದುಹೋದವಳಾಗಿ ಕಲ್ಲಿನಂತೆ ಅಲ್ಲಿಯೇ ಕುಳಿತುಬಿಡುತ್ತಿದ್ದಳು. ಒಂದು ಗಂಟೆಯ ನಂತರ ಅಪ್ಪನನ್ನು ಕರೆದುತರಲು ಅಮ್ಮ ನನ್ನನ್ನು ಕಳುಹಿಸುತ್ತಿದ್ದಳು. ಮುಂದಿನ ಇಂಥದೇ ಒಂದು ಘಟನೆ ನಡೆಯುವವರೆಗೆ ಎಲ್ಲ ಮೈಮರೆತು ಹೋಗುತ್ತಿತ್ತು.

ಆರ್ಕ್ಸ್‌ಫರ್ಡ್‌ಗೆ ಹೋಗುವುದಕ್ಕೋಸ್ಕರ ನಾನು ಅವರನ್ನು ಹೇಗೆ ತಾನೆ ಬಿಡಬಲ್ಲೆ ? ಆದರೆ ನಾನು ಈಗಾಗಲೇ ಅವರಿಗಾಗಿ ಸಾಕಷ್ಟು ತ್ಯಾಗಗಳನ್ನು ಮಾಡಿದ್ದೇನೆ ಎಂದು ನನಗೆ ನಾನೇ ವಿವೇಕ ಹೇಳಿಕೊಂಡೆ. ಸನ್ನಿವೇಶದ ಜೊತೆಗೆ ಸಂಭಾಳಿಸಿ ಕೊಂಡು ಹೋಗಲು, ನನ್ನನ್ನು ಸುಮ್ಮನೆ ಬಿಟ್ಟುಹೋದ. ನನ್ನ ಸಹೋದರರ ಬಗ್ಗೆ ನನಗೆ ಜಿಗುಪ್ಸೆ ಮೂಡಿತು. ಖಂಡಿತವಾಗಿಯೂ, ಈ ಭಾವದ ಹೊರೆಯನ್ನು ಹೊರುವುದು ಈಗ ಇನ್ನೊಬ್ಬರ ಸರದಿಯೇ? ಅದರಿಂದ ನನ್ನ ಪ್ರಬಂಧವನ್ನು ನಾನು ಬರೆದೆ. ಪುನಃ ತಿದ್ದಿ ಬರೆದೆ, ನನಗೆ ತೃಪ್ತಿಯಾಗುವತನಕ.

ರಸ್ಕಿನ್ ಕಾಲೇಜಿನಿಂದ ನನಗೆ ಉತ್ತರ ಬರುವುದು ಕಡಿಮೆ ಎಂದರೂ ಮೂರು ವಾರಗಳಾಗುತ್ತದೆ ಎಂದು ನನಗೆ ತಿಳಿದಿದ್ದರೂ, ಅದಕ್ಕಿಂತ ಮುಂಚೆ ನಾನು ನಿರೀಕ್ಷೆ ಮಾಡುವಂತಿಲ್ಲ ಎಂದರೂ ಪ್ರತಿ ದಿನವೂ ನಾನು ಕಾತರದಿಂದ ಅಂಚೆಗಾಗಿ ಕಾದು, ಓಡಿಹೋಗಿ ತೆಗೆದುನೋಡುತ್ತಿದ್ದೆ, ಅಧೀರಳಾಗುತ್ತಿದ್ದೆ. ಹಾಗೆಯೇ ಚಡಪಡಿಸುತ್ತಿದ್ದೆ. ನಾನು ಅಂಚೆಯವನಿಗಾಗಿ ಕಾಯುತ್ತಾ ಅತ್ತಿತ್ತ ಶತಪಥ ಮಾಡುವುದನ್ನು ಅಮ್ಮ ಗಮನಿಸಿದಳು. ನಾನು ಒಂದು ಪ್ರೇಮಪತ್ರಕ್ಕಾಗಿಯೇ ಕಾಯುತ್ತಿರಬೇಕೆಂದು ನನ್ನನ್ನು ಛೇಡಿಸಿದಳು. ಕೊನೆಗೂ ಪತ್ರ ಬಂದಿತು. ಅದನ್ನು ಕಂಡು ನನಗೆ ನಗಬೇಕೋ ಅಥವಾ ಅಳಬೇಕೋ ತಿಳಿಯಲಿಲ್ಲ. ಅದನ್ನು ಕೈಲಿ ಹಿಡಿದು ತಿರುಗಿಸಿ ನೋಡಿದೆ. ಅದರೊಳಗಿದ್ದ ವಿಷಯವನ್ನು ನೋಡಲಿಚ್ಛೆ ಇರದಂತೆ. ನನ್ನನ್ನು ಸ್ವೀಕರಿಸಿರಬಹುದು ಎಂದು ನನಗೆ ನಂಬಿಕೆ ಯಾಗಲಿಲ್ಲ. ಅಂತೆಯೇ ನನ್ನನ್ನು ತಿರಸ್ಕರಿಸಿರಬಹುದು ಎಂಬುದನ್ನು ನನಗೆ ನಂಬಲಾಗಲಿಲ್ಲ. ನನ್ನ ಎಲ್ಲ ಭರವಸೆಗಳೂ ಹಾಗೂ ಭಯಗಳೂ ಆ ಒಂದು ತೆಳ್ಳನೆಯ ಬೆಳ್ಳನೆಯ ಲಕೋಟೆ ಕವರಿನಲ್ಲಿದ್ದವು. ಸತ್ಯದ ಗಳಿಗೆಯನ್ನು ನಿಧಾನ ಮಾಡಲು ಉನ್ಮತ್ತಳಾಗಿದ್ದೆ. ಆ ಲಕೋಟೆಯನ್ನು ತೆರೆಯದೆ ನನ್ನೊಡನೆಯೇ ಆಫೀಸಿಗೆ ತೆಗೆದುಕೊಂಡು ಹೋದೆ. ನನ್ನ ಜಾಗದಲ್ಲಿ ಕುರ್ಚಿಯಮೇಲೆ ಕುಳಿತ ನಂತರ ಅದನ್ನು ನಿಧಾನವಾಗಿ ಕತ್ತರಿಸಿ

ತೆಗೆದೆ ಮತ್ತು ಅದರಲ್ಲಿದ್ದ ಚಿಕ್ಕ ತಾತ್ಪರ್ಯವನ್ನು ಓದಿದೆ. ನನ್ನ ಸಂತೋಷ ಎಲ್ಲೆ ಮೀರಿತು. ಕೂಡಲೇ ಮೇಲೆ ಜಿಗಿದು ಪತ್ರವನ್ನು ಕೈಯಲ್ಲಿ ಹಿಡಿದು, ಆಫೀಸಿನ ಸುತ್ತಲೂ ನರ್ತನ ಮಾಡಲು ಪ್ರಯತ್ನಿಸಿದೆ. ರಸ್ಕಿನ್ ಕಾಲೇಜಿನ ಪ್ರಾಂಶುಪಾಲರು ನನ್ನ ಪ್ರಬಂಧವನ್ನು ಬಹಳ ಕುತೂಹಲದಿಂದ ಆಸಕ್ತಿಯಿಂದ ಓದಿದರೆಂದೂ, ಮುಂದಿನ ವಾರ ಒಂದು ಸಂದರ್ಶನಕ್ಕೆ ನನಗೆ ಬರಲು ಸಾಧ್ಯವಾಗಬಹುದೆಂಬ ಆಶಯದಿಂದ ಇದ್ದಾರೆಂದೂ ಅದರಲ್ಲಿ ಹೇಳಿದ್ದಿತು. ಯಾರಾದರೂ ಒಬ್ಬರ ಜೊತೆ ನನ್ನ ಈ ಸುದ್ದಿಯನ್ನು ಹಂಚಿಕೊಳ್ಳಬೇಕೆಂದು ನಾನು ನನ್ನ ಅರ್ಥಶಾಸ್ತ್ರದ ಉಪನ್ಯಾಸಕರಿಗೆ ಫೋನಾಯಿಸಿದೆ. ನನ್ನ ಹರ್ಷಾವೇಶದ ಬಡಬಡಿಕೆಯನ್ನು ಕೇಳಿದಾಗ ಆತ ಸುಮ್ಮನೆ 'ಚೆನ್ನಾಯಿತು' ಎಂದಷ್ಟೇ ಹೇಳಿದ. ಅವನು ನಿರೀಕ್ಷಿಸಿದ್ದಂತೆಯೇ ಆಗಿದೆ ಎಂದು ಅವನ ಧ್ವನಿ ಹೇಳಿತು. ನಾನು ಸಂಪೂರ್ಣವಾಗಿ ಉತ್ಸಾಹ ಕುಂದಿದವಳಾದಂತೆ ಅನ್ನಿಸಿ ನನಗಿನ್ನೂ ಸಂದರ್ಶನದಲ್ಲಿ ಉತ್ತೀರ್ಣಳಾಗುವುದಿರುವಾಗ ಆಶ್ಚರ್ಯಗೊಂಡೆ.

ಏನನ್ನು ಯೋಚಿಸಬೇಕೆಂಬುದೇ ತಿಳಿಯದಷ್ಟು ಸಮ್ಮಿಶ್ರ ಭಾವನೆಗಳನ್ನು ನಾನು ಹೊಂದಿದ್ದೆ. ಇದನ್ನೆಲ್ಲ ಹೇಳಿಕೊಳ್ಳಲು ನನಗೊಬ್ಬ ಗೆಳೆಯ ಬೇಕಿತ್ತೆನಿಸಿ, ಈಗ ನಾನು ಅದೆಷ್ಟು ಒಂಟಿಯಾಗಿದ್ದೇನೆ ಎನ್ನುವುದರ ಅರಿವಾಯಿತು. ಈಗ ನಾನು ಯಾರೊಡನೆಯಾದರೂ ಮಾತನಾಡದೆ ಇದ್ದರೆ ಸಿಡಿದುಹೋಗುತ್ತೇನೆ ಎಂಬಂತೆ ಭಾಸವಾಯಿತು. ಅಮ್ಮನಿಗೆ ತಿಳಿಸಬಾರದೆನ್ನುವ ನನ್ನ ಒಳ್ಳೆಯ ನಿರ್ಧಾರಕ್ಕೆ ವಿರುದ್ಧವಾಗಿ ಈಗ ನಾನು ಅಮ್ಮನನ್ನು ಎದುರಿಸುವ ನಿರ್ಧಾರ ಮಾಡಿದೆ. ಮನೆಗೆ ವಾಪಸಾಗುವಾಗ ದಾರಿಯಲ್ಲಿ ನಾನು ಅವಳಿಗಾಗಿ ಒಂದು ವಿನೇಸಾದ ಗುಚ್ಛವನ್ನು ಕೊಂಡೆ. ಅದು ಅವಳಿಗೆ ಅತ್ಯಂತ ಪ್ರಿಯವಾದ ಹೂಗಳು. ನನ್ನ ಸುದ್ದಿಯ ಹೊಡೆತವನ್ನು ಮೆದುವಾಗಿಸಲು ಈಗ ಅದು ಸಹಾಯ ಮಾಡಬೇಕಿತ್ತು. ಆ ಹೂಗಳನ್ನು ಕಂಡಾಗ ಅವಳಿಗೆ ಬಹಳ ಸಂತೋಷವಾಯಿತು. ಆದರೆ, ಮರುಕ್ಷಣವೇ ಅವಳಿಗೇನೋ ಸಂದೇಹ ಮೂಡಿತು. ನನ್ನ ಕಣ್ಣುಗಳ ಹೊಳಪು ಒಬ್ಬ ಹೊಸ ಸಂಗಾತಿಯ ಸಂಕೇತವೆಂದು ಅವಳು ತಪ್ಪಾಗಿ ಗ್ರಹಿಸಿದಳು. ನನ್ನ ಅನುಭವಗಳ ಬೆಳಕಿನಲ್ಲಿ ಅವಳ ಈ ಗ್ರಹಿಕೆ ನಾನು ಗಹಗಹಿಸಿ ನಗುವಂತೆ ಮಾಡಿತು. ಅಮ್ಮನು ಗೊಂದಲದಲ್ಲಿ ಸಿಕ್ಕಂತೆ ಕಂಡಳು. ಆದರೆ ನನ್ನನ್ನು ನಾನು ಬಲಗೊಳಿಸಿಕೊಂಡು ಅವಳ ಕೈಗೆ ಪತ್ರವನ್ನಿತ್ತೆ. ಆ ಪತ್ರವನ್ನು ನೋಡಿದ ಅವಳ ಮುಖದ ಭಾವ ಈಗ ತಿರಸ್ಕಾರ ಭಾವಕ್ಕೆ ಬದಲಾಯಿತು. ನನ್ನ ಭುಜಗಳನ್ನು ಹಿಡಿದು ನಿಂದಿಸತೊಡಗಿದಳು. "ಆಕ್ಸ್‌ಪರ್ಡ್‌ಗೆ ಹೋಗುವಷ್ಟು ಬುದ್ಧಿವಂತೆ ನೀನೆಂದು ನಂಬಿಕೊಳ್ಳಲು, ನೀನು ಯಾರೆಂದು ತಿಳಿದಿರುವೆ? ನೀನು ಎಂದೆಂದೂ ಆ ಸಂದರ್ಶನದಲ್ಲಿ ತೇರ್ಗಡೆಯಾಗುವುದಿಲ್ಲ ಎಂದು ಖಂಡಿತವಾಗಿಯೂ ನಿನಗೇ ಅರಿವಾಗುತ್ತದೆ!"

ಎಂದಳು. ಅವಳ ಕೋಪ ಮತ್ತು ಸ್ವಾರ್ಥಪರತೆಯಿಂದ ನನಗೆ ದಿಗ್ಭ್ರಾಂತಿಯಾಯಿತು, ನೋವೂ ಆಯಿತು. ಅವಳಿಗೆ ನಾನು ಅಲ್ಲಿಗೆ ಹೋಗುವುದು ಬೇಕಿಲ್ಲದಿದ್ದರೂ, ಕನಿಷ್ಠಪಕ್ಷ ನನ್ನ ಸಾಧನೆಯ ಬಗೆಗೆ ಅವಳಿಗೆ ಹೆಮ್ಮೆಯಾಗುವುದು ಎಂದುಕೊಂಡಿದ್ದ ನನಗೆ ಅವಳ ಬೆಂಬಲ ಹಾಗೂ ಪ್ರೋತ್ಸಾಹಗಳು ಬಹಳವೇ ಬೇಕಾಗಿದ್ದವು. ಆ ದಿನ ಸಂಜೆ ನಾನು ನನ್ನ ಮಲಗುವ ಕೋಣೆಯಲ್ಲೇ ಉಳಿದೆ. ಶೂನ್ಯಳಾಗಿ ಗೋಡೆಗಳನ್ನೇ ದಿಟ್ಟಿಸುತ್ತಾ, ಅಮ್ಮನು ಮಾಡಿದ ಆಹಾರವನ್ನು ತಿರಸ್ಕರಿಸಿದೆ. ಮುಂದಿನ ಕೆಲವು ದಿನಗಳೂ ಹಾಗೆಯೇ ನಾನು ನನ್ನ ತಂದೆ–ತಾಯಿಗಳ ಜೊತೆ ಮಾತನ್ನೇ ಆಡದೆ, ಆದಷ್ಟು ನನ್ನ ಕೋಣೆಯಲ್ಲಿ ಉಳಿದೆ. ನನ್ನ ಸಂದರ್ಶನದ ದಿನ, ಬೆಳಗ್ಗೆ ನಾನು ಆಕ್ಸ್‌ಫರ್ಡ್‌ಗೆ ಹೋಗಲು ಸಿದ್ಧಳಾಗುತ್ತಿದ್ದಾಗ, ಅಮ್ಮ ನನ್ನ ಕೈಹಿಡಿದು ತನ್ನೆಡೆಗೆ ಸೆಳೆದು ಬಾಚಿ ತಬ್ಬಿಕೊಂಡು ಕಿವಿಯಲ್ಲುಸುರಿದಳು. "ನಿನಗೆ ನಿಜವಾಗಿಯೂ ಇದೇ ಬೇಕಾಗಿರುವುದಾದರೆ, ನೀನು ಅದನ್ನು ಪಡೆದೇ ತೀರುತ್ತೀಯೆ ಎಂದು ನಾನು ಆಶಿಸುತ್ತೇನೆ" ಎಂದಳು. ಅವಳ ಅಪ್ಪುಗೆಗಳಿಂದ, ಚುಂಬನಗಳಿಂದ ಮತ್ತೆ ಭರವಸೆ ಪಡೆದ ನಾನು ಹೊರಟೆ. ಆದರೆ ನಾನು ಅದೆಷ್ಟು ಚಿಂತಾಮಗ್ನಳಾಗಿದ್ದೆ ಎಂದರೆ ನನಗೆ ಆ ಸಮಯದಲ್ಲಿ ಪ್ರತಿಕ್ರಿಯಿಸಲೂ ಆಗಲಿಲ್ಲ.

ನಾನು ರೈಲಿನಲ್ಲಿ ಕುಳಿತಂತೆ, ಬಹಳ ಅಧೀರಳೂ, ನನ್ನ ಬಗೆಗೆ ನನಗೇ ವಿಶ್ವಾಸವಿಲ್ಲದವಳೂ ಆದೆ. ನಾನು ಮೈದನಾಜ್‌ರನ್ನು ಭೇಟಿ ಮಾಡಿದೆ. ಆಲ್ಬೇನಿಯದ ಆಕ್ರಮಣವನ್ನು ಹೇಗೆ ಎದುರಿಸಿದೆ, ಕೊಲೋನ್ ಏರ್‌ಪೋರ್ಟ್‌ನಲ್ಲಾದ ಸತ್ತ್ವ ಪರೀಕ್ಷೆಯಲ್ಲಿ ಹೇಗೆ ಪಾರಾದೆ ಹಾಗೂ ಅದೆಷ್ಟು ವರ್ಷಗಳಿಂದ ತಂದೆ ತಾಯಿಗಳ ಆಸರೆಯಾಗಿರುವೆ ಎನ್ನುವುದನ್ನೆಲ್ಲ ನೆನೆದು, ದೂರಾಗಿದ್ದ ನನ್ನೊಳಗಿನ ಧೈರ್ಯವನ್ನು ಒಟ್ಟುಗೂಡಿಸಿಕೊಂಡು ಮುನ್ನಡೆಯುವ ಪ್ರಯತ್ನ ಮಾಡಿದೆ. ಒಂದು ಸಂದರ್ಶನವು ನನ್ನ ಕನಸಿನಿಂದ ನನ್ನನ್ನು ದೂರ ಮಾಡಬಾರದು. ಆಕ್ಸ್‌ಫರ್ಡ್‌ನ್ನು ಸೇರುವ ವೇಳೆಗೆ ನಾನು ಶಾಂತಚಿತ್ತಳಾಗಿದ್ದೆ. ಜೊತೆಗೆ ಯುಕ್ತವಾಗಿಯೇ ಆತ್ಮವಿಶ್ವಾಸ ಉಳ್ಳವಳೂ ಆಗಿದ್ದೆ.

ರೈಲು ತಡವಾಗಿ ಬಂದ ಕಾರಣ ನಾನು ಏದುಸಿರು ಬಿಡುತ್ತಾ ಧಾವಿಸಿ ಕಾಲೇಜಿಗೆ ಬಂದೆ. ನಾನು ಸ್ಟೇಷನ್‌ನಿಂದಲೂ ಓಡಿಕೊಂಡೇ ಬರಬೇಕಾಯಿತು. ಕಾಲೇಜಿನ ಕಾರ್ಯದರ್ಶಿಯು ನನ್ನನ್ನು ಸ್ವಾಗತಿಸಿದರು. ಅವರ ಹಳೆಯ ಮಿತ್ರರಾದ ನನ್ನ ಅರ್ಥಶಾಸ್ತ್ರದ ಉಪನ್ಯಾಸಕರು ನನ್ನ ಬಗೆಗೆ ಬಹಳ ಒಳ್ಳೆಯ ಸಂಗತಿಗಳನ್ನು ತಮಗೆ ಬರೆದಿರುವುದಾಗಿಯೂ, ಅದನ್ನೆಲ್ಲ ಓದಿದ ನಂತರ ತಮಗೆ ನನ್ನನ್ನು ಭೇಟಿಯಾಗುತ್ತಿರುವುದು ಸಂತೋಷ ತಂದಿರುವುದಾಗಿಯೂ ಅವರು ಹೇಳಿದರು. ಕೆಲವು ನಿಮಿಷಗಳ ನಂತರ ನನ್ನ ಸಂದರ್ಶನ ನಡೆಸಲಿರುವ ಪ್ರಾಂಶುಪಾಲರು ಹಾಗೂ ಉಪ ಪ್ರಾಂಶುಪಾಲರನ್ನು ಭೇಟಿ ಮಾಡಲು ತಿಳಿಸಿ ಮಹಡಿಯ ಮೆಟ್ಟಿಲವರೆಗೆ

ನನ್ನನ್ನು ಕರೆತಂದು ಬೀಳ್ಕೊಂಡರು. ಅವರಿಬ್ಬರೂ ಸಹ ಬಹಳ ಸ್ನೇಹಪರರಾಗಿದ್ದು, ನಾನು ಆರಾಮವಾಗಿರುವಂತೆ ಮಾಡಲು ಬಹಳ ಪ್ರಯತ್ನಿಸಿದರು. ನನ್ನ ಪ್ರಬಂಧವನ್ನೋದಿ ಅವರು ಅದೆಷ್ಟು ಖುಷಿಪಟ್ಟರು ಎನ್ನುವುದನ್ನು ಹೇಳುವುದರಿಂದ ಅವರು ಸಂದರ್ಶನ ಪ್ರಾರಂಭಿಸಿದರು. ಅದೇ ವಿಷಯವನ್ನು ನಾವು ಸ್ವಲ್ಪ ಹೊತ್ತು ಚರ್ಚಿಸಿದೆವು. ಅನಂತರ ಸಾಮಾನ್ಯವಾಗಿ ಪ್ರಪಂಚಕ್ಕೆ ಹಾಗೂ ವಿಶೇಷವಾಗಿ ಇಂಗ್ಲೆಂಡ್‌ಗೆ ಸಂಬಂಧ ಪಟ್ಟಿರುವಂಥ ಕೆಲವು ಆರ್ಥಿಕ ಸಮಸ್ಯೆಗಳ ಬಗೆಗೆ ಅವರು ನನ್ನ ಅಭಿಪ್ರಾಯ ಕೇಳಿದರು. ನನ್ನ ಅಧ್ಯಯನದ, ಅರಿವಿನ ಆಳದ ಬಗೆಗೆ ನನಗೆ ಅರಿವಾಗಲು ಪ್ರಾರಂಭವಾಯಿತು. ಅದರಲ್ಲೂ ಕಳೆದ ವಾರದ 'ಎಕನಾಮಿಸ್ಟ್'ನಲ್ಲಿ ಬಂದಿದ್ದ ಒಂದು ನಿರ್ದಿಷ್ಟ ಲೇಖನವನ್ನು ನಾನು ಓದಿದ್ದೇನೆಯೇ ಎಂದು ಅವರು ನನ್ನನ್ನು ಕೇಳಿದಾಗ, ಅವರು ಹೇಳುತ್ತಿರುವ ಆ ವಿಶೇಷ ಲೇಖನವ ನ್ನೋದುವ ಮಾತಿರಲಿ, ಆ ಪತ್ರಿಕೆಯ ಹೆಸರನ್ನು ಸಹ ನಾನೆಂದೂ ಕೇಳಿಲ್ಲ ಎಂದು ನಾನು ಒಪ್ಪಿಕೊಳ್ಳಲೇಬೇಕಾಯಿತು. ಅದು ತಮಗೆ ಗೊತ್ತಿದೆಯೇ ಎಂಬಂತೆ ಅವರಿಬ್ಬರೂ ಪರಸ್ಪರ ಮುಖ ನೋಡಿಕೊಂಡು ಮುಗುಳ್ನಕ್ಕರು. ಅನಂತರ ಕೊನೆಯದಾಗಿ ಕೆಲವು ವಿನೋದದ ಮಾತುಗಳನ್ನಾಡಿ ಅವರು ನನ್ನನ್ನು ಬೀಳ್ಕೊಟ್ಟರು.

ನನ್ನ ಸೊಕ್ಕು ಮುರಿದಿತ್ತು. ಆ ಕರುಣಾಶಾಲಿ ಕಾರ್ಯದರ್ಶಿಗೂ ಹೋಗಿ ಬರುತ್ತೇನೆ ಎಂದು ಹೇಳುವುದನ್ನು ಮರೆತು ನಾನು ಕಣ್ಣೀರು ಹಾಕುತ್ತಾ ಕಾಲೇಜನ್ನು ಬಿಟ್ಟೆ. ನಾನು ಅಂಥಾ ಮೂರ್ಖಳಾದದ್ದಾದರೂ ಹೇಗೆ? ಅಮ್ಮನು ಸರಿಯಾಗಿಯೇ ಹೇಳಿದ್ದಳು. ಮನೆಗೆ ಹೋಗುವ ಯೋಚನೆಯೇ ನನ್ನಲ್ಲಿ ಭೀತಿಯನ್ನು ತುಂಬಿತು. ಕಾಲೇಜಿನ ಬೆಂಚೊಂದರ ಮೇಲೆ ಕುಳಿತೆ. ನನ್ನ ಯೋಚನೆಗಳನ್ನು ಮತ್ತೆ ಸೇರಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವಾಗಲೇ ಇದ್ದಕ್ಕಿದ್ದಂತೆ ಒಂದು ಧ್ವನಿಯು ನನ್ನ ಹೆಸರನ್ನು ಕೂಗುತ್ತಿರುವುದು ಕೇಳಿಸಿತು. ನಾನು ಮೇಲೆ ನೋಡಿದೆ. ಕಾಲೇಜಿನ ಕಾರ್ಯದರ್ಶಿಯು ನನ್ನೆಡೆಗೆ ಓಡಿಬರುತ್ತಿರುವುದು ಕಾಣಿಸಿತು. ನಾನು ಅವರ ಜೊತೆ ಒಂದು ಕಪ್ ಟೀಯನ್ನು ತೆಗೆದುಕೊಳ್ಳಲು ನಿಲ್ಲದೆ ಹೊರಟುಬಂದದ್ದಕ್ಕೆ ಅವರು ನನ್ನನ್ನು ಆಕ್ಷೇಪಿಸಿದರು. ಆದರೆ, ನಾನಿದ್ದ ಸ್ಥಿತಿಯನ್ನು ನೋಡಿದ ಕೂಡಲೇ ಅವರು ಸುಮ್ಮನೆ ನನ್ನ ಪಕ್ಕದಲ್ಲಿ ಕುಳಿತರು. ಸಂದರ್ಶನದಲ್ಲಿ ನಾನು ಮಾಡಿದ ಎಡವಟ್ಟು ಅದರಿಂದ ನನಗಾದ ಇಕ್ಕಟ್ಟು ಎಲ್ಲವನ್ನು ನಾನು ಅವರಿಗೆ ವಿವರಿಸಿದೆ. ರಸ್ಕಿನ್ ಕಾಲೇಜಿಗೆ ನಾನು ಹೋಗುವುದಾಗಿ ನನ್ನ ಮನಸ್ಸನ್ನು ಸಿದ್ಧಪಡಿಸಿಬಿಟ್ಟಿದ್ದೆ. ಆದರೆ, ಈಗ ಅದೆಲ್ಲವೂ ಸರ್ವನಾಶವಾಗಿದ್ದಿತು. ಅವರು ಮೆಲ್ಲಗೆ ನನ್ನ ಬೆನ್ನು ತಟ್ಟಿ, ಮುಗುಳ್ನಗುತ್ತಾ, ಬರುವ ಶೈಕ್ಷಣಿಕ ವರ್ಷಕ್ಕೆ ನನಗೊಂದು ಸ್ಥಾನವನ್ನು ಕೊಡುವಂತೆ ಪ್ರಾಂಶುಪಾಲರು ಪತ್ರವೊಂದನ್ನು ಹೇಳಿ ಬರೆಸು ತ್ತಿರುವುದನ್ನು ತಾವು ಆಗತಾನೇ ಕೇಳಿದ್ದಾಗಿ ಹೇಳಿದರು. ನಾನು ಗರಬಡಿದವಳಂತಾದೆ. ಅವರು

ನನ್ನನ್ನು ತಮಾಷೆ ಮಾಡುತ್ತಿರುವುದಾಗಿ ತಿಳಿದೆ. ಆದರೆ, ತಾವು ನಿಜವನ್ನೇ ಹೇಳುತ್ತಿರುವುದಾಗಿ ಅವರು ನನಗೆ ಮತ್ತೊಮ್ಮೆ ಖಚಿತಮಾಡಿದರು. ನನ್ನೊಳಗೆ ಆ ಸುದ್ದಿಯು ಇಳಿಯಲು ಪ್ರಾರಂಭಿಸಿದಂತೆ ನಾನು ಅವರ ಕುತ್ತಿಗೆಯನ್ನು ನನ್ನ ತೋಳುಗಳಿಂದ ಬಳಸಿ ಅಪ್ಪಿಕೊಂಡು, ಅವರನ್ನು ಚುಂಬಿಸಿದೆ. ಅವರಿಗೆ ಇದು ಹೆಚ್ಚು ಕಡಿಮೆ ಆಶ್ಚರ್ಯವಾಗಿ ಕಂಡಂತಾದರೂ ನನ್ನ ಪ್ರತಿಕ್ರಿಯೆಯಿಂದ ಅವರಿಗೆ ಸಂತೋಷವಾಗಿತ್ತು. ಅವರು ನನಗೆ ಕಾಲೇಜನ್ನೊಮ್ಮೆ ತೋರಿಸುವುದಾಗಿ ಹೇಳಿದರು. ನಾವು ಸುತ್ತಾಡಿಕೊಂಡು ಕಾಲೇಜಿಗೆ ಒಟ್ಟಾಗಿ ಹಿಂದಿರುಗುವಾಗ ನಾನು ಗಾಳಿಯಲ್ಲಿ ತೇಲುತ್ತಿರುವಂತೆ ನನಗೆ ಭಾಸವಾಯಿತು.

ನಾನು ಮೊದಲು ಕಾಲೇಜಿನಿಂದ ಹೊರಟಿದ್ದಕ್ಕಿಂತ ಬೇರೆಯದೇ ಮನಸ್ಥಿತಿಯಲ್ಲಿ ನಾನು ಎರಡನೇ ಬಾರಿ ಕಾಲೇಜಿನಿಂದ ಹೊರಟೆ. ಛಾವಣಿಗಳ ಮೇಲೆ ನಿಂತು ನನ್ನ ದಿಗ್ವಿಜಯದ ಬಗ್ಗೆ ಕೂಗಬೇಕೆಂದೆನ್ನಿಸಿತು ನನಗೆ. ಬೀದಿಗಳಲ್ಲಿ ವಿದ್ಯಾರ್ಥಿಗಳನ್ನು ಹಾದು ನಡೆದುಹೋಗುತ್ತಿದ್ದಾಗ, ಅವರ ಬಳಿಗೆ ಹೋಗಿ, ನಾನೂ ಬಹಳ ಬೇಗನೇ ಆಕ್ಸ್‌ಫರ್ಡ್‌ನಲ್ಲಿ ಓದುವವಳಿದ್ದೇನೆ ಎಂದು ಹೇಳುವ ಹಂಬಲವಾಯಿತು. ಸಂತೋಷದಾಚರಣೆಗಾಗಿ ಇಂಗ್ಲಿಷ್ ಕ್ರೀಂ ಟೀಯನ್ನು ಹೀರಿ ನನಗೆ ನಾನೇ ಸತ್ಕರಿಸಿಕೊಂಡೆ. ನಾನೇನಾದರೂ ಕನಸು ಕಾಣುತ್ತಿರುವೆನೋ ಎಂದು ನನಗೆ ನಾನೇ ಚಿವುಟಿಕೊಳ್ಳುತ್ತಲೂ ಇದ್ದೆ.

ನಾನು ಹಿಂದಿರುಗಿ ಹೊರಟಾಗಿನ ರೈಲಿನ ಪ್ರಯಾಣ ಸಂತೋಷಕರವಾಗಿತ್ತು. ಆಕ್ಸ್‌ಫರ್ಡ್‌ನಲ್ಲಿ ಓದುತ್ತಿರುವ ತಮ್ಮ ಮಗನನ್ನು ನೋಡಲು ಹೋಗಿದ್ದ ದಂಪತಿಗಳೊಡನೆ ನಾನು ಹರಟಲು ಪ್ರಾರಂಭಿಸಿದೆ. ಬರಲಿರುವ ವರ್ಷದಲ್ಲೇ ನಾನು ಸಹ ಅಲ್ಲಿಗೆ ಓದಲು ಬರಲಿದ್ದೇನೆ ಎಂದು ಹೆಮ್ಮೆಯಿಂದ ತಿಳಿಸಿದೆ. ನನ್ನ ತಂದೆತಾಯಿಗಳೊಡನೆ ನನ್ನ ಸಂತೋಷವನ್ನು ಹಂಚಿಕೊಳ್ಳು ವುದಕ್ಕಿಂತಲೂ ಸಂಪೂರ್ಣವಾಗಿ ಅಪರಿಚಿತರಾದವರೊಡನೆ ಸಂತೋಷ ಹಂಚಿಕೊಳ್ಳುತ್ತಿರುವುದು ನನಗೆ ಸುಲಭವಾಗಿ ಕಂಡದ್ದು ವಿಲಕ್ಷಣವಾಗಿತ್ತು. ಅವರಿಗೆ ಈ ಸುದ್ದಿಯನ್ನು ಕೊಡುವುದನ್ನು ನಾನು ಎದುರು ನೋಡುತ್ತಿರಲಿಲ್ಲ. ನಾನು ಅಮ್ಮನಿಗೆ ನನ್ನ ಸುದ್ದಿಯನ್ನು ಕೊಟ್ಟಾಗ ಅಮ್ಮನು ಅತೀವ ಪ್ರಸನ್ನಳಾದಳು. ನನ್ನನ್ನು ಅಭಿನಂದಿಸಿದಳು ಹಾಗೂ ನನ್ನ ಸಾಧನೆಗೆ ತಾನೆಷ್ಟು ಹೆಮ್ಮೆಪಡುತ್ತಿರುವುದಾಗಿ ಹೇಳಿದಳು. ನಾನಿಲ್ಲದೆ ತಾನು ಹೇಗೆ ಎಲ್ಲವನ್ನು ನಿಭಾಯಿಸಬಲ್ಲಳು ಎನ್ನುವ ಯೋಚನೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಅವಳು ಆ ದಿನವನ್ನೆಲ್ಲ ಕಳೆದಿರಬಹುದು. ಅಪ್ಪನು ಅಷ್ಟೇನೂ ಸಕಾರಾತ್ಮಕವಾಗಿಲ್ಲದಿದ್ದರೂ, ತಮ್ಮ ಹೆಮ್ಮೆಯನ್ನು ತಾವು ಕೂಡ ಮುಚ್ಚಿಟ್ಟುಕೊಳ್ಳಲಾರದವರಾಗಿದ್ದರು.

ಶರತ್ಕಾಲದಲ್ಲಿ ನಾನು ಆಕ್ಸ್‌ಫರ್ಡ್‌ಗೆ ಹೋಗುವವಳಿದ್ದೇನೆ ಎಂದು ನನಗೆ

ಖಚಿತವಾಗಿ ತಿಳಿದ ಕೂಡಲೇ, ನಾನು ನನ್ನೆಲ್ಲ ಉಪನ್ಯಾಸಕರುಗಳಿಗೆ, ಸಹೋದ್ಯೋಗಿಗಳಿಗೆ ಅದರ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡೆ. ನಾನು ನನ್ನ ಅವಮಾನಕರ ಸಂದರ್ಶನದ ಬಗ್ಗೆ ಹೇಳಿದ ನಂತರ ಒಳ್ಳೆಯ ಸುದ್ದಿಯನ್ನು ಹೇಳಿದಾಗ ನನ್ನ ಅರ್ಥಶಾಸ್ತ್ರದ ಉಪನ್ಯಾಸಕನು ಮನದೊಳಗೇ ನಕ್ಕ. ತಾನು ನನ್ನನ್ನು ಸರಿಯಾದ ದಾರಿಯಲ್ಲಿ ನಡೆಸಿರುವೆನೆಂದು ಅವನಿಗೆ ಸ್ಪಷ್ಟವಾಗಿಯೇ ಸಂತೋಷವಾಗಿತ್ತು. ರಸ್ಕಿನ್ ಕಾಲೇಜಿಗೆ ನನಗೆ ಪ್ರವೇಶ ದೊರಕಿಸಿಕೊಡುವಲ್ಲಿ ಅವನ ಪಾತ್ರವೇನಿತ್ತು ಎಂದು ನನಗೆಂದೂ ಕಂಡುಹಿಡಿಯಲಾಗಲಿಲ್ಲ. ಆದರೆ, ಅವನು ಕೇವಲ ಕಾರ್ಯದರ್ಶಿಗೆ ಮಾತ್ರ ನನ್ನ ಬಗೆಗೆ ಬರೆಯದೆ ಪ್ರಾಂಶುಪಾಲರುಗಳಿಗೂ ಬರೆದಿದ್ದು, ಅವರ ತೀರ್ಮಾನವು ನನ್ನ ಪರವಾಗಿ ಆಗುವುದರಲ್ಲಿ ಅವನ ಶಿಫಾರಸ್ಸೇ ಹೆಚ್ಚು ತೂಕ ನೀಡಿರಬಹುದು ಎಂದು ನನಗೆ ಅನುಮಾನವಿದೆ. ನನ್ನ ಸಂಜೆಯ ತರಗತಿಗಳು ಮುಗಿದ ನಂತರ ನಾನು ಮತ್ತೆಂದೂ ಅವನನ್ನು ಸಂಧಿಸಲಿಲ್ಲ. ಆಮೇಲೆ ಅವನು ಅಲ್ಲಿಂದ ದೂರ ಹೊರಟು ಇನ್ನೊಂದು ಕಾಲೇಜಿಗೆ ಹೋದನೆಂದು ನಾನು ಕೇಳಿದೆ. ನಾನು ಆಗಾಗ ಅವನ ಬಗೆಗೆ ಯೋಚಿಸುತ್ತೇನೆ. ಅವನ ಎಂಥಾ ದೊಡ್ಡ ಋಣವು ನನ್ನ ಮೇಲಿದೆ ಎಂದುಕೊಳ್ಳುತ್ತೇನೆ. ಕಾರಣ ಅವನಿಲ್ಲದಿದ್ದರೆ ನನ್ನ ಜೀವನವು ಬಹಳ ಬೇರೆಯದೇ ಆದ ದಾರಿಯನ್ನು ಹಿಡಿಯುತ್ತಿದ್ದಿತು.

ನಾನು ನನ್ನ ಸಂಜೆ ತರಗತಿಯ ಶಿಕ್ಷಣವನ್ನು ಯಶಸ್ವಿಯಾಗಿ ಉತ್ತಮ ಶ್ರೇಣಿಯಲ್ಲಿ ಪೂರೈಸಿದೆ. ಕೈಗಾರಿಕಾ ಆಡಳಿತದಲ್ಲಿ ಡಿಪ್ಲೊಮಾ ಪದವಿ ಪಡೆದೆ. ಮೆಕ್ಯಾನಿಕಲ್ ಇಂಜಿನಿಯರುಗಳ ಸಂಘವು ವರ್ಷದ ಅತ್ಯುತ್ತಮ ವಿದ್ಯಾರ್ಥಿಗೆ ನೀಡುವ 'ಸರ್ ಮುರ್ಡೊಕ್ ಮ್ಯಾಕ್‌ಡೊನಲ್ಡ್ ಬಹುಮಾನ' ಪ್ರಶಸ್ತಿಯನ್ನೂ ಪಡೆದೆ. ಬಹುಮಾನ ನೀಡುವ ದಿನವೂ ಬಂದಿತು. ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ, ಮ್ಯಾಂಚೆಸ್ಟರ್‌ನ ಮೇಯರನು (ಪ್ರಥಮ ಪೌರನು) ನಾನು ನನ್ನ ಬಹುಮಾನವಾಗಿ ಆರಿಸಿಕೊಂಡ ಪುಸ್ತಕಗಳನ್ನು ವಿಧ್ಯುಕ್ತವಾಗಿ ನನಗೆ ನೀಡುವಾಗ, ಅಂತೆಯೇ ವ್ಯಾಸಂಗಕ್ಕೆ ನನ್ನ ಅಸಾಧಾರಣವಾದ ಬದ್ಧತೆಯನ್ನು ಅವನು, ಶ್ಲಾಘಿಸುವಾಗ ನನ್ನ ತಂದೆತಾಯಿಗಳು ಅದೆಷ್ಟು ಹೆಮ್ಮೆಪಟ್ಟರು ಎನ್ನುವುದನ್ನು ಕಂಡು ನಾನು ರೋಮಾಂಚಿತಳಾಗಿದ್ದೆ. ಆ ಸಂದರ್ಭವು ಯಾವಾಗಲೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿರುತ್ತದೆ. ಕಾರಣ, ಜೀವನದಲ್ಲಿ ಮೊದಲ ಬಾರಿಗೆ ನಾನು ನಿಜವಾದ ಪುರುಷತ್ವವನ್ನು ಸಂಧಿಸಿದ್ದೆ. ಆ ಸಂಘದ ಕಾರ್ಯಕರ್ತರೆಲ್ಲರೂ ಪುರುಷರೇ ಆಗಿದ್ದು, ಅವರು ಬಹಳ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ಪ್ರಶಸ್ತಿ ವಿಜೇತರು ಓರ್ವ ಯುವತಿ ಎಂದು ಅವರು ನೋಡಿದಾಗ ಅವರಿಗೆ ಆಶ್ಚರ್ಯವೂ, ಇರುಸುಮುರುಸೂ ಆಯಿತು. ಯಾವುದು ಒಬ್ಬ ಪುರುಷನ ಸಾಮ್ರಾಜ್ಯ ಅಧಿಕಾರ,

ಆಸ್ತಿ ಎಂದು ಅವರು ಭಾವಿಸಿದ್ದರೋ ಅದರಲ್ಲಿ ಒಬ್ಬ ಹೆಂಗಸು ಮೇಲೆ ಬರಬಹುದು ಎನ್ನುವುದು ಅವರಲ್ಲಿ ಯಾರಿಗೂ ಎಂದೂ ಹೇಳದೇ ಇರಲಿಲ್ಲ. ಅವರ ಗುಂಪಿನಲ್ಲಿ ಎಲ್ಲರೂ ಪುರುಷರೇ ಆದಕಾರಣ ಅವರು ತಮ್ಮ ಭೋಜನ ಕೂಟಕ್ಕೆ ನನ್ನನ್ನು ಹೆಚ್ಚು ಕಡಿಮೆ ಮನಸ್ಸಿಲ್ಲದ ಮನಸ್ಸಿನಿಂದಲೇ ಆಹ್ವಾನಿಸಿದ್ದರು. ಕಾರಣ, ಆ ಭೋಜನಕೂಟಕ್ಕೆ ಪ್ರಶಸ್ತಿ ವಿಜೇತರೇ ಗೌರವಾನ್ವಿತ ಅತಿಥಿಯಾಗಿರ ಬೇಕಿದ್ದಿತು. ಅವರಲ್ಲಿ ಒಬ್ಬರು ನಾನು ಅವರುಗಳ ಜೊತೆ ಊಟಕ್ಕೆ ಸೇರಿಕೊಳ್ಳುವ ಸಾಧ್ಯತೆಯನ್ನು ಸಾಮಾನ್ಯವಾಗಿ ನೆನಪಿಸಿ, ಅಲ್ಲಿ ನಾನೊಬ್ಬಳೇ ಮಹಿಳೆ ಯಾಗಿರುತ್ತೇನೆಂದೂ ಎಚ್ಚರಿಸಿ, ಆದ್ದರಿಂದ ಮಹಿಳೆಯೊಬ್ಬಳ ಕಿವಿಯ ಮೇಲೆ ಸಾಮಾನ್ಯವಾಗಿ ಬೀಳಬಾರದ ಜೋಕುಗಳನ್ನು ನಾನು ಕೇಳಿಸಿಕೊಳ್ಳಬೇಕಾಗಬಹುದು ಎಂದು ಹೇಳಿದರೂ ಒಳಗೊಳಗೇ ನಗುತ್ತಾ ನಾನು ಸಂತೋಷದಿಂದಲೇ ಅವರ ಆಹ್ವಾನವನ್ನು ಸ್ವೀಕರಿಸಿದೆ. ಅದರಿಂದ ಅವರಿಗೆ ಬಹಳ ಆಶ್ಚರ್ಯವೂ, ತೀವ್ರ ಮುಜುಗರವೂ ಆಯಿತು. ಆ ಸಂಜೆಯಲ್ಲಿ ಅವರುಗಳು ತಮ್ಮ ಅತ್ಯುತ್ತಮ ನಡವಳಿಕೆಯಿಂದಿದ್ದರೋ ಏನೋ ನನಗಂತೂ ತಿಳಿಯದು, ಆದರೆ ನಾನಂತೂ ಖಂಡಿತವಾಗಿಯೂ ಆ ಸಂಜೆಯ ಕೂಟವನ್ನು ಚೆನ್ನಾಗಿ ಆಸ್ವಾದಿಸಿದೆ.

೧೯೪೯ರ ಬೇಸಿಗೆ ತಿಂಗಳುಗಳಲ್ಲಿ ನಾನು ಆಕ್ಸ್‌ಫರ್ಡ್‌ಗೆ ಹೋಗಲು ಮಾಡಿಕೊಳ್ಳಬೇಕಾದ ಸಿದ್ಧತೆಗಳಲ್ಲಿ ನಿರತಳಾದೆ. ನನಗೆ ವಿದ್ಯಾರ್ಥಿ ವೇತನ ಸಿಕ್ಕಿದರೂ ಅದು ನನ್ನ ತಂದೆ ತಾಯಿಗಳಿಗೂ ಬಿಟ್ಟು ಹೋಗುವಷ್ಟು ಹೆಚ್ಚಾಗೇನೂ ಇರಲಿಲ್ಲ. ಅನೇಕ ಸಾಧ್ಯತೆಗಳನ್ನು ನಾವು ಹುಡುಕಿದೆವು, ಕೊನೆಗೆ ಅವರಿಗೊಬ್ಬ ಬಾಡಿಗೆದಾರನನ್ನು ಹುಡುಕುವುದೇ ಉತ್ತಮವೆಂದು, ಅವನ ಬಾಡಿಗೆ ಹಣದಿಂದಲಾದರೂ ಇವರ ಖರ್ಚುಗಳನ್ನು ನಿಭಾಯಿಸಲು ಸಹಾಯಕವಾಗುವುದೆಂದು ಒಪ್ಪಿಕೊಳ್ಳುವಂತಾಯಿತು. ನಾನು ಅವರಿಗೊಬ್ಬ ಒಳ್ಳೆಯ, ಶಾಂತಸ್ವಭಾವದ ಯುವಕನನ್ನು ಹುಡುಕುವಲ್ಲಿ ಯಶಸ್ವಿಯಾದೆ. ಅವನು ನಮ್ಮ ಮನೆಗೆ ಹೇಳಿ ಮಾಡಿಸಿದಂತಿದ್ದ. ನನ್ನ ನಿರ್ಗಮನದಿಂದ ಅವರೇನು ಕಳೆದುಕೊಳ್ಳುತ್ತಿದ್ದರೋ, ಅದಕ್ಕಿಂತಲೂ ಹೆಚ್ಚಾಗಿಯೇ ಅವನು ಹಣ ಕೊಡುತ್ತಿದ್ದ. ನಾನು ಆಕ್ಸ್‌ಫರ್ಡ್‌ನಲ್ಲಿ ತೆಗೆದುಕೊಳ್ಳುವ ಸಾಹಸ ಮಾಡುತ್ತಿದ್ದ ಕೋರ್ಸು (ಪದವಿ ಶಿಕ್ಷಣವು) ಎರಡು ವರ್ಷಗಳದ್ದಾಗಿದ್ದುದು ನನಗೆ ಖಚಿತವಾಗಿಯೂ ತಿಳಿದಿದ್ದರೂ ಸಹ, ನನ್ನ ತಂದೆ ತಾಯಿಗಳಿಗೆ ನಾನು ಒಂದು ವರ್ಷಕ್ಕಿಂತ ಹೆಚ್ಚಾಗಿ ದೂರವಿರುವುದಿಲ್ಲ ಎಂದು ಭರವಸೆ ನೀಡುವುದು ಅತ್ಯುತ್ತಮವೆಂದು ಯೋಚಿಸಿದೆ. ಅಗಲುವಿಕೆಯ ನೋವನ್ನು ಕಡಿಮೆ ಮಾಡಲು ನಾನು ನನ್ನ ಅತ್ಯುತ್ತಮ ಪ್ರಯತ್ನವನ್ನು ಮಾಡಿದ್ದೆ. ಅಂತೆಯೇ ಆರ್ಥಿಕ ಭಾರವನ್ನು ಹಗುರವಾಗಿಸಲು ನನ್ನ ಶಕ್ತಿಗೆ ಸಾಧ್ಯವಾದದ್ದೆಲ್ಲವನ್ನು ಮಾಡಿದ್ದೆ. ಹೇಗೇ ಆದರೂ ನಮ್ಮ ವಿದಾಯವು ಕಣ್ಣೀರಿನಿಂದ ಕೂಡಿದ್ದು, ಭಾವೋದ್ವೇಗದಿಂದ ಪೂರ್ಣವಾಗಿದ್ದಿತು. ಅದು ನಾವು ಒಂದು ವೇಳೆ

ಆಲ್ಬೇನಿಯಾಗೆ ಹಿಂದಿರುಗಿದ್ದಿದ್ದರೆ, ನಾವು ಎಂದಾದರೂ ಒಂದು ದಿನ ಮತ್ತೆ ಸೇರುತ್ತೇವೆ ಎಂಬುದನ್ನು ಅವರು ನಂಬಲಿಲ್ಲ. ಆಕ್ಸ್‌ಫರ್ಡ್ ಕೇವಲ ಒಂದು ರೈಲು ಪ್ರಯಾಣದ ದೂರದಲ್ಲಿದೆಯೆಂದೂ, ಸಾಧ್ಯವಾದಷ್ಟು ಆಗಾಗ್ಗೆ ಬಂದು ನಾನು ಅವರನ್ನು ಭೇಟಿಯಾಗುತ್ತೇನೆ ಎಂದು ಅವರಿಗೆ ಒಂದೇಸಮನೆ ಮತ್ತೆಮತ್ತೆ ದೃಢಪಡಿಸಬೇಕಾಯಿತು.

ತಮ್ಮ ಮುಂಚಿನ ಜೀವನದಲ್ಲಿ ಓದುವ ಅವಕಾಶವನ್ನು ತಪ್ಪಿಸಿಕೊಂಡ ಪ್ರೌಢ ವಿದ್ಯಾರ್ಥಿಗಳಿಗೆ ಒಂದು ವಿದ್ಯಾಭ್ಯಾಸವನ್ನು ಒದಗಿಸುವ ಸಲುವಾಗಿಯೇ ರಸ್ಕಿನ್ ಕಾಲೇಜು ಸ್ಥಾಪಿಸಲ್ಪಟ್ಟಿದ್ದುದು. ಅದರಿಂದಾಗಿ ಮೊದಲನೆಯ ದಿನ ಮನೆಯ ಹಜಾರದಲ್ಲಿ ಹಲವು ಜಾತಿಯ ಜನರು ಗುಂಪಾಗಿ ಸೇರಿದ್ದರು. ಅಲ್ಲಿದ್ದ ವಿದ್ಯಾರ್ಥಿಗಳಲ್ಲಿ ಹೆಚ್ಚು ಜನ ಪುರುಷರೇ ಇದ್ದುದು. ಆದರೆ ಅವರಲ್ಲಿ ಹಲವು ಜನ ಬೇರೆ ಬೇರೆ ರಾಷ್ಟ್ರೀಯರಾಗಿದ್ದು, ಆಫ್ರಿಕಾದವರು, ಅಮೆರಿಕದವರು, ಏಷ್ಯಾದವರು, ಭಾರತೀಯರು ಹಾಗೂ ಯುರೋಪಿನವರು ಹೀಗೆ ಎಲ್ಲರೂ ಇದ್ದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರಲ್ಲಿ ಬಹಳಷ್ಟು ಜನರು ತಮ್ಮ ತಮ್ಮ ದೇಶಗಳ ಲೇಬರ್ ಪಕ್ಷದ ಗುಂಪುಗಳಿಂದಲೂ, ಟ್ರೇಡ್ ಯೂನಿಯನ್ ಶಾಖೆಗಳಿಂದಲೂ ಪ್ರಾಯೋಜಕತ್ವ ಪಡೆದು ಬಂದವರೆಂದೂ ನಾನು ಆನಂತರ ತಿಳಿದುಕೊಂಡೆ.

ಅದಾದ ನಂತರವೇ ಉಪನ್ಯಾಸಗಳು ಪ್ರಾರಂಭವಾದವು. ನಾನು ದಿನದ ಪರಿಪಾಠದೊಡನೆ ಕೂಡಲೇ ಹೊಂದಿಕೊಳ್ಳಲು ಒದ್ದಾಡಿದೆ. ರಾತ್ರಿ ಹೊತ್ತು ಓದುವುದು ಹಾಗೂ ಬೆಳಗಿನ ಹೊತ್ತು ಕೆಲಸ ಮಾಡುವುದು ನನಗೆ ಅಭ್ಯಾಸವಾಗಿದ್ದಿತು. ಆದರೆ, ಈಗ ನನ್ನ ದಿವಸಗಳನ್ನು ಗ್ರಂಥಾಲಯದಲ್ಲಿ ಓದುತ್ತಾ ಅಥವಾ ಪ್ರಬಂಧಗಳಿಗೆ ಸಿದ್ಧತೆ ನಡೆಸುವುದರಲ್ಲಿ ಕಳೆಯುವಷ್ಟು ಮುಕ್ತಳಾಗಿದ್ದೆ. ನಾನು ಆಸ್ವಾದಿಸುತ್ತ ಮಾಡುವಂಥದಕ್ಕೆ ಹಣ ತೆಗೆದುಕೊಳ್ಳುವುದು ಅನೀತಿಯುತವಾಗಿ ಕಾಣುತ್ತಿರುವುದಕ್ಕಿಂತ ನನ್ನಲ್ಲಿ ತಪ್ಪಿತಸ್ಥ ಮನೋಭಾವ ಉಂಟಾಯಿತು. ಆದ್ದರಿಂದ ನಾನು ಎರಡು ವರ್ಷಗಳ ಡಿಪ್ಲೊಮಾವನ್ನು ಒಂದೇ ವರ್ಷದಲ್ಲಿ ಮುಗಿಸುವ ಪ್ರಯತ್ನ ಮಾಡಬೇಕೆಂದು ನಿಶ್ಚಯಿಸಿದೆ. ನನ್ನ ಮನಸ್ಸನ್ನು ತಿರುಗಿಸಲು ಕಾಲೇಜಿನ ಪ್ರಾಂಶುಪಾಲರು ತಮ್ಮ ಕೈಲಾದ ಪ್ರಯತ್ನ ಮಾಡಿದರು. ಇದಕ್ಕೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ನನಗೆ ಅನುಮತಿ ಸಿಗಬಹುದಾದರೂ, ಡಿಪ್ಲೊಮಾಗೆ ಅರ್ಹತೆ ಗಳಿಸುವುದರಲ್ಲಿ ನಾನು ಯಶಸ್ವಿಯಾದರೂ ನನ್ನ ಇಡೀ ಜೀವನಕ್ಕೆ ಆಕ್ಸ್‌ಫರ್ಡ್ ನೀಡುವುದಷ್ಟನ್ನೂ ನಾನು ಕಳೆದುಕೊಳ್ಳುತ್ತೇನೆಂದು ಸ್ಪಷ್ಟಪಡಿಸಿದರು ಹೇಗಾದರೂ ನಾನಂತೂ ವಜ್ರದಂತೆ ಕಠಿಣಳಾಗಿದ್ದೆ. ಅದರಿಂದ ಅವರೂ ಸುಮ್ಮನಾದರು.

ನನ್ನ ಜತೆಯ ವಿದ್ಯಾರ್ಥಿಗಳೆಲ್ಲರೂ ಅತಿಥಿ ಉಪನ್ಯಾಸಗಳಿಗೆ ಹಾಜರಾಗುತ್ತಾ, ಚರ್ಚಾಸ್ಪರ್ಧೆಗಳಲ್ಲಿ ಸೇರುತ್ತಾ, ಆಕ್ಸ್‌ಫರ್ಡ್ ನೀಡುವ ಜೀವನವನ್ನು ಸಾಮಾನ್ಯವಾಗಿ

ಆಸ್ವಾದಿಸುತ್ತಾ ಇದ್ದಾಗ, ನಾನು ಆಕ್ಸ್‌ಫರ್ಡ್‌ನಲ್ಲಿ ನನ್ನ ಸಮಯವನ್ನು ಪುಸ್ತಕಗಳಲ್ಲಿ ಹಾಗೂ ಪ್ರಬಂಧಗಳಲ್ಲಿ ಮುಳುಗಿ ಕಳೆದೆ. ನಾನು ಬಾಯಾರಿ ಜ್ಞಾನದ ಚಿಲುಮೆಯಿಂದ ಕುಡಿಯುತ್ತಿದ್ದಂತೆ ದಿನಗಳು, ವಾರಗಳು ಮತ್ತು ತಿಂಗಳುಗಳು ಧಾವಿಸಿ ಹೋಗುತ್ತಿದ್ದವು. ಇದು ನನ್ನನ್ನು ಎಲ್ಲಿಗೆ ಒಯ್ಯುತ್ತದೆಂಬುದನ್ನು ಪರಿಗಣಿಸಲು ನಾನೆಂದೂ ನಿಲ್ಲಲಿಲ್ಲ. ಆದರೆ, ನನ್ನ ಜೀವನದಲ್ಲೂ ಒಂದೇ ಒಂದು ಬಾರಿ ನಾನು ನನ್ನ ಸೂಕ್ಷ್ಮಾಭಿರುಚಿಯ ಅಸ್ತಿತ್ವವನ್ನು ಆಸ್ವಾದಿಸಿದೆ. ನನ್ನ ಹೆಸರಿಗೆ ಮಾತ್ರವೇ 'ಗಾನ್ ವಿಥ್‌ದ ವಿಂಡ್'ನಲ್ಲಿನ ಸ್ಕಾರ್ಲೆಟ್‌ಳಂತೆ ನನ್ನಷ್ಟಕ್ಕೇ ನಾನೇ ಹೇಳಿಕೊಳ್ಳುತ್ತಿದ್ದೆ. "ಅದರ ಬಗೆಗೆ ನಾನೀಗ ಯೋಚಿಸುವುದಿಲ್ಲ. ಅದರ ಬಗೆಗೆ ನಾನು ನಾಳೆ ಯೋಚಿಸುತ್ತೇನೆ" ಎಂದು.

೧೯೫೦ರ ಪ್ರಾರಂಭದಲ್ಲಿ, ಕಳೆದ ವರ್ಷದಲ್ಲಿ ಕಾಲೇಜಿಗೆ ಸೇರ್ಪಡೆಯಾದವರು ವಿಶ್ವವಿದ್ಯಾನಿಲಯದ ನಿಯಮಿತ ಸ್ಥಾನಗಳಿಗಾಗಿ ಪ್ರತಿಸ್ಪರ್ಧಿಸಲು ಪ್ರಾರಂಭಿಸಿದರು. ಅಲ್ಲಿಯವರೆಗೆ ಒಬ್ಬರ ದಿವಸಗಳನ್ನು ಹೊಸ ವಿಷಯಗಳನ್ನು ಕಲಿಯುವುದರಲ್ಲಿ ಹಾಗೂ ತಾತ್ತ್ವಿಕ ಸಿದ್ಧಾಂತಗಳನ್ನು ಚರ್ಚಿಸುವುದರಲ್ಲಿ, ಕಳೆಯುವುದು, ಹಾಗೆ ಮಾಡಲು ಹಣ ಕೊಡಲ್ಪಟ್ಟಿದ್ದರೂ ಸಹ, ನಿಜವಾಗಿಯೂ ಅನೀತಿಯುತವಾದದ್ದಲ್ಲವೆಂಬುದನ್ನು ನಾನು ಗಣನೆಗೆ ತಂದುಕೊಳ್ಳಲು ಪ್ರಾರಂಭಿಸಿದೆ. ಆದ್ದರಿಂದ ನಾನು ನಮಗೆ ಕೊಡಲೊಪ್ಪಿತವಾದ ಅನೇಕ ಪ್ರೌಢ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ನಾನು ತೀರ್ಮಾನಿಸಿದೆ. ಅದಕ್ಕಾಗಿ ಮಹಿಳೆಯರಿಗಾಗಿ ಮೀಸಲಾಗಿದ್ದ ಆಕ್ಸ್‌ಫರ್ಡ್ ಕೆಲವೇ ಕಾಲೇಜುಗಳಲ್ಲಿ ಒಂದಾದ ಸೇಂಟ್ ಹಿಲ್ಡಾದಲ್ಲಿ ಇತರ ಇಬ್ಬರು ಮಹಿಳಾ ವಿದ್ಯಾರ್ಥಿಗಳೊಡನೆ ಅರ್ಹತಾ ಪರೀಕ್ಷೆಗೆ ಕುಳಿತೆ. ನಾನು ಅದರಲ್ಲಿ ತೇರ್ಗಡೆಯಾಗುತ್ತೇನೆಂಬ ಭ್ರಮೆಯಲ್ಲೇನೂ ನಾನಿರಲಿಲ್ಲ. ಆದ್ದರಿಂದ ಕೆಲವೇ ದಿನಗಳ ನಂತರ ನನ್ನನ್ನು ಪ್ರಾಂಶುಪಾಲರ ಕಛೇರಿ ಕೋಣೆಗೆ ಬರಹೇಳಿದಾಗ ನನಗೆ ಆಶ್ಚರ್ಯವಾಯಿತು. ನಾನು ಆಕೆಯ ಕಛೇರಿಯನ್ನು ಪ್ರವೇಶಿಸುತ್ತಿದ್ದಂತೆಯೇ ನನ್ನ ಕೆಲಸಕ್ಕಾಗಿ ಆಕೆ ನನ್ನನ್ನು ಅಭಿನಂದಿಸಿದಳು. ನನ್ನ ಮನಸ್ಸು ನಾಗಾಲೋಟದಿಂದೋಡಿತು. ಆಕ್ಸ್‌ಫರ್ಡ್‌ನ ಓರ್ವ ಪದವಿ ಶಿಕ್ಷಣದ ಪದವೀಧರೆ ಆಗಬೇಕೆಂಬ ನನ್ನ ಅಂತಿಮ ಮಹತ್ವಾಕಾಂಕ್ಷೆಯನ್ನು ನಾನು ಸಾಧಿಸಿದ್ದೇನೆಂಬ ನಂಬಿಕೆಯ ವೈಭವಕ್ಕೆ ಕೆಲವು ಕ್ಷಣಗಳ ಕಾಲ ನಾನೇ ನನ್ನನ್ನು ಸ್ವೈರಿಸಿಕೊಂಡೆ. ಆದರೆ ನಾನು ಪ್ರಾಂಶುಪಾಲರ ಮುಖದತ್ತ ಮತ್ತೆ ನೋಡಿದಾಗ, ನಾನು ವ್ಯರ್ಥವಾಗಿ ಕನಸು ಕಾಣುತ್ತಿದ್ದೇನೆಂದು ನನಗೆ ತಿಳಿಯಿತು. ಕಾರಣ, ನಾನು ಶೈಕ್ಷಣಿಕವಾಗಿ ಸಮರ್ಥಳಿದ್ದರೂ, ನನ್ನ ಸಾಮಾಜಿಕ ಹಿನ್ನೆಲೆಯು ಯಾವುದೇ ಕಾಲೇಜಿಗೆ ನನ್ನ ಪ್ರವೇಶಾತಿಯನ್ನು ಪ್ರತಿಬಂಧಿಸುತ್ತದೆ ಎಂದು ಮುಂದುವರೆದು ಅವಳು ಹೇಳಿದಳು. ಅವಳ ಅತಿಕ್ರಮಿಸಿದ ಮೇಲ್ದರ್ಜೆಯ ಆಲಲೋಚನಾ ಸರಣಿ ಕೇಳುತ್ತಿದ್ದಂತೆ ನನಗೆ ರೇಗಿತು. ಸಿಟ್ಟಿನ ಭರದಿಂದ ನಾನು ಆ ಕೋಣೆಯಿಂದ ಕಾಲ್ತೆಗೆದೆ. ನಾನು ಹಾಗೆ

ಮಾಡಿದಾಗಲೇ ಅವಳು ತನ್ನಷ್ಟಕ್ಕೆ ತಾನೇ "ಈ ಹುಡುಗಿಯರಿಗೆ ಒಂದು ಶಿಷ್ಟಾಚಾರವಿಲ್ಲ" ಎಂದು ಗೊಣಗಿಕೊಂಡದ್ದನ್ನು ನಾನು ಕೇಳಿಸಿಕೊಂಡೆ. ನನ್ನ ಅನುಭವವನ್ನು ಕೇಳಿದ ಇತರ ರಸ್ಕಿನ್ ವಿದ್ಯಾರ್ಥಿಗಳು, ನನ್ನೊಡನೆ ಸೇಂಟ್ ಹಿಲ್ಡಾ ವಿದ್ಯಾರ್ಥಿ ವೇತನ ಪರೀಕ್ಷೆಗೆ ಕುಳಿತ ಇತರ ಇಬ್ಬರು ಹುಡುಗಿಯರೂ ಸ್ವೀಕೃತರಾಗುವುದಿಲ್ಲವೆಂದು ಕಂಡುಕೊಂಡರು. ಅವರು ಸೇಂಟ್ ಹಿಲ್ಡಾವು ವರ್ಗ ತಾರತಮ್ಯದ ಒಂದು ಸಂಕೇತವೆಂದು ಹಣೆಪಟ್ಟಿ ಹಚ್ಚಿ ಅದರ ಹೊರಗೆ ಒಂದು ಪ್ರದರ್ಶನವನ್ನು ನಡೆಸಬೇಕೆಂದುಕೊಂಡರು. ಹೇಗಾದರೂ ನನಗಿನ್ನು ಆಕ್ಸ್‌ಫರ್ಡ್‌ನ ವರ್ಗದ ಸ್ವಬೋಧೆಯುಳ್ಳ ವ್ಯವಸ್ಥೆಯ ಒಂದು ಭಾಗವಾಗಿರುವುದು ಬೇಕಿರಲಿಲ್ಲ. ಅವರು ಅಲ್ಲಿ ಪ್ರದರ್ಶನ ನಡೆಸುವುದು ಬೇಡವೆಂದು ಅವರನ್ನೆಲ್ಲ ತಡೆಗಟ್ಟುವುದರ ಸಂಧಾನವು ನನ್ನ ಶಕ್ತಿಯೆಲ್ಲವನ್ನೂ ತೆಗೆದುಕೊಂಡಿತು.

ಒಂದು ವರ್ಷದಲ್ಲಿ ಹಾಗೂ ರಾಜಕೀಯ ವಿಜ್ಞಾನದಲ್ಲಿ, ಅರ್ಥಶಾಸ್ತ್ರದಲ್ಲಿ ಆಕ್ಸ್‌ಫರ್ಡ್ ಡಿಪ್ಲೊಮಾ ತೆಗೆದುಕೊಳ್ಳುವುದರಲ್ಲಿ ನಾನು ಯಶಸ್ವಿಯಾದೆ. ಇದು ಹಿಂದೆಂದೂ ಕೇಳಿರದ ಸಂಗತಿಯಾಗಿದ್ದ ಕಾರಣ, ಇದರ ಬಲದಿಂದ ನಾನು ಅರ್ಥಶಾಸ್ತ್ರವನ್ನೋದಲು ನನಗೆ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಒಂದು ವಿದ್ಯಾರ್ಥಿ ವೇತನವನ್ನು ಕೊಡುವುದಾಗಿ ಹೇಳಲಾಯಿತು. ನಾನು ಮಾತ್ರ ತಮ್ಮ ಜೊತೆಯಲ್ಲಿರುವುದು ಸಾಧ್ಯವಾಗುತ್ತದೆ ಎಂದು ಕೇಳಿದಾಗ ನನ್ನ ತಂದೆ ತಾಯಿಗಳು ರೋಮಾಂಚಿತರಾದರು. ೧೯೫೦ರ ಶರದೃತುವಿನಲ್ಲಿ ನಾನು ಸಂಪೂರ್ಣವಾಗಿ ಪದವಿ ಶಿಕ್ಷಣ ಪಡೆಯುವವಳಾಗಲು ಗರಿಗಟ್ಟಿ ಸಿದ್ಧಳಾದೆ. ನಾನು ಯೋಚಿಸಿದಂತೆಯೇ ಜೀವನವು ಸುಲಭವಾಗುತ್ತಿತ್ತು. ನನ್ನ ವಿದ್ಯಾರ್ಥಿ ವೇತನವು ನಮ್ಮ ಮನೆ ಖರ್ಚಿಗೂ ಕೊಡುವಷ್ಟೇನೂ ಇಲ್ಲವೆಂದು ನಾನು ಅರಿತುಕೊಂಡೆ. ಮನಸ್ಸಿಗೆ ಏನೋ ಹೊಳೆದಂತಾಗಿ ನನ್ನ ಕೆಲವು ಉಪನ್ಯಾಸಕರುಗಳಲ್ಲಿ ಚರ್ಚಿಸಿದೆ. ಅವರುಗಳು ನನಗೆ ರಾತ್ರಿಶಾಲೆಯಲ್ಲಿ ಬೋಧಿಸಿದವರಾಗಿದ್ದರು. ನಾನು ಇನ್ನೇನು ಕಲಿಕೆಯನ್ನು ಬಿಡುವುದರಲ್ಲಿದ್ದೇನೆ, ಹಾಗೆ ಕೆಲಸಕ್ಕೆ ಹೋಗುವವಳಿದ್ದೇನೆ ಎಂದು ಕೇಳಿದ ಅವರುಗಳು, ತಾವಾಗಿಯೇ ಕರುಣೆಯಿಂದ ನನಗೆ ಸಹಾಯ ಮಾಡಲು ಮುಂದಾದರು. ನನ್ನ ಅತ್ಯಲ್ಪ ಪ್ರಮಾಣದ ವಿದ್ಯಾರ್ಥಿ ವೇತನಕ್ಕೆ ಸಹಾಯವಾಗುವಂತೆ ನನಗೊಂದು ಅರೆಕಾಲಿಕ ಕೆಲಸವನ್ನು ಕೊಡಿಸುವುದರಲ್ಲಿ ಸಹಾಯ ಮಾಡುವುದಾಗಿ ಹೇಳಿದರು.

ಹೀಗೆ ನಾನು ಮೊದಲ ವರ್ಷದ ಓರ್ವ ಪದವಿಪೂರ್ವ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗುತ್ತಿದ್ದಂತೆಯೇ, ಆ ಸಮಯದಲ್ಲೇ ಬ್ರಾಡ್‌ಫರ್ಡ್ ಟೆಕ್ನಿಕಲ್ ಕಾಲೇಜಿನಲ್ಲಿ ಪ್ರತಿ ಬುಧವಾರದ ಸಂಜೆ ಕೈಗಾರಿಕಾ ಸಂಬಂಧಗಳು; ಸಾಮಾಜಿಕ ಮನಃಶ್ಶಾಸ್ತ್ರ ಹಾಗೂ ಸಾಮಾಜಿಕ ತತ್ವಶಾಸ್ತ್ರವನ್ನು ಹೇಳಿಕೊಡುವ ಶಿಕ್ಷಕಿಯಾದೆ. ಈ ಕೋರ್ಸುಗಳಿಗೆ ಬೋಧಿಸಲು ನನ್ನಲ್ಲಿ ಸರಿಯಾದ ಸಿದ್ಧತೆ ಇರಲಿಲ್ಲ. ಆದರೆ

ಈ ಪ್ರಸ್ತಾವವನ್ನು ತಿರಸ್ಕರಿಸಲೂ ಆಗಲಿಲ್ಲ. ಕಾರಣ ನನಗೆ ಗತ್ಯಂತರವಿಲ್ಲದೆ ಹಣವೂ ಬೇಕಾಗಿದ್ದಿತು. ಆದ್ದರಿಂದ ನಾನು ಸಂಬಂದಪಟ್ಟ ಪುಸ್ತಕಗಳನ್ನು ಓದಿ, ಅದರ ಮೇಲೆ ಅವಲಂಬಿತಳಾದೆ. ಅಂತೆಯೇ ನನ್ನ ವಿದ್ಯಾರ್ಥಿಗಳಿಗಿಂತ ನಾನು ಒಂದು ಪಾಠ ಯಾವಾಗಲೂ ಮುಂದಿರುವ ಹಾಗೆ ಮಾಡಿಕೊಂಡೆ. ನಾವಿಬ್ಬರೂ ಒಟ್ಟಿಗೇ ಕಲಿಯುತ್ತಿದ್ದೇವೆ ಎಂಬುದು ಒಂದು ಸತ್ಯವಾಗಿದ್ದು, ಅದೇ ನನ್ನ ವಿದ್ಯಾರ್ಥಿಗಳನ್ನು ಉತ್ತೇಜಿಸಿ ಅವರು ನಿಯತವಾಗಿ ತರಗತಿಗಳಿಗೆ ಹಾಜರಾಗುವಂತೆ ಮಾಡಿದ್ದಿತು. ಹಾಜರಿಯ ಕೊರತೆಯಿಂದಾಗಿ ನಿಂತುಹೋದ ಇತರ ಅನೇಕ ಕೋರ್ಸ್‌ಗಳಂತಲ್ಲದೆ ನನ್ನ ಕೋರ್ಸು ಇಡಿ ಶೈಕ್ಷಣಿಕ ವರ್ಷದುದ್ದಕ್ಕೂ ಮುಂದುವರೆಯಿತು. ಹೀಗೆ ಮತ್ತೊಂದು ತಡೆಯನ್ನು ದಾಟಿ ನಾನು ಮುಂದೆ ಹೋದದ್ದಕ್ಕೆ ನನ್ನನ್ನು ನಾನೇ ಅಭಿನಂದಿಸಿಕೊಂಡೆ. ಯಾರಾದರೂ ನನ್ನನ್ನು ಗುರ್ತಿಸುವ ಒಂದು ಸಂಕೇತವನ್ನು ನನಗೆ ಕೊಡಬೇಕೆಂದು ನಾನು ಬಹಳ ಕಾಲದಿಂದಲೂ ಕಾಯುತ್ತಲೇ ಇದ್ದೆ. ಒಟ್ಟೋವ್ವು ಮೈಲುಗಳ ದೂರದಲ್ಲಿದ್ದಿತು ಮತ್ತು ನನ್ನ ತಂದೆತಾಯಿಗಳು ಅದನ್ನೆಂದೂ ಅರ್ಥಮಾಡಿಕೊಳ್ಳುವಂತೆಯೇ ಇರಲಿಲ್ಲ.

ವ್ಯಾಸಂಗಾವಧಿಯು ಪ್ರಾರಂಭವಾಗುತ್ತಿದ್ದಂತೆಯೇ ನಾನು ಬಹಳವಾಗಿ ಆಶಿಸಿದ್ದ ವಿಶ್ವವಿದ್ಯಾನಿಲಯದ ಸ್ಕಾರ್ಫ್‌ನಿಂದ ನನ್ನನ್ನು ನಾನೇ ಸತ್ಕರಿಸಿಕೊಂಡೆ. ಆದರೆ ಆ ಸ್ಕಾರ್ಫ್‌ನೊಡನೆಯೇ ತಾನೇ ತಾನಾಗಿ ಬರುವುದೆಂದು ನಾನು ಅಂದುಕೊಂಡಿದ್ದ ಆತ್ಮ ವಿಶ್ವಾಸವನ್ನು ಕೂಡಲೇ ನನಗೆ ಗಳಿಸಿಕೊಳ್ಳಲಾಗದೆ ಇದ್ದುದಕ್ಕೆ ನಾನು ಬಹಳವೇ ನಿರಾಶಳಾದೆ. ಇತರ ವಿದ್ಯಾರ್ಥಿಗಳೊಡನೆ ಹೊಂದಿಕೊಳ್ಳಲು ನಾನು ಶಕ್ತಿಮೀರಿ ಯತ್ನಿಸಿದೆ ಅತ್ಯುತ್ತಮ ಪ್ರಯತ್ನ ಮಾಡಿದೆ. ಆದರೆ ಅದು ಸುಲಭವಾಗಿರಲಿಲ್ಲ. ಏಕೆಂದರೆ ಅವರಲ್ಲಿನ ಬಹಳಷ್ಟು ಮಂದಿಗಿಂತ ನಾನು ಹತ್ತು ವರ್ಷ ದೊಡ್ಡವಳಾಗಿದ್ದೆ. ನನ್ನ ಜೊತೆಗಾರ ವಿದ್ಯಾರ್ಥಿಗಳಷ್ಟೇ ನನ್ನನ್ನು ಎಂಥದೋ ಕಳವಳದಿಂದ ಕಾಣುತ್ತಿದ್ದುದಲ್ಲದೇ, ಕಿರಿಯ ಉಪನ್ಯಾಸಕರುಗಳೂ ನನ್ನನ್ನು ಒಂದು ಬೆದರಿಕೆಯಾಗಿ ಪರಿಗಣಿಸುವವರಂತೆ ಕಂಡರು. ಉಪನ್ಯಾಸ ಮಂದಿರಗಳಲ್ಲಿ ನಾನು ಯಾವಾಗಲೂ ಮೊದಲ ಸಾಲಿನಲ್ಲಿ ಉಪನ್ಯಾಸಕರ ಕಣ್ಣ ಮುಂದೆಯೇ ಸರಿಯಾಗಿ ಕುಳಿತುಕೊಳ್ಳುವುದಿತ್ತು. ಅವರು ಹೇಳಿದ್ದೇನು ಎಂದು ನನಗೆ ಒಂದು ವೇಳೆ ಅರ್ಥವಾಗದಿದ್ದಲ್ಲಿ ನಾನು ನನಗರಿವಿಲ್ಲದಂತೆಯೇ ನನ್ನ ತಲೆಯನ್ನೆಲ್ಲಾಡಿಸುತ್ತಿದ್ದೆ. ಆ ಉಪನ್ಯಾಸಕರುಗಳು ಇದನ್ನು ನನಗೆ ಒಪ್ಪಿಗೆ ಇಲ್ಲ ಎಂಬುದರ ಸಂಕೇತವೆಂದು ತಪ್ಪಾಗಿ ಗ್ರಹಿಸಿ, ನಾನು ಅವರ ಜ್ಞಾನ ತಿಳುವಳಿಕೆಯನ್ನು ಪ್ರಶ್ನೆ ಮಾಡುತ್ತಿದ್ದೇನೆಂದು ಭಾವಿಸುತ್ತಿದ್ದರು. ಇದು ಕೆಲವು ಕಿರಿಯರಿಗೆ ಎಷ್ಟು ಕಿರಿಕಿರಿ ಉಂಟುಮಾಡಿತೆಂದರೆ, ತರಗತಿಯಲ್ಲಿ ಉಳಿದವರಿಗೆ ಮನರಂಜನೆಯಾಗುವಂತೆ, ನಾನು ನನಗೆ ಒಪ್ಪಿಗೆಯಾಗಲಿಲ್ಲವೆಂದದ್ದು ಏನನ್ನು ಎಂದು ತಿಳಿದುಕೊಳ್ಳಲು, ಅವರು ಆಗಾಗ

ತಮ್ಮ ಉಪನ್ಯಾಸವನ್ನು ನಿಲ್ಲಿಸುತ್ತಿದ್ದರು.

ಕೋರ್ಸ್‌ನಲ್ಲಿ ಹುಡುಗಿಯರಿಗಿಂತ ಹುಡುಗರ ಸಂಖ್ಯೆ ಬಹಳವೇ ಹೆಚ್ಚಿದ್ದುದರಿಂದ, ನಾವು ಸಾಕಷ್ಟು ಬೇಡಿಕೆಯಲ್ಲಿದ್ದೆವು. ನಾನು ಅಲ್ಲಿ ಅಷ್ಟು ಮೆಚ್ಚಿನವಳಾದೆ. ಏಕೆಂದರೆ ಇತರ ಬಹಳಷ್ಟು ಹುಡುಗಿಯರಿಗಿಂತ ನಾನು ಹತ್ತು ವರ್ಷ ಹಿರಿಯಳಾಗಿದ್ದು, ನನ್ನ ತರಗತಿಯ ಹದಿನೆಂಟರ ಪ್ರಾಯದ ಅನೇಕ ಹುಡುಗರಿಗೆ ನಾನೊಂದು ಪ್ರತಿಮೆಯನ್ನು ಮುಂದಿರಿಸಿದ್ದೆ (ತೋರಿಸಿದ್ದೆ). ಒಂದು ಚಹಾ ವಿರಾಮದ ನಂತರ ನಾನು ನನ್ನ ಗ್ರಂಥಾಲಯದ ಮೇಜಿಗೆ ವಾಪಸಾದಾಗ ನನ್ನ ಅನಾಮಧೇಯ ಅಭಿಮಾನಿಗಳು ಅಲ್ಲಿ ಸಣ್ಣ ಚೀಲಗಳಲ್ಲಿ ಸಿಹಿ ಮಿಠಾಯಿಗಳು ಅಥವಾ ಒಂದಷ್ಟು ಹೂಗಳನ್ನಿಟ್ಟಿರುವುದನ್ನು ಆಗಾಗ್ಗೆ ಕಾಣುತ್ತಿದ್ದೆ. ತೆಳ್ಳಗೆ ಎತ್ತರವಾಗಿದ್ದ ಕಪ್ಪು ಕೂದಲಿನ ಹಾಗೂ ಮುಖವೆಲ್ಲಾ ಚುಕ್ಕಿಗಳಿಂದ ತುಂಬಿಹೋಗಿದ್ದ ಹುಡುಗನೊಬ್ಬ ನನ್ನನ್ನು ಪ್ರೀತಿಸಲು ಬಹಳವೇ ಕಾತರನಾಗಿದ್ದ. ತಾನು ಬರೆದಿದ್ದ ಪದ್ಯಗಳನ್ನು ಅವನು ನನಗೆ ನೀಡಿದ. ಅವುಗಳಲ್ಲಿ ಅವನು ಸಾವಿಲ್ಲದ ತನ್ನ ಪ್ರೀತಿಯನ್ನು ಘೋಷಿಸಿಕೊಂಡಿದ್ದ. ಅವನು ನನ್ನನ್ನು ಓರ್ವ ನಿಗೂಢ ಹೆಂಗಸಾಗಿ ಕಂಡಿದ್ದು ನನಗಾಗಿ ತನ್ನ ಉಳಿದ ಜೀವನವನ್ನು ಸಮರ್ಪಿಸಲು ಆಶಿಸಿದ್ದ. ಸ್ವಲ್ಪ ಹೊತ್ತು ನನಗೂ ಇದು ವಿನೋದವೆನ್ನಿಸಿ, ಈ ರೀತಿಯ ಗಮನದಿಂದಾಗಿ ಉಬ್ಬಿಹೋದೆ. ಒಂದು ದಿನ ಅವನ ಕೈಬರಹದಲ್ಲಿದ್ದ ಒಂದು ಸೂಚನೆಯನ್ನು ನಾನು ಅನಿರೀಕ್ಷಿತವಾಗಿ ಕಂಡೆ. ಅದರಲ್ಲಿ ಅವನು ಅಶ್ಲೀಲ ಭಾಷೆಯಲ್ಲಿ ಅವನ ಪ್ರೇಮಸಲ್ಲಾಪಕ್ಕೆ ನಾನು ಹೇಗೆ ಪ್ರತಿಕ್ರಿಯಿಸಿದ್ದೆ ಎನ್ನುವುದನ್ನು ವಿವರಿಸಿದ್ದ. ನನಗೆ ಅಸಹ್ಯವಾಯಿತು. ಅವನನ್ನು ಮುಖಾಮುಖಿಯಾಗಿ ನಾನು ಇನ್ನೆಂದೂ ಪುನಃ ಅವನೊಡನೆ ಮಾತನಾಡಲು ಇಚ್ಛಿಸುವುದಿಲ್ಲವೆಂದು ಹೇಳಿದೆ. ಅವನು ಸ್ಪಷ್ಟವಾಗಿಯೇ ವಿಚಲಿತನಾಗಿದ್ದ; ಮುಜುಗರಪಟ್ಟಿದ್ದ. ಸಣ್ಣ ಹುಡುಗನಂತೆ ನನ್ನನ್ನು ಅಂಗಲಾಚಿದ. ಕೊನೆಗೆ ಆ ಹುಡುಗ ತಣ್ಣಗಾಗಿ, ತನ್ನದೇ ವಯಸ್ಸಿನ ಒಬ್ಬ ಹುಡುಗಿಯೊಡನೆ ಅಷ್ಟೇ ಗಾಂಭೀರ್ಯದಿಂದ ಪ್ರೀತಿಸಲು ಪ್ರಾರಂಭಿಸಿದ. ಅಲ್ಲಿಯವರೆಗೆ ಈ ಯುವಕನಿಂದ ದೂರವಿರಲು ನಾನೆಷ್ಟು ಪ್ರಯತ್ನಿಸಿದರೂ, ಹಾಗಿರಲು ತಿಂಗಳುಗಳೇ ಬೇಕಾದವು.

ನಾನು ಅನೇಕ ವಿದ್ಯಾರ್ಥಿ ಔತಣಕೂಟಗಳಲ್ಲಿ ಭಾಗವಹಿಸಿದೆ. ಆ ವಿನೋದದಲ್ಲಿ ನಾನೂ ಸೇರಿಕೊಳ್ಳಬೇಕೆಂದು ನಾನದೆಷ್ಟು ಪ್ರಯತ್ನಿಸಿದರೂ, ಯಾವಾಗಲೂ ನನಗೆ ಹೊರಗಿನವಳೆಂಬ ಭಾವನೆಯೇ ಆಗುತ್ತಿತ್ತು. ನಾನು ಕೇವಲ ಅವರಲ್ಲಿ ಸಾಕಷ್ಟು ಹಿರಿಯಳೆನಿಸಿರಲಿಲ್ಲ. ಜೊತೆಗೆ ನನಗೆ ಹಲವು ಬೇರೆಬೇರೆ ರೀತಿಯ ಅನುಭವಗಳೂ ಇದ್ದವು. ಆದರೆ ಅವರಲ್ಲಿ ಬಹಳಷ್ಟು ಮಂದಿ ಜೀವನದ ಶಾಲೆಯಲ್ಲಿ ಇನ್ನು ಹೊಸಬರಾಗಿದ್ದರು ಅನನುಭವಿಗಳಾಗಿದ್ದರು. ಅವರ ಸ್ವಚ್ಛಂದ

ರೀತಿಗಳನ್ನು ಕಂಡು ನನಗೆ ಅಸೂಯೆಯಾಯಿತು. ಅವರ ವಯಸ್ಸಿನಲ್ಲಿ ನಾನದೆಷ್ಟು ಬವಣೆಪಟ್ಟಿದ್ದೆ, ಫ್ಯಾಸಿಸಂನ ವಲಸೆಬಂದದ್ದು, ಒಂದು ಹೊಲಿಯುವ ಯಂತ್ರದ ಹಿಂದೆಯೇ ಇಡೀ ಜೀವನವಿದೆ ಎಂದು ಬಗೆದಿದ್ದುದು ಇದೆಲ್ಲವನ್ನು ನೆನೆದು ನನಗದೆಷ್ಟು ಅನ್ಯಾಯವಾಯಿತು ಈ ವಯಸ್ಸಿನಲ್ಲಿ ಎನಿಸಿತು. ಯಾವುದನ್ನು ತಡೆಯಲು ನಾನು ಬಹಳವಾಗಿ ಹೋರಾಡಿದ್ದೆನೋ, ಅದನ್ನು ಅವರು ತಮ್ಮ ಜನ್ಮಸಿದ್ಧ ಹಕ್ಕೆಂದು ಪರಿಗಣಿಸಿದ್ದರು. ಈ ಕಹಿಗುಳಿಗೆಯನ್ನು ನುಂಗಲು ನಾನು ಪ್ರಯತ್ನಿಸಿದೆ, ವಿಶ್ವವಿದ್ಯಾನಿಲಯದ ನನ್ನ ದಿನಗಳನ್ನು ಸುಮ್ಮನೆ ಆಸ್ವಾದಿಸಿದೆ. ನಾನು ಅವರುಗಳಲ್ಲಿ ಒಬ್ಬಳಾಗಬೇಕೆಂದು ಆಶಿಸಿ ಅವರ ಉದ್ದುದ್ದ ಚರ್ಚೆಗಳಲ್ಲಿ ಸೇರಿಕೊಂಡರೂ, ಹಲವು ದಿನಗಳು ನಾನು ನನ್ನ ಮಲಗುವ ಕೋಣೆಗೆ ಹೋಗಿ ತಲೆದಿಂಬಿನೊಳಗೆ ಅಳುತ್ತಿದ್ದೆ. ನಾವು ಜಗತ್ತನ್ನೇ ಬದಲಾಯಿಸ ಬಲ್ಲೆವು ಎಂಬ ಅವರ ಆತ್ಮವಿಶ್ವಾಸ, ಉತ್ಸಾಹದ ಭರವಸೆ ನನಗೂ ಬೇಕಿದ್ದಿತು. ಆದರೂ ನನ್ನ ಜೀವನವು ಅವರುಗಳ ಜೀವನಕ್ಕಿಂತ ಅದೆಷ್ಟು ಭಿನ್ನ ವಾಗಿದ್ದಿತೆಂದರೆ, ನನಗೆ ಅವರು ನಿಷ್ಕಪಟರಾಗಿಯೂ ಮೂರ್ಖರಾಗಿಯೂ ಕಂಡರು.

ಯಾರು ಸೇನೆಯಲ್ಲಿ ಸೇವೆ ಸಲ್ಲಿಸಿ ಈಗ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೋ ಅಂಥಾ ಪ್ರೌಢ ವಿದ್ಯಾರ್ಥಿಗಳೊಡನೆ ನಾನು ನನ್ನ ಬಹುಪಾಲು ಸಮಯವನ್ನು ಕಳೆಯುತ್ತಿದ್ದೆ. ಆಗಲೇ ನಾನು ಬೆಕ್ಸಿಯನ್ನು ಭೇಟಿಯಾದದ್ದು. ಬೆಕ್ಸಿ ಯಹೂದಿಯಾಗಿದ್ದಳು. ನಲವತ್ತೈದರ ಗಡುವನ್ನು ದಾಟಿದ್ದಳು. ಅವಳು ಒಬ್ಬ ವರ್ಧಿಷ್ಣುವಾದ ವ್ಯಾಪಾರಿಯನ್ನು ಮದುವೆಯಾಗಿದ್ದಳು. ಅವಳಿಗೆ ಹದಿಹರೆಯದ ಇಬ್ಬರು ಹೆಣ್ಣು ಮಕ್ಕಳಿದ್ದರು. ನಾನು ಕೂಡಲೇ ಅವಳಿಗೆ ಹತ್ತಿರದವಳಾದೆ. ಸುಮಾರು ಮೂರು ವರ್ಷಗಳಲ್ಲಿ ನಾವು ಆತ್ಮೀಯ ಗೆಳತಿಯರಾದೆವು. ವಿಶ್ವವಿದ್ಯಾನಿಲಯದಲ್ಲಿ ನಾನೀಗ ಒಂದು ಗುಂಪು ಸಮಾನ ಮನಸ್ಕರನ್ನು ಕಂಡುಕೊಂಡಿದ್ದೆ. ಬಹಳ ಬೇಗನೆ ಅವರಲ್ಲಿ ರಾನ್ ಎಂಬುವವನೊಡನೆ ನಾನು ಹೆಚ್ಚು ಜೊತೆಯಾಗಿ ಇರತೊಡಗಿದೆ. ಅವನಿಗೆ ಅಸಾಧ್ಯವಾದ ಹಾಸ್ಯಪ್ರಜ್ಞೆ ಇದ್ದಿತು. ಅವನು ಬಹಳ ಬುದ್ಧಿಶಾಲಿ ಎಂದು ನಾನು ಭಾವಿಸಿದ್ದೆ. ನನ್ನ ಯೌವನಕಾಲವು ಅದೆಷ್ಟು ಆಸಕ್ತವಾಗಿದ್ದಿತು. ಅಂತೆಯೇ ಆ ವರ್ಷಗಳಲ್ಲಿ ನಾನು ಅದೆಷ್ಟು ಕಡಿಮೆ ನಕ್ಕಿದ್ದೆ ಎನ್ನುವುದನ್ನು ಅವನು ನನಗೆ ಅರಿವಾಗಿಸಿದ್ದ. ಕಳೆದುಹೋದ ಕಾಲವನ್ನು ತುಂಬಿಕೊಳ್ಳಲು ರಾನ್ ನನಗೆ ತನ್ನ ಕೈಲಾದ ಎಲ್ಲ ಸಹಾಯವನ್ನು ಮಾಡಿದ. ನಾವು ನಮ್ಮ ಬಿಡುವಿನ ಎಲ್ಲ ಸಮಯವನ್ನು ಜೊತೆಯಾಗಿ ಕಳೆಯತೊಡಗಿದೆವು. ನಾನು ಕೊನೆಗೂ ಮತ್ತೊಮ್ಮೆ ಪ್ರೇಮದಲ್ಲಿ ಬೀಳುತ್ತಿರುವೆನೇ ಎಂದು ನನಗೆ ಆಶ್ಚರ್ಯವಾಗತೊಡಗಿತು. ಇದು ನನ್ನನ್ನು ಅಧೀರಳನ್ನಾಗಿಸಿತು. ನಾನು ಅವನ ಭಾವನೆಗಳ ಬಗೆಗೆ ಹಾಗೂ ಅವನ ಬದ್ಧತೆಯ ಮೇಲೆ ಒಂದೇ ಸಮನೆ ಪ್ರಶ್ನೆಗಳನ್ನು

ಕೇಳುತ್ತಿದ್ದೆ. ಮೊಟ್ಟಮೊದಲ ಬಾರಿಗೆ ಪ್ರೇಮದಲ್ಲಿ ಬಿದ್ದ ಕೆಲವು ಮಕ್ಕಳಂತೆ ನಾವು ನಡೆದುಕೊಂಡೆವು. ಸ್ತ್ರೀ–ಪುರುಷ ಜಾತಿಯ ಸಾಮಾನ್ಯವಾದ ಮುಂಚಿನ ಮುಗ್ಧ ಭೇಟಿಗಳು ನಮ್ಮದಾಗಿರಲಿಲ್ಲ ಎಂದು ನನ್ನ ಊಹೆ. ಅವನು ಅವನ ಸೇನಾ ಸೇವೆಯಿಂದಾಗಿ, ನಾನು ವಲಸೆ ಬಂದುದರ ಪರಿಣಾಮದಿಂದಾಗಿ.

ವಿಶ್ವವಿದ್ಯಾನಿಲಯದಲ್ಲಿ ನಮ್ಮ ಪ್ರಥಮ ವರ್ಷವು ಕೊನೆಯನ್ನು ತಲುಪುತ್ತಿದ್ದಂತೆ, ನಾನು "ರಜಾ ದಿನಗಳ" ಕೆಲಸಗಳನ್ನು ಹುಡುಕಲು ಪ್ರಾರಂಭಿಸಿದೆ. ದೀರ್ಘಕಾಲದ ಬೇಸಿಗೆ ರಜೆಯಲ್ಲು ನನಗೆ ಅಭ್ಯಾಸವಿಲ್ಲದ ಸತ್ಕಾರವಾಗಿದ್ದಿತು. ನನ್ನ ಸಂಪಾದನೆಯಲ್ಲಿ ನಾನು ಗರಿಷ್ಠ ಮಟ್ಟ ಮುಟ್ಟಲು ಸಾಧ್ಯವಾಗುವಂತೆ ಜೊತೆಗೆ ಅದು ಬೋಧಕರವಾಗಿಯೂ ರುಚಿಸುವಂಥದ್ದಾಗಿಯೂ ಇರುವಂತೆ ಮಾಡಬಲ್ಲ ಅವಕಾಶಗಳಿಗಾಗಿ ನಾನು ಹುಡುಕಾಡಿದೆ.

ಒಂದು ದಿನ, ನಾನು ಟ್ರಾವೆಲ್ ಏಜೆನ್ಸಿಯೊಂದರ ಮುಂದೆ ಸಾಗುತ್ತಿದ್ದಾಗ ಖಂಡದ ಪ್ರವಾಸಗಳ ಗುಚ್ಛವನ್ನು ನಡೆಸುವ ಕೊರಿಯರುಗಳಿಗಾಗಿದ್ದ ಒಂದು ಜಾಹೀರಾತನ್ನು ಗಮನಿಸಿದೆ. ನಾನು ಸಾಕಷ್ಟು ಒಳ್ಳೆಯ ಪ್ರವಾಸಿ ಆತಿಥೇಯಳಾಗಬಹುದೆಂಬ ಅಂಶ ನನಗೆ ಹೊಳೆಯಿತು. ರಾನ್ ಸಹ ಇದಕ್ಕೆ ಒಪ್ಪಿದ. ನಾವಿಬ್ಬರೂ ಸೇರಿ ನನ್ನ ಸೇವೆಯನ್ನು ಪ್ರಸ್ತಾವಿಸಿ ಒಂದು ಪತ್ರವನ್ನು ಸಿದ್ಧಪಡಿಸಿದೆವು. ಒಂದು ಸಂದರ್ಶನಕ್ಕಾಗಿ ನನ್ನನ್ನು ಲಂಡನ್‌ಗೆ ಹೋಗಲು ಹೇಳಲಾಯಿತು. ರಾನ್ ತಾನೂ ನನ್ನ ಜೊತೆ ಬರುವುದಾಗಿ ಹೇಳಿದ. ಒಟ್ಟಾಗಿ ಒಬ್ಬರಿಗೊಬ್ಬರು ಗಂಟುಹಾಕಿಕೊಂಡು ದಾರಿಯಲ್ಲಿ ಸಾಕಷ್ಟು ವಿನೋದದಿಂದ ಕಾಲ ಕಳೆದೆವು. ಎಲ್ಲವೂ ಎಷ್ಟು ಚೆನ್ನಾಗಿ ನಡೆಯುತ್ತಿದ್ದಿತೆಂದರೆ, ಇದೆಲ್ಲವನ್ನೂ ನಾಶಮಾಡಲು ಏನಾದರೂ ಒಂದು ಅನಿಷ್ಟ ಸಂಭವಿಸಲೇಬೇಕೆಂದು ನಾನು ಹೆದರಿಕೊಳ್ಳುವ ಗಳಿಗೆಗಳೂ ಇದ್ದವು. ಬಹಳ ಬೇಗನೇ ನಾನು ಆಲೋಚನೆಯನ್ನು ನನ್ನ ಮನಸ್ಸಿನಿಂದ ತೆಗೆದುಹಾಕಿದೆ. "ನಿನಗೆ ಸಾಧ್ಯವಾದಾಗ ಸಂತೋಷವನ್ನು ಬಾಚಿಕೋ" ಎಂಬ ರುತ್‌ನ ಅದರ್ಶವಾಕ್ಯವನ್ನು ನನಗೆ ನಾನೇ ನೆನಪಿಸಿಕೊಂಡೆ. ಸುಂದರವಾದ ಜೂನ್ ದಿನದಲ್ಲಿ, ಇಂಗ್ಲಿಷ್‌ನ ಹಚ್ಚ ಹಸಿರಿನ ಹಳ್ಳಿಗಾಡು ಪ್ರದೇಶಗಳಲ್ಲಿ ಪ್ರಯಾಣ ಮಾಡುತ್ತಿರುವಾಗ, ಪಕ್ಕದಲ್ಲೇ ಕುಳಿತ ತರುಣ ಯುವಕನೊಬ್ಬನು ತಾನು ಅದೆಷ್ಟು ನನ್ನನ್ನು ಪ್ರೀತಿಸುತ್ತಾನೆಂದು ಕಿವಿಯಲ್ಲಿ ಪಿಸುಗುಡುತ್ತಿರುವಾಗ ನಾನು ಅಸಂತೋಷದಿಂದಿರಲು ಹೇಗೆ ಸಾಧ್ಯ? ಇವೆಲ್ಲವೂ ನಿಜವಾಗಲೂ ಬಹಳ ಒಳ್ಳೆಯವುಗಳಾಗಿದ್ದವು!

ನನ್ನ ಸಂದರ್ಶನವು ಚೆನ್ನಾಗಿ ನಡೆಯಿತು. ನಿವಾಸಿ ಆತಿಥೇಯಳಾಗಿ ಇಟಲಿ ಮತ್ತು ಸ್ವಿಟ್ಜರ್ಲೆಂಡ್‌ಗಳ ಗಡಿಯ ಹತ್ತಿರದಲ್ಲಿದ್ದ ಆಸ್ಟ್ರಿಯಾದ ಒಂದು ಸಣ್ಣ ಹಳ್ಳಿಯಲ್ಲಿ ನನಗೆ ಕೂಡಲೇ ಕೆಲಸವನ್ನು ಕೊಡಲಾಯಿತು. ನಾನು ವಿಜಯಿಯಾಗಿದ್ದ ನನ್ನ

ಮನಸ್ಸಿನ ಲೆಕ್ಕದ ಹಲಗೆಯ ಮೇಲೆ ಇನ್ನೊಂದು ಯಶಸ್ಸನ್ನು ಕೊರೆದೆ. ರಾನ್‌ನ ಬಳಿಗೆ ಧಾವಿಸಿ ಬಂದೆ. ಹತ್ತಿರದ ಕೆಫೆಯಲ್ಲಿ ನನಗಾಗಿ ಕಾಯುತ್ತಿದ್ದ ಅವನನ್ನು ನಾನು ಬಿಟ್ಟುಹೋಗಿದ್ದೆ. ನನ್ನ ಮುಖದ ಅಭಿವ್ಯಕ್ತಿಯಿಂದ ಮುಖವೂ ಚೆನ್ನಾಗಿ ಆಗಿದೆ ಎಂದು ಕಾಣಬಲ್ಲವನಾಗಿದ್ದ ಅವನು ನನ್ನನ್ನು ಅಪ್ಪಿ, ಹಾಸ್ಯ ಮಾಡಿದ : "ಪ್ರಯಾಣ ಮಾಧ್ಯಮಕ್ಕೆ ನಿನ್ನನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿರುವರೇನೋ ಎನ್ನುವಷ್ಟು ಖುಷಿಯಾಗಿದ್ದೀಯೆ! ಅವರು ನಿನಗೆ ಕೇವಲ ಒಂದು ಬೇಸಿಗೆ ಕೆಲಸವನ್ನಷ್ಟೇ ಕೊಟ್ಟಿರುವುದು" ಎಂದ. ಆಗ ಈ ಸಂತೋಷವನ್ನಾ ಚರಿಸಲು ತಾನು ನನ್ನನ್ನು ಹೊರಗೆ ಊಟಕ್ಕೆ ಕರೆದೊಯ್ಯುವುದಾಗಿ ಹೇಳಿದ. ಹಣವನ್ನು ಕೊಡಲು ಸಿದ್ಧವಾಗುವತನಕ ನಾವಿಬ್ಬರೂ ಒಟ್ಟಿಗೇ ಸುಂದರವಾದ ಸಮಯವನ್ನು ಕಳೆದಿದ್ದೇವೆ. ಬಿಲ್‌ನ್ನು ಪಾವತಿ ಮಾಡಲು ರಾನ್ ನನ್ನ ಕೈಗೆ ತನ್ನ ಪರ್ಸನ್ನು ಕೊಟ್ಟು ತಾನು ಮೂತ್ರ ವಿಸರ್ಜನೆಗೆಂದು ಹೋದ. ನಾನು ಪರ್ಸ್‌ನಿಂದ ಹಣವನ್ನು ಈಚೆಗೆ ತೆಗೆಯುತ್ತಿದ್ದಂತೆಯೇ, ಒಂದು ಸಣ್ಣ ಕಾಗದದ ಚೂರು ನೆಲದ ಮೇಲೆ ಬಿದ್ದಿತು. ನಾನು ಅದನ್ನು ಕೈಗೆತ್ತಿಕೊಂಡೆ. ಆ ಚೀಟಿಯಲ್ಲಿ ರಾನ್ ಮತ್ತು ಸಿಲ್ವಿಯಾ ಎಂಬ ಒಬ್ಬ ಹುಡುಗಿಯ ವಿವಾಹ ನಿಶ್ಚಿತಾರ್ಥದ ಪ್ರಕಟಣೆ ಇದ್ದಿತು. ಅದನ್ನು ಓದಿದ ನನಗೆ ದಿಗಿಲಾಯಿತು. ನಾನು ಮೂಕಿಯಾಗಿದ್ದೆ. ಅದನ್ನು ನಂಬುವ ಸಲುವಾಗಿ ಮತ್ತೆ ಮತ್ತೆ ಅನೇಕ ಸಾರಿ ಓದಬೇಕಾಯಿತು. ಬಿಲ್ ಪಾವತಿಸಿ ನಾನು ಚಿಲ್ಲರೆ ವಾಪಸಿಗೆ ಕಾಯುತ್ತ ನಿಂತಿರುವಾಗ ರಾನ್ ಬಂದು ನನ್ನನ್ನು ಸೇರಿಕೊಂಡ. ನಾನೇಕೆ ಪೇಲವವಾಗಿದ್ದೇನೆಂದು ಚಕಿತನಾಗಿ ಕೇಳಿದ. ನಾನು ಅವನ ಪರ್ಸನ್ನು ಅವನ ಕೈಗೆ ತುರುಕಿ, ಆ ಪ್ರಕಟಣೆಯನ್ನು ಅವನ ಕೈಲಿಟ್ಟು, ರೆಸ್ಟೋರೆಂಟ್‌ನಿಂದ ಓಡಿ ಹೊರಬಂದೆ. ಅವನು ನನ್ನನ್ನು ಹಿಂಬಾಲಿಸಲು ಪ್ರಯತ್ನಿಸಿದ. ಆದರೆ ನಾನು ಒಂದು ಬಾಗಿಲ ಹಿಂದೆ ಬಚ್ಚಿಟ್ಟುಕೊಂಡು ಅವನು ನನ್ನ ಮುಂದೆಯೇ ಓಡಿ ಹೋಗುವುದನ್ನು ನೋಡಿದೆ. ನಾನು ಕುಸಿದು ಕುಳಿತೆ. ಚಲಿಸಲು ಸಾಧ್ಯವಿಲ್ಲದಂತೆ ಭಾಸವಾಯಿತು. ಅವನೇಕೆ ನನಗೆ ಸುಳ್ಳು ಹೇಳಿದನೆಂದು ನನಗೆ ಅರ್ಥವಾಗಲಿಲ್ಲ. ಅವನು ನನ್ನನ್ನು ಹಾಗೇಕೆ ನಡೆಸಿಕೊಳ್ಳಲು ಸಾಧ್ಯವಾಯಿತು? ನಾನೇಕೆ ಪ್ರೇಮದಲ್ಲಿ ಇಷ್ಟು ದುರದೃಷ್ಟವಂತೆ? ಇದು ನನ್ನದೇ ತಪ್ಪಿರಬಹುದೇ ಎಂಬ ಆಶ್ಚರ್ಯ ಮೂಡಲು ಪ್ರಾರಂಭವಾಯಿತು. ಪುರುಷರು ಯಾವಾಗಲೂ ನನಗೆ ಮೋಸ ಮಾಡುವ ಹಾಗೆ ನಾನೇನು ಮಾಡಿದ್ದೇನೆ? ಹೀಗೆ ತೆರೆದ ಹೃದಯದಿಂದ ರಾನ್‌ಗಾಗಿ ಪರಿತಪಿಸಿದ ನನ್ನ ಮೇಲೆ ನನಗೆ ಅಸಾಧ್ಯವಾದ ಕೋಪ ಬಂದಿತು.

ಪುನಃ ನನ್ನಷ್ಟಕ್ಕೆ ನಾನು ಬರುವಂತಾದೆ. ದಾರಿಯಲ್ಲಿ ಹೋಗುತ್ತಿದ್ದ ವಾಹನದಲ್ಲಿ ಸ್ಥಳ ಬೇಡಿ ಮ್ಯಾಂಚೆಸ್ಟರ್‌ಗೆ ವಾಪಸಾದೆ. ಜೋಪಾನವಾಗಿ ಮನೆಗೆ ಬಂದೆ. ರಾನ್‌ಗೇನೂ ಕೃತಜ್ಞತೆ ಹೇಳಬೇಕಿರಲಿಲ್ಲ. ಅಮ್ಮನಿಗೆ ಬೇಸಿಗೆಯ ಕೆಲಸದ ಬಗೆಗೆ

ಹೇಳಿದೆ. ನನ್ನಲ್ಲಿ ಉತ್ಸಾಹ ಎಲ್ಲವನ್ನು ಕಂಡು ಅವರಿಗೆ ಆಶ್ಚರ್ಯವಾಗಿತ್ತು. ಆದರೆ, ರಾನ್‌ನೊಡನೆ ನಡೆದದ್ದೇನು ಎಂದು ಅವಳಿಗೆ ವಿವರಿಸಿ ಹೇಳುವುದು ನನಗೆ ಸಾಧ್ಯವಾಗಲಿಲ್ಲ. ರಾನ್‌ನೊಡನೆ ಆಗಾಗ್ಗೆ ಹೋಗುತ್ತಿದ್ದ ಸ್ಥಳಗಳಿಗೆ ನಾನೀಗ ಹೋಗುವುದನ್ನು ತಪ್ಪಿಸುತ್ತಿದ್ದೆ. ಅದು ಅವನನ್ನು ಮುಖಾಮುಖಿಯಾಗಿ ಕಾಣಬಾರದೆನ್ನುವ ಒಂದು ಪ್ರಯತ್ನವಾಗಿತ್ತು. ಹಾಗಾದರೂ ನನ್ನ ತರಗತಿಗಳಲ್ಲಿ ಒಂದು ತರಗತಿಯಾದ ನಂತರ ಅವನು ನನ್ನನ್ನು ಏಕಾಂತದಲ್ಲಿ ಸಂಧಿಸಿ ಚೆನ್ನಾಗಿ ಅಭ್ಯಾಸ ಮಾಡಿದ್ದ ಭಾಷಣದಂತೆ ಕಾಣುವ ಮಾತುಗಳನ್ನು ತ್ವರಿತವಾಗಿ ಪ್ರಾರಂಭಿಸಿದ. ಈ ನಿಶ್ಚಿತಾರ್ಥವನ್ನು ಅವನ ತಂದೆ ತಾಯಿಗಳು ಏರ್ಪಡಿಸಿದ್ದಾಗಿಯೂ, ನನ್ನನ್ನು ಭೇಟಿಯಾಗುವ ತನಕ ತಾನೆಂದಾದರೂ ಒಂದು ಹುಡುಗಿಯನ್ನು ಪ್ರೇಮಿಸಬಹುದು ಎಂದು ತಾನು ತಿಳಿದಿರಲಿಲ್ಲವೆಂದೂ, ಅದರಿಂದಲೇ ತನ್ನ ತಾಯಿ ತಂದೆ ತನಗಾಗಿ ಆರಿಸಿದ ಹುಡುಗಿಯನ್ನು ಮದುವೆಯಾಗಲು ಸಿದ್ಧವಿದ್ದುದಾಗಿ ಅವನು ನನಗೆ ವಿವರಿಸಿದ. ಅವನು ನನ್ನನ್ನು ಸಂಧಿಸಿದಾಗಿನಿಂದ ಒಂದು ಸಂಬಂಧದಿಂದಾಗಿ ತಾನದೆಷ್ಟು ಪಡೆಯಬಹುದು ಎನ್ನುವುದರ ಅರಿವು ಅವನಿಗಾಗಿದ್ದು, ಅದರಿಂದಲೇ ತನ್ನ ನಿಶ್ಚಿತಾರ್ಥವನ್ನು ಮುರಿಯುವುದಾಗಿ ಅವನು ನಿರ್ಧರಿಸಿದ್ದ. ನಾನು ಅವನನ್ನು 'ನಂಬುವಂತಿದ್ದರೆ' ಎಂದು ಆಶಿಸಿದೆ. ಆದರೆ, ಹಾನಿ ಆಗಿಹೋಗಿತ್ತು. ಅವನು ನನ್ನ ಹೊರ ರಕ್ಷಣಾಕೋಶದೊಳಗೆ ಪ್ರವೇಶಿಸಲು ಮತ್ತೊಮ್ಮೆ ನಾನೆಂದೂ ಬಿಡುವುದಿಲ್ಲ. ಅವನ ಮಾತನ್ನು ಕೇಳಲಾಗಲೀ ಅಥವಾ ಅವನ ನೆಪಗಳನ್ನಾಗಲೀ, ವಿವರಣೆಗಳನ್ನಾಗಲೀ ಒಪ್ಪಲು ಸಿದ್ಧಳಿರಲಿಲ್ಲ. ನಮ್ಮ ಸುತ್ತಲಿನ ಜನ ಕರಗಿ ನಮ್ಮಷ್ಟಕ್ಕೆ ನಾವಿಬ್ಬರೇ ಉಳಿದಾಗ ನಾನು ತಣ್ಣಗೆ ಹೇಳಿದೆ. "ನಾನು ಮತ್ತೆಂದೂ ನಿನ್ನನ್ನು ನೋಡಲಿಚ್ಛಿಸುವುದಿಲ್ಲ." ಹೀಗೆಂದು ಅವನು ನನ್ನ ಕಣ್ಣೀರನ್ನು ಗಮನಿಸಿರಲಿಕ್ಕಿಲ್ಲವೆಂಬ ಆಶಯದೊಡನೆ ನಡೆದುಬಂದೆ. ಅವನಿಂದ ನನಗೆ ಬಹಳವೇ ನೋವಾಗಿತ್ತು ಹಾಗೂ ಕೋಪ ಬಂದಿತ್ತು. ನಾನೊಬ್ಬ ಏಕಾಂಗಿ ವಿದ್ಯಾರ್ಥಿಯಾದೆ. ಮತ್ತೊಮ್ಮೆ ನೋವಿಗೊಳಗಾಗುವ ಅಪಾಯಕ್ಕಿಂತ ನನ್ನ ಜೊತೆಯಲ್ಲೇ ನಾನು ಸಂತೋಷದಿಂದಿದ್ದೆ.

ನಾನು ನನ್ನ ವ್ಯಾಸಂಗದ ಮೇಲೆ ಗಮನ ಕೇಂದ್ರೀಕರಿಸಿದೆ. ನನ್ನ ಮೊದಲ ವರ್ಷವು ಬಹಳ ಬೇಗನೆ ಮುಗಿಯಿತು ನನ್ನ ಪ್ರಾರಂಭಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡಿದೆ. ಆದರೆ ಅವುಗಳು ಮುಗಿದ ತಕ್ಷಣವೇ ನಾನು ನನ್ನ ಯೋಚನೆಗಳನ್ನು ಆಸ್ಟ್ರಿಯಾದತ್ತ ತಿರುಗಿಸಿದೆ. ೧೯೩೯ರಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಬಂದ ನಂತರ ಮತ್ತೆ ಮೊದಲಬಾರಿಗೆ ಆಸ್ಟ್ರಿಯಾಗೆ ಹಿಂದಿರುಗು ತ್ತಿರುವುದರ ಬಗೆಗೆ ನಾನು ವಿಚಿತ್ರ ರೀತಿಯಲ್ಲಿ ಉದ್ವೇಗಕ್ಕೊಳಗಾಗಿದ್ದೆ. ಅನಂತ ಕಾಲದ ಹಿಂದೆಯೇ ಅದು ಎನ್ನುವ ಹಾಗಿತ್ತು, ಆ ಮಧ್ಯದ ಕಾಲದಲ್ಲಿ ಅಷ್ಟೊಂದು ಘಟಿಸಿ ಹೋಗಿದ್ದಿತು. ನಾನು ಚರಂಡಿಯಲ್ಲಿ ಕೊನೆಗೊಳ್ಳಲಿಲ್ಲ ಎಂದು ನಾನು ರುಜುವಾತು ಮಾಡಬಹುದು

ಎಂದು ಕೊನೆಗೆ ನನಗನ್ನಿಸಿತು. ಹಾಗಾದರೂ ನಾನು ಆಸ್ಟ್ರಿಯಾಗೆ ಪ್ರಯಾಣ ಮಾಡುವಾಗ, ನನ್ನ ಭಾವನೆಗಳು, ಭೀತಿಗೆ ತಿರುಗಿದವು. ಅಷ್ಟೊಂದು ನೋವು-ಬವಣೆ ಗಳನ್ನುಂಟುಮಾಡಿದ ಒಂದು ದೇಶಕ್ಕೆ ಮತ್ತೆ ಹಿಂದಿರುಗಬೇಕೆಂದುಕೊಂಡದ್ದಕ್ಕೆ ನನ್ನನ್ನು ನಾನೇ ನಿಂದಿಸಿಕೊಂಡೆ. ನಾನು ಚೂರಾದಂತೆ ಭಾಸವಾಯಿತು. ನಾನೆಂದೂ ಆಸ್ಟ್ರಿಯಾದ ಜನರನ್ನು ಕ್ಷಮಿಸುವುದಿಲ್ಲ. ಆದರೂ ಟೈರೋಲೀನ್ ಆಲ್ಪ್ಸ್‌ನಲ್ಲಿ ಬೇಸಿಗೆ ಕಳೆಯಲು ಹೋಗುತ್ತಿದ್ದೆ. ನನಗೆ ನಾನೇ ಒಬ್ಬ ದ್ರೋಹಿ ಎಂಬ ಭಾವ ಮೂಡಿತು.

ಹಳ್ಳಿಗೆ ಬಂದಾಗ ಅದರ ಆಲ್ಪೈನ್ ಹಣ್ಣುಗಳ ವೈಭವದಿಂದ ನಾನು ಮಂತ್ರಮುಗ್ಧಳಾದೆ. ನಾನಿಳಿದುಕೊಳ್ಳುವ ಸ್ಥಳ 'ದಿ ಹೋಟೆಲ್ ಪೋಸ್ಟ್' ಒಂದು ಸುಂದರವಾದ ಜಾಗವಾಗಿತ್ತು. ಅಲ್ಲಿನ ಸಿಬ್ಬಂದಿ ಸ್ನೇಹಪರವಾಗಿದ್ದು, ಅಲ್ಲಿನ ಆಹಾರ ಅದ್ಭುತವಾಗಿತ್ತು. ಸ್ಕ್ಯಾಂಡಿನೇವಿಯಾದ ಪ್ರಯಾಣ ಮಾಧ್ಯಮವೊಂದೂ ಆ ಹೋಟೆಲನ್ನು ಉಪಯೋಗಿಸಿಕೊಂಡಿತ್ತು. ನಾನು ಬೀಗಲೀ ನಟ್ ಎಂಬ, ನನ್ನ ಸ್ಕ್ಯಾಂಡಿನೇವಿಯಾದ ಸಹಚರನೊಡನೆ ಗೆಳೆತನ ಬೆಳೆಸಿದೆ. ಅವನು ಎತ್ತರವಾಗಿದ್ದು, ಚೆಲುವನಾಗಿದ್ದ. ಒಬ್ಬ ಟ್ರಾವೆಲ್ ಹೋಸ್ಟ್ ಆಗಿ ಅವನಿಗೆ ವರ್ಷಗಳ ಅನುಭವವಿದ್ದಿತು. ಅವನ ಅನುಭವಗಳು ಅದರಲ್ಲಿನ ಹುಳುಕುಗಳನ್ನು ನನಗೆ ತೋರಿಸುವಲ್ಲಿ ಸಾಕಷ್ಟು ಸಹಾಯ ಮಾಡುವಂತೆ ಮಾಡಿದವು. ನನ್ನ ಪ್ರವಾಸದ ಗುಂಪು ಮಾಡುವ ಖರೀದಿಗಳ ಮೇಲೆ ಕಮಿಷನ್ನು ಸಂಪಾದಿಸುವುದರಿಂದ ನಾನು ಹೇಗೆ ನನ್ನ ಸಂಬಳವನ್ನು ಹೆಚ್ಚಿಸಿಕೊಳ್ಳಬಹುದು ಎಂದು ಅವನು ನನಗೆ ಕಲಿಸಿದ. ನಾನು ಮಾಡಬೇಕಾದ್ದಿಷ್ಟೇ ಆಗಿತ್ತು ದಿನದ ನಮ್ಮ ಪ್ರವಾಸಗಳಲ್ಲಿ ಅನೇಕ ಉಡುಗೊರೆ ಅಂಗಡಿಗಳ ಮುಂದೆ ನಿಲ್ಲುವ ಹಾಗೆ ವ್ಯವಸ್ಥೆ ಮಾಡುವುದು. ಆ ಸಮಯದಲ್ಲಿ ಸಾಮಾನ್ಯವಾಗಿ ಇಷ್ಟು ಹಣಕಾಸು ಎಂದು ನನಗೆ ಅನ್ನಿಸಿದಷ್ಟನ್ನು ನಾನು ಕೂಡಿಸಿಕೊಳ್ಳುತ್ತಾ ಹೋದೆ. ಅದೇ ನನ್ನ ವಿದ್ಯಾರ್ಥಿವೇತನಕ್ಕೆ ಒಂದು ಸ್ವಾಗತಾರ್ಹ ಹೆಚ್ಚಿನ ಸೇರ್ಪಡೆಯಾಯಿತು.

ನಮ್ಮ ಗೆಳೆತನ ಬೆಳೆದಂತೆ ನಾನು ನಟ್‌ಗೆ ನನ್ನ ನಿರಾಶ್ರಿತ ಹಿನ್ನೆಲೆಯನ್ನು ಹೇಳಿದೆ. ಆ ಇಡೀ ಬೇಸಿಗೆಯನ್ನು ನಾನು ಇನ್ಯಾರಿಗೂ ಹೇಳದ ಒಂದು ಸತ್ಯವಾಗಿತ್ತು ಅದು. ಇದಕ್ಕೆ ಪ್ರತಿಯಾಗಿ ನಟ್‌ನೂ ತನ್ನ ಒಂದು ರಹಸ್ಯವನ್ನು ನನ್ನಲ್ಲಿ ಹೇಳಿದ. ಅವನು ನಾರ್ವೆಯ ಭೂಗತ ನಾಯಕರಲ್ಲಿ ಒಬ್ಬನಾಗಿದ್ದು, ಆಕ್ರಮಿಸುತ್ತಿದ್ದ ಬಹುತೇಕ ಆಸ್ಟ್ರಿಯನರೇ ಇದ್ದ ಜರ್ಮನ್ ಸೇನೆಯ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿದ್ದುದಾಗಿಯೂ ಹೇಳಿದ. ಇಂಥ ಆಸ್ಟ್ರಿಯನ್‌ರೊಡನೆ ನಾವು ಬೆರೆಯಬೇಕೆಂದು ನಿರೀಕ್ಷಿಸಲಾಗುತ್ತಿತ್ತು. ಆದರೆ ಹಾಗೆ ಅವರೊಡನೆ ಬೆರೆಯಲು ನನಗಾಗುತ್ತಿದ್ದ ಚಡಪಡಿಕೆಯನ್ನು ಹಂಚಿಕೊಳ್ಳಲು ಸಮಾನ ಮನಸ್ಕನೊಬ್ಬನು

ಸಿಕ್ಕಿದುದು ನನಗೆ ಹೆಚ್ಚಿನ ಸಂತೋಷ ತಂದಿದ್ದಿತು. ನನ್ನಷ್ಟಕ್ಕೆ ನಾನೇ ಆರಾಮದಿಂದ ಆಸ್ವಾದಿಸಲು ಪ್ರಯತ್ನಿಸಿದೆ. ಆದರೆ ಪ್ರತಿಸಾರಿ ಒಬ್ಬ ಆಸ್ಟ್ರಿಯನನ್ನು ಭೇಟಿಯಾದಾಗಲೂ ಮೌನವಾಗಿ 'ಹಿಟ್ಲರನು ನಮ್ಮನ್ನು ಕೊಲ್ಲಲು ಪ್ರಯತ್ನಿಸಿದಾಗ ನೀವೆಲ್ಲಿದ್ದಿರಿ? ನಮಗೆ ಸಹಾಯ ಮಾಡಲು ನೀವೇನು ಮಾಡಿದಿರಿ? ನೀನೂ ಆ ಕೊಲೆ ಪಾತಕರಲ್ಲಿ ಒಬ್ಬನಾಗಿದ್ದೆಯಾ?' ಎಂದು ಕೇಳುವಂತಾಗುತ್ತಿದ್ದುದನ್ನು ತಪ್ಪಿಸಲಾಗಲಿಲ್ಲ.

ಬೇಸಿಗೆಯಲ್ಲಿ ಸ್ಥಳೀಯ ಪುರುಷರಿಂದ ನಾನು ದೂರವಿರಲು ಪ್ರಯತ್ನಿಸಿದೆ. ಹಾಗೆಯೇ ನನ್ನ ಪ್ರವಾಸೀ ತಂಡಗಳಲ್ಲಿದ್ದ ಪುರುಷರಿಂದಲೂ ಸಹ, ಹೇಗಾದರೂ ಇದು ನನ್ನ ಮನವಿಗೆ ಸೇರಿಕೊಳ್ಳುವ ಒಂದು ಅಂಶ ಮಾತ್ರವಾದಂತೆ ಕಂಡಿತು. ಆ ಕೆಲವು ತಿಂಗಳುಗಳಲ್ಲಿ ಮದುವೆಯ ಅನೇಕ ಪ್ರಸ್ತಾಪಗಳು ನನಗೆ ಬಂದವು. ಅವರಿಗೆ ಈಗ ನನ್ನ ಮೇಲಿರುವ ಆಸಕ್ತಿ ನಾನು ಯಹೂದಿಯಾಗಿದ್ದವಳು ಎಂದು ತಿಳಿದ ಮೇಲೂ ಇದ್ದೀತೆ ಎಂಬುದನ್ನು ತಿಳಿಯಲು ನಾನು ಯಾವಾಗಲೂ ಬಯಸುತ್ತಿದ್ದೆ.

ಒಬ್ಬ ಕೊರಿಯರ್‌ಳಾಗಿ, ನನಗೆ ರೈಲಿನಲ್ಲಿ ಅಲ್ಪ ದರದ ಪ್ರಯಾಣ, ಹೋಟೆಲ್‌ಗಳಲ್ಲಿ ಕಡಿತದ ಬೆಲೆ ಇಂಥ ಸೌಲಭ್ಯಗಳು ಸಿಗುವುದಿತ್ತು. ಆದ್ದರಿಂದ ವರ್ಷಗಳ ನಂತರ ನಾನು ನನ್ನ ತಂದೆತಾಯಿಗೆ ಒಂದು ರಜಾ ಪ್ರವಾಸವನ್ನೇರ್ಪಡಿಸಿದೆ. ಅದು ಆಸ್ಟ್ರಿಯಾದಲ್ಲಿರುವ ಅವರಿಗೆ ಅತ್ಯಂತ ಪ್ರಿಯವಾದ ರಿಸಾರ್ಟ್‌ಗಳಲ್ಲೊಂದಾದ ಬ್ಯಾಡ್‌ಗ್ಯಾಸ್ಟೀನ್‌ನ ಪ್ರವಾಸ. ಅವರ ಪ್ರವಾಸದ ನಂತರ ಅಪ್ಪನು ತನ್ನ ಕೆಲಸಕ್ಕೆ ವಾಪಸಾಗಲು ಮ್ಯಾಂಚೆಸ್ಟರ್‌ಗೆ ಹೋದಾಗ, ನಾನು ಅಮ್ಮನನ್ನು ನನ್ನ ಜೊತೆ ಚೈರೊಲೀನ್ ಹಳ್ಳಿಯಲ್ಲೇ ಉಳಿಸಿಕೊಂಡೆ. ಅವಳ ಕಣ್ಣುಗಳು ಆ ಕಣ್ಣುಗಳು ಎಂದೂ ಹೊಳೆಯದಿದ್ದ ರೀತಿಯಲ್ಲಿ ಹೊಳೆಯುತ್ತಿದ್ದವು. ನಾವು ವಿಯೆನ್ನಾ ಬಿಡುವ ಮುಂಚೆ ಆ ಕಣ್ಣುಗಳು ಎಂದೂ ಹೊಳೆಯದಿದ್ದ ರೀತಿಯಲ್ಲಿ ಹೊಳೆದಿದ್ದವು. ಅಮ್ಮನು ನನ್ನ ಜೊತೆ ಎರಡು ವಾರಗಳಿದ್ದಾಗ ಬಹಳ ಸಂತೋಷದಿಂದಿದ್ದಳು. ಅವಳು ಅಷ್ಟು ಸಂತೋಷವಾಗಿದ್ದುದನ್ನು ವರ್ಷಗಳಿಂದ ನೋಡಿರಲಿಲ್ಲ ನಾನು ಒಂದು ಮಗುವಾಗಿದ್ದಾಗ ಅವಳನ್ನು ಕಾಣುತ್ತಿದ್ದಂತೆ ಕಂಡೆ. ನಿರಾಶ್ರಿತ ಅನುಭವವು ಹೇಗೆ ಅವಳನ್ನು ಅವಳ ವಯಸ್ಸಿಗಿಂತ ಹೆಚ್ಚು ವಯಸ್ಸಾದವಳಂತೆ ಮಾಡಿದೆ ಎನ್ನುವುದನ್ನು ಅರಿತುಕೊಂಡೆ.

ಬಹಳ ತ್ವರಿತವಾಗಿಯೇ ಬೇಸಿಗೆಯು ಮುಗಿಯಿತು. ನಾನು ಬಿಟ್ಟು ಹೊರಟ ಭಾವನೋದ್ದೀಪ್ತ ವಿಶ್ವವಿದ್ಯಾನಿಲಯದ ಜೀವನದಿಂದ ಈ ಕೆಲಸವು ಒಂದು ಸ್ವಾಗತಾರ್ಹ ಬದಲಾವಣೆಯನ್ನು ನೀಡಿದ್ದಿತು. ಸಂಬಂಧಗಳನ್ನು ಸ್ಥಾಪಿಸುವುದರ ಬಗೆಗೆ ಈಗ ನಾನು ಬಹಳಷ್ಟು ತಿಳಿದುಕೊಂಡಿದ್ದೆ. ಅಮ್ಮನ ಚಿಕ್ಕ ವಾಕ್ಸರಣಿ "ಒಂದು ಮುಗುಳ್ನಗೆ ಹಾಗೂ ಒಂದು ಮೃದುಮಾತು ನಿನಗೇನೂ ಖರ್ಚಾಗುವುದಿಲ್ಲ.

ಆದರೆ ಅದೇ ನನಗೆ ಬಹಳಷ್ಟು ಸಹಾಯಕವಾಗಬಹುದು" ಎನ್ನುವುದು ಕೆಲಸ ಮಾಡುವಂತೆ ತೋರಿತು. ಕಾರಣ ನಾನು ಹಳ್ಳಿಯವರ ಜೊತೆ ಒಳ್ಳೆಯ ಸ್ನೇಹದಲ್ಲಿ ವ್ಯವಹರಿಸಿದ್ದೆ ಹೋಟೆಲ್‌ನ ಆಡಳಿತ ಮಂಡಳಿಯ ಜೊತೆ, ಸಿಬ್ಬಂದಿಯ ಜೊತೆ ಅಂತೆಯೇ ನನ್ನ ಬಹುಬೇಡಿಕೆಯ ಪ್ರವಾಸಿಗಳ ಜೊತೆ.

ಕೊನೆಯ ಪ್ರವಾಸಿಗರು ಅಲ್ಲಿಂದ ಹೊರಟನಂತರ ನಟ್ ಹಾಗೂ ನನಗೆ ಮುಗಿಯುತ್ತಿದ್ದ ಋತುವಿನ ಕೊನೆಯ ವ್ಯವಸ್ಥೆಗಳನ್ನು ಮಾಡಲು ಕೆಲವು ದಿವಸಗಳು ಉಳಿದಿದ್ದವು. ನಾವು ಹೊರಡಲು ಅಣಿಯಾಗುತ್ತಿದ್ದಂತೆ ಹಳ್ಳಿಯವರು ನಮಗಾಗಿ ಒಂದು ಸಂತೋಷ ಕೂಟವನ್ನೇರ್ಪಡಿಸಿದರು. ಇದು ನಮಗೆ ಭಾರೀ ಸಂತೋಷವನ್ನು ನೀಡಿತು. ಅವರ ವಿಧೇಯತೆಯನ್ನು ಪ್ರಶ್ನಿಸುವಂತಾದುದಕ್ಕೆ ನಮಗೆ ತಪ್ಪಿತಸ್ಥ ಮನೋಭಾವ ಉಂಟಾಯಿತು. ಹೀಗಾದರೂ, ಆ ಇಡೀ ಬೇಸಿಗೆಯಲ್ಲಿ ಯಾರೂ ಯುದ್ಧದ ಬಗೆಗೆ ಮಾತೆತ್ತದ ಕಾರಣ ನಮ್ಮ ನಮ್ಮ ಕಲ್ಪನೆಗಳು.

ಸೂರ್ಯನಿಂದಾಗಿ ಕಂದು ಬಣ್ಣದವಳಾಗಿ ನಾನು ಮನೆಗೆ ಹಿಂದಿರುಗಿದೆ. ಸಾಕಷ್ಟು ಹಣ ಸಂಪಾದಿಸಿದ್ದಕ್ಕಾಗಿ ನನ್ನ ಬಗೆಗೆ ನಾನೇ ಸುಪ್ರೀತಳಾದೆ. ಈಗ ನಾನು ಸಂಜೆಯ ತರಗತಿಗಳಲ್ಲಿ ಬೋಧಿಸಬೇಕಿರಲಿಲ್ಲ. ಇದು ನಾನು ನನ್ನದೇ ವ್ಯಾಸಂಗದತ್ತ ಗಮನ ಕೇಂದ್ರೀಕರಿಸಲು ಸಹಕರಿಸಿತು. ನಾನು ನನ್ನ ಪುಸ್ತಕಗಳಲ್ಲಿ ಮುಳುಗಿದೆ. ನನ್ನ ಪ್ರಬಂಧಗಳ ಮೇಲೆ ಶ್ರಮ ಮಾಡುತ್ತಾ ಗ್ರಂಥಾಲಯದಲ್ಲಿ ನನ್ನ ದಿನಗಳನ್ನು ಆಸ್ವಾದಿಸಿದೆ.

ಆ ಕ್ರಿಸ್‌ಮಸ್‌ನಲ್ಲಿ ನಾನು ಆಸ್ಟ್ರಿಯಾದ ನನ್ನ ಸಂಪರ್ಕಗಳನ್ನುಪಯೋಗಿಸಿ ಕೊಂಡು, ವಿದ್ಯಾರ್ಥಿಗಳ ಸ್ಕೀಯಿಂಗ್ ಪ್ರವಾಸವನ್ನು ವ್ಯವಸ್ಥೆಗೊಳಿಸಲು ನಿರ್ಧರಿಸಿದೆ. ನಾನು ಬೇಸಗೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರಯಾಣ ಮಾಧ್ಯಮವು ಚಳಿಗಾಲದ ರಜಾದಿನಗಳ ಪ್ರವಾಸವನ್ನು ಪ್ರಸ್ತಾವಿಸುತ್ತಿರಲಿಲ್ಲ. ಆದ್ದರಿಂದ ಈಗ ನನಗೆ ಒಂದು ವಿರಾಮವನ್ನು ತೆಗೆದುಕೊಳ್ಳಲು ಹಾಗೂ ಸ್ವಲ್ಪ ಹೆಚ್ಚಿನ ಹಣವನ್ನು ಸಂಪಾದಿಸಲು ಇದೊಂದು ಒಳ್ಳೆಯ ಅವಕಾಶವೆನ್ನಿಸಿತು. ವಿಶ್ವವಿದ್ಯಾನಿಲಯದ ಆವರಣದಲ್ಲಿ ಪೋಸ್ಟರುಗಳನ್ನು ಅಂಟಿಸಿದೆ. ಬಹಳ ಬೇಗನೇ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಜನ ನೋಂದಣಿಗೆ ಬಂದರು. ಕೊನೆಗೆ ಇಪ್ಪತ್ತೈದು ವಿದ್ಯಾರ್ಥಿಗಳನ್ನು ತೆಗೆದುಕೊಂಡು ನೋಂದಣಿ ನಿಲ್ಲಿಸಿದೆ. ನಾವು ಅಲ್ಲಿಗೆ ಹೋದಾಗ ಬಹಳ ಹಿಂದಿನಿಂದಲೂ ಪರಿಚಯವಿರುವ ಗೆಳತಿಯಂತೆ ನನ್ನನ್ನು ಸ್ವಾಗತಿಸಲಾಯಿತು. ಅದು ನನಗೆ ಸ್ವಾಗತಾರ್ಹವೂ ಆಗಿದ್ದಿತು. ನಟ್‌ನೂ ಸಹ ತನ್ನ ಒಂದು ಪ್ರವಾಸಿಗರ ಗುಂಪಿನೊಡನೆ ಅಲ್ಲಿದ್ದ. ನಾವೆಲ್ಲ ಒಟ್ಟಾಗಿ ಕಾಲ್ಪನಿಕ ಕಥೆಗಳಲ್ಲಿ ಕ್ರಿಸ್‌ಮಸ್‌ನ್ನು ಆಚರಿಸಿದೆವು. ಹಳ್ಳಿಯು ಮಂಜಿನಿಂದ ಆವೃತವಾಗಿದ್ದಿತು. ಸುತ್ತ ಮುತ್ತಲೂ ತಿರುಗಾಡಲು ಇದ್ದ ಒಂದೇ ದಾರಿಯೆಂದರೆ, ಪಕ್ಕದಲ್ಲಿ ಕಿಣಿಕಿಣಿ ಎನ್ನುವ ಪುಟ್ಟ ಗಂಟೆಗಳನ್ನು ಕುದುರೆಗೆ

ಕಟ್ಟಿದ್ದ ಗಾಲಿ ಇಲ್ಲದ ಗಾಡಿಗಳು ಸ್ಲೆಡ್ಜ್‌ಗಳು. ಕ್ರಿಸ್‌ಮಸ್ ಹಿಂದಿನ ದಿನ ಮಧ್ಯರಾತ್ರಿಯ ಪ್ರಾರ್ಥನೆಗಾಗಿ ನಾವೆಲ್ಲರೂ ಸ್ಥಳೀಯ ಚರ್ಚ್‌ನಲ್ಲಿ ಕಿಕ್ಕಿರಿದು ಸೇರಿಕೊಂಡೆವು. ಹೊಸ ವರ್ಷದ ಹಿಂದಿನ ದಿನ ಒಂದು ದೊಡ್ಡ ಔತಣಕೂಟವನ್ನು ಏರ್ಪಡಿಸಿದೆವು. ಎರಡು ವಾರಗಳು ವೇಗದಲ್ಲಿ ಕಳೆದುಹೋದವು. ನಾನು ಇದನ್ನು ಬಹಳವೇ ಆಸ್ವಾದಿಸಿದ್ದೆನಾದ್ದರಿಂದ, ನನ್ನ ಮೊದಲ ಪ್ರವಾಸ ಸಾಹಸದಲ್ಲಿ ಸ್ವಲ್ಪ ಚೆನ್ನಾಗಿಯೇ ಹಣವನ್ನು ಮಾಡಿಕೊಂಡಿದ್ದರಿಂದ, ಮುಂದಿನ ವರ್ಷವೂ ಹೀಗೆಯೇ ಮತ್ತೊಂದು ಪ್ರವಾಸವನ್ನು ಏರ್ಪಡಿಸುತ್ತೇನೆಂದು ಮಾತುಕೊಟ್ಟೆ.

ನಾನು ವಾಪಸಾದ ನಂತರ ಪ್ರಯಾಣ ಮಾಧ್ಯಮದಿಂದ ನನಗೊಂದು ಪತ್ರ ಬಂದಿತು. ಹೋಟೆಲ್ ಫೋರ್ಸ್ಟ್‌ನ ಆಡಳಿತ ವರ್ಗದವರು ನಾನು ನನ್ನಷ್ಟಕ್ಕೇ ಒಂದು ಪ್ರವಾಸವನ್ನು ವ್ಯವಸ್ಥೆ ಮಾಡಿದ್ದೆನೆಂದು ಅವರಿಗೆ ತಿಳಿಸಿದ್ದರು. ಅದರಿಂದಾಗಿ ನನ್ನ ಸೇವೆಯು ಇನ್ನು ಮುಂದೆ ಅವರಿಗೆ ಬೇಕಾಗಿಲ್ಲವೆಂದು ಅವರು ನನಗೆ ತಿಳಿಸಿ ಬರೆದಿದ್ದರು. ಇದನ್ನು ಓದಿದಾಗ ನನಗೆ ಸಿಟ್ಟು ನೆತ್ತಿಗೇರಿತು. ಇದು ಬಹಳ ಅನ್ಯಾಯವಾಗಿ ತೋರಿತು. ನಾನೇನು ಅವರ ಯಾವುದೇ ವ್ಯವಹಾರವನ್ನು ಅವರಿಂದ ಕಿತ್ತು ಕೊಂಡಿರಲಿಲ್ಲ. ಅವರೊಡನೆ ವಾದ ಮಾಡುವುದು ನಿರರ್ಥಕವಾಗಿದ್ದಿತು. ಆದರೆ ಆಮೇಲೆ ಬಹಳ ಬೇಗನೇ ಇನ್ನೊಂದು ಏಜೆನ್ಸಿಯಿಂದ ನನಗೆ ಬರಲಿರುವ ಬೇಸಿಗೆಯಲ್ಲಿ ಕೊರಿಯರ್ ಕೆಲಸ ಮಾಡುವ ಆಹ್ವಾನ ಬಂದಿತು. ನನ್ನ ಮುಂದಿನ ಬೇಸಗೆಯ ಕೆಲಸ ಹಿಂದಿನದಕ್ಕಿಂತಲೂ ಬಲು ಹೆಚ್ಚು ಶ್ರಮದಾಯಕವಾಗಿದ್ದಿತು. ಈ ಸಾರಿ ನಾನು ಪ್ರವಾಸಿಗರನ್ನು ವಿಶೇಷ ರೈಲುಗಳಲ್ಲಿ ಆಸ್ಟ್ರಿಯಾ ಮತ್ತು ಜರ್ಮನಿಯ ಮೂಲಕ ಕರೆದೊಯ್ದು, ದಾರಿಯಲ್ಲಿ ಅಲ್ಲಲ್ಲಿ ಸ್ವಲ್ಪ ಕಾಲ (ಸಮಯ) ನಿಂತು ಹೋಗಬೇಕಿತ್ತು. ಇದರಿಂದಾಗಿ ನಾನು ಅವಿರತವಾಗಿ ಪ್ರಯಾಣಿಸುತ್ತಲೇ ಇದ್ದೆ. ಮತ್ತು ಆ ಋತುವಿನ ಕೊನೆಯಲ್ಲಿ ನಾನು ಬಹಳವೇ ಆಯಾಸ ಗೊಂಡಿದ್ದೆ. ನನ್ನ ಕಠಿಣ ಪರಿಶ್ರಮವನ್ನು ಗುರುತಿಸಿ ನನಗೆ ಕೆಲಸ ಕೊಟ್ಟವರು ವಿಯೆನ್ನಾದಲ್ಲಿ ಒಂದು ವಾರದ ರಜೆಯನ್ನು ಕಳೆಯುವ ಅವಕಾಶ ನೀಡಿ ಸತ್ಕರಿಸಿದರು. ಅವರ ಈ ಪ್ರಸ್ತಾಪವನ್ನು ನಾನು ಒಪ್ಪಲೇಬೇಕು ಎನ್ನುವುದು ನನಗೆ ಖಚಿತವಾಗಿರಲಿಲ್ಲ. ಆದರೆ ಆನಂತರ ಬಹಳ ಬೇಗನೇ ೧೯೫೨ರ ಸೆಪ್ಟೆಂಬರ್‌ನ ಒಂದು ದಿನ ಬೆಳಿಗ್ಗೆ ನಾನು ಮತ್ತೆ ವಿಯೆನ್ನಾದಲ್ಲಿದ್ದೆ.

ನಾನು ಹದಿನಾಲ್ಕು ವರ್ಷಗಳ ಹಿಂದೆ ವಿಯೆನ್ನಾವನ್ನು ಬಿಟ್ಟ ನಂತರ ಆ ನಗರಕ್ಕೆ ಏನಾಯಿತು, ಅದರ ಜನಕ್ಕೆ ಏನಾಯಿತು ಎನ್ನುವುದನ್ನು ನೋಡಲು ಉತ್ಸುಕಳಾಗಿದ್ದೆ. ನಾನು ತಿಳಿದಿದ್ದ ಬೆಳಗುತ್ತಿದ್ದ ವಿಯೆನ್ನಾಗಿಂಥ ಅದೀಗ ಬಹಳ ಬದಲಾದ ಭಿನ್ನವಾದ ನಗರವಾಗಿದೆ ಎನ್ನಿಸಿತು. ಅದು ಇನ್ನೂ ಮಿತ್ರರಾಷ್ಟ್ರಗಳ ಹಿಡಿತದಲ್ಲೇ ಇದ್ದು, ತುಚ್ಛವಾಗಿ ಮಾತಾಡಲ್ಪಟ್ಟಿದ್ದು ಜಡವಾಗಿ ಹೋಗಿತ್ತು.

ಸುಂದರವಾದ ಅಂಗಡಿಗಳು, ಸಭ್ಯ ಸಂಸ್ಕೃತಿಯ ನಾಗರಿಕರು ಹೊರಟುಹೋಗಿದ್ದರು. ಅಧಿಕೃತ ಕಟ್ಟಡಗಳು ಹಾಗೂ ಖಾಸಗಿ ಗೃಹ ಸಮುಚ್ಚಯ ವಿಭಾಗಗಳು ಅಂತೆಯೇ ಮನೆಗಳು ಮುರಿದುಬೀಳುವ ಸ್ಥಿತಿಯಲ್ಲಿದ್ದವು. ಅವುಗಳಿಗೆ ತುರ್ತಾಗಿ ದುರಸ್ತಿಯ ಅವಶ್ಯಕತೆ ಇದ್ದಿತು. ವಿಯೆನ್ನಾವು ಯುದ್ಧದಲ್ಲಿ ತೊಂದರೆಗೊಳಗಾಗದೆ ಬದುಕುಳಿಯಲು ಸಾಧ್ಯವಾಗಿಲ್ಲ ಎನ್ನುವ ವಾಸ್ತವದಲ್ಲಿ ನಾನು ಶಾಂತಿಯನ್ನು ಕಂಡುಕೊಂಡೆ. ನಾನು ಕಣ್ಣಾರೆ ಕಂಡ ಬವಣೆಗಳ ಗುರುತುಗಳನ್ನು, ದೌರ್ಜನ್ಯದ ವಿರುದ್ಧವಾಗಿ ಪ್ರತೀಕಾರವನ್ನು ನಾನು ಚುರುಕಾಗಿ ಹುಡುಕುತ್ತಿದ್ದೆ. ನ್ಯಾಯವನ್ನು ಸಲ್ಲಿಸಲಾಗಿದೆಯೇ ಎಂದು ಕಾಣುವುದು ನನಗೆ ಬೇಕಿತ್ತು.

ನಾನು ವಿಯೆನ್ನಾದಲ್ಲೇ ಬೆಳೆದೆನಾದರೂ, ನಾನು ಭೇಟಿ ನೀಡಬೇಕಾದವರು ಯಾರೂ ಅಲ್ಲಿರಲಿಲ್ಲ. ಅಥವಾ ನನ್ನನ್ನು ಕಾಣಬರುವವರೂ ಅಲ್ಲಿರಲಿಲ್ಲ ಎನ್ನುವುದು ವಿಚಿತ್ರವಾಗಿತ್ತು. ಅಲ್ಲಿ ಯಾರೂ ಇರಲಿಲ್ಲ; ಒಂದು, ಅವರುಗಳು ಅಲ್ಲಿಂದ ತಪ್ಪಿಸಿಕೊಂಡು ಪ್ರಪಂಚದಲ್ಲಿ ಚದುರಿಹೋಗಿರಬಹುದು ಅಥವಾ ಕಾನ್ಸನ್ಟ್ರೇಷನ್ ಕ್ಯಾಂಪುಗಳಲ್ಲಿ ಅವರುಗಳು ಸತ್ತುಹೋಗಿದ್ದಿರಬಹುದು. ನಾನು ಸಲ್ಲಿಸುತ್ತಿರುವ ಪ್ರಬಂಧಕ್ಕಾಗಿ ಮಾಹಿತಿಯನ್ನು ಸಂಗ್ರಹಿಸುತ್ತಾ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಸ್ವಲ್ಪ ಸಮಯ ಕಳೆದೆ. ಈ ಪ್ರಬಂಧವು ಯುದ್ಧಾನಂತರದ ಆಸ್ಟ್ರಿಯಾದ ಹಣದ ಸುಧಾರಣೆಗಳ ಮೇಲೆ ಕೇಂದ್ರೀಕೃತವಾಗಿತ್ತು. ಯಾವುದನ್ನು ಒಬ್ಬ ಹುಡುಗಿಯು ಪೂಜ್ಯ ಭಾವದಿಂದ ಕಾಣುತ್ತಿದ್ದಳೋ ಅವಳಿಂದ ಭಿನ್ನವೇ ಆದ ಮಹಿಳೆಯೊಬ್ಬಳು ಆ ಗ್ರಂಥಾಲಯದ ಮೆಟ್ಟಿಲುಗಳನ್ನು ಹತ್ತಿ ಬಂದಿದ್ದಳು. ಒಂದು ವೇಳೆ ನನ್ನ ಬದುಕು ಅಷ್ಟು ಕ್ರೂರವಾಗಿ ಅಸ್ತವ್ಯಸ್ತವಾಗಿರದಿದ್ದರೆ ಇಂದು ಏನಾಗಿರುತ್ತಿತ್ತು ಎಂದು ನಾನು ವಿಸ್ಮಿತಳಾದೆ. ನಾನು ಒಬ್ಬ ವೈದ್ಯಳಾಗುತ್ತಿದ್ದೆನೇ? ವಿಲ್ಲಿಯನ್ನು ಮದುವೆಯಾಗಿರುತ್ತಿದ್ದೆನೇ? ಮೆಟ್ಟಿಲುಗಳ ಮೇಲೆ ಕುಳಿತು ನಾನು ನನ್ನ ಕಳೆದುಹೋದ ಬಾಲ್ಯಕ್ಕಾಗಿ ಅಳಲು ಪ್ರಾರಂಭಿಸಿದೆ. ನಾನು ನನ್ನ ಜೀವನದಲ್ಲಿ ಏನನ್ನೇ ಮಾಡಿದರೂ ನಾನೆಂದೂ ಆ ವರ್ಷಗಳನ್ನು ಮತ್ತೆ ಗೆದ್ದು ತರಲಾರೆ. ಪ್ರತೀಕಾರಕ್ಕಾಗಿ ನನ್ನ ಹೆಚ್ಚಿನ ದ್ವೇಷ ಮತ್ತು ಆಸೆ ವ್ಯರ್ಥವಾಗಿ ಹೋದವಳಾಗಿ ನಾನು ವಿಯೆನ್ನಾದಿಂದ ಮನೆಗೆ ಹಿಂದಿರುಗಿದೆ. ಏನಾಗಿದ್ದಿತೋ ಅದನ್ನು ನಾನು ಬದಲಿಸಲಾರೆ ಎಂದು ನನಗೆ ತಿಳಿದಿತ್ತು. ಆದರೆ, ನನ್ನ ಅದೃಷ್ಟವು ಮಾತ್ರ ಈಗ ನನ್ನ ಕೈಯಲ್ಲೇ ಇದೆ ಎಂಬುದೂ ನನಗೆ ಗೊತ್ತಿತ್ತು.

ನಾನು ಮನೆಗೆ ಬಂದಾಗ ಅಮ್ಮ-ಅಪ್ಪ ಇಬ್ಬರೂ ನನ್ನನ್ನು ನೋಡಲು ಉದ್ವೇಗಭರಿತರಾಗಿದ್ದರು. ಓಟ್ಟೊ ಭೇಟಿಯಾಗಲು ಬರುತ್ತಿದ್ದಾನೆ ಎಂಬ ಸಂತೋಷದ ಸುದ್ದಿಯನ್ನು ನನಗೆ ಕೊಡಲು ಅವರಿಗೆ ಕಾಯುವುದು ಸಾಧ್ಯವಿರಲಿಲ್ಲ. ಹದಿಮೂರು ವರ್ಷಗಳಲ್ಲಿ ನಾನು ನನ್ನ ಸೋದರನನ್ನು ನೋಡಿರಲಿಲ್ಲ. ಆ ಸಮಯದಲ್ಲಿ

ಅವನು ಮದುವೆಯಾಗಿದ್ದ ಹಾಗೂ ವಿಚ್ಛೇದಿತನೂ ಆಗಿದ್ದ. ಯುದ್ಧದಿಂದ ದೂರವಾಗಿ, ಸೆಮಿಟಿಸಂ ವಿರೋಧದಿಂದ ದೂರವಾಗಿ ತಂದೆ–ತಾಯಿಗಳನ್ನು ನೋಡಿಕೊಳ್ಳಲು ನನ್ನನ್ನು ಬಿಟ್ಟು ತಾನು ಮಾತ್ರ ಹೊಸ ಜೀವನವನ್ನು ಪ್ರಾರಂಭ ಮಾಡಿದ್ದಕ್ಕೆ ನಿಜಕ್ಕೂ ನಾನೇನೂ ಅವನನ್ನು ಎಂದೂ ಕ್ಷಮಿಸಿರಲಿಲ್ಲ. ಆದರೆ, ಈಗಲೂ ನಾನು ಅವನನ್ನು ನನ್ನ ಆದರ್ಶ ವ್ಯಕ್ತಿಯನ್ನಾಗಿಯೇ ನೋಡುವುದು. ನಾನು ಒಂದು ಉಭಯ ಸಂಕಟದಲ್ಲಿದ್ದಾಗ 'ಓಟ್ಟೊ ಏನು ಮಾಡುತ್ತಿದ್ದ?' ಎಂದೇ ಈ ಎಲ್ಲ ವರ್ಷಗಳಲ್ಲೂ ಇಂದಿಗೂ ನಾನು ನನ್ನನ್ನೇ ಪ್ರಶ್ನಿಸಿಕೊಳ್ಳುವುದು. ಅವನು ಬರುವ ದಿನವು ಹತ್ತಿರವಾದಂತೆ ನಾನು ಹೆಚ್ಚಾಗಿಯೇ ಉದ್ವೇಗಕ್ಕೊಳಗಾದೆ. ಅವನು ಹೇಗೆ ಬದಲಾಗಿರಬಹುದು ಎಂದು ಅಚ್ಚರಿಪಡುತ್ತಿದ್ದೆ. ಕೊನೆಗೆ ಆ ದಿನದ ಬೆಳಗಾಯಿತು. ಅಪ್ಪ ಮತ್ತು ಕರ್ಟ್, ಓಟ್ಟೊವನ್ನು ವಿಮಾನ ನಿಲ್ದಾಣದಲ್ಲಿ ಭೇಟಿಯಾಗಲು ಲಂಡನ್‌ಗೆ ಹೋದರು. ಅವರೆಲ್ಲರೂ ಒಟ್ಟಾಗಿ ಮ್ಯಾಂಚೆಸ್ಟರ್‌ಗೆ ಹಾರಿ ಬಂದರು. ಓಟ್ಟೊವು ತನ್ನ ಉಪನಾಮವನ್ನು 'ಗ್ರನ್‌ವಾಲ್ಡ್'ನಿಂದ ಇಂಗ್ಲಿಷ್ ಶೈಲಿಯ 'ಗ್ರಾಂಟ್'ಗೆ ಬದಲಾಯಿಸಿಕೊಂಡಿದ್ದ. ಕರ್ಟ್‌ನೂ ಸಹ ತನ್ನ ಹೆಸರನ್ನು 'ಗ್ರೀನ್ ವುಡ್' ಎಂದು ಬದಲಿಸಿಕೊಂಡಿದ್ದ. ಹೀಗೆ ಅಪ್ಪ ಬೇರೆ ಬೇರೆ ಉಪನಾಮ ಹೊಂದಿದ್ದ ತನ್ನ ಇಬ್ಬರು ಮಕ್ಕಳೊಡನೆ ಪ್ರಯಾಣ ಮಾಡುತ್ತಿದ್ದ. ಇದು ನನಗೆ ವಿನೋದವಾಗಿ ಕಾಣಿಸಿತು. ಅಮ್ಮ ಮತ್ತು ನಾನು ಅವರುಗಳನ್ನು ಮ್ಯಾಂಚೆಸ್ಟರ್ ವಿಮಾನ ನಿಲ್ದಾಣದಲ್ಲಿ ಸಂಧಿಸಿದೆವು. ಅಲ್ಲಿ ನಮ್ಮದೊಂದು ಭಾವೋದ್ವೇಗದ ಪುನರ್ಮಿಲನವಾಗಿತ್ತು.

ಓಟ್ಟೊ ಮತ್ತು ನಾನು ಇಂಗ್ಲೆಂಡ್‌ನ ಪ್ರವಾಸ ಮಾಡುತ್ತಾ ಕೆಲವು ದಿವಸಗಳನ್ನು ಕಳೆಯಬೇಕೆಂದು ವ್ಯವಸ್ಥೆ ಮಾಡಿಕೊಂಡೆವು. ನಮ್ಮ ನಡುವಿನ ಬಿಗಿಬಂಧನವನ್ನು ಮತ್ತೆ ಕೂಡಿಸಿಕೊಳ್ಳಲು ನಮಗೆ ಸಾಧ್ಯವಾಯಿತು. ಅವನು ಸಿಡ್ನಿಯಲ್ಲೀಗ ಹವ್ಯಾಸಿ ನಟನಾಗಿದ್ದ. ಶೇಕ್ಸ್‌ಪಿಯರ್‌ನ ವಿವಿಧ ಪಾತ್ರಗಳಲ್ಲಿ ಲಾರೆನ್ಸ್ ಒಲಿವಿಯರ್‌ನನ್ನು ಅದ್ಭುತವಾಗಿ ಅನುಕರಣೆ ಮಾಡುತ್ತಿದ್ದ. ಏವ್ ನದಿಯ ಮೇಲಿನ ಸ್ಟ್ರ್ಯಾಟ್‌ಫರ್ಡ್‌ನಲ್ಲಿ 'ರೋಮಿಯೋ ಮತ್ತು ಜೂಲಿಯಟ್' ನಾಟಕವನ್ನು ನೋಡಲು ಹೋದೆವು. ನಾಟಕ ಮಂದಿರದಲ್ಲಿ ಟಿಕೆಟುಗಳು ಪೂರ್ತಿ ಮಾರಾಟವಾಗಿ ಮಂದಿರವು ಭರ್ತಿಯಾಗಿದ್ದರೂ, ಕೊನೆಯಲ್ಲಿ ವಿಐಪಿ ಸೀಟುಗಳನ್ನು ಪಡೆಯುವ ವ್ಯವಸ್ಥೆ ಮಾಡಿಕೊಂಡೆವು. ಅಪರಾಧದಲ್ಲಿ ನಾವಿಬ್ಬರೂ ಪರಿಪೂರ್ಣ ಜೊತೆಗಾರರು. ನಾವಿಬ್ಬರೂ ಒಟ್ಟಿಗಿದ್ದ ಸಮಯವು ಬಹಳ ಬೇಗನೆ ಮುಗಿದುಹೋದರೂ ಓಟ್ಟೊವು ಮತ್ತೊಮ್ಮೆ ನನ್ನ ಬದುಕಿನ ಅಭಿನ್ನ ಭಾಗವಾದ.

ಓಟ್ಟೊನ ನಿರ್ಗಮನದ ನಂತರ ವಿಶ್ವವಿದ್ಯಾ ನಿಲಯದಲ್ಲಿ ನಾನು ನನ್ನ ಕೊನೆಯ ವರ್ಷದ ಓದಿಗೆ ತೊಡಗಿಕೊಂಡೆ. ವಸಂತ ಕಾಲದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ನೇಮಕಾತಿಗಳ ಮಂಡಳಿಯು ಅತ್ಯುತ್ತಮ ಶ್ರೇಣಿಗಳನ್ನು

ಪಡೆಯುವ ನಿರೀಕ್ಷೆಯುಳ್ಳ ವಿದ್ಯಾರ್ಥಿ ಗಳಿಗಾಗಿ ಸಂದರ್ಶನಗಳನ್ನು ಏರ್ಪಡಿಸಿತು. ಹಾಗೆ ಆಯ್ದುಕೊಂಡ ಕೆಲವೇ ವಿದ್ಯಾರ್ಥಿಗಳಲ್ಲಿ ನಾನೂ ಇದ್ದೇನೆ ಎಂದು ತಿಳಿದಾಗ ನಾನು ರೋಮಾಂಚನ ಗೊಂಡೆ. ಹೀಗೆ ಆಯ್ಕೆಯಾದವರನ್ನು ಆಹ್ವಾನಿಸಿ ಸಂದರ್ಶನಗಳನ್ನು ನಡೆಸಲು ಅನೇಕ ದೊಡ್ಡ ದೊಡ್ಡ ಬ್ರಿಟಿಷ್ ಸಂಸ್ಥೆಗಳು ಬರುವವಿದ್ದವು. ಅರ್ಥಶಾಸ್ತ್ರದ ವಿದ್ಯಾರ್ಥಿಗಳು ವ್ಯವಸ್ಥಾಪಕ ಹಾಗೂ ಕಾರ್ಯಕಾರಿ ಸ್ಥಾನಗಳಿಗೆ ಅತ್ಯುತ್ತಮ ವರ್ಧಿಷ್ಣುವಾದ ಭರವಸೆಗೆ ಅವಕಾಶವೀಯುವ ಅಭ್ಯರ್ಥಿಗಳಾಗಬಲ್ಲರು ಎಂದು ಅವರು ನಂಬಿದಂತೆ ಕಾಣುತ್ತಿತ್ತು. ಒಬ್ಬ ಪ್ರೌಢ ವಿದ್ಯಾರ್ಥಿಯಾಗಿ ಯಂತ್ರಾಗಾರದ ಅನುಭವವುಳ್ಳ, ಕೈಗಾರಿಕಾ ಆಡಳಿತದಲ್ಲಿ ಒಂದು ಡಿಪ್ಲೊಮಾ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಇನ್ನೊಂದು ಡಿಪ್ಲೊಮಾ ಪಡೆದ ನಾನು, ಅವರಿಗೆ ವಿಶೇಷವಾಗಿ ಆಕರ್ಷಣೀಯ ಅಭ್ಯರ್ಥಿಯಾಗಿದ್ದೆ. ನನ್ನ ಅಂತಿಮ ಪರೀಕ್ಷೆಯ ಫಲಿತಾಂಶದ ಮೇಲೆ ಅವಲಂಬಿಸಿದ, ಅನೇಕ ನಿರ್ಬಂಧಿತ ಪ್ರಸ್ತಾವಗಳನ್ನು ನಾನು ಪಡೆದೆನಾದರೂ ಅವುಗಳಲ್ಲಿ ಒಂದು ಬಹಳ ಸೂಕ್ತವಾದದ್ದು ಎಂದು ಯೋಚಿಸಿದೆ. ಅದು ಜಾನ್ ಲೀವೀಸ್ ಪಾರ್ಟ್ನರ್‌ಶಿಪ್‌ನಿಂದ ಬಂದಿದ್ದು, ಅವರು ತಮ್ಮ ಓರ್ವ ಖರೀದಿಗಾರನಾಗಿ, ಒಂದು ಪ್ರಶಿಕ್ಷಣಾರ್ಥಿ ಹುದ್ದೆಯನ್ನು (ಟ್ರೇನೀ ಪೋಸ್ಟ್) ನನ್ನ ಮುಂದಿಟ್ಟಿದ್ದರು. ಹಿಂದೆಂದೂ ನಾನು ಸಂಪಾದಿಸದಷ್ಟು ಹೆಚ್ಚು ಸಂಬಳ, ಅಂತೆಯೇ ಅದರ ಪ್ರತೀಕ್ಷೆಗಳೂ ಒಳ್ಳೆಯದಾಗಿದ್ದವು. ಒಂದು ಸುಂದರವಾದ ಸೂಟಿನಲ್ಲಿ, ಸ್ಪೋರ್ಟ್ಸ್ ಕಾರೊಂದನ್ನು ನಡೆಸುತ್ತಾ, ಸರಬರಾಜುದಾರರ ಜೊತೆ ಸಭೆಗಳಿಗೆ ಹೋಗಿ, ಜಾಗರೂಕತೆಯಿಂದ ಉತ್ಪಾದನೆಯ ಹಾದಿಗಳನ್ನು ಎತ್ತಿಕೊಳ್ಳುವ ನನ್ನದೇ ಚಿತ್ರವು ನನ್ನ ಕಣ್ಣಳ ಮುಂದೆ ತಿರುಗಿತು. ನನ್ನ ಭವಿಷ್ಯದ ಬಗೆಗೆ ವಿಶ್ವಾಸ ಹೊಂದುತ್ತ, ಹೆಚ್ಚಿನ ಶಕ್ತಿಯೊಡನೆ ನಾನು ನನ್ನ ಪುಸ್ತಕಗಳ ಮೇಲೆ ಮುಗಿಬಿದ್ದೆ ಆಕ್ರಮಣ ಮಾಡಿದೆ. ನಾನು ವಿಶ್ವವಿದ್ಯಾಲಯದ ನನ್ನ ದಿನಗಳಿಗೆ ಶುಭ ವಿದಾಯ ಹೇಳಿ, ನಿಜವಾದ ಜಗತ್ತಿನಲ್ಲಿ ನನ್ನ ಬದುಕನ್ನು ಪ್ರಾರಂಭಿಸಲು ಸಿದ್ಧಳಾದೆ.

* * * *

# ೯. ಅಡೆತಡೆಯ ಓಟ

೧೯೫೩ರ ಮೇ ತಿಂಗಳ ಮೊದಲ ಭಾನುವಾರದಂದು, ನಾನು ನನ್ನ ಮುಂದೆ ಹರಡಿಕೊಂಡಿದ್ದ ಉಪನ್ಯಾಸದ ನೋಟ್ಸ್‌ಗಳ ರಾಶಿಯಿಂದ ಓದಿದ್ದನ್ನು ಮೆಲುಕುಹಾಕಲು, ಪರಿಷ್ಕರಿಸಿ ತಿದ್ದಲು ಪ್ರಯತ್ನಿಸುತ್ತಾ ಕುಳಿತಿದ್ದೆ. ನನ್ನ ಅಂತಿಮ ಪರೀಕ್ಷೆಗಳು ಪ್ರಾರಂಭವಾಗಲು ಕೇವಲ ಒಂದೇ ವಾರ ಉಳಿದಿದ್ದಿತು. ನನಗೆ ಸ್ವಲ್ಪ ಚಳಿಯಾಗುತ್ತಿದ್ದಂತೆ ಭಾಸವಾದ ಕಾರಣ, ಅಪ್ಪನು ನನಗಾಗಿ ಮಾಡಿಕೊಟ್ಟಿದ್ದ ವಿದ್ಯುತ್ ಹೀಟರ್‌ನ್ನು ನಾನು ಸ್ವಿಚ್ ಹಾಕಿ ಹೊತ್ತಿಸಿದೆ. ತಾನು ಕೆಲಸ ಮಾಡುತ್ತಿದ್ದ ಎಲೆಕ್ಟ್ರಿಕ್ ಇಂಜಿನಿಯರಿಂಗ್ ಕಂಪನಿಯಿಂದ ಹೀಟರ್‌ಗೆ ಬೇಕಾದ ಸಾಮಾನುಗಳನ್ನು ಕಲೆಹಾಕಿ, ಅದನ್ನು ಒಂದು ಸತುವಿನ ಹಾಳೆಗೆ ಸ್ಕ್ರೂ ಹಾಕಿ ಕೂರಿಸಿದ್ದ ಅಪ್ಪ, ಅದಕ್ಕೊಂದು ಕಾನೂನಿನನ್ವಯ ಹಾಕಬೇಕಾದ ರಕ್ಷಣಾ ಪ್ರತಿಬಂಧವನ್ನು ಹಾಕುವ ಗೋಜಿಗೂ ಹೋಗದೆ, ಹೀಟರನ್ನು ಸಿದ್ಧಪಡಿಸಿದ್ದ. ಮೊದಲೂ ಸಹ ನಾನು ಆ ಹೀಟರನ್ನು ಯಾವುದೇ ತೊಂದರೆ ಇಲ್ಲದೆ ಉಪಯೋಗಿಸಿದ್ದೆ. ನನಗಾಗಿ ಅದನ್ನು ತಯಾರಿಸುವ ತೊಂದರೆ ತೆಗೆದುಕೊಂಡದ್ದಕ್ಕಾಗಿ ಅಪ್ಪನಿಗೆ ನಾನು ಕೃತಜ್ಞಳಾಗಿದ್ದೆ. ಹಾಗಿದ್ದೂ, ಆ ದಿನ ನಾನು ನನ್ನ ನೋಟ್ಸನ್ನು ನೆಲದ ಮೇಲಿಂದ ತೆಗೆದುಕೊಳ್ಳಲು ತಿರುಗಿದಾಗ, ನನ್ನ ನೈಲಾನ್ ಉಡುಪಿನ ತುದಿಗೆ ಬೆಂಕಿ ಹತ್ತಿಕೊಂಡಿತು. ನನ್ನ ಪರಿಷ್ಕರಿಸಿದ ನೋಟ್ಸು ಹಾಳಾಗ ಬಹುದೆಂಬ ಚಿಂತೆಯಿಂದ ನಾನು ಸ್ನಾನದ ಮನೆಗೆ ಧಾವಿಸಿ ಬೆಂಕಿಯ ಜ್ವಾಲೆಯನ್ನು ಆರಿಸಲು ಏನಾದರೂ ಸಹಾಯಕ್ಕೆ ಬಂದೀತೆ ಎಂದು ನೋಡಿದೆ. ಹೇಗಾದರೂ ನನ್ನ ಕೋಣೆಯ ಬಾಗಿಲು ತೆಗೆಯುತ್ತಿದ್ದಂತೆಯೇ, ಇದ್ದಕ್ಕಿದ್ದಂತೆ ಆದ ಎಳೆಯುವಿಕೆಯಿಂದ ಬಾಗಿಲಿನ ಗಾಳಿ ಜೋರಾಗಿ ಬೀಸಿತು. ಕೆಲವು ಸೆಕೆಂಡುಗಳಲ್ಲೇ ನಾನು ಜ್ವಾಲೆಯಿಂದ ಸುತ್ತುವರಿದೆ. ನೋವು ಹಾಗೂ ಭಯದಿಂದ ನಾನು ಕಿರುಚಿಕೊಂಡೆ. ನನ್ನ ಕೂಗು ರಸ್ತೆಯುದ್ದಕ್ಕೂ ಹಲವು ಮನೆಗಳಿಗೆ ಕೇಳಿದ್ದಿತು ಎಂದು ಅನಂತರ ನಾನು ಅರಿತೆ.

ಮೆಟ್ಟಿಲ ತುದಿಯಲ್ಲಿ ಉರಿಯುತ್ತಿರುವ ಒಂದು ಸಂಕೇತ ಜ್ಯೋತಿಯಂತೆ ನಿಂತಿದ್ದ ನನ್ನನ್ನು ಕಂಡ ಕೂಡಲೇ, ಅಪ್ಪ ನನ್ನನ್ನು ರಕ್ಷಿಸಲು ಧಾವಿಸಿ ಬಂದರು. ನನ್ನ ಬಟ್ಟೆಗಳನ್ನು ಹರಿದು ಬಿಸಾಕಲು ಯತ್ನಿಸುತ್ತಿರುವಾಗಲೇ ಅವರು ಆಯತಪ್ಪಿ ಮೆಟ್ಟಿಲಿನಿಂದ ಕೆಳಗೆ ಬಿದ್ದರು. ಅದೃಷ್ಟವಶಾತ್ ಅಮ್ಮ ಅವರು ಬೀಳುವುದನ್ನು

ಮಧ್ಯದಲ್ಲೇ ತಡೆದಳು. ಮತ್ತೆ ಸೆಕೆಂಡುಗಳಲ್ಲೇ ಅವರು ನನ್ನ ಉಡುಪನ್ನು ಹರಿಯಲು ಪ್ರಾರಂಭಿಸಿದರು. ಅವರ ಕೈಗಳು ಕೆಳಗಿಳಿದವು. ಇದಾದ ಸ್ವಲ್ಪ ಹೊತ್ತಿನಲ್ಲೇ ಅವರು ನಗ್ನಳಾಗಿ, ನೋವಿನಿಂದ ಮರಗಟ್ಟಿಹೋಗಿ ನಿಂತಿದ್ದ ನನ್ನನ್ನು ಒಂದು ವಸ್ತ್ರದಲ್ಲಿ ಮೃದುವಾಗಿ ಸುತ್ತಿದ್ದರು. ಇಡೀ ಪ್ರಕರಣವು ಎಷ್ಟು ಹೊತ್ತು ಹಿಡಿಯಿತು ಎನ್ನುವ ಅಂದಾಜು ನನಗಿಲ್ಲ. ಅದೊಂದು ಅನಂತ ಕಾಲದಂತೆ ನನಗೆ ಭಾಸವಾಯಿತು. ಆದರೆ ಅದು ಕೇವಲ ಕೆಲವಾರು ನಿಮಿಷಗಳಲ್ಲಿ ನಡೆದಿರಬಹುದಷ್ಟೆ. ತುರ್ತು ಚಿಕಿತ್ಸಾವಾಹನವನ್ನು ಕರೆಯಲು ಯಾರಿಗೂ ತೋಚಲೇ ಇಲ್ಲ. ಆದ್ದರಿಂದ ಆಗ ನಾನೇ ಆಘಾತಗೊಂಡ ಸ್ಥಿತಿಯಲ್ಲಿದ್ದರೂ ಸಂಭಾಳಿಸಿಕೊಂಡು ಪರಿಸ್ಥಿತಿಯನ್ನು ನಿರ್ವಹಿಸಬೇಕಾಯಿತು. ಆಗ ನಾನು ಅಪ್ಪನಿಗೆ ತುರ್ತು ಪರಿಸ್ಥಿತಿಯ ಸೇವೆಯನ್ನು ತಮ್ಮ ಪಕ್ಕದ ಮನೆಯವರ ಫೋನನ್ನುಪಯೋಗಿಸಿ ಕರೆಯಬೇಕೆಂದು ಹೇಳಿದೆ. ಆ್ಯಂಬುಲೆನ್ಸ್ ಬರುವವರೆಗೆ ಆ ಸಮಯವು ಅನಂತವಾಗಿದೆಯೇ ಅನ್ನಿಸಿತು. ನನ್ನ ಅಂತಿಮ ಪರೀಕ್ಷೆ ಹಾಗೂ ನನ್ನ ಕನಸಿನ ಕೆಲಸವು ನನ್ನ ಕಣ್ಣ ಮುಂದೆಯೇ ಮಾಯವಾಗುತ್ತಿರುವುದನ್ನಷ್ಟೇ ನಾನು ಯೋಚಿಸಲಾದದ್ದು. ಅಪ್ಪನ ಕೈಗಳೂ ಸುಟ್ಟುಹೋಗಿದ್ದವು. ಆದರೂ ಅವರು ನನ್ನ ಜೊತೆ ಮ್ಯಾಂಚೆಸ್ಟರ್‌ನ ಯಹೂದಿ ಆಸ್ಪತ್ರೆಗೆ ಜ್ಯೂಸ್ ಹಾಸ್ಪಿಟಲ್ ಬಂದರು. ಅದು ನಾವು ವಾಸಿಸುತ್ತಿದ್ದ ಜಾಗಕ್ಕೆ ಬಹಳ ಹತ್ತಿರದಲ್ಲಿದ್ದಿತು. ಮೂರನೇ ಶ್ರೇಣಿಯ ಸುಟ್ಟ ಗಾಯಗಳಾಗಿವೆ ಎಂದು ನನ್ನನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಲಾಯಿತು. ಭುಜದಿಂದ ಮಂಡಿಯವರೆಗೆ ಬ್ಯಾಂಡೇಜು ಕಟ್ಟಲಾಯಿತು. ನನ್ನ ಎಡಭುಜಕ್ಕೆ ಸಲೈನ್ ಡ್ರಿಪ್‌ನ್ನು ಸಿಕ್ಕಿಸಿ, ಒಂದು ವಾರ್ಡ್‌ಗೆ ಗಾಲಿ ಕುರ್ಚಿಯ ಮೇಲೆ ಕೂರಿಸಿ ಕರೆತಂದು ಹಾಸಿಗೆಯಲ್ಲಿ ಮಲಗಿಸಲಾಯಿತು. ಬಡಪಾಯಿ ಅಪ್ಪನಿಗೆ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಅಂತೆಯೇ ಏನೂ ಮಾಡಲು ತೋಚದೆ ನನ್ನ ಹಾಸಿಗೆಯ ಪಕ್ಕದಲ್ಲಿ ನಿಂತರು. ಒಂದೆಡೆ ಅವರು ತಾನು ಅಜಾಗರೂಕತೆಯಿಂದ ಸಾಮಾನುಗಳನ್ನು ಒಟ್ಟಾಗಿ ಸೇರಿಸಿ ಮಾಡಿದ ವಿದ್ಯುತ್ ಹೀಟರ್ ಬೆಂಕಿಯಿಂದಾಗಿ ಈ ಅಪಘಾತ ಸಂಭವಿಸಿತು ಎನ್ನುವ ಸ್ಪಷ್ಟವಾದ ಅಪರಾಧಿ ಮನೋಭಾವವನ್ನು ಹೊಂದಿದ್ದರೂ, ಮತ್ತೊಂದೆಡೆ ಅಂತೂ ಕೊನೆಗೆ ನನ್ನ ಪ್ರಾಣವನ್ನು ಉಳಿಸಲು ಸಾಧ್ಯವಾಯಿತಲ್ಲ ಎಂಬ ಹೆಮ್ಮೆಯೂ ಅವರಿಗಾಗಿತ್ತು.

ನನಗೆ ನೋವು ನಿವಾರಕ ಚುಚ್ಚುಮದ್ದನ್ನು ಬೇಗನೇ ನೀಡಿದ್ದು, ಅದು ತನ್ನ ಪ್ರಭಾವವನ್ನು ತೋರಲಾರಮಭಿಸಿತು. ನೋವು ನಿಧಾನವಾಗಿ ಕಡಿಮೆ ಯಾಯಿತು. ನನ್ನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಿತು. ನನಗದೆಷ್ಟೇ ಸುಟ್ಟ ಗಾಯವಾಗಿರಲಿ, ನಾನದೆಷ್ಟೇ ಹೆಚ್ಚಿನ ನೋವನ್ನು ಅನುಭವಿಸಬೇಕಾಗಲಿ, ಮುಂದಿನ ವಾರವೇ ಇರುವ ನನ್ನ ಅಂತಿಮ ಪರೀಕ್ಷೆಗಳನ್ನು ನಾನು ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಆದ್ದರಿಂದ ನಾನು ಯೋಜಿಸಿದ್ದಂತೆಯೇ ಪರೀಕ್ಷೆಗೆ ಕುಳಿತುಕೊಳ್ಳಲು

ಏನಾದರೂ ಒಂದು ಮಾರ್ಗವನ್ನು ಕಂಡುಕೊಳ್ಳಲೇಬೇಕಿತ್ತು. ಬ್ಯಾಂಡೇಜು ಸುತ್ತಿದ್ದ ನನ್ನ ಕೆಳ ಮೈಯನ್ನೊಮ್ಮೆ ನೋಡಿಕೊಂಡೆ, ಒಂದು ವಾರದೊಳಗೆ ವಿಶ್ವವಿದ್ಯಾನಿಲಯಕ್ಕೆ ವಾಪಸಾಗುವ ಸಾಧ್ಯತೆ ಇಲ್ಲವೆಂಬುದು ನನಗೆ ಅರಿವಾಯಿತು. ನನ್ನ ಮನಸ್ಸು ಓಡಲು ಪ್ರಾರಂಭಿಸಿತು. ವಿಶ್ವವಿದ್ಯಾನಿಲಯದವರು ತಮ್ಮ ನಿಯಮವನ್ನು ಬದಲಿಸಲು ಅಂತೆಯೇ ವಿಶ್ವವಿದ್ಯಾನಿಲಯದ ಆವರಣದ ಹೊರಗೆ ನಾನು ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿದ್ದೇನೆಂದು ಹೇಗೆ ತಾನೆ ಅವರನ್ನು ಒಪ್ಪಿಸಬಲ್ಲೆ ಎಂದು ವಿಸ್ಮಿತಳಾದೆ.

ಹಾಗೆ ನನ್ನ ಪರೀಕ್ಷೆಗಳೊಡನೆ ಮುಂದುವರೆಯಲು ನನಗೆ ಅವಕಾಶ ಕೊಡಲು ಅಧಿಕಾರವರ್ಗದವರ ಮನವೊಲಿಸುವಲ್ಲಿ ನನಗೆ ಸಹಾಯ ಮಾಡ ಬಹುದಾದವರು ಯಾರಾದರೂ ಇದ್ದರೆ ಅದು ಟೆಕ್ಸಿ ಮಾತ್ರ ಎಂದು ನಾನು ಯೋಚಿಸಿದೆ. ಅಪ್ಪನು ಮನೆಗೆ ಹೋಗಲು ಹಿಂದಿರುಗಲು ತಯಾರಿ ನಡೆಸುತ್ತಿದ್ದಾಗ, ನಾನು ಅವರನ್ನು ಟೆಕ್ಸಿಗೆ ಫೋನು ಮಾಡಲು ಕಳುಹಿಸಿ, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನನ್ನನ್ನು ನೋಡಲು ಬರಬೇಕೆಂದು ಕೇಳಲು ಹೇಳಿದೆ. ಒಂದು ಗಂಟೆಯ ಒಳಗೇ ಟೆಕ್ಸಿಯು ನನ್ನ ಹಾಸಿಗೆ ಪಕ್ಕದಲ್ಲಿದ್ದಳು. ನನಗಾಗಿರುವುದನ್ನು ಕಂಡು ಮೊದಲಿಗೆ ಅವಳು ದಿಗ್ಭ್ರಾಂತಳಾದಳು. ಆದರೆ ಬೇಗನೇ ಸಂಭಾಳಿಸಿಕೊಂಡಳು. ಕೂಡಲೇ ಅವಳು ನನ್ನ ಪರೀಕ್ಷೆಗಳ ಬಗೆಗೆ ನನಗಿರುವ ಕಾಳಜಿಯನ್ನು ಪ್ರಶಂಸಿದಳು. ಕಾರಣ, ನನ್ನ ಸ್ಥಿತಿಯಲ್ಲಿ ಅವಳಿದ್ದಿದ್ದರೆ ಅವಳಿಗೂ ಹೀಗೆಯೇ ಅನ್ನಿಸುತ್ತಿತ್ತೆಂದು ಅವಳು ತಿಳಿದಿದ್ದಳು. ಇನ್ನು ಮಿಕ್ಕ ವಿಷಯಗಳನ್ನು ತನಗೆ ಬಿಡಲು ಅವಳು ಮತ್ತೊಮ್ಮೆ ವಿಶ್ವಾಸದಿಂದ ಹೇಳಿದಳು. ಮಾರನೆಯ ದಿನದ ಸಂಜೆಯೇ ನನಗೆ ಏನಾದರೂ ಸಕಾರಾತ್ಮಕ ಉತ್ತರವನ್ನು ಕೊಡಲು ತನಗೆ ಸಾಧ್ಯವಾಗಬಹುದೆಂದು ಅವಳು ಆಶಿಸಿದಳು.

ಟೆಕ್ಸಿ ಮತ್ತು ಅಪ್ಪ ಇಬ್ಬರೂ ಆಸ್ಪತ್ರೆಯನ್ನು ಬಿಟ್ಟು ಹೊರಟೊಡನೆಯೇ ನಾನು ನಿದ್ರೆ ಬರುವ ಔಷಧಿಗೆ ಶರಣಾಗಿ ಗಾಢವಾಗಿ ನಿದ್ರಿಸಿದೆ. ಕತ್ತಲಾದ ಮೇಲೆ ಎಚ್ಚೆತ್ತೆ. ರಾತ್ರಿಯ ದಾದಿಯು ನನ್ನ ಹಾಸಿಗೆಯ ಪಕ್ಕದಲ್ಲಿ ಕುಳಿತು ನನ್ನನ್ನು ಕಾಯುತ್ತಿರುವುದನ್ನು ನೋಡಿದೆ. ಇದು ನನಗದೆಷ್ಟು ಹೆಚ್ಚಾಗಿ ನೋವಾಗಿರಬಹುದು ಎಂದು ಚಕಿತಳಾಗುವಂತೆ ಮಾಡಿತು. ನನಗಾಗಿ ಆಸ್ಪತ್ರೆಯು ಓರ್ವ ದಾದಿಯನ್ನು ವಿಶೇಷವಾಗಿ ನೇಮಿಸಿರಬೇಕಾದರೆ ಆಗಿರುವುದು ಸಾಕಷ್ಟು ಕೆಟ್ಟದಾಗಿಯೇ ಇರಬೇಕೆಂದು ನಾನು ತರ್ಕಿಸಿದೆ. ಆದರೆ, ನನ್ನ ಗಾಯಗಳಿಗಾಗಿ ಯೋಚಿಸಿ ನನ್ನ ಬಗೆಗೆ ನಾನೇ ಮರುಗುವುದನ್ನು ನಿರಾಕರಿಸಿದ ನಾನು, ನನ್ನ ಪದವಿ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವತ್ತ ಗಮನ ಕೊಡಬೇಕೆಂದು ನನಗೆ ನಾನೇ ಹೇಳಿಕೊಳ್ಳುತ್ತಲಿದ್ದೆ. ಆದ್ದರಿಂದ ಮಾರನೇ ದಿನ, ಬಹಳವಾದ ಯಾತನಾಮಯ ನೋವಿನ ನಡುವೆಯೂ, ಕಳೆದ ಕೆಲವು ತಿಂಗಳುಗಳಿಂದ ದಿನದಿನವೂ ನಾನು ಕಲಿತದ್ದೇನು ಎಂಬುದನ್ನು

ನೆನಪಿಸಿಕೊಳ್ಳಲು ನನ್ನ ಮೇಲೆ ನಾನೇ ಒತ್ತಾಯ ಹೇರಲು ಪ್ರಯತ್ನಿಸಿದೆ. ಅಲ್ಲಿ ಮಲಗಿರುವಂತೆಯೇ ಕಾರ್ಲ್‌ನು ನನಗೆ ಹೇಳಿದ್ದೇನು ಎಂದು ನೆನಪಿಸಿಕೊಂಡೆ. ವರ್ಷಗಳ ಹಿಂದೆ ನಡೆದುದೆಲ್ಲವನ್ನು, ಮನಸ್ಸಿನಲ್ಲೇ ಒಂದು ದಿನಚರಿಯನ್ನಿಟ್ಟುಕೊಂಡಿದ್ದ ಅವನು, ಜರ್ಮನ್ ಕಾನ್ಸನ್ಟ್ರೇಷನ್ ಕ್ಯಾಂಪು ಗಳಲ್ಲಿ ಆದ ಅತ್ಯಂತ ಕ್ರೂರ ಅನುಭವಗಳಿಂದ ಬದುಕುಳಿದುಕೊಳ್ಳುವುದು ತನಗೆ ಹೇಗೆ ಸಾಧ್ಯವಾಯಿತು ಎಂಬುದರ ಬಗ್ಗೆ ಹೇಳಿದ ಅವನು ಮಾನವ ಚೈತನ್ಯವು ಏನನ್ನಾದರೂ ತಡೆದುಕೊಳ್ಳಬಹುದು ಎಂದು ಹೇಳಿದ್ದ. ಮನುಷ್ಯರಿಗೆ ಸುಡುವುದು, ಮುಳುಗುವುದು ಎರಡೂ ಅತ್ಯಂತ ಯಾತನಾಮಯ ಅನುಭವಗಳು ಎಂದು ನನ್ನ ಕೆಲವು ವೈದ್ಯಕೀಯ ಸ್ನೇಹಿತರು ನನಗೆ ಅನಂತರ ಹೇಳಿಯೂ ಇದ್ದರು. ಆದರೆ ನನ್ನ ಶಾರೀರಿಕ ನೋವು ನನ್ನ ಮನಸ್ಸಿನ ಯೋಚನೆಗಳ ನಡುವೆ ಬರಲು ನಾನು ಅವಕಾಶ ಕೊಡುವುದಿಲ್ಲವೆಂದು ನಿರ್ಧರಿಸಿದೆ.

ಮೊಟ್ಟಮೊದಲ ಬಾರಿಗೆ ನಾನು ಸಂಪೂರ್ಣವಾಗಿ ಅಸಹಾಯಕಳಾಗಿದ್ದೆ; ನನ್ನನ್ನು ನೋಡಿಕೊಳ್ಳಲು ಪೂರ್ಣವಾಗಿ ಇನ್ನೊಬ್ಬರ ಮೇಲೆ ಅವಲಂಬಿಸಿದ್ದೆ. ನನ್ನ ಶರೀರದ ಕೆಳ ಬಲಭಾಗವು ಪೂರ್ತಿಯಾಗಿ ಸುಟ್ಟುಹೋಗಿತ್ತು. ನನ್ನ ಬಲಗೈ ಬೆರಳುಗಳಿಗೆ ಬಲವಾಗಿ ಬ್ಯಾಂಡೇಜು ಮಾಡಲಾಗಿತ್ತು. ಜೊತೆಗೆ ಇನ್ನೂ ನನ್ನ ಎಡತೋಳಿನಲ್ಲಿದ್ದ ಸಲೈನ್‌ಡ್ರಿಪ್‌ನಿಂದಾಗಿ ನಾನೇ ಕುಡಿಯಲು ಅಥವಾ ತಿನ್ನಲು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಇವೆಲ್ಲ ಸ್ಫುಟವಾಗಿಯೇ ದುಃಖದಾಯಕವಾಗಿದ್ದರೂ, ವಾಸ್ತವವಾಗಿ ನನಗೆ ಟೆಕ್ಸಿಯಿಂದ ಬರುವ ಸುದ್ದಿಯ ಬಗೆಗೇ ಹೆಚ್ಚು ಕಾಳಜಿ ಇದ್ದುದು.

ನನಗೆ ಮಾತು ಕೊಟ್ಟಿದ್ದಂತೆಯೇ, ಟೆಕ್ಸಿ ಹೆಮ್ಮೆಯಿಂದ ಬೀಗುತ್ತಾ ಆ ಮಧ್ಯಾಹ್ನ ತಡವಾಗಿ ಬಂದಾಗ, ಅವಳನ್ನು ನೋಡಿ ನಾನು ಇದು ಒಳ್ಳೆಯ ಸುದ್ದಿ ತಂದಿರುವುದರ ಅರ್ಥ ಎಂದುಕೊಂಡೆ. ಎಲ್ಲವನ್ನೂ ವ್ಯವಸ್ಥೆ ಮಾಡಲಾಗಿದೆ ಎಂದು ಅವಳು ಹೇಳಿದಾಗ ನನಗೆ ರೋಮಾಂಚನವಾಯಿತು. ನನ್ನ ಸಹಪಾಠಿಗಳು ಕುಳಿತುಕೊಳ್ಳುವ ವೇಳೆಗೇ ನಾನೂ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಕುಳಿತು, ವಿಶ್ವವಿದ್ಯಾನಿಲಯದ ಅಧಿಕಾರ ವರ್ಗಕ್ಕೆ ಬೇಕಾದಂತೆ, ಒಬ್ಬ ಶೈಕ್ಷಣಿಕ ಪರೀಕ್ಷಾ ಮೇಲ್ವಿಚಾರಕರ ಮೇಲ್ವಿಚಾರಣೆಯಲ್ಲಿ ಪರೀಕ್ಷೆ ಬರೆಯುವವಳಿದ್ದೆ. ನನ್ನ ಶಿಕ್ಷಕ ವರ್ಗವು ತಕ್ಷಣವೇ ಮುಂದಾಗಿ ತಾವೇ ಬಂದು ನನ್ನ ಜೊತೆ ಕುಳಿತುಕೊಳ್ಳುವುದಾಗಿ ಹೇಳಿದ್ದರು. ನಾನು ನನ್ನ ಬಲಗೈಯನ್ನು ಉಪಯೋಗಿಸಲು ಸಾಧ್ಯವಾಗದ ಕಾರಣ ಗುಮಾಸ್ತರುಗಳೂ ಸಹ ತಾವು ಬಂದು ನಾನು ಹೇಳುವ ಉತ್ತರಗಳನ್ನು ಬರೆದುಕೊಳ್ಳುವುದಾಗಿ ಸ್ವ ಇಚ್ಛೆಯಿಂದ ಹೇಳಿದ್ದರು. ನಾನು ಆನಂದ ತುಂದಿಲಳಾದೆ. ಆ ಸಂತೋಷದಿಂದ ನಾನು ಕೂಗಲು ಪ್ರಾರಂಭಿಸಿ ನನ್ನ ಸಹ ರೋಗಿಗಳಿಗೆ ತಲ್ಲಣ ಉಂಟುಮಾಡಿದೆ. ನಾನು ಟೆಕ್ಸಿಯನ್ನು ಅಪ್ಪಿಕೊಳ್ಳು

ವಂತಾಗಿದ್ದರೆ ಎಂದು ಹಂಬಲಿಸಿದೆ. ಆದರೆ ಅವಳಿಗೆ ಮತ್ತೆ ಮತ್ತೆ ಧನ್ಯವಾದಗಳನ್ನು ಅರ್ಪಿಸುವುದರ ಮೂಲಕವೇ ಹಾಗೆ ಮಾಡಬೇಕಾಯಿತು. ತನ್ನದೇ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಬಹಳವೇ ಬೇಕಾಗಿದ್ದ ಅತ್ಯಮೂಲ್ಯ ಸಮಯವನ್ನು ನನ್ನ ಪರೀಕ್ಷೆಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಿಯೇ ವಿನಿಯೋಗಿಸಿದ್ದ ಅವಳ ಸ್ವಭಾವ ಉದಾರವೂ, ಕರುಣಾಪೂರಿತವೂ ಆಗಿದ್ದಿತು. ಅವಳೂ ನನ್ನ ಸಾಧನೆಗಳ ಬಗೆಗೆ ಸುಪ್ರೀತಳಾಗಿದ್ದಳು. ಹೇಗಾದರೂ, ನಾವು ಜಯಿಸಬೇಕಾದ ಮತ್ತೊಂದು ತೊಡಕು ಇನ್ನೂ ಇರುವುದಾಗಿ ಅಗ ಅವಳು ನನಗೆ ಹೇಳಿದಳು. ನನ್ನ ಪರೀಕ್ಷೆಗಳು ನಡೆಯುವವರೆಗೆ ಆಸ್ಪತ್ರೆಯಲ್ಲಿ ನನಗಾಗಿ ಖಾಸಗಿ ಕೋಣೆಯೊಂದನ್ನು ನಾವು ಪಡೆಯಬೇಕಿತ್ತು. ದೊಡ್ಡ ವಾರ್ಡ್‌ನ ಒಂದು ಭಾಗವೇ ಆದ ಗದ್ದಲ–ಸಂದಣಿ ಇವುಗಳ ಮಧ್ಯೆ ನಾನು ನನ್ನ ಗಮನವನ್ನು ಕೇಂದ್ರೀಕರಿಸುವುದನ್ನು ನಿರೀಕ್ಷಿಸುವುದು ನನ್ನಿಂದ ಸಾಧ್ಯವಿರಲಿಲ್ಲ. ಆದರೂ ತಾನು ಈ ಸಮಸ್ಯೆಯನ್ನು ಪರಿಹರಿಸಬಲ್ಲೆ ಎಂಬ ಆಶಾವಾದವು ಅವಳದಾಗಿತ್ತು. ಅವಳು ಆಸ್ಪತ್ರೆಯನ್ನು ಪ್ರವೇಶಿಸುತ್ತಿದ್ದಂತೆಯೇ ನನ್ನನ್ನು ನೋಡಲು ಬರುವಾಗ ದಾರಿಯಲ್ಲಿ ಆ ಆಸ್ಪತ್ರೆಯ ಆಡಳಿತಾಧಿಕಾರಿಯು ತನ್ನ ಪತಿಯ ಕುಟುಂಬದ ಓರ್ವ ಹಳೆಯ ಸ್ನೇಹಿತನೆಂದು ದೃಢಪಡಿಸಿಕೊಂಡಿದ್ದಳು. ಆದ್ದರಿಂದ ನೇರವಾಗಿ ಅವನಲ್ಲಿಗೆ ಹೋಗಿ ಕೇಳುವುದಾಗಿ ಅವಳು ನಿರ್ಧರಿಸಿದಳು.

ಅರ್ಧ ಗಂಟೆಯ ನಂತರ, ಮತ್ತೊಮ್ಮೆ ಯಶಸ್ಸಿನಿಂದ ಬೀಗುತ್ತಾ ಅವಳು ಹಿಂದಿರುಗಿದಳು. ನಾನು ನನ್ನ ಅಂತಿಮ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಈಗ ಎಲ್ಲವೂ ವ್ಯವಸ್ಥೆಯಾಗಿದ್ದಿತು. ಟೆಕ್ಸಿಯು ಎಲ್ಲವನ್ನೂ ಒಂದೇ ದಿನದಲ್ಲಿ ಮಾಡಿ ಮುಗಿಸಿದ್ದಳು. ನನಗೆ ಇದೊಂದು ಮಹತ್ಸಾಧನೆ ಎನ್ನಿಸಿತು. ವಿಶ್ವವಿದ್ಯಾನಿಲಯದ ಹಾಗೂ ಆಸ್ಪತ್ರೆಯ ಅಧಿಕಾರ ವರ್ಗವು ಮೊದಲ ಬಾರಿಗೆ ಇಂಥದೊಂದು ಸಮಸ್ಯೆಯನ್ನು ಎದುರಿಸಿದಾಗ, ಟೆಕ್ಸಿಯು ಅದು ಹೇಗೆ ಅವರು ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ನಿಭಾಯಿಸಿದಳೋ, ಅದು ನನಗೆ ಅತ್ಯಾಶ್ಚರ್ಯವಾಗಿ ಕಂಡಿತು. ಕಷ್ಟಕರವಾದ ನನ್ನ ನಿರಾಶ್ರಿತ ಅನುಭವಗಳನ್ನು ಟೆಕ್ಸಿ ಅವರಿಗೆ ವಿವರಿಸದಸಳು. ಅಂತೆಯೇ ಓದುತ್ತಿರುವ ಸಮಯದಲ್ಲಿ ನಾನು ತಂದೆ ತಾಯಿಗಳನ್ನು ಸಲಹುವ ಸಲುವಾಗಿ ಹಣ ಸಂಪಾದಿಸಲು ಹೇಗೆ ಹೋರಾಟ ನಡೆಸಬೇಕಾಯಿತು ಎನ್ನುವುದನ್ನೂ ಅವಳು ಹೇಳಿದ್ದಳು. ಎಲ್ಲವೂ ಬಹಳ ತ್ವರಿತವಾಗಿ, ಸಮರ್ಪಕವಾಗಿ ವ್ಯವಸ್ಥೆಯಾಯಿತಲ್ಲಾ ಎನ್ನುವುದರಿಂದಲೇ ನಾನು ಬಹಳ ಖುಷಿಯಾದೆ. ಆನಂತರ ಕೊನೆಯದಾಗಿ ನಾನು ಕೆಲವನ್ನು ಪರಾಮರ್ಶಿಸಲು ಪ್ರಯತ್ನಿಸಲಿ ಎಂದು ಟೆಕ್ಸಿಯು ನನ್ನ ನೋಟ್ಸನ್ನು ಹಾಗೂ ಪುಸ್ತಕಗಳನ್ನು ನನ್ನ ಮನೆಯಿಂದ ತರಲು ಹೊರಟಳು.

ನಾನು ಹಾಸಿಗೆಯಲ್ಲಿ ಮಲಗಿದ್ದಂತೆ, ಮುಂಚಿನ ನನ್ನ ಹರ್ಷವು

ಮಾಯವಾಯಿತು. ನನ್ನ ಮನಸ್ಸು ಕೊನೆಗೆ ನನ್ನ ಕೈಬಿಡುವುದೋ ಮತ್ತು ನಾನೆಲ್ಲಿ ವಿಫಲಳಾಗುತ್ತೇನೆಯೋ ಎನ್ನುವ ಚಿಂತೆ ನನಗೆ ಪ್ರಾರಂಭವಾಯಿತು. ನಾನು ಏಕಾಕಿಯಾದಂತೆನಿಸಿತು. ನನ್ನ ಭಯವನ್ನು ನಾನು ಟೆಕ್ಸಿಯೊಡನೆ ಚರ್ಚಿಸಲಾರದವಳಾಗಿದ್ದೆ. ಅಲ್ಲದೆ, ಅವಳೀಗ ಎಲ್ಲವನ್ನು ವ್ಯವಸ್ಥೆ ಮಾಡಿದ್ದಾಳೆ, ಅವಳು ನನ್ನನ್ನು ಕೃತಘ್ನಳೆಂದುಕೊಂಡಾಳು. ನಾನು ನನ್ನ ತಂದೆ ತಾಯಿಗಳ ಹತ್ತಿರವೂ ಮಾತನಾಡಲಾರದವಳಾಗಿದ್ದೆ. ಏಕೆಂದರೆ ಅವರು ಅದನ್ನೆಂದೂ ಅರ್ಥ ಮಾಡಿಕೊಳ್ಳಲಾರರು. ನನ್ನ ಸಹರೋಗಿಗಳ ಜೊತೆಯಂತೂ ಖಂಡಿತ ವಾಗಿಯೂ ನಾನು ಮಾತನಾಡಲಾರದವಳಾಗಿದ್ದೆ. ಅದರಲ್ಲೂ ನನ್ನ ಪಕ್ಕದ ಹಾಸಿಗೆ ಯಲ್ಲೇ ಇದ್ದವಳು ಆಗ ತಾನೆ ಗರ್ಭಪಾತವಾಗಿದ್ದ ಓರ್ವ ಎಳೆಯ ಯುವತಿ. ಅವಳೇ ಈಗ ಆಳವಾದ ದುಃಖದಲ್ಲಿದ್ದಳು. ಆದ್ದರಿಂದ ನನ್ನ ಪರಾಮರ್ಶೆಯನ್ನು ಮುಂದುವರೆಸಿ, ನನ್ನ ನೆನಪಿನ ಶಕ್ತಿಯನ್ನು ಪರೀಕ್ಷೆ ಮಾಡಿಕೊಳ್ಳುವಂತೆ ನನ್ನನ್ನು ನಾನೇ ಒತ್ತಾಯಪಡಿಸಿದೆ. ಮಾರನೆಯ ದಿನ ಟೆಕ್ಸಿಯು ನನ್ನ ನೋಟ್ಸ್ ಮತ್ತು ಪಠ್ಯ ಪುಸ್ತಕಗಳನ್ನು ತಂದಾಗ, ಆಸ್ಪತ್ರೆಯವರು ನಾನು ಪುಸ್ತಕ ಅಥವಾ ನೋಟ್ಸ್‌ವನ್ನು ಹಿಡಿದುಕೊಳ್ಳದೇ ಓದಲು ಅನುವಾಗುವಂತೆ ನನ್ನ ಹಾಸಿಗೆಯ ಮೇಲೆ ಒಂದು ವಿಶೇಷ ಉಪಕರಣವನ್ನು ಜೋಡಿಸುವ ಹಾಗೆ ಹೇಳಿ ಅವರನ್ನೂ ಜೊತೆಯಲ್ಲಿ ಕರೆದು ತಂದಿದ್ದಳು. ದೇವರ ದಯೆಯಿಂದ ಮರುದಿನವೇ ನನ್ನ ಡ್ರಿಪನ್ನು ತೆಗೆದು ಹಾಕಲಾಯಿತು. ಈಗ ನಾನು ನನ್ನ ಎಡಗೈಯನ್ನಾದರೂ ಮತ್ತೆ ಉಪಯೋಗಿಸುವ ಹಾಗಾಗಿತ್ತು.

ನಾನು ನನ್ನ ಅಂತಿಮ ಪದವಿ ಪರೀಕ್ಷೆಯನ್ನು ಆಸ್ಪತ್ರೆಯಲ್ಲೇ ತೆಗೆದುಕೊಳ್ಳ ಲಿದ್ದೇನೆ ಎಂಬ ಸುದ್ದಿಯು ವಾರ್ಡುಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿದಂತೆಯೇ ನಾನು ಕೂಡಲೇ ಆಸ್ಪತ್ರೆಯಲ್ಲಿ ಪ್ರಖ್ಯಾತಳಾದೆ. ಪತ್ರಿಕೆಗಳ ವರದಿಗಾರರು ನನ್ನ ಸಂದರ್ಶನ ಮಾಡಲು ಬಂದರು. ನಾನು ಒಂದು ವೇಳೆ ಪರೀಕ್ಷೆಯಲ್ಲಿ ನಪಾಸಾದರೆ ಎಂಬ ಕಾರಣದಿಂದ ನನಗೆ ಈ ವಿಷಯದಲ್ಲಿ ಪ್ರಚಾರ ಬೇಕಿರಲಿಲ್ಲ. ಆದ್ದರಿಂದ ನಾನು ಯಾವುದೇ ಪತ್ರಕರ್ತರನ್ನು ಒಳಬಿಡಬಾರದೆಂದು ನರ್ಸ್‌ಗಳಿಗೆ ಹೇಳಿದೆ. ನನ್ನ ಶುಶ್ರೂಷೆ ಮಾಡುತ್ತಿದ್ದ ವೈದ್ಯರುಗಳು ಹಾಗೂ ದಾದಿಯರು ಆಶ್ಚರ್ಯ ಮತ್ತು ಮೆಚ್ಚಿಗೆಯಿಂದ ನನ್ನನ್ನು ನೋಡುತ್ತಿದ್ದರು. ಅವರ ದೃಷ್ಟಿಯಲ್ಲಿ ನಾನು ಸಾವನ್ನು ತಿರಸ್ಕರಿಸುವ ಸಾಹಸ ಕಾರ್ಯವೊಂದನ್ನು ಮಾಡಲಿದ್ದೇನೆಯೇ ಎಂಬ ಭಾವವಿತ್ತು. ನನ್ನನ್ನು ನೋಡಿಕೊಳ್ಳುತ್ತಿದ್ದ ತರುಣ ವೈದ್ಯನು ಕರುಣೆಯಿಂದ ನನಗೆ ನಿದ್ರೆಬರಿಸದ ಆದರೆ, ನೋವನ್ನು ಕಡಿಮೆ ಮಾಡುವ ಔಷಧಿಯನ್ನು ಕೊಟ್ಟ. ಅದೇ ನನಗೂ ಆಗ ಬೇಕಾಗಿದ್ದುದು. ನಾನು ಶಾಂತಳಾಗಿರಲು ಪ್ರಯತ್ನಿಸಿ, ನನ್ನ ನೋಟ್ಸುಗಳನ್ನು ನೋಡಿಕೊಂಡೆ. ನನ್ನ ಈಗಿನ ಸ್ಥಿತಿಯಲ್ಲಿ ನಾನು ನನ್ನ ಪರೀಕ್ಷೆಗಳನ್ನು ಪಾಸು

ಮಾಡಬಲ್ಲೆನೆ ಎಂಬ ಚಿಂತೆಯು ನಿಯತವಾಗಿ ಮತ್ತೆ ಮತ್ತೆ ಬರುತ್ತಿತ್ತು. ನಾನು ಅನುತ್ತೀರ್ಣಳಾದರೆ ಏನು? ನನ್ನ ಸುತ್ತಮುತ್ತಲಿನವರ ನಗೆಪಾಟಲಿಗೆ ಗುರಿಯಾಗುತ್ತೇನೆ. ಈ ಚಿಂತೆ ಬರಿಸುವ ಯೋಚನೆಗಳನ್ನು ನಾನು ಪಕ್ಕಕ್ಕೆ ತಳ್ಳಿದೆ. 'ಗಾನ್ ವಿಥ್ ದ ವಿಂಡ್'ನ ಸ್ಕಾರ್ಲೆಟ್ ಓಹರಳಂತೆ ನನಗೆ ನಾನೇ ಹೇಳಿಕೊಳ್ಳುತ್ತಲಿದ್ದೆ. ಅದರ ಬಗ್ಗೆ ನಾನು ಈ ದಿನ ಯೋಚಿಸುವುದಿಲ್ಲ. ಅದರ ಬಗೆಗೆ ನಾನು ಅನಂತರ ಯೋಚಿಸುತ್ತೇನೆ. ಆ ಮಹಾನ್ ಘಟನೆಗೆ ಕೆಲವು ದಿನಗಳ ಮುಂಚೆ ಕೇವಲ ನನ್ನ ತಂದೆ ತಾಯಿ ಹಾಗೂ ಟೆಕ್ಸಿ ನನ್ನನ್ನು ಕಾಣಲು ಬಂದರು. ಅನವಶ್ಯಕವಾಗಿ ನನ್ನನ್ನು ಆಯಾಸಪಡಿಸುವುದು ಸರಿಯಲ್ಲ ಎಂದು ವೈದ್ಯರು ಸಲಹೆ ನೀಡಿದರು. ಬಡಪಾಯಿ ಅಮ್ಮನು ದುಃಖ ತುಂಬಿದ ಕಂಗಳಿಂದ ಆಳವಾಗಿ ನನ್ನನ್ನು ನೋಡಿದಳು. ನನ್ನನ್ನು ನೋಡುವುದರಲ್ಲಿ ಅವಳಿಗಾಗುವ ಯಾತನೆಗಿಂತ, ನನ್ನೆಲ್ಲ ನೋವನ್ನು ನನ್ನೊಳಗೇ ಇಟ್ಟುಕೊಳ್ಳುವುದು ಮೇಲೆಂದು ನನಗೆ ಮನವರಿಕೆಯಾಯಿತು.

ಭಾನುವಾರದಂದು ನನಗೆ ಸರಿಯಾಗಿ ಅಪಘಾತ ಸಂಭವಿಸಿದ ಒಂದು ವಾರದ ನಂತರ, ಗಾಢಬಣ್ಣದ ಹತ್ತಿರದ ಸಾಲುಗೆರೆಗಳುಳ್ಳ ಸೂಟ್‌ನಲ್ಲಿದ್ದ ಕುಳ್ಳ ವ್ಯಕ್ತಿಯಾಗಿದ್ದ ಆ ಆಸ್ಪತ್ರೆಯ ಆಡಳಿತಾಧಿಕಾರಿಯು ನನ್ನನ್ನು ಕಾಣಲು ಬಂದನು. ಮುಖದಲ್ಲಿ ಅಧಿಕಾರಿಯ ಠೀವಿ ಇದ್ದ ಅವನು, ಆಸ್ಪತ್ರೆಯ ಮಂಡಳಿಯು ಉದಾರವಾಗಿ ಅವರ ಅತ್ಯುತ್ತಮವಾದ ಖಾಸಗಿ ಕೋಣೆಗಳಲ್ಲಿ ಒಂದನ್ನು ನಾನು ಉಪಯೋಗಿಸಲು ಉಚಿತವಾಗಿ ನೀಡುವ ತೀರ್ಮಾನ ಮಾಡಿರುವುದೆಂದು ಔಪಚಾರಿಕವಾಗಿ ಹೇಳಿದ. ಇದು ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಕರುಣೆಯಿಂದ ನಾನು ಆಸ್ಪತ್ರೆಯಲ್ಲೇ ತೆಗೆದುಕೊಳ್ಳಲು ಒಪ್ಪಿರುವ ಪರೀಕ್ಷೆಗಳ ಸಮಯದಲ್ಲಿ ನಾನು ಯಾವುದೇ ಅಡಚಣೆ ಇಲ್ಲದಂತಿರಲು ಸಾಧ್ಯವಾಗುವ ಹಾಗೆ ಮಾಡುತ್ತಿತ್ತು. ನನಗೆ ಅದಾಗಲೇ ಗೊತ್ತಿದ್ದ ಸುದ್ದಿಯನ್ನು ಅವನು ನನಗೆ ಹೇಳುವಾಗ ಸ್ಪಷ್ಟವಾಗಿಯೇ ಸ್ವಪ್ರಾಮುಖ್ಯತೆಯಿಂದ ತುಂಬಿ ಎಷ್ಟು ಬೀಗುತ್ತಿದ್ದನೆಂದರೆ, ಅವನಿಗೆ ನಾನು ಚಿಕ್ಕದಾದ, ಅಷ್ಟೇಕೆ, ಒರಟಾದ ಉತ್ತರವನ್ನು ಕೊಡುವ ಆಸೆಯಾಯಿತು. ಅದೃಷ್ಟವಶಾತ್, ಆ ಬಗ್ಗೆ ಸ್ವಲ್ಪ ಒಳ್ಳೆಯದಾಗಿಯೇ ಯೋಚಿಸಿ ಹಾಗೆ ಒರಟಾಗಿ ಹೇಳುವ ಬದಲಾಗಿ ವಿನಯದಿಂದ ಅವನಿಗೆ ಹಾಗೂ ಆಸ್ಪತ್ರೆಯ ಸಿಬ್ಬಂದಿಗೆ ಅವರ ಎಲ್ಲ ಉಪಕಾರಕ್ಕೆ ಸಹೃದಯತೆಗೆ ನನ್ನ ಕೃತಜ್ಞತೆಯನ್ನು ತಿಳಿಸಿದೆ. ಅವನು ನನ್ನಿಂದ ಬೀಳ್ಕೊಂಡ ನಂತರ ಇಬ್ಬರು ಕೆಲಸದವರು ನನ್ನನ್ನು ನೆಲ ಅಂತಸ್ತಿನಲ್ಲಿರುವ ಖಾಸಗಿ ಕೋಣೆಯೊಂದಕ್ಕೆ ಸಾಗಿಸಲು ಬಂದರು. ಗಾಲಿ ಕುರ್ಚಿಯಲ್ಲಿ ಕುಳಿತ ನಾನು ನರ್ಸ್‌ಗಳು ಮತ್ತು ಇತರ ರೋಗಿಗಳ ಸಂತೋಷದ ಜಯಕಾರ ಹಾಗೂ ಶುಭ ಹಾರೈಕೆಗಳ ನಡುವೆ ವಾರ್ಡಿನಿಂದೀಚೆಗೆ ಬಂದೆ. ನನ್ನ ಎಂಟು ಪತ್ರಿಕೆಗಳ ಅಂತಿಮ ಪರೀಕ್ಷೆಯು ಮೂರು ವಾರಗಳ ತನಕ ನಡೆಯುವುದಿತ್ತು. ಆ ಸಮಯದಲ್ಲಿ

ನಾನು ಈ ಖಾಸಗಿ ಕೋಣೆಯಲ್ಲಿರುವುದೆಂದಾಗಿತ್ತು. ಆ ದೊಡ್ಡ ವಾರ್ಡ್‌ನ ಗದ್ದಲ–ಗೌಜಿನ ನಂತರ, ಸ್ವಲ್ಪ ಅವಕಾಶ ಹಾಗೂ ಏಕಾಂತವನ್ನು ಬಯಸಿದ್ದ ನನಗೆ ಇದು ಸಂತೋಷವನ್ನು ತಂದಿದ್ದಿತು.

ವೈದ್ಯರುಗಳು ಹಾಗೂ ದಾದಿಯರು ನಾನು ದೊಡ್ಡ ಪಂದ್ಯವೊಂದನ್ನು ಪ್ರವೇಶಿಸಲಿರುವ ಒಂದು ಕುದುರೆಯೇನೋ ಎಂಬಂತೆ ನನ್ನನ್ನು ಚೆನ್ನಾಗಿ ನೋಡಿಕೊಂಡರು. ನನ್ನನ್ನು ಆರಾಮ ವಾಗಿರುವಂತೆ ಮಾಡಲು ಅವರು ಮಾಡದ ಪ್ರಯತ್ನಗಳಿರಲಿಲ್ಲ. ಮಾರನೇ ದಿನ, ನನ್ನ ಪರೀಕ್ಷೆಯು ಪ್ರಾರಂಭವಾಗುವ ಐದು ನಿಮಿಷಗಳ ಮುಂಚೆ ವಿಶ್ವವಿದ್ಯಾ ನಿಲಯದ ಕಾರ್ಯದರ್ಶಿಗಳಲ್ಲಿ ಒಬ್ಬಳು ಬಂದಳು. ನನ್ನ ಹಾಸಿಗೆಯ ಎಡ ಭಾಗದಲ್ಲಿ ಕುಳಿತುಕೊಂಡಳು. ಅವಳಿಗೆ ಒಂದು ಟೈಪ್‌ರೈಟರ್, ಒಂದು ಮೇಜು ಹಾಗೂ ಕುರ್ಚಿಯನ್ನು ಒದಗಿಸಲಾಗಿತ್ತು. ನನ್ನ ಉಪನ್ಯಾಸಕರುಗಳಲ್ಲೊಬ್ಬರು ನನ್ನ ಪರೀಕ್ಷಾ ಮೇಲ್ವಿಚಾರಕರಾಗಿ ಅಲ್ಲಿದ್ದರು. ಪ್ರಶ್ನೆಗಳಿದ್ದ ಮುದ್ರೆಯೊತ್ತಿದ್ದು ಮುಚ್ಚಿದ್ದ ಲಕೋಟೆಯೊಂದನ್ನು ಅವರು ತಂದಿದ್ದರು. ಪರೀಕ್ಷಾಕ್ರಮದ ನಿಯಮಗಳನ್ನು ಅವರು ನನಗೆ ವಿವರಿಸಿದರು. ವಿಶ್ವವಿದ್ಯಾನಿಲಯದಲ್ಲಿ ಇತರ ವಿದ್ಯಾರ್ಥಿಗಳಿಗೆ ಪ್ರಶ್ನೆಪತ್ರಿಕೆ ಕೊಟ್ಟ ಸಮಯದಲ್ಲೇ ನನಗೂ ಇಲ್ಲಿ ಪ್ರಶ್ನೆ ಪತ್ರಿಕೆಯನ್ನು ಕೊಡಲಾಗುತ್ತಿತ್ತು. ಅನಂತರ ನನ್ನ ಉತ್ತರಗಳನ್ನು ಟೈಪಿಸ್ಟ್‌ಗೆ ಹೇಳಲು ನನ್ನ ಬಳಿ ಮೂರುಗಂಟೆ ಕಾಲಾವಕಾಶವಿರುವುದು. ಯಾವ ರೀತಿಯಲ್ಲೂ ಎಹಚ್ಚು ಸಮಯವನ್ನು ನನಗೆ ಕೊಡುವ ಅವಕಾಶವಿರಲಿಲ್ಲ. ಅತ್ಯಂತ ಅಪವಾದದ ಸನ್ನಿವೇಶಗಳಲ್ಲಿ ಹಾಗೆ ಮಾಡಬಹುದಾದರೂ, ಅಂಥದೇನೂ ಸಂಭವಿಸಲಾರದು ಎಂದು ಅವರು ಆಶಿಸಿದ್ದರು. ಅಲ್ಲಿಯವರೆಗೆ ಎಲ್ಲವೂ ಔಪಚಾರಿಕವಾಗಿ ಸುಸೂತ್ರವಾಗಿ ನಡೆದಿತ್ತು. ಆಗ ಇದ್ದಕ್ಕಿದ್ದಂತೆ ಆಸ್ಪತ್ರೆಯ ನನ್ನ ಕೋಣೆಯ ಬಾಗಿಲನ್ನು ಬಲವಂತದಿಂದ ನುಗ್ಗಿ ತೆಗೆದು ಬಂದ ಕ್ಯಾಮರಾಗಳು ಮಿಂಚಲು ಪ್ರಾರಂಭವಾದವು. ವರದಿಗಾರರು ಆಗಲೇ ತಮ್ಮ ಪ್ರಶ್ನೆಗಳನ್ನು ಏರು ದನಿಯಲ್ಲಿ ನನ್ನತ್ತ ಎಸೆದರು. ಆಸ್ಪತ್ರೆಯವರು ಹಾಗೂ ವಿಶ್ವವಿದ್ಯಾನಿಲಯದವರು ಸುದ್ದಿ ಪತ್ರಿಕೆಯ ಜನರನ್ನು ಆಚೆಗೆ ಕಳುಹಿಸಿ, ಸನ್ನಿವೇಶವನ್ನು ಪುನಃ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೆಲವು ನಿಮಿಷಗಳೇ ಹಿಡಿದವು. ಈ ಅನಿರೀಕ್ಷಿತ ಉದ್ವೇಗವು ನನ್ನ ಅಧೀರತೆಯನ್ನು ಹೆಚ್ಚಿಸಿತು. ಬಹುಶಃ ನನ್ನಿಂದ ಇದನ್ನು ನಿಭಾಯಿಸಲು ಸಾಧ್ಯವಿಲ್ಲವೇನೋ ಎನಿಸಲು ಪ್ರಾರಂಭವಾಯಿತು. ಆದರೆ, ನನಗೆ ಬೇರೆ ಆಯ್ಕೆ ಇಲ್ಲ ಎಂದೂ ತಿಳಿದಿತ್ತು. ಪರೀಕ್ಷಾ ಮೇಲ್ವಿಚಾರಕರು ಲಕೋಟೆಯನ್ನು ಹರಿದು ತೆರೆದರು. ಪ್ರಶ್ನೆ ಪತ್ರಿಕೆಯನ್ನು ನನಗೆ ಕೊಡುವಾಗ, ನಾನು ಉತ್ತರಗಳನ್ನು ಬೆರಳಚ್ಚುಗಾರ್ತಿಗೆ ಹೇಳುವಾಗ ತಾವು ಆ ಉತ್ತರಗಳನ್ನು ಕೇಳಿಸಿಕೊಳ್ಳುವ ಬಗ್ಗೆ ನಾನು ಚಿಂತೆ ಮಾಡುವ ಅವಶ್ಯವಿಲ್ಲ ವೆಂದು ಅವರು ನನಗೆ ಮತ್ತೊಮ್ಮೆ ಖಚಿತ ಮಾಡಿದರು. ಅದಕ್ಕಾಗಿ ಅವರು

ಓದಲು ಒಂದು ಪುಸ್ತಕವನ್ನು ತಂದಿದ್ದರು. ಆದ್ದರಿಂದ ನಾನೇನು ಹೇಳುತ್ತೇನೆ ಎನ್ನುವುದನ್ನು ಅವರು ಕೇಳಿಸಿಕೊಳ್ಳುತ್ತಲೂ ಇರಲಿಲ್ಲ. ನನಗೂ ನನ್ನ ಉಪನ್ಯಾಸಕರುಗಳಲ್ಲೊಬ್ಬರೆದುರು ಮುಜುಗರವಾಗುತ್ತಿದ್ದ ಕಾರಣ ನಾನು ಅವರಿಗೆ ವಂದನೆಗಳನ್ನು ಹೇಳಿದೆ. ಆದರೆ, ಅವರು ತಮ್ಮ ಪುಸ್ತಕದಲ್ಲಿ ಲೀನವಾಗಿ ಕುಳಿತಿರುವುದನ್ನು ಕಂಡು, ಅವರ ಇರುವಿಕೆಯ ಬಗೆಗೆ ಚಿಂತೆ ಮಾಡುವುದನ್ನು ನಿಲ್ಲಿಸಿದೆ.

ನಾನು ಕೆಳಗೆ ಪ್ರಶ್ನೆ ಪತ್ರಿಕೆಯತ್ತ ನೋಡಿದಾಗ ನನಗೆ ನಿರಾತಂಕವೆನಿಸಿತು. ಏಕೆಂದರೆ ಉತ್ತರಿಸಬೇಕಿದ್ದಷ್ಟು ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ನನಗೆ ಯಾವ ಕಷ್ಟವೂ ಇಲ್ಲ ಎಂಬುದನ್ನು ನಾನು ಕಂಡೆ. ಏನು ಹೇಳಬೇಕೆಂಬುದು ನನಗೆ ತಿಳಿದಿದ್ದಿತು. ನನಗೆ ಎದುರಾದ  ಒಂದೇ ತೊಂದರೆಯೆಂದರೆ, ಉತ್ತರಗಳನ್ನು ದೀರ್ಘವಾಗಿ ಬೆಳೆಸಿ ಬರೆಯುವ ಮುಂಚೆ ಅದರ ರೂಪರೇಖೆಯನ್ನು (ಆಕಾರವನ್ನು) ಸುಮ್ಮನೆ ಗೀಚಿಕೊಳ್ಳುವುದು ನನ್ನ ಅಭ್ಯಾಸವಾಗಿದ್ದಿತು. ಆದರೆ, ಬಲಗೈಯನ್ನು ಬಳಸದೆ ಹಾಗೆ ಏನನ್ನೂ ಗೀಚಿಕೊಳ್ಳುವ ಸ್ಥಿತಿಯಲ್ಲಿ ನಾನಿರಲಿಲ್ಲ. ಈ ನ್ಯೂನತೆಯನ್ನು ನೀಗಿಸಲು ತರ್ಕಬದ್ಧವಾಗಿ ವಾದಿಸಿದ  ಸಮಂಜಸವಾದ ಒಂದು ಉತ್ತರವಾಗಿ ನೀಡಲು ನಾನು ನನ್ನ ಆಲೋಚನೆಗಳನ್ನು ವ್ಯವಸ್ಥಿತಗೊಳಿಸಲು ನಿರ್ಧರಿಸಿದೆ. ಆದರೂ ಮೊದಲ ಪ್ರಶ್ನೆಗೆ ನನ್ನ ಉತ್ತರವನ್ನೋದಿದಾಗ ನಾನು ಮಾಡಿದ್ದರ ಬಗೆಗೆ ನನಗೆ ಸಂತೋಷವಾಗಲಿಲ್ಲ. ಆದ್ದರಿಂದ  ನಾನು ಕಾರ್ಯದರ್ಶಿಗೆ ಮೊದಲು ನನ್ನ ಟಿಪ್ಪಣಿಗಳನ್ನು ಬರೆದುಕೊಳ್ಳಬೇಕೆಂದು ಹೇಳಿದೆ. ಆಕೆ ಹಾಗೆಯೇ ಮಾಡಿದಳು. ಸೂಚಕ ಸಾಲುಗಳಾಗಿದ್ದ ಈ ಟಿಪ್ಪಣಿಗಳಿಂದ (ಮಾರ್ಗಸೂಚಕ ಸಾಲುಗಳು) ಹೆಚ್ಚು ಉತ್ತಮವಾದ ಉತ್ತರವನ್ನು ಮುಂದಿನ ಪ್ರಶ್ನೆಗೆ ಬರೆಯುವುದು ನನ್ನಿಂದ ಸಾಧ್ಯವಾಯಿತು. ಸರಿಯಾದ ಸಮಯದೊಳಗೆ ನಾನು ಪರೀಕ್ಷೆ ಮುಗಿಸಿದೆ. ನನ್ನ ಉತ್ತರ ಪತ್ರಿಕೆಯನ್ನು ಮೇಲ್ವಿಚಾರಕರಿಗೆ ನೀಡಲಾಯಿತು. ಅವರು ಅದನ್ನು ಒಂದು ಲಕೋಟೆಯಲ್ಲಿಟ್ಟು ಮುಚ್ಚಿ ಕೂಡಲೇ ಮುದ್ರೆಯೊತ್ತಿದರು. ನನಗೆ ಎಷ್ಟು ಆಯಾಸವಾಗಿರಬಹುದೆಂದು ಅರಿತ ಅವರು ಮತ್ತು ಕಾರ್ಯದರ್ಶಿ ಇಬ್ಬರೂ ಪರೀಕ್ಷೆಯ ಸಮಯದ ನಂತರವೂ ಸ್ವಲ್ಪ ಹೊತ್ತು ನನ್ನೊಡನಿದ್ದರು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದ ಬೋಧಕವರ್ಗ ಹಾಗೂ ವಿದ್ಯಾರ್ಥಿಗಳಿಂದ ಬಂದಿದ್ದ ಶುಭ ಹಾರೈಕೆಗಳನ್ನು ನನಗೆ ತಿಳಿಸಿದರು. ನಾನು ನನ್ನ ಪ್ರಯತ್ನಗಳಲ್ಲಿ ಯಶಸ್ವಿಯಾಗಬೇಕೆಂದು ಅವರೆಲ್ಲರೂ ಆಶಿಸಿ, ಪ್ರಾರ್ಥಿಸುತ್ತಿರುವರೆಂದು ಹೇಳಿದರು. ನನ್ನಷ್ಟಕ್ಕೆ ನಾನೇ ತಡೆಯಲಾರದ ಅತ್ಯಂತ ಹೆಚ್ಚಿನ ಒತ್ತಡದಲ್ಲಿದ್ದ ನನಗೆ, ಅವರು ಹೇಳಿದುದನ್ನು ಕೇಳಿದುದು ಒಂದು ಅನಿರೀಕ್ಷಿತವಾದ ಕೊನೆಯಾಗಿದ್ದಿತು. ನನ್ನ ಕಣ್ಣೀರಿನ ಕಟ್ಟೆಯೊಡೆಯಿತು. ಆ ಬಡಪಾಯಿ ತರುಣನಿಗೆ ಈ ಸಂದರ್ಭವನ್ನು

ಹೇಗೆ ನಿಭಾಯಿಸುವುದೆಂದು ತಿಳಿಯದಾಗಿದ್ದಿತು. ಒಬ್ಬ ದಾದಿಯನ್ನು ಕರೆದು ಅನಂತರ ಅವರು ಮತ್ತು ಆ ಕಾರ್ಯದರ್ಶಿಯೂ ಸರಸರನೆ ಹೊರಟುಹೋದರು.

ಮಾರನೆಯ ದಿನ ನನ್ನ ಕೋಣೆಯು ಹಣ್ಣು-ಹೂವುಗಳ ಅಂಗಡಿಯಂತೆ ಕಾಣಲು ಪ್ರಾರಂಭವಾಯಿತು. ಒಂದಾದ ಮೇಲೊಂದರಂತೆ ಹಣ್ಣಿನ ಬುಟ್ಟಿಗಳು, ಒಂದಾದಮೇಲೊಂದರಂತೆ ಹೂಗುಚ್ಛಗಳು ಬರತೊಡಗಿದವು. ಎಲ್ಲವೂ ಸುಂದರವಾಗಿ ಸುತ್ತಿದ್ದು, ಗುರುತಿನ ಚೀಟಿಯೊಂದಿಗಿದ್ದವು. ಅವುಗಳಲ್ಲಿ ಹಲವು 'ನಿಮ್ಮ ಧೈರ್ಯವನ್ನು ಮೆಚ್ಚುವ ಓರ್ವ ಅನಾಮಧೇಯ ವಿಶ್ವಾಸಿ' ಎಂದಷ್ಟೇ ಹೇಳಿದ್ದವು. ಕೆಲವು ನನ್ನ ಉಪನ್ಯಾಸಕರಿಂದ, ಕೆಲವು ನನ್ನ ಸಹಪಾಠಿಗಳಿಂದ, ಮತ್ತೆ ಕೆಲವು ನಾನು ಬೇಸಿಗೆಯ ರಜೆಯ ಸಮಯದಲ್ಲಿ ಓರ್ವ ಪ್ರಯಾಣದ ಆತಿಥೇಯಳಾಗಿದ್ದಾಗ ನನ್ನ ಜೊತೆಯಲ್ಲಿದ್ದ ಕೆಲವು ಜನರಿಂದ ಬಂದಿದ್ದವು. ಮುಖಪುಟದಲ್ಲಿ ನನ್ನ ಕಥೆ ಇದ್ದ ಬೆಳಗಿನ ಪತ್ರಿಕೆಗಳನ್ನು ನನಗೆ ತೋರಿಸಲು ದಾದಿಯರು ಧಾವಿಸಿ ಬಂದರು. ಅದರಲ್ಲಿ ಬ್ಯಾಂಡೇಜು ಪಟ್ಟಿ ಕಟ್ಟಿಕೊಂಡು ಆಸ್ಪತ್ರೆಯ ಹಾಸಿಗೆಯ ಮೇಲೆ ಇದ್ದ ನನ್ನ ಚಿತ್ರದೊಡನೆ ಕಥೆಯೂ ಇದ್ದಿತು. ಈ ಪ್ರಚಾರದಿಂದಾಗಿ ನಿಚ್ಚಳವಾಗಿಯೂ ಹಲವು ಮಂದಿಯ ಜನ ನನ್ನನ್ನು ಅಪ್ರತಿಮ ಧೈರ್ಯಶಾಲಿ ಎಂದು ಪರಿಗಣಿಸಿರುವಂತೆ ಕಂಡಿತು. ಆದರೆ, ನಾನೋ, ಹೃದಯಾಂತರಾಳದಲ್ಲಿ ಭಯಗ್ರಸ್ತಳಾಗಿದ್ದೆ. ಉಳಿದ ಏಳು ಪತ್ರಿಕೆಗಳನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ ದಾಗಬಹುದು ಎಂದು ಹೆದರಿದ್ದೆ. ಒಂದು ಕೆಲಸವನ್ನು ಪೂರ್ಣಗೊಳಿಸಲು ನಾನು ಸರಿಯಾಗಿ, ಸಜ್ಜೇ ಆಗಿಲ್ಲದೆ ತೆಗೆದುಕೊಂಡ ಮೂರ್ಖತನಕ್ಕೆ ನನ್ನನ್ನು ನಾನೇ ಮತ್ತೆಮತ್ತೆ ಶಪಿಸಿಕೊಂಡೆ. ಆದರೂ ಈಗ ನನಗೆ ಬೇರೆ ಮಾರ್ಗವೇ ಇರಲಿಲ್ಲ. ಕೇವಲ ಧೈರ್ಯದ ಮುಖವಾಡ ಧರಿಸಿ ಅದನ್ನು ಮುಂದುವರೆಸುವುದೊಂದೇ ಇದ್ದುದು. ಈ ಯೋಚನೆಗಳೂ ಹಾಗೂ ಒಂದೇ ಸಮನೆ ಇದ್ದ ನೋವು ನಾನು ನಿದ್ದೆ ಮಾಡಲು ಬಿಡಲಿಲ್ಲ. ಹೀಗಾಗಿ ನಾನು ಬಹಳ ಹೆಚ್ಚಾಗಿಯೇ ದಣಿದವಳಾಗಿದ್ದೆ. ಯಾರೊಡನೆಯಾದರೂ ಮಾತನಾಡಲೇಬೇಕಾದ ಅವಶ್ಯಕತೆ ನನಗಿತ್ತು. ಆದರೆ, ನಾನೇ ಶಕ್ತಿಯ ಹಾಗೂ ಧೈರ್ಯದ ಎಂತಹ ಒಂದು ಸಂಕೇತವಾಗಿದ್ದೆನೆಂದರೆ, ಯಾರಿಗೂ ನನ್ನ ಭಯದ ಬಗೆಗೆ ಕೇಳುವುದು ಬೇಕಾಗಿರಲಿಲ್ಲ.

ಆಸ್ಪತ್ರೆಯಲ್ಲಿ ನನ್ನ ವಾಸದ ಎರಡನೇ ವಾರದ ಕೊನೆಯಲ್ಲಿ, ನಾನು ಇನ್ನೊಂದು ಪತ್ರಿಕೆಯನ್ನು ಮುಗಿಸಿದ ಮೇಲೆ, ನನ್ನ ಸುಟ್ಟ ಗಾಯಗಳು ಸೆಪ್ಟಿಕ್ ಆಗಿ ಕೊಳೆಯುವಂತಾದವು. ವೈದ್ಯರುಗಳು ನನಗೆ ಪೆನ್ಸಿಲಿನ್‌ನನ್ನು ಕೊಡಲು ಪ್ರಾರಂಭಿಸಿದರು. ಅದರ ಪರಿಣಾಮದಿಂದಾಗಿ ಎಲ್ಲೆಲ್ಲಿ ನನಗೆ ಸುಟ್ಟಿರಲಿಲ್ಲವೋ, ಅಲ್ಲೆಲ್ಲಾ ದೊಡ್ಡದಾದ ಕೆಂಪಾದ ಕಡಿಯುವ ಬಾಸುಂಡೆಗಳು ಆದವು. ಅದರ

ತುರಿಕೆ ಸುಟ್ಟ ಗಾಯಗಳ ನೋವಿಗಿಂತಲೂ ಬಲು ಕೆಟ್ಟದ್ದಾಗಿತ್ತು. ಅಲ್ಲದೆ, ನನ್ನ ಬಲಗೈನ ಬಳಕೆ ಇಲ್ಲದೆ, ನನಗೆ ನಾನೇ ಸರಿಯಾಗಿ ಕೆರೆದು ಕೊಳ್ಳಲೂ ಸಾಧ್ಯವಾಗುತ್ತಿರಲಿಲ್ಲ. ನಾನು ಎಂತಹಾ ದುರವಸ್ಥೆಯಲ್ಲಿದ್ದೆನೆಂದರೆ, ನನ್ನನ್ನು ನೋಡುತ್ತಿದ್ದ ವೈದ್ಯರು ಪೆನ್ಸಿಲಿನ್ ಕೊಡುವುದನ್ನು ನಿಲ್ಲಿಸಿದರು ಮತ್ತು ನನ್ನ ಮೈಗೆಲ್ಲಾ ತಣ್ಣಗೆ ಮಾಡುವ ದ್ರವವನ್ನು ಸವರಲು ದಾದಿಯೊಬ್ಬಳಿಗೆ ಹೇಳಿದರು. ಗಾಯಗೊಂಡ ಬಾಕ್ಸರನ ಗಾಯವನ್ನು ತತ್ಕಾಲಕ್ಕೆ ಪಟ್ಟಿ ಕಟ್ಟುವುದು ಅವನು ಮತ್ತೊಮ್ಮೆ ಅಖಾಡಕ್ಕೆ ಬಂದು ಮುಂದಿನ ಸುತ್ತಿನಲ್ಲಿ ಹೋರಾಡಬೇಕು ಎಂದೇ ಎನ್ನುವಂಥ ಒಬ್ಬ ಬಾಕ್ಸರನಂತಾಗಿತ್ತು ನನ್ನ ಸ್ಥಿತಿ. ಒಂದು ಬೆಳಿಗ್ಗೆ, ಯಾರ ಕೈ ಕೆಳಗೆ ನಾನು ಸಾಮಾಜಿಕ ಮಾನವ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದೆನೋ ಆ ಪ್ರೊಫೆಸರ್ ಗ್ಲೆಕ್‌ಮ್ಯಾನರು ಪರೀಕ್ಷೆಯ ಮೇಲ್ವಿಚಾರಕರಾಗಿ ಬಂದರು. ಅವರು ಮೇಲ್ವಿಚಾರಣೆ ಮಾಡಲು ಬಂದಿದ್ದ ಪರೀಕ್ಷೆಯು ಅವರು ನನಗೆ ಬೋಧಿಸುತ್ತಿದ್ದ ವಿಷಯದ್ದೇ ಆಗಿರುವುದೆಂದು ಅವರು ಅರಿತರು. ನನಗೆ ಮುಜುಗರವಾಗುವುದೆಂದು ತಿಳಿದ ಅವರು ತಾವು ತಮ್ಮ ಪುಸ್ತಕದಲ್ಲಿ ಮಗ್ನರಾಗಿರುವುದಾಗಿ ನನಗೆ ಭರವಸೆ ನೀಡಿದರು. ಆದರೆ ಈಗ ನಾನು ಅದನ್ನೆಲ್ಲ ಗಮನಿಸುವವಳಾಗಿರಲಿಲ್ಲ. ನನ್ನ ನೋವು ಎಷ್ಟು ಮಿತಿ ಮೀರಿದ್ದಿತು ಜೊತೆಗೆ ಪೆನ್ಸಿಲಿನ್‌ನಿಂದಾದ ಅಲರ್ಜಿಯು ಎಷ್ಟು ಕಿರಿಕಿರಿಯಾಗಿದ್ದಿತೆಂದರೆ ಪರೀಕ್ಷೆಯನ್ನು ಅರ್ಧ ಬರೆದಿರುವಾಗ ನಾನು ನನ್ನಿಂದ ಇನ್ನು ಸಹಿಸಲು ಸಾಧ್ಯವಿಲ್ಲವೆಂದೂ ನಾನು ನನ್ನ ಪದವಿಗಾಗಿ ನಡೆಸುವ ಹೋರಾಟವನ್ನು ನಿಲ್ಲಿಸಿಬಿಡಬೇಕಾಗಿದೆಯೆಂದೂ ಘೋಷಿಸಿದೆ. ನನ್ನ ಆವೇಶದ ಮಾತನ್ನು ಪ್ರೊಫೆಸರ್ ಗ್ಲೆಕ್‌ಮ್ಯಾನರು ಕೇಳಿದಾಗ, ಅವರು ನನ್ನ ಹಾಸಿಗೆಯ ಬದಿಗೆ ಬಂದು, ನನ್ನ ಕಣ್ಣುಗಳಲ್ಲಿ ಆಳವಾಗಿ ನೋಡಿದರು. ಅಧಿಕಾರಿಯುತ ಧ್ವನಿಯಲ್ಲಿ ಹೇಳಿದರು: "ನೀನು ಈಗ ಬಿಟ್ಟುಬಿಡಬಾರದು. ವೈದ್ಯರುಗಳು ಹಾಗೂ ದಾದಿಯರಿಗೆ ಹೇಳಿ ನಿನಗೆ ಕನಿಷ್ಠ ಪಕ್ಷ ತಾತ್ಕಾಲಿಕವಾದ ಆರಾಮವನ್ನು ಕೊಡಿಸುತ್ತೇನೆ. ಮತ್ತು ಈ ಪತ್ರಿಕೆಗೆ ನಾನು ನಿನಗೆ ಹೆಚ್ಚಿನ ಸಮಯವನ್ನು ಕೊಡುತ್ತೇನೆ. ನೀನು ಮುಂದುವರಿಸಲೇಬೇಕು; ನಿನಗಾಗಿಯಲ್ಲದಿದ್ದರೂ ನನಗಾಗಿ. ಏಕೆಂದರೆ, ನಾನು ನಿನ್ನಲ್ಲಿ ವಿಶ್ವಾಸವನ್ನು ಇಟ್ಟಿದ್ದೇನೆ. ಅಂತೆಯೇ ನಾನು ನಿರಾಶನಾಗುವುದನ್ನು ದ್ವೇಷಿಸುತ್ತೇನೆ." ಅವರ ಮಾತಿನಿಂದ ನನಗೆ ಅದೆಷ್ಟು ಆಶ್ಚರ್ಯವಾಯಿತೆಂದರೆ ಅವರ ಯೋಜನೆಗೆ ನಾನು ಒಪ್ಪಿದೆ. ವೈದ್ಯರು ಬಂದು ನನಗೊಂದು ನೋವು ನಿವಾರಕ ಚುಚ್ಚುಮದ್ದನ್ನು ಕೊಟ್ಟರು, ತುರಿಸುತ್ತಿರುವ ನನ್ನ ದೇಹದ ಮೇಲೆ ದಾದಿಯರು ಹೆಚ್ಚಾಗಿ ತಣ್ಣಗೆ ಮಾಡುವ ದ್ರವವನ್ನು ಹಾಕಿದರು. ಹತ್ತು ನಿಮಿಷಗಳ ವಿರಾಮದ ನಂತರ ನಾನು ಅಖಾಡಾಗೆ ವಾಪಸಾದೆ. ಹೋರಾಟವನ್ನು ಮುಂದುವರೆಸಿದೆ, ನನಗೆ ನಿಗದಿಪಡಿಸಲಾಗಿದ್ದ ಸಮಯಕ್ಕೆ ಸರಿಯಾಗಿ ಪತ್ರಿಕೆಯನ್ನು

ಮುಗಿಸಲು ಸಾಧ್ಯ ಮಾಡಿಕೊಂಡೆ.

ಪ್ರೊಫೆಸರ್ ಗ್ಲೆಕ್‌ಮ್ಯಾನರು ಪರೀಕ್ಷೆ ಮುಗಿದ ನಂತರ ಸುಮಾರು ಒಂದು ಗಂಟೆ ಕಾಲ ನನ್ನೊಡನಿದ್ದು ಹರಟೆ ಹೊಡೆದರು. ನಾನು ನನ್ನ ಪದವಿ ಪಡೆದ ನಂತರ ಏನು ಮಾಡಬೇಕೆಂದು ಯೋಚಿಸಿದ್ದೇನೆ ಎಂದು ಕೇಳಿದರು. ಅವರ ಆಶಾವಾದದಿಂದ ನಾನು ಶಕ್ತಿಯನ್ನು ಪಡೆದುಕೊಂಡೆ ಹಾಗೂ ಒಬ್ಬ ಕೊಳ್ಳುಗಾರ್ತಿಯಾಗುವ ಕೆಲಸವನ್ನು ಮಾಡಬೇಕೆಂದು ನಾನು ಈಗಲೂ ಆಶಿಸುವುದಾಗಿ ಉತ್ತರಿಸಿದೆ. ಇದನ್ನು ಕೇಳಿದ ಅವರು, ಒಂದು ಡಾಕ್ಟೊರೇಟ್ ಮಾಡಲು ಸಮರ್ಥಳನ್ನಾಗಿಸುವ ಒಂದು ಪದವೀಧರ ವಿದ್ಯಾರ್ಥಿ ವೇತನದಲ್ಲಿ ನನಗೆ ಆಸಕ್ತಿ ಇರುವುದೋ ಎಂದು ಕೇಳಿದರು. ಅವರು ನನ್ನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಾರಷ್ಟೇ ಎಂದು ನಾನು ತಿಳಿದೆ. ಒಂದೋ ಇದು ಅಥವಾ ನನ್ನನ್ನು ಡಾಕ್ಟರೇಟ್ ಪಡೆದುಕೊಳ್ಳುವಷ್ಟು ಸಮರ್ಥಳಾಗಿದ್ದಾಳೆ ಎಂದುಕೊಂಡ ಇವರ ತಲೆ ಕೆಟ್ಟಿದೆ ಎಂದು ನಾನು ಯೋಚಿಸಿದೆ. ನನ್ನ ನಿರೀಕ್ಷೆಯಲ್ಲಿ ಅತ್ಯುತ್ತಮ ಎಂದರೆ ನಾನು ಉತ್ತೀರ್ಣಳಾಗುವುದಷ್ಟೇ ಎಂದು ನಾನು ಅದಾಗಲೇ ತೀರ್ಮಾನಿಸಿದ್ದೆ. ಅಂತೆಯೇ ಪದವೀಧರ ವಿದ್ಯಾರ್ಥಿ ವೇತನವನ್ನು ಕಡಿಮೆ ಎಂದರೂ ಮೇಲಿನ ದ್ವಿತೀಯ ದರ್ಜೆಯ ಪದವಿಗಳನ್ನು ಪಡೆದವರಿಗೆ ಮಾತ್ರವೇ ನೀಡಲಾಗುವುದು ಎಂಬುದನ್ನು ನಾನು ತಿಳಿದಿದ್ದೆ. ಇದನ್ನೆಲ್ಲ ನಾನು ಪ್ರೊಫೆಸರ್ ಗ್ಲೆಕ್‌ಮ್ಯಾನ್‌ರಿಗೆ ಹೇಳಿದೆ. ಅಂತೆಯೇ ನನಗಾಗಿ ಯಾವುದೇ ರಿಯಾಯಿಗಳನ್ನು ನೀಡುವುದು ಬೇಡವೆಂದು ಒತ್ತಿ ಹೇಳಿದೆ. ನನಗೆ ದಯೆ ಬೇಕಾಗಿರಲಿಲ್ಲ. ಅದಕ್ಕುತ್ತರವಾಗಿ ಅವರು ನಕ್ಕರು. ಆ ರೀತಿ ಯಾವುದನ್ನೂ ನಾನು ಪಡೆಯುವುದಿಲ್ಲವೆಂದು ಅವರು ಭರವಸೆ ನೀಡುತ್ತಾ, ಒಂದು ಪರೀಕ್ಷೆಯನ್ನು ಯಾವ ಸಂದರ್ಭಗಳಲ್ಲಿ ತೆಗೆದುಕೊಳ್ಳಲಾಗುತ್ತದೆ ಎಂದು ಬಾಹ್ಯ ಪರೀಕ್ಷಕರಿಗೆ ತಿಳಿದಿರುವುದಿಲ್ಲವೆಂದೂ, ಅಷ್ಟೇ ಅಲ್ಲದೆ, ಅವರಿಗೆ ವಿದ್ಯಾರ್ಥಿಯ ಗುರುತೂ ತಿಳಿದಿರುವುದಿಲ್ಲ ವೆಂದೂ ಹೇಳಿದರು. ಆದ್ದರಿಂದ ನಾನು ಪಡೆದ ಅಂಕಗಳು ನನ್ನ ಕೆಲಸದ ನಿಜವಾದ ಮಾನದಂಡವಾಗಿರುವುದೇ ವಿನಾ ನನ್ನ ಪರಿಸ್ಥಿತಿಯ ಯಾವುದೇ ವಿಶೇಷ ಪರಿಗಣನೆಯಿಂದ ಅಲ್ಲ ಎನ್ನುವುದನ್ನು ನಾನು ಖಾತ್ರಿ ಮಾಡಿಕೊಳ್ಳಬಹುದಿತ್ತು. ಇದನ್ನು ಕೇಳಿದಾಗ ನನಗೆ ಬಹಳವೇ ಸಮಾಧಾನವಾಯಿತು. ಕಾರಣ, ಆ ಸಮಯದಲ್ಲಿ ನಾನು ದುರ್ಬಲ ರೋಗಿಯಾಗಿದ್ದೆನೆಂಬುದಕ್ಕಿಂತ ಇತರ ಯಾವುದೇ ವಿದ್ಯಾರ್ಥಿಯಂತೆಯೇ ನನ್ನನ್ನು ಕಾಣುವುದು ನನಗೆ ಬೇಕಾಗಿದ್ದಿತು.

ಕೆಲವು ದಿನಗಳ ನಂತರ ತುರಿಕೆಯು ಮಾಯವಾಯಿತು. ಆದರೆ, ಮುಂದೆ ಯಾವುದೇ ಆಂಟಿಬಯೋಟಿಕ್ಸ್‌ನ ಲೇಪವಿಲ್ಲದ ಕಾರಣ, ಸೋಂಕು ಬಹಳ ಬೇಗನೇ ಹರಡಿತು. ನನ್ನ ಮೈಯಿಂದ ಕೆಟ್ಟ ವಾಸನೆ ಬರತೊಡಗಿತು. ಅಮ್ಮನು ತಾನು ನಿತ್ಯವೂ ನನ್ನನ್ನು ಕಾಣಲು ಬಂದಾಗ, ಅವಳು ನನ್ನನ್ನು ಚುಂಬಿಸಲು ಬಗ್ಗಿದಾಗ

ಅವಳ ಕಂಗಳಲ್ಲಿ ಹೆದರಿಕೆಯನ್ನು ನಾನು ನೋಡಬಲ್ಲವಳಾಗಿದ್ದೆ. ಆ ವಾಸನೆಯು ನನಗೇ ವಾಕರಿಕೆ ತರಿಸುವಂತೆ ಮಾಡುತ್ತಿದ್ದಿತು. ಆಗ ನಾನು ಅಮ್ಮನಿಗೆ ಆ ವಾಸನೆಯನ್ನು ಮರೆಮಾಡಲು ಇಯಾಡಿ ಕೊಲೋನ್‌ನ ದೊಡ್ಡ ದೊಡ್ಡ ಶೀಷೆಗಳನ್ನು ತಂದುಕೊಡಲು ಕೇಳಿದೆ. ಇದು ನನ್ನನ್ನು ಭೇಟಿಯಾಗಲು ಬರುತ್ತಿದ್ದ ಅನೇಕರಿಗೆ ಸ್ವಲ್ಪ ಮಟ್ಟಿಗೆ ಸಹನೀಯವಾಗಿ ಮಾಡಿದ್ದಿತು.

ಕೊನೆಗೂ ನಾನು ನನ್ನ ಪರೀಕ್ಷೆಗಳನ್ನು ಮುಗಿಸಿದೆ. ನಾನು ಮೊದಲು ಸೇರಿಕೊಂಡಿದ್ದ ಮುಖ್ಯ ವಾರ್ಡ್‌ಗೇ ಮತ್ತೆ ನನ್ನನ್ನು ವರ್ಗಾಯಿಸಿದರು. ದಾದಿಯರು ನನ್ನನ್ನು ವಾಪಸಾಗುತ್ತಿರುವ ಓರ್ವ ನಾಯಕನಂತೆ ಪುನಃ ಸ್ವಾಗತಿಸಿದರು. ನಾನು ಗಾಲಿ ಕುರ್ಚಿಯಲ್ಲಿ ಕುಳಿತು ಒಳಹೋಗುತ್ತಿದ್ದಂತೆಯೇ ನನ್ನನ್ನು ತಿಳಿದಿದ್ದ ಕೆಲವು ರೋಗಿಗಳು ಉತ್ಸಾಹದಿಂದ ಚಪ್ಪಾಳೆ ತಟ್ಟಿದರು. ನಾನು ಇನ್ನೂ ಸ್ವಲ್ಪ ಕಾಲ ಆಸ್ಪತ್ರೆಯಲ್ಲೇ ಇರಬೇಕಾಗಬಹುದೆಂದು ಅಂದಾಜು ಮಾಡಿ ಕಿಟಕಿಯ ಬದಿಯ ಒಂದು ಮೂಲೆಯಲ್ಲಿ ಹಾಸಿಗೆಯೊಂದನ್ನು ನನಗೆ ಕೊಡಲಾಯಿತು. ಆ ಇಡೀ ವಾರ್ಡಿನಲ್ಲೇ ಅದು ಅತ್ಯುತ್ತಮವಾಗಿದ್ದ ಸ್ಥಳವಾಗಿದ್ದಿತು. ಆದರೆ ಆ ಸ್ಥಳವನ್ನು ನನಗಾಗಿ ಕೊಡಿಸಲು ಅದೆಷ್ಟು ಶ್ರಮಪಟ್ಟಿದ್ದರು ಎನ್ನುವುದನ್ನು ಗೌರವಿಸಲು ಆಗಲಿಲ್ಲ. ಕಾರಣ, ನಾನು ಮೂರು ವಾರಗಳ ಸತ್ವ ಪರೀಕ್ಷೆಯ ನಂತರ ಬಹಳವೇ ಆಯಾಸಗೊಂಡವಳಾಗಿದ್ದೆ. ವಾರ್ಡಿಗೆ ನಾನು ವಾಪಸಾದದ್ದು ನನ್ನ ಪರೀಕ್ಷೆಗಳು ಈಗ ಮುಗಿದಿವೆ ಎಂದು ನನಗೇ ಸಂಕೇತಿಸಿದ್ದವು. ಫಲಿತಾಂಶಗಳು ಘೋಷಿತವಾಗಬೇಕಿದ್ದರೆ ನಾನು ಇನ್ನೂ ನಾಲ್ಕು ವಾರಗಳು ಕಾಯಬೇಕು ಎಂದು ನನಗೆ ತಿಳಿದಿದ್ದಿತು. ಪರೀಕ್ಷೆಗಳ ಮಾನಸಿಕ ವೇದನೆಯು ಮುಗಿದ ಕೂಡಲೇ ನನ್ನ ಗಾಯಗಳ ನೋವಿನ ಅರಿವು ನನಗೆ ಹೆಚ್ಚಾಯಿತು. ನನ್ನ ಸ್ಥಿತಿಯು ಬಹಳ ಸ್ವಲ್ಪವೇ ಉತ್ತಮವಾಗಿರುವುದು ಎಂದೂ ನನಗೆ ಅರಿವಾಯಿತು. ಸೋಂಕು ಸುಟ್ಟ ಗಾಯಗಳು ವಾಸಿಯಾಗುವುದನ್ನು ತಡೆಯುತ್ತಿತ್ತು. ಬೇರೆ ಇತರ ಪರಿಣಾಮಕಾರಿ ಚಿಕಿತ್ಸೆಯು ತನಗೆ ತಿಳಿದಿಲ್ಲವೆಂದು ವೈದ್ಯರು ಒಪ್ಪಿಕೊಂಡರು. ಆದರೆ, ನನ್ನ ಯೌವನವು ಮಾತ್ರ ನನ್ನ ಪರವಾಗಿದ್ದಿತು. ಸೋಂಕಿನ ಜೊತೆ ಹೋರಾಡಲು ನನ್ನ ಶರೀರದ ಶಕ್ತಿಯು ವಾಪಸಾಗುವ ತನಕ ನಾನು ಅಲ್ಲಿಯೇ ಒಂದೆಡೆ ಮಲಗಿರಬೇಕಾಗುತ್ತದೆ ಎಂಬುದನ್ನು ನಾನು ನಂಬಲು ಆಗಲಿಲ್ಲ. ನಾನು ಮತ್ತೆಂದೂ ಸಂಪೂರ್ಣವಾಗಿ ಗುಣಮುಖಳಾಗುವುದೇ ಇಲ್ಲವೇನೋ ಎಂದು ನನಗೆ ದಿಗಿಲಾಗಲು ಪ್ರಾರಂಭವಾಯಿತು. ನಾನು ಮೊದಲು ಆಸ್ಪತ್ರೆಗೆ ಸೇರಿದಾಗ ನನ್ನ ಸ್ಥಿತಿಯ ಗಂಭೀರತೆಯು ನನಗೆ ತಿಳಿದಿರದಿದ್ದುದಕ್ಕೆ ನಾನು ಕೃತಜ್ಞಳಾಗಿದ್ದೆ. ಇಲ್ಲವಾಗಿದ್ದಲ್ಲಿ ನಾನೆಂದೂ ನನ್ನ ಪರೀಕ್ಷೆಗಳ ಮೇಲೆ ನನ್ನ ಗಮನವನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ. ನೋವನ್ನು ಹಾಗೂ ಬೇಸರವನ್ನು ಕಡಿಮೆ ಮಾಡಲು

ನಾನು ಕುಡಿತದತ್ತ ತಿರುಗಿದೆ. ನನ್ನ ಹಾಸಿಗೆಯ ಪಕ್ಕದಲ್ಲಿದ್ದ ಪೆಟ್ಟಿಗೆಯು ಸ್ಥಳದ ಬಾರ್ ಆಯಿತು. ನನ್ನನ್ನು ಭೇಟಿಯಾಗಲು ಬಂದವರು ಏನನ್ನು ತಂದರೆ ನನಗಿಷ್ಟವಾಗುವುದು ಎಂದು ಕೇಳಿದರೆ ನಾನು ಯಾವಾಗಲೂ ಮದ್ಯವನ್ನು ತಂದುಕೊಡಲು ವಿನಂತಿ ಮಾಡಿಕೊಳ್ಳುತ್ತಿದ್ದೆ. ವಾರಗಳಲ್ಲೇ ನಾನು ಸಾಕಷ್ಟು ಸರಕನ್ನು ಸೇರಿಸಿದೆ. ರಾತ್ರಿ ಪಾಳೆಯದಲ್ಲಿ ಕೆಲಸ ಮಾಡುವವರು ಬೆಳಗಿನ ಜಾವದ ಪ್ರಶಾಂತವಾದ ಗಂಟೆಗಳನ್ನು ನನ್ನ ಹಾಸಿಗೆಯ ಪಕ್ಕದಲ್ಲಿ ಕುಳಿತು ಔಷಧ ಮಾಡಿಕೊಡುವ ಬಟ್ಟಲುಗಳಲ್ಲಿ ನನ್ನ 'ವಿಶೇಷ ಔಷಧಿ'ಯನ್ನು ಹೀರುತ್ತಿದ್ದರು. ದಾದಿಯ ಸಿಬ್ಬಂದಿಯಲ್ಲಿ ನಾನು ಬಹಳವೇ ಜನಪ್ರಿಯಳಾದೆ. ಅದರಿಂದಾಗಿ ನನ್ನನ್ನು ಆರಾಮವಾಗಿಸಲು ಅವರುಗಳು ಮಾಡದ ಪ್ರಯತ್ನಗಳಿರಲಿಲ್ಲ. ನಾನು ನನ್ನ ಸಮಯವನ್ನು ಕಳೆಯುವುದರಲ್ಲಿ, ಅದರಲ್ಲಿಯೂ ಫಲಿತಾಂಶಗಳ ದಿನವು ಹತ್ತಿರವಾಗುತ್ತಿದ್ದಂತೆ, ಅವರು ಮಾಡುತ್ತಿದ್ದ ಸಹಾಯವು ಅತ್ಯಾಶ್ಚರ್ಯಕರವಾಗಿದ್ದಿತು. ಅಪ್ಪನು ವಿಶ್ವವಿದ್ಯಾನಿಲಯಕ್ಕೆ ಹೋಗುವ ಹಾಗೂ ಅವರಿಗೆ ನನ್ನ ಫಲಿತಾಂಶವು ತಿಳಿದ ಕೂಡಲೇ ಆಸ್ಪತ್ರೆಯ ವಾರ್ಡ್‌ಗೆ ಫೋನು ಮಾಡುವ ವ್ಯವಸ್ಥೆ ಮಾಡಿದ್ದೆ. ಅವರವರಲ್ಲಿ ಯಾರಿಗೆ ತಿಳಿದರೂ ಸಹ ಸುದ್ದಿಯು ಅವರಿಗೆ ಮುಟ್ಟಿದ ಕೂಡಲೇ ನನಗೆ ತಿಳಿಸುವುದಾಗಿ ದಾದಿಯರು ಒಪ್ಪಿದ್ದರು. ಫಲಿತಾಂಶಗಳ ದಿನ ಬೆಳಗಾಗುತ್ತಿದ್ದಂತೆ ಎಲ್ಲರಲ್ಲೂ ದಿಗಿಲು ತುಂಬಿದ್ದಿತು. ಪ್ರತಿ ಸಾರಿ ಫೋನಿನ ಗಂಟೆ ಬಾರಿಸಿದಾಗಲೂ ಕೂಡಲೇ ವಾರ್ಡಿನಲ್ಲೆಲ್ಲಾ ನಿಶ್ಶಬ್ದ ನೆಲೆಸುತ್ತಿತ್ತು. ವಾರ್ಡ್‌ನ ಸಿಸ್ಟರ್‌ನ ಕಛೇರಿಯಲ್ಲಿ ಫೋನಿದ್ದುದು. ನನ್ನ ಹಾಸಿಗೆಯಿಂದ ಮತ್ತೊಂದು ಮೂಲೆಯಲ್ಲಿ. ಅದರಿಂದಾಗಿ ನಾವು ಒಂದು ವ್ಯವಸ್ಥೆಯನ್ನೇ ರೂಪಿಸಿದೆವು. ಅದು ಹೀಗಿದ್ದಿತು: ಅಪ್ಪನಿಂದ ಸಂದೇಶವನ್ನು ಪಡೆದ ವಾರ್ಡ್‌ನ ಸೋದರಿಯು ಅದನ್ನು ಸನ್ನೆಯ ಭಾಷೆಯಲ್ಲಿ ಎದುರಿಗಿದ್ದ ರೋಗಿಗೆ ತಿಳಿಸುವುದು, ಆ ರೋಗಿಯ ಹಾಸಿಗೆಯನ್ನು ಆ ಸುದ್ದಿಯನ್ನು ನನಗೆ ತೋರಿಸಲು ಸಾಧ್ಯವಾಗುವಂತೆ ಯುಕ್ತಿಯಿಂದ ಹಾಕಲಾಗಿತ್ತು. ಆ ರೀತಿಯ ಆಯಾಸದ ಬಿಗುವನ್ನು ನಾನೆಂದೂ ಅನುಭವಿಸಿರಲಿಲ್ಲ, ಕೊಲೋನ್‌ಗೆ ಹೋಗುವಾಗ ವಿಮಾನ ಪ್ರಯಾಣದಲ್ಲಿಯೂ ಸಹ. ನನ್ನ ದೇಹವು ನಡುಗುತ್ತಿತ್ತು, ಅಂತೆಯೇ ನನ್ನ ಬಾಯಿ ಬಾಗಿಹೋಗಿದ್ದಿತು. ಅನೇಕ (ಬೇರೆಬೇರೆ) ಸುಳ್ಳು ಎಚ್ಚರಿಕೆ ಗಂಟೆಗಳ ನಂತರ ಫೋನು ಮತ್ತೆ ಗಂಟೆ ಬಾರಿಸಿತು. ವಾರ್ಡ್ ಸೋದರಿಯನ್ನು ಕೇಳುವ ಕಾತರದಿಂದ ನನಗೆ ಆಯಾಸವಾಗಿದ್ದಿತು. ಆದ್ದರಿಂದ ಕಾತರಳಾಗಿ ಒಂದು ಸನ್ನೆಗಾಗಿ ಕಾದೆ. ಆದರೆ ಏನನ್ನೂ ಕೇಳಿಸಿಕೊಳ್ಳಲಾರದವಳಾಗಿದ್ದೆ. ಇದ್ದಕ್ಕಿದ್ದಂತೆ ಒಬ್ಬ ದಾದಿಯು ನನ್ನ ಸುತ್ತಲಿನ ಪರದೆಯನ್ನು ಸರಿಸಿ ಒಳ ಬಂದಳು. ಕೈಯಲ್ಲಿ ಅವಳು ಒಂದು ಕಾಗದದ ತುಂಡನ್ನು ಹಿಡಿದೆತ್ತಿ ಕೊಂಡಿದ್ದಳು. ಅದರಲ್ಲಿ ೨:೧ ಎಂದು ಬರೆಯಲಾಗಿದ್ದಿತು. ನನಗೆ ಗರಬಡಿ ದಂತಾಯಿತು. ಎಲ್ಲೋ ಏನೋ ತಪ್ಪಾಗಿರಬೇಕು.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ನಾನು ಪರೀಕ್ಷೆಗಳನ್ನು ತೆಗೆದುಕೊಂಡಿರುವಾಗ ಇಷ್ಟು ಒಳ್ಳೆಯ ಪದವಿಯೊಂದನ್ನು ನನಗೆ ನೀಡಲು ಹೇಗೆ ತಾನೆ ಸಾಧ್ಯ? ವಾರ್ಡಿನಲ್ಲಿದ್ದ ರೋಗಿಗಳು 'ಫಾರ್ ಶೀ ಈಸ್ ಎ ಜಾಲಿ ಗುಡ್ ಫೆಲ್ಲೋ'ನ್ನು ಜೋರಾಗಿ ಒಂದು ಸುತ್ತು ಹಾಡಿದರು. ದಾದಿಯರು ನನ್ನನ್ನು ಅಭಿನಂದಿಸಲು ಧಾವಿಸಿ ಬಂದರು. ಸುದ್ದಿಯನ್ನು ನಾನು ಅರಗಿಸಿಕೊಂಡಂತೆ ಕಣ್ಣೀರಿನಲ್ಲಿ ಕರಗಿದೆ. ಇದಾದ ನಂತರ ಸ್ವಲ್ಪ ಹೊತ್ತಿನಲ್ಲೇ ಅಪ್ಪ ಒಂದು ದೊಡ್ಡದಾದ ಕೆಂಪು ಕಾರ್ನೇಷನ್ ಹೂಗಳ ಗುಚ್ಛವನ್ನು ಹಿಡಿದು ವಾರ್ಡಿನೊಳಗೆ ಓಡಿಬಂದರು. ಆ ಕಿವಿಯಿಂದ ಈ ಕಿವಿಯವರೆಗೆ ಅವರು ಹಲ್ಲು ತೋರಿಸಿ ನಗುತ್ತಿದ್ದರು. ನಾನು ಹಿಂದೆಂದೂ ನೋಡಿದ್ದುದಕ್ಕಿಂತಲೂ ಅವರೀಗ ಹೆಚ್ಚು ಸಂತೋಷದಿಂದಿದ್ದರು. ವರ್ಷಗಳಿಂದ ನಾನು ಕಾದುಕೊಂಡಿದ್ದುದು ಅವರು ಹೀಗೆ ನನ್ನನ್ನು ಗುರ್ತಿಸ ಬೇಕೆಂದು. ಅದರ ಅನುಭವ ಅದ್ಭುತವಾಗಿದ್ದಿತು. ನನ್ನ ಸಾಧನೆ ಯಶಸ್ಸನ್ನು, ನಾವು ಪರಸ್ಪರ ಹಂಚಿಕೊಂಡೆವು. ನನ್ನ ಯಶಸ್ಸಿಗಾಗಿ ನಾವು ಕುಡಿದೆವು. ಹಾಗೆಯೇ ನಾನು ಶೀಘ್ರವಾಗಿ ಗುಣಮುಖಳಾಗಬೇಕೆಂದು ಹಾರೈಸಿ ನಮ್ಮ ಚಿಕ್ಕ ಔಷಧಿ ಲೋಟಗಳಲ್ಲಿ ಪಾನ ಮಾಡಿದೆವು.

ನನ್ನನ್ನು ನೋಡಲು ಬಂದಿದ್ದ ಅನೇಕರು ಹೊರಟುಹೋದ ನಂತರ, ನನ್ನ ಮೊದಲ ಭಾವೋದ್ವೇಗವು ಮಾಯವಾಗಿ ನಾನು ನನ್ನ ಭವಿಷ್ಯದ ಬಗೆಗೆ ಯೋಚಿಸಲು ಪ್ರಾರಂಭಿಸಿದೆ. ನಾನು ಆಶಾವಾದಿಯಾಗಿದ್ದೆ. ಆಯ್ದುಕೊಳ್ಳಲು ನನಗೆ ಹಲವಾರು ಆಯ್ಕೆಗಳಿದ್ದವು. ಕೊನೆಗೂ ಜಗತ್ತು ನನ್ನ ಕಾವ್ಯ ಸಂಪುಟ ಆಗಿದ್ದಿತು. ಅಥವಾ ಹಾಗೆ ನಾನು ಯೋಚಿಸಿದೆ. ಕೆಲವು ದಿವಸಗಳ ನಂತರ ನನ್ನ ಪರೀಕ್ಷೆಯ ಫಲಿತಾಂಶದ ಬಗೆಗೆ ನನ್ನನ್ನು ಅಭಿನಂದಿಸಲು ಪ್ರೊಫೆಸರ್ ಗ್ಲೆಕ್‌ಮ್ಯಾನ್ ಬಂದರು. ಪದವೀಧರ ವಿದ್ಯಾರ್ಥಿವೇತನವನ್ನು ನನಗೆ ಕೊಡುವುದಾಗಿ ಪ್ರಸ್ತಾಪಿಸಿದರು. ಕಳೆದ ಶೈಕ್ಷಣಿಕ ವರ್ಷದ ಕೊನೆಗೆ ಸೇರಿಸಿ ನೀಡಲು ಅವರು ಆ ದಿನಾಂಕವನ್ನು ಹಿಂದಕ್ಕೆ ಹಾಕಲೂ ವ್ಯವಸ್ಥೆ ಮಾಡಿದ್ದರು. ಅವರು ಧರ್ಮಬುದ್ಧಿಯುಳ್ಳ ಉದಾರಿಗಳಾದುದ್ದರಿಂದ ಹೀಗೆ ಮಾಡುತ್ತಿದ್ದಾರೆಂದು ಭಾವಿಸಿದ ನಾನು ಅವರ ಕರುಣೆಯ ಪ್ರಸ್ತಾವವನ್ನು ತಿರಸ್ಕರಿಸಿದೆ. ಸ್ಪಷ್ಟವಾಗಿ ಅರ್ಥವಾಗುವಂತೆ ಅವರು ಬಹಳ ಸಿಟ್ಟಿಗೆದ್ದರು. ಸಾಮಾಜಿಕ ಮಾನವಶಾಸ್ತ್ರದ ಅಧ್ಯಯನವನ್ನು ನಡೆಸಲು ಓರ್ವ ಅರ್ಥಶಾಸ್ತ್ರಜ್ಞರನ್ನು ಆಕರ್ಷಿಸಲು (ಮನವೊಲಿಸಲು) ತಾವು ಕೆಲವು ಕಾಲದಿಂದಲೂ ಪ್ರಯತ್ನಿಸುತ್ತಿರುವುದಾಗಿ ಅವರು ವಿವರಿಸುತ್ತಾ ಹೋದರು. ಅವರು ಯಾವುದೇ ಔದಾರ್ಯದ ವಿಷಯವನ್ನು ಪ್ರೋತ್ಸಾಹಿಸುವುದಿಲ್ಲವೆಂದು ನನಗೆ ಖಚಿತಪಡಿಸಿ, ತಮಗೆ ನನ್ನ ಬೌದ್ಧಿಕ ಸಾಮರ್ಥ್ಯದಿಂದ ಹಾಗೂ ತಾವೇ ಕಣ್ಣಾರೆ ಕಂಡು ತಿಳಿದ ನನ್ನ ದೈಹಿಕ ಶಕ್ತಿಯಿಂದ ಸಂಪ್ರೀತಿಯಾಗಿದೆಯೆಂದು ತಿಳಿಸಿ ನನ್ನ ಮನವೊಲಿಸಿದರು. ನನ್ನ ಕಣ್ಣುಗಳು

ಬೆಳಗಿದವು. ಯಾವುದೇ ಸಂತೋಷವಿಲ್ಲದೆ, ಅವರ ಪ್ರಸ್ತಾವವನ್ನು ನಾನು ಒಪ್ಪಿದೆ. ಕೊನೆಗೆ ನಾನು ಡಾಕ್ಟರರಾಗುವವಳಿದ್ದೆ ತಾನೆ.

ಜಾನ್ ಲೀವಿಸ್‌ಗೆ ಅವರು ನನಗೆ ಪ್ರಸ್ತಾವಿಸಿದ್ದ ಸ್ಥಾನವನ್ನು ನಾನು ಮನಸ್ಸಿಲ್ಲದ ಮನಸ್ಸಿನಿಂದ ಬಿಟ್ಟುಬಿಡಬೇಕಾಗಿದೆಯೆಂದು ನಾನು ತಿಳಿಸಿದೆ. ಅದು ಎಷ್ಟು ಕಾಲದವರೆಗೆ ಎಂದು ನನಗೂ ತಿಳಿದಿಲ್ಲವೆಂದೂ ಹಾಗೆ ಸಾಧ್ಯವಾದರೆ, ನಾನು ಅವರೊಡನೆ ಕೆಲಸ ಮಾಡಲು ಪ್ರಾರಂಭಿಸುವಷ್ಟು ಚೆನ್ನಾದ ಕೂಡಲೇ ತಿಳಿಸುತ್ತೇನೆಂದೂ ಹೇಳಿದೆ. ವಾಸ್ತವವಾಗಿ ನಾನೊಂದು ಶೈಕ್ಷಣಿಕ ಜೀವನೋಪಾಯದ ಕಲ್ಪನೆಯಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದೆ. ನಾನು ಮಾಡುವ ಏನೋ ಒಂದನ್ನು ಆಸ್ವಾದಿಸುತ್ತಿರುವಾಗ ಅದಕ್ಕಾಗಿ ಹಣ ತೆಗೆದುಕೊಳ್ಳುವುದು ಅನೀತಿ ಎಂದು ನಾನು ಯೋಚಿಸಿದ್ದ ನನ್ನ ರಸ್ಕಿನ್ ಕಾಲೇಜಿನ ದಿನಗಳಿಂದ ನಾನು ಬಹಳ ದೂರ ಸಾಗಿ ಬಂದಿದ್ದೆ. ಹೇಗಾದರೂ, ನನ್ನ ವಿದ್ಯಾಭ್ಯಾಸವನ್ನು ಮತ್ತೊಮ್ಮೆ ಮುಂದುವರೆಸುವುದನ್ನು ಯೋಚಿಸಲು ಪ್ರಾರಂಭಿಸುವ ಮುಂಚೆಯೇ ನಾನು ಹುಷಾರಾಗುವುದರತ್ತ ಹೆಚ್ಚು ಗಮನವನ್ನು ಕೊಡಬೇಕಾಗಿದ್ದಿತು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಬೇಕೆಂದು ನಿರ್ಧರಿಸಿದೆ. ಅಂತೆಯೇ 'ಆಸ್ಪತ್ರೆಯಿಂದ ಬಿಡುಗಡೆ ಹೊಂದುವ ಕಾರ್ಯಾಚರಣೆ' ಎಂದು ನಾನು ಹೆಸರಿಸಿದ್ದನ್ನು ಪ್ರಾರಂಭಿಸಿದೆ.

ಟೆಕ್ಸಿಯು ನಿಯತವಾಗಿ ಬಂದು ನನ್ನನ್ನು ಕಾಣುತ್ತಿದ್ದಳು. ಒಮ್ಮೆ ನಾನು ನನ್ನ ಸುಟ್ಟ ಗಾಯಗಳು ಬೇಗ ವಾಸಿಯಾಗುವುದು ನಿಜಕ್ಕೂ ಸಾಧ್ಯವಿಲ್ಲವೇ ಎಂದು ಅವಳ ವೈದ್ಯಕೀಯ ಮಿತ್ರರನ್ನು ಕೇಳಿ ತಿಳಿದುಕೊಳ್ಳಲು ಹೇಳಿದೆ. ಆ ದಿನವೇ ಅವಳು ನನ್ನ ಬಳಿಗೆ ವಾಪಸಾಗಿ ಬಂದು ಹೇಳಿದಳು, ಅದೇನೆಂದರೆ ಮ್ಯಾಂಚೆಸ್ಟರ್‌ನ ಇನ್ನೊಂದು ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳಿಗೆಂದೇ ವಿಶೇಷವಾಗಿ ಇರುವ ಒಂದು ವಿಭಾಗವಿದೆಯೆಂದು, ಅಲ್ಲಿ ಅವರು ಚರ್ಮದ ಕಸಿ ಮಾಡುವ ತಜ್ಞತೆಯನ್ನು ಹೊಂದಿದ್ದಾರೆಂದೂ, ಈ ಹೊಸ ತಾಂತ್ರಿಕತೆಯು ಯುದ್ಧ ಕಾಲದಲ್ಲಿ ವಿಮಾನಗಳ ಸಿಬ್ಬಂದಿಯು ತಮ್ಮ ವಿಮಾನಗಳನ್ನು ಶತ್ರುಗಳು ಹೊಡೆದುರುಳಿಸಿದಾಗ ಇವರು ಬಹಳವಾಗಿ ಸುಟ್ಟುಹೋದಾಗ, ಇವರಿಗೆ ಸಹಾಯವಾಗಲೆಂದು ಕಂಡು ಹಿಡಿದದ್ದಾಗಿತ್ತು. ನಾನು ಆ ವಿಭಾಗಕ್ಕೆ ಸೇರಿಕೊಳ್ಳಬೇಕಾದರೆ, ನನ್ನನ್ನು ಅಲ್ಲಿಗೆ ವರ್ಗಾಯಿಸಬೇಕೆಂದು ಈ ಆಸ್ಪತ್ರೆಯ ವೈದ್ಯರನ್ನು ನಾನು ಒಪ್ಪಿಸಬೇಕಾಗಿತ್ತು ಅಥವಾ ನಾನೇ ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು, ನಮ್ಮ ಕುಟುಂಬದ ಹಳೆಯ ಸ್ನೇಹಿತನಾದ ನಮ್ಮ ಜಿಪಿಯನ್ನು ನನ್ನನ್ನು ಆ ವಿಭಾಗಕ್ಕೆ ಸೇರಿಸು ಎಂದು ಕೇಳಬೇಕು. ನಾನು ನನ್ನ ಆಸ್ಪತ್ರೆಯ ವೈದ್ಯರಿಗೆ ಚರ್ಮದ ಕಸಿ ಮಾಡಿಸಿಕೊಳ್ಳುವ ಸಾಧ್ಯತೆಯ ಬಗೆಗೆ ಸೂಚಿಸಿದಾಗ ಅವರೂ ಕೂಡಲೇ ಅದನ್ನು ತಿರಸ್ಕರಿಸಿದರು. ನನ್ನ ಗುಣ ಹೊಂದುವಿಕೆಯ ಕೀರ್ತಿಗೆ ತಾವೇ ಭಾಜನ ರಾಗಬೇಕೆಂದು ಅವರು

ಸ್ವಾರ್ಥಪರವಾಗಿದ್ದಾರೆಂದು, ಅದರಿಂದಲೇ ನಾನು ಆರೋಗ್ಯವಂತಳಾಗಿ ಬಾಗಿಲಿನಿಂದಾಚೆಗೆ ನಾನೇ ನಡೆದುಹೋಗುವವರೆಗೂ ನನ್ನನ್ನು ಅಲ್ಲಿಟ್ಟುಕೊಂಡಿರುತ್ತಾರೆ ಎಂದು ನಾನು ಯೋಚಿಸಿದೆ. ಅನಂತರ ನಾನೇ ಬಿಡುಗಡೆ ಮಾಡಿಸಿಕೊಂಡು ಹೋಗುವ ಬಗ್ಗೆ ಮತ್ತು ಅದೇ ದಿನವೇ ಸುಟ್ಟಗಾಯಗಳ ತಜ್ಞರ ವಿಭಾಗಕ್ಕೆ ನಾನೇ ಸೇರಿಕೊಳ್ಳುವ ಬಗ್ಗೆ ಅಮ್ಮನಲ್ಲಿ ಚರ್ಚಿಸಿದೆ. ನನಗೆ ನಾನೇ ನಡೆದಾಡಲು, ನನ್ನನ್ನು ನಾನೇ ನೋಡಿಕೊಳ್ಳಲು ನನ್ನಿಂದ ಸಾಧ್ಯವಿರದಿದ್ದ ಕಾರಣ, ನನ್ನನ್ನು ಮನೆಗೆ ಕರೆದೊಯ್ಯಲು ಅವಳ ಒಪ್ಪಿಗೆ ನನಗೆ ಬೇಕಿದ್ದಿತು. ಆ ಕೆಲಸ ಆಸ್ಪತ್ರೆಯು ನನ್ನನ್ನು ಬಿಡುಗಡೆಗೊಳಿಸಲು ಸಿದ್ಧವಾಗುವ ಮುಂಚೆಯೇ ಆಗಬೇಕಿತ್ತು. ಆದರೆ ಅವಳು ಹಾಗೆ ಮಾಡಲು ನಿರಾಕರಿಸಿದಾಗ ನನಗೆ ಕೋಪ ಬಂದಿದ್ದಿತು. ನಾನು ಎಷ್ಟೆಲ್ಲಾ ಅವಳಿಗಾಗಿ ಮಾಡಿದ್ದೆ. ಅವಳು ನನ್ನ ಬಗೆಗೆ ಚಿಂತೆ ಮಾಡುತ್ತಿದ್ದಾಳೆ ಎಂದಾಗ ನಾನು ಅದನ್ನು ಗೌರವಿಸಿದ್ದೆ. ಆದರೆ ಅವಳು ನನಗೆ ಸಹಾಯ ಮಾಡಲು ಸಿದ್ಧಳಿಲ್ಲವೆಂಬುದನ್ನು ನನಗೆ ನಂಬಲಾಗಲಿಲ್ಲ.

ದಿನಗಳು ಮತ್ತು ವಾರಗಳು ಉರುಳಿ ಹೋಗುವುದನ್ನು ಮುಂದುವರೆಸಿದವು. ನನ್ನ ಸ್ಥಿತಿಯಲ್ಲಿ ಮಾತ್ರ ಯಾವುದೇ ಸುಧಾರಣೆಯಾಗಿಲ್ಲವೆಂಬುದನ್ನು ನಾನು ನೋಡಬಲ್ಲವಳಾಗಿದ್ದೆ. ಅವರು ನನ್ನ ಬ್ಯಾಂಡೇಜನ್ನು ಬದಲಾಯಿಸಲು ಬಂದಾಗ ಗಾಯವು ವಾಸಿಯಾಗುತ್ತಿರುವ ಲಕ್ಷಣಕ್ಕಾಗಿ ನಾನು ಕಾತರದಿಂದ ನೋಡುತ್ತಿದ್ದೆ. ಆದರೆ, ಆ ಸೋಂಕು ಎಷ್ಟು ಕೆಟ್ಟದಾಗಿದ್ದಿತೋ ಹಾಗೆಯೇ ಇರುತ್ತಿತ್ತು. ನಾನು ಬಹಳ ಖಿನ್ನಳಾದೆ. ಅಂತೆಯೇ ಸಂಪೂರ್ಣವಾಗಿ ಅಸಹಾಯಕಳಾಗಿದ್ದೆ. ಪ್ರೊಫೆಸರ್ ಗ್ಲೆಕ್‌ಮ್ಯಾನ್‌ರು ತಮ್ಮ ಮನಸ್ಸನ್ನು ಬದಲಾಯಿಸಿ ಬಿಡುವರೇನೋ ಮತ್ತು ನಾನು ಈ ಆಸ್ಪತ್ರೆಯಲ್ಲಿ ಕೊಳೆಯುತ್ತಾ ಬಿದ್ದಿರಲು ಬಿಟ್ಟುಬಿಡುವರೇನೋ ಎಂದು ನಾನು ಹೆದರಲು ಪ್ರಾರಂಭಿಸಿದೆ. ನಾನು ಟೆಕ್ಸಿಯೊಡನೆ ಮನಬಿಚ್ಚಿ ಇದನ್ನೇ ಹೇಳಿದಾಗ ಅವಳು ನನ್ನನ್ನು ತಡೆದು, ತನ್ನಲ್ಲೊಂದು ಉಪಾಯ ಇರುವುದಾಗಿ ಹೇಳಿದಳು. ಅವಳು ತನ್ನ ಪತಿ ಫಿತ್‌ನನ್ನು ನನ್ನ ವಿಷಯವಾಗಿ, ಕಿವಿ, ಮೂಗು ಮತ್ತು ಗಂಟಲು ತಜ್ಞರೊಡನೆ ಚರ್ಚಿಸಲು ಹೇಳುವುದಾಗಿ ತಿಳಿಸಿದಳು. ಈ ತಜ್ಞರೇ ಅಲ್ಲಿ ಹಿರಿಯ ವೈದ್ಯರಾಗಿದ್ದು, ನಾನು ಆಸ್ಪತ್ರೆಗೆ ಸೇರಿದ ದಿನ ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರು. ಆದ್ದರಿಂದ ಅವರಿಗೆ ಸುಟ್ಟ ಗಾಯಗಳ ಚಿಕಿತ್ಸೆಯ ಬಗ್ಗೆ ಸ್ವಲ್ಪವೇ ತಿಳಿದಿದ್ದರೂ, ಅವರೇ ನನ್ನ ವಿಚಾರದಲ್ಲಿ ಅಧಿಕಾರ ಹೊಂದಿದ್ದವರು.

ಕೆಲವು ದಿವಸಗಳ ನಂತರ ಸುಟ್ಟ ಗಾಯಗಳ ವಿಭಾಗದ ನಿರ್ದೇಶಕರು ಆ ದಿನದ ಮಧ್ಯಾಹ್ನ ನನ್ನನ್ನು ನೋಡಲಿದ್ದಾರೆ ಎಂದು ನನಗೆ ತಿಳಿಸಲಾಯಿತು. ಎತ್ತರವಾಗಿ ಕಾಣುತ್ತಿದ್ದ, ಬಿಳಿ ಕೂದಲಿನ ವರ್ಚಸ್ವೀ ಸಭ್ಯರೊಬ್ಬರು ಬಂದರು. ಅವರ ಹಿಂದೆ ನನ್ನನ್ನು ನೋಡಿಕೊಳ್ಳುತ್ತಿದ್ದ ವೈದ್ಯರುಗಳು ಹಾಗೂ ದಾದಿಯರ

ತಂಡವೇ ಇದ್ದಿತು. ಅವರು ತಮ್ಮನ್ನು ತಾವು ಪರಿಚಯಿಸಿಕೊಂಡು, ನನ್ನ ಎಡಗೈಯನ್ನು ಬಲವಾಗಿ ಕುಲುಕುತ್ತಾ ಹೇಳಿದರು. "ತರುಣಿ, ನೀವು ಸಾಕಷ್ಟು ಹೆಸರು ಮಾಡಿದ್ದೀರಿ. ನಾನು ಸಾಮಾನ್ಯವಾಗಿ ಯಾರಲ್ಲಿಗೂ ಕರೆ ಮಾಡುವುದಿಲ್ಲ. ಆದರೆ, ನಿಮ್ಮಿಂದ ನಾನದೆಷ್ಟು ಕುತೂಹಲಿಯಾದೆನೆಂದರೆ, ನಾನೇ ಖುದ್ದಾಗಿ ನಿಮ್ಮಲ್ಲಿಗೆ ಬರಬೇಕೆನಿಸಿತು." ಆನಂತರ ಒಬ್ಬ ದಾದಿಯು ನನ್ನ ಗಾಯದ ಪಟ್ಟಿಗಳನ್ನು ಬಿಚ್ಚಿದಳು. ಆತನು ಬೇಸರದಿಂದ ತನ್ನ ಮೂಗನ್ನು ಗಂಟಿಕ್ಕಿದರು. ನನ್ನ ವೈದ್ಯರುಗಳಲ್ಲೊಬ್ಬರಿಗೆ ಅವರು ಕೂಡಲೇ ರೋಗಗ್ರಸ್ತ ವ್ರಣದ ಸ್ರಾವವನ್ನು ಒತ್ತಿ ತೆರೆಯಲು ಹೇಳಿ, ಅದನ್ನು ತಾವು ಪರೀಕ್ಷಿಸಲು ಕೊಂಡೊಯ್ಯುತ್ತಿರುವುದಾಗಿ ಹೇಳಿದರು. ಅದರ ಕಲ್ಚರ್‌ನ ವರದಿ ಬಂದ ಕೂಡಲೇ ಅವರು ನನಗೆ ಯಾವ ಆ್ಯಂಟಿಬಯಾಟಿಕ್ ಕೊಡಬೇಕೆನ್ನುವ ಸೂಚನೆಯನ್ನು ದೂರವಾಣಿಯಲ್ಲಿ ತಿಳಿಸುವುದಾಗಿ ಹೇಳಿದರು. ಅಲ್ಲಿಯವರೆಗೆ ನನಗೆ ಆಗಿದ್ದ ಚಿಕಿತ್ಸೆಯ ಬಗೆಗೆ ಅವರಿಗೇನೂ ಬಹಳ ತೃಪ್ತಿಯಾದಂತೆ ಕಾಣಲಿಲ್ಲ ಎಂದು ನಾನು ಹೇಳಬಲ್ಲವಳಾಗಿದ್ದೆ. ಅಂತೆಯೇ ಅವರು ನನ್ನ ವೈದ್ಯರ ಬಳಿ ಗುಟ್ಟಾಗಿ ಹೇಳಿದ್ದನ್ನು ನಾನು ಕೇಳಿಸಿಕೊಂಡೆ. "ಪೆನ್ಸಿಲಿನ್ ಒಂದೇ ಮಾರುಕಟ್ಟೆಯಲ್ಲಿರುವ ಆ್ಯಂಟಿಬಯಾಟಿಕ್ ಅಲ್ಲ ಎನ್ನುವುದು ನಿಮಗೆ ಚೆನ್ನಾಗಿಯೇ ಗೊತ್ತಿರಬೇಕಲ್ಲವೆ." ಎರಡು ದಿನಗಳ ನಂತರ ನನಗೆ ಆರಿಯೋ ಮೈಸಿನ್‌ನನ್ನು ಕೊಡಲಾಯಿತು. ಅದು ಇಂದ್ರಜಾಲದಂತೆ ಕೆಲಸ ಮಾಡಿತು. ಕೆಲವೇ ದಿವಸಗಳೊಳಗೆ ಸೋಂಕು ಸಂಪೂರ್ಣವಾಗಿ ಇನ್ನಿಲ್ಲದಂತೆ ಮಾಯವಾಯಿತು.

ಚರ್ಮದ ಕಸಿ ಮಾಡಲು ನನ್ನ ಗಾಯಗಳು ಈಗ ತಯಾರಾಗಿದ್ದವು. ಕೊನೆಗೂ ಸುರಂಗದ ಆ ಕೊನೆಯಲ್ಲಿ ದೀಪವನ್ನು ನಾನು ನೋಡುವ ಹಾಗಾಯಿತಲ್ಲ ಎಂದು ಆನಂದ ತುಂದಿಲಳಾದೆ. ಆ ರಾತ್ರಿ ವಾರ್ಡ್‌ನ ದಾದಿಯರು ನನಗಾಗಿ ಒಂದು ಸಂತೋಷಕೂಟವನ್ನೇರ್ಪಡಿಸಿದರು. ನನ್ನ ಗಾಲಿ ಹಾಸಿಗೆಯನ್ನು ವಾರ್ಡ್‌ನ ಮಧ್ಯದಲ್ಲಿರಿಸಿದರು, ಭಾಷಣಗಳನ್ನು ಮಾಡಿದರು, ಹಾಡುಗಳನ್ನು ಹಾಡಿದರು– ಈ ಹಾಡುಗಳನ್ನು ಅವರುಗಳೇ ನನ್ನ ಗೌರವಾರ್ಥ ರಚಿಸಿದ್ದರು. ಅನಂತರ ನನ್ನ ಸಹರೋಗಿಗಳ ಕಾಣಿಕೆಯಾಗಿ ಕೋಣೆಯ ಸುತ್ತಲೂ ವೈವಿಧ್ಯಮಯವಾಗಿ ಇಟ್ಟಿದ್ದ ಬೇರೆಬೇರೆ ಗುಂಪಿನ ಎಲ್ಲ ಹೂವುಗಳಿಂದ ಮಾಡಿದ ದೊಡ್ಡದೊಂದು ಹೂಗುಚ್ಛವನ್ನು ನನಗೆ ಕಾಣಿಕೆಯಾಗಿ ನೀಡಿದರು. ಇದಕ್ಕೆಲ್ಲ ಏನು ಹೇಳಬೇಕೆಂಬುದೇ ನನಗೆ ತಿಳಿಯಲಿಲ್ಲ. ಅವರ ಜೊತೆಗೆ ನಾನು ಕಳೆದ ಸಮಯವು ನೋವಿನಿಂದಲೂ, ಯಾತನೆಯಿಂದಲೂ ಕೂಡಿದ್ದಿತು. ನನಗೊಂದು ವೇಳೆ ಸರಿಯಾದ ಚಿಕಿತ್ಸೆ ಸಿಕ್ಕಿದ್ದರೆ ನಾನು ಅಷ್ಟು ಸಮಯದವರೆಗೆ ಅಲ್ಲಿರುತ್ತಲೇ ಇರಲಿಲ್ಲ ಎಂದು ನನಗನ್ನಿಸಿತು. ಅಲ್ಲಿಂದ ಹೊರಡಲು ನಾನಿನ್ನು ಕಾಯಲಾರೆ ಎಂದು ನಾನು ಅವರಿಗೆ

ಹೇಳಬೇಕೆನ್ನಿಸಲಿಲ್ಲ. ಆದರೆ, ಅದರ ಬದಲಾಗಿ ನಾನು ಅಲ್ಲಿರುವ ನನ್ನ ಇರುವಿಕೆಯನ್ನು ಹೆಚ್ಚು ಸಹನೀಯ ಮಾಡಿದ್ದಕ್ಕಾಗಿ ಅವರಿಗೆಲ್ಲ ನನ್ನ ಕೃತಜ್ಞತೆಯನ್ನು ಸಲ್ಲಿಸಿ ಕೆಲವು ಮಾತುಗಳನ್ನಾಡಿದೆ.

ಬೆಳಿಗ್ಗೆ ನನ್ನನ್ನು ಸುಟ್ಟಗಾಯಗಳ ವಿಭಾಗಕ್ಕೆ ವರ್ಗಾಯಿಸಲು ಒಂದು ಆ್ಯಂಬುಲೆನ್ಸ್ ಬಂದಿತು. ನಾನು ಅಮಿತ ಹರ್ಷಚಿತ್ತಳಾಗಿದ್ದೆ. ಆ್ಯಂಬುಲೆನ್ಸ್‌ನ ಜನರೊಡನೆ ನಕ್ಕು, ವಿನೋದ ಮಾಡಿದೆ. ಚರ್ಮದ ಕಸಿಯು ಯಶಸ್ವಿಯಾಗುವುದೆನ್ನುವುದರಲ್ಲಿ ನನಗೆ ಯಾವ ಸಂಶಯವೂ ಇರಲಿಲ್ಲ. ಕೊನೆಗೂ ನನ್ನ ದುರ್ಬಲ ಸ್ಥಿತಿಗೊಂದು ಅಂತ್ಯವನ್ನು ನಾನು ಕಾಣಬಲ್ಲವ ಳಾಗಿದ್ದೆ. ನಾನು ಗಾಲಿ ಕುರ್ಚಿಯಲ್ಲಿ ಕುಳಿತು ವಿಭಾಗವನ್ನು ಪ್ರವೇಶಿಸಿದೊಡನೆಯೇ, ಸಿಬ್ಬಂದಿಯು ನನ್ನನ್ನು ಸುತ್ತುವರಿದು ನನ್ನ ಧೈರ್ಯಕ್ಕೆ, ಯಶಸ್ಸಿಗೆ ಅಭಿನಂದಿಸು ತ್ತಿರುವುದನ್ನು ಕಂಡು ಎಲ್ಲರಿಗೂ ನನ್ನ ಬಗ್ಗೆ ತಿಳಿದಿರುವಂತೆ ಕಾಣಿಸಿ ನಾನು ಆಶ್ಚರ್ಯಗೊಂಡೆ. ಅವರೆಲ್ಲರೂ ಪತ್ರಿಕೆಯಲ್ಲಿ ನನ್ನ ಪರೀಕ್ಷೆಯ ಫಲಿತಾಂಶದ ವರದಿಯನ್ನು ನೋಡಿದ್ದರು. ನನಗೆ ಅತ್ಯಂತ ಪ್ರಮುಖ ವ್ಯಕ್ತಿಗೆ ನೀಡುವ ಗೌರವವನ್ನೇ ನೀಡಲಾಯಿತು. ಹಾಗೂ ನನ್ನೊಬ್ಬಳಿಗಾಗಿಯೇ ಪಕ್ಕದ ಕೋಣೆಯೊಂದನ್ನು ಕೊಡಲಾಯಿತು.

ಎರಡು ದಿನಗಳ ನಂತರ ಚರ್ಮದ ಕಸಿ ಮಾಡಲು ನನ್ನನ್ನು ಶಸ್ತ್ರಕ್ರಿಯೆ ನಡೆಸುವ ಕೋಣೆಗೆ ಕರೆದೊಯ್ಯಲಾಯಿತು. ಅರಿವಳಿಕೆ ಔಷಧಿಯಿಂದ ನಾನು ಎಚ್ಚೆತ್ತಾಗ ನನ್ನ ಶರೀರವೆಲ್ಲ ಬಿಗಿಯಾದ ಬ್ಯಾಂಡೇಜ್‌ನಿಂದ ಸುತ್ತಲ್ಪಟ್ಟಿದ್ದು, ಮತ್ತೆ ನನ್ನ ಹಾಸಿಗೆಯ ಮೇಲಿದ್ದೆ. ಶಸ್ತ್ರ ಚಿಕಿತ್ಸಕರು ಯಾವಾಗ ಚರ್ಮ ಕಸಿಯಲು ಎಷ್ಟನ್ನು ತೆಗೆದುಕೊಂಡಿದೆ ಎನ್ನುವುದನ್ನು ಅಂದಾಜು ಮಾಡಿದಾಗ, ಅಂದರೆ ಇನ್ನು ಕೆಲವೇ ದಿವಸಗಳಲ್ಲಿ ಆ ಬ್ಯಾಂಡೇಜುಗಳನ್ನು ತೆಗೆದುಹಾಕಲಾಗುತ್ತದೆ ಎಂದು ವಾರ್ಡ್‌ನ ದಾದಿಯು ವಿವರಿಸಿದಳು. ನನ್ನ ಎಡತೊಡೆಯಿಂದ ಚರ್ಮವನ್ನು ತೆಗೆದು ಎಲ್ಲಿಗೆ ಚರ್ಮದ ಕಸಿ ಮಾಡಲಾಗಿದೆಯೋ ಆ ಜಾಗವು ಸಾಮಾನ್ಯ ಚರ್ಮದಂತೆಯೇ ಕಾಣುವುದು ಎಂದು ನಾನು ಮೂರ್ಖಳಂತೆ ನಿರೀಕ್ಷಿಸಿದ್ದೆ. ಆದರೆ, ಆ ಜಾಗವೆಲ್ಲಾ ಹೇಗೆ ಹಸಿಯಾಗಿ, ಕೆಂಪಗೆ ಕಾಣುತ್ತಿದೆ ಎನ್ನುವುದನ್ನು ಕಂಡ ನಾನು ಹೌಹಾರಿದೆ. ಸರ್ಜನರು ಬಂದು ಜಾಗರೂಕತೆಯಿಂದ ನನ್ನ ಚರ್ಮವನ್ನು ಪರೀಕ್ಷಿಸಿದರು. ಒಂದು ಮುಗುಳ್ನಗೆಯೊಂದಿಗೆ ನನ್ನತ್ತ ನೋಡಿ ಸುಮ್ಮನೆ ತಲೆಯಲ್ಲಾಡಿಸಿದರು. ನಂತರ ಅವರು ದಾದಿಗೆ ನನ್ನ ಶರೀರದ ಮೇಲೆ ಒಂದು ಪಂಜರವನ್ನಿಡಲು ಹೇಳಿ, ಕಸಿಮಾಡಿದ ಜಾಗದಲ್ಲಿ ಗಾಳಿಯಾಡಲು ಅವಕಾಶವಾಗುವಂತೆ ಅದರ ಮೇಲೆ ಒಂದು ಹಾಳೆಯನ್ನು ಮುಚ್ಚಲು ಹೇಳಿದರು. ಹೊಸದಾಗಿ ಕಸಿಮಾಡಿದ ಜಾಗಗಳನ್ನು ಯಾವುದೂ ಸೋಂಕದಂತೆ ಇಟ್ಟಿದ್ದ ನನ್ನದೇ ಶರೀರವನ್ನು ದಿಟ್ಟಿಸಿ ನೋಡುತ್ತ ನಗ್ನಳಾಗಿ ನನ್ನಷ್ಟಕ್ಕೆ ನಾನೇ ಇದ್ದೆ. ನನ್ನ ಶರೀರವು ಹೇಗೆ ಕಾಣುತ್ತಿದೆ

ಎಂಬುದನ್ನು ಮನದಲ್ಲಿ ಇಟ್ಟುಕೊಂಡಿದ್ದ ನಾನು ಶಸ್ತ್ರಕ್ರಿಯೆಯು ವಿಫಲವಾಗಿರಬೇಕು ಎಂದು ನನಗೆ ನಾನೇ ತೀರ್ಮಾನಿಸಿಕೊಂಡೆ.

ಆ ಗಳಿಗೆಯಲ್ಲೇ ನಾನು ಬದುಕುವ ಎಲ್ಲ ಆಸೆಯನ್ನು ಕಳೆದುಕೊಂಡೆ. ನಾನು ಅನುಭವಿಸಿದ್ದು ಸಾಕು ಎಂದು ನಿರ್ಧರಿಸಿದೆ. ಹೋರಾಡಿ ಸುಸ್ತಾಗಿದ್ದೆ. ನನ್ನ ಬದುಕು ಪ್ರಾರಂಭವಾಗಬೇಕೆಂದು ಕಾದು ಸಾಕಾಗಿದ್ದೆ. ನಾನು ಅಂತರ್ಮುಖಿಯಾದೆ. ನನಗೆ ನೀಡಿದ ಯಾವುದೇ ಆಹಾರವನ್ನು ನಾನು ತಿರಸ್ಕರಿಸಿದೆ. ಸಾವಿಗೆ ಉಪವಾಸವೇ ಒಂದು ತ್ವರಿತ ದಾರಿಯಾಗುವುದು ಎಂದು ಆಶಿಸಿದೆ. ನಾನು ನನ್ನನ್ನು ಭೇಟಿಯಾಗಲು ಬಂದವರನ್ನು ದೂರ ವಾಪಸು ಕಳುಹಿಸಿದೆ. ಏಕಾಕಿಯಾಗಿರಲು ಅಸಾಧ್ಯವಾಗಿ ಕಾತರಳಾದೆ. ವಾರ್ಡ್‌ನ ಸೋದರಿಯು ಎಷ್ಟು ಚಿಂತಾಕ್ರಾಂತಳಾದ ಳೆಂದರೆ, ನನ್ನ ಹಸಿವಿನ ಚಳುವಳಿಯ ಬಗೆಗೆ ಸರ್ಜನರು ಬಂದರು. ನನ್ನೊಡನೆ ಸ್ವಲ್ಪ ಮಾತಾಡಲು ನನ್ನ ಹಾಸಿಗೆಯ ಪಕ್ಕದಲ್ಲಿ ಕುಳಿತರು. ನನ್ನ ಮನಸ್ಸಿನಲ್ಲಿ ಏನು ನಡೆಯುತ್ತಿರುವದೆಂದು ಅವರು ಅರ್ಥಮಾಡಿಕೊಳ್ಳುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲ. ಆದರೆ, ನನ್ನ ಆಶ್ಚರ್ಯಕ್ಕೆ ತಕ್ಕಂತೆ ಅವರು ಅದನ್ನೇ ಅರ್ಥಮಾಡಿಕೊಂಡಿದ್ದರು. ಅವರು ಮಾಡಿದ ಚರ್ಮ ಕಸಿಯು ಶೇ. ೯೦ರಷ್ಟು ಯಶಸ್ವಿಯಾಗಿರುವುದೆಂದೂ, ಅದು ಅವರು ಈವರೆಗೆ ಮಾಡಿರುವ ಶಸ್ತ್ರಕ್ರಿಯೆಗಳಲ್ಲಿ ಅತ್ಯಂತ ಯಶಸ್ವೀ ಶಸ್ತ್ರಕ್ರಿಯೆಯಾಗಿದೆ ಎಂದು ಅವರು ನನಗೆ ವಿವರಿಸಿದರು. ಹೇಗಾದರೂ, ಕಸಿ ಮಾಡಿದ ಚರ್ಮವು ಚೆನ್ನಾಗಿ ಬಲವರ್ಧನೆಯಾಗಬೇಕಾದರೆ, ನನ್ನ ಶರೀರಕ್ಕೆ ಚೆನ್ನಾಗಿ ಆಹಾರವು ಸೇರಬೇಕು. ಈಗ ನನ್ನ ಆಹಾರ ನಿರಾಕರಣೆಯು ವಾಸ್ತವವಾಗಿ ಅವರು ಸಾಧಿಸಲು ತೆಗೆದುಕೊಂಡ ಕಾಳಜಿಯೆಲ್ಲದರ ಅಡಿ ತಪ್ಪಿಸಿದಂತೆ. ನನಗಿನ್ನೂ ಒಪ್ಪಿಗೆಯಾಗಿರಲಿಲ್ಲ. ನಾನು ಪುನಃ ಆಹಾರ ತೆಗೆದುಕೊಳ್ಳುವಂತೆ ಮಾಡಿ, ಇನ್ನೊಂದು ಶಸ್ತ್ರಕ್ರಿಯೆಗೆ ನನ್ನನ್ನು ಅವರು ಸಿದ್ಧಮಾಡುತ್ತಿಲ್ಲವಷ್ಟೆ ? ನಾನು ಈ ಪ್ರಶ್ನೆಯನ್ನು ಅವರಿಗೆ ಕೇಳಿ, ನಾನೀಗಾಗಲೇ ಸಾಕಷ್ಟು ಅನುಭವಿಸಿಬಿಟ್ಟಿದ್ದೇನೆ ಎಂದು ಹೇಳಿದೆ. ಕೆಲವು ಸೆಕೆಂಡುಗಳ ಕಾಲ ನಿಶ್ಶಬ್ದವಾಗಿ ನೋಡುತ್ತ ಅವರು ಅಲ್ಲೇ ಕುಳಿತರು. ಅವರ ಕಣ್ಣುಗಳಲ್ಲಿ ದುಃಖದ ಛಾಯೆ ಇದ್ದಿತು. ಅನಂತರ ಅವರು ಹೇಳಿದರು: "ನಿಮಗೆ ಹೇಗೆ ಭಾಸವಾಗುತ್ತಿದೆ ಎಂದು ನನಗೆ ಗೊತ್ತಿದೆ. ಈ ತಿಂಗಳುಗಳಲ್ಲಿ ನೀವು ಸಾಕಷ್ಟು ಅನುಭವಿಸಿದ್ದೀರಿ. ನೀವು ಹಿಂದೆಂದು ಕಸಿ ಮಾಡಿದ ಚರ್ಮವನ್ನು ನೋಡಿಲ್ಲ. ಆದ್ದರಿಂದಲೇ ಶಸ್ತ್ರಕ್ರಿಯೆಯ ನಂತರ ಅದು ಹೇಗೆ ಕಾಣುತ್ತದೆ ಎಂಬುದು ಸ್ಪಷ್ಟವಾಗಿಯೂ ನಿಮಗೆ ಗೊತ್ತಿಲ್ಲ... ಆದರೆ, ನೀವು ನನ್ನನ್ನು ನಂಬಬೇಕು. ನೀವು ಚೆನ್ನಾಗಿ ಆಹಾರ ತೆಗೆದುಕೊಂಡರೆ ನೀವು ಬಹಳ ಬೇಗನೇ ಹುಷಾರಾಗುತ್ತೀರಿ ಮತ್ತು ಎರಡೇ ವಾರಗಳಲ್ಲಿ ಈ ವಾರ್ಡ್‌ನಿಂದ ಹೊರ ನಡೆದು ಹೋಗುತ್ತೀರಿ. ಒಂದು ವೇಳೆ ಹೀಗಾಗದಿದ್ದರೆ, ನೀವೇನು ನಿರ್ಧಾರ ಮಾಡುತ್ತೀರೋ ಹಾಗೇ

ಮಾಡಲು ನಿಮ್ಮನ್ನು ಬಿಡುತ್ತೇನೆ ಎಂದು ನಾನು." ಬೆಚ್ಚನೆಯ ಮುಗುಳ್ನಗೆಯೊಂದಿಗೆ ಅವರು ಸೇರಿಸಿದರು. "ನನ್ನೊಡನೆ ಒಪ್ಪಂದ ಮಾಡಿಕೊಳ್ಳುತ್ತೀರಾ?" ಅಸಂತೋಷದಿಂದ ತಲೆಯಾಡಿಸಿದೆ. ಆಗಲೇ ಸ್ವಲ್ಪ ಆಹಾರವನ್ನು ತರುವಂತೆ ದಾದಿಯನ್ನು ಕರೆದು ಆತ ಹೇಳಿದರು. ಅದನ್ನು ನಾನು ತಿನ್ನುತ್ತಿರುವಾಗ ಅವರು ಮುಗುಳ್ನಗೆಯೊಂದಿಗೆ ನನ್ನನ್ನೇ ನೋಡುತ್ತಿದ್ದರು.

ನನ್ನ ಚರ್ಮವು ದಿನದಿಂದ ದಿನಕ್ಕೆ ಗುಣವಾಗು ತ್ತಿರುವುದು ಒಪ್ಪಂದದ ಭಾಗವನ್ನು ಉಳಿಸಿಕೊಳ್ಳಲು ನನ್ನನ್ನು ಪ್ರೋತ್ಸಾಹಿಸಿತು. ಕೆಲವೇ ದಿವಸಗಳಲ್ಲಿ ನಾನು, ಹಲವು ತಿಂಗಳುಗಳಲ್ಲಿ ಮೊದಲ ಬಾರಿಗೆ ಎದ್ದು ನಿಲ್ಲುವಷ್ಟು, ನನ್ನ ರಾತ್ರಿ ಉಡುಪನ್ನು ಹಾಗೂ ಡ್ರೆಸ್ಸಿಂಗ್ ಗೌನನ್ನು ಧರಿಸುವಷ್ಟು ಸಶಕ್ತಳಾದೆ. ವಾರ್ಡ್‌ನ ಸುತ್ತಲೂ ನಡೆದಾಡುವ ಸಾಹಸ ಮಾಡಿದೆ. ಆಗ ಇತರ ರೋಗಿಗಳ ಗಾಯಗಳನ್ನು ಕಂಡು ಬೆಚ್ಚಿದವಳಾದೆ. ಒಂದು ಚಿಕ್ಕ ಹುಡುಗಿಯನ್ನು ನೋಡಿದೆ. ಅವಳ ವಯಸ್ಸು ಆರು ವರ್ಷಕ್ಕಿಂತಲೂ ಕಡಿಮೆ ಇದ್ದೀತು. ಅವಳ ಮುಖವು ಅದೆಷ್ಟು ಭೀಕರವಾಗಿ ಸುಟ್ಟಿತ್ತೆಂದರೆ ಅವಳಿಗೆ ಮೂಗಾಗಲೀ, ಕಿವಿಗಳಾಗಲೀ ಅಥವಾ ಹುಬ್ಬುಗಳಾಗಲೀ ಇರಲಿಲ್ಲ. ಇನ್ನೊಂದು ಹುಡುಗಿಯ ಅರ್ಧ ಮುಖ ಸುಟ್ಟಿದ್ದಿತು. ತಾನು ಆ ವಿಭಾಗದಲ್ಲಿ ನಾಲ್ಕು ತಿಂಗಳುಗಳಿಂದಲೂ ಇರುವುದಾಗಿಯೂ, ಸರ್ಜನರು ಅವಳ ಮುಖವನ್ನು ಪುನಃ ರಚಿಸುತ್ತಿದ್ದಾರೆ ಎಂದು ಹೇಳಿದಳು. ಈ ಕೇಸುಗಳನ್ನೆಲ್ಲ ನೋಡಿ ಇವರುಗಳಿಗೆಲ್ಲಾ ಹೋಲಿಸಿಕೊಂಡರೆ, ನಾನೆಷ್ಟು ಅದೃಷ್ಟಶಾಲಿ ಎಂದು ನನಗೆ ಅರಿವಾಗುವಂತಾಯಿತು. ಅಂತೆಯೇ ನನ್ನ ಉಳಿವಿಗೆ ಕಾರಣರಾದ ಹಲವರಿಗೆ ನಾನು ಋಣಿಯಾಗಿರಬೇಕು ಎಂದೂ ಅರಿತೆ. ಸರ್ಜನರು ನನಗೆ ಮಾತುಕೊಟ್ಟಿದ್ದಂತೆಯೇ ಹದಿನಾಲ್ಕನೇ ದಿನ ನನ್ನನ್ನು ಸುಟ್ಟ ಗಾಯಗಳ ವಿಭಾಗದಿಂದ ಬಿಡುಗಡೆಗೊಳಿಸಲಾಯಿತು. ಮತ್ತೊಮ್ಮೆ ನಾನು ಎಂದಿನಂತೆಯೇ ಉಡುಪು ಧರಿಸುವಷ್ಟರಮಟ್ಟಿಗೆ ಹುಷಾರಾದೆ. ನನ್ನ ಶರೀರದ ಸ್ವಲ್ಪ ಭಾಗ ಮಾತ್ರವೇ ಇನ್ನೂ ಹಸೀ ಚರ್ಮವಾಗಿದ್ದು, ಅದಕ್ಕೆ ನಾನು ಗಮನ ಕೊಡಬೇಕಿದ್ದಿತು. ನಾನು ಸಂಪೂರ್ಣವಾಗಿ ಉಡುಪು ಧರಿಸಿ ಮನೆಗೆ ಹೋಗಲು ತಯಾರಾಗಿ ಕೊನೆಗೂ ನನ್ನ ತಂದೆ ತಾಯಿಗಳನ್ನು ಸಂಧಿಸಿದ ಆ ಗಳಿಗೆಯೂ ನನಗೆ ಹಾಗೂ ನನ್ನ ತಂದೆತಾಯಿಗಳಿಗೆ ಭಾರೀ ಮಹತ್ವದ್ದಾಗಿದ್ದಿತು. ಸರ್ಜನರು ಒಂದು ಪವಾಡವನ್ನೇ ಸಾಧಿಸಿದ್ದಾರೇನೋ ಎಂದು ನನಗೆ ಅನ್ನಿಸಿತು. ಆದರೆ ದುರದೃಷ್ಟವಶಾತ್ ಅವರಿಗೆ ಅದನ್ನು ಹೇಳಲು ನನಗೆಂದೂ ಆಗಲೇ ಇಲ್ಲ.

ಮನೆಗೆ ಹೋಗುವಾಗ ದಾರಿಯಲ್ಲಿ ನಾನು ನನ್ನ ಸುತ್ತಲೂ ಬೆರಗಿನಿಂದ ನೋಡಿದೆ. ಇದ್ದಕ್ಕಿದ್ದಂತೆಯೇ ಈ ಪ್ರಪಂಚವು ಒಂದು ಸುಂದರವಾದ ಸ್ಥಳವೆನ್ನಿಸಿತು. ಇಲ್ಲಿ ಬದುಕಿರುವುದೇ ಆಶ್ಚರ್ಯಕರ ಎಂದೂ ಅನ್ನಿಸಿತು. ನಾನು ಗಾಳಿಯನ್ನು

ಸೂರ್ಯನ ಹೊಳಪನ್ನು ಅವು ಮತ್ತೇರಿಸುವ ಪದಾರ್ಥಗಳೇನೋ ಎಂಬಂತೆ ಕಂಡಿದ್ದೆ. ಪ್ರತಿಯೊಂದು ಗಳಿಗೆಯೂ ಅಮೂಲ್ಯವೆನ್ನಿಸಿತು. ನಾವು ಮನೆಗೆ ಬಂದ ಕೂಡಲೇ ಮನೆಯು ಗೆಳೆಯರಿಂದ ಹಾಗೂ ನೆರೆಹೊರೆಯವರಿಂದ ತುಂಬಿಹೋಯಿತು. ಅವರೆಲ್ಲರೂ ನನಗೆ ಶುಭ ಹಾರೈಸಿದರು.

ಮನೆಯಲ್ಲಿ ಕೆಲವು ದಿನಗಳು ಕಳೆದ ನಂತರ ತೋಟದಲ್ಲಿ ನಾನು ವಿಶ್ರಮಿಸುತ್ತಿದ್ದಾಗ ನನಗೆ ಚಡಪಡಿಕೆ ಪ್ರಾರಂಭವಾಯಿತು. ದೊಡ್ಡ ಭೂಖಂಡದಲ್ಲಿ ಎಲ್ಲಾದರೂ ನನಗೊಂದು ಬದಲಾವಣೆ ಬೇಕೆನಿಸಿತು. ನನ್ನ ಮೌನ ಪ್ರಾರ್ಥನೆಯನ್ನೇ ದೇವರು ಕೇಳಿದನೇನೋ ಎಂಬಂತೆ ಫ್ರೆಂಚ್ ರಿವಿಯೆರಾಗೆ ಒಂದು ಪ್ರವಾಸಗುಚ್ಛಕ್ಕೆ ಆತಿಥೇಯಳಾಗಿ ಕಾರ್ಯ ನಿರ್ವಹಿಸಲು ನನಗೆ ಆಸಕ್ತಿ ಇರುವುದೇ ಎಂದು ಕೇಳಿ ನನಗೊಂದು ಪತ್ರ ಬಂದಿತು. ನನಗೆ ಭಾರೀ ಖುಷಿಯಾಯಿತು. ಆ ಪತ್ರವನ್ನು ಕೈಯಲ್ಲಿ ಹಿಡಿದು ಅಲ್ಲಾಡಿಸುತ್ತಾ, ನನ್ನ ಧ್ವನಿಯ ತಾರಕ ಸ್ವರದಲ್ಲಿ, 'ನಾನು ಮೊಂಟೆಕಾರ್ಲೊಗೆ ಹೊರಟೆ' ಎಂದು ಕೂಗುತ್ತಾ ನನ್ನ ತಂದೆ ತಾಯಿಗಳ ಸುತ್ತಲೂ ನರ್ತನ ಮಾಡಲು ಪ್ರಾರಂಭಿಸಿದಾಗ ಅವರು ನನಗೆ ಹುಚ್ಚು ಹಿಡಿಯಿತು ಎಂದು ಯೋಚಿಸಿದರು. ಆ ಕೆಲಸದ ಪ್ರಸ್ತಾವವನ್ನು ಒಪ್ಪಿಕೊಳ್ಳುವಾಗ ನನ್ನ ಶರೀರದ ಸ್ಥಿತಿಯ ಬಗೆಗೆ ನಾನು ಯೋಚಿಸಿರಲಿಲ್ಲ. ಆದರೆ, ಹೊರಡಲು ಸಿದ್ಧಳಾಗುತ್ತಿದ್ದಾಗ ಇತರ ಯೋಚನೆಗಳು ಬರಲಾರಂಭಿಸಿದವು. ಸುಟ್ಟ ಗಾಯಗಳ ಗುರುತುಗಳನ್ನು ನನ್ನ ಚರ್ಮವು ಸಂಪೂರ್ಣವಾಗಿ ಗುಣಪಡಿಸಿದ್ದರೂ, ಚರ್ಮದ ಕಸಿಯು ಇನ್ನೂ ಕೆಂಪಾಗಿ ಕಾಣದಂತಿದ್ದಿತು. ನನ್ನನ್ನು ನಗ್ನಳಾಗಿ ನೋಡಿದ ಹೊರತು ಯಾರಿಗೂ ನನಗೇನಾಗಿದ್ದಿತು ಎಂದು ಊಹಿಸಲೂ ಸಾಧ್ಯವಿರಲಿಲ್ಲ. ನಾನು ಖಿನ್ನಳಾಗತೊಡಗಿದೆ ಮತ್ತು ನಾನಿನ್ನೆಂದೂ ಈಜುಡುಗೆಯನ್ನು ಧರಿಸುವುದಿಲ್ಲ ಅಥವಾ ಯಾರಿಗೂ ನನ್ನ ಹತ್ತಿರ ಬರಗೊಡುವುದಿಲ್ಲ ಎಂದು ನಿರ್ಧರಿಸಿದೆ. ನನ್ನ ಸುಟ್ಟ ಗಾಯದ ಕಲೆಗಳ ಶರೀರವನ್ನು ನೋಡಿದರೆ ಯಾರಿಗೂ ನನ್ನನ್ನು ಪ್ರೀತಿಸಬೇಕು ಎಂದೆನ್ನಿಸುವುದಿಲ್ಲ ಎಂದು ನಾನೇ ತರ್ಕಿಸಿದೆ. ಹೀಗೆ ತೀರ್ಮಾನಿಸಿ, ನನ್ನ ರಜಾದಿನಗಳನ್ನು ಚೆನ್ನಾಗಿ ಸವಿಯಲು ನನಗೆ ನಾನೇ ಅಪ್ಪಣೆ ಕೊಟ್ಟುಕೊಂಡೆ. ನನ್ನ ಆರೈಕೆಯಲ್ಲಿದ್ದ ಕೆಲವು ಯುವ ಪ್ರವಾಸಿಗರೊಡನೆ ಪ್ರತಿರಾತ್ರಿಯೂ ನರ್ತನ ಮಾಡತೊಡಗಿದೆ. ಹಲವು ತರುಣ ಇಟಾಲಿಯನ್ ಮತ್ತು ಫ್ರೆಂಚ್ ಜನರೊಡನೆ ನಾಚಿಕೆ ಇಲ್ಲದೆ ಸಲ್ಲಾಪ ನಡೆಸಿದೆ. ನನ್ನ ಪ್ರಫುಲ್ಲ ಸ್ವಭಾವದಿಂದ ಅವರುಗಳು ನನ್ನೆಡೆಗೆ ಆಕರ್ಷಿತರಾದರು. ಈ ವಿಷಯದಲ್ಲಿ ಮುಂದುವರೆಯುವುದನ್ನು ತಪ್ಪಿಸಲು ನನ್ನ ಬೆರಳಿಗೆ ನಾನೊಂದು ನಿಶ್ಚಿತಾರ್ಥದ ಉಂಗುರವನ್ನು ಹಾಕಿಕೊಂಡೆ. ನನಗಾಗಿ ಇಂಗ್ಲೆಂಡ್‌ನಲ್ಲಿ ಕಾದಿರುವ ನನ್ನ ಮದುಮಗನೊಬ್ಬನಿದ್ದಾನೆ ಎಂದು ಎಲ್ಲರಲ್ಲೂ ಹೇಳಿಕೊಂಡೆ. ಇದು ಕಾರ್ಲೊವನ್ನುಳಿದು ಮಿಕ್ಕ ಬಹುತೇಕ ಪುರುಷರನ್ನು

ದೂರದಲ್ಲಿರಿಸಿತು: ಕಾರ್ಲ್‌ನು ಓರ್ವ ಎತ್ತರದ, ಕಂದುಬಣ್ಣದ ಸುಂದರವಾದ ಇಟಲಿಯ ಹುಡುಗ, ಅವನು ಬ್ಯಾಂಗೋವನ್ನು ಸುಂದರವಾಗಿ ನರ್ತಿಸುತ್ತಿದ್ದ. ನಾನು ಕೂಡಲೇ ಅವನತ್ತ ಆಕರ್ಷಿತಳಾದೆ ಮತ್ತು ಅವನೊಡನೆ ನರ್ತಿಸಲು ಇಷ್ಟಪಡುತ್ತಿದ್ದೆ. ಕಾರಣ ಅವನು ನನ್ನ ಸೊಂಟವನ್ನು ಬಳಸಿ ಗಟ್ಟಿಯಾಗಿ ಹಿಡಿದುಕೊಂಡು, ಒಂದು ವೇಳೆ ನಾವಿಬ್ಬರೂ ಒಟ್ಟಿಗೆ ಹಾಸಿಗೆಯಲ್ಲಿದ್ದರೆ ಎಷ್ಟು ವಿನೋದವಾಗಿರುತ್ತದೆ ಎಂದು ನನ್ನ ಕಿವಿಯಲ್ಲಿ ಪಿಸುಗುಡುತ್ತಿದ್ದ. ನನ್ನ ನಿಶ್ಚಿತಾರ್ಥದ ಬಗೆಗಿನ ಕಥೆಯನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ಅವನು ಪಟ್ಟುಹಿಡಿದಿದ್ದ. ಕೆರಳಿದ ಅವನು, ಇಂಗ್ಲಿಷ್ ಪುರುಷರು ಸರಿಯಾಗಿ ಪ್ರೀತಿಸುವಷ್ಟು ಶಕ್ತಿಯನ್ನು ಹೊಂದಿರುವುದಿಲ್ಲ ಎಂದು ಹೇಳುತ್ತಾ ನನ್ನನ್ನು ತಾನು ಗೆಲ್ಲಬಹುದು ಎಂದು ಭಾವಿಸಿದ. ಯಾವುದೇ ಇಂಗ್ಲಿಷ್ ಮನುಷ್ಯನು ಹೆಚ್ಚೆಂದರೆ ವಾರಕ್ಕೊಮ್ಮೆ ಮಾತ್ರ ನಿಭಾಯಿಸಬಲ್ಲ ಎಂದೂ ಹೇಳಿದ. ಒಂದು ವೇಳೆ ನಾನು ಅವನ ಮೊರೆಯನ್ನು ಕೇಳಿದರೆ ಮಾತ್ರ ಅದಕ್ಕೆ ವಿರುದ್ಧವಾಗಿ ಅವನು ಒಂದು ರಾತ್ರಿಯಲ್ಲಿ ಐದು ಸಾರಿಗೆ ನಿಭಾಯಿಸುವುದಾಗಿ ತಾನು ಮಾತು ಕೊಡುವೆನೆಂದು ಹೇಳಿದ. ಅವನ ಈ ಅಸಂಬದ್ಧ ಪ್ರತಿಪಾದನೆಗೆ ನಾನು ನಗದೆ ಬೇರೆ ದಾರಿ ಇರಲಿಲ್ಲ. ಇದು ನಮ್ಮ ಸಂಬಂಧವನ್ನು ಕೊನೆಗಾಣಿಸಿತು.

ಕಾರ್ಲೊವನ್ನು ದೂರವಿಡುವುದರಲ್ಲಿ ನಾನು ಸಫಲಳಾದೆ. ಆದರೆ ನಾನು ಭಾವನಾತ್ಮಕವಾಗಿ ಹಾಗೂ ದೈಹಿಕವಾಗಿ ಬಚ್ಚಿಟ್ಟುಕೊಳ್ಳಲು ಸಿದ್ಧವಾಗ ಬಹುದಾದ ಯಾರನ್ನಾದರೂ ನಾನೆಂದಾದರೂ ಭೇಟಿಯಾಗುತ್ತೇನೆಯೇ ಎಂದು ಆಶ್ಚರ್ಯಪಡಲಾರಂಭಿಸಿದೆ. ನನ್ನ ಭಾವನಾತ್ಮಕ ಕಲೆಗಳು ಎಂದೂ ಪೂರ್ತಿಯಾಗಿ ವಾಸಿಯಾಗಿರಲಿಲ್ಲ. ಮತ್ತೆ ಈಗ, ಅದರ ಜೊತೆಗೆ ನನ್ನ ಶಾರೀರಿಕ ಕಲೆಗಳನ್ನು ನಾನು ಹೊಂದಿದ್ದೆ. ಆದರೆ ನಿಜವಾದ ಸ್ಕಾರ್ಲೆಟ್ ಓಹರಳ ಶೈಲಿಯಲ್ಲೋ, ನನ್ನಷ್ಟಕ್ಕೆ ನಾನೇ 'ಇದರ ಬಗೆಗೆ ನಾನೀಗ ಯೋಚಿಸುವುದಿಲ್ಲ, ಸಮಯ ಬಂದಾಗ ನಾನು ಅದರೊಡನೆ ವ್ಯವಹರಿಸುತ್ತೇನೆ' ಎಂದು ಹೇಳಿಕೊಂಡು ನನ್ನ ತಲೆಯಿಂದ ಈ ಯೋಚನೆಗಳನ್ನು ಆಚೆ ತಳ್ಳಿದೆ.

* * * *

# ೧೦. ಮೂವತ್ತಕ್ಕೆ ಜೀವನ ಪ್ರಾರಂಭ

ಹೊಸ ಸುತ್ತಿನ ಮೊದಲನೆಯ ದಿನ. ನನಗೇನು ಕಾದಿದೆಯೋ, ಅಂತೆಯೇ ನಾನು ವಾಸ್ತವವಾಗಿಯೂ ಒಬ್ಬ ಪದವೀಧರ ವಿದ್ಯಾರ್ಥಿಯಾಗುವಷ್ಟು ಬುದ್ಧಿವಂತೆಯೇ ಎಂದುಕೊಂಡು ಸ್ವಲ್ಪ ಅಧೀರಳಾಗಿಯೇ ನಾನು ನಿಧಾನವಾಗಿ ಕ್ಯಾಂಪ್‌ನೊಳಗೆ ನಡೆದೆ. ನಾನು ಸಾವಕಾಶವಾಗಿ ಸುಸ್ಥಿತಿಗೆ ಬರುವೆನೆಂದು ಭಾವಿಸಿದ್ದೆ. ಆದರೆ ನಾನು ನನ್ನ ಪ್ರೊಫೆಸರುಗಳನ್ನು ಭೇಟಿಯಾದಾಗ ನಾನು ಓದಬೇಕಾಗಿದ್ದುದರ ಒಂದು ದೊಡ್ಡ ಪಟ್ಟಿಯನ್ನೇ ಅವರು ಕೊಟ್ಟರು. ಅದರೊಡನೆ ನಾನು ಬರೆಯಬೇಕೆಂದು ಅವರು ನಿರೀಕ್ಷಿಸಿದ್ದ ಉದ್ದದ ಪ್ರಬಂಧಗಳ ವಿಷಯಗಳನ್ನು ಕೊಟ್ಟರು. ನಾನು ಪ್ರಶ್ನೆಗಳನ್ನು ಕೂಲಂಕಷವಾಗಿ ನೋಡಿದೆ. ಅವುಗಳಲ್ಲಿ ಬಹಳಷ್ಟನ್ನು ನಾನು ಬರೆಯಬಲ್ಲೆನಾಗಿದ್ದುದರಿಂದ ನನಗೆ ನಿರಾಳವಾಯಿತು. ಓರ್ವ ಶಿಕ್ಷಣದವಳಾಗಿ ಗಳಿಸುತ್ತಿದ್ದ ಅಂಕಗಳ ಅಭ್ಯಾಸವಾಗಿ ಹೋಗಿ, ಈಗಲೂ ಅದೇ ಅಂಕಗಳನ್ನು ನಾನು ಗಳಿಸಬಲ್ಲೆ ಎಂದು ನಿಜಕ್ಕೂ ನನಗೆ ಖಚಿತವಾಯಿತು. ಒಬ್ಬ ಪದವಿ ವಿದ್ಯಾರ್ಥಿಯ ಧ್ಯೇಯ ತನ್ನ ಪದವಿ ಪರೀಕ್ಷೆಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಅಂಕಗಳನ್ನು ಗಳಿಸಬೇಕು ಎಂಬುದಾಗಿರಬೇಕು. ಅದಕ್ಕೆ ವ್ಯತಿರಿಕ್ತವಾಗಿ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳನ್ನು ಪರೀಕ್ಷೆಯ ಪ್ರಶ್ನೆಗಳಿಗೆ ಅವರುಗಳು ಬರೆಯುವ ಉತ್ತರಗಳಿಂದ ಅಳೆಯುವುದಿಲ್ಲ. ಆದರೆ ಅವರು ಸೃಜನಶೀಲಶಕ್ತಿಯಿಂದ ಬರೆಯುವ ಪ್ರಬಂಧಗಳು ಅಥವಾ ನಿಬಂಧಗಳ ಆಧಾರದ ಮೇಲೆ ಹಾಗೂ ಅವರ ಸಂಶೋಧನೆಯ ಗುಣಮಟ್ಟದ ಮೇಲೆ ಅವರನ್ನು ಪ್ರಮಾಣಿಸಲಾಗುತ್ತದೆ. ಮೊದಲಿಗೆ ನಾನು ಪ್ರಯಾಸಪಟ್ಟೆ. ಆದರೆ, ಬಹಳ ಬೇಗನೇ ಅನ್ವೇಷಣೆಯ ಶೈಲಿಯು ದಣಿವಾಗಿಸುವಂಥದಾಗಿರುತ್ತದೆ ಎಂದು ನಾನು ಕಂಡುಕೊಂಡೆ. ಈ ಹೊಸ ಸವಾಲಿಗೆ ನನ್ನ ಬುದ್ಧಿಯು ಪ್ರತಿಸ್ಪಂದಿಸಿತು.

ಓರ್ವ ಪದವಿ ವಿದ್ಯಾರ್ಥಿಯಾಗಿ ಎಲ್ಲರೊಡನೆ ಸೇರಲಾಗದೆ ಯಾವಾಗಲೂ ನಾನು ಬೇರೆಯಾಗಿಯೇ ಉಳಿದಂತೆ ನನಗೆ ಅನ್ನಿಸುತ್ತಿದ್ದಿತು. ನನ್ನ ವಯಸ್ಸು ಹಾಗೂ ಹಿಂದಿನ ಅನುಭವವು ನನ್ನನ್ನು ನನ್ನ ಸಹಪಾಠಿಗಳಿಂದ ಭಿನ್ನಳನ್ನಾಗಿಸಿತ್ತು. ಅವರಲ್ಲಿ ಅನೇಕರು ನನ್ನ ಪರೀಕ್ಷಾ ಸಾಧನೆಯ ಯಶಸ್ಸನ್ನು ಕಂಡು ಕರುಬಿದರು. ಹೇಗಾದರೂ, ಸ್ನಾತಕೋತ್ತರ ಪದವಿಯವರೊಡನೆ ಬೆರೆಯುವುದು ಬಹಳ

ಸುಲಭವಾಗಿದ್ದಿತು. ಏಕೆಂದರೆ, ಅವರುಗಳೂ ವಯಸ್ಸಾದವರೇ, ಮತ್ತು ಅವರುಗಳು ತಮ್ಮ ಡಾಕ್ಟೊರೇಟ್‌ನ ಸಂಶೋಧನೆಯನ್ನು ಪ್ರಾರಂಭಿಸುವ ಮೊದಲು ಅನೇಕ ವಿಧದ ಕೆಲಸಗಳ ಅನುಭವವಿದ್ದವರು. ಸಾಮಾಜಿಕ ಮಾನವಶಾಸ್ತ್ರದ ಗುಂಪಿನ ಕಥೆಗಳನ್ನು ಕೇಳಲು ನಾನು ಇಚ್ಛಿಸುತ್ತಿದ್ದೆ. ಅವರೆಲ್ಲರೂ ತಮ್ಮ ಕ್ಷೇತ್ರ ವ್ಯಾಸಂಗವನ್ನು ಅದಾಗಲೇ ಮುಗಿಸಿದ್ದವರು. ಅವರುಗಳು ತಾವು ಅಧ್ಯಯನ ನಡೆಸಿದ ವಿದೇಶೀ ಸ್ಥಳಗಳ ಭ್ರಮೆ ಹುಟ್ಟಿಸುವ ಮೋಹಕ ವರದಿಗಳನ್ನು ಕೊಟ್ಟರು. ಇವುಗಳನ್ನೆಲ್ಲ ನಾನು ಹೆಚ್ಚಾಗಿ ಕೇಳಿದಂತೆ ಇಲ್ಲೇ ನನ್ನ ಭವಿಷ್ಯವಿರುವುದು ಎಂದು ಹೆಚ್ಚಾಗಿಯೇ ನನಗನ್ನಿಸಿತು. ನಾನು ನನ್ನದೇ ಕ್ಷೇತ್ರದ ಸಂಶೋಧನೆಯನ್ನು ನಡೆಸಲು ತೀರ್ಮಾನಿಸಿದೆ. ಎಲ್ಲೋ ಒಂದೆಡೆ ಒಂದು ಹಳ್ಳಿಯಲ್ಲಿದ್ದು, ಆ ಪ್ರದೇಶದ ಸಮುದಾಯವನ್ನು ಅಧ್ಯಯನ ಮಾಡಬೇಕೆನ್ನಿಸಿತು. ನಾನೇನು ಮಾಡಬೇಕೆಂದಿದ್ದೇನೆ ಎಂಬುದನ್ನು ನಾನು ನನ್ನ ಅರ್ಥಶಾಸ್ತ್ರದ ಮೇಲ್ವಿಚಾರಕರಾಗಿದ್ದ ಪ್ರೊಫೆಸರ್ ಲೀವಿಸ್‌ಗೆ ಹೇಳಿದಾಗ, ಅವರು ನನ್ನನ್ನು ಹುಚ್ಚಿ ಎಂದೂ, ನಾ ಮಾಡುವ ಕೆಲಸದಲ್ಲಿ ಸುಮ್ಮನೆ ಸಮಯ ವ್ಯರ್ಥವಾಗುತ್ತದೆಂದೂ ಯೋಚಿಸಿದರು. ನಾನು ಅವರ ಟೀಕೆಗಳನ್ನು ಅಲಕ್ಷಿಸಿದೆ ಮತ್ತು ಪ್ರಗತಿ ಮಾನವಶಾಸ್ತ್ರದಲ್ಲಿ ಇನ್ನೂ ಹೆಚ್ಚು ತಲ್ಲೀನಳಾದೆ. ಆ ಸಮಯದಲ್ಲಿ ಅದು ಬಹುತೇಕ ಯಾರೂ ಕೆಲಸ ಮಾಡದ ಕ್ಷೇತ್ರವಾಗಿತ್ತು. ನನ್ನ ಅಧ್ಯಯನವು ಮೊದಲಿಗರಲ್ಲಿದ್ದಿತು. ಆರ್ಥಿಕ ಬೆಳವಣಿಗೆಯ ಮೇಲೆ ನನಗೆ ಸಾಧ್ಯವಾದಷ್ಟು ಮಾಹಿತಿ, ಅದೇನೇ ಇರಲಿ ಹಾಗೂ ಅದು ಎಲ್ಲವೂ ಆಗಿರಲಿ, ಅದನ್ನೆಲ್ಲ ಮತ್ತೊಮ್ಮೆ, ಮಗದೊಮ್ಮೆ ನೋಡಿ ತಿದ್ದಿ ತೀಡಿದೆ. ನನ್ನ ಸಂಶೋಧನೆಯ ಕೇಂದ್ರಬಿಂದು ಏನಾಗಬಹುದು ಎಂದು ಮತ್ತೆ ಮತ್ತೆ ಯೋಚಿಸುತ್ತಾ ಗಂಟೆಗಳನ್ನು ಕಳೆದೆ. ಪೀಡನೆ, ಭೇದಭಾವ ಹಾಗೂ ನಷ್ಟದ ನನ್ನ ವೈಯಕ್ತಿಕ ಅನುಭವವು ನನ್ನ ಜ್ಞಾನವನ್ನು ಸಮಾಜದ ಅತಿ ಬಡವರ ವರ್ಗದ ಲಾಭಕ್ಕಾಗಿ ಅನ್ವಯಿಸಿಕೊಳ್ಳಬೇಕೆನ್ನುವಂತೆ ಮಾಡಿತು. ನನಗೆ ಅದನ್ನು ಕ್ರಿಯೋದ್ದೇಶಿತ ಮಾಡಬೇಕೆಂದೂ ಇದ್ದಿತು, ಕಾರಣ ತಾತ್ತ್ವಿಕ 'ದಂತಗೋಪುರ' ಪಾಂಡಿತ್ಯದ ಬೆಲೆಯನ್ನು ನಾನು ಕಾಣದಾಗಿದ್ದೆ. ಭಿನ್ನವಾದದ್ದೊಂದನ್ನು ಮಾಡುವುದು ನನಗೆ ಬೇಕಾಗಿದ್ದಿತು.

ಪ್ರೊಫೆಸರ್ ಗ್ಲುಕ್‌ಮ್ಯಾನ್‌ರು ನನ್ನ ಸಂಶೋಧನೆಯ ಪ್ರಾಮುಖ್ಯತೆಯನ್ನು ಮೆಚ್ಚಿದರು. ನನಗೆ ಸಹಾಯ ಮತ್ತು ಪ್ರೇರಣೆಯ ಅತ್ಯಮೂಲ್ಯ ಮೂಲವಾಗಿದ್ದರು. ಅವರು ಕೇವಲ ಒಳ್ಳೆಯ ಮನಸ್ಸಿನವರಷ್ಟೇ ಆಗಿರಲಿಲ್ಲ, ಓರ್ವ ಸಹೃದಯಿ, ಉದಾರ ವ್ಯಕ್ತಿತ್ವದವರೂ ಆಗಿದ್ದರು. ನಾನು, ಅವರು ಪದವಿಯಲ್ಲಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಎರಡೂ ಕಡೆ ಬೋಧಿಸಿದ ಪ್ರಥಮ ವಿದ್ಯಾರ್ಥಿಯಾಗಿದ್ದೆ. ಒಂದೆಡೆ ಅವರು ನನ್ನನ್ನು ಒಬ್ಬ ಮಗಳಂತೆ ಕಾಣುತ್ತಿದ್ದರು. ಮತ್ತೊಂದೆಡೆ ತಾವು ಬಹಳ ಹೆಚ್ಚಿನ ಬೆಲೆ ಕಟ್ಟಿದ ಒಂದು ರೇಸು ಕುದುರೆಯಂತೆ ನನ್ನನ್ನು ಪರಿಗಣಿಸಿದ್ದರು.

ನಾನು ಪ್ರಸ್ತಾವಿಸಿದ್ದ ಡಾಕ್ಟೊರೆಟ್ ಪ್ರಬಂಧವನ್ನು ಚರ್ಚಿಸುತ್ತಾ ನಾವು ಹಲವು ಗಂಟೆಗಳನ್ನು ಕಳೆಯುತ್ತಿದ್ದೆವು. ಜೊತೆಗೆ ನಾನು ಕ್ಷೇತ್ರ ಅಧ್ಯಯನ ಮಾಡಬಹುದಾದ ಸಾಧ್ಯತೆ ಇರುವ ಸ್ಥಳಗಳನ್ನು ಕಂಡುಹಿಡಿಯುತ್ತಿದ್ದೆವು. ಅವರಿಗೆ ತಾವು ಕೆಲಸ ಮಾಡಿದ, ಅಂತೆಯೇ ತಮ್ಮ ಹೆಚ್ಚಿನ ಇತರ ಪದವಿ ವಿದ್ಯಾರ್ಥಿಗಳು ಅವರ ಅಧ್ಯಯನವನ್ನು ನಡೆಸಿದ ಸ್ಥಳವಾದ ಮಧ್ಯ ಆಫ್ರಿಕಾಗೆ ನಾನು ಹೋಗಬಹುದೆಂಬ ಆಶಯ ಅವರದ್ದಾಗಿತ್ತು. ಅಲ್ಲಿ ನಾನು ನಡೆಸಬೇಕೆಂದು ಅವರು ನಿರೀಕ್ಷಿಸಿದ್ದ ರೀತಿಯ ಅಧ್ಯಯನಕ್ಕೆ ತಮ್ಮ ವಿಶಾಲವಾದ ಜಾಲವು ಸುಲಭವಾಗಿ ಧನಸಂಗ್ರಹ ಮಾಡಿಕೊಡುತ್ತದೆ ಎಂಬುದೂ ಅವರು ಹೀಗೆ ಹೇಳಲು ಕಾರಣವಾಗಿತ್ತು.

ಮುಂದಿನ ಎರಡು ವರ್ಷಗಳನ್ನು ಎಲ್ಲಿ ಕಳೆಯುವುದೆಂದು ನಾನು ಆಲೋಚಿಸುತ್ತಿದ್ದು, ಪ್ರೊಫೆಸರ್ ಎಂ.ಎನ್.ಶ್ರೀನಿವಾಸ್‌ರೊಡನೆ ಒಂದು ಸುದೀರ್ಘ ಚರ್ಚೆ ಮಾಡಿದೆ. ಶ್ರೀನಿವಾಸ್‌ರು, ಸುವಿಖ್ಯಾತರಾದ ಓರ್ವ ಭಾರತೀಯ ಸಾಮಾಜಿಕ ಮಾನವಶಾಸ್ತ್ರಜ್ಞರು. ಅವರು ಮ್ಯಾಂಚೆಸ್ಟರ್‌ಗೆ ಭೇಟಿ ನೀಡುತ್ತಿದ್ದರು. ಅವರಿಗೆ ನಾನು ದಕ್ಷಿಣ ಭಾರತದ ಸಮಾಜಗಳಲ್ಲಿ ನನ್ನ ಸಂಶೋಧನೆಯನ್ನು ನಡೆಸ ಬೇಕೆಂದು ಬಹಳವಾಗಿ ಅನ್ನಿಸಿದ್ದಿತು. ಹಳ್ಳಿಯವರ ಸಾಮಾಜಿಕ ಅರ್ಥ ವ್ಯವಸ್ಥೆಯ ಮೇಲೆ ಒಂದು ದೊಡ್ಡ ನಾಲೆಯ ನೀರಾವರಿ ಯೋಜನೆಯ ಪರಿಣಾಮವನ್ನು ನಾನು ಸಂಶೋಧಿಸಬೇಕೆಂದು ಅವರು ಸೂಚಿಸಿದರು. ನಾನು ಒಬ್ಬ ಸಣ್ಣ ಹುಡುಗಿ ಯಾಗಿದ್ದಂದಿನಿಂದಲೂ ಭಾರತದ ಕಡೆಗೆ ಆಕರ್ಷಿತಳಾಗಿದ್ದೆ. ನಾನು ಕೂಡಲೇ ಹೊರಡಲು ನಿರ್ಧರಿಸಿದೆ. ನನ್ನ ಮೇಲ್ವಿಚಾರಕರ ಇಚ್ಛೆಗೆ ವಿರುದ್ಧವಾಗಿ ಹೋಗುತ್ತಿರುವುದರ ಬಗೆಗೆ ನಾನು ಅಧೀರಳಾಗಿದ್ದೆ. ಆದರೆ ಅಂತಿಮವಾಗಿ ಪ್ರೊಫೆಸರ್ ಗ್ಲಕ್‌ಮ್ಯಾನ್‌ರಿಗೆ ನಾನು ಆಫ್ರಿಕಾಗಿಂತ ಹೆಚ್ಚಾಗಿ ಭಾರತದೆಡೆಗೆ ಆಕರ್ಷಿತಳಾಗಿದ್ದೇನೆ ಎಂದು ಹೇಳಲು ಧೈರ್ಯವನ್ನು ಕೂಡಿಸಿಕೊಂಡೆ. ನಾನು ಹೀಗೆಂದಾಗ ಅವರು ನಿರಾಶರಾಡುದನ್ನು ನಾನು ಕಾಣಬಹುದಾಗಿದ್ದಿತು. ಅವರು ನನ್ನ ಕ್ಷೇತ್ರ ಅಧ್ಯಯನಕ್ಕೆ ಒಂದು ರಾಕ್‌ಫೆಲ್ಲರ್ ಫೆಲೋಶಿಪ್‌ನ್ನು ದೊರಕಿಸಿಕೊಡುವಷ್ಟು ಉದಾರಶೀಲ ರಾಗಿದ್ದರು. ಜೊತೆಗೆ ನನಗಾಗಿ ಒಂದು ವಿಭಾಗೀಯ ಸಹಾಯಕ ವೇತನವನ್ನು ವ್ಯವಸ್ಥೆ ಮಾಡಿದ್ದರು. ಇದು, ನಾನು ದಕ್ಷಿಣ ಭಾರತದ ಹಳ್ಳಿಗಳಲ್ಲಿ ಎರಡು ವರ್ಷಗಳನ್ನು ಕಳೆಯಲು ಹಾಗು ಅದರ ನಂತರದ ಬರವಣಿಗೆಯ ಸಮಯದಲ್ಲೂ ನನಗೆ ಧನ ಸಹಾಯವನ್ನು ಒದಗಿಸಿತು. ನಾನು ಹರ್ಷಾವೇಶಳಾಗಿದ್ದೆ.

೧೯೫೪ರ ಆಗಸ್ಟ್‌ನಲ್ಲಿ ನಾನು ಮನೆಯನ್ನು ಬಿಟ್ಟು ಬಾಂಬೆಯತ್ತ ಪ್ರಯಾಣ ಬೆಳೆಸಿದೆ. ನಾನು ಬಹಳವೇ ಸುಸ್ತಾಗಿದ್ದೆ. ನಾನು ಹೊರಡುವ ವಾರಗಳ ಮುಂಚೆ ಉತ್ಸಾಹ–ಕಾತರಗಳಿಂದ ತುಂಬಿದ್ದ ನಾನು ರಾತ್ರಿಯ ಹೊತ್ತು ಎಚ್ಚರವಾಗಿಯೇ ಇದ್ದು, ಸುಮ್ಮನೆ ಮಲಗಿರುತ್ತಿದ್ದೆ. ನನ್ನಿಷ್ಟಕ್ಕೆ ನಾನೇ ಭಾರತಕ್ಕೆ ಹೋಗಿ ಈ ಮುಂಚೆ

ಯಾವ ಕ್ಷೇತ್ರ ಸಂಶೋಧನೆಯನ್ನೂ ಮಾಡಿದ್ದಿಲ್ಲ; ಏನು ಮಾಡಬೇಕೆಂದು ನನಗೆ ಹೇಗೆ ತಿಳಿಯುವುದು? ನಾನು ಅಲ್ಲಿನವರೊಡನೆ ಸಂಪರ್ಕ ಸಾಧಿಸಬಲ್ಲೆನೆ ಸಾಧಿಸಲು ಸಾಧ್ಯವಗುವುದೆ? ನಾನು ಅಧ್ಯಯನ ನಡೆಸಲು ಹೋಗುತ್ತಿರುವ ಜನರ ಭಾಷೆಯನ್ನು ಕಲಿಯುವುದು ನನಗೆ ಸಾಧ್ಯವೇ? ಅದಾಗಲೇ ನಾನು ಅನೇಕ ಅಡೆತಡೆಗಳನ್ನು ದಾಟಿ ಬಂದದ್ದಾಗಿದೆ, ಇದು ಇನ್ನೊಂದು ಅಡಚಣೆಯಷ್ಟೇ ಎಂದು ನನಗೆ ನಾನೇ ಮತ್ತೆ ಮತ್ತೆ ಗಟ್ಟಿ ಮಾಡಿಕೊಳ್ಳಲು ಪ್ರಯತ್ನಿಸಿದೆ. ಆದರೆ, ಪ್ರಶ್ನೆಗಳು ನಿಲ್ಲುವುದಿಲ್ಲ ತಡೆಯಲಾಗುವುದಿಲ್ಲ.

ನಾನು ನನ್ನ ತಂದೆ ತಾಯಿಗಳಿಗೆ, ಗೆಳೆಯರಿಗೆ ವಿದಾಯ ಹೇಳಿ ಸೌಥಾಂಪ್ಟನ್‌ಗೆ ಹೋಗುವ ರೈಲಿನಲ್ಲಿ ಕುಳಿತಾಗ ನನ್ನ ಚೈತನ್ಯವು ಉಕ್ಕಿತು. ನನ್ನ ದೇಹದಲ್ಲೆಲ್ಲಾ ಬಹಳ ತ್ವರಿತವಾಗಿ ಹರಡುತ್ತಿದ್ದ ಭಾವಾವೇಶದ ತರಂಗವು ನಾನು ಭರಿಸಲು ಅಸಾಧ್ಯವಾಗಿತ್ತು. ಪ್ರಯಾಣ ಮಾಡುವುದನ್ನು ನಾನು ಪ್ರೀತಿಸುತ್ತಿದ್ದೆ ಹಾಗೂ ಹೊಸ ಜಾಗಗಳನ್ನು ನೋಡುವ, ಬೇರೆ ಬೇರೆ ಜನರನ್ನು ಭೇಟಿಯಾಗುವ ಸದವಕಾಶವು ನನ್ನ ರಕ್ತನಾಳಗಳಲ್ಲಿನ ರಕ್ತದ ಓಟದ ವೇಗವು ಹೆಚ್ಚುವಂತೆ ಮಾಡಿತ್ತು. ಇಡೀ ಪ್ರಯಾಣದುದ್ದಕ್ಕೂ ನಾನು ಸುಮ್ಮನೆ ಕುಳಿತಿರಲಾರದೇ ಹೋದೆ. ನಾನು ಹಡಗನ್ನೇರಿದಾಗ, ಕೊನೆಗೂ ನನ್ನ ಬದುಕು ಪ್ರಾರಂಭವಾಗುತ್ತಿದೆ ಎಂದು ನನಗನ್ನಿಸಿತು.

ಹಡಗಿನ ಪ್ರಯಾಣವು ಬಾಂಬೆಗೆ ಇಪ್ಪತ್ತಾರು ದಿನಗಳನ್ನು ತೆಗೆದುಕೊಂಡಿತು. ನಾನಂತೂ ಅದನ್ನು ಸಂಪೂರ್ಣವಾಗಿ ಸವಿದೆ. ಭಾರತದಲ್ಲಿ ಅದಾಗಲೇ ಹಲವು ವರ್ಷಗಳನ್ನೇ ಕಳೆದಿದ್ದ ತರುಣ ಮಿಷನರಿಯೊಬ್ಬಳೊಡನೆ ನಾನು ಒಂದು ಕ್ಯಾಬಿನ್‌ನ್ನು ಹಂಚಿಕೊಂಡಿದ್ದೆ. ನಾವು ಭೇಟಿಯಾದ ಕೂಡಲೇ ಆಕೆಯು ನಾವು ಬಿಸ್ಕೆ ಕೊಲ್ಲಿಯನ್ನು ಹಾದುಹೋಗುವಾಗ ಆಗುವ ಸಮುದ್ರ ಬೇನೆಯ ಬಗೆಗೆ ನನ್ನನ್ನು ಎಚ್ಚರಿಸಿದಳು. ಅವಳು ನುಡಿದ ಭವಿಷ್ಯದಂತೆಯೇ ಸಮುದ್ರದ ಉಕ್ಕುವಿಕೆಯಿಂದಾಗಿ ಸೋತ ಹಡಗಿನ ಎಲ್ಲ ಪ್ರಯಾಣಿಕರೂ ತಮ್ಮ ತಮ್ಮ ಕ್ಯಾಬಿನ್‌ಗಳಿಗೆ ಹೊರಟುಹೋದರು. ಆದರೆ, ನನಗೇ ಆಶ್ಚರ್ಯವಾಗುವಂತೆ, ನನಗೆ ಇದರಿಂದ ಯಾವ ರೀತಿಯ ವ್ಯತ್ಯಾಸವೂ ಆಗಲಿಲ್ಲ. ನಾನು ಡೆಕ್‌ನ ಮೇಲೆ ಏಕಾಂಗಿಯಾಗಿ ನಡೆಯುವುದನ್ನು ಆಸ್ವಾದಿಸಿದೆ, ತಿನಿಸುಗಳ ಸಾಲನ್ನು ಖಾಲಿಯಾಗಿದ್ದ ಊಟದ ಮನೆಯಲ್ಲಿ ನಾನೊಬ್ಬಳೇ ಗಬಗಬನೆ ಕಂಠಪೂರ್ತಿ ತಿಂದೆ.

ಬೇರೆ ಬೇರೆ ರಾಷ್ಟ್ರೀಯತೆಯ, ಹಿನ್ನೆಲೆಯ ಅನೇಕ ಜನರನ್ನು ನಾನು ಭೇಟಿಯಾದೆ. ಅವರವರ ಜೀವನದ ವಿವರಗಳನ್ನು ಮಂತ್ರಮುಗ್ಧಳಾಗಿ ಕೇಳುತ್ತಾ ಕುಳಿತಿರುತ್ತಿದ್ದೆ. ಅವರಲ್ಲಿ ಇಬ್ಬರು ಇಂಗ್ಲಿಷ್ ಹುಡುಗಿಯರು. ಅವರಿಬ್ಬರೂ ಪಾಕಿಸ್ತಾನಕ್ಕೆ ಹೋಗುತ್ತಿದ್ದರು. ಅವರಿಬ್ಬರೂ ನೃತ್ಯಗಾರ್ತಿಯರಾಗಿದ್ದು, ಹಡಗಿನ ಸಿಬ್ಬಂದಿಯ

ಗಮನವನ್ನು ಬಹಳವಾಗಿಯೇ ತಮ್ಮತ್ತ ಸೆಳೆದುಕೊಂಡಿದ್ದರು. ಸೂ ಎನ್ನುವವಳು ತೆಳ್ಳಗೆ, ಎತ್ತರವಾಗಿ ಬೆಳ್ಳಗಿದ್ದಳು. ಅದೇ ಲಿಜ್ ಎನ್ನುವವಳು ಮಧ್ಯಮಗಾತ್ರದ ಕೆಂಪು ಕೂದಲಿನವಳು. ಇಬ್ಬರೂ ಸ್ತ್ರೀ ಆಕರ್ಷಣೆಯಿಂದ ತುಂಬಿ ತುಳುಕುತ್ತಿದ್ದರು. ಅವರ ರೂಪ, ಚೆಲ್ಲಾಟಗಳ ರೀತಿ ನೀತಿಗಳು ಪ್ರಯಾಣಿಕರಲ್ಲಿ ಅನೇಕರಿಗೆ ಕೋಪ ಬರಿಸಿದ್ದಿತು. ಅವರು ಸಾಮಾಜಿಕ ಬಹಿಷ್ಕೃತರಾದರು. ನಾನು ಹೇಗೂ ಅವರ ಸಂಶಯಾತ್ಮಕವಾದ ನೈತಿಕ ಮಟ್ಟದ ಬಗೆಗೆ ಕಾಳಜಿ ಮಾಡದೆ ಅವರ ಅಸಾಧ್ಯ ಕಥೆಗಳನ್ನು ಕೇಳುತ್ತಾ ಅವರ ಜೊತೆಯಲ್ಲಿ ಹೆಚ್ಚು ಕಾಲ ಕಳೆದೆ. ಮೊದಲನೇ ವಾರದ ಕೊನೆಯಲ್ಲಿ ಸೂ ಕ್ಯಾಪ್ಟನ್‌ನ ಜೊತೆಗೂ, ಲಿಜ್ ಲೆಕ್ಕಾಧಿಕಾರಿಯೊಬ್ಬನ ಜೊತೆಗೂ ಸ್ನೇಹ ಮಾಡಿಕೊಂಡರು. ಇದು ಅವರಿಬ್ಬರೂ ಮೊದಲ ದರ್ಜೆಯ ಕ್ಯಾಬಿನ್‌ಗಳಿಗೆ ಹೋಗಲು ಸಹಾಯ ಮಾಡಿತು. ನಾನು ನನ್ನ ಪ್ರವಾಸೀ ದರ್ಜೆಯ ವಾಸ್ತವ್ಯವನ್ನು ಉಳಿಸಿಕೊಂಡಿದ್ದರೂ ಸಹ, ತಾವು ಅವರ ಜೊತೆಗಿನ ನನ್ನ ಗೆಳೆತನಕ್ಕೆ ಕಾಣಿಕೆಯಾಗಿ ಹಡಗಿನಲ್ಲಿರುವ ಮೊದಲ ದರ್ಜೆಯ ಸೌಲಭ್ಯಗಳೆಲ್ಲಕ್ಕೂ ನನಗೆ ಉಚಿತವಾಗಿ ಮಾರ್ಗ ಕಲ್ಪಿಸುವ ವ್ಯವಸ್ಥೆ ಮಾಡುವುದಾಗಿ ಒತ್ತಾಯ ಮಾಡಿದರು. ಪ್ರತಿಯೊಂದು ಬಂದರಿನಲ್ಲೂ, ಎಲ್ಲಿ ಹಡಗು ನಿಲ್ಲುವುದೋ ಅಲ್ಲೆಲ್ಲಾ ಕ್ಯಾಪ್ಟನ್ ಮತ್ತು ಪರ್ಸರಿಗೆ ಕಾಣಿಕೆಗಳನ್ನು ಕೊಡಲು ಪ್ರಯತ್ನಿಸುತ್ತಿದ್ದ ಸ್ಥಳೀಯ ವ್ಯಾಪಾರಿಗಳ ಪಡೆಯೇ ಇರುತ್ತಿದ್ದು, ಅವರುಗಳು ಕೊಟ್ಟ ಕಾಣಿಕೆಗಳನ್ನೆಲ್ಲಾ ಕ್ಯಾಪ್ಟನ್ ಮತ್ತು ಪರ್ಸರು ಕೂಡಲೇ ಈ ಹುಡುಗಿಯರಿಗೆ ಕೊಟ್ಟುಬಿಡುತ್ತಿದ್ದರು. ಅದಕ್ಕೆ ಬದಲಾಗಿ ಸೂ ಮತ್ತು ಲಿಜ್ ಅವರಿಗೆ ಬಂದ ಕಾಣಿಕೆಗಳನ್ನು ಉದಾರವಾಗಿ ನನ್ನೊಡನೆಯೂ ಹಂಚಿಕೊಳ್ಳುತ್ತಿದ್ದರು. ನಾನು ಹಡಗನ್ನು ಬಿಟ್ಟು ಹೊರಡುವ ವೇಳೆಗೆ ನನ್ನ ಬಳಿ ನನ್ನ ಇಡೀ ಜೀವಮಾನಕ್ಕೆ ಸಾಕಾಗುವಷ್ಟು ನಿವಿಯಾ ಕ್ರೀಂ ಮತ್ತು ಯೂ ಡಿ ಕೊಲೊನ್ ಇದ್ದವು. ಸೂ ಮತ್ತು ಲಿಜ್ ಪಾಕಿಸ್ತಾನದಲ್ಲಿ ಹಡಗಿನಿಂದ ಇಳಿದು ಕೊಂಡರು. ನಾವುಗಳು ಪರಸ್ಪರ ನಿಷ್ಠೆಯಿಂದ ಒಬ್ಬರಿಗೊಬ್ಬರು ಬರೆದುಕೊಳ್ಳೋಣ ವೆಂದು ಪ್ರಮಾಣ ಮಾಡಿಕೊಂಡೆವು. ಅದಾದ ನಂತರ ನಮ್ಮ ಸಂಪರ್ಕ ತಪ್ಪಿಹೋಯಿತು. ನಾನು ಆಗಾಗ ಅವರಿಬ್ಬರೂ ಕ್ಯಾಬರೆ ತಾರೆಗಳಾಗಲು ಹೊರಟಿದ್ದಂತೆ, ಹಾಗೆ ಆದರೇ ಎಂದು ಆಶ್ಚರ್ಯಪಡುತ್ತಿದ್ದೆ.

ಮುಂದಿನ ನಿಲುಗಡೆ ಕರಾಚಿಯಲ್ಲಿ. ಅಲ್ಲಿ ಆ ದಿನ ಸಮುದ್ರ ತೀರಕ್ಕೆ ಹೋಗಲು ನಮಗೆಲ್ಲ ಅನುಮತಿ ನೀಡಲಾಯಿತು. ಅದು ನನ್ನ ಮೊದಲನೆಯ, ಏಷ್ಯಾದ ನಿಜವಾದ ರುಚಿಯಾಗಿದ್ದಿತು ಮತ್ತು ಅದು ಮಾಯಾಜಾಲದಂತಿರುತ್ತದೆ ಎಂದು ನಾನು ಭಾವಿಸಿದ್ದೆ. ಆದರೆ, ಅದರ ಬದಲಾಗಿ ನಾನು ನಡೆ ಹಲಗೆಯ ಮೇಲೆ ನಡೆದು ಹೋಗುತ್ತಿದ್ದಾಗ, ಕೊಳೆತ ಆಹಾರದ ದುರ್ನಾತ, ಹೊಟ್ಟೆಗಿಲ್ಲದೆ ಕೃಶವಾಗಿದ್ದ ಮಕ್ಕಳ ದೃಶ್ಯ ಮತ್ತು ಅವರು ವಾಸಿಸುತ್ತಿದ್ದ ಕೊಳಕಾದ ಜೋಪಡಿಗಳು

ನನ್ನನ್ನು ಪರಾಭವಗೊಳಿಸಿದವು. ಭಾರತದಿಂದ ಪಾಕಿಸ್ತಾನವು ವಿಭಜನೆಯಾದ ಸ್ವಲ್ಪವೇ ಸಮಯದ ನಂತರ ಪಾಕಿಸ್ತಾನವು ಸಂಪೂರ್ಣವಾಗಿ ಸಿದ್ಧವಾಗಿಲ್ಲದಂತೆ ತೋರುತ್ತಿತ್ತು. ವಲಸೆ ಬರುತ್ತಿದ್ದ ಮುಸಲ್ಮಾನ ವಲಸಿಗರ ತೀವ್ರ ಒಳಹರಿವನ್ನು ನಿಭಾಯಿಸಲು ಅದಕ್ಕೆ ಸಾಧ್ಯವಿಲ್ಲದಾಗಿತ್ತು. ಕರಾಚಿಯು ತುಂಬಿ ತುಳುಕುತ್ತಿದ್ದು, ಸುಂದರವಾದ ಸಾಲು ಮರಗಳ ದಾರಿಯ ಕರಾಚಿಯಲ್ಲಿ ಎತ್ತರದ ಗೋಡೆಗಳ ಹಿಂದೆ ಇದ್ದ ಸಿರಿವಂತರ ಮನೆಗಳು, ಈಗ ವಲಸಿಗರ ಮನೆಗಳಿಂದ ಸುತ್ತುವರಿದಿದ್ದವು. ತಮ್ಮ ಸುಧಾರಿಸಿದ ಅನೇಕ ತುಂಡುಗಳ ಚೂರಿನಿಂದ ಮಾಡಿದ ಒಪ್ಪಾರುಗಳನ್ನು ಕಟ್ಟುವಲ್ಲಿ ಅವರ ಚಾತುರ್ಯ ಮತ್ತು ಕಲೆಗಾರಿಕೆಯನ್ನು ನಾನು ಮೆಚ್ಚಿಕೊಂಡೆ. ಅವರು ಅದೃಷ್ಟಶಾಲಿಗಳಾಗಿದ್ದರೆ ತವರದ್ದು, ಆದರೆ, ಮೇಲ್ಛಾವಣಿಯಾಗಿ ಮತ್ತು ಗೋಡೆಗಳಾಗಿ ಮುಖ್ಯವಾಗಿ ಗೋಣಿಚೀಲಗಳನ್ನೇ ಉಪಯೋಗಿಸಲಾಗಿದ್ದುದು.

ಅವರುಗಳು ನನ್ನನ್ನು ನೋಡಿದ ಕೂಡಲೇ ಮಕ್ಕಳು ಮತ್ತು ಭಿಕ್ಷುಕರು ನನ್ನನ್ನು ಸುತ್ತುವರಿದರು. ಅವರಿಗೆ ನಾನು ಎಲ್ಲವನ್ನೂ ಕೊಡಬೇಕೆನ್ನಿಸಿತು; ನನ್ನ ಹಣ, ಪೆನ್ನುಗಳು, ಪೆನ್ಸಿಲುಗಳು ಎಲ್ಲವನ್ನೂ ಅಂತಹ ಅತ್ಯಂತ ಬಡತನ ಮತ್ತು ಕಷ್ಟದ ನಡುವೆ ನನಗೆ ತಪ್ಪಿತಸ್ಥ ಭಾವನೆ ಕಾಡಿತು. ನಾನು ಸಾಮಾನುಗಳನ್ನು ಹೊರತೆಗೆದುಕೊಡಲು ಪ್ರಾರಂಭಿಸುತ್ತಿದ್ದಂತೆಯೇ ಹಡಗಿನಲ್ಲಿ ನನ್ನ ಜೊತೆ ಸ್ನೇಹದಿಂದಿದ್ದ ಭಾರತೀಯ ಡಾಕ್ಟರೊಬ್ಬರು ನನ್ನನ್ನು ಹಿಡಿದೆಳೆದು ತಂದರು. ಆ ಭಿಕ್ಷುಕರ ತಂಡದಿಂದ ದೂರವಾಗಿ ನನ್ನನ್ನು ಎಳೆತಂದ ಅವರು ಸರಿಯಾದ ಸಮಯದಲ್ಲಿ ಅವರಿಂದ ನನ್ನನ್ನು ರಕ್ಷಿಸಿದ್ದರು. ನಾನು ಏನನ್ನೇ ಅವರಿಗೆ ಕೊಡಬಹುದಾದರೂ ಅದೇನೂ ಅವರ ಬವಣೆಯನ್ನು ಕಡಿಮೆ ಮಾಡುವುದಿಲ್ಲವೆಂದು ಅವರು ನನಗೆ ವಿವರಿಸಿದರು. ನಾನೇನಿದ್ದರೂ ಭಿಕ್ಷೆ ಬೇಡಲು ಅವರನ್ನು ಪ್ರೋತ್ಸಾಹಿಸಿದಂತಾಗುವುದೆಂದೂ ಅವರುಗಳು ದೋಚಿಕೊಂಡವರ ಬಗೆಗೆ ವಾದವಾಗಿ ಅದು ಯಾವಾಗಲೂ ಅವರ ಬೀದಿ ಜಗಳಗಳಿಗೆ ಕಾರಣವಾಗಿ ಅದಕ್ಕೆ ನಾನು ಲಗ್ಗೆ ಹಾಕಿದಂತಾಗುವುದೆಂದೂ ಅವರು ನನಗೆ ಹೇಳಿದರು. ಆ ಜನರ ಗುಂಪಿಗೆ ಬೆನ್ನು ಹಾಕಿದ ನಾನು ನನ್ನ ಆರಾಮದ ಕ್ಯಾಬಿನ್‌ಗೆ ಹೋಗುವ ದಾರಿ ಹಿಡಿದಾಗ ಅನ್ಯಾಯವು ಹೆಚ್ಚಾಗಿಯೇ ಸ್ಪಷ್ಟವಾಗಿದ್ದಿತು.

ನಾವು ಬಾಂಬೆ ಬಂದರನ್ನು ತಲುಪಿದಾಗ ನಾನು ಬಹಳ ಬೇರೆಯದೇ ಆದ ದೃಶ್ಯವನ್ನು ಕಂಡೆ. ತುಂಡುದಟ್ಟಿ ಉಡುಪು ಧರಿಸಿದ್ದ ಗಂಡಸರು ತಮ್ಮ ಸರಕುಗಳನ್ನು ಕೊಳ್ಳಲು ಗಿರಾಕಿಗಳನ್ನು ಬೇಡುತ್ತಾ ಸುತ್ತಲೂ ಅಲೆದಾಡು ತ್ತಿದ್ದರು. ಆದರೆ, ಹೆಂಗಸರು ಎಲ್ಲ ರೀತಿಯ ಆಸಕ್ತಿಕರ ಸಣ್ಣಪುಟ್ಟದರೊಡನೆ ಆಹಾರದ ಬುಟ್ಟಿಗಳನ್ನು ಹೊತ್ತಿದ್ದರು. ಗಾಳಿಗೆ ಹಾರುತ್ತಿದ್ದ ತಮ್ಮ ಬಣ್ಣ ಬಣ್ಣದ ಸೀರೆಗಳಲ್ಲಿ ಅವರು ಸುಂದರವಾಗಿ ಕಾಣುತ್ತಿದ್ದರು. ಹಡಗು ನಿಂತ ಕೂಡಲೇ, ಭಾರತೀಯ

ಕೂಲಿಗಳ ಗುಂಪೇ ತಳ್ಳಾಡಿಕೊಂಡು, ಗಿರಾಕಿಗಳಿಗಾಗಿ ಗುಂಪುಗಾರಿಕೆಯ ಜಗಳಕ್ಕೆ ತಿರುಗಿತು. "ಕೂಲಿ ಬೇಕೆ?" ಎಂದು ಅವರು ಕೂಗುತ್ತಲಿದ್ದರು. ನಾನು ಜನಸಾಗರದಲ್ಲಿ, ಮುಳುಗಿಹೋಗುತ್ತಿರುವ ಭಯದಲ್ಲಿದ್ದೆ. ಆ ಗುಂಪಿನಲ್ಲಿ ನನಗಾಗಿ ತೀರದಲ್ಲಿ ಕಾಯುತ್ತಿದ್ದ ಪ್ರೊಫೆಸರ್ ಎಂ.ಎನ್.ಶ್ರೀನಿವಾಸ್‌ರನ್ನು ವಂದನೆಗಳೊಡನೆ ಗುರ್ತಿಸಿದೆ. ಅವರು ಕರುಣೆಯಿಂದ ಒಪ್ಪಿ ನನ್ನನ್ನು ಭೇಟಿಯಾಗಲು ಬಂದಿದ್ದರು. ಅವರು ಮೆಲು ಮಾತಿನ ಬುದ್ಧಿಶಾಲಿ ವ್ಯಕ್ತಿಯಾಗಿದ್ದರು. ಅವರಿಗೆ ಬಹಳ ವಿನೋದ ಪ್ರಜ್ಞೆ ಇದ್ದ ಕಾರಣ, ನಾವಿಬ್ಬರೂ ಜೊತೆಯಾಗಿ ಮೈಸೂರಿಗೆ ಪ್ರಯಾಣ ಮಾಡುವಾಗ ಆ ಪ್ರಯಾಣವನ್ನು ನಾನು ಆಸ್ವಾದಿಸುತ್ತೇನೆ ಎಂದು ನನಗೆ ತಿಳಿದಿದ್ದಿತು. ನಾನು ಅವರನ್ನು ಬಹಳವಾಗಿ ಮೆಚ್ಚಿಕೊಂಡೆ ಹಾಗೂ ಅವರನ್ನು ನನ್ನ 'ಗುರು' ಎಂದು ಪರಿಗಣಿಸಿದೆ.

ರೈಲಿನಲ್ಲಿ ಮೈಸೂರಿನತ್ತ ನಾವು ದೀರ್ಘ ಪ್ರಯಾಣ ಮಾಡುವಾಗ, ಅವರು ಬೇರೆ ಬೇರೆ ಸಂಸ್ಕಾರಗಳು ಮತ್ತು ಧಾರ್ಮಿಕ ವಿಧಿಗಳನ್ನು ವಿವರಿಸುತ್ತಿದ್ದಾಗ ನಾನು ಗಮನವಿಟ್ಟು ಎಲ್ಲವನ್ನೂ ಕೇಳಿಸಿಕೊಂಡೆ. ಅವರು ಭಾರತೀಯ ಜೀವನಕ್ಕೆ ನನ್ನನ್ನು ಪರಿಚಯಿಸಲು ಪ್ರಯತ್ನಿಸುತ್ತಿದ್ದರು.

ನನ್ನ ತಾಯಿನಾಡಿನ ಜೀವನ ವಿಧಾನಕ್ಕಿಂತ ಅದು ಎಷ್ಟು ಭಿನ್ನವಾಗಿತ್ತೆಂಬುದನ್ನು ನನಗೆ ನಂಬಲಾಗಲಿಲ್ಲ. ನಾನು ನೋಡಿದ ಮತ್ತು ಕೇಳಿಸಿಕೊಂಡದ್ದೆಲ್ಲದರ ಒಂದು ಮಾನಸಿಕ ದಾಖಲೆಯನ್ನು ಮಾಡಿಕೊಳ್ಳಲು ನಾನು ಪ್ರಯತ್ನಿಸಿದೆ ಮತ್ತು ನಾನು ನನ್ನ ಸುತ್ತಲೂ ನೋಡಿದಂತೆಯೆಲ್ಲಾ ಜಾತಿಪದ್ಧತಿಯು ಅನುಷ್ಠಾನದಲ್ಲಿರುವುದನ್ನು ತಕ್ಷಣವೇ ಗಮನಿಸಿದೆ. ಮೊದಲನೇ ದರ್ಜೆಯ ಪ್ರಯಾಣಿಕರು ಆರಾಮದಾಯಕವಾದ ಬೋಗಿಗಳನ್ನು ಮತ್ತು ಆಸನಗಳನ್ನು ಹೊಂದಿರುವಾಗ ಮೂರನೇ ದರ್ಜೆಯ ಪ್ರಯಾಣಿಕರಿಗೆ ಜಾನುವಾರು ಸಾಗಣೆ, ಗಾಡಿಗಳಂತಿದ್ದ ಬೋಗಿಗಳಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದ್ದಿತು. ಮಂಗಗಳು ಮತ್ತು ಕಳ್ಳಕಾಕರು ಬೋಗಿಗಳೊಳಕ್ಕೆ ಪ್ರವೇಶ ಮಾಡಲಾಗದಂತೆ ಎಲ್ಲಾ ಕಿಟಕಿಗಳಿಗೂ ಲೋಹದ ಅಡ್ಡ ಕಂಬಿಗಳಿದ್ದವು. ಒಂದು ನಿಲುಗಡೆಯಲ್ಲಿ ಒಂದು ಚಿಕ್ಕ ಮಂಗವು ಕಂಬಿಗಳಿಗೆ ನೇತುಹಾಕಿಕೊಂಡಿರುವಂತೆಯೇ ಅದಕ್ಕೆ ಪ್ರಯಾಣಿಕರು ಬಾಳೆಹಣ್ಣುಗಳನ್ನು ತಿನ್ನಿಸುತ್ತಿರುವುದನ್ನು ನಾನು ನೋಡಿದೆ; ಅದು ನನ್ನನ್ನು ನಗುವಂತೆ ಮಾಡಿತು ಮತ್ತು ನಾನು ಸರಿಯಾದ ಜಾಗಕ್ಕೆ ಬಂದಿದ್ದೇನೆ ಎನ್ನಿಸಿತು.

ಬಹಳಷ್ಟು ಜನರು ದೀರ್ಘ ಪ್ರಯಾಣಕ್ಕಾಗಿ ಸುರುಳಿ ಸುತ್ತಿದ ಹಾಸಿಗೆಗಳನ್ನು ತಂದಿದ್ದರು. ಆದರೆ, ನಾನು ಮಾತ್ರ ಸಜ್ಜಾಗಿರಲಿಲ್ಲ. ಗಟ್ಟಿ ಬೆಂಚುಗಳ ಮೇಲೆ ಎರಡು ದಿನ ಮಲಗಿದ ಪರಿಣಾಮವಾಗಿ ನನ್ನ ದೇಹವು ನೋವಿನಿಂದ ಬಳಲಿ ಒಂದು ಹಾಸಿಗೆಗಾಗಿ ಹಂಬಲಿಸುತ್ತಿದ್ದಿತು ಮತ್ತು ನನಗೆ ಸ್ವಲ್ಪ ನಿದ್ರೆಯ ಅಗತ್ಯ

ಬಲವಾಗಿದ್ದಿತು. ಅಂತಿಮವಾಗಿ, ನಾವು ಮೈಸೂರು ರೈಲ್ವೆ ನಿಲ್ದಾಣವನ್ನು ಪ್ರವೇಶಿಸಿದೆವು. ನನ್ನ ಮುಂದೆ ಕೈ ಚಾಚುತ್ತಿದ್ದ ಅನೇಕ ಭಿಕ್ಷುಕರ ಬಗ್ಗೆ ನಾನು ಬಹಳ ಕಠಿಣ ಮನಸ್ಕನಾಗಿದ್ದೆ ಮತ್ತು ಪ್ರಾಧ್ಯಾಪಕ ಶ್ರೀನಿವಾಸ್‌ಗೆ ಸಮೀಪದಲ್ಲೇ ಇರಲು ಪ್ರಯತ್ನಿಸುತ್ತಾ ಜನರ ಗುಂಪಿನ ಮೂಲಕ ತಳ್ಳಿಕೊಂಡು ದಾರಿ ಮಾಡಿಕೊಂಡೆನು.

ಭಾಷೆಯನ್ನು ಕಲಿಯಲು ಸಾಧ್ಯವಾಗುವಂತೆಯೂ ಮತ್ತು ಸ್ಥಳೀಯ ಸಾಮಾಜಿಕ ಜೀವನದ ಪರಿಚಯ ಮಾಡಿಕೊಳ್ಳಲಾಗುವಂತೆಯೂ ನಾನು ಒಂದು ಭಾರತೀಯ ಕುಟುಂಬದಲ್ಲಿ ವಾಸ್ತವ್ಯ ಹೂಡಲು ಸಾಧ್ಯವಾಗುತ್ತದೆಂದು ಯೋಚಿಸಿದ್ದೆನು. ನಾನು ಎಷ್ಟೊಂದು ಮುಗ್ಧನಾಗಿದ್ದೆನು ! ಯಾವುದೇ ಸ್ವಾಭಿಮಾನಿ ಹಿಂದು ಕುಟುಂಬವು ಒಬ್ಬ ಬಿಳಿ ವ್ಯಕ್ತಿಯನ್ನು ತನ್ನ ಮನೆಯಲ್ಲಿರಲು ಅವಕಾಶ ಕೊಡುವುದಿಲ್ಲವೆಂಬುದನ್ನು ನಾನು ಬೇಗನೇ ಕಂಡುಕೊಂಡೆನು. ಏಕೆಂದರೆ ದನದ ಮಾಂಸ ಭಕ್ಷಕರೆಂದು ತಿಳಿಯಲ್ಪಟ್ಟಿರುವ ನಾವೆಲ್ಲರೂ ಅಪವಿತ್ರರಾಗಿದ್ದೇವೆ. ತಕ್ಷಣವೇ ನಾನು ನನ್ನದೇ ವ್ಯವಸ್ಥೆಯನ್ನು ಮಾಡಿಕೊಳ್ಳುವ ನೋಟಗಳನ್ನು ಕಾಣತೊಡಗಿದೆ. ಆದರೆ ಎಲ್ಲಿಯಾದರೂ ನಾನು ವಾಸಿಸಲು ಯೋಗ್ಯವಾದ ಒಂದು ಸ್ಥಳವನ್ನು ಕಂಡುಕೊಳ್ಳುವ ಮೊದಲು ನನ್ನನ್ನು ತಾನು ಬಿಡುವುದಿಲ್ಲವೆಂದು ಪ್ರಾಧ್ಯಾಪಕ ಶ್ರೀನಿವಾಸ್ ನನಗೆ ಪುನಃ ಭರವಸೆ ಕೊಟ್ಟರು. ಅವರು ನನ್ನ ಮೇಲಿನ ಜವಾಬ್ದಾರಿ ವಹಿಸಿಕೊಂಡಿರುವಂತೆ ಕಂಡರು ಮತ್ತು ನಾನು ಕೃತಜ್ಞನಾಗಿದ್ದೆನು. ತನ್ನನ್ನು ಚಾಮು ಎಂದು ಕರೆಯಲೂ ಕೂಡ ಅವರು ನನಗೆ ಹೇಳಿದರು. ಅವರ ಕುಟುಂಬ ಹಾಗೂ ಆಪ್ತ ಸ್ನೇಹಿತರು ಅವರನ್ನು ಆ ಹೆಸರಿನಿಂದಲೇ ತಿಳಿದಿದ್ದರು.

ಚಾಮು ಕೆಲವು ಕಡೆ ವಿಚಾರಿಸಿದರು ಮತ್ತು ಗೋವಾದ ಕ್ಯಾಥೊಲಿಕ್ ವ್ಯಕ್ತಿಯಾದ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯು ಸ್ಥಳೀಯ ಕಾನ್ವೆಂಟ್ ವಿದ್ಯಾರ್ಥಿ ನಿಲಯದಲ್ಲಿ ಒಂದು ಕೊಠಡಿಯನ್ನು ನೀಡುವುದರ ಮೂಲಕ ನನ್ನ ನೆರವಿಗೆ ಬಂದರು. ದುರದೃಷ್ಟವಶಾತ್ ಸಂನ್ಯಾಸಿನಿಯರು ಮತ್ತು ಅವರ ಶಿಷ್ಯರೆಲ್ಲರೂ ನೆರೆಯ ಕೇರಳ ರಾಜ್ಯದಿಂದ ಬಂದಿದ್ದವರಾದ್ದರಿಂದ ಕನ್ನಡವಲ್ಲದ ಬೇರೊಂದು ಭಾಷೆಯನ್ನು ಮಾತನಾಡುತ್ತಿದ್ದರು. ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ನಾನು ಕಲಿಯಬೆಕಾಯಿತು. ನಾನು ಹತಾಶೆಗೊಳಗಾಗುತ್ತಿರುವಾಗ ಕೆಲವು ದಿನಗಳ ನಂತರ ಕಿವಿಯಿಂದ ಕಿವಿಯವರೆಗೂ ಹಲ್ಲು ಕಿಸಿಯುತ್ತಾ ಚಾಮು ಬಂದರು. ನನಗೆ ಭಾಷೆಯನ್ನು ಕಲಿಸಲು ಒಬ್ಬ ಭಾಷಾ ಪ್ರಾಧ್ಯಾಪಕರ ಮಗಳೊಡನೆ ಅವರು ಏರ್ಪಾಡು ಮಾಡಿದ್ದರು. ಆಕೆಯು ಕನ್ನಡದಲ್ಲಿ ಒಂದು ಪದವಿಯನ್ನು ಪಡೆದಿದ್ದಳು. ಮುಂದಿನ ವಾರದಿಂದಲೇ ಆಕೆಯು ಪ್ರತಿದಿನವೂ ಬಂದಳು ಮತ್ತು ಕೊನೆಗೂ ನಾನು ಭಾಷೆಯ ಮೂಲ ಪಾಠಗಳನ್ನು ಕಲಿಯಲು ಪ್ರಾರಂಭಿಸಿದೆನೆಂಬ ಆಶಾಭಾವನೆಯನ್ನು ಹೊಂದಿದ್ದೆನು. ಅವಳು ನನಗೆ ಕನ್ನಡವನ್ನು ಕಲಿಸುವುದಷ್ಟೇ ಅಲ್ಲದೆ, ಅವಳು

ಸೇರಿದ್ದ ಸಂಪ್ರದಾಯಬದ್ಧ ಬ್ರಾಹ್ಮಣ ಕುಟುಂಬದ ಪದ್ಧತಿಗಳನ್ನೂ ಕೂಡ ನನಗೆ ಪರಿಚಯಿಸಿದಳು. ಅವಳು ನನಗೆ ಹೇಳಿದುದನ್ನೆಲ್ಲಾ ಎಚ್ಚರಿಕೆಯಿಂದ ಗಮನವಿಟ್ಟು ಕೇಳಿದೆನು ಮತ್ತು ಅದನ್ನೆಲ್ಲಾ ನೆನಪಿನಲ್ಲಿಟ್ಟುಕೊಳ್ಳಲು ನನ್ನಿಂದಾದ ಸಂಪೂರ್ಣ ಪ್ರಯತ್ನವನ್ನು ಮಾಡಿದೆನು. ನನ್ನ ಹೊಸ ಪದಗಳನ್ನು ಅಭ್ಯಸಿಸುತ್ತಾ ಹಾಸಿಗೆಯ ಮೇಲೆ ಮಲಗಿರುವಾಗ ನನ್ನ ಬಗ್ಗೆ ನಾನೇ ನಗುತ್ತಿದ್ದೆನು.

ನಮ್ಮ ಎರಡನೇ ವಾರದ ಪ್ರಾರಂಭದಲ್ಲಿ ಅವಳು ಸಾಂಪ್ರದಾಯಿಕವಾದ ಉಡುಪು ಧರಿಸಿ ಕಾಣಿಸಿಕೊಂಡಳು. ಮತ್ತು ಸ್ವಲ್ಪಮಟ್ಟಿನ ವಾಗಾಡಂಬರದ ಶೈಲಿಯಲ್ಲಿ ತನ್ನ ತಂದೆಯು ನನ್ನನ್ನು ಭೇಟಿ ಮಾಡಲಿಚ್ಛಿಸಿದ್ದಾರೆಂದು ಪ್ರಕಟಪಡಿಸಿದಳು. ಅವಳ ಕುಟುಂಬದ ಮನನೋಯಿಸುವಂತಹುದೇನನ್ನು ನಾನು ಮಾಡಿರಬಹುದೆಂದು ತಕ್ಷಣವೇ ಯೋಚಿಸಲು ಪ್ರಯತ್ನಿಸಿದೆನು. ನಾನು ನನ್ನ ನಡವಳಿಕೆಯ ಬಗ್ಗೆ ಬಹಳ ಎಚ್ಚರದಿಂದಿದ್ದೆನು. ನಾನು ಸೀರೆ ಮತ್ತು ರವಿಕೆ ಧರಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದೆನು ಮತ್ತು ಆ ಕುಟುಂಬಕ್ಕೆ ಭೇಟಿ ನೀಡುವಂತೆ ನನಗೆ ಆಹ್ವಾನ ಬಂದಾಗಲೆಲ್ಲಾ ಅವರ ಮನೆಯ ಮುಂದಿನ ಬಾಗಿಲ ಹೊರಗೆ ನನ್ನ ಪಾದರಕ್ಷೆಗಳನ್ನು ಕಳಚಿಹಾಕಿ ನನ್ನ ಕೈ ಕಾಲುಗಳ ಮೇಲೆ ನೀರು ಸುರಿದುಕೊಳ್ಳುವುದನ್ನು ನಾನು ನೆನಪಿನಲ್ಲಿಟ್ಟುಕೊಂಡಿರುವುದನ್ನು ಖಚಿತಪಡಿಸಿಕೊಂಡಿದ್ದೆನು. ನಾನೇನು ತಪ್ಪು ಮಾಡಿದ್ದೆನೆಂಬುದನ್ನು ಕಂಡುಹಿಡಿಯಲು ತೀವ್ರವಾಗಿ ಪ್ರಯತ್ನಿಸಿದೆ. ಆದರೆ, 'ನನ್ನ ತಂದೆಯು ಸ್ವತಃ ತಾನೇ ನಿನಗೆ ಹೇಳಲಿಚ್ಛಿಸುತ್ತಾನೆ' ಎಂದಷ್ಟೇ ಆಕೆಯು ಗಂಭೀರವಾಗಿ ಹೇಳಿದಳು. ಅದು ನನ್ನನ್ನು ಇನ್ನೂ ಹೆಚ್ಚಾಗಿ ಅಧೀರನನ್ನಾಗಿಸಿತು. ನಾವು ಬಂದಾಗ, ಮಿರುಗುತ್ತಿದ್ದ ಬಿಳಿ ಮೇಲಂಗಿ ಮತ್ತು ಧೋತಿಯನ್ನು ಧರಿಸಿ ನೆಲದ ಮೇಲಿನ ಚಾಪೆಯ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದ ಅವಳ ತಂದೆಯನ್ನು ನಾನು ಕಂಡೆನು. ಸಭ್ಯವಾಗಿ ನನ್ನನ್ನು ಸ್ವಾಗತಿಸಿದ ನಂತರ ಅವರು ತಮ್ಮ ಎದುರಿನಲ್ಲಿದ್ದ ಒಂದು ಚಾಪೆಯ ಮೇಲೆ ಕುಳಿತುಕೊಳ್ಳುವಂತೆ ನನಗೆ ಸನ್ನೆ ಮಾಡಿದರು. ಈ ಎಲ್ಲವೂ ಯಾವುದರ ಬಗೆಗೆಂದು ಕಂಡುಕೊಳ್ಳುವ ತವಕದಿಂದ ನಾನು ಗಂಭೀರವಾಗಿ ಕುಳಿತೆ.

ಅವರ ಕುಟುಂಬಕ್ಕೆ ಶ್ರೇಯಸ್ಕರವಾಗಿದ್ದುದಕ್ಕಾಗಿ ನನಗೆ ವಂದಿಸುವುದರ ಮೂಲಕ ಅವರು ಮಾತು ಪ್ರಾರಂಭಿಸಿದರು. ಅವರೂ ಮತ್ತು ಅವರ ಮಗಳು ವಿದ್ಯಾರ್ಥಿ ವೇತನಗಳಿಗಾಗಿ ಪೂನಾ ವಿಶ್ವವಿದ್ಯಾನಿಲಯಕ್ಕೆ ಹಲವಾರು ವರ್ಷಗಳು ಅರ್ಜಿ ಸಲ್ಲಿಸಿದ್ದರೆಂದು ವಿವರಿಸಿದರು. ಹಿಂದೆ ಅವುಗಳನ್ನು ಯಾವಾಗಲೂ ನಿರಾಕರಿಸಲಾಗಿದ್ದಿತು. ಹಾಗಿದ್ದರೂ, ಆ ವರ್ಷ ಅವರ ಮಗಳು ನನಗೆ ಪಾಠ ಹೇಳಲು ಪ್ರಾರಂಭಿಸಿದ ನಂತರ ಕೇವಲ ಒಂದು ವಾರದಲ್ಲಿ ಅವರಿಬ್ಬರೂ ವಿದ್ಯಾರ್ಥಿ ವೇತನದ ಕೊಡುಗೆಯನ್ನು ಸ್ವೀಕರಿಸಿದ್ದರು. ಆದ್ದರಿಂದ, ನಾನು ಅವರಿಗೆ ಒಳ್ಳೆಯ

ಅದೃಷ್ಟವನ್ನು ತಂದಿದ್ದುದಾಗಿ ಅವರು ಬಲವಾಗಿ ನಂಬಿದ್ದರು. ಅವರು ಮತ್ತು ಅವರ ಮಗಳು ಇನ್ನು ಹತ್ತು ದಿನಗಳಲ್ಲಿ ಬಿಟ್ಟು ಹೊರಡುವುದಾಗಿ ಅವರು ನನಗೆ ಹೇಳುವವರೆಗೆ ನಾನು ಆನಂದದಿಂದಿದ್ದೆನು. ನನ್ನ ಮನಸ್ಸಿನಲ್ಲಿದ್ದುದನ್ನು ಓದುವಂತೆ ಅವರು; "ನಿಮ್ಮ ಶಿಕ್ಷಕರನ್ನು ನೀವು ಕಳೆದುಕೊಳ್ಳುವ ಬಗ್ಗೆ, ನಮಗೆ ಒಳ್ಳೆಯ ಅದೃಷ್ಟವನ್ನು ತಂದುದಕ್ಕೆ ಕೃತಜ್ಞತಾ ಪೂರ್ವಕವಾಗಿ, ನನ್ನ ಮಗಳು ಮತ್ತು ನಾನು ದೂರದಲ್ಲಿರುವಾಗ ನೀವು ನಮ್ಮ ಮನೆಗೆ ಬಂದು ವಾಸಿಸಬೇಕೆಂದು ನಿಮಗೆ ಆಹ್ವಾನ ನೀಡಲು ನಾವು ಇಚ್ಛಿಸುತ್ತೇವೆ. ನೀವು ನನ್ನ ಮಗಳ ಕೊಠಡಿಯನ್ನು ಪಡೆದುಕೊಳ್ಳಬಹುದು ಮತ್ತು ನನ್ನ ಪತ್ನಿ ಮತ್ತಿಬ್ಬರು ಕಿರಿಯ ಮಕ್ಕಳೊಡನೆ ಮನೆಯನ್ನು ಹಂಚಿಕೊಳ್ಳಬಹುದು. ಅವರಾರಿಗೂ ಯಾವುದೇ ಆಂಗ್ಲ ಭಾಷೆಯನ್ನೂ ಮಾತನಾಡಲು ಬರುವುದಿಲ್ಲ. ಭಾಷೆಯನ್ನು ಕಲಿಯಲು ನಿಮಗೆ ಇದು ಒಳ್ಳೆಯ ಅವಕಾಶ" ಎಂದು ಹೇಳಿದರು. ಯೂರೋಪಿನ ಒಬ್ಬಳು ಬಿಳಿಹೆಂಗಸು ಒಂದು ಕಟ್ಟಾ ಸಂಪ್ರದಾಯಸ್ಥ ಹಿಂದು ಕುಟುಂಬದೊಡನೆ ವಾಸಿಸುವುದು ಎಷ್ಟು ಅಪರೂಪದ್ದಾಗಿತ್ತೆಂಬುದನ್ನು ನಾನು ಸ್ಪಷ್ಟವಾಗಿ ಗ್ರಹಿಸಿರುವಾಗ, ಅವರ ಪ್ರಸ್ತಾಪದಿಂದ ನಾನು ಭಾವಪರವಶಳಾದೆ. ಅವರ ಕುಟುಂಬದೊಡನೆ ವಾಸಿಸುವು ದೆಂದರೆ ಹೇಗಿರಬಹುದೆಂದು ಸ್ಪಷ್ಟವಾಗಿ ಯೋಚಿಸಲೂ ಕೂಡ ಸಮಯ ತೆಗೆದು ಕೊಳ್ಳದೆ, ನಾನು ಉತ್ಸಾಹದಿಂದ ಅವರ ಜೊತೆ ಬಾಡಿಗೆದಾರಳಾಗಿರಲು ಒಪ್ಪಿದೆನು ಮತ್ತು ಅವರ ಆಹ್ವಾನಕ್ಕಾಗಿ ಅವರನ್ನು ಯಥೇಚ್ಛವಾಗಿ ವಂದಿಸಿದೆನು.

ಕುಟುಂಬದ ಪದ್ಧತಿಗಳಿಗೆ ಹೊಂದಿಕೊಳ್ಳಲು ನನಗೆ ಅನುಕೂಲವಾಗುವಂತೆ, ತಂದೆ ಮತ್ತು ಮಗಳು ಹೊರಡುವ ಎರಡು ದಿನಗಳ ಮುಂಚೆಯೇ ನಾನು ಒಳಗೆ ಸೇರಿಕೊಂಡೆನು. ಅವರೊಡನೆ ನಾನು ಕಳೆಯುವ ಕಾಲವು ಸಾಮಾಜಿಕ ಮಾನವ ಶಾಸ್ತ್ರಜ್ಞನ ಕನಸಾಗಿದ್ದಿತು. ಅವರ ಭಾಷೆಯನ್ನು ನಾನು ಕಲಿಯಲು ಮತ್ತು ಅವರೊಡನೆ ನಾನು ನಿಸ್ಸಂಕೋಚವಾಗಿರಲು ಪತ್ನಿ ಮತ್ತು ಕಿರಿಯ ಮಕ್ಕಳು ತಮ್ಮ ಶಕ್ತಿಮೀರಿ ನನಗೆ ಸಹಾಯ ಮಾಡಲು ಪ್ರಯತ್ನಿಸಿದರು. ನಾನು ಅವರೊಡನೆ ಎಲ್ಲೆಡೆಗಳಿಗೂ ಹೋದೆನು ಮತ್ತು ಅವರ ಕುಟುಂಬ ಮತ್ತು ಗೆಳೆಯರ ವಿಸ್ತಾರವಾದ ಜಾಲವನ್ನು ಭೇಟಿಮಾಡಿದೆ. ಕುಟುಂಬದ ಹಲವಾರು ಧಾರ್ಮಿಕ ವಿಧಿಗಳಲ್ಲಿಯೂ ಮತ್ತು ಸಾಂಪ್ರದಾಯಿಕ ಆಚರಣೆಗಳಲ್ಲಿಯೂ ಕೂಡ ನಾನು ಸೇರಿಕೊಂಡೆನು. ಒಬ್ಬ ಸಾಂಪ್ರದಾಯಿಕ ಹಿಂದು ಮಹಿಳೆಯಂತೆ ಜೀವನ ನಡೆಸುವಂತಾದುದು ನನ್ನ ಭಾಗ್ಯ ಎನ್ನಿಸಿತು. ಕುಟುಂಬವು ನನ್ನ ಮೇಲೆ ವಿಧಿಸಿದ, ಒಂದೇ ಒಂದು ನಿರ್ಬಂಧವೆಂದರೆ ನಾನು ಅವರ ಅಡಿಗೆ ಮನೆಗೆ ಪ್ರವೇಶಿಸಬಾರದೆಂಬುದು ಮಾತ್ರ. ಅದನ್ನು ಬಿಟ್ಟು ಬೇರೆಲ್ಲದರಲ್ಲಿಯೂ ನನ್ನನ್ನು ಒಳಗೊಳ್ಳುತ್ತಿದ್ದರು. ಬೇರೆ ಬೇರೆ ಧಾರ್ಮಿಕ ವಿಧಿಗಳಿಗೆ ಹೊಂದಿಕೊಳ್ಳಲು ನಾನು ಕಷ್ಟಪಟ್ಟು ಪ್ರಯತ್ನಿಸಿದೆ:

'ಹೆಚ್ಚಿನವುಗಳಲ್ಲಿ ನಾನು ವಿವೇಚನೆಯನ್ನು ಕಾಣಲಿಲ್ಲ.' ಏನೇ ಆದರೂ, ಸಂಪ್ರದಾಯದಲ್ಲಿ ಆಳವಾಗಿ ನೆಲೆಗೊಂಡ ಒಂದು ಕಾರ್ಯದ ವಿವೇಚನೆಯು, ನನ್ನ ಗ್ರಹಿಕೆಗೆ ಮೀರಿದುದಾಗಿದ್ದಿತು. ತನ್ನನ್ನು ತಾನೇ ಅಪ್ರಸ್ತುತಗೊಳಿಸಿಕೊಳ್ಳುವ ಮತ್ತು ಸ್ಥಳೀಯ ಸಂಸ್ಕೃತಿಯಲ್ಲಿ ಸಂಪೂರ್ಣವಾಗಿ ಮಗ್ನವಾಗುವ ಕ್ಷೇತ್ರ ಕಾರ್ಯಕರ್ತನ ಪಾತ್ರವನ್ನು ನಾನು ಕಾಣತೊಡಗಿದೆ. ಈ ಅರಿವಿನ ಹೊರತಾಗಿಯೂ, ನಾನು ಮಾಡಬೇಕಾಗಿದ್ದ ಅಥವಾ ಮಾಡಬಾರದಾಗಿದ್ದ ಅನೇಕ ವಿಷಯಗಳೊಡನೆ ಹೆಣಗುವುದು ನನಗೆ ಬಹಳ ಕಷ್ಟವಾಗಿದ್ದಿತು. ಒಂಟಿತನ ನನ್ನನ್ನು ಬಾಧಿಸಿತು. ಆದರೆ, ನಾನು ವಿಚಾರ ವಿನಿಮಯ ಮಾಡಿಕೊಳ್ಳಬಹುದಾಗಿದ್ದ ಒಬ್ಬನೇ ವ್ಯಕ್ತಿ ಚಾಮು ಮತ್ತು ಅವರು ತಮ್ಮ ವಿಶ್ವವಿದ್ಯಾನಿಲಯದ ಹುದ್ದೆಯನ್ನು ವಹಿಸಿಕೊಳ್ಳಲು ಉತ್ತರ ಭಾರತಕ್ಕೆ ಹೊರಟುಹೋಗಿದ್ದರು; ನಾನು ವಿಶ್ವಾಸವಿಡಬಹುದಾಗಿದ್ದ ಬೇರೆ ಯಾವೊಬ್ಬ ವ್ಯಕ್ತಿಯೂ ಇರಲಿಲ್ಲ.

ಆ ಜೀವನ ವಿಧಾನಕ್ಕೆ ಹೊಂದಿಕೊಳ್ಳಲು ನಾನು ಹೋರಾಟ ಮಾಡುತ್ತಿದ್ದುದನ್ನು ಗಮನಿಸುವಷ್ಟು ಮಟ್ಟಿಗೆ ನನ್ನ ಆತಿಥೇಯಳು ಸಾಕಷ್ಟು ಸಮೀಚೀನ ದೃಷ್ಟಿಯುಳ್ಳವರಾಗಿದ್ದರು. ಆದ್ದರಿಂದ, ಆಕೆಯ ತನ್ನ ಬಂಧುಗಳಲ್ಲೊಬ್ಬರಾದ ಕೃಷ್ಣನ ಭೇಟಿಯನ್ನು ನನಗಾಗಿ ಏರ್ಪಾಡು ಮಾಡಿದಳು. ಆತನು ರಸಾಯನಶಾಸ್ತ್ರದಲ್ಲಿ ಡಾಕ್ಟೊರೇಟನ್ನು ಅಮೆರಿಕದಲ್ಲಿ ಮುಗಿಸಿದ್ದು ಇತ್ತೀಚೆಗೆ ತಾನೇ ಅಲ್ಲಿಂದ ಹಿಂತಿರುಗಿದ್ದನು. ಅವನೊಡನೆ ಸ್ಥಳೀಯ ಭಾಷೆಯಲ್ಲಿ ಸಂಭಾಷಣೆ ನಡೆಸಲು ಕಷ್ಟಪಡುವುದಕ್ಕಿಂತಲೂ ಇಂಗ್ಲೀಷ್‌ನಲ್ಲಿ ಸಂಭಾಷಿಸಬಲ್ಲೆನೆನ್ನುವ ಸಂತೋಷ ನನಗಾಗಿತ್ತು. ಮೈಸೂರು ಸ್ಪೋರ್ಟ್ಸ್ ಕ್ಲಬ್‌ಗೆ ನನ್ನನ್ನು ಕರೆದುಕೊಂಡು ಹೋಗುವುದಾಗಿ ಅವನು ನನ್ನನ್ನು ಆಹ್ವಾನಿಸಿದನು. ಬಹಳಷ್ಟು ಜನ ಐರೋಪ್ಯರು ಮೈಸೂರಿನಲ್ಲಿ ವಾಸಿಸುತ್ತಿದ್ದಾಗ, ಬ್ರಿಟಿಷ್ ರಾಜ್ಯದ ದಿನಗಳಿಂದಲೂ ಅದೊಂದು ಪರಂಪರೆಯಾಗಿ ಬಂದ ಕ್ಲಬ್.

ನಾವು ಕ್ಲಬ್ ಅನ್ನು ಪ್ರವೇಶಿಸುತ್ತಿದ್ದಂತೆಯೇ ನನಗೆ ವಸಾಹತು ಜೀವನದ ಬಗ್ಗೆ ಸಾಮರ್‌ಸೆಟ್ ಮಾಮ್‌ನ ಕೆಲವು ಕಥೆಗಳು ನನಗೆ ನೆನಪಾದವು. ಆ ಸ್ಥಳವು ಮಂದಪ್ರಕಾಶದಿಂದ ಕೂಡಿದ್ದಿತು. ಮತ್ತು ಪಾರಿತೋಷಕಗಳು ಗೋಡೆಗಳನ್ನು ಅಲಂಕರಿಸಿದ್ದುವು. ಪಾನಶಾಲೆ(ಬಾರ್)ಯ ಮುಂದೆ ಸೇರಿದ್ದ ಪುರುಷರ ಒಂದು ಗುಂಪನ್ನು ಬಿಟ್ಟರೆ, ಆ ವಿಶಾಲ ಸಭಾಂಗಣವು ಬಹುಮಟ್ಟಿಗೆ ಅತಿಥಿಗಳಿಲ್ಲದೆ ಖಾಲಿಯಾಗಿದ್ದಿತು. ತಮ್ಮ ಧಣಿಗಳ ಪ್ರತಿಯೊಂದು ಅಗತ್ಯವನ್ನೂ ಪೂರೈಸಲು, ಗಂಜಿ ಹಾಕಿದ ಬಿಳಿ ವಸ್ತ್ರಗಳನ್ನೂ ಮತ್ತು ಎತ್ತರದ ಪೇಟಗಳನ್ನೂ ಧರಿಸಿದ್ದ ಅನೇಕ ಸೇವಕರು ಅಲ್ಲಿ ಕಾದಿದ್ದರು. ಅತಿಥಿಗಳೆಲ್ಲಾ ಪ್ರಧಾನವಾಗಿ ಯೂರೋಪಿಯನ್ನರು, ಆದರೆ ಒಳ್ಳೆಯ ಉಡುಪು ಧರಿಸಿದ ಕೆಲವು ಭಾರತೀಯರೂ ಕೂಡ ಅಲ್ಲಿದ್ದರು.

ಅಂತಹ ಬಿಸಿ ಹವಾಮಾನದಲ್ಲಿ ಸಾಂಪ್ರದಾಯಿಕ ಸೂಟುಗಳು ಮತ್ತು ಟೈಗಳು ಒಂದು ರೀತಿಯಲ್ಲಿ ಅನುಚಿತವೆಂದು ನನಗೆ ಭಾಸವಾಯಿತು; ಆ ಬಿಸಿಯಲ್ಲಿ ಅವರು ಹೇಗೆ ಹೆಣಗಾಡುತ್ತಿದ್ದರೆಂಬುದು ನನಗೆ ಅಚ್ಚರಿಯನ್ನುಂಟುಮಾಡಿತು. ಯೂರೋಪಿಯನ್ನರಲ್ಲಿ ಒಬ್ಬರು ಒಂದು ವಿನೋದವನ್ನು ಹೇಳಿರಬೇಕು. ಏಕೆಂದರೆ ಪುರುಷರೆಲ್ಲಾ ನಗುವಿನೊಂದಿಗೆ ಕಂಪಿಸುತ್ತಿದ್ದರು. ಅವರೆಲ್ಲಾ ಬಾಗಿಲ ಕಡೆಗೆ ಬೆನ್ನು ಮಾಡಿದ್ದುದರಿಂದ ನಾವು ಪ್ರವೇಶಿಸಿದ್ದನ್ನು ಯಾರೊಬ್ಬರೂ ಗಮನಿಸಲಿಲ್ಲ; ಆದರೆ ಪಾನಶಾಲೆಯನ್ನು ನಾವು ಸಮೀಪಿಸುತ್ತಿದ್ದಂತೆಯೇ ನಾವು ಇದ್ದಕ್ಕಿದ್ದಂತೆಯೇ ಸುತ್ತುವರಿಯಲ್ಪಟ್ಟೆವು. ನನ್ನ ಇರುವಿಕೆಯು ಒಂದು ಕೋಲಾಹಲವನ್ನೇ ಉಂಟು ಮಾಡಿದ್ದಿತು. ಮತ್ತು ಅಲ್ಲಿ ಏನಾಗುತ್ತಿತ್ತೆಂದು ನನ್ನ ಅರಿವಿಗೆ ಬರುವ ಮುಂಚೆಯೇ ನನ್ನನ್ನು ಸುತ್ತುವರಿದಿದ್ದ ಪುರುಷರ ನಡುವೆ ಸಿಲುಕಿದ್ದೆನು. ಅವರು ನನ್ನೆಡೆಗೆ ಪ್ರಶ್ನೆಗಳನ್ನು ಸಿಡಿಸತೊಡಗಿದರು: 'ನೀನು ಎಲ್ಲಿಂದ ಬಂದಿದ್ದೀಯೆ? ಇಲ್ಲಿ ನೀನು ಏನು ಮಾಡುತ್ತಿದ್ದೀಯೆ? ಎಲ್ಲಿ ವಾಸಿಸುತ್ತಿದ್ದೀಯೆ ಮತ್ತು ಎಷ್ಟು ಕಾಲದವರೆಗೆ ಇಲ್ಲಿ ಇರುತ್ತೀಯೆ? ಅವರೆಲ್ಲರೂ ನನ್ನ ಗಮನವನ್ನು ಸೆಳೆಯಲು ಸ್ಪರ್ಧಿಸುತ್ತಿದ್ದರು ಮತ್ತು ನನಗೆ ಪಾನೀಯವನ್ನು ಕೊಂಡುಕೊಡಲು ಮುಗಿಬೀಳುತ್ತಿದ್ದರು. ಈ ಪುರುಷರೆಲ್ಲಾ ನನ್ನ ಗಮನಕ್ಕೆ ಬರಲಿಚ್ಛಿಸುತ್ತಿದ್ದುದು ವಿನೋದವಾಗಿತ್ತೆಂದು ಪ್ರಾರಂಭದಲ್ಲಿ ನಾನು ಯೋಚಿಸುತ್ತಿದ್ದೆನು. ಆದರೆ, ಕೆಲವೇ ನಿಮಿಷಗಳ ನಂತರ ನಾನು ಪ್ರದರ್ಶನಕ್ಕಿಟ್ಟ ಪ್ರಾಣಿಯಾದೆನೆನ್ನಿಸಿತು ಮತ್ತು ಹತಾಶೆಯಿಂದ ವೇದಿಕೆ ಬಿಟ್ಟು ಹೋಗಬೇಕೆನ್ನಿಸಿತು. ಅವನು ನನ್ನನ್ನು ಪಾರು ಮಾಡುವನೆಂಬ ಭರವಸೆಯಿಂದ ನಾನು ಕೃಷ್ಣನೆಡೆಗೆ ಬೇಡಿಕೊಳ್ಳುವಂತೆ ನೋಡಿದೆ. ಆದರೆ, ಕ್ಲಬ್‌ನಲ್ಲಿ ನಾವು ಅವನ ಸ್ನೇಹಿತರ ಜೊತೆ ಸೇರಿಕೊಂಡಿದ್ದುದರಿಂದ ಅವನೊಬ್ಬ ಬದಲಾದ ವ್ಯಕ್ತಿಯಾಗಿದ್ದನು. ಮತ್ತು ನನ್ನ ಸಂದಿಗ್ಧ ಸ್ಥಿತಿಯನ್ನು ನೋಡಿ ಅವನು ಬರಿದೇ ನಕ್ಕನು.

ನನ್ನ ಉಲ್ಲಸಿತ ಗುಂಪಿನ ಪುರುಷರು ನನ್ನೊಡನೆ ಆಟಗಳನ್ನಾಡತೊಡಗಿದರು ಮತ್ತು ನಾನು ಮತ್ತೊಂದು ಪಾನೀಯವನ್ನು ನಿರಾಕರಿಸಲು ಪ್ರಯತ್ನಿಸಿದ ಪ್ರತಿಯೊಂದು ಬಾರಿಯೂ 'ಹಾದಿಗಾಗಿ ಮತ್ತೊಂದು' ಎಂದು ಹಾಡುತ್ತಾ ಅವರು ನನಗಾಗಿ ಇನ್ನೊಂದಕ್ಕೆ ಆಜ್ಞೆ ಮಾಡಿದರು. ಸ್ವಲ್ಪ ಹೊತ್ತಿನಿಂದ ನಾನು ಒಂದು ಪಾನೀಯವನ್ನೂ ತೆಗೆದುಕೊಂಡಿರಲಿಲ್ಲ. ಮತ್ತು ಇದು ಬಿಸಿ ವಾತಾವರಣದೊಡನೆ ಸೇರಿ ನನಗೆ ಸಾಕಷ್ಟು ಮತ್ತು ಬರಿಸಿತೆಂದೆನಿಸಿತು. ನನಗೆ ಅಲ್ಲಿಂದ ಹೊರಗೆ ಹೋಗಬೇಕಾದ ಅಗತ್ಯವಿದೆಯೆಂದು ತಿಳಿದಿತ್ತು. ಆದರೆ, ಈ ಪುರುಷರ ಗುಂಪಿನಿಂದ ನನ್ನನ್ನು ನಾನೇ ಬಿಡಿಸಿಕೊಂಡು ಹೋಗುವುದು ಹೇಗೆಂಬುದು ನನಗೆ ತಿಳಿದಿರಲಿಲ್ಲ. ನಾನು ನಂಬಬಹುದಾದಂತಹ ಯಾವುದೇ ಒಬ್ಬ ವ್ಯಕ್ತಿಯೂ ಅಲ್ಲಿರಲಿಲ್ಲವೆಂದು ತೋರಿತು. ನನ್ನನ್ನು ಮುತ್ತುತ್ತಿದ್ದ ಪುರುಷರ ಮುಖಗಳನ್ನು ಪರೀಕ್ಷಿಸಿದೆ ಮತ್ತು ಗುಂಪಿನಿಂದ

ಬೇರೆಯಾಗಿ ನಿಂತಿದ್ದು, ಒಂದು ಸಾಧಾರಣವಾದ ತೆರೆದ ಕತ್ತು ಪಟ್ಟಿಯ ಷರ್ಟ್ ಅನ್ನು ಧರಿಸಿದ್ದ ಯೂರೋಪಿಯನ್ ಒಬ್ಬನನ್ನು ಗುರ್ತಿಸಿದೆ. ಬೇರೆಲ್ಲರಿಗಿಂತಲೂ ಅವನು ಬಹಳ ಸಂಕೋಚ ಪ್ರವೃತ್ತಿಯವನಾಗಿ ಕಂಡನು. ನಾನು ನನ್ನನ್ನು ಸಮಚಿತ್ತದಿಂದಿರುವಂತೆ ಮಾಡಿಕೊಳ್ಳಲು ಕಷ್ಟಪಟ್ಟು ಪ್ರಯತ್ನಿಸಿದೆ ಮತ್ತು ನನ್ನಿಂದ ಸಾಧ್ಯವಾದಷ್ಟೂ ಅತ್ಯಂತ ಸೊಕ್ಕಿನ ಧ್ವನಿಯಲ್ಲಿ ನನ್ನನ್ನು ತನ್ನ ಮೋಟಾರು ಗಾಡಿಯಲ್ಲಿ ಮನೆಗೆ ಕರೆದುಕೊಂಡು ಹೋಗಲು ಸಾಧ್ಯವೇ ಎಂದು ಅವನನ್ನು ಕೇಳಿದೆ. ಅವನ ಕಣ್ಣುಗಳು ಬೆಳಗಿದವು ಮತ್ತು ತಕ್ಷಣವೇ ಅವನು ತಲೆಯನ್ನಲ್ಲಾಡಿಸಿ ಒಪ್ಪಿಗೆ ಸೂಚಿಸಿದನು. ಸುಮಾರು ಐವತ್ತೈದು ವಯಸ್ಸಿನ ಎತ್ತರವಾದ ಮತ್ತು ಗಟ್ಟಿಮುಟ್ಟಾದ ಈ ವ್ಯಕ್ತಿಯು ನಿಂತಿದ್ದ ಕಡೆಗೆ ಗುಂಪಿನಲ್ಲಿದ್ದ ಪುರುಷರು ತಮ್ಮ ನಡುವೆ ದಾರಿಮಾಡಿಕೊಟ್ಟರು. ಆ ವ್ಯಕ್ತಿಯು ಕುಡಿದ ಮತ್ತಿನಲ್ಲಿದ್ದ ಪುರುಷರ ಈ ಗುಂಪಿನ ಗೌರವವನ್ನು ಪಡೆದಿದ್ದುದಾಗಿ ತೋರುತ್ತಿದ್ದನು. ಮತ್ತು ನನ್ನನ್ನು ಕ್ಲಬ್‌ನಿಂದ ಹೊರಕ್ಕೆ ಕರೆದೊಯ್ಯಲು ಅವರು ಅವನಿಗೆ ತಕ್ಷಣವೇ ದಾರಿ ಮಾಡಿಕೊಟ್ಟ ರೀತಿಯ ಬಗ್ಗೆ ನಾನು ಪ್ರಭಾವಿತಳಾಗಿದ್ದೆನು. ಇದರಿಂದ ಆತನು ಸ್ವಲ್ಪ ಪ್ರಾಮುಖ್ಯತೆಯುಳ್ಳ ವ್ಯಕ್ತಿಯಾಗಿರಬೇಕೆಂದು ನಾನು ಕಲ್ಪಿಸಿಕೊಂಡಂತಾಗಿದ್ದಿತು. ಆತನು ತನ್ನನ್ನು ತಾನೇ ಡಿವೆಟ್ ವಾನ್ ಇನ್‌ಜೆನ್ ಎಂದು ಪರಿಚಯಿಸಿಕೊಂಡನು. ಮತ್ತು ಅವನು ನನ್ನನ್ನು ಸಾವಕಾಶವಾಗಿ ನಿಲ್ಲಿಸಿದ್ದ ತನ್ನ ಕಾರಿನ ಕಡೆಗೆ ಕರೆದೊಯ್ಯುತ್ತಿದ್ದಾಗ, ಹಿಂದೆ ನಾನು ಬಿಟ್ಟು ಬಂದಿದ್ದ ಜನರಿಂದ ಗೇಲಿ ಮಾಡುವ ಶಬ್ದಗಳನ್ನು ಕೇಳಿದೆನು. ಅವರು, 'ನಮ್ಮಲ್ಲಿಲ್ಲದ್ದು ಅವನಲ್ಲೇನಿದೆ?' ಎಂದು ಕೇಳುತ್ತಿದ್ದರು. ಸಂಜೆಯ ಉಲ್ಲಾಸಕರ ಗಾಳಿ ಜೋರಾಗಿ ಬೀಸಿದಾಗ ನನಗೆ ಬವಳಿ ಬಂದಂತಾಯಿತು ಮತ್ತು ನನಗೆ ಆಧಾರವಾಗಿ ಡಿವೆಟ್ ನನ್ನ ತೋಳನ್ನು ಹಿಡಿದನು. ಅವನು ತನ್ನ ಚಾಲಕನನ್ನು ಸನ್ನೆ ಮಾಡಿ ಕರೆದನು ಮತ್ತು ತಕ್ಷಣದಲ್ಲಿಯೇ ಆವರಣದಿಂದ ಹೊರಕ್ಕೆ ನಾವು ಶೀಘ್ರಗತಿಯಲ್ಲಿ ಕಾರನ್ನು ಓಡಿಸುತ್ತಿದ್ದೆವು. ಕ್ಲಬ್‌ನಲ್ಲಿ ನನ್ನನ್ನು ನಡೆಸಿಕೊಂಡ ರೀತಿಗೆ ಅವನು ಕ್ಷಮೆ ಬೇಡಿದ ಮತ್ತು ಅವನೊಡನೆ ನಾನು ಸುರಕ್ಷಿತವಾಗಿರುವುದಾಗಿ ನನಗೆ ಹೇಳಿದನು.

ಅವನು ಒಳ್ಳೆಯ ನಡೆಯುಳ್ಳವನಾಗಿಯೂ ಮತ್ತು ಮನೋಹರವಾಗಿಯೂ ಇದ್ದನು. ಮತ್ತು ಮೈಸೂರಿನ ಸುಂದರ ತಾಣಗಳಲ್ಲಿ ಒಂದಾದ ಚಾಮುಂಡಿ ಬೆಟ್ಟಕ್ಕೆ ಕಾರ್‌ನಲ್ಲಿ ಹೋಗಲು ಅವನು ನೀಡಿದ ಆಹ್ವಾನವನ್ನು ನಾನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದೆನು. ಇದರಿಂದ ನನ್ನ ಸಂಪ್ರದಾಯಬದ್ಧವಾದ ಹಿಂದು ಕುಟುಂಬಕ್ಕೆ ಹಿಂತಿರುಗುವ ಮೊದಲು ನಾನು ಮಾನಸಿಕ ಸ್ಥಿಮಿತತೆಯನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಮೇಲಿನಿಂದ, ನಗರದ ದೃಶ್ಯವು ಆಹ್ಲಾದಕರವಾಗಿದ್ದಿತು. ದೀಪಗಳ ಬಳಿ ಮಿಣುಕು ಹುಳುಗಳು ನೃತ್ಯಗೈಯ್ಯುತ್ತಿದ್ದುವು ಮತ್ತು ರಾತ್ರಿಯಾಗಸದ ಮೇಲೆ

ಕೋಟ್ಯಾಂತರ ವಜ್ರಗಳು ಹರಡಿರುವಂತೆ ನಕ್ಷತ್ರಗಳು ಕಾಣುತ್ತಿದ್ದವು. ಸಂಜೆಯ ತಂಗಾಳಿಯನ್ನು ಆನಂದಿಸುತ್ತಾ ನಾವು ಅಲ್ಲಿ ಕುಳಿತಿರುವಾಗ, ಹೇಗೆ ಅವನ ಮಾತಾಪಿತೃಗಳು ಅವನು ಹುಟ್ಟುವ ಮುಂಚೆಯೇ ಮೈಸೂರಿಗೆ ಬಂದಿದ್ದರು ಮತ್ತು ಅವನು ಈಗ ತನ್ನ ವಯಸ್ಸಾದ ತಾಯಿ ಮತ್ತು ತಮ್ಮನೊಡನೆ ಹೇಗೆ ಬದುಕುತ್ತಿದ್ದಾನೆಂಬುದನ್ನು ಡಿವೆಟ್ ನನಗೆ ಹೇಳಿದನು. ಅವನ ತಂದೆಯು ಒಬ್ಬ ನಿಪುಣನಾದ ಚರ್ಮಪ್ರಸಾಧನ ಕಲಾಕಾರ(Taxidermist)ನಾಗಿದ್ದನು ಮತ್ತು ತನ್ನ ಪುತ್ರರನ್ನು ಆ ವೃತ್ತಿಯಲ್ಲಿ ತರಬೇತಿಗೊಳಿಸಿದ್ದನು. ಮೈಸೂರು ಮಹಾರಾಜರನ್ನೊಳಗೊಂಡಂತೆ ಘನತೆವೆತ್ತ ಗ್ರಾಹಕರ ಪಟ್ಟಿಯೊಡನೆ, ಸ್ಥಿರವಾಗಿ ನೆಲೆಗೊಂಡಿದ್ದ ವ್ಯಾಪಾರವನ್ನು ಅವರಿಗೆ ಬಿಟ್ಟುಕೊಟ್ಟನು. ನನ್ನನ್ನು ಮೈಸೂರಿಗೆ ಕರೆತಂದ ಕಾರಣ ಯಾವುದೆಂದು ಡಿವೆಟ್ ಅನಂತರ ಕೇಳಿದನು. ಇಷ್ಟರಲ್ಲೇ ಬರಲಿರುವ ನನ್ನ ಸಂಶೋಧನೆಯು ನನ್ನ ಡಾಕ್ಟರೇಟ್ ವ್ಯಾಸಂಗದ ಭಾಗವಾಗಿತ್ತೆಂಬ ನನ್ನ ವಿವರಣೆಯು ಅವನ ಕುತೂಹಲವನ್ನು ತಣಿಸಿತು.

ಡಿವೆಟ್ ನನ್ನನ್ನು ಮನೆಗೆ ಕರೆದೊಯ್ಯುವ ಮುಂಚೆಯೇ ಬರುವ ಭಾನುವಾರ ಚರ್ಚ್‌ನಲ್ಲಿ ಬೆಳಗಿನ ಪ್ರಾರ್ಥನೆಯ ನಂತರ ಉಪಾಹಾರಕ್ಕಾಗಿ ಅವನ ಕುಟುಂಬದೊಂದಿಗೆ ಸೇರಿಕೊಳ್ಳುವುದಾಗಿ ನಾನು ವಾಗ್ದಾನ ಮಾಡುವಂತೆ ಮಾಡಿದನು. ನಾನು ಚರ್ಚ್‌ಗೆ ಹೋಗುವ ಕ್ರಿಶ್ಚಿಯನ್ ಎಂದು ಅವನು ತನ್ನಷ್ಟಕ್ಕೆ ತಾನೇ ಭಾವಿಸಿದ್ದನು. ಏನು ಹೇಳಬೇಕೆಂದು ನನಗೆ ಸ್ವಲ್ಪವೂ ತಿಳಿದಿರಲಿಲ್ಲ ಮತ್ತು ನಾನು ಯೆಹೂದ್ಯಳೆಂದು ಥಟ್ಟನೆ ಹೇಳಿಬಿಟ್ಟೆನು. ಅವನು ನನ್ನೊಡನೆ ಹೆಚ್ಚೇನೂ ಮಾಡುವ ಇಚ್ಛೆ ಅವನಿಗಿಲ್ಲವೆಂದು ನಾನು ಬಹುಮಟ್ಟಿಗೆ ನಿರೀಕ್ಷಿಸಿದ್ದೆನು. ಆದರೆ, ಅವನು ಚರ್ಚ್ ಮುಗಿದ ನಂತರ ನನ್ನನ್ನು ಕರೆತರಲು ತನ್ನ ಚಾಲಕನನ್ನು ಕಳಿಸಿಕೊಡುವುದಾಗಿ ವಿನಯಪೂರ್ವಕವಾಗಿಯೇ ಹೇಳಿದನು. ನನ್ನ ಆಂತರ್ಯದ ಭಾವನೆಗಳು ಸರಿಯಾಗಿದ್ದವೆಂದು ನನಗೆ ಹೆಚ್ಚಿನ ಸಂತೋಷವಾಗಿದ್ದಿತು. ಏಕೆಂದರೆ ಡಿವೆಟ್ ಮತ್ತು ಅವನ ಕುಟುಂಬವು ಭಾರತದಲ್ಲಿ ನಾನು ಇದ್ದಷ್ಟು ಕಾಲವೂ ನನಗೆ ಆಪ್ತ ಸ್ನೇಹಿತರಾದರು.

ಅದಾದನಂತರ ತಕ್ಷಣದಲ್ಲಿಯೇ ನಾನು ಮೈಸೂರು ನಗರದಿಂದ ೩೦ ಮೈಲಿ ದೂರದಲ್ಲಿದ್ದ ಮಂಗಲವೆಂಬ ಹಳ್ಳಿಗೆ ಹೋದೆನು. ನನ್ನ ಸಂಶೋಧನೆಯ ಪ್ರಥಮ ಹಂತವನ್ನು ನಾನು ಅಲ್ಲಿಯೇ ನಡೆಸಬೇಕಾಗಿದ್ದಿತು. ಆ ಹಳ್ಳಿಯು ಏರಿಳಿತಗಳಿಂದ ಕೂಡಿದ ಗ್ರಾಮೀಣ ಪ್ರದೇಶದಲ್ಲಿದ್ದಿತು ಮತ್ತು ಕಾಲುವೆ ನೀರಾವರಿಯು ಹುಲುಸಾದ ಹಸಿರು ಸಸ್ಯರಾಶಿಯನ್ನು ಸುರಕ್ಷಿತವನ್ನಾಗಿ ಮಾಡಿದ್ದಿತು. ಬಹಳ ಸಮಯ ಅದು ಬಹಳ ಬಿಸಿಯಿಂದಲೇ ಕೂಡಿದ್ದಿತು. ಆದರೆ, ಡೆಕ್ಕನ್ ಪ್ರಸ್ಥಭೂಮಿಯ ಮೇಲಿದ್ದುದರಿಂದ ಅದು ತಡೆಯಲಸಾಧ್ಯವೆನಿಸಲೇ ಇಲ್ಲ. ಅಂತಹ ಸುಂದರವಾದ

ಪರಿಸರದಲ್ಲಿರಲು ನಾನು ಎಷ್ಟು ಭಾಗ್ಯಶಾಲಿಯೆಂಬ ಅರಿವು ನನ್ನಲ್ಲಿರುವಾಗಲೇ ನಾನು ಹೊರಗಿನ ಪ್ರಪಂಚದಿಂದ ಸಂಪೂರ್ಣವಾಗಿ ಬೇರ್ಪಟ್ಟಿರುವುದಾಗಿ ಭಾವಿಸಿದೆ. ಏಕೆಂದರೆ ನನಗೆ ಯಾವುದೇ ವಾಹನ ಸೌಕರ್ಯವೂ ಇರಲಿಲ್ಲ ಮತ್ತು ಆಗೀಗ ಬರುತ್ತಿದ್ದ ಕೆಲವು ಪತ್ರಗಳನ್ನು ಬಿಟ್ಟರೆ, ಯಾವುದೇ ವಿಧವಾದ ವಾಹನ ಸಂಪರ್ಕವೂ ಇರಲಿಲ್ಲ. ನಾನು ಕ್ಷೇಮವಾಗಿರುವುದನ್ನು ತಪಾಸಣೆ ಮಾಡಲು ಡಿವೆಟ್ ಆಗಾಗ ಬರುತ್ತಿದ್ದನು ಮತ್ತು ಒಂದು ಕಾರನ್ನು ಖರೀದಿಸಲು ನನ್ನನ್ನು ಸತತವಾಗಿ ಒತ್ತಾಯಿಸುತ್ತಿದ್ದನು. ಒಂದು ಬೈಸಿಕಲ್ಲನ್ನು ಖರೀದಿಸುವುದಕ್ಕೂ ನನಗೆ ಕಷ್ಟವಾಗುತ್ತದೆಯೆಂದು ಅವನಿಗೆ ಹೇಳಲು ನನಗೆ ಇಷ್ಟವಾಗಲಿಲ್ಲ. ಹಾಗಿದ್ದರೂ ಅನತಿ ಕಾಲದಲ್ಲಿಯೇ ನಾನು ಒಂದು ಶಿಥಿಲಗೊಂಡ ಹಳೆಯ ಬಯಸಿಕಲ್‌ನ ಹೆಮ್ಮೆಯ ಒಡೆಯಳಾದೆ ಮತ್ತು ಪುನಃ ಓಡಾಡಲು ಪ್ರಾರಂಭಿಸಿದೆ. ಹಳ್ಳಿಯ ಸುತ್ತಲೂ ಇದ್ದ ಕಿರುದಾರಿಗಳನ್ನು ಪರಿಶೋಧಿಸುವುದನ್ನೂ ಮತ್ತು ತಮ್ಮ ವ್ಯವಹಾರಗಳಲ್ಲಿ ತೊಡಗಿದ್ದ ಬೇರೆ ಬೇರೆ ಜನರನ್ನು ಭೇಟಿ ಮಾಡುವುದನ್ನೂ ನಾನು ಪ್ರೀತಿಸುತ್ತಿದ್ದೆ. ಭಾರತದ ಹಳ್ಳಿಯೊಂದರ ಹಿಂದಿನ ರಸ್ತೆಗಳಲ್ಲಿ ಒಬ್ಬ ಬಿಳಿ ಮಹಿಳೆಯು ಕಾಣಿಸಿಕೊಳ್ಳುವುದು ಅಸಾಮಾನ್ಯ ದೃಶ್ಯವಾಗಿದ್ದುದರಿಂದ ನನ್ನನ್ನು ಜನರು ಹೊರಗೂ ಮತ್ತು ಅವರ ಸುತ್ತಲೂ ನೋಡುವುದು ರೂಢಿಗತವಾಗುವಂತೆ ಮಾಡುವುದು ಒಳ್ಳೆಯದೆಂದು ನಾನು ಭಾವಿಸಿದೆ.

ಒಂದು ದಿನ ಬೆಳಗ್ಗೆ ನಾನು ನನ್ನ ಬೆಳಗಿನ ಸವಾರಿಗಾಗಿ ಹೊರಗೆ ಹೋಗಿದ್ದೆ. ಒಂದು ತಿರುಗು ಮೂಲೆಯಲ್ಲಿ ವೇಗವಾಗಿ ಹೋದಾಗ ಆ ಕಿರಿದಾದ ರಸ್ತೆಯ ಮಧ್ಯದಲ್ಲಿ ಒಂದು ಬೇಸಾಯದ ಎತ್ತಿಗೆ ನಾನು ಮುಖಾಮುಖಿಯಾದೆನು. ಅದನ್ನು ಬೆದರಿಸಿ ಓಡಿಸುವ ಪ್ರಯತ್ನವಾಗಿ ನಾನು ನನ್ನ ಬೈಸಿಕಲ್‌ನ ಗಂಟೆಯನ್ನು ಬಾರಿಸಿದೆ. ಆದರೆ, ಅದು ನನ್ನ ದೃಷ್ಟಿಯನ್ನೇ ನಿಟ್ಟಿಸಿ ನೋಡಿತೇ ವಿನಃ ಅಲ್ಲಿಂದ ಕದಲಲಿಲ್ಲ. ನಾನು ಎಷ್ಟು ತಬ್ಬಿಬ್ಬಾಗಿದ್ದೆನೆಂದರೆ ನಾನು ಬಯಸಿಕಲ್‌ನಿಂದ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡೆನು. ಇದು ನನ್ನನ್ನು ಪುನಃ ಸೈಕಲ್ ಸವಾರಿಗೆ ಬೆದರುವಂತೆ ಮಾಡಿತು. ಹಳ್ಳಿಯಲ್ಲಿ ಕೆಲವು ತಿಂಗಳ ಕಷ್ಟಕರವಾದ ಒಂಟಿತನದ ನಂತರ, ನನಗೆ ಒಂದು ಬಳಸಿದ ಕಾರನ್ನು ಖರೀದಿಸಿಕೊಡುವುದಾಗಿಯೂ ಆದರೆ, ಅದನ್ನು ಓಡಿಸಲು ಬೇಕಾದ ಖರ್ಚೆಲ್ಲವನ್ನು ನಾನೇ ಮಾಡುವಂತಿದ್ದರೆ ಮಾತ್ರವೆಂದೂ ಡಿವೆಟ್ ಪ್ರಸ್ತಾಪಿಸಿದನು. ಅದೊಂದು ಕಳೆದುಕೊಳ್ಳಲಾರದಂತಹ ಅಮೂಲ್ಯ ಕೊಡುಗೆಯಾಗಿದ್ದಿತು. ನಾನು ಕೃತಜ್ಞತಾಪೂರ್ವಕವಾಗಿ ಅದನ್ನು ಒಪ್ಪಿದೆನು. ಒಂದು ಕಾರನ್ನು ಹೊಂದಿರುವುದೆಂದರೆ ನನಗೆ ಅನುಕೂಲವಾಗುವುದಲ್ಲದೆ, ನನ್ನ ಹಳ್ಳಿಯ ಸ್ನೇಹಿತರಿಗೆ ನನ್ನನ್ನು ಇನ್ನೂ ಹೆಚ್ಚು ಪ್ರೀತಿಪಾತ್ರಳನ್ನಾಗಿ ಮಾಡಬಹುದೆಂದು ನಾನು ತರ್ಕಿಸಿದೆ. ನನಗೆ ಕಾರು ಚಲಾಯಿಸಲು ಬರುವುದಿಲ್ಲವೆಂದು ಡಿವೆಟ್‌ಗೆ ತಿಳಿದಾಗ

ಅವನಿಗೆ ಆಘಾತವಾಯಿತು. ಅವನು ನನಗೆ ಪ್ರಾರಂಭಿಕ ಪಾಠಗಳನ್ನು ಕಲಿಸಲು ತೊಡಗಿದನು. ಅದು ನನಗೆ ಚಾಲನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವಂತೆ ಮಾಡಿತು. ನನಗೆ ಚಾಲನೆಯ ಪರವಾನಗಿ ಸಿಕ್ಕಿದ ತಕ್ಷಣ ಅವನು ನನಗೆ ಒಂದು ಹಳೆಯ ಹಿಂದುಸ್ಥಾನ್ ಕಾರೊಂದನ್ನು ಕೊಡುಗೆಯಾಗಿ ನೀಡಿದನು. ಅದನ್ನು ನಾನು 'ಸಂಗಿ' (Sangi) ಎಂದು ಕರೆದೆನು. ನನ್ನ ಮೊದಲನೆಯ ಕಾರಿನ ಬಗ್ಗೆ ನನಗೆ ಬಹಳ ಹೆಮ್ಮೆಯಾಗಿದ್ದಿತು ಮತ್ತು ಅದನ್ನು ನನ್ನ ಮೊದಲ ಮಗುವೋ ಎಂಬಂತೆ ನೋಡಿಕೊಂಡೆನು. ಚಿಕ್ಕ ಚಿಕ್ಕ ರಿಪೇರಿಗಳನ್ನು ಮಾಡುವುದನ್ನೂ ಕೂಡ ಕಲಿತೆನು. ಭಾರೀ ಮಳೆಯ ಸಮಯದಲ್ಲಿ ನಾನು ಚಾಲನೆ ಮಾಡುತ್ತಿರುವಾಗ ಪ್ಲಗ್‌ಗಳು ತೇವಗೊಂಡು ಕಾರು ನಿಂತುಬಿಡುತ್ತಿದ್ದಿತು. ಹೀಗಾದಾಗ ಪ್ಲಗ್‌ಗಳನ್ನು ಹೊರತೆಗೆದು ಅವನ್ನು ಒಂದು ಬೆಂಕಿಪೆಟ್ಟಿಗೆಯ ಮೇಲೆ ಉಜ್ಜಬೇಕು ಮತ್ತು ಅವುಗಳನ್ನು ಪುನಃ ಯಥಾಸ್ಥಾನದಲ್ಲಿ ಹಾಕಬೇಕು ಮತ್ತು ಕಾರು ಮುಂದಕ್ಕೆ ಜಗ್ಗಿ ಚಲಿಸಲು ಪ್ರಾರಂಭಿಸುತ್ತದೆ. ಅವನು ಹೇಳಿದ್ದು ಸರಿಯಾಗಿದ್ದಿತು. ನಾನು 'ಸಂಗಿ'ಯಲ್ಲಿ ಬಂದಾಗ ನನ್ನ ಗ್ರಾಮದ ಗೆಳೆಯರು ಬಹಳವಾಗಿ ಪ್ರಭಾವಿತರಾದರು. ಯಾವುದೇ ಅಡಚಣೆಯಿಲ್ಲದೆ ಅವರು ನನ್ನನ್ನು ಪ್ರಾರಂಭದಿಂದಲೂ ಸ್ವೀಕರಿಸಿದ್ದುದರಿಂದ, ಒಂದು ಕಾರನ್ನು ಹೊಂದಿದ್ದುದು ನನಗೆ ಇನ್ನೂ ಹೆಚ್ಚಿನ ವಿಶ್ವಾಸಪಾತ್ರತೆಯನ್ನು ದೊರಕಿಸಿತು.

ಮೊದಲ ಬಾರಿಗೆ ನಾನು ಬಂದಾಗ ಸಂಚಾರ ಸೌಕರ್ಯದ ಕೊರತೆಯೊಂದೇ ಅಲ್ಲದೆ, ನನ್ನ ವಾಸಸ್ಥಳವೂ ಸಮಸ್ಯೆಯಾಗಿದ್ದಿತು. ವಾಸ್ತವವಾಗಿಯೂ ನಾನು ನನ್ನ ಹೊಸ ಮನೆಯನ್ನು ಮೊದಲು ನೋಡಿದಾಗ ನಾನು ಹಿಂತಿರುಗಿ ಓಡಬೇಕೆಂದು ಬಯಸಿದ್ದೆನು. ಮುಂಭಾಗದಲ್ಲಿ ಒಂದು ಭಾವಿ ಮತ್ತು ಹಿಂಭಾಗದಲ್ಲಿ ಒಂದು ಗುಂಡಿ–ಪಾಯಖಾನೆಯಿದ್ದ ಮನೆಯೊಂದನ್ನು ನನಗೆ ಕೊಡಲಾಗಿದ್ದಿತು. ಆದರೆ, ಆ ಮನೆಯು ತುಂಬಾ ಹಳೆಯದಾಗಿದ್ದು ಶಿಥಿಲವಾಗಿದ್ದಿತು. ಮರಾಮತ್ತು ಇಲಾಖೆ ಯಿಂದ ಅದರ ನೀರಾವರಿ ಇಂಜಿನಿಯರ್‌ಗಳಲ್ಲಿ ಒಬ್ಬರಿಗಾಗಿ ಅನೇಕ ವರ್ಷಗಳ ಹಿಂದೆ ಅದು ನಿರ್ಮಾಣಗೊಂಡಿದ್ದಿತು. ೧೫ ವರ್ಷಗಳಷ್ಟು ಹಿಂದೆಯೇ ಅದನ್ನು ಬಿಟ್ಟು ಹೋದದ್ದರಿಂದ ಹಳ್ಳಿಗರು ತಮ್ಮ ಬೇಸಾಯದ ಪ್ರಾಣಿಗಳಲ್ಲಿ ಕೆಲವಕ್ಕಾಗಿ ಅದನ್ನು ಒಂದು ಕೊಟ್ಟಿಗೆಯಾಗಿ ಬಳಸಿದ್ದರು. ಅದು ಹೆಗ್ಗಣಗಳು ಮತ್ತು ಇಲಿಗಳಿಂದ ತುಂಬಿದ್ದಿತು ಮತ್ತು ಮೇಲ್ಛಾವಣಿಯು ಸೋರುತ್ತಿದ್ದಿತು; ಪಾಯಖಾನೆಯೂ ಕೂಡ ಭಯಂಕರ ಪರಿಸ್ಥಿತಿಯಲ್ಲಿದ್ದಿತು. ನಾನು ಸಕಾರಾತ್ಮಕವಾಗಿರಲು ಪ್ರಯತ್ನಿಸಿದೆ; ಕನಿಷ್ಠಪಕ್ಷ ಅದೊಂದು ಮನೆಯಾಗಿದ್ದಿತು. ಒಂದು ಫೀಲ್ಡ್ ಸೈಟ್‌ಗಾಗಿ ಹುಡುಕುತ್ತಿದ್ದಾಗ ನಾನು ಭೇಟಿ ನೀಡಿದ್ದ ಬೇರೆ ಗ್ರಾಮಗಳಲ್ಲಿ ಸಿಕ್ಕುತ್ತಿದ್ದುದಕ್ಕಿಂತಲೂ ಅದು ಉತ್ತಮವಾಗಿದ್ದಿತು. ಅತ್ಯಾಸಕ್ತಿಯಿಂದ ಕಾರ್ಯೋನ್ಮುಖಳಾದ ನಾನು ನನ್ನ ಬಾಣಸಿಗ

ಮತ್ತು ಆಳುಗಳಿಗೆ ಮನೆಯ ಒಳಭಾಗಕ್ಕೆಲ್ಲಾ ಸುಣ್ಣ ಬಳಿಯುವಂತೆ ಹೇಳಿದೆ. ಗೋಡೆಗಳು ಒಣಗಿದ ನಂತರ ಅವು ಮೊದಲಿದ್ದಂತೆಯೇ ಪುನಃ ಅಷ್ಟೇ ಕೊಳಕಾಗಿದ್ದುವು. ಇಲ್ಲಿಗೆ ಹತ್ತಿರದ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿದ್ದ ಮ್ಯಾನೇಜರ್ ಒಬ್ಬರು ನನ್ನ ನೆರವಿಗೆಬಂದರು. ಒಂದು ದಿನ ಅವರು ಭೇಟಿ ಕೊಟ್ಟಾಗ ಗೋಡೆಗಳನ್ನು ಬಿಳಿ ಬಣ್ಣವಾಗಿ ಕಾಣುವಂತೆ ನಾನು ಹೇಗೆ ಮಾಡಿಸಲಿ ಎಂದು ಅವರನ್ನು ಕೇಳಿದೆ. 'ನಾವು ಭಾರತೀಯರು ಮಾಡುವುದೇನೆಂದರೆ, ಮೊದಲು ಗೋಡೆಗಳನ್ನು ಹಸುವಿನ ಸಗಣಿಯಿಂದ ಸಾರಿಸಿ ಅನಂತರ ಸುಣ್ಣ ಬಳಿಯುವುದು. ನೀವು ಹಾಗೆ ಮಾಡಲು ಇಷ್ಟಪಡುವುದಿಲ್ಲ' ಎಂದು ಅವರು ಜವಾಬು ಕೊಟ್ಟರು. ಅವರ ಸಲಹೆಯನ್ನು ನಾನು ಅನುಸರಿಸಿದೆ ಮತ್ತು ಎರಡು ದಿನಗಳೊಳಗೆ ಹೊಳೆಯುವ ಬಿಳಿ ಗೋಡೆಗಳನ್ನು ನಾನು ಪಡೆದಿದ್ದೆನು. ಹಸುವಿನ ಸಗಣಿಯ ಗುಣಶ್ರೇಷ್ಠತೆಯಲ್ಲಿ ಭಾರತೀಯರಲ್ಲಿರುವ ವ್ಯಾಪಕವಾದ ನಂಬಿಕೆಗೆ ಬಲವಾದ ಆಧಾರವಿದೆಯೆಂದು ನನಗೆ ಇದರಿಂದ ಅರಿವು ಮೂಡಿತು.

ಹಳ್ಳಿಯಲ್ಲಿ ನಾನಿದ್ದ ಎರಡನೇ ವಾರದಲ್ಲಿ ನಾನು ಸ್ಥಳೀಯ ದೇವಾಲಯದಲ್ಲಿ ಹೊರಗಿದ್ದ ಒಂದು ಸಭೆಯನ್ನು ಸೇರಿಕೊಂಡೆನು. ಅದೊಂದು ದಿವ್ಯವಾದ ಬೆಳದಿಂಗಳ ರಾತ್ರಿಯಾಗಿದ್ದಿತು: ಎತ್ತರದ ಪಾಮ್ ಮರಗಳು ಮಂದಾನಿಲದಲ್ಲಿ ಶಾಂತವಾಗಿ ತೂಗಾಡುತ್ತಿದ್ದವು ಮತ್ತು ದೇವಾಲಯದಿಂದ ಹೊರಸೂಸುತ್ತಿದ್ದ ಸಂಗೀತಕ್ಕೆ ದೀಪಗಳ ಜ್ವಾಲೆಗಳು ನರ್ತಿಸುತ್ತಿದ್ದವು. ಅದೊಂದು ಸುಂದರವಾದ ದೃಶ್ಯವಾಗಿದ್ದಿತು. ಭಾರತದ ರಾತ್ರಿಗಳ ಬಗೆಗೆ ಎಂತಹುದೋ ಒಂದು ವಿಶೇಷತೆ ಇದೆ. ಆದರೆ ಅದನ್ನು ವಿವರಿಸಲು ಅಸಾಧ್ಯವೆನಿಸುತ್ತದೆ; ಅದನ್ನು ನಂಬಬೇಕಾದರೆ ಅದನ್ನು ನೋಡಲೇ ಬೇಕು. ನನ್ನ ಕಣ್ಣುಗಳ ಮುಂದಿನ ದೃಶ್ಯದಿಂದ ನಾನು ವಶೀಕರಣಕ್ಕೆ ಒಳಗಾದೆನು ಮತ್ತು ಏನು ನಡೆಯುತ್ತಿತ್ತೆಂಬುದನ್ನು ಕಂಡುಕೊಳ್ಳಲು ತವಕಿಸುತ್ತಿದ್ದೆನು. ನನಗೆ ಕೊಡಲ್ಪಟ್ಟ ದೀರ್ಘವಾದ ವಿವರಣೆಯನ್ನು ಅರ್ಥಮಾಡಿಕೊಳ್ಳಲು ನಾನು ಕಲಿತಿದ್ದ ಸ್ಥಳೀಯ ಭಾಷೆಯು ಇನ್ನೂ ಸಾಕಾಗುತ್ತಿರಲಿಲ್ಲ. ಅಲ್ಲಿ ನಾನು ನೋಡುತ್ತಾ ನಿಂತಿರುವಂತೆಯೇ ಮದ್ದಲೆಗಳ (drums) ಹೊಡೆತ ಆರಂಭವಾಯಿತು. ಮದ್ದಳೆ ಬಾರಿಸುವವರು ಉದ್ರೇಕದಿಂದ ಜೋರು ಸದ್ದಿನೊಂದಿಗೆ ಮತ್ತು ಹೆಚ್ಚು ವೇಗದಿಂದ ಬಾರಿಸುತ್ತಿದ್ದರು. ಇದ್ದಕ್ಕಿದ್ದಂತೆಯೇ ಹಳ್ಳಿಗರಲ್ಲಿ ಒಬ್ಬನು ಮೂರ್ಛೆ ರೋಗದ ಯಾತನೆಯಲ್ಲಿರುವನೋ ಎನ್ನುವಂತೆ ಉಗ್ರವಾಗಿ ನಡುಗಲು ಪ್ರಾರಂಭಿಸಿದನು. ಅವನ ಸುತ್ತಲೂ ಗುಂಪು ಸೇರಿತು ಮತ್ತು ಮಂತ್ರಮುಗ್ಧರಾದವರಂತೆ ನೋಡುತ್ತಿದ್ದಿತು. ಮದ್ದಲೆಗಳ ಹೊಡೆತಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯಲಾರಂಭಿಸಿದನು ಮತ್ತು ಹೊಡೆತ ಗತಿ ಹೆಚ್ಚಿದಂತೆ ಅವನ ಕುಣಿತದ ಚಲನೆಗಳ ವೇಗವೂ ಕೂಡ ಹೆಚ್ಚಿತು. ಅನಂತರ ದಿಢೀರೆಂದು ಮದ್ದಲೆಗಳ ಹೊಡೆತ ನಿಂತಿತು ಮತ್ತು ವ್ಯಕ್ತಿಯೂ ಕೂಡ

ನಿಶ್ಚಲನಾಗಿ ನಿಂತನು. ಆ ಗಳಿಗೆಯಲ್ಲಿ ಅವನು ಪ್ರೇತಾತ್ಮ ಮಾಧ್ಯಮದ (spirit medium) ಪಾತ್ರವನ್ನು ವಹಿಸಿದ್ದನು. ಒಂದು ನಿರ್ದಿಷ್ಟವಾದ ಹಿಂದು ದೇವತೆಯನ್ನು ಅವನು ಪ್ರತಿನಿಧಿಸುತ್ತಿರುವುದಾಗಿ ಆಗ ನನಗೆ ಹೇಳಲಾಯಿತು. ಗ್ರಾಮಸ್ಥರು ಒಂದೇ ಸಾಲಿನಲ್ಲಿ ನಿಂತರು. ಪ್ರತಿಯೊಬ್ಬರೂ ಪ್ರೇತಾತ್ಮ–ಮಾಧ್ಯಮದ ಹತ್ತಿರಕ್ಕೆ ಹೋಗಲು ಸರದಿಯಲ್ಲಿ ಕಾಯುತ್ತಿದ್ದರು. ಅಲ್ಲಿ ಏನನ್ನು ಹೇಳುತ್ತಿದ್ದರೆಂಬುದನ್ನು ಕೇಳಿಸಿಕೊಳ್ಳಲು ನಾನು ಸಾಧ್ಯವಾದಷ್ಟೂ ಹತ್ತಿರ ಹೋಗಲು ಪ್ರಯತ್ನಿಸಿದೆ. 'ನನ್ನ ಪತ್ನಿ ನನಗೆ ಒಬ್ಬ ಮಗನನ್ನು ಹೆತ್ತು ಕೊಡುವಳೇನು?' ಎಂದು ಒಬ್ಬ ವ್ಯಕ್ತಿ ಕೇಳಿದ್ದನ್ನು ನಾನು ಕೇಳಿಸಿಕೊಂಡೆನು; 'ನನ್ನ ಮಗ ಪುನಃ ಆರೋಗ್ಯವಂತನಾಗುವನೇನು?' ಎಂದು ಇನ್ನೊಬ್ಬ ವಿಚಾರಿಸಿದ. ತಮ್ಮ ಭವಿಷ್ಯವನ್ನು ಖಚಿತಪಡಿಸಿಕೊಳ್ಳುವ ಇಚ್ಛೆಯಿಂದ ಪ್ರತಿಯೊಬ್ಬರೂ ಅದೇ ರೀತಿಯ ಪ್ರಶ್ನೆಗಳನ್ನು ಕೇಳಿದರು. ಮಾಧ್ಯಮದ ಪ್ರತಿಕ್ರಿಯೆಯು ಸಾಮಾನ್ಯವಾಗಿ ಧನಾತ್ಮಕವಾಗಿರುತ್ತಿತ್ತು. ಆದರೆ, ಕೆಲವು ನಿರ್ದಿಷ್ಟವಾದ ಶಾಸ್ತ್ರ ವಿಧಿಗಳ ಅನುಷ್ಠಾನದ ಬಗೆಗೆ ನಿಬಂಧನೆಗಳಿರುತ್ತಿದ್ದುವು. ಉದಾಹರಣೆಗೆ, ಒಬ್ಬ ಪ್ರಶ್ನೆ ಕೇಳಿದವನು, ಅವನ ಪತ್ನಿಯು ಅವನಿಗೆ ಒಬ್ಬ ಮಗನನ್ನು ಹೆತ್ತುಕೊಡಬೇಕಾದರೆ, ಎರಡು ಮೈಲಿ ದೂರದಲ್ಲಿದ್ದ ಒಂದು ದೇವಾಲಯದಲ್ಲಿ ಒಂದು ವರ್ಷ ಪೂರ್ತಿ ಪ್ರತಿದಿನವೂ ಅವನು ಪೂಜೆ ಮಾಡಬೇಕಾಗಿದ್ದಿತು. ತದನಂತರ ಅವನ ಹೆಂಡತಿ ಅವನಿಗೆ ಒಬ್ಬ ಮಗನನ್ನು ಹಡೆದುಕೊಟ್ಟರೆ, ಅದು ಸ್ಪಷ್ಟವಾಗಿ ಪ್ರೇತಾತ್ಮ–ಮಾಧ್ಯಮದ ಕಾಲಜ್ಞಾನದ ಪರಿಣಾಮಕಾರಿ ಫಲದ ಬಗೆಗಿನ ನಂಬಿಕೆಯನ್ನು ಖಚಿತಪಡಿಸುತ್ತದೆ. ಹೇಗಾದರೂ, ಮಗನು ಹುಟ್ಟದಿದ್ದರೆ ದೇವತೆಯ ಮೇಲೆ ಮತ್ತು ಅದರ ಮಾಧ್ಯಮದ ಮೇಲೆ ಸಂಶಯ ಬರುವುದಿಲ್ಲ. ಏಕೆಂದರೆ, ನಿಷ್ಫಲವಾದುದನ್ನು ನಿಬಂಧನೆಯ ಈಡೇರಿಕೆಯ ಬಗೆಗೆ ಆರೋಪಿಸಬಹುದು.

ಗ್ರಾಮದ ಸಾಮಾಜಿಕ ಜೀವನ ಎಷ್ಟು ಬಲವಾಗಿ ಒಗ್ಗೂಡಿದೆ ಮತ್ತು ಹೇಗೆ ಪ್ರತಿಯೊಬ್ಬರೂ ಪರಸ್ಪರ ಜೀವನಗಳ ವಿವರಗಳನ್ನು ತಿಳಿದುಕೊಂಡಿರುವಂತೆ ಕಾಣುತ್ತದೆಂಬುದು ನನಗೆ ಮಂತ್ರಮುಗ್ಧಗೊಳಿಸುವಂತಿದ್ದಿತು. ನಾನು ಒಬ್ಬ ಮಾನವಶಾಸ್ತ್ರ ಸಂಶೋಧಕಳಾಗಿ ಘರ್ಷಣೆಯ ಪಾತ್ರಗಳಿಗೆ ಗೊತ್ತು ಮಾಡಲ್ಪಟ್ಟಂತೆ ನನಗೆ ಭಾಸವಾಯಿತು: ಒಂದು ಕಡೆ ನಾನು ಒಬ್ಬ ನಿರೀಕ್ಷಕ ಭಾಗೀದಾರಳಾಗಿರಬೇಕೆಂದು ಎಣಿಸಲಾಗಿದ್ದಿತು ಮತ್ತು ನಾನು ವ್ಯಾಸಂಗ ನಡೆಸುತ್ತಿದ್ದ ಸಮಾಜದಲ್ಲಿ ಸಾಧ್ಯವಿದ್ದಷ್ಟೂ ನನ್ನನ್ನು ನಾನೇ ಮಗ್ನಳಾಗಿಸಿಕೊಳ್ಳಬೇಕಾಗಿದ್ದಿತು; ಇನ್ನೊಂದು ಕಡೆ ವಸ್ತುನಿಷ್ಠತೆಯನ್ನು ಖಚಿತಪಡಿಸಿಕೊಳ್ಳಲು ನನ್ನ ತಾಟಸ್ಥ್ಯ ಭಾವವನ್ನು ನಡೆಸಿಕೊಂಡು ಬರಬೇಕೆಂಬುದು ಔದ್ಯೋಗಿಕ ಆದರ್ಶಗಳ ಅಗತ್ಯವಾಗಿದ್ದಿತು. ಈ ಕರ್ತವ್ಯದ ಪಾತ್ರಗಳನ್ನು ತಂತ್ರದಿಂದ ಬದಲಾಯಿಸಲು ಯಾವಾಗಲೂ ಸುಲಭವಾಗಿರಲಿಲ್ಲ. ಏಕೆಂದರೆ, ಅನೇಕ ಗ್ರಾಮಸ್ಥರು ತಮ್ಮದೇ ಆದ ನಿರ್ದಿಷ್ಟ

ಅನುಕೂಲಕ್ಕಾಗಿ ಇರುವಿಕೆಯನ್ನು ಔಚಿತ್ಯ ಮೀರಿ ಉಪಯೋಗಿಸಿಕೊಳ್ಳಲು ಬಯಸಿದ್ದರು. ಮತ್ತು ಎರಡು ಪ್ರಮುಖ ಪರಸ್ಪರ ವಿರೋಧಿ ಬಣಗಳ ನಾಯಕರು ನನ್ನ ಬೆಂಬಲಕ್ಕಾಗಿ ಸ್ಪರ್ಧಿಸುತ್ತಿದ್ದರು. ಇವರಲ್ಲೊಬ್ಬ ವಿವೇಚನೆಯಿಂದ ಕೂಡಿದ್ದು ಪ್ರಭಾವಿಯಾಗಿ ಕಾಣುತ್ತಿದ್ದ ಬಿಳಿಕೂದಲಿನ ವೃದ್ಧನಾಗಿದ್ದನು. ಅವನ ಬಗ್ಗೆ ನಾನು ಮಹತ್ತರವಾದ ವೈಯಕ್ತಿಕ ಗೌರವವನ್ನು ಬೆಳೆಸಿಕೊಂಡೆನು. ಆದರೆ, ನಾನು ಅವನ ಬಣವನ್ನು ಬೆಂಬಲಿಸುತ್ತಿದ್ದೇನೆಂಬ ಅಭಿಪ್ರಾಯವನ್ನುಂಟುಮಾಡದಿರುವಂತೆ ಎಚ್ಚರಿಕೆ ವಹಿಸಬೇಕಾಗಿದ್ದಿತು. ಹಾಗಿಲ್ಲದಿದ್ದರೆ ಅವನ ಎದುರಾಳಿಗೆ ನಿಷ್ಠೆಯಿಂದಿದ್ದ ಕುಟುಂಬಗಳಿಂದ ಸುದ್ದಿ ಪಡೆಯುವ ಅವಕಾಶವನ್ನು ನನಗೆ ನಿರಾಕರಿಸಬಹುದಾಗಿದ್ದಿತು.

ನನ್ನ ಮನೆಯು ಬಹುಬೇಗ ಗ್ರಾಮಸಭೆಯ ಸ್ಥಳವಾಯಿತು. ಹೇಗೆಂದರೆ, ಪ್ರಧಾನ ಕೊಠಡಿಯ ಬಾಗಿಲು ಯಾವಾಗಲೂ ತೆರೆದಿರುತ್ತಿದ್ದಿತು. ಮತ್ತು ಇಡೀ ಹಳ್ಳಿಯಲ್ಲಿ ಒತ್ತಡದ ದೀಪವನ್ನು ಹೊಂದಿದ್ದುದು ನಾನೊಬ್ಬಳು ಮಾತ್ರ. ನನ್ನ ಬಾಣಸಿಗನು ಮಾಡುತ್ತಿದ್ದ ದೀಪ ಹಚ್ಚುವ ಕಾರ್ಯವು ಅನೇಕ ಜನರು ಪ್ರತಿದಿನವೂ ಉತ್ಸುಕತೆಯಿಂದ ಕಾದು ನೋಡುತ್ತಿದ್ದ ಒಂದು ಧಾರ್ಮಿಕ ವಿಧಿಯೇ ಆಯಿತು. ಪ್ರಕಾಶಮಾನವಾದ ಬೆಳಕು ಕೋಣೆಯನ್ನು ಬೆಳಗುತ್ತಿರುವಾಗ ಅವರ ಮುಖಭಾವಗಳ ಬಗೆಗೆ ನಾನು ಯಾವಾಗಲೂ ವಿಸ್ಮಯದಿಂದ ಕೂಡಿರುತ್ತಿದ್ದೆನು; ಅವರು ಭೀತಿಯಿಂದ ಗಮನಿಸುತ್ತಿದ್ದರು ಮತ್ತು ಎಷ್ಟರಮಟ್ಟಿಗೆ ನಾವು ಅದನ್ನು ಹಾಗೆಯೇ ಉಂಟೆಂದು ಕೊಳ್ಳುತ್ತೇವೆ ಎಂದು ನನಗೆ ಅರಿವಾಯಿತು. ನಮ್ಮ ವಿದ್ಯುದ್ದೀಪಗಳನ್ನು ಹೊತ್ತಿಸಿದಾಗ ಅಥವಾ ಕಕ್ಕಸ್ಸನ್ನು ರಭಸವಾಗಿ ನುಗ್ಗುವ ನೀರಿನಿಂದ ಶುಚಿ ಮಾಡುವಾಗ ನಾವು ಕುತೂಹಲ ವ್ಯಕ್ತಪಡಿಸುವುದಿಲ್ಲ ಮತ್ತು ಈ ಭೋಗವಸ್ತುಗಳನ್ನು ಹಾಗೆಯೇ ಉಂಟೆಂದು ಪುನಃ ಎಂದಿಗೂ ಭಾವಿಸುವುದಿಲ್ಲವೆಂದು ನಾನು ಮೌನವಾಗಿಯೇ ಪ್ರತಿಜ್ಞೆ ಮಾಡಿದೆನು. ಕಕ್ಕಸ್ಸಿಗೆ ಕೊಡುವ ಭೇಟಿಯನ್ನು ಅದು ಹಾಗೆಯೇ ಉಂಟೆಂದು ಭಾವಿಸಿದ್ದೆನು. ಆದರೂ ಭಾರತದಲ್ಲಿ ಅದೊಂದು ದೊಡ್ಡ ಆತಂಕದ ವಿಷಯವೇ ಆಗಿದ್ದಿತು. ಕಕ್ಕಸ್ಸುಗಳು ಬಹು ಬಹಳಕೆಯದಲ್ಲವಾಗಿದ್ದವು ಮತ್ತು ಸೀರೆಯುಟ್ಟಿರುವಾಗ ಕುಕ್ಕುರುಗಾಲಿನಲ್ಲಿ ಕೂಡುವುದು ಶಾರೀರಿಕವಾಗಿ ನನಗೆ ಅಸಾಧ್ಯವಾಗಿದ್ದಷ್ಟೇ ಅಲ್ಲದೆ, ಸ್ಥಳೀಯ ಸಮಾಜದಲ್ಲಿ ಅದನ್ನು ಕೇಳಿಯೂ ಇರಲಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ನಾನು ಒಬ್ಬ ಪುರುಷನಾಗಬೇಕಿತ್ತೆಂದು ಹಾರೈಸುತ್ತಿದ್ದೆನು ಮತ್ತು ಅವರು ಹೇಗೆ ನಿಭಾಯಿಸುತ್ತಿದ್ದರೆಂದು ಮಹಿಳೆಯರನ್ನು ನಾನೇ ಕೇಳುವಂತಾಗಿದ್ದೆನು. ಒಂದು ಇಡೀ ದಿನವನ್ನು ಕಕ್ಕಸ್ಸನ್ನು ಉಪಯೋಗಿಸದೇ ಕಳೆಯುವುದನ್ನು ಖಚಿತಪಡಿಸಿ ಕೊಳ್ಳಬೇಕಾದರೆ ನಾನು ನನ್ನ ಆಹಾರ ಮತ್ತು ದ್ರವ ಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡಬೇಕೆಂದು ಅವರು ನನಗೆ ಹೇಳಿದರು. ಇದು ಯಾವಾಗಲೂ

ಸುಲಭದ್ದಾಗಿರಲಿಲ್ಲ. ಏಕೆಂದರೆ ನಾನು ಪದೇ ಪದೇ ಅತಿಸಾರದ ಕೆರಳುವಿಕೆಯಿಂದ ನರಳುತ್ತಿದ್ದೆ ಮತ್ತು ನನ್ನ ಕಕ್ಕಸ್ಸಿಗೆ ಸಮೀಪದಲ್ಲಿಯೇ ಕಾಲ ಕಳೆಯಬೇಕಾಗಿದ್ದಿತು ಅಥವಾ ಅಸ್ವಸ್ಥತೆಯ ಪ್ರಾಣಸಂಕಟಗಳಲ್ಲಿ ದಿನ ಕಳೆಯಬೇಕಾಗಿತ್ತು. ಆದರೂ ಭಾರತದಲ್ಲಿ ಗ್ರಾಮಜೀವನದ ಎಲ್ಲಾ ಸಮಸ್ಯೆಗಳೂ ಕೂಡ, ನಾನು ಹಿಂದೆಂದೂ ನಿಜವಾಗಿ ಅನುಭವಿಸದೇ ಇದ್ದ, ಜನತೆಯ ಜೊತೆ ನನ್ನವರೆಂದು ಭಾವಿಸುವ ಆತ್ಮೀಯತೆಯ ಎದುರು, ಪೇಲವವಾಗಿದ್ದವು.

ವಿಶೇಷವಾಗಿ ನಾನು ಅವರ ಜೀವನದ ಬಗ್ಗೆ ಒಂದು ಪುಸ್ತಕವನ್ನು ಬರೆಯಲು ಬಯಸಿರುವುದಾಗಿ ಅವರು ತಿಳಿದ ನಂತರ ಗ್ರಾಮದ ಹಿರಿಯರಲ್ಲಿ ಕೆಲವರು ನನ್ನ ಅತ್ಯುತ್ತಮವಾದ ಮತ್ತು ಅತ್ಯಂತ ವಿಶ್ವಾಸಾರ್ಹರಾದ ಬಾತ್ಮೀದಾರ ರಾದರು ಮತ್ತು ತಮ್ಮ ಜ್ಞಾನವನ್ನು ನಿರ್ಬಂಧವಿಲ್ಲದೆ ಹಂಚಿಕೊಳ್ಳುತ್ತಾ ನನ್ನೊಡನೆ ಮಾತನಾಡುತ್ತಿದ್ದರು. ಅವರ ಮನೆಗಳಿಗೆ ಆಹ್ವಾನಿಸಲ್ಪಡುವುದು ಮತ್ತು ಅವರ ದೀರ್ಘವಾದ ಚರ್ಚೆಯನ್ನು ಕೇಳಲೂ ಅವಕಾಶವಾದುದು ನನ್ನ ಭಾಗ್ಯವೆನ್ನಿಸಿತು. ಈ ವ್ಯಕ್ತಿಗಳಲ್ಲಿ ಅಧಿಕಾಂಶ ಅನಕ್ಷರಸ್ಥರಾಗಿದ್ದರು, ಆದರೂ ಅವರ ತತ್ವಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಗಮನಿಸಿದಾಗ ಅವರು ಆರಾಮವಾಗಿ ಬುದ್ಧಿಜೀವಿಗಳೆಂದು ಅರ್ಹತೆ ಪಡೆಯುತ್ತಿದ್ದರು. ಪುನರ್ಜನ್ಮದ ಮತ್ತು ಆತ್ಮಗಳ ಪರಕಾಯ ಪ್ರವೇಶದ ಹಿನ್ನೆಲೆಯಲ್ಲಿ ಜೀವನದ ಅರ್ಥದ ಬಗೆಗೆ ಅವರ ವಾದ ವಿವಾದಗಳನ್ನು ಕೇಳಿ ನಾನು ಮಂತ್ರಮುಗ್ಧಳಾಗುತ್ತಿದ್ದೆನು. ಅವರ ಗಾಢವಾದ ಧಾರ್ಮಿಕ ನಂಬಿಕೆಯು ಅಜ್ಞೇಯತಾವಾದದ ಒಂದು ಆರೋಗ್ಯಕರ ಪ್ರಮಾಣದಿಂದಲೂ ಕೂಡ ಜೊತೆಗೂಡಿತ್ತು. ಸಂಜೆ ವೇಳೆಗಳಲ್ಲಿ ನನ್ನ ಗ್ರಾಮ ನಿವಾಸದಲ್ಲಿ ನಾನು ಈ ಹಿರಿಯರ ಮಾತುಗಳನ್ನು ಆಲಿಸುತ್ತಾ ಕುಳಿತಿದ್ದಾಗಲೆಲ್ಲಾ ನಾನು ಹಿಂದೂ ಧರ್ಮ ಮತ್ತು ಅದರ ಜನಪರ ಕಥನದ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ವಿಷಯವನ್ನು ವ್ಯಾಸಂಗ ಮಾಡಿ ನಾನು ಕಲಿಯಬಹುದಾಗಿದ್ದುದಕ್ಕಿಂತಲೂ ಹೆಚ್ಚಾಗಿ ಕಲಿತೆನು.

ಸ್ಥಳೀಯ ಹಿರಿಯರ ಸಹವಾಸದಲ್ಲಿ ನಾನು ಸಂತೋಷಪಡುತ್ತಿರುವಾಗಲೇ ನಾನು ಯುವ ಗ್ರಾಮಸ್ಥರ ಒಂದು ಗುಂಪಿನೊಡನೆ ಒಂದು ವಿಧದಲ್ಲಿ ಮುಕ್ತವಾದ ವಿನೋದದಿಂದ ಕೂಡಿದ ಸಂಬಂಧವನ್ನೂ ಕೂಡ ಕಲ್ಪಿಸಿಕೊಂಡೆನು. ಮೈಸೂರು ವಿಶ್ವವಿದ್ಯಾನಿಲಯದ (ಅದೇ ತರಹದ ರೋಗ ಚಿಹ್ನೆಗಳನ್ನುಳ್ಳ ಇತರೆ ಗ್ರಾಮಸ್ಥರನ್ನು ನಾನು ನೋಡಿದ್ದೆನು) ನಾನು ನನ್ನ ಮನೆಗೆ ಅತಿಶೀಘ್ರವಾಗಿ ಹಿಂತಿರುಗಿದೆ ಮತ್ತು ಅತ್ಯಂತ ಸಮೀಪದಲ್ಲಿದ್ದ ವೈದ್ಯಕೀಯ ಕೇಂದ್ರದಲ್ಲಿದ್ದ ಅಧಿಕಾರಿಗಳನ್ನು ವಿಷಮ ಜ್ವರದ ಸೋಂಕಿನ ಅಪಾಯಗಳ ಬಗ್ಗೆ ಎಚ್ಚರಿಸಲು ಕಾರಿನಲ್ಲಿ ಹೋದೆನು. ನಾನು ಅಲ್ಲಿ ನೋಡಿದ ವೈದ್ಯಾಧಿಕಾರಿಯು ಈ ವಿಷಯವನ್ನು ಬಹಳ ತುರ್ತಿನದೆಂದು ಪರಿಗಣಿಸಲೇ ಇಲ್ಲ. ಆದರೆ, ಗ್ರಾಮಸ್ಥರನ್ನು ವಿಷಮಜ್ವರದಿಂದ ರಕ್ಷಿಸಲು ಅಗತ್ಯವಾದ

ಲಸಿಕೆಯೊಂದಿಗೆ ಒಂದು ವೈದ್ಯಕೀಯ ತಂಡವನ್ನು ನನ್ನೊಡನೆ ಕರೆದೊಯ್ಯಲು ನಾನು ಆಗ್ರಹ ಮಾಡಿದೆನು (ಇಂಗ್ಲೆಂಡ್ ಬಿಡುವ ಮೊದಲು ಸ್ವತಃ ನಾನೇ ಚುಚ್ಚಿಸಿ ಕೊಂಡಿದ್ದೆನು). ನಾನು ಈ ಯುವ ಆರೋಗ್ಯ ಕಾರ್ಯಕರ್ತರ ಜೊತೆ ಕಾಣಿಸಿ ಕೊಂಡಾಗ ಪಟೇಲ (ಗ್ರಾಮದ ಮುಖ್ಯಸ್ಥ)ನನ್ನು ಕರೆಸಲಾಯಿತು ಮತ್ತು ಪಟ್ಟಣದಲ್ಲಿ ಎಲ್ಲಾ ವಯೋಮಾನಗಳ ಎಲ್ಲಾ ಗ್ರಾಮಸ್ಥರೂ ತೀವ್ರವಾದ ಕಾಯಿಲೆ ಅಥವಾ ಸಾವನ್ನು ತಪ್ಪಿಸಿಕೊಳ್ಳಲು ಚುಚ್ಚುಮದ್ದನ್ನು ತೆಗೆದುಕೊಳ್ಳುವುದಕ್ಕಾಗಿ ತಾವೇ ಸ್ವತಃ ಬಂದು ಹಾಜರಿರಬೇಕೆಂದು ತಿಳಿವಳಿಕೆ ಕೊಡಲು, ಗ್ರಾಮದ ಸುತ್ತ ಕೂಗಿಸಾರುವ ಹರಿಜನರನ್ನು ಕಳಿಸಲಾಯಿತು. ನನ್ನ ಮನೆ ಈ ಕಾರ್ಯಕ್ಕೆ ಕೇಂದ್ರ ಸ್ಥಾನವಾಯಿತು. ಸಾಧ್ಯವಾದಷ್ಟೂ ಹೆಚ್ಚಿನ ಸಂಖ್ಯೆಯ ಗ್ರಾಮಸ್ಥರನ್ನು ಕಲೆಹಾಕಲು ನಾವು ಪ್ರಯತ್ನಿಸಿದೆವು. ಆದರೆ, ಸೂಜಿಗೆ ಹೆದರಿ ಕೆಲವರು ಅವಿತುಕೊಂಡರು. ಬೋರನನ್ನು ನೋಡಲು ಅವರು ಹೋಗುವುದನ್ನು ಖಚಿತಪಡಿಸಿಕೊಳ್ಳಲು ನಾನು ನನ್ನ ದಾರಿ ಬಿಟ್ಟು ಹೋದೆನು. ಹಾಗಿದ್ದರೂ ಎರಡು ದಿನಗಳ ನಂತರ ನಾನು ಅವನನ್ನು ಭೇಟಿ ಮಾಡಿದಾಗ, ಅವನು ದೇಹಬಾಧೆಯನ್ನು ತೀರಿಸಿಕೊಳ್ಳಬೇಕಾದಾಗ ಬೇಗ ಬೇಗ ತೆವಳಿಕೊಂಡು ಹೊರಗೆ ಹೋಗಲು ಸಾಧ್ಯವಾಗುವಂತೆ ತನ್ನ ಗುಡಿಸಲಿನ ಬಾಗಿಲ ಹತ್ತಿರವಿದ್ದ ಒಂದು ಚಾಪೆಯ ಮೇಲೆ ಮುದುರಿಕೊಂಡು ಬಿದ್ದುದ್ದುದನ್ನು ನೋಡಿ ಅಂಕಿ–ಸಂಖ್ಯಾಶಾಸ್ತ್ರದ ಪದವೀಧರನಾಗಿದ್ದು, ನನ್ನ ಬ್ರಾಹ್ಮಣ ಸಂಶೋಧಕ ಸಹಾಯಕನಾದ ಸೂರಿಯಿಂದ ಇದು ಸುಗಮವಾಗಿ ನೆರವೇರಿದ್ದಿತು. ಸೂರಿಯು ನನಗಿಂತ ಸುಮಾರು ೧೦ ವರ್ಷ ಚಿಕ್ಕವನಾಗಿದ್ದುದಲ್ಲದೆ, ಇನ್ನೂ ಅವಿವಾಹಿತ ನಾಗಿದ್ದನು. ಅವನು ಶ್ರದ್ಧಾಪೂರ್ವಕನಾದ ಯುವಕನಾಗಿದ್ದು ತನ್ನನ್ನು ತಾನೇ ಗಂಭೀರವಾಗಿ ಪರಿಗಣಿಸುತ್ತಿದ್ದನು. ನಾವಿಬ್ಬರಷ್ಟೇ ಇದ್ದಾಗಿನ ಸಂದರ್ಭಗಳಲ್ಲಿ ಆಗಾಗ ಅವನು, ಪಾಶ್ಚಾತ್ಯರು ಪ್ರೇಮವಿವಾಹಗಳನ್ನು ಹೇಗೆ ವ್ಯವಸ್ಥೆಗೊಳಿಸುತ್ತಿದ್ದರೆಂದು ನನ್ನನ್ನು ಪ್ರಶ್ನಿಸುತ್ತಿದ್ದನು. ಯುವಕರು ಮತ್ತು ಯುವತಿಯರು, ತಮ್ಮನ್ನು ಯಾರು ಒಳ್ಳೆಯ ಗಂಡ ಅಥವಾ ಹೆಂಡತಿಯಾಗಿ ಮಾಡಬಹುದೆಂದು ಎಂದಿಗಾದರೂ ಹೇಗೆ ತಾನೇ ನಿಶ್ಚಯಿಸಬಲ್ಲರೆಂದು ಅರ್ಥಮಾಡಿಕೊಳ್ಳಲು ಅವನಿಗೆ ಸಾಧ್ಯವಿರಲಿಲ್ಲ. ಮಾತಾಪಿತೃಗಳ ತಲೆಮಾರಿಗೆ ಮಾತ್ರ ಇಂಥದನ್ನು ತೀರ್ಮಾನಿಸುವ ಅತ್ಯುತ್ತಮ ಸಾಧನಗಳಿರುತ್ತವೆಂದು ಅವನಿಗೆ ಮನದಟ್ಟಾಗಿದ್ದಿತು. ಸೂರಿಯು ಸಾಂಪ್ರದಾಯಿಕವಾದ ನೈತಿಕ ಪ್ರಮಾಣಗಳುಳ್ಳ ಯುವಕನಾಗಿದ್ದನು. ಅವನು ವಿವಾಹೇತರ ಸಂಬಂಧಗಳ ಬಗ್ಗೆ ತಿರಸ್ಕಾರ ಭಾವ ಹೊಂದಿದವನು. ಹಳ್ಳಿಯ ಯುವಕರೊಡನೆ ನನ್ನ ಮುಕ್ತವಾದ ಹಾಸ್ಯ ಪ್ರವೃತ್ತಿಯು ಅವನಿಗೆ ಹೇಗೆ ಆಘಾತವುಂಟುಮಾಡಿತೆಂಬುದು ನನಗೆ ವಿನೋದವಾಗಿದ್ದಿತು.

ಹೊಸದಾಗಿ ಮದುವೆಯಾಗಿದ್ದ ಒಬ್ಬ ಯುವರೈತ ಬೋರ ನನ್ನ ಅತ್ಯಂತ

ವಾಡಿಕೆಯ ಸಂಗಾತಿಯಾದನು ಮತ್ತು ನಾನು ಅವನನ್ನು ಆಪ್ತ ಸ್ನೇಹಿತನೆಂದು ಕಾಣಲು ಪ್ರಾರಂಭಿಸಿದೆನು. ಒಂದು ದಿನ ನಾನು ಅವನನ್ನು ಕಾಣಲು ಹೋದೆನು. ಕೊನೆಗೆ ಅವನನ್ನು ನಾನು ಕಂಡಾಗ ಜ್ವರದಿಂದ ಬಳಲುತ್ತಿದ್ದನು ಮತ್ತು ಅವನ ಚಿಕ್ಕ ಗುಡಿಸಿಲಿನಲ್ಲಿ ಒಂದು ಚಾಪೆಯ ಮೇಲೆ ಮುದುರಿಕೊಂಡು ಮಲಗಿದ್ದನು. ಅವನು ವಿಷಮಜ್ವರ(ಟೈಫಾಯ್ಡ್)ದಿಂದ ಬಳಲುತ್ತಿರಬೇಕೆಂದು ಅನುಮಾನಿಸಿದೆನು. ನನಗೆ ಆಘಾತವಾಯಿತು. ಅವನು ಬಹು ಶೀಘ್ರಗತಿಯಲ್ಲಿ ಕ್ಷೀಣದೆಸೆಗೆ ಬಂದಿದ್ದನು ಮತ್ತು ದಾರುಣವಾಗಿ ರೋಗಪೀಡಿತನಾಗಿದ್ದನು. ನನಗೆ ಅದನ್ನು ತಿಳಿದುಕೊಳ್ಳ ಲಾಗಲಿಲ್ಲ ಮತ್ತು ಚುಚ್ಚುಮದ್ದು ಪರಿಣಾಮಕಾರಿಯಾಯಿತೇ ಇಲ್ಲವೇ ಎಂದು ಆಶ್ಚರ್ಯಗೊಂಡೆನು. ಹಾಗಿದ್ದರೂ, ಅವನ ಮತಿಭ್ರಮೆಯಿಂದ ಹೊರ ಬಂದಿದ್ದ ಅಲ್ಪಾವಧಿಯಲ್ಲಿ ತಾನು ಚುಚ್ಚುಮದ್ದನ್ನು ನಿರಾಕರಿಸಿದ್ದಾಗಿ ಅವನು ಒಪ್ಪಿಕೊಂಡನು. ನಾನು ಅತಿಯಾಗಿ ಕೋಪಗೊಂಡಿದ್ದೆನು ಮತ್ತು ಅವನು ನನ್ನಲ್ಲಿ ಏಕೆ ವಿಶ್ವಾಸ ವನ್ನಿಡಲಿಲ್ಲವೆಂದು ಆಶ್ಚರ್ಯಗೊಂಡೆನು. ಅವನನ್ನು ಕಳೆದುಕೊಳ್ಳುವೆನೇನೋ ಎನ್ನುವಷ್ಟು ನಾನು ವಿಪರೀತವಾಗಿ ಭಯಗೊಂಡಿದ್ದೆನು.

ಸುಮಾರು ೬೦ ಮಂದಿ ಜ್ವರದಿಂದ ಬಾಧಿತರಾಗಿದ್ದರು. ಮುಂದೆ ಅದರಿಂದ ಐದು ಮಂದಿ ಮೃತರಾದರು. ಗ್ರಾಮದಲ್ಲಿ ಅದು ಬಿಗುವಿನ ಕಾಲ ಮತ್ತು ಜನರು ಪ್ರಾರ್ಥನೆಯಲ್ಲಿಯೂ ಮತ್ತು ರೋಗಗ್ರಸ್ತರನ್ನು ಉಪಚರಿಸುವುದರಲ್ಲಿಯೂ ಕಾಲ ಕಳೆಯುತ್ತಿದ್ದರು. ಬೋರನಿಗೆ ನಾನು ಪೋಷಕಾಂಶಗಳಿಂದ ಕೂಡಿದ ಆಹಾರವನ್ನು ಕಳುಹಿಸಿದೆ. ಅದರಿಂದ ಅವನು ತನ್ನ ಮೊದಲಿನ ಶಕ್ತಿಯನ್ನು ಮತ್ತೆ ಪಡೆಯಲೆಂದು ನನ್ನ ಯೋಚನೆ. ಅದೇ ಸಮಯದಲ್ಲಿ ಅವನ ಅಜ್ಜಿಯು ದಿವ್ಯ ವಾಣಿಯ ಸಲಹೆ ಕೇಳಲು ಮಂತ್ರವಾದಿ ವೈದ್ಯನನ್ನು ಕರೆಸಿದಳು ಮತ್ತು ಅದರಿಂದ ಅವನ ರೋಗಕ್ಕೆ ಕಾರಣರಾರೆಂಬುದನ್ನು ಖಚಿತವಾಗಿ ಸಾಬೀತು ಮಾಡಲು ಬಯಸಿದ್ದಳು. ಬೋರನು ವಿಷಮಜ್ವರದಿಂದ ಗುಣಮುಖನಾಗಲು ನಮ್ಮ ಬೇರೆಬೇರೆ ಪದ್ಧತಿಗಳಲ್ಲಿ ಯಾವುದಾದರೂ ಒಂದು ಅವನಿಗೆ ಸಹಾಯಮಾಡೀತೇ ಎಂದು ತಿಳಿಯಲು ಸಾಧ್ಯವೇ ಇರಲಿಲ್ಲ. ಆದರೆ, ಅವನು ಗುಣ ಹೊಂದಿದ್ದನು. ಅವನು ತನ್ನ ಶಕ್ತಿ ಮತ್ತು ಉಲ್ಲಾಸ ಮನೋಭಾವವನ್ನು ಪುನಃ ಪಡೆದುಕೊಳ್ಳಲು ಕೆಲವು ವಾರಗಳೇ ಬೇಕಾದುವು. ಅವನು ಚೇತರಿಸಿಕೊಳ್ಳುತ್ತಿದ್ದ ಅವಧಿಯಲ್ಲಿ ಅವನೊಡನೆ ಕುಳಿತು ಗಂಟೆಗಳ ಕಾಲ ಕಳೆಯುತ್ತಿದ್ದೆನು. ತನಗೆ ಚುಚ್ಚುಮದ್ದನ್ನು ಹಾಕಿಸಿಕೊಳ್ಳಲು ಅವನೇಕೆ ನಿರಾಕರಿಸಿದನೆಂದು ಅವನನ್ನು ಲೇವಡಿ ಮಾಡಿದೆ. ಅವನು ನನ್ನನ್ನು ನೋಡಿ ಲಜ್ಜಾಶೀಲನಾಗಿ ನಸುನಕ್ಕನು ಮತ್ತು ತಾನು ಸೂಜಿಗೆ ಹೆದರಿದ್ದಾಗಿ ಹೇಳಿದ.

ವಿಷಮಜ್ವರದ ಪ್ರಸಂಗದ ಕಥೆ ಮತ್ತು ಅದನ್ನು ಸುತ್ತುವರಿದಿದ್ದ ಸನ್ನಿವೇಶಗಳೂ ವಾಸ್ತವವಾಗಿಯೂ ನಾವು ಮುಂಚೆ ಆಪ್ತವಾಗಿದ್ದುದಕ್ಕಿಂತಲೂ ಹೆಚ್ಚು ಆಪ್ತರಾಗಿ

ಹತ್ತಿರಕ್ಕೆ ಬರುವಂತೆ ಮಾಡಿದುವು. ಬೋರನು ನನ್ನ ವಿವೇಚನಾಯುಕ್ತವಾದ ಕಾರ್ಯಶೈಲಿಯನ್ನು ಮೆಚ್ಚಿಕೊಳ್ಳಬಲ್ಲವನಾಗಿದ್ದನು. ನಾನೂ ಕೂಡ ಅವನ ಸಂಸ್ಕೃತಿಯಿಂದ ರೂಪಿತವಾದ ಮೌಲ್ಯಗಳು ಮತ್ತು ಮನೋವೃತ್ತಿಗಳ ಒಂದು ಒಳನೋಟವನ್ನು ಪಡೆದುಕೊಂಡೆನು. ನಮ್ಮ ನಮ್ಮ ಸಂಸ್ಕೃತಿಗಳನ್ನು ಬೇರ್ಪಡಿಸಿದ್ದ ಕಂದರಕ್ಕೆ ಸೇತುವೆ ಕಟ್ಟುವ ಮುಂಚೆಯೇ ಬೋರನು ವಿಷಮಜ್ವರದಿಂದ ನರಳ ಬೇಕಾಗಿ ಬಂದದ್ದು ವ್ಯಂಗ್ಯವಾದಂತೆ ತೋರಿತು.

ಗ್ರಾಮದಲ್ಲಿ ನಾನಿದ್ದಷ್ಟು ಕಾಲದಲ್ಲಿಯೇ ಯಾವುದೇ ಒಬ್ಬ ಸ್ಥಳೀಯ ಮಹಿಳೆಯೊಂದಿಗೂ ನೈಜವಾದ ಸ್ನೇಹವನ್ನು ಬೆಳೆಸಿಕೊಳ್ಳಲು ನನಗೆ ಎಂದಿಗೂ ಸಾಧ್ಯವಾಗಲಿಲ್ಲ. ಪ್ರತ್ಯೇಕತೆಯಿಂದ ಕೂಡಿದ ಸಮಾಜದಲ್ಲಿ ಲಿಂಗ ಪ್ರತಿಬಂಧಕಗಳ ಮೂಲಕ ಸಾಗಲು ಸಾಧ್ಯವೆಂದೆನಿಸಲಿಲ್ಲ. ಹಾಗಿದ್ದರೂ ನನ್ನ ಪ್ರಧಾನ ಮಾಹಿತಿ ಮೂಲಗಳಾಗಿ ನಾನು ಪುರುಷರನ್ನೇ: ಪರಿಗಣಿಸಿದ್ದುದರಿಂದ, ಸ್ತ್ರೀತ್ವದ ಪ್ರತ್ಯಕ್ಷ ಲಕ್ಷಣಗಳಿಂದ ನನ್ನನ್ನು ನಾನೇ ಪ್ರತ್ಯೇಕಿಸಿಕೊಳ್ಳಲು ನಾನು ಶಕ್ತಿಮೀರಿ ಪ್ರಯತ್ನಿಸಿದೆನು. ಖಾಕಿ ಷರಾಯಿಯ ಮೇಲೆ ಒಂದು ಸಡಿಲವಾದ ಮೇಲಂಗಿ ಧರಿಸುತ್ತಿದ್ದೆ ಮತ್ತು ಬಹುಮಂದಿ ಭಾರತೀಯರ ಶೈಲಿಯಲ್ಲಿ ನನ್ನ ಕೂದಲನ್ನು ತುಂಡಾಗಿ ಕತ್ತರಿಸಿಕೊಂಡಿದ್ದೆನು. ಆದ್ದರಿಂದ ನನ್ನ ಹೊರತೋರಿಕೆಯ ರೂಪವು ನನ್ನನ್ನು ಬಹುತೇಕ ಭಾರತೀಯ ಮನಸ್ಸಿನಲ್ಲಿರುವ ಒಬ್ಬ ಮಹಿಳೆಯ ರೂಪದಿಂದ ಭಿನ್ನವಾಗಿಸಿದ್ದಿತು. ಮತ್ತು ಸಾಮಾಜಿಕ ಅಂಗೀಕಾರದ ಪರಿಭಾಷೆಯಲ್ಲಿ ನಾನು ಒಬ್ಬ ನಪುಂಸಕನ ಪಾತ್ರವನ್ನು ವಹಿಸಿದಂತೆ ಕಾಣುತ್ತಿದ್ದಿತು. ಅನೇಕ ಗ್ರಾಮೀಣ ಪುರುಷರೊಡನೆ ನಾನು ಮುಂದೆ ನುಗ್ಗಿ ಪರಿಚಯಿಸಿಕೊಳ್ಳುವುದರಲ್ಲಿಯೂ ಮತ್ತು ಆಪ್ತ ಸ್ನೇಹ ಸಂಪಾದನೆಯಲ್ಲಿಯೂ ಕೂಡ ಸಫಲಲಾದೆನು. ಆದರೆ, ಇದಕ್ಕೆ ತೀರ ವಿರುದ್ಧವಾಗಿ ಗ್ರಾಮದ ಮಹಿಳೆಯರು ಪ್ರತ್ಯೇಕವಾಗಿಯೇ ಉಳಿದರು ಮತ್ತು ತಮ್ಮಲ್ಲಿದ್ದ ತಿಳಿವಳಿಕೆಯನ್ನು ಹಂಚಿಕೊಳ್ಳಲು ಮನಸ್ಸಿಲ್ಲದವರಾಗಿದ್ದರು.

ಸ್ಥಳೀಯ ಭಾಷೆಯಲ್ಲಿ ನಾನು ಸಾಕಷ್ಟು ನಿರರ್ಗಳವಾಗಿ ಮಾತನಾಡಲು ಪ್ರಾರಂಭಿಸಿದ ತಕ್ಷಣವೇ ಕೆಲವು ಮಹಿಳೆಯರ ವಿಶ್ವಾಸ ಸಂಪಾದಿಸಲು ನಾನು ನನ್ನ ಶಕ್ತಿಮೀರಿ ಪ್ರಯತ್ನಿಸಿದೆನು. ನಾನು ಬಹುಮುಖ್ಯವಾಗಿ ಪಟೇಲನ ಪತ್ನಿಯನ್ನು ಮೆಚ್ಚಿದೆ. ಆಕೆಯು ಯಾವಾಗಲೂ ಅಸಾಧಾರಣವಾದ ಪ್ರಶಾಂತತೆಯನ್ನು ತೋರುತ್ತಿರುವಂತೆ ಕಾಣುತ್ತಿದ್ದಿತು. ನಾನು ಯಾವಾಗ ಭೇಟಿ ಮಾಡಿದರೂ ಆಕೆಯು ಯಾವಾಗಲೂ ಹಿತಕರವಾಗಿ ಸಭ್ಯಳಾಗಿರುತ್ತಿದ್ದಳು. ಆದರೆ, ಉಳಿದ ಮಹಿಳೆಯರಂತೆ ದೂರವಾಗಿಯೇ ಇರಲು ಬಯಸುತ್ತಿದ್ದಳೆಂಬುದು ಸ್ಪಷ್ಟವಾಗಿ ತಿಳಿಯುತ್ತಿದ್ದಿತು. ಅಪರೂಪದ ಸಂದರ್ಭಗಳಲ್ಲೊಂದರಲ್ಲಿ ಗ್ರಾಮದ ಮಹಿಳೆಯರ ಒಂದು ಗುಂಪಿನ ಜೊತೆಯಲ್ಲಿ ಒಟ್ಟಾಗಿ, ನಾನು ಕುಳಿತುಕೊಳ್ಳುವಂತಾದಾಗ

ಅವರ ಗಂಡಸರು ನನ್ನೊಡನೆ ಮುಕ್ತವಾಗಿ ಬೆರೆಯುವಂತೆ ಅವರೇಕೆ ನನ್ನೊಡನೆ ಬೆರೆಯಲು ಇಚ್ಛಿಸುವುದಿಲ್ಲವೆಂದು ಕೇಳುವ ಅವಕಾಶವನ್ನು ಪಡೆದುಕೊಂಡೆನು. ಅವರಲ್ಲಿ ಬಹಳ ಸ್ಪಷ್ಟವಾಗಿ ಮಾತನಾಡುವವಳೊಬ್ಬಳು ಉತ್ತರಿಸಿದಳು: 'ನೀನು ಮಹಿಳೆಯ ದೇಹವನ್ನು ಪಡೆದಿದ್ದೀಯೆ, ಆದರೆ ಪುರುಷನ ಮನಸ್ಸು ಹೊಂದಿದ್ದೀಯೆ ಮತ್ತು ಒಬ್ಬ ಪುರುಷನಂತೆಯೇ ವರ್ತಿಸುತ್ತೀಯೆ. ಗ್ರಾಮೀಣ ಮಹಿಳೆಯರಾದ ನಮಗಿಂತ ನೀನು ಬಹಳಷ್ಟು ಬೇರೆಯೇ ಆಗಿದ್ದೀಯೆ. ನಿನ್ನೊಡನೆ ನಾವು ಯಾವುದೇ ಸಾಮಾನ್ಯ ಗುಣಗಳನ್ನೂ ಹೊಂದಿಲ್ಲವೆಂದು ನಾವು ಭಾವಿಸುತ್ತೇವೆ. ಒಂದು ವಯಸ್ಸಿನಲ್ಲಿ ನಾವು ಬಹಳಷ್ಟು ಮಂದಿ ವಿವಾಹಿತವಾಗಿರುವುದು ಮತ್ತು ಈಗಾಗಲೇ ಬೇಕಾದಷ್ಟು ಮಕ್ಕಳನ್ನು ಪಡೆದಿರುವಾಗ ನಿನಗೆ ಮಕ್ಕಳೂ ಇಲ್ಲ ಮತ್ತು ಗಂಡನೂ ಇಲ್ಲದೆ ಇಲ್ಲಿದ್ದೀಯೆ. ನಮ್ಮ ಜೀವನಗಳು ನಮ್ಮ ಕುಟುಂಬಗಳ ಸುತ್ತ ಸುತ್ತುತ್ತಿರುತ್ತವೆ; ನಿನಗೆ ಇದರ ಅನುಭವವೇ ಇಲ್ಲ. ಆದ್ದರಿಂದ ನಮ್ಮ ದಾರಿಗಳು ಎಲ್ಲಿಯೂ ಅಡ್ಡ ಹಾಯುವುದಿಲ್ಲ ಮತ್ತು ಇದರಿಂದಲೇ ನಾವು ದೂರ ದೂರ ಇದ್ದೇವೆ.'

ಪ್ರತ್ಯುತ್ತರವಾಗಿ ನಾನು ಹೇಳಬಹುದಾದ್ದೇನಿರಲಿಲ್ಲ: ಈ ಗ್ರಾಮೀಣ ಮಹಿಳೆಯರು ಸ್ಪಷ್ಟವಾಗಿ ನನ್ನನ್ನು ಎಚ್ಚರಿಕೆಯಿಂದ ತುಲನೆ ಮಾಡಿದ್ದರು. ಮತ್ತು ನನ್ನಲ್ಲಿ ಕೊರತೆಯನ್ನು ಕಂಡಿದ್ದರು. ನಾನು ಬಹುಮಟ್ಟಿಗೆ ಪ್ರತ್ಯೇಕವಾಗಿ ಪುರುಷರ ಮೇಲೆ ಭರವಸೆಯಿಡುವುದಕ್ಕಿಂತಲೂ ಗ್ರಾಮೀಣ ಮಹಿಳೆಯರ ಮೇಲೆ ನನ್ನ ವ್ಯಾಸಂಗವನ್ನು ಕೇಂದ್ರೀಕರಿಸಿದ್ದರೆ ಗ್ರಾಮೀಣ ಜೀವನದ ಬಗೆಗಿನ ನನ್ನ ಕಥೆಯು ಮುಖ್ಯವಾಗಿ ಬೇರೆಯೇ ಆಗಬಹುದಿತ್ತೆಂದು ನಾನು ಹಲವು ಬಾರಿ ಅಚ್ಚರಿಗೊಂಡಿದ್ದೇನೆ. ಅರ್ಥಶಾಸ್ತ್ರಜ್ಞಳಾಗಿ ನಾನು ಪಡೆದಿದ್ದ ತರಬೇತಿಯು, ಗ್ರಾಮೀಣ ಬದುಕಿನ ಬೇರೆ ಬೇರೆ ಮಜಲುಗಳ ಬಗೆಗೆ ಬಹಳಷ್ಟು ಅಂಕಿಸಂಖ್ಯಾ ಮಾಹಿತಿಯನ್ನು ನಾನು ಸಂಗ್ರಹಿಸಬೇಕೆಂದು ಒತ್ತಾಯಿಸಿದ್ದಿತು. ಇದು ನನ್ನನ್ನು ಪುರುಷ ಬಾತ್ಮೀದಾರರ ಮೇಲೆ ಅವಲಂಬಿಸುವಂತೆ ಮಾಡಿತು. ಏಕೆಂದರೆ, ಮಹಿಳೆಯರು ಕೃಷಿಯ ಖರ್ಚಿನ ವಿವರಗಳ ಮಾತಿರಲಿ, ನಮ್ಮ ಕುಟುಂಬದ ಒಡೆತನದಲ್ಲಿರುವ ಕೃಷಿ ಭೂಮಿಯು ಎಷ್ಟಿರಬಹುದೆಂಬುದನ್ನೂ ತಿಳಿದಿರಲಿಲ್ಲ. ಇದಾದ ನಂತರ, ನಾನು ನನ್ನಲ್ಲಿದ್ದ ಅರ್ಥಶಾಸ್ತ್ರಜ್ಞಳಿಗೆ, ದಕ್ಷಿಣ ಭಾರತದ ಗ್ರಾಮೀಣ ಮಹಿಳೆಯರ ಬಗ್ಗೆ ಹೆಚ್ಚಾಗಿ ಕಂಡುಹಿಡಿಯಬೇಕೆಂಬ ನನ್ನ ಆಸಕ್ತಿಯನ್ನು ತಳ್ಳಿಹಾಕಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಬಹಳವಾಗಿ ಪಶ್ಚಾತ್ತಾಪಪಟ್ಟೆನು.

ಭಾರತದಲ್ಲಿ ನನ್ನ ಅವಧಿಯು ಕೊನೆಗಾಣುತ್ತಾ ಬಂದಂತೆ ನಾನು ಇಂಗ್ಲೆಂಡ್‌ಗೆ ಹಿಂತಿರುಗುವ ಬಗ್ಗೆ ಭಾವಸಂಕೀರ್ಣತೆಯನ್ನು ಅನುಭವಿಸಲು ತೊಡಗಿದೆನು. ನನ್ನ ಭಾರತೀಯ ಮಿತ್ರರೊಡನೆ ನಾನು ಸಹಜವಾಗಿ ನನ್ನ ಮನೆಯಲ್ಲಿಯೇ

ಇದ್ದಂತೆ ಭಾವಿಸತೊಡಗಿದ್ದೆನು ಮತ್ತು ಅವರ ಹಿಂದು ಸಂಸ್ಕೃತಿಯ ಬಗ್ಗೆ ಮಂತ್ರ ಮುಗ್ಧಳಾಗಿದ್ದೆನು. ನನ್ನನ್ನು ನಾನೇ ಗ್ರಾಮಸ್ಥರೊಡನೆ ಮನಃಪೂರ್ವಕವಾಗಿ ಸಮೀಕರಿಸಿಕೊಂಡಿದ್ದೆನು; ಅವರ ಆನಂದವೇ ನನ್ನ ಆನಂದವಾಯಿತು ಮತ್ತು ಅವರ ವ್ಯಥೆಗಳು ನನ್ನ ವ್ಯಥೆಗಳಾದುವು. ಅದೇ ಸಮಯದಲ್ಲಿ ವ್ಯಾನ್ ಇಂಜೆನ್ (Van Ingen) ಕುಟುಂಬವು ನನ್ನನ್ನು ಅನೇಕ ಉದ್ವೇಗಕಾರಕವಾದ ಹೊಸ ಕಾರ್ಯ ಚಟುವಟಿಕೆಗಳಿಗೆ ಪರಿಚಯಿಸಿತು. ಅವರು ನನ್ನನ್ನು ಆನೆ ಸವಾರಿಗೆ ಕರೆದೊಯ್ದರು; ಅವರು ನನಗೆ ಹೇಗೆ ಗುಂಡು ಹೊಡೆಯಬೇಕೆಂಬುದನ್ನು ಮತ್ತು ಹಾಯಿ ದೋಣಿಯನ್ನು ಹೇಗೆ ನಡೆಸಬೇಕೆಂಬುದನ್ನು ಕಲಿಸಿದರು. ಗ್ರಾಮಸ್ಥರನ್ನು ಚಿಂತೆಗೀಡುಮಾಡುತ್ತಿದ್ದ ಒಂದು ಚಿರತೆಯನ್ನೂ ಕೂಡ ನಾನು ಗುಂಡು ಹೊಡೆದು ಕೊಂದೆನು ಮತ್ತು ವ್ಯಾನ್ ಇಂಜೆನ್ಸ್ ಅದನ್ನು ನನಗೆ ಬೀಳ್ಕೊಡುವ ಉಡುಗೊರೆಯಾಗಿ ಕೊಟ್ಟನು. ಅದು ಇಂದಿನವರೆಗೂ ನನ್ನ ವ್ಯಾಸಂಗದ ಕೋಣೆಯನ್ನು ಅಲಂಕರಿಸಿದೆ.

ಭಾರತದಲ್ಲಿ ನಾನಿದ್ದ ಕಾಲವನ್ನು ನಾನು ಪ್ರೀತಿಸಿದೆನು. ಬೌದ್ಧಿಕವಾಗಿ ಅದು ಸವಾಲಿನದಾಗಿದ್ದಿತು ಮತ್ತು ವೈಯಕ್ತಿಕ ಮಟ್ಟದಲ್ಲಿ ಬೆಳೆಯಲು ಮತ್ತು ಪ್ರಗತಿ ಹೊಂದಲು ನನಗೆ ಅವಕಾಶವನ್ನು ಒದಗಿಸಿತು. ನನ್ನ ತಾಯಿತಂದೆಯರ ಜವಾಬ್ದಾರಿಯು ನನ್ನನ್ನು ಕುಗ್ಗಿಸದೆ ಅಂತಿಮವಾಗಿ ನನ್ನಷ್ಟಕ್ಕೆ ನಾನೇ ಆನಂದಿಸಲು ಅವಕಾಶವಾಯಿತು. ಆದರೆ ಅಲ್ಲಿ ನನ್ನ ವಾಸದ ಅವಧಿಯು ಕೊನೆಗೊಳ್ಳುವುದನ್ನು ನಾನು ಅಷ್ಟರಮಟ್ಟಿಗೆ ಇಷ್ಟಪಡುತ್ತಿರಲಿಲ್ಲವಾದರೂ ನಾನು ಹಲವು ಬಾರಿ ಏಕಾಂತವಾಗಿಯೂ ಮತ್ತು ಸ್ವಂತ ಸ್ಥಳಕ್ಕಾಗಿಯೂ ಹಂಬಲಿಸುತ್ತಿದ್ದೆನು. ಅವುಗಳನ್ನು ಗ್ರಾಮದಲ್ಲಿ ಸಂಪೂರ್ಣವಾಗಿ ತ್ಯಾಗ ಮಾಡಿದ್ದೆನು. ನಾನೂ ಕೂಡ ನನ್ನ ಕುಟುಂಬವನ್ನು ನೋಡದೆ ಪರಿತಪಿಸುತ್ತಿದ್ದೆನು ಮತ್ತು ಪುನಃ ಕುಟುಂಬದ ಜೊತೆ ಸೇರಲು ಕಾಯಲಾಗಲಿಲ್ಲ.

ನಾನು ನನ್ನ ತಾಯಿತಂದೆಯರೊಡನೆ, ಮ್ಯಾಂಚೆಸ್ಟರ್‌ನ ಓಟ್ವೊ ಮತ್ತು ನನ್ನ ಇತರ ಸ್ನೇಹಿತರೊಡನೆ ನಿಯಮಿತವಾಗಿ ಪತ್ರವ್ಯವಹಾರ ಮಾಡಿದ್ದರೂ ಕೂಡ, ಭಾರತದಲ್ಲಿ ನನ್ನ ಜೀವನವು ಅವರ ಜೀವನದಿಂದ ಎಷ್ಟು ವ್ಯತ್ಯಾಸ ವಾಗಿತ್ತೆಂದರೆ, ನಮ್ಮಲ್ಲಿ ಸಂಪರ್ಕ ಕಲ್ಪಿಸುವಂತಹ ಅಂಶವೇನೂ ಇಲ್ಲವೆಂದು ನಾನು ಭಾವಿಸಿದೆ ಮತ್ತು ಪ್ರತಿಯೊಬ್ಬರನ್ನೂ ಪುನಃ ನೋಡುವ ಬಗ್ಗೆ ನಾನು ಧೈರ್ಯಹೀನಳಾಗಿದ್ದೆನು. ೧೯೫೬ರಲ್ಲಿ ಮನೆಗೆ ಹಿಂತಿರುಗುವ ಮುಂಚೆ ಆಸ್ಟ್ರೇಲಿಯದಲ್ಲಿ ಅವನನ್ನು ಭೇಟಿ ಮಾಡುವಂತೆ ಓಟ್ವೊ ನನ್ನ ಮನಸ್ಸನ್ನು ಒಲಿಸಿದನು. ಅತ್ಯಧಿಕ ಪಿ ಮತ್ತು ಓ ಪ್ರಯಾಣಿಕರ ಹಡಗುಗಳು ಭಾರತ ಮತ್ತು ಇಂಗ್ಲೆಂಡ್ ನಡುವೆ ಭರ್ತಿ ಇದ್ದುವು. ಆದರೆ ಆಸ್ಟ್ರೇಲಿಯಾಗೆ ಅರ್ಧ ಖಾಲಿಯಾಗಿರುವುದು

ಮುಂದುವರಿದಿತ್ತು ಮತ್ತು ಬೊಂಬಾಯಿಯಿಂದ ಸಿಡ್ನಿಗೆ ಕಡಿಮೆ ದರದ ಹಿಂತಿರುಗುವ ಟಿಕೆಟ್‌ಗಳನ್ನು ಕೊಡಮಾಡಿದ್ದವು. ನನ್ನ ಕಾಲವು ಅಷ್ಟೊಂದು ಶೀಘ್ರವಾಗಿ ಕಳೆದಿತ್ತೆಂಬುದನ್ನು ನನಗೆ ನಂಬಲಾಗಲಿಲ್ಲ. ಮಂಗಲ ಮತ್ತು ನನ್ನ ಹೊಸ ಕುಟುಂಬವನ್ನು ಬಿಟ್ಟು ಹೊರಡಲು ನಾನು ದುಃಖಿತಳಾಗಿದ್ದೆನು. ಎಂದಿಗಾದರೂ ನಾನು ಹಿಂದಿರುಗುವೆನೋ ಇಲ್ಲವೋ ಎಂದು ಮತ್ತು ನನ್ನ ಪುಟ್ಟ ಮನೆ ಹಾಗೂ ಕಾರು ಏನಾಗುವುವೋ ಎಂದೂ ನನಗೆ ಕೌತುಕವಾಗಿದ್ದಿತು.

ನನ್ನ ಗ್ರಾಮದಲ್ಲಿ ನನಗೆ ತಪ್ಪಿಹೋಗಿದ್ದ ಪಾಶ್ಚಾತ್ಯ ಸುಖಸಾಧನಗಳನ್ನು ಸಂತೋಷದಿಂದ ಅನುಭವಿಸುತ್ತಾ ನಾನು ಆರಾಮವಾಗಿ ಸಿಡ್ನಿಗೆ ದೋಣಿಯ ಪ್ರಯಾಣದ ಅವಧಿಯನ್ನು ಕಳೆದೆನು. ನಾನು ಏಕಾಂತತೆಯ ಆನಂದವನ್ನನು ಭವಿಸಿದೆನು. ಓಟ್ಟೊ ಮತ್ತು ಅವನ ಕುಟುಂಬವನ್ನು ಭೇಟಿ ಮಾಡುವ ಮೊದಲು ನನ್ನ ಯೋಚನೆಗಳನ್ನು ಒಂದು ಕ್ರಮದಲ್ಲಿಡಲು ನನಗೆ ಸಮಯವಿದ್ದಿತು. ಅವರು ನನಗೆ ರಾಜೋಚಿತವಾದ ಸ್ವಾಗತವನ್ನು ನೀಡಿದರು ಮತ್ತು ತಮ್ಮ ಪುಟ್ಟ ಮಗ ರಿಚರ್ಡ್‌ಗೆ ನನ್ನನ್ನು ಪರಿಚಯಿಸಿದರು. ನನ್ನ ಗ್ರಾಮಜೀವನದ ಕಥೆಗಳನ್ನು ಕೇಳಲು ಅವರೆಲ್ಲರೂ ಉತ್ಸುಕರಾಗಿದ್ದರಿಂದ, ನಾನೊಬ್ಬ ಪ್ರಖ್ಯಾತ ವ್ಯಕ್ತಿಯೆಂಬಂತೆ ಅವರ ಗೆಳೆಯರ ಗುಂಪಿನಲ್ಲಿ ನನ್ನ ಔನ್ನತ್ಯಕ್ಕೇರಿದ ಸ್ಥಾನಮಾನವು ನನ್ನನ್ನು ಆಶ್ಚರ್ಯಚಕಿತಳನ್ನಾಗಿಸಿದ್ದಿತು. ಓಟ್ಟೊ ನಿಜವಾಗಿಯೂ ನನ್ನನ್ನು ಮೆರೆಸುತ್ತಿದ್ದುದು ಮತ್ತು ಅಂತಿಮವಾಗಿ ನನ್ನನ್ನು ಗಮನಿಸಿದ್ದುದು ನನಗೆ ಕನಸೋ ಎಂಬಂತೆ ಕಾಣಿಸುತ್ತಿದ್ದಿತು.

ನಾನು ಸಿಡ್ನಿಯಲ್ಲಿದ್ದಾಗ ಸುಯೆಜ್ ಬಿಕ್ಕಟ್ಟು ಮತ್ತಷ್ಟು ಕೆಟ್ಟಿತು. ಪಿ ಮತ್ತು ಒ ಸುಯೆಜ್ ಕಾಲುವೆಯ ಮೂಲಕ ಯಾನ ಮಾಡಲು ಅಸಮರ್ಥರಾಗಿದ್ದರು. ಅದೃಷ್ಟವಶದಿಂದ, ಬೊಂಬಾಯಿಯ ಮೂಲಕ ದೀರ್ಘ ಪ್ರಯಾಣಕ್ಕೆ ಬದಲಾಗಿ ನನಗೆ ಅವರು ಇಂಗ್ಲೆಂಡ್‌ಗೆ ವಾಪಸ್ಸಾಗಲು ವಿಮಾನಯಾನವನ್ನು ಕೊಡಮಾಡಿದರು. ನನಗೆ ಬಹಳ ಸಂತೋಷವಾಯಿತು. ನಾನು, ಓಟ್ಟೊನಿಂದ ಬೀಳ್ಕೊಳ್ಳುತ್ತಿರುವಂತೆಯೇ ಒಂದು ಹೊಸ ಯುಗವೇ ಗೋಚರಿಸಿತೆಂದು ನಾನು ಭಾವಿಸಿದೆ ಮತ್ತು ಪ್ರಪಂಚವು ಅಷ್ಟೊಂದು ವಿಶಾಲವಾದ ಸ್ಥಳವಾಗಿದೆಯೆನಿಸಲಿಲ್ಲ. ಈಗ ನಾನು ಜಗತ್ ಪ್ರವಾಸಿಯಾಗಿದ್ದುದರಿಂದ ನಾನು ಪುನಃ ಜೊತೆಗೂಡಲು ದೀರ್ಘಾವಧಿಯೇನೂ ಆಗುವುದಿಲ್ಲವೆಂದು ನನಗೆ ಖಾತ್ರಿಯಾಯಿತು.

ಸಿಡ್ನಿಯಿಂದ ಸಿಂಗಪುರಕ್ಕೆ ಹೋಗುತ್ತಿದ್ದ ವಿಮಾನದಲ್ಲಿ ನಾನು ಬಹಳಷ್ಟು ಬ್ರಿಟಿಷ್ ಪತ್ರಕರ್ತರನ್ನು ಭೇಟಿ ಮಾಡಿದೆ. ಅವರು ಆಸ್ಟ್ರೇಲಿಯಾ ಮರುಭೂಮಿಯಲ್ಲಿ ಒಂದು ಪರಮಾಣು ಪ್ರಯೋಗವನ್ನು ವೀಕ್ಷಿಸಿ ಹಿಂತಿರುಗುತ್ತಿದ್ದರು. ನಾವು ಸಿಂಗಪುರ್‌ನಲ್ಲಿ ರಾತ್ರಿ ಪೂರ್ತಿ ಉಳಿದೆವು. ವಿಮಾನ ಕಂಪೆನಿಯು ಅಲ್ಲಿ ನಮ್ಮನ್ನು

ರ್‍ಯಾಫೆಲ್ಸ್ ಹೋಟೆಲ್‌ನಲ್ಲಿ ಉಳಿಯುವಂತೆ ಏರ್ಪಡಿಸಿತು. ಹೊಸದಾಗಿ ಪರಿಚಯಿಸಿಕೊಂಡ ನನ್ನ ಪತ್ರಕರ್ತ ಗೆಳೆಯರು ಸಂಜೆಯ ಊಟಕ್ಕೆ ತಮ್ಮ ಜೊತೆ ಸೇರುವಂತೆ ಕೇಳಿದರು. ಸಿಂಡರೆಲಾ ಬಾಲ್ ನೃತ್ಯಕ್ಕೆ  ಹೋದಂತೆ ಎಂದು ನನಗನ್ನಿಸಿತು. ಆದರೆ ಸುಪ್ರಸಿದ್ಧ ಪತ್ರಕರ್ತರ ಒಂದು ತಂಡದೊಡನೆ ರ್‍ಯಾಫೆಲ್ಸ್‌ನಲ್ಲಿನ ಔತಣಕೂಟವು ನನ್ನ ಜೀವನದಲ್ಲಿ ಅಡಿಗಡಿಗೆ ಆಗುವಂಥದ್ದೆನ್ನುವಂತೆ ನಾನು ನಟಿಸಲು ಪ್ರಯತ್ನಿಸಿದೆನು.

೧೯೫೭ರ ಅಕ್ಟೋಬರ್‌ನಲ್ಲಿ ನಾನು ಪುನಃ ಇಂಗ್ಲೆಂಡ್‌ಗೆ ಹಿಂತಿರುಗಿದೆನು. ನಾನು ನನ್ನ ಹಿಂದಿನ ಜೀವನಕ್ಕೆ ಹೇಗೆ ಹೊಂದಿಕೊಳ್ಳುವೆನೆಂಬ ನನ್ನ ಆತಂಕ ಗಂಭೀರವಾಗಿಯೇ ಇದ್ದಿತು. ಗುಲಾಬಿ ಬಣ್ಣದ ಗುಲಾಬಿ ಮೊಗ್ಗುಗಳಿಂದ ಕೂಡಿದ ಹೂವಿನ ಕಾಗದದಿಂದಲೂ ಮತ್ತು ಹೊಂದಿಕೆಯಾಗುವ ಪರದೆಗಳಿಂದಲೂ ಹೊಸದಾಗಿ ಅಲಂಕೃತವಾದ ನನ್ನ ಹಳೆಯ ಮಲಗುವ ಕೋಣೆಯನ್ನು ನಾನು ನೋಡಿದಾಗ ಅದು ಎಷ್ಟು ಕಷ್ಟವಾಗುವುದೆಂದು ನನಗೆ ಅರಿವಾಯಿತು. ನನ್ನ ತಾಯಿ ತಂದೆಯರು ನನಗೆ ಆಶ್ಚರ್ಯವನ್ನುಂಟು ಮಾಡಬೇಕೆಂದು ಬಯಸಿದ್ದರು. ಆದರೆ, ಅವರು ನಿರೀಕ್ಷಿಸಿದ್ದಂತೆ ಆನಂದದಿಂದ ಉದ್ಗಾರ ತೆಗೆಯುವ ಬದಲಾಗಿ, ನಾನು ಕಣ್ಣೀರು ಹಾಕತೊಡಗಿದೆ. ನನ್ನ ತಾಯಿತಂದೆಯರ ಮನೆಯ ಸಾಂಪ್ರದಾಯಕವಾದ ನೋಟವು ಬಿಗಿಕವಚವನ್ನು ಸಂಕೇತಿಸುತ್ತಿದ್ದು, ನಾನು ಮತ್ತೊಂದು ಬಾರಿ ಅದಕ್ಕೆ ಹೊಂದಿಕೊಳ್ಳುವಂತೆ ನಿರೀಕ್ಷಿಸಲಾಗಿತ್ತು . ನಾನು ಭಾರತವನ್ನು ಬಿಟ್ಟುಹೊರಡುವ ಮುಂಚೆ, ನಾನು ನನ್ನ ಸ್ವಂತ ಕೋಣೆಗಳನ್ನು ಹೇಗೆ ಅಣಿಗೊಳಿಸುತ್ತೇನೆಂದು ಹಂಚಿಕೆ ಮಾಡುತ್ತಿದ್ದೆನು.

ಪರದೆಗಳು, ಗೋಡೆಗೆ ತೂಗುಬಿಡುವ ಪರದೆಗಳು ಮತ್ತು ಮೆತ್ತೆ, ದಿಂಬು ಮೊದಲಾದವುಗಳ ಮೇಲು ಹೊದಿಕೆ ಮುಂತಾದವುಗಳಿಗೆ ಉಪಯೋಗಿಸುವುದಕ್ಕಾಗಿ ನಾನು ಬಣ್ಣಬಣ್ಣದ ಕೈಮಗ್ಗದ ಬಟ್ಟೆಗಳನ್ನು ಹಿಂದಕ್ಕೆ ತಂದಿದ್ದೆನು. ನನ್ನ ತಂದೆ ತಾಯಿಯರು ಏನು ಮಾಡಿದ್ದರೆಂದು ನಾನು ನೋಡಿದಾಗ ನನ್ನಿಷ್ಟದಂತೆ ನಾನು ಇನ್ನೇನನ್ನೂ ಮಾಡಲು ಸಾಧ್ಯವಿಲ್ಲವೆಂದು ನನಗೆ ತಿಳಿಯಿತು ಮತ್ತು ನಾನು ಮೋಸಕ್ಕೊಳಗಾದೆನೆಂದು ಭಾವಿಸಿದೆನು. ನಾನು ನನ್ನ ತಾಯಿತಂದೆಯರನ್ನು ಬಹಳವಾಗಿ ಪ್ರೀತಿಸುತ್ತಿದ್ದೆನು. ಅವರನ್ನು ನಾನು ರೇಗಿಸಲು ಇಚ್ಛಿಸಲಿಲ್ಲ. ಆದರೆ, ನಾನು ಈಗ ರೆಕ್ಕೆಗಳನ್ನು ಹರಡಿ ಹಾರುವುದನ್ನು ಕಲಿತಿದ್ದುದರಿಂದ ನನ್ನನ್ನು ಒಂದು ನೀರಸವಾದ ಮತ್ತು ಸಂಪ್ರದಾಯಬದ್ಧವಾದ ಜೀವನಕ್ಕೆ ಕಟ್ಟಿಹಾಕಲು ಪ್ರಯತ್ನಿಸಿದ್ದಕ್ಕಾಗಿ ಅವರನ್ನು ನಾನು ದ್ವೇಷಿಸುತ್ತಲೂ ಇದ್ದೆನು. ನಾನು ನನ್ನ ಮಲಗುವ ಕೋಣೆಯೊಳಕ್ಕೆ ನುಗ್ಗಿದೆ; ಬಾಗಿಲಿಗೆ ಬೀಗ ಹಾಕಿದೆ ಮತ್ತು ಹಾಸಿಗೆಯ ಮೇಲೆ ಉರುಳಿದೆ. ನನ್ನ ತಾಯಿತಂದೆಯರು ನನ್ನ ನಡಳಿಕೆಯಿಂದ ಸಂಪೂರ್ಣವಾಗಿ

ಆತಂಕಗೊಂಡರು ಮತ್ತು ಅದಕ್ಕೆ ಕಾರಣವಾಗಿ ವಿಮಾನ ಪ್ರಯಾಣದ ಆಯಾಸವನ್ನು ಮತ್ತು ಅವರ ಆರೈಕೆಯಿಂದ ಹೊರಗಿದ್ದಾಗ ನಾನು ನಡೆಸಲೇಬೇಕಾಗುತ್ತಿದ್ದ ಅಪರಿಚಿತ ವಿದೇಶೀಯ ಜೀವನವನ್ನೂ ಆರೋಪಿಸಿದರು.

ಮನೆಯ ಜೀವನ ನನಗೆ ಉಸಿರು ಕಟ್ಟಿಸುವಂತಿದ್ದುದು ಮಾತ್ರವಲ್ಲದೆ ಮ್ಯಾಂಚೆಸ್ಟರ್ ಕೂಡಾ ನಿರುತ್ಸಾಹಕರವಾಗಿಯೂ ಮತ್ತು ಚೈತನ್ಯರಹಿತವಾಗಿಯೂ ಕಾಣುತ್ತಿತ್ತು. ಹೇಗೆ ನಾನು ಕಾರ್ಯಕ್ಷೇತ್ರದ ಸಂಭ್ರಮವನ್ನು ತಪ್ಪಿಸಿಕೊಂಡೆನೆಂಬುದನ್ನು ನನ್ನ ಸಹೋದ್ಯೋಗಿಗಳ ಜೊತೆ ನಿವೇದಿಸಿಕೊಂಡೆನು ಮತ್ತು ಅವರು ನನ್ನ ಸರಿ ಹೊಂದಿಸಿಕೊಳ್ಳುವ ಸಮಸ್ಯೆಗಳಿಗೆ ಸಹಾನುಭೂತಿ ವ್ಯಕ್ತಪಡಿಸಿದರು ಮತ್ತು ಅವರು ಭಿನ್ನ ಸಂಸ್ಕೃತಿಗಳನ್ನು ಹಾದು ಹೋಗುವುದನ್ನು ಅವರು ಹೇಗೆ ನಿಭಾಯಿಸಿದರೆನ್ನುವ ಬಗ್ಗೆ ಸಲಹೆಯನ್ನು ನೀಡಿದರು. ನಾನು ಹಿಂತಿರುಗಿದ ನಂತರ ಪ್ರಾಧ್ಯಾಪಕ ಗ್ಲುಕ್‌ಮನ್ ತನ್ನನ್ನು ಮಾಕ್ಸ್ ಎಂದು ಕರೆಯಲು ನನಗೆ ಹೇಳಿದರು.

ಪರಿಶ್ರಮದ ದುಡಿಮೆಯೇ ಅತ್ಯುತ್ತಮ ಪರಿಹಾರವೆಂದು ಅವರು ನಂಬಿದ್ದರು ಮತ್ತು ನಾನು ಹಿಂತಿರುಗಿದ ಒಂದು ವಾರದೊಳಗೆ ನನ್ನ ಪ್ರೌಢ ಪ್ರಬಂಧದ ವಾದ ಸರಣಿಯನ್ನು ವಿಸ್ತಾರವಾಗಿ ಒಂದು ಅತಿ ಶೀಘ್ರವಾದ ಲೇಖನದಲ್ಲಿ ಬರೆದು ಒಪ್ಪಿಸಲು ಹೇಳಿದರು. ನಾನು ಸಂಪೂರ್ಣವಾಗಿ ಆಶ್ಚರ್ಯಚಕಿತಳಾದೆ: ನನ್ನಲ್ಲಿ ಬಹಳಷ್ಟು ವಿಷಯಗಳಿದ್ದುವು. ಆದರೆ, ಯಾವುದೇ ನಿರ್ದಿಷ್ಟ ಸಮಯದಲ್ಲಿಯೂ ಎಲ್ಲವನ್ನೂ ಒಟ್ಟಿಗೆ ಒಂದೇ ಪ್ರಬಂಧದಲ್ಲಿ ಹೇಗೆ ಬರೆಯಬೇಕೆಂಬುದನ್ನು ನಾನು ಯೋಚಿಸಿರಲಿಲ್ಲ. ಹಾಗಿದ್ದರೂ, ನಾನು ಸವಾಲನ್ನು ಸ್ವೀಕರಿಸಿದೆ ಮತ್ತು ನನ್ನ ವಿಪುಲವಾದ ಟಿಪ್ಪಣಿಗಳ ಮೂಲಕ ಮಂಗಲದ ಪುನರ್ದರ್ಶನ ಮಾಡಿ ಸಂತೋಷಪಟ್ಟೆನು. ಎರಡು ವಾರಗಳ ನಂತರ ಸೊಗಸಾಗಿ ೫೦ ಪುಟಗಳ ಪ್ರಬಂಧವನ್ನು ಮ್ಯಾಕ್ಸ್‌ಗೆ ಒಪ್ಪಿಸಿದೆನು. ಅದರಲ್ಲಿ ನಾನು ನನ್ನ ಮುಖ್ಯ ವಿಷಯದ, ಸ್ಥೂಲ ವಿವರಣೆಯನ್ನು ನೀಡಿದ್ದೆನು. (ಅಷ್ಟು ಶೀಘ್ರವಾಗಿ ನಾನು ಒಟ್ಟಾಗಿ ಬರೆಯಬಲ್ಲೆನೆಂದು ಅವರು ನಂಬಿರಲಿಲ್ಲವೆಂದು ನಾನು ಸಂದೇಹಿಸಿದ್ದೆನು.)

ನನ್ನ ಪ್ರಬಂಧವನ್ನು ಮ್ಯಾಕ್ಸ್ ಹಿಂತಿರುಗಿಸಿದಾಗ ಪ್ರತಿಯೊಂದು ಪುಟದಲ್ಲಿಯೂ ಕೆಂಪು ಗೀರುಗಳನ್ನು ಅಡ್ಡವಾಗಿ ಎಳೆಯಲಾಗಿತ್ತು. ನಾನು ಸರ್ವನಾಶ ಹೊಂದಿದ್ದೆನು. ನನ್ನ ಹತಾಶೆಯನ್ನು ನೋಡಿ ಅವರು ನಕ್ಕರು ಮತ್ತು ನನ್ನ ಚಿಂತನೆಯಲ್ಲಿ ಯಾವುದೇ ತಪ್ಪಿಲ್ಲವೆಂತಲೂ ಆದರೆ ನನ್ನ ಬರವಣಿಗೆಯು ಮಾತ್ರ ಭಯಂಕರವಾಗಿತ್ತೆಂದೂ ನನಗೆ ಹೇಳಿದರು. ನನ್ನ ಯೋಚನಾಧಾಟಿಯು ಸರಿಯಿದ್ದ ಮೇಲೆ ಅವರು ಹೇಗೆ ಅಷ್ಟೊಂದು ತಪ್ಪು ಹಿಡಿಯಲು ಸಾಧ್ಯವೆಂದು ನಾನು ವಾದಿಸಿದೆ. ಮತ್ತೊಮ್ಮೆ ಅವರು ನಕ್ಕರು. ಬುದ್ಧಿಯೊಂದೇ ಸಾಲದು; ಯೋಚಿಸಿದ

ವಿಷಯಗಳನ್ನು ಸ್ಪಷ್ಟವಾದ ಭಾಷೆಯನ್ನುಪಯೋಗಿಸಿ ಬರೆಯಬೇಕೆಂದು ಹೇಳಿದರು. ಇಂಗ್ಲೀಷ್ ಕಾದಂಬರಿಗಳ ಒಂದು ಉದ್ದವಾದ ಪಟ್ಟಿಯೊಂದಿಗೆ ನನ್ನ ಪ್ರಬಂಧವನ್ನೂ ನನ್ನ ಕೈಗಿತ್ತರು ಮತ್ತು ನನ್ನ ಚಿಂತನೆಗಳನ್ನು ಕಾಗದದ ಮೇಲೆ ಒಗೆಯುವುದಕ್ಕಿಂತಲೂ ಅವುಗಳನ್ನು ಹೇಗೆ ವ್ಯಕ್ತಪಡಿಸಬೇಕೆಂಬುದನ್ನು ಕಲಿಯಲು ನಾನು ಕಾಲವನ್ನುಪಯೋಗಿಸಬೇಕೆಂದು ಅವರು ಒತ್ತಾಯಿಸಿದರು. ಮುಂದಿನ ಎರಡು ತಿಂಗಳುಗಳಲ್ಲಿ ಒಂದಾದ ಮೇಲೊಂದರಂತೆ ನಾನು ಪ್ರಬಂಧಗಳನ್ನು ಬರೆದೆನು ತಿದ್ದಿ ತಿದ್ದಿ ಪುನಃ ಬರೆದೆನು. ಅಂತಿಮವಾಗಿ ಕೆಂಪು ಗೆರೆಯನ್ನು ಅಲ್ಲೊಂದು ಇಲ್ಲೊಂದು ಕಾಣಬಹುದಾಗಿದ್ದಿತು. ಅಂತಿಮವಾಗಿ ನನ್ನ ಬರವಣಿಗೆಯ ಬಗ್ಗೆ ತೃಪ್ತಿಯಾಗಿರುವುದಾಗಿ ಮಾರ್ಕ್ಸ್ ತಾನಾಗಿಯೇ ದೃಢವಾಗಿ ಹೇಳಿದರು ಮತ್ತು ನನ್ನ ಪ್ರೌಢ ಪ್ರಬಂಧದ ಮೇಲಿನ ಕೆಲಸವನ್ನು ಪ್ರಾರಂಭಿಸಬಹುದೆಂದು ನನಗೆ ಯಾವುದೇ ತಡೆಯಿಲ್ಲದೆ ಸ್ಪಷ್ಟವಾಗಿ ಹೇಳಿದರು. ಶೈಕ್ಷಣಿಕ ಸಮುದಾಯದ ಸಂಪೂರ್ಣ ಸದಸ್ಯೆಯಾದುದು ನನಗೆ ಆನಂದವಾಗಿದ್ದಿತು. ಯಂತ್ರ ಚಾಲಕಳಾಗಿದ್ದ ನನ್ನ ದಿನಗಳು ಈಗ ಒಂದು ಬೇರೆಯೇ ಆದ ಜೀವನಾವಧಿಗೆ ಸಂಬಂಧಿಸಿದಂತೆ ಕಾಣಿಸುತ್ತಿದ್ದಿತು. ನಿರಂತರವಾದ ಬೌದ್ಧಿಕ ಪ್ರಚೋದನೆಯು ನನ್ನಲ್ಲಿ ಜೀವಂತಿಕೆಯನ್ನು ಅನುಭವಕ್ಕೆ ತಂದಿತು. ಆದರೂ ನಾನು ಇನ್ನೂ ನೆಲೆಗೊಂಡಿಲ್ಲವೆಂದೂ ಮತ್ತು ಕಾರ್ಯಕ್ಷೇತ್ರಕ್ಕೆ ಹಿಂದಿರುಗಬೇಕೆಂಬ ತವಕದಿಂದ ಕೂಡಿರುವುದಾಗಿಯೂ ನಾನು ಭಾವಿಸುತ್ತಿದ್ದೆನು. ಇಂಗ್ಲೆಂಡ್‌ನಲ್ಲಿ ಜೀವನ ಪೂರ್ಣವಾಗಿ ಅತ್ಯಂತ ಸಂಪ್ರದಾಯಬದ್ಧವಾಗಿರುವು ದಾಗಿಯೂ ಮತ್ತು ಜೀವನವನ್ನು ಬೇರೆ ರೀತಿಯಲ್ಲಿಯೇ ಜೀವಿಸಲು ಇಚ್ಛಿಸುವುದಾಗಿಯೂ ನಾನು ತೀರ್ಮಾನಿಸಿದೆನು.

* * * *

# ೧೧. ಕಡೆಗೂ ದೊರಕಿದ ಯೋಗ್ಯ ವ್ಯಕ್ತಿ

೧೯೫೭ನೇ ಇಸವಿಯ ಆರಂಭದಲ್ಲಿ, ನಮ್ಮ ವಿಶ್ವವಿದ್ಯಾಲಯದ ಸ್ನಾತಕರ ವಿಚಾರ ಸಂಕಿರಣವೊಂದಕ್ಕೆ, ಡಾ॥ ಬಿಲ್ ವಿಪ್‌ಸ್ಟೈನ್‌ನನ್ನು, ಮ್ಯಾಕ್ಸ್ ಪರಿಚಯಿಸಿದರು, ಹಾಗೂ ಡಾ॥ ಬಿಲ್ ಆಗ ತಾನೇ ಮಧ್ಯ ಆಫ್ರಿಕಾದಲ್ಲಿನ ತನ್ನ ಅಧ್ಯಯನ ಕ್ಷೇತ್ರದಿಂದ ಹಿಂತಿರುಗಿಬಂದಿದ್ದನೆಂದೂ ವಿವರಿಸಿದರು. ಅಲ್ಲಿ ಯಾವಾಗಲೂ ಜನಗಳು ಬರುವುದು ಹೋಗುವುದು ಇದ್ದೇ ಇರುತ್ತಿದ್ದು, ಎಲ್ಲರನ್ನೂ ನೆನಪಿಟ್ಟುಕೊಳ್ಳುವುದು ಕಷ್ಟವಾಗಿದ್ದ ರೀಂದ, ನಾನು ಈ ಪರಿಚಯದ ಬಗೆಗೆ ಹೆಚ್ಚು ಗಮನ ನೀಡಲಿಲ್ಲ. ತರಗತಿಯ ನಂತರ ಬಸ್ ನಿಲ್ದಾಣದಲ್ಲಿ ನಮ್ಮಿಬ್ಬರ ಭೇಟಿಯಾಗದಿದ್ದರೆ, ನಾನು ಅವನ ಬಗೆಗೆ, ಎರಡನೆಯ ಬಾರಿ ಆಲೋಚಿಸುತ್ತಿರಲಿಲ್ಲ. ಪರಸ್ಪರ ಗುರುತಿಸಿ, ನಾವು ತಲೆಯಾಡಿಸಿದೆವು ಮತ್ತು ಈ ವಿಶ್ವದ ಯಾವುದಾದರೂ ದೂರ ಪ್ರದೇಶಕ್ಕೆ ತಪ್ಪಿಸಿಕೊಂಡು ಹೋಗಿಬಿಡಬೇಕೆಂಬ ನನ್ನ ಆಲೋಚನೆಯಲ್ಲಿ ನಾನು ವ್ಯಸ್ತಳಾದೆ. ಅವನಿಗೂ ಹಾಗೆಯೇ ಅನಿಸುತ್ತಿರ ಬಹುದು ಎಂದು, ನಾನು ಆಶ್ಚರ್ಯದಿಂದ ಭಾವಿಸುತ್ತಿದ್ದೆನೆಂದು ಕಂಡುಕೊಂಡೆ. ಬಸ್ಸಿನಲ್ಲಿ ಅವನ ಪಕ್ಕದಲ್ಲಿಯೇ ಧೊಪ್ಪನೆ ಕುಳಿತೆ ಮತ್ತು ಪರಿಚಯಿಸಿಕೊಳ್ಳುವ ರೀತಿಯಲ್ಲಿ ನಾನು ಎಷ್ಟು ಬೇಸರಗೊಂಡಿದ್ದೆನೆಂಬುದನ್ನು, ಹಿಂದೆ ಮುಂದೆ ಯೋಚಿಸದೆ ಒದರಿಬಿಟ್ಟೆ, ಮತ್ತು ಅವನನ್ನು ಹುರಿದುಂಬಿಸುತ್ತಾ, ನನ್ನೊಡನೆ ವಿಶ್ವಪರ್ಯಟನ ಮಾಡಲು ಅವನಿಗೆ ಆಸಕ್ತಿಯಿದೆಯೇ ಎಂದು ಕೇಳಿದೆ. ಅವನು ನನ್ನ ಕಡೆಗೆ ತಿರುಗಿಕೊಂಡು ಮುಗುಳ್ನಗುತ್ತಾ ಹೇಳಿದ: "ನಿನ್ನ ಪ್ರಯಾಣದಲ್ಲಿ ಜೊತೆಗೂಡಲು ನಾನು ಇಷ್ಟಪಡುತ್ತೇನಾದರೂ, ಅದು ಯೋಚಿಸಿ ಫಲವಿಲ್ಲದ ಸಂಗತಿ ಎಂದು ಹೇಳಲು ಇಚ್ಛಿಸುತ್ತೇನೆ."

ನಾನು ಎಷ್ಟು ಮುಂದುವರೆದವಳೆಂದು ಭಾಸವಾಗಿರಬೇಕು ಎಂಬುದರ ಅರಿವಾಗುತ್ತಲೇ, ಅವನ ಈ ಸ್ಫೋಟದಂತಹ ಮಾತುಗಳಿಂದಾಗಿ ನಾನು ದಿಢೀರನೆ ಮುಜುಗರಗೊಂಡೆ. ನನ್ನ ಬಗೆಗೆ ಅವನೇನು ಯೋಚಿಸಿರಬಹುದೆಂದು ಚಕಿತಗೊಂಡೆ. ನಾನು ಕತ್ತೆತ್ತಿ ನೋಡಿದಾಗ, ಪ್ರಥಮ ಬಾರಿಗೆ ನಮ್ಮ ಕಣ್ಣುಗಳು ಪರಸ್ಪರ ಭೇಟಿಯಾದವು. ಆ ಕಣ್ಣುಗಳಲ್ಲಿದ್ದ ಭಾವಪೂರ್ಣ ಅಭಿವ್ಯಕ್ತಿಯಿಂದಾಗಿ ನಾನು ಆಕರ್ಷಿತಳಾದೆ. ಹಾಗೆಯೇ ಆ ಕಣ್ಣುಗಳ ಮೂಲೆಯಲ್ಲಿ ಒಂದು ಮಿನುಗನ್ನೂ ಗಮನಿಸಿದೆ–

ಅವನು ನನ್ನನ್ನು ನೋಡಿ ನಗುತ್ತಿದ್ದ! ನಾನು ಗಲಿಬಿಲಿಗೊಂಡೆ ಮತ್ತು ಒಂದು ರೀತಿಯ ಭಾವೋದ್ವೇಗಕ್ಕೊಳಗಾಗಿ, ಬೇಗಬೇಗ ಹೆಜ್ಜೆ ಹಾಕುತ್ತಾ ಬಸ್ಸಿನಿಂದ ಇಳಿದು ಬಂದೆ. ಬಹಳ ದೀರ್ಘ ಸಮಯದಿಂದಲೂ ನಾನು ಈ ರೀತಿಯ ಭಾವೋದ್ರೇಕಕ್ಕೆ ಒಳಗಾಗಿರಲಿಲ್ಲ. ಭಾರತದಲ್ಲಿ ನಾನು ಸ್ವಲ್ಪಮಟ್ಟಿಗೆ ಗೌರವಾನ್ವಿತನಾದ ಒಬ್ಬ ಪುರುಷನಂತೆ ನನ್ನ ಬದುಕನ್ನು ಕಳೆದಿದ್ದುದರಿಂದ, ಈ ದಿನ ನನ್ನ ಮನಸ್ಸನ್ನು ಕಲಕಿ ಉದ್ರೇಕಿಸಿದಂತಹ ಗಾಢಭಾವನೆಗಳನ್ನು ಮರೆತೇಬಿಟ್ಟಿದ್ದೆ. ನಿರ್ಲಿಪ್ತಳಾಗಿ ಉಳಿಯಬೇಕೆಂದು ನನ್ನನ್ನು ನಾನು ಮನಗಾಣಿಸಿಕೊಳ್ಳಲು ಪ್ರಯತ್ನಿಸಿದೆನಾದರೂ, ಅದೇ ಸಮಯದಲ್ಲಿ ನಾನು ಪ್ರೇಮ ಮತ್ತು ನಿಕಟ ಸಾಹಚರ್ಯಕ್ಕಾಗಿ ಹಾತೊರೆಯುತ್ತಿದ್ದೆ. ಬಿಲ್‌ನೊಡನೆ ನಾನು ಏಕೆ ಜೊತೆಯಲ್ಲಿ ಪ್ರಯಾಣಿಸುವ ಬಗೆಗೆ ಪ್ರಸ್ತಾಪಿಸಿದೆನೆಂಬುದರ ಬಗೆಗೆ, ಇವತ್ತಿಗೂ ನನಗೆ ಯಾವ ವಿಚಾರವೂ ತಿಳಿದಿಲ್ಲ. ನನಗೆ ಅವನ ಪರಿಚಯವೇ ಇರಲಿಲ್ಲ ಮತ್ತು ನಾನು ಪುರುಷರ ಬಗೆಗೆ ಇನ್ನೂ ಅತ್ಯಂತ ಹೆಚ್ಚು ಎಚ್ಚರಿಕೆಯಿಂದಿರುತ್ತಿದ್ದೆ. ಹಾಗಿದ್ದರೂ, ಅಪರಿಚಿತನೊಬ್ಬನನ್ನು, ನನ್ನ ಜೊತೆಯಲ್ಲಿ ಪ್ರಪಂಚ ಪರ್ಯಟನ ಮಾಡಲು ಆಹ್ವಾನಿಸುತ್ತಿದ್ದೆ.

ಬಸ್ಸಿನಲ್ಲಿ ನಾವು ಭೇಟಿಯಾದ ಕೆಲವು ದಿನಗಳ ನಂತರ ನಾವು ಮತ್ತೆ ವಿಚಾರ ಸಂಕಿರಣದ ಮೇಜಿನ ಬಳಿ ಮುಖಾಮುಖಿಯಾದೆವು. ವಿಚಾರ ಸಂಕಿರಣದಲ್ಲಿ ವಿದ್ವಾಂಸರು ಮಂಡಿಸುತ್ತಿದ್ದ ವಿದ್ವತ್ ಪ್ರಬಂಧಗಳ ಮೇಲೆ ನನಗೆ ಮನಸ್ಸನ್ನು ಏಕಾಗ್ರಗೊಳಿಸಲು ಸಾಧ್ಯವಾಗಲಿಲ್ಲ. ನಡೆಯುತ್ತಿದ್ದ ಚರ್ಚೆಗೆ ಏನಾದರೂ ಕೊಡುಗೆ ನೀಡಿ, ಅದರಲ್ಲಿ ವೈಚಾರಿಕವಾಗಿ ಭಾಗವಹಿಸುವಂತೆ ನನ್ನನ್ನು ಕೇಳಿದಾಗ, ನನಗೆ ನಾನೊಬ್ಬಳು ತಿಳಿಗೇಡಿಯೆನಿಸಿತು. ಹೇಳಲು ನನಗೆ ಏನೂ ಇರಲಿಲ್ಲ. ಬಿಲ್ ನನ್ನನ್ನು ಒಬ್ಬ ಮೂರ್ಖಿಳು ಎಂದು ತಿಳಿದುಕೊಳ್ಳುತ್ತಾನೆ ಎಂದುಕೊಂಡೆ ಮತ್ತು ನನ್ನನ್ನೇ ನಾನು ಬೈಯ್ದುಕೊಂಡೆ.

ವಿಚಾರ ಸಂಕಿರಣದ ನಂತರದ ಮಾಮೂಲಿನ ಅವಧಿಯಲ್ಲಿ, ಹತ್ತಿರದ ಪಬ್ ಒಂದರಲ್ಲಿ ಅವನು ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳಲು ಬಂದಾಗ ನಾನು ಅತ್ಯಂತ ಆಕರ್ಷಿತಳಾದೆ ಮತ್ತು, ಅವನ ಕಾಲು, ನನ್ನ ಕಾಲನ್ನು ಸ್ಪರ್ಶಿಸಿದಾಗ ಅದೇ ಪರಿಚಿತವಾದ ರೋಮಾಂಚನವನ್ನನುಭವಿಸಿದೆ. ನನ್ನ ಮೈ ಜುಮ್ಮೆಂದಿತು. ಎಷ್ಟೋ ವರ್ಷಗಳಿಂದಲೂ ನಾನು ಅಂತಹ ಭಾವನೆಗಳನ್ನು ಅನುಭವಿಸಿರಲಿಲ್ಲ. ನಾವು ಒಟ್ಟಿಗೇ ಬಸ್ಸಿನಲ್ಲಿ ಪಯಣಿಸಿದೆವು ಹಾಗೂ ಈ ಬಾರಿ ಅವನೇ ಸಂಭಾಷಣೆಯನ್ನು ಆರಂಭಿಸಿದ. ಮುಂದಿನ ವಾರ ನಡೆಯಲಿರುವ ಗಾನಗೋಷ್ಠಿಗೆ ಆಹ್ವಾನಿಸುವುದರ ಮೂಲಕ, ನಾನು ರೋಮಾಂಚಿತಳಾದೆ ಮತ್ತು ಆಹ್ವಾನವನ್ನು ಕೂಡಲೇ ಒಪ್ಪಿಕೊಂಡೆ. ಬಿಲ್ ತನಗೆ ಸಹಜವಾಗಿದ್ದ ಏರುಪೇರಾದ ಮುಗುಳ್ನಗು ಬೀರಿದ. ಯಾವಾಗ, ಎಲ್ಲಿ ಭೇಟಿ ಮಾಡಬೇಕು ಎನ್ನುವುದರ ಬಗೆಗೆ ನಾವು

ವ್ಯವಸ್ಥೆ ಮಾಡಿಕೊಂಡೆವು. ನಾನು ನಾಚಿಕೆಯಿಂದ ರಂಗೇರಿದವಳಾಗಿ ಸಂತೋಷದಿಂದ ಮನೆಗೆ ಧಾವಿಸಿದೆ. ನನ್ನನ್ನು ನೋಡಿದೊಡನೆಯೇ, ಅರ್ಥವಾದವಳಂತೆ ಅಮ್ಮ ಕೇಳಿದಳು: "ಯಾರದು ಆ ಅದೃಷ್ಟವಂತ?" ನಾನು ತಕ್ಷಣ ಉತ್ತರಿಸಲಿಲ್ಲ. ನಾನು ಭಾರತದಲ್ಲಿದ್ದಾಗಲೇ, ಕೆನ್‌ನಿಂದ ವಿವಾಹ ವಿಚ್ಛೇದನ ಪಡೆಯುವಂತೆ ಬೆಕ್ಕಿಯು ಒತ್ತಾಯಿಸಿದ್ದಲ್ಲದೇ, ಅದನ್ನೆಲ್ಲಾ ಅಪ್ಪನ ಜೊತೆಯಲ್ಲಿ ಮಾತನಾಡಿ ವ್ಯವಸ್ಥೆಗೊಳಿಸಿದ್ದುದನ್ನು ನೆನೆದು ನನಗೆ ತಕ್ಷಣ ಸಂತೋಷವಾಯಿತು. ಆದರೆ, ಇವೆಲ್ಲಾ ಸತ್ಯವೆಂದು ನಂಬಲಾರದಷ್ಟು ಹಿತಕರ ಹಾಗೂ ಒಳ್ಳೆಯ ಸಂಗತಿಗಳಾಗಿದ್ದವು. ರಾನ್‌ನಂತೆ ಬಿಲ್ ಕೂಡಾ ಈಗಾಗಲೇ ಮದುವೆಯ ನಿಶ್ಚಿತಾರ್ಥ ಮಾಡಿಕೊಂಡಿರಬಹುದೇ ಅಥವಾ ಮದುವೆಯಾಗಿಬಿಟ್ಟಿರಬಹುದೇ ಎಂದು ಕೂಡಾ ನಾನು ಆಲೋಚಿಸ ತೊಡಗಿದೆ. ಅವನ ಬಗೆಗೆ ನನಗೇನೂ ತಿಳಿದಿಲ್ಲವೆಂಬ ಅರಿವಾಯಿತು. ಹಾಗಾಗಿ ಅವನೊಡನೆ ಪ್ರೇಮದಲ್ಲಿ ಬೀಳುವ ಮುನ್ನ ಬಿಲ್ ಬಗೆಗೆ ಚೆನ್ನಾಗಿ ತಿಳಿದುಕೊಳ್ಳ ಬೇಕೆಂದು ತೀರ್ಮಾನಿಸಿದೆ.

ಮರುದಿನ, ಮತ್ತೊಬ್ಬ ಸಾಮಾಜಿಕ ಮಾನವ ಶಾಸ್ತ್ರಜ್ಞನಾಗಿದ್ದ ವಿಕ್‌ನನ್ನು ಕಂಡು ಮಾತನಾಡಬೇಕೆಂದುಕೊಂಡೆ. ಬಿಲ್, ವಿಕ್‌ನೊಡನೆ ವಾಸಿಸುತ್ತಿದ್ದುದು ನನಗೆ ತಿಳಿದಿತ್ತಾಗಿ, ಬಿಲ್‌ನ ಕುಟುಂಬದ ಬಗೆಗೆ ವಿಕ್‌ನನ್ನು ಪ್ರಶ್ನಿಸಿದೆ. ನನ್ನ ಪ್ರಶ್ನೆಗಳ ಹಿಂದಿನ ಉದ್ದೇಶವನ್ನು ಊಹಿಸಿದ ವಿಕ್, ತನಗೆ ತಿಳಿದದ್ದನ್ನೆಲ್ಲಾ ಸಂತೋಷವಾಗಿ ಹೇಳಿದ. ಬಿಲ್ ಸರಿಸುಮಾರು ನನ್ನ ವಯಸ್ಸಿನವನೇ ಎಂದೂ, ಮತ್ತು ಯಾರೊಂದಿಗೂ ವಿವಾಹ ನಿಶ್ಚಿತಾರ್ಥ ಮುಂತಾದ ಯಾವುದೇ ಬಂಧನಗಳಿಲ್ಲದವನೆಂದೂ, ಮತ್ತು ವಿಕ್‌ಗೆ ತಿಳಿದಿರುವಂತೆ ಬಿಲ್ ಯಾವುದೇ ಒಬ್ಬ ಸ್ಥಿರವಾದ ಪ್ರೇಯಸಿಯನ್ನು ಹೊಂದಿರಲಿಲ್ಲವೆಂದೂ ನನಗೆ ತಿಳಿಯಿತು. ಸಂಪ್ರದಾಯಸ್ಥ ಯಹೂದಿ ಕುಟುಂಬದಿಂದ ಬಂದಿದ್ದ ಬಿಲ್, ಉತ್ತರ ಐರ್ಲೆಂಡಿನಲ್ಲಿ ಬೆಳೆದು ಪ್ರೌಢನಾಗಿದ್ದ. ವಕೀಲನಾಗಿ ಶಿಕ್ಷಣ ಪಡೆದಿದ್ದು ಬಿಲ್ ಬ್ಯಾರಿಸ್ಟರ್ ಆಗಿ ಅರ್ಹತೆ ಪಡೆದಿದ್ದರೂ, ಅವನು ವಕೀಲಿ ವೃತ್ತಿಯಲ್ಲಿ ನಿರತನಾಗಲಿಲ್ಲ, ಬದಲಾಗಿ ಸಾಮಾಜಿಕ ಮಾನವಶಾಸ್ತ್ರದೆಡೆಗೆ ತನ್ನ ಗಮನವನ್ನು ಹರಿಸಿದ. ನಾವಿಬ್ಬರೂ ಭೇಟಿಯಾಗುವ ವೇಳೆಗಾಗಲೇ ಅವನು ತನ್ನ ಡಾಕ್ಟರೇಟ್ ಪದವಿಯನ್ನು ಪಡೆದಿದ್ದುದಲ್ಲದೆ, ನಗರ ಪ್ರದೇಶದ ಮಾನವ ಶಾಸ್ತ್ರದಲ್ಲಿ ತನ್ನನ್ನು ತಾನು ಪರಿಣತನಾಗಿ ಸಂಸ್ಥಾಪಿಸಿಕೊಂಡಿದ್ದ. ವಿಕ್ ಹೇಳಿದ ಸಂಗತಿಗಳಿಂದ ನಾನು ಸಾಕಷ್ಟು ಪ್ರಭಾವಿತಳೂ ಆದೆ ಮತ್ತು ನೆಮ್ಮದಿಯನ್ನು ಪಡೆದೆ. ನಾನು ಅವನೊಡನೆ ಮಾತನಾಡಿದುದನ್ನು ಬಿಲ್‌ಗೆ ತಿಳಿಸದಿರುವಂತೆ, ವಿಕ್‌ನನ್ನು ಕೇಳಿಕೊಂಡೆ. ಏಕೆಂದರೆ, ವಿಕ್‌ನು ನನ್ನೊಡನೆ ಬರಿ ಕಥೆ ಕಟ್ಟಿ ಹೇಳಿಲ್ಲವೆಂಬುದನ್ನು ನಾನು ಖಚಿತಗೊಳಿಸಿಕೊಳ್ಳಬೇಕಾಗಿತ್ತು. ಮುಂದಿನ ಬಾರಿ ನಾನು ಬಿಲ್‌ನೊಡನೆ ಭೇಟಿಯಾದಾಗ ನನ್ನ ಪ್ರಶ್ನೆಗಳ ಸರಮಾಲೆಯನ್ನು

ಅವನ ಮುಂದೆ ಪ್ರಸ್ತಾಪಿಸಿದೆ. ಅವನು ಅದರಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣನಾದ. ನಾನು ಸತತವಾಗಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಅವನು ಗಲಿಬಿಲಿಗೊಂಡ ಹಾಗೂ ಭ್ರಮೆಗೊಂಡ. ಆದರೆ ಅದಕ್ಕೆ ಆಕ್ಷೇಪಿಸಲಿಲ್ಲ ಅಥವಾ ಅಡ್ಡಿಮಾಡಲಿಲ್ಲ. ಈಗ ಬಿಲ್‌ನನ್ನು ಪ್ರೀತಿಸಲು ನನ್ನನ್ನು ನಾನು ಅನುಮತಿಸಿಕೊಳ್ಳಬಹುದಾಗಿತ್ತು. ಆದರೂ, ಯಾವುದೇ ಸಂದರ್ಭದಲ್ಲಿಯೂ ಅವನು ನನ್ನ ಭಾವನೆಗಳಿಗೆ ಪ್ರತಿಸ್ಪಂದಿಸಿ, ಪ್ರತಿಕ್ರಿಯಿಸಿದನೆಂದು ಹೇಳಲಾರದವಳಾಗಿದ್ದೆ. ಅವನು ನಾಚಿಕೆಯ ಸ್ವಭಾವದವನೂ, ಅಂತರ್ಮುಖಿಯೂ ಆಗಿದ್ದ. ಹಾಗಾಗಿ ತನ್ನ ಭಾವನೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುತ್ತಿರಲಿಲ್ಲ. ಇದು ನನ್ನ ಭಾವನೆಯನ್ನು ತೀವ್ರವಾಗಿ ಕೆರಳಿಸುತ್ತಿತ್ತು ಎಂದು ನಾನು ಕಂಡುಕೊಂಡೆ.

೧೯೫೭ನೆಯ ಇಸವಿಯ ಆರಂಭದ ತಿಂಗಳುಗಳನ್ನು ನಾನು ಯಾವಾಗಲೂ "ಪ್ರೇಮದ ವಸಂತ" ಎಂದು ಕಲ್ಪನಾಶೀಲತೆಯಿಂದ ನೆನಪು ಮಾಡಿಕೊಳ್ಳುತ್ತೇನೆ. ಪ್ರೇಮವು ನಮ್ಮ ಜೀವನಗಳಲ್ಲಿ ತಡವಾಗಿ ಅರಳಿತ್ತು. ನಾವು ಇಬ್ಬರೂ ನಮ್ಮ ಮೂವತ್ತರ ವಯಸ್ಸಿನಲ್ಲಿದ್ದೆವು. ಆದ್ದರಿಂದ ಕಳೆದುಹೋದ ಕಾಲವನ್ನು ಆ ಕೊರತೆಯನ್ನು ಸರಿದೂಗಿಸಲು ನಾವು ಕಾತರದಿಂದಿದ್ದೆವು. ಬಿಲ್‌ಗೆ ಸಂಬಂಧಪಟ್ಟ ಎಲ್ಲವನ್ನೂ ನಾನು ಪ್ರೀತಿಸಿದೆ: ಅವನ ಅತ್ಯುಜ್ವಲವಾದ ಮನಸ್ಸು ಅವನ ಬೆಚ್ಚಗಿನ, ಹಿತಕರ ಮುಗುಳ್ನಗೆ, ಇತರರ ಬಗೆಗೆ ಅವನ ಮೃದುವಾದ ಕಳಕಳಿ, ಅವನ ಹಾಸ್ಯಪ್ರಜ್ಞೆ, ಎಲ್ಲವನ್ನೂ ನಾನು ಪ್ರೀತಿಸಿದೆ. ನಾವು ಪರಸ್ಪರ ಮಾತನಾಡಿದೆವು, ನಕ್ಕು ನಲಿದೆವು ಮತ್ತು ಪ್ರೀತಿಸಿದೆವು, ಮತ್ತು ನಾನು ಹಿಂದೆ ಎಂದೂ ಇಲ್ಲದಿರದಿದ್ದ ರೀತಿಯಲ್ಲಿ ಸಂತುಷ್ಟಳಾದೆ, ಮತ್ತು ಸೌಂದರ್ಯ ಆಕರ್ಷಣೆಗಳನ್ನು ಅನುಭವಿಸಿದೆ. ಕಡೆಗೂ ನಾನು ಯೋಗ್ಯನಾದ ಸಭ್ಯ ವ್ಯಕ್ತಿಯನ್ನು ಪಡೆದೆ ಎಂದು ನಿಶ್ಚಯ ಹೊಂದಿದೆ. ಬಂಧನದಿಂದ ಸಾಕಾಗಿ ತಪ್ಪಿಸಿಕೊಳ್ಳುವ ಆತುರ ನನಗೆ ಎಂದೂ ಉಂಟಾಗಲಿಲ್ಲ ಮತ್ತು ಸುಮ್ಮನೆ ಬಿಲ್‌ನ ಜೊತೆಯಲ್ಲಿ ಇರುವುದರಲ್ಲಿಯೇ ನನಗೆ ಸುಖ ಮತ್ತು ನೆಮ್ಮದಿ ದೊರಕಿದ್ದವು. ಗಾನಗೋಷ್ಠಿಗಳಿಗೆ, ಪಾರ್ಟಿಗಳಿಗೆ, ಥಿಯೇಟರ್‌ಗಳಿಗೆ– ಚಿತ್ರಮಂದಿರ, ರಂಗಮಂದಿರಗಳಿಗೆ– ಒಟ್ಟಿಗೇ ಹೋಗುತ್ತಿದ್ದೆವು ಮತ್ತು ಇಬ್ಬರಲ್ಲಿಯೂ ಹೆಚ್ಚು ಹೆಚ್ಚು ಸಮಾನ ಅಂಶಗಳು ಇದ್ದುದನ್ನು ಕಂಡುಕೊಂಡೆವು. ನಾವಿಬ್ಬರು ಒಂದು ತಂಡ, ಒಂದು ಜೋಡಿ ಎನ್ನುವುದು ಬೇಗ ಖಚಿತವಾಯಿತು; ನಮ್ಮ ಸಹೋದ್ಯೋಗಿಗಳು ನಮ್ಮನ್ನು ಪ್ರೋತ್ಸಾಹಿಸಿದರು ಮತ್ತು ನಮ್ಮನ್ನು ದಂಪತಿಯಂತೆ, ಊಟಕ್ಕೆ ಮತ್ತು ಪಾರ್ಟಿಗಳಿಗೆ ಆಹ್ವಾನಿಸಲು ಆರಂಭಿಸಿದರು. ಬಿಲ್‌ನನ್ನು ಕೂಡಲೇ ಭೇಟಿ ಮಾಡಲು ತೀವ್ರವಾಗಿ ಉತ್ಸುಕರಾಗಿದ್ದ ನನ್ನ ತಂದೆತಾಯಿಗಳಿಗೂ ಹೇಳಿದೆ. ಅವರು ಬಿಲ್‌ನನ್ನು ಭೋಜನಕ್ಕೆ ಆಹ್ವಾನಿಸಿದರು. ನಾವಿಬ್ಬರೂ ಸ್ವಲ್ಪ ಗಾಬರಿ ಗೊಂಡಿದ್ದೆವು. ಆದರೆ, ಬಿಲ್ ತನಗೆ ಮನಸ್ಸು ಬಂದಾಗ,

ತನಗೆ ಬೇಕಾದಾಗ ಬಹಳ ಆಕರ್ಷಕನಾಗಿ, ಮೋಹಕನಾಗಿ ವರ್ತಿಸುತ್ತಿದ್ದನಾಗಿ, ನನ್ನ ತಂದೆತಾಯಿ ಇಬ್ಬರ ಮನಸ್ಸುಗಳನ್ನೂ ಬೇಗನೇ ಗೆದ್ದುಬಿಟ್ಟ. ಬಿಲ್ ಮನೆಯಿಂದ ಹೊರಟನಂತರ, ತಾನು ಎಷ್ಟು ಸಂತುಷ್ಟಳಾಗಿದ್ದಳೆಂದೂ, ಕಡೆಗೂ ನಾನು ಒಬ್ಬ ಉತ್ತಮ ಯುವಕನನ್ನು ಪಡೆದುದಕ್ಕಾಗಿ ಹರ್ಷಿತಳಾಗಿದ್ದಾಳೆಂದೂ, ಅಮ್ಮ ನನಗೆ ಹೇಳಿದಳು ಅಲ್ಲದೆ, ಬಿಲ್ ಒಬ್ಬ ಯಹೂದಿಯಾಗಿರುವುದು ಅವಳಿಗೆ ಹೆಚ್ಚು ಸಂತೋಷವಾಗಿದೆಯೆಂದೂ ಹೇಳಿದಳು. ಅಪ್ಪ ಮಾತ್ರ ಮದುವೆಯ, ಸಂಭಾವ್ಯವಾದ ಕಾರ್ಯಯೋಜನೆಯ ಬಗೆಗೆ ಮತ್ತು ಅದು ಯಥಾಸ್ಥಿತಿಯನ್ನು ಹೇಗೆ ಪ್ರಭಾವಿಸಬಹುದು ಎಂಬುದರ ಬಗೆಗೆ ಆಸಕ್ತರಾಗಿದ್ದರು. ಆದರೆ, ನಾನು ಇದ್ಯಾವುದಕ್ಕೂ ಚಿಂತಿಸಲಿಲ್ಲ.

ಕೆಲವು ತಿಂಗಳ ನಂತರ ನಾವು ಮ್ಯಾಂಚೆಸ್ಟರ್‌ನ ರಸ್ತೆಗಳಲ್ಲಿ ತಿರುಗಾಡುತ್ತಿದ್ದೆವು. ಅದೊಂದು ಸುಂದರ ಸೌಮ್ಯ ವಸಂತಮಾಸದ ಸಂಜೆಯಾಗಿತ್ತು ಮತ್ತು ಚೆರ್ರಿ ಹೂಗಳ ಮಧುರ ಸುವಾಸನೆ ಗಾಳಿಯನ್ನು ತುಂಬಿಕೊಂಡಿತ್ತು, ಆಗ ಬಿಲ್ ನನ್ನನ್ನು ತನ್ನ ಪಕ್ಕದಲ್ಲಿದ್ದ ಬೆಂಚಿನ ಮೇಲಕ್ಕೆ ಎಳೆದುಕೊಂಡು ನನ್ನ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡ. ಆ ಒಂದು ಕ್ಷಣದಲ್ಲಿ 'ನನ್ನ ಹೃದಯ ಒಂದು ಬಡಿತವನ್ನು ತಪ್ಪಿಸಿಕೊಂಡಿತು' ಎಂಬ ಪದಗುಚ್ಛದ ಅರ್ಥವೇನೆಂದು ಅರಿತುಕೊಂಡೆ. ಏಕೆಂದರೆ ನನ್ನ ಹೃದಯ ಆಗ ಅದನ್ನೇ ಮಾಡಿತ್ತು. ಅವನು ಮಾತುಗಳನ್ನಾಡಲು ಒದ್ದಾಡುತ್ತಿರುವಾಗ ನಾನು ಅವನತ್ತ ನೋಡಿದೆ ಮತ್ತು ಆಳವಾಗಿ ಉಸಿರು ತೆಗೆದುಕೊಂಡ ನಂತರ ಬಿಲ್ ನನ್ನೊಡನೆ ಮದುವೆಯ ಪ್ರಸ್ತಾಪ ಮಾಡಿದ. ನಾನು ತತ್‌ಕ್ಷಣವೇ ಉತ್ತರಿಸಿದೆ 'of course', ನಿಜವಾಗಿಯೂ ಅದು ಒಪ್ಪಿಗೆ ಸೂಚಿಸುವ ಅತ್ಯಂತ ಭಾವನಾಪೂರ್ಣ ಅಥವಾ ರಮ್ಯವಾದ ರೀತಿ ಖಂಡಿತ ಆಗಿರಲಿಲ್ಲ. ಆದರೆ, ನನಗೆ ಹೇಳಲು ಸಾಧ್ಯವಾದದ್ದು ಅಷ್ಟು ಮಾತ್ರ. ಅವನು ನನ್ನನ್ನು ಚುಂಬಿಸಿದ ಮತ್ತು ನಾವಿಬ್ಬರೂ ಒಂದಾಗಿ ಕರಗಿಹೋದೆವು. ನಮ್ಮ ಮಾತುಗಳು ಪರಸ್ಪರರ ಭಾವನೆಗಳನ್ನು ಅಭಿವ್ಯಕ್ತಿಸದಿದ್ದರೂ ನಮ್ಮ ಚುಂಬನ ಅದನ್ನು ಖಂಡಿತವಾಗಿಯೂ ಅಭಿವ್ಯಕ್ತಿಸಿತ್ತು.

ಆ ದಿನ ರಾತ್ರಿ ನಾವಿಬ್ಬರೂ ನಾಚಿಕೆಯಿಂದ ರಂಗೇರಿದವರಂತೆ ಹಾಗೂ ಬಾಲಿಶವೆನ್ನುವಷ್ಟು ಏನೇನೂ ಚಿಂತೆಯಿಲ್ಲದೆ ಪರಸ್ಪರರನ್ನು ಬೀಳ್ಕೊಟ್ಟೆವು. ಸಾಂಪ್ರದಾಯಕ, ವಿಧಿಪೂರ್ವಕವಾಗಿ ನನ್ನ ತಂದೆಯನ್ನು, ಅವರ ಮಗಳನ್ನು ಮದುವೆ ಮಾಡಿಕೊಡುವಂತೆ ಕೇಳುವೆನೆಂದು ಬಿಲ್ ಒತ್ತಿ ಹೇಳಿದ್ದನಾಗಿ, ಅವನು ಮರುದಿನ ಇಲ್ಲಿಗೆ ಬರುವುದೆಂದು ನಾವು ಒಪ್ಪಿಕೊಂಡಿದ್ದೆವು. ನಮ್ಮ ಈ ದಿಢೀರ್ ನಿರ್ಧಾರದಿಂದ ಅಪ್ಪನಿಗೆ ಆಶ್ಚರ್ಯವಾಗಿತ್ತು. ಆದರೆ, ಅಮ್ಮ ಬಹಳ ಸಂತುಷ್ಟಳಾಗಿದ್ದಳು. ನನ್ನ ಮದುವೆಯ ಬಗೆಗೆ ಅಪ್ಪನಲ್ಲಿ ಮಿಶ್ರಭಾವನೆಗಳಿದ್ದವೆಂದು ನಾನು ಊಹಿಸಿದೆ.

ಏಕೆಂದರೆ, ನನ್ನ ಜೀವನದಲ್ಲಿ ಈ ಮದುವೆಯು ಬೇರೊಂದು ಹಂತವನ್ನು ತರುತ್ತದೆ ಹಾಗೂ ಸ್ವಲ್ಪಮಟ್ಟಿಗಾದರೂ ಅವನ ಸ್ಥಾನದಲ್ಲಿ ಪಲ್ಲಟವಾಗುತ್ತದೆಂಬ ಆಲೋಚನೆ ಅಪ್ಪನ ಮನಸ್ಸಿನಲ್ಲಿತ್ತೆನಿಸುತ್ತದೆ. ನಮ್ಮ ನಿಶ್ಚಿತಾರ್ಥದ ಸ್ವಸ್ತಿಪಾನವನ್ನು, ಶುಭ ಹಾರೈಕೆಗಳೊಡನೆ, ನಮ್ಮ ತಂದೆತಾಯಿಯೊಡನೆ, ನೆರವೇರಿಸಿದ ನಂತರ ನಾನು ಬಿಲ್‌ನ ತಂದೆತಾಯಿಯೊಡನೆಯೂ ಈ ಕಾರ್ಯಕ್ರಮವನ್ನು ನೆರವೇರಿಸಲು ಕಾತರಳಾಗಿದ್ದೆ. ಆದರೆ, ಅವನ ತಂದೆತಾಯಿಯ ಪ್ರತಿಸ್ಪಂದ ಪ್ರತಿಕ್ರಿಯೆಗಳ ಬಗೆಗೆ ನಾನು ಯಾವಾಗ ಪ್ರಶ್ನಿಸಿದರೂ, ಬಿಲ್ ಆ ವಿಷಯವನ್ನು ಬದಲಿಸಿಬಿಡುತ್ತಿದ್ದ. ತನ್ನ ತಂದೆತಾಯಿಯ ಬಗೆಗೆ ಬಿಲ್ ತೀರಾ ಅಪರೂಪವಾಗಿ ಮಾತನಾಡುತ್ತಿದ್ದ. ಹೆಚ್ಚು ಕಡಿಮೆ ಮಾತನಾಡುತ್ತಲೇ ಇರಲಿಲ್ಲ. ಅವನು ನನ್ನಿಂದ ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದ್ದಾನೆಯೇ ಎಂದು ನಾನು ಆಲೋಚಿಸಲು ಆರಂಭಿಸಿದೆ. ಕಡೆಗೆ, ನಮ್ಮ ವಿಶ್ವವಿದ್ಯಾಲಯದ ಗೆಳೆಯರು ಏರ್ಪಡಿಸಿದ್ದ ನಮ್ಮ ನಿಶ್ಚಿತಾರ್ಥದ ಪಾರ್ಟಿಯ ಅವಧಿಯಲ್ಲಿ, ನಮ್ಮ ಈ ಸುದ್ದಿಯನ್ನು ಫೋನಿನ ಮೂಲಕ ತನ್ನ ತಂದೆತಾಯಿಗೆ ತಿಳಿಸಲು ಬಿಲ್ ನಿರ್ಧರಿಸಿದ. ಅವನು ಫೋನಿನ ಕರೆ ಮಾಡಿದಾಗ, ನಾನು ಅವನ ಪಕ್ಕದಲ್ಲಿಯೇ ನಿಂತಿದ್ದುದರಿಂದ, ಅವರು ಸಂಪೂರ್ಣವಾಗಿ ಸಂತುಷ್ಟರಾಗಿರಲಿಲ್ಲವೆಂದು ನಾನು ಹೇಳಬಲ್ಲವಳಾಗಿದ್ದೆ. ಅತ್ಯಂತ ಅಹಿತಕರವಾದದ್ದನ್ನು ನಾನು ಕೇಳಿಸಿಕೊಳ್ಳಬಾರದೆಂದು ಬಿಲ್ ತಡೆಯಲು ಪ್ರಯತ್ನಿಸಿದ. ಆದರೆ, ಅವರು ಬಿಲ್‌ನ ತಂದೆತಾಯಿ– ನನ್ನನ್ನು ಒಪ್ಪಿಕೊಳ್ಳಲು ಬಹಳ ದೀರ್ಘ ಸಮಯ ಬೇಕಾಗುವುದು ಎಂಬುದನ್ನು ನಾನು ಅರಿತುಕೊಂಡೆ. ತಮ್ಮ ಒಬ್ಬನೇ ಮಗನಿಗಾಗಿ ಅವರು ನಿರೀಕ್ಷಿಸಿದ್ದಂತಹ ಸೊಸೆ ನಾನು ಖಂಡಿತ ಆಗಿರಲಿಲ್ಲ ಮತ್ತು ನಾನು ಇದ್ಯಾವ ಸನ್ನಿವೇಶದಲ್ಲಿ ನನ್ನನ್ನು ನಾನು ಸಿಲುಕಿಸಿಕೊಂಡೆನೆಂದು ಚಿಂತಿಸತೊಡಗಿದೆ.

ಈ ಘಟನೆಗಳ ನಂತರ, ಪಾಸ್‌ಓವರ್ ಅವಧಿಯಲ್ಲಿ ಐರ್ಲೆಂಡಿನಲ್ಲಿರುವ ತನ್ನ ತಂದೆತಾಯಿಯ ಮನೆಯಲ್ಲಿ ನಾನು ಅವನನ್ನು ಭೇಟಿಯಾಗಬೇಕೆಂದು ಬಿಲ್ ವ್ಯವಸ್ಥೆ ಮಾಡಿದ. ಇದು ಈಸ್ಟರ್ ರಜಾದಿನಗಳೊಡನೆ ತಾಳೆಯಾಗುತ್ತಿತ್ತು. ನಾನು ಬೆಲ್‌ಫಾಸ್ಟ್‌ಗೆ ವಿಮಾನದಲ್ಲಿ ಪಯಣಿಸಿದೆ. ಅಲ್ಲಿ ತನ್ನ ತಂದೆಯೊಡನೆ ಬಿಲ್ ನನ್ನನ್ನು ಭೇಟಿ ಮಾಡಿದ. ಈ ಪ್ರಥಮ ಭೇಟಿಯ ಬಗೆಗೆ ನನಗೆ ಬಹಳ ಆತಂಕ, ಅಳುಕುಗಳಿದ್ದವು. ಆದರೆ, ಬಿಲ್‌ನ ತಂದೆಯ ಸ್ವಭಾವ ಬಿಲ್‌ನಂತೆಯೇ ಇದ್ದುದನ್ನು ಕಂಡಾಗ, ತಕ್ಷಣವೇ ನಾನು ಅವರ ಬಗೆಗೆ ಸ್ನೇಹ ಮತ್ತು ಪ್ರೇಮದ ಭಾವನೆ ತಾಳಿದೆ. ಪ್ರೀತಿಯಿಂದ ನಾನು ಅವರನ್ನು ಆಲಂಗಿಸಿಕೊಂಡಾಗ, ಅವರು ಅದನ್ನು ಇಷ್ಟಪಟ್ಟರು ಎನಿಸಿತು. ಮೊದಲನೆಯ ಅಡಚಣೆಯನ್ನು (ಪ್ರತಿಬಂಧಕವೊಂದನ್ನು) ನಾನು ದಾಟಿದೆನೆಂದು ನಾನು ಎಣಿಸಿಕೊಂಡೆ. ಆದರೆ ಎರಡನೆಯದು ಅಷ್ಟೊಂದು ಸುಲಭವಾಗಿರಲಿಲ್ಲ. ಬಿಲ್‌ನ ತಾಯಿ, ನಿರ್ಭಾವುಕವಾಗಿ

ನನ್ನನ್ನು ತಲೆಯಿಂದ ಕಾಲಿನವರೆಗೂ ನೋಡಿದರು ಮತ್ತು ಸಂಪೂರ್ಣವಾಗಿ ನನ್ನನ್ನು ನಿರ್ಲಕ್ಷಿಸಿದರು. ಅವರಿಗೆ ನನ್ನನ್ನು ಪರಿಚಯಿಸಲು ಬಿಲ್ ಪ್ರಯತ್ನಿಸಿದ. ಆದರೆ, ಅವರು ಪ್ರತಿಸ್ಪಂದಿಸಲು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದರು. ಅವರು ಅಷ್ಟೊಂದು ಒರಟಾಗಿಯೂ, ನೋವನ್ನುಂಟುಮಾಡ ಬಲ್ಲವರಾಗಿಯೂ ಇರಬಹುದೆಂದು ನಾನು ನಂಬಲಾರದವಳಾಗಿದ್ದೆ. ನನ್ನನ್ನು ಅವರು ಒಪ್ಪಿಕೊಂಡಿರಲಿಲ್ಲವೆನ್ನುವುದರ ಬಗೆಗೆ ನನಗೆ ಯಾವ ಅನುಮಾನವೂ ಇರಲಿಲ್ಲ. ಆದರೆ, ನನ್ನ ಬಳಿ ವರದಕ್ಷಿಣೆಯೇನೂ ಇಲ್ಲದಿದ್ದರೆ, ನನ್ನಿಂದ ಏನು ಉಪಯೋಗ ಎಂದು ಎಲ್ಲರೆದುರಿಗೂ ನನ್ನನ್ನು ಅಷ್ಟೊಂದು ಹೀನೈಸುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲ.

ಒಂದು ವಾರ ಪೂರ್ತಿ ಅಹಿತಕರವಾಗಿಯೇ ಕಳೆಯಿತು. ನಾನೆಂದೂ ಕೋಶರ್ ಗೃಹದಲ್ಲಿ ವಾಸಿಸಿರಲಿಲ್ಲವಾಗಿ (Kosher– ಯೆಹೂದಿ ನಿಯಮಗಳ ಅಗತ್ಯಗಳನ್ನು ಪೂರೈಸುವಂತಹ ಆಹಾರ ಪದ್ಧತಿ ಇತ್ಯಾದಿ) ನಾನು ಅನೇಕ, ಮೂರ್ಖತನದ, ಬುದ್ಧಿಗೇಡಿತನದ ತಪ್ಪುಗಳನ್ನು ಮಾಡಿದೆ, ಅವು ಕ್ಷಮಿಸಲಾರದಾಗದ ತಪ್ಪುಗಳೆಂದು ಬಿಲ್‌ನ ತಾಯಿ ಪರಿಗಣಿಸಿದರು. ಮಾಂಸದೂಟದ ನಂತರ ನಾನು ನನ್ನ ಕಾಫಿಯಲ್ಲಿ ಹಾಲು ಬೇಕೆಂದು ಕೇಳಿದಾಗ, ಬಿಲ್‌ನ ತಾಯಿಯು ನನ್ನೆಡೆಗೆ ನನ್ನ ಮುಖಗೆಡಿಸುವಂತಹ ಸ್ವಲ್ಪವೂ ತಿಳಿದುಕೊಂಡಿರದ ಈ ಹೆಂಗಸಿನೊಡನೆ, ಅವನು ಹೇಗೆ ತಾನೆ ವಿವಾಹ ಮಾಡಿಕೊಳ್ಳುವ ಯೋಜನೆ ಮಾಡಿದನೆಂದು ಕೇಳಿದರು. ಬಿಲ್ ಅತ್ಯಂತ ಖಿನ್ನನಾದ ಮತ್ತು ತೇಜೋವಧೆಯಾದವನಂತಾದ ಮತ್ತು ಏನನ್ನೂ ಹೇಳಲಿಲ್ಲ. ಎಲ್ಲವನ್ನೂ ನಂತರ ವಿವರಿಸುವೆನೆಂದು ನನಗೆ ಸುಮ್ಮನೆ ಸಂಜ್ಞೆಯ ಮೂಲಕ ಸೂಚಿಸಿದ. ತನ್ನ ಹೆಂಡತಿ ಮತ್ತು ಆಕೆಯ ತಂಗಿಯರಿಂದ ನಾನು ಪಡೆಯುತ್ತಿದ್ದ, 'ಉಪಚಾರ', ವರ್ತನೆಗಳನ್ನು ಕಂಡ, ಬಿಲ್‌ನ ತಂದೆ ಮಾರಿಸ್ ತಮ್ಮ ಆಸನದಲ್ಲಿಯೇ ವಿಲಿವಿಲಿಗುಟ್ಟಿದರು ಮತ್ತು ಅಪ್ರಸನ್ನರಾದಂತೆ ಕಂಡರು. ಅವರು ಮಾತನಾಡಿ, ಬಿಲ್‌ನ ತಾಯಿಗೆ 'ಬಾಯಿ ಮುಚ್ಚು' ಎಂದು ಹೇಳಲಿ ಎಂದುಕೊಂಡೆ. ಆದರೆ, ಅವರು ಹಾಗೆ ಹೇಳಲು ಹೆದರಿದ್ದರು ಎಂದು ನಾನು ಹೇಳಬಲ್ಲವಳಾಗಿದ್ದೆ.

ನಮ್ಮ ವಿವಾಹಕ್ಕೆ ಎದುರಾದ ಕುಟುಂಬದ ಈ ಎಲ್ಲ ಅಡೆತಡೆಗಳ ವಿರುದ್ಧ ನಾನು ಮತ್ತು ಬಿಲ್ ಒಂದಾಗಿ ಉಳಿದಿದ್ದೆವು. ಆದರೆ, ಕೆಲವು ಸಮಯಗಳಲ್ಲಿ, ಇಲ್ಲಿಂದ ಹೊರಗೆ ಹೋಗಿ, ನನ್ನ ಪಾಡಿಗೆ ನಾನು, ವಿಮಾನ ಹತ್ತಿ ಮನೆಗೆ ಹೋಗಿಬಿಡಬೇಕೆಂಬುದರ ಬಗೆಗೆ ತೀವ್ರವಾಗಿ ಆಲೋಚಿಸಿದೆ. ಅತ್ಯಂತ ಬೆಲೆ ಬಾಳುವ ತಮ್ಮ ಒಡೆತನದ ವಸ್ತುವನ್ನು ಕದ್ದುಕೊಂಡಿರುವ ಕಳ್ಳಿ ನಾನೇನೋ ಎಂಬ ಭಾವನೆ ನನ್ನಲ್ಲಿ ಬರುವಂತೆ, ಬಿಲ್‌ನ ತಾಯಿಯ ಕುಟುಂಬ ವರ್ತಿಸಿತು.

ಪ್ರತಿಯೊಂದು ಸಂದರ್ಭದಲ್ಲಿಯೂ, ಅಸಂಖ್ಯ ಉತ್ಕೃಷ್ಟ ಜೋಡಿಯಾಗುವ ಹುಡುಗಿಯರನ್ನು ತಾವು ಗೊತ್ತುಮಾಡಬಹುದಾಗಿತ್ತು ಹಾಗೂ ಆ ವಧುಗಳು ದೊಡ್ಡ ಮೊತ್ತದ ವರದಕ್ಷಿಣೆ ತರುತ್ತಿದ್ದರು ಮತ್ತು ಇದರಿಂದ ಅವನ ತಂದೆ ತಾಯಿಗೂ ಸಹಾಯವಾಗುತ್ತಿತ್ತು ಎಂದು ಹೇಳುತ್ತಲೇ ಇದ್ದಿತು, ಆ ಕುಟುಂಬ. ನಾನು ಕೂಡ ಬಿಲ್‌ನ ತಾಯಿಯನ್ನು ತಲ್ಲಣಗೊಳಿಸಲಿಚ್ಛಿಸಿದೆ. ನಾನು ಎಂತಹ ಯೋಗ್ಯವಾದ ಆಯ್ಕೆ ಎಂಬುದನ್ನು ಅವರು ತಿಳಿಯಲಿ, ಅವರ ಮಗನನ್ನು ನಾನು ಎಷ್ಟು ಸಂತುಷ್ಟನನ್ನಾಗಿ ಮಾಡಿದ್ದೀನಿ, ಅಷ್ಟು ಸಾಲದೆ ಎಂಬುದನ್ನು ಅವರು ತಿಳಿದುಕೊಳ್ಳಲಿ ಎಂದುಕೊಂಡೆ. ನಾನು ಈಗ ಸದ್ಯದಲ್ಲಿ ಇರುವ ಒಂದು ಸ್ಥಿತಿಯನ್ನು ತಲುಪಲು ಎಷ್ಟು ಕಷ್ಟದ ಹೋರಾಟ ಮಾಡಿದ್ದೆ. ಈಗ ನೋಡಿದರೆ, ಪೂರ್ವಾಗ್ರಹಪೀಡಿತರಾದ, ಕ್ಷುಲ್ಲಕ ಮನಸ್ಸಿನ, ವಿವೇಚನಾರಹಿತ ಮತಾಂಧರೆದುರಿಗೆ ನನ್ನನ್ನು ನಾನು ಸಮರ್ಥಿಸಿಕೊಳ್ಳಬೇಕಾಗಿತ್ತು. ಅವರ ಈ ಕೋರಿಕೆಯ ಮೇಲುಮೇಲಣ ಯಹೂದಿ ಧರ್ಮಶ್ರದ್ಧೆಯನ್ನು, ಅವರ ಸಂವೇದನಾರಾಹಿತ್ಯವನ್ನು ಮತ್ತು ಸ್ನೇಹ ಪ್ರೀತಿಗಳ ಸಂಪೂರ್ಣ ಕೊರತೆಯನ್ನು ನಾನು ಉಪೇಕ್ಷಿಸಲು ಆರಂಭಿಸಿದೆ. ಇಂತಹ ಭಯಂಕರ ತಾಯಿಯಿಂದ, ಬಿಲ್‌ನಂತಹ ವ್ಯಕ್ತಿ ಹೇಗೆ ಮೂಡಿಬಂದ ಎಂಬುದನ್ನು ನನಗೆ ನಂಬುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಬಿಲ್‌ನೊಡನೆ ನಾನು ಈ ವಿಷಯವನ್ನು ಹೇಳಿದಾಗ ಅವನು ವಿಷಾದದಿಂದ ಮುಗುಳ್ನಕ್ಕ ಮತ್ತು ಮದುವೆಯಾದ ನಂತರ ನಾವು ಅವನ ತಾಯಿಯನ್ನು ತೀರಾ ಕಡಿಮೆ ಸಮಯ ನೋಡಬೇಕಾಗುತ್ತದೆಯಷ್ಟೆ ಎಂದು ನನ್ನಲ್ಲಿ ಭರವಸೆ ಮೂಡಿಸಲು ಪ್ರಯತ್ನಿಸಿದ.

ನಾನು ಇನ್ನೂ ಸಂದಿಗ್ಧ ಸ್ಥಿತಿಯಲ್ಲಿದ್ದೆ, ನಮ್ಮ ಪ್ರೀತಿಯು ಎಂದಿಗಿಂತಲೂ ಹೆಚ್ಚು ಗಾಢವಾಗಿದ್ದಾಗ ಅವನ ಕುಟುಂಬದ ಹಸ್ತಕ್ಷೇಪಗಳ, ಒತ್ತಡ ನಮ್ಮಲ್ಲಿ ಕಂಡುಬರಲಾರಂಭಿಸಿತು. ಅತ್ಯಂತ ಕ್ಷುಲ್ಲಕ ಸಂಗತಿಗಳ ಬಗೆಗೆ ನಾವಿಬ್ಬರೂ ಪರಸ್ಪರರನ್ನು ಟೀಕಿಸಲು ಆರಂಭಿಸಿದೆವು ಮತ್ತು ಬಹಳ ಶೀಘ್ರವಾಗಿ ನಮ್ಮ ಕೋಪಗಳು ಧಗಧಗಿಸುತ್ತಿದ್ದವು. ನಮ್ಮ ಮದುವೆಯು ನಾಶವಾಗಿ ಮುಳುಗಿ ಹೋಯಿತೆಂದೇ ನಾನು ಅಂಜತೊಡಗಿದೆ ಮತ್ತು ನಾನು ಪ್ರೇಮಿಸಲೇ ಬಾರದಿತ್ತೆಂದೂ ಆಲೋಚಿಸತೊಡಗಿದೆ. ಕಟ್ಟಕಡೆಗೆ, ಬಿಲ್‌ನನ್ನು ಎದುರಿಸಿ, ಇದೆಲ್ಲವನ್ನೂ– ಈ ವಿವಾಹದ ವಿಷಯವನ್ನು– ರದ್ದುಪಡಿಸಿಬಿಡುವಂತೆ ಹೇಳಿ ಬಿಡೋಣವೆಂದು ನಿರ್ಧರಿಸಿದೆ: ಆದರೆ ಜೀವನ ಅಷ್ಟೊಂದು ನೇರವಾಗಿರುವುದಿಲ್ಲ ವೆಂಬುದನ್ನು ನಾನು ತಿಳಿದಿರಬೇಕಿತ್ತು, ನನ್ನ ಭಾವನೆಗಳನ್ನು ವೈಚಾರಿಕಗೊಳಿಸಲು ನಾನು ಪ್ರಯತ್ನಿಸಿದೆ. ಆದರೆ, ಆಂತರ್ಯದಲ್ಲಿ ನನ್ನ ಒಂದು ಭಾಗವೇ ಸತ್ತುಹೋಗುತ್ತಿತ್ತು. ನನ್ನ ಕಣ್ಣೀರನ್ನು ನುಂಗಿಕೊಳ್ಳುತ್ತ, ಬಿಲ್‌ಗೆ ನಾನು ಹೇಳಿದೆ: "ವಿವಾಹಗಳು ಕೇವಲ ಇಬ್ಬರು ವ್ಯಕ್ತಿಗಳನ್ನು

ಮಾತ್ರವೇ ಒಟ್ಟುಗೂಡಿಸುವುದಿಲ್ಲ, ಆದರೆ ಅವರ ಅನುಕ್ರಮವಾದ ಬಂಧುವರ್ಗವನ್ನೂ ಒಂದುಗೂಡಿಸುತ್ತದೆ ಎನ್ನುವುದು. ಮಾನವ ಶಾಸ್ತ್ರಜ್ಞರಾಗಿ ನಮ್ಮಿಬ್ಬರಿಗೂ ತಿಳಿದಿದೆ. ಒಟ್ಟಿಗೇ ಇರುವುದರ ಬಗೆಗೆ ನಾವಿಬ್ಬರೂ ಅತ್ಯಂತ ಸಂತುಷ್ಟರಾಗಿರಬಹುದು. ಆದರೆ, ನಿನ್ನ ಕುಟುಂಬ ವರ್ಗವು ನನ್ನನ್ನು ಮತ್ತು ನನ್ನ ಬಂಧುವರ್ಗದವರನ್ನು ಖಂಡಿತವಾಗಿಯೂ ಅಂಗೀಕರಿಸುವುದಿಲ್ಲ. ಇಂತಹ ಪ್ರಕ್ಷುಬ್ಧ ಪ್ರತಿಕೂಲ ಅಥವಾ ವಿರೋಧ ಪರಿಸ್ಥಿತಿಯಲ್ಲಿ, ನಮ್ಮ ಮದುವೆಯು ಉಳಿಯುವ ಅವಕಾಶವಿದೆಯೆಂದು ನೀನು ನಿಜವಾಗಿ ನಂಬುವೆಯಾ?" ಇಷ್ಟು ಹೇಳಿದ ನಂತರ ನನ್ನ ದುಃಖ ಕಣ್ಣೀರಾಗಿ ಸ್ಫೋಟಗೊಂಡಿತು. ನನ್ನನ್ನು ಸಾಂತ್ವನಗೊಳಿಸಲು ಹತಾಶೆಯಿಂದ ಪ್ರಯತ್ನಿಸುತ್ತಾ ಬಿಲ್ ನನ್ನನ್ನು ತನ್ನ ತೋಳುಗಳಲ್ಲಿ ಹಿಡಿದು ಅಪ್ಪಿಕೊಂಡ.

ಅದೇ ಸಮಯದಲ್ಲಿ ಬಿಲ್‌ನ ತಂದೆ ಬಾಗಿಲನ್ನು ತಟ್ಟಿದರು ಮತ್ತು ಕೋಣೆಯ ಒಳಗೆ ಬಂದರು. ನನ್ನ ದುಃಖತಪ್ತ ಮುಖವನ್ನು ನೋಡಿ, ಏನು ಕಾರಣವೆಂದು ಕೇಳಿದರು. ಆ ಪ್ರಶ್ನೆಯನ್ನು ಕೇಳಿ ಬಹುಮಟ್ಟಿಗೆ ನನಗೆ ನಗುವಂತಾಯಿತು. ಅವರಿಗೆ ತಿಳಿದಿರಲಿಲ್ಲವೆ? ಅವರು ನೋಡುತ್ತಿರಲಿಲ್ಲವೇ? ನಾನು ಅಲ್ಲಿಂದ ಹೊರಟು ಹೋದರೆ ಎಲ್ಲರಿಗೂ ಉತ್ತಮವೆಂಬುದಾಗಿ ನಾನು ಯೋಚಿಸಿದ್ದೇನೆ ಎಂದು ಅವರಿಗೆ ಹೇಳಿದೆ. ಮತ್ತು ವಿವಾಹವನ್ನು ರದ್ದುಪಡಿಸಲು ತೀರ್ಮಾನಿಸಿರುವುದಾಗಿಯೂ ಹೇಳಿದೆ. ಅವರು ನನ್ನನ್ನು ತಮ್ಮ ತೋಳುಗಳೊಳಗೆ ತೆಗೆದುಕೊಂಡು ಬಿಗಿಯಾಗಿ ಆಲಂಗಿಸಿಕೊಂಡರು. ನಾನು ಬಿಕ್ಕಿಬಿಕ್ಕಿ ಅಳುವುದನ್ನು ನಿಲ್ಲಿಸುವ ತನಕವೂ ನನ್ನ ತಲೆಗೂದಲನ್ನು ನೇವರಿಸುತ್ತಿದ್ದರು. ಅವರು ಮೃದುವಾಗಿ ಪಿಸುಗುಟ್ಟಿದರು, ನಿನಗೆ ಬೇಕಾಗಿರುವುದು ಅಷ್ಟೇ ಆದಲ್ಲಿ, ತಮ್ಮ ಮಗನು ಯಾವಾಗಲೂ ಎಂತಹ ಹೆಂಡತಿ ಬೇಕು ಎಂದು ಬಯಸಿದ್ದನೋ ಅಂತಹವಳೇ ನಾನಾಗಿದ್ದೇನೆಂಬುದರ ಬಗೆಗೆ ತಮಗೆ ನಂಬಿಕೆಯಿದೆ ಎಂದು ಹೇಳಿದರು. ನಂತರ ಅವರು ತಮ್ಮ ಮತ್ತು ತಮ್ಮ ಹೆಂಡತಿಯ ಕುಟುಂಬದ ನಡುವೆ ಇರುವ ಭಿನ್ನಾಭಿಪ್ರಾಯವನ್ನು ವಿವರಿಸಿದರು. ಅವರ ಹೆಂಡತಿಯು ಸಂಪ್ರದಾಯನಿಷ್ಠ ಯಹೂದಿ ಮನೆತನದಿಂದ ಬಂದವರು, ಅವರ ತಂದೆತಾಯಿ ಪೂರ್ವ ಯೂರೋಪಿನಿಂದ ಬೆಲ್‌ಫಾಸ್ಟ್‌ಗೆ ವಲಸೆ ಬಂದಿದ್ದವರು. ನಾಲ್ಕು ಜನ ಸೋದರಿಯರಲ್ಲಿ ಎಥೆಲ್ ಎಲ್ಲರಿಗಿಂತಲೂ ಹಿರಿಯರು. ಎಲ್ಲರೂ ಬೆಲ್‌ಫಾಸ್ಟ್‌ನಿಂದ ಬಂದಿದ್ದವರನ್ನೇ ಏನೂ ಮದುವೆಯಾಗಿರಲಿಲ್ಲವಾದರೂ ಬೆಲ್‌ಫಾಸ್ಟ್‌ನಲ್ಲಿಯೇ ನೆಲೆಸಲು ಒಪ್ಪಿದವರನ್ನು ಮದುವೆಯಾಗಿದ್ದರು. ಕಾಲ ಕ್ರಮೇಣ– ಅವರೆಲ್ಲರೂ ಬಿಲ್‌ನ ತಂದೆ ಒಬ್ಬರನ್ನು ಹೊರತುಪಡಿಸಿ– ಯಶಸ್ವೀ ಲೇವಾದೇವಿಗಾರರಾಗಿದ್ದರು. ಬಿಲ್‌ನ ತಂದೆ ಹೂ ಮತ್ತು ತರಕಾರಿಗಳನ್ನು ಬೆಳೆಯುವುದರಲ್ಲಿ ಪ್ರೀತಿಯಿದ್ದ ಕಾರಣ, ಅದೇ ವೃತ್ತಿಯಲ್ಲಿ ಮುಂದುವರೆದರು. ಬೇಕಾದಷ್ಟು ಬಹುಮಾನ ಪ್ರಶಸ್ತಿಗಳನ್ನು ಪಡೆದರಾದರೂ ಎಂದೂ ಹೆಚ್ಚು ಹಣ

ಗಳಿಸಲಿಲ್ಲ. ಎಥೆಲ್ ಮತ್ತು ಅವರ ಬಂಧುವರ್ಗದವರಿಗೆ ಹಣಕಾಸಿನ, ಸಂಪತ್ತಿನ ಮೌಲ್ಯ ಮಾತ್ರ ತಿಳಿದಿದ್ದಿತು. ಮಾರಿಸ್‌ನ ಕುಟುಂಬದವರು ಆಧುನಿಕ ಚಿಂತನ ಶೀಲರಾಗಿದ್ದರು ಮತ್ತು ಅಭಿವೃದ್ಧಿ ಹೊಂದುತ್ತಿದ್ದ ವಿಶ್ವ ಯಹೂದಿ ಧರ್ಮದ ಚಳುವಳಿಯ ನಿಯಮಗಳಿಗೆ ಬದ್ಧರಾಗಿದ್ದರು (Zionist Movement). ಆದ್ದರಿಂದ ಅವರು ಸಂಪತ್ತನ್ನು ಸಂಗ್ರಹಿಸುವುದಕ್ಕಿಂತಲೂ ಹೆಚ್ಚಾಗಿ ಶೈಕ್ಷಣಿಕ ಸಾಧನೆ, ಸಿದ್ಧಿಗಳಿಗೆ ಅತ್ಯಂತ ಮಹತ್ವ ನೀಡುತ್ತಿದ್ದರು.

ಬಿಲ್‌ನ ಕುಟುಂಬದಲ್ಲಿಯ ಒಡಕು, ಅವನನ್ನು ಯಾರು ಯಾವ ಹೆಸರಿನಿಂದ ಕರೆಯುತ್ತಾರೆ ಎನ್ನುವುದರಿಂದ, ಸ್ಪಷ್ಟವಾಗಿ ಪ್ರದರ್ಶಿತಗೊಳ್ಳುತ್ತಿತ್ತು. ಬಿಲ್‌ನ ಮೊದಲ ಹೆಸರು ಅವನು ಜನ್ಮತಳೆದಾಗ ಆರ್ನಾಲ್ಡ್ ಎಂದಿತ್ತು ಎಂಬುದು ನನಗೆ ತಿಳಿದಿತ್ತು. ಆದಾಗ್ಯೂ, ಅವನು ಆ ಹೆಸರನ್ನು ಉಪಯೋಗಿಸಿದುದನ್ನು ನಾನು ಎಂದೂ ಕೇಳಿರಲಿಲ್ಲ. ಕೇವಲ ಬೆಲ್‌ಫಾಸ್ಟ್‌ನಲ್ಲಿ ಮಾತ್ರ ಆ ಹೆಸರನ್ನು ಬಿಲ್‌ನ ತಾಯಿ ಮತ್ತು ಆಕೆಯ ಕುಟುಂಬವರ್ಗದವರು ಉಪಯೋಗಿಸುವುದನ್ನು ನಾನು ಕೇಳಿದ್ದೆ; ಅವನ ತಂದೆ ಅವನನ್ನು ಯಾವಾಗಲೂ ಬಿಲ್ ಎಂದೇ ಕರೆಯುತ್ತಿದ್ದರು. ಮಗುವಾಗಿದ್ದಾಗ ಬಿಲ್‌ನ ಜನನಾಂಗದ ಮುಂದೊಗಲನ್ನು ಕತ್ತರಿಸಿ, ಪಾವನಗೊಳಿಸುವ ಯಹೂದಿಯರ ಧಾರ್ಮಿಕ ಕ್ರಿಯೆಯ ಸಂದರ್ಭದಲ್ಲಿ, ಮಗುವನ್ನು ಬಿಲ್‌ನ ಚಿಕ್ಕಪ್ಪ ಮ್ಯಾಕ್ಸ್ (ಬಿಲ್ ತಂದೆಯ ಸೋದರ) ಎತ್ತಿಕೊಂಡಿದ್ದರೆಂದೂ, ಮಗುವಿನ ಹೆಸರನ್ನು ಉಚ್ಚರಿಸುವ ಸಮಯ ಬಂದಾಗ ಮ್ಯಾಕ್ಸ್ ದಿಗ್ಭ್ರಮೆಗೊಂಡನೆಂದೂ ಮತ್ತು ಆರ್ನಾಲ್ಡ್ ಎಂಬ ಹೆಸರಿಗೆ ಬದಲಾಗಿ ಮಗುವನ್ನು ಬಿಲ್ ಎಂದು ಕರೆಯಬೇಕೆಂದು ಘೋಷಿಸಿದನೆಂದು, ಬಿಲ್‌ನ ತಂದೆ ಮಾರಿಸ್ ಹೇಳಿದರು. ಆ ದಿನದಿಂದಲೂ ಬಿಲ್‌ನ ತಾಯಿಯ ಸಂಬಂಧಿಕರು ಮಗುವನ್ನು ಆರ್ನಾಲ್ಡ್ ಎಂದು ಕರೆಯುವುದನ್ನೇ ಮುಂದುವರೆಸಿದರೂ ತಂದೆಯ ಕಡೆಯ ಸಂಬಂಧಿಕರೆಲ್ಲರೂ ಬಿಲ್ ಎಂದೇ ಮಗುವನ್ನು ಸಂಬೋಧಿಸುತ್ತಿದ್ದರು. ಕುಟುಂಬದ ಒಬ್ಬನೇ ಮಗನಾಗಿ ಅಂತಹುದೊಂದು ಪರಿಸರದಲ್ಲಿ ಬೆಳೆಯುವಾಗ ಬಿಲ್ ಅನುಭವಿಸಿರಬಹುದಾದ ಸಂಕಷ್ಟಗಳನ್ನು ನಾನು ಅರ್ಥಮಾಡಿಕೊಳ್ಳತೊಡಗಿದೆ. ಇದು, ನಾನು ಅವನನ್ನು ಮತ್ತೂ ಹೆಚ್ಚಾಗಿ ಪ್ರಶಂಸಿಸುವಂತೆ ಪ್ರಚೋದಿಸಿತು ಮತ್ತು ಅವನ ಬಗೆಗೆ ನನ್ನ ಪ್ರೀತಿಯನ್ನು ಮತ್ತಷ್ಟು ಗಾಢಗೊಳಿಸಿತು.

ಅವರ ಹೆಂಡತಿ ಮತ್ತು ಆಕೆಯ ಸಹೋದರಿಯರು ನನ್ನ ಬಗೆಗೆ ಎಷ್ಟೇ ಒರಟಾಗಿ ನಡೆದುಕೊಂಡರೂ, ನಾನು ಅದಕ್ಕೆ ಸ್ವಲ್ಪವೂ ಗಮನ ನೀಡದೆ ಅಲ್ಲಿಯೇ ಉಳಿಯುವೆನೆಂದು ಬಿಲ್‌ನ ತಂದೆಗೆ ನಾನು ವಚನ ಕೊಟ್ಟ ನಂತರ ಅವರು ಕೋಣೆಯಿಂದ ಹೊರಕ್ಕೆ ಹೋದರು. ನಾನು ಬಿಲ್‌ನ ತೋಳುಗಳಲ್ಲಿ ಹುದುಗಿಕೊಂಡೆ ಮತ್ತು ಹಲವು ವರ್ಷಗಳ ಹಿಂದೆ ರೂತ್ ನನಗೆ ಹೇಳಿದ್ದ ಈ ಮಾತುಗಳನ್ನು

ನೆನಪು ಮಾಡಿಕೊಂಡೆ: "ನಿನಗೆ ಸಾಧ್ಯವಾದಾಗ ಸುಖ ಸಂತೋಷವನ್ನು ಥಟ್ಟನೆ ಹಿಡಿದುಕೊ."

ಬಿಲ್‌ನ ಮನೆಗೆ ಹೋಗಿದ್ದುದರಿಂದಲೂ ಮತ್ತು ಅವನ ಕುಟುಂಬ ಜೀವನಕ್ಕೆ ಜೂಡಾಯಿಸಂ ಎಷ್ಟು ಪ್ರಧಾನವಾಗಿತ್ತೆಂದು ಕಂಡುಕೊಂಡ ನಂತರ "ಕೊಶೆರ್ ಗೃಹ"ವನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಕಲಿಯುತ್ತೇನೆಂದು ಬಿಲ್‌ಗೆ ವಚನ ನೀಡಿದೆ– ಇದು ಅವನು ಇಷ್ಟಪಟ್ಟಿದ್ದೇ ಆಗಿದ್ದಲ್ಲಿ– ಇದಕ್ಕೆ ಪ್ರತಿಯಾಗಿ ಅವನು ನಮ್ಮ ಮಕ್ಕಳಲ್ಲಿ ನನ್ನ ಸಮರ್ಥ ಯೆಹೂದಿ ಅನನ್ಯತೆಯನ್ನು ಮುಂದುವರೆಸಬೇಕೆಂದು ನಾನು ಇಚ್ಛಿಸಿದೆ. ನನ್ನ ಈ ಕೋರಿಕೆಯಿಂದ ಬಿಲ್ ಗೊಂದಲಕ್ಕೊಳಗಾದವನಂತೆ ಕಂಡುಬಂದ. ಆದ್ದರಿಂದ ನಾನು ನನ್ನ ಶಾಲೆಯಲ್ಲಿನ ಅನುಭವವನ್ನು ವಿವರಿಸಿದೆ: ನನಗೆ ಏನೂ ತಿಳಿದಿರದಿದ್ದ ಕೆಲವು ವಿಷಯಗಳ ಬಗೆಗೆ ನಾನು ಹೇಗೆ ಕಿರುಕುಳಕ್ಕೆ ಒಳಗಾಗುತ್ತಿದ್ದೇನೆಂದು ವಿವರಿಸಿದೆ. ಇಂತಹ ಅನುಭವ ನನ್ನ ಮಕ್ಕಳಿಗೆ ಆಗಬಾರದು ಎಂಬುದನ್ನು ನಾನು ಖಚಿತಮಾಡಿಕೊಳ್ಳಬಯಸಿದೆ; ಮತ್ತು ನನ್ನ ಮನಸ್ಸಿನಲ್ಲಿ ಶಕ್ತವಾದ ಯೆಹೂದೀ ಅನನ್ಯತೆಯನ್ನು ಬೆಳೆಸಿಕೊಳ್ಳುವುದೊಂದೇ ಅದನ್ನು ತಡೆಯಲು ದಾರಿ ಎಂದೂ ಯೋಚಿಸಿದೆ. ನಾನು ಈ ರೀತಿ ಹೇಳುವುದನ್ನು ಕೇಳಿದಾಗ ಬಿಲ್ ಖಂಡಿತವಾಗಿಯೂ ಪ್ರಸನ್ನನಾಗಿದ್ದ.

ಬೆಲ್‌ಫಾಸ್ಟ್‌ನಿಂದ ನಾವು ಹಿಂದಿರುಗಿ ಬಂದ ಕೂಡಲೇ, ಬಿಲ್ ಬಳಿಯಾಗಲಿ, ನನ್ನ ಬಳಿಯಾಗಲೀ ಹೆಚ್ಚು ಹಣವಿರಲಿಲ್ಲವೆಂದು ಅರಿತ ಅಮ್ಮ, ಬಿಲ್ ನಮ್ಮ ಮನೆಯಲ್ಲಿಯೇ ಬಾಡಿಗೆದಾರನಾಗಿ ವಾಸಮಾಡಬಹುದೆಂದು ಸೂಚಿಸಿದಳು. ಈ ಸೂಚನೆಯಿಂದ ನಮಗೆ ಅತ್ಯಂತ ಹರ್ಷವಾಯಿತು. ಏಕೆಂದರೆ ಈ ವ್ಯವಸ್ಥೆಯಿಂದಾಗಿ ನಾವು ಹೆಚ್ಚು ಕಾಲ ಜೊತೆಯಲ್ಲಿ ಇರಬಹುದಾಗಿತ್ತು. ನಮ್ಮ ಆರ್ಥಿಕ ಸ್ಥಿತಿಗತಿಯನ್ನು ಪರಿಶೀಲಿಸಿ, ನಮ್ಮಿಬ್ಬರ ಉಳಿತಾಯದ ಹಣವನ್ನೂ ಸೇರಿಸಿ, ಬ್ಯಾಂಕಿನಲ್ಲಿ ಒಂದು ಜಂಟಿ ಖಾತೆಯನ್ನು ತೆರೆಯಲು ನಿರ್ಧರಿಸಿದೆವು. ನಾವು ಮೊಟ್ಟಮೊದಲನೆಯ ಬಾರಿ ಖರೀದಿಸಿದ ವಸ್ತು ಸಣ್ಣದಾದ ಕರಿಯ ಕಾರು. ನಾವು ಅದಕ್ಕೆ "ಪೆಟ್ರೂಷ್ಕ" ಎಂದು ಹೆಸರಿಟ್ಟೆವು. ವಾರದ ಕೊನೆಗಳಲ್ಲಿ ನಾವು ಗ್ರಾಮೀಣ ಪ್ರದೇಶಗಳನ್ನು ಶೋಧಿಸುವುದರಲ್ಲಿ ಕಳೆಯುತ್ತಿದ್ದೆವು ಮತ್ತು ಪರಸ್ಪರ ಜೊತೆಗಿರುವುದರಲ್ಲಿ ಸಂತುಷ್ಟರಾಗಿದ್ದೆವು.

ನಮ್ಮ ವಿವಾಹದ ಪೂರ್ವಸಿದ್ಧತೆಗಳು ಸ್ಪಷ್ಟ ರೂಪ ತಳೆಯತೊಡಗಿದವು. ಮ್ಯಾಂಚೆಸ್ಟರ್ ರಿಫಾರ್ಮ್‌ನ ಯಹೂದಿ ಪೂಜಾಮಂದಿರದ, ಯಹೂದಿ ಧರ್ಮಶಾಸ್ತ್ರ ಪಂಡಿತರೊಂದಿಗೆ ಈ ವಿಷಯದ ಬಗೆಗೆ ಚರ್ಚಿಸುವ ಸಲುವಾಗಿ ಅವರ ಬಳಿಗೆ ಹೋದೆವು. ಇದೆಲ್ಲವೂ ನೇರವಾಗಿರುತ್ತದೆಂದು ನಾನು ಆಲೋಚಿಸಿದ್ದೆ. ಆದರೆ, ನಾನು ಕೇವಲ ಸಿವಿಲ್ ವಿಧಾನದ ಮೂಲಕ ವಿಚ್ಛೇದನ ಪಡೆದಿದ್ದೆನೆಂದೂ,

ಯಹೂದಿ ಕಾನೂನಿನ ಪ್ರಕಾರ ವಿಚ್ಛೇದನ ಪಡೆದಿರಲಿಲ್ಲವೆಂದೂ ರಬ್ಬಿಯು ಘೋಷಿಸಿದಾಗ, ನನ್ನ ಮನಸ್ಸು ಮುದುಡಿತು ಮತ್ತು ಕೆನ್ ಬಗೆಗೆ ಇದ್ದ ಹಿಂದಿನ ದ್ವೇಷದ ಭಾವನೆಗಳು ಹಿಂತಿರುಗಿದವು. ಅವನು ನನ್ನ ಬಾಳನ್ನು ಹಾಳು ಮಾಡಿದ್ದ! ನಾನು ಅಸಹಾಯಕತೆಯಿಂದ ಬಿಲ್‌ನತ್ತ ನೋಡಿದೆ ಮತ್ತು ಕ್ಷಮೆ ಯಾಚಿಸಿದೆ. ನನ್ನ ಗತಕಾಲದ ಜೀವನದಲ್ಲಿ ಬಿಲ್‌ನನ್ನು ಎಳೆಯಲು ನಾನು ಇಷ್ಟಪಡಲಿಲ್ಲ. ನನ್ನ ದುಃಖ, ಸಂಕಷ್ಟವನ್ನು ನೋಡಿದ ಅ ಧರ್ಮಶಾಸ್ತ್ರ ಪಂಡಿತರು, ನನ್ನ ವಿವಾಹ ವಿಚ್ಛೇದನ ಪಡೆಯಲು ಪ್ರಯತ್ನಿಸುವುದಾಗಿ ತಿಳಿಸಿದರು; ಆದರೆ, ಮೊದಲಿಗೆ ನಾನು ನನ್ನ ಮಾಜಿ ಪತಿಯ ವಿಳಾಸವನ್ನು ಕೊಡಬೇಕಾಗಿದ್ದಿತು. ಅದೃಷ್ಟವಶಾತ್, ನಾನು ಪಡೆದಿದ್ದ ಅಧಿಕೃತ ವಿವಾಹ ವಿಚ್ಛೇದನದ ದಾಖಲೆಯ ಮೇಲೆ ಕೆನ್‌ನ ವಿಳಾಸವಿತ್ತು. ಕೆಲವು ಆತಂಕಪೂರ್ಣ ವಾದಗಳು ಹಿಂಬಾಲಿಸಿದವು. ಕೆನ್ ಈಗಲೂ ನನ್ನ ಬಗೆಗೆ, ಅಸಹನೆ, ಹಗೆತನಗಳನ್ನಿಟ್ಟು ಕೊಂಡಿರಬಹುದು. ಹಾಗಾಗಿ ಯಹೂದಿ ವಿಧಾನದ ವಿಚ್ಛೇದನಕ್ಕೆ ಅವನು ಸಮ್ಮತಿಸಲಾರನೆಂದು ನಾನು ಮತ್ತು ಬಿಲ್ ಆ ಅವಧಿಯಲ್ಲಿ ಹೆದರಿದ್ದೆವು.

ಆದರೆ ಕೆನ್‌ನಿಂದ ತಾನು ವಿಚ್ಛೇದನದ ಘೋಷಣೆಯನ್ನು ಪಡೆದಿರುವುದಾಗಿಯೂ ಯಹೂದಿ ಕಾನೂನಿನ ಪ್ರಕಾರ ವಿಚ್ಛೇದನವನ್ನು ಸಮ್ಮತಿಸಲಾಗಿದೆಯೆಂದೂ ಯಹೂದಿ ಧರ್ಮಪಂಡಿತರು ನಮಗೆ ತಿಳಿಸಿದಾಗ ನಾವು ಸಮಾಧಾನಗೊಂಡೆವು ಮತ್ತು ಉತ್ಸಾಹದಿಂದ ಮದುವೆಯ ಸಿದ್ಧತೆಗಳನ್ನು ಮಾಡತೊಡಗಿದೆವು. ನಮ್ಮ ಹಣಕಾಸಿನ ಪರಿಮಿತಿಯನ್ನೂ ಮತ್ತು ಬಿಲ್‌ನ ತಾಯಿ ಮತ್ತು ಆಕೆಯ ಸೋದರಿಯರಿಂದ ಉಂಟಾಗಬಹುದಾದ ತೊಂದರೆಯನ್ನೂ ಧರ್ಮ ಪಂಡಿತರಿಗೆ ವಿವರಿಸಿದೆವು. ಅವರು ನಮ್ಮ ಸಹೋದ್ಯೋಗಿಗಳಿಗೆ ಮತ್ತು ಸ್ನೇಹಿತರಿಗೆ ಯಹೂದಿ ಪೂಜಾ ಮಂದಿರದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸುವಂತೆಯೂ ಮತ್ತು ನಂತರ ಕುಟುಂಬದ ಸದಸ್ಯರಿಗಾಗಿ ಮನೆಯಲ್ಲಿ ಕೊಶರ್ ಭೋಜನ ಕೂಟವನ್ನು ವ್ಯವಸ್ಥೆ ಮಾಡುವಂತೆ ಸಲಹೆ ನೀಡಿದರು. ಪೂಜಾಮಂದಿರದ ಸತ್ಕಾರ ಕೂಟಕ್ಕೆ ಆಹಾರ ಒದಗಿಸಲು ನೆರವು ನೀಡುವಂತೆ ಸ್ನೇಹಿತರನ್ನು ಹೊಂದಿಸಿದೆವು. ಆದರೆ, ಮನೆಯಲ್ಲಿನ ಕೊಶರ್ ಭೋಜನದ ವ್ಯವಸ್ಥೆಗೆ, ನಮ್ಮ ಸಾಮರ್ಥ್ಯದ ಪರಿಮಿತಿಯಲ್ಲಿ ಕೊಶರ್ ಆಹಾರ ಒದಗಿಸುವವನನ್ನು ಹುಡುಕಬೇಕಾಗಿತ್ತು ಮತ್ತು ಇದು ಸುಲಭ ಕಾರ್ಯವಾಗಿರಲಿಲ್ಲ. ಆಹ್ವಾನ ಪತ್ರಿಕೆಗಳನ್ನು ನಮ್ಮ ಎಲ್ಲ ಸ್ನೇಹಿತರಿಗೂ ಕುಟುಂಬ ವರ್ಗದವರಿಗೂ ಕಳಿಸಿದೆವು ಮತ್ತು ನಾನು ಕಳಿಸಬೇಕಾಗಿದ್ದ ಪಟ್ಟಿಯು ಎಷ್ಟು ಚಿಕ್ಕದಿತ್ತು ಎಂದು ವಿಷಾದಿಸಿದೆವು ಕೂಡ. ನನ್ನ ಬಂಧುವರ್ಗದಲ್ಲಿ ತೀರಾ ಕಡಿಮೆ ಜನ ಬದುಕುಳಿದಿದ್ದರು; ಈ ಸ್ಥಿತಿಗೆ ಹಿಟ್ಲರನು ಬಹಳಷ್ಟು ಉತ್ತರಿಸಬೇಕಾಗಿತ್ತು. ಬಿಲ್‌ನ ಕುಟುಂಬವರ್ಗದವರಾದರೂ

ಬರುತ್ತಾರೆ ಎಂದು ನಾನು ಆಲೋಚಿಸಿದೆ. ಬಿಲ್‌ನ ತಂದೆಯ ಕಡೆಯವರಿಂದ ನಾವು ಆನಂದದಾಯಕವಾದ, ಚೆಲುವಾದ ಉತ್ತರಗಳನ್ನು ಪಡೆದೆವಾದರೂ ಬಿಲ್‌ನ ತಾಯಿಯ ಕಡೆಯಿಂದ ಒಂದೇ ಒಂದು ಉತ್ತರವನ್ನೂ ನಾವು ಪಡೆಯಲಿಲ್ಲ. ನಿಜವಾಗಿಯೂ ನನ್ನ ಮನಸ್ಸಿಗೆ ಆಘಾತವಾಯಿತು. ನಮ್ಮ ವಿವಾಹವನ್ನೇ ಬಹಿಷ್ಕರಿಸುವಷ್ಟು ದೂರಕ್ಕೆ ಅವರು ಹೋಗಬಹುದು ಎಂಬುದನ್ನು ನನಗೆ ನಂಬುವುದಕ್ಕೆ ಸಾಧ್ಯವಿರಲಿಲ್ಲ.

೧೯೫೭ನೇ ಇಸವಿ, ಆಗಸ್ಟ್ ತಿಂಗಳ ೧೬ನೇ ತಾರೀಖು ಮದುವೆ ನಡೆಯಿತು. ಬಿಲ್‌ನ ತಂದೆತಾಯಿ ಹಿಂದಿನ ದಿನ ವಿಮಾನದ ಮೂಲಕ ಬಂದಿದ್ದರು. ನಾನು ಹಿಂದಿನ ಬಾರಿ ನೋಡಿದ್ದುದಕ್ಕಿಂತಲೂ ಈಗ, ಬಿಲ್‌ನ ತಾಯಿಯು ಮೃದುಗೊಂಡಿರ ಬಹುದೆಂಬ ಭರವಸೆ ತಾಳಿದ್ದೆ. ಆದರೆ ನಾನು ಅದಕ್ಕಿಂತಲೂ ಹೆಚ್ಚು ತಪ್ಪಾಗಿ ಯೋಚಿಸಲು ಸಾಧ್ಯವಿರಲಿಲ್ಲ. ನನ್ನೊಡನೆಯಾಗಲಿ, ನನ್ನ ತಂದೆ ತಾಯಿ ಯೊಡನೆಯಾಗಲಿ, ಮಾತನಾಡಲು ಅವರು ನಿರಾಕರಿಸಿದರು ಮತ್ತು ಮದುವೆಯ ಚಪ್ಪರದಡಿಯಲ್ಲಿ ಅವರು ನನ್ನನ್ನು ಚುಂಬಿಸಬೇಕಾದ ವಿಧಿಯಿದ್ದಾಗ ಕೂಡ, ಅವರು ನನ್ನ ಕಡೆ ನೋಡಲು ಕೂಡ ನಿರಾಕರಿಸಿಬಿಟ್ಟರು. ಅವರ ಈ ನಡತೆಗಾಗಿ ನಾನು ಎಂದಿಗೂ ಅವರನ್ನು ಕ್ಷಮಿಸಲಿಲ್ಲ. ಈ ಕಟ್ಟಕಡೆಯ ಮುಖಭಂಗದ ನಂತರ ನಾನು ಅವರನ್ನು ನಿರ್ಲಕ್ಷಿಸಲು ನಿರ್ಧರಿಸಿದೆ ಮತ್ತು ನನ್ನ ಬದುಕಿನ ಅತ್ಯಂತ ಸಂತೋಷದ ದಿನ ಎನಿಸಿದ್ದ ಆ ದಿನದ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಿದೆ. ವಿಧ್ಯುಕ್ತ ಸಮಾರಂಭವೆಲ್ಲಾ ಮುಗಿದ ನಂತರ ನಮ್ಮ ಸತ್ಕಾರ ಕೂಟ(Reception)ಕ್ಕಾಗಿ, ನಾವು ಯಹೂದಿ ಪೂಜಾ ಮಂದಿರದಲ್ಲಿ ಒಟ್ಟುಗೂಡಿದೆವು. ಅಲ್ಲಿ ನಮ್ಮ ಸ್ನೇಹಿತರು ಮತ್ತು ಸಹೋದ್ಯೋಗಿಗಳು, ನಮ್ಮ ಬಗೆಗೆ ಅತ್ಯಂತ ಸಡಗರಪಟ್ಟರು ಮತ್ತು ನಮ್ಮ ಪಾಡಿಗೆ ನಾವು ಸಂತೋಷವನ್ನು ಅನುಭವಿಸುವಂತೆ ನೋಡಿಕೊಂಡರು. ಅವರು ಅಗಣಿತ ಭಾಷಣಗಳನ್ನು ಮಾಡಿದರು. ಅವುಗಳಲ್ಲಿ ಅನೇಕ ಭಾಷಣಗಳು ಉಲ್ಲಾಸಪೂರ್ಣವೂ, ನಕ್ಕು ನಗಿಸುವಂತಹವೂ ಆಗಿದ್ದವು. ನಂತರ ಬಿಲ್ ಅತ್ಯಂತ ಹೃದಯಸ್ಪರ್ಶಿಯಾಗಿ ಮಾತನಾಡಿದ ಮತ್ತು ನಾನು ಯೋಗ್ಯವಾದ ಆಯ್ಕೆಯನ್ನು ಮಾಡಿದ್ದೆನೆಂದು ಅರಿತೆ. ಹೊರಗಡೆ ಮೆಟ್ಟಿಲ ಮೇಲೆ ಛಾಯಾಚಿತ್ರಕ್ಕಾಗಿ ಒಟ್ಟುಗೂಡಿದ್ದೆವು. ಸುತ್ತಲೂ ಒಮ್ಮೆ ನೋಡಿದಾಗ ನನಗೆ ನಗದಿರಲು ಸಾಧ್ಯವಾಗಲಿಲ್ಲ. ತಮ್ಮ ಟ್ರಿಲ್‌ಬೀ ಹ್ಯಾಟ್‌ಗಳಲ್ಲಿ (ಕಿರಿದಾದ ಅಂಚುಳ್ಳ ಮತ್ತು ಮೇಲೊಂದು ಲಾಂಛನವುಳ್ಳ ಮೃದುವಾದ ಫೆಲ್ಟ್ ಹ್ಯಾಟ್‌ಗಳು), ಗ್ಯಾಂಗ್‌ಸ್ಟರ್ ಚಲನಚಿತ್ರದಲ್ಲಿನ ಎಕ್ಸ್ಟ್ರಾಗಳಂತೆ ಕಾಣಿಸುತ್ತಿದ್ದರು. ನಮ್ಮ ಯಾವ ಸ್ನೇಹಿತರೂ ಯಹೂದಿಗಳಾಗಿರಲಿಲ್ಲವಾಗಿ ಅವರ್‍ಯಾರೂ ಸಾಂಪ್ರದಾಯಿಕವಾದ 'ಯಕ್ ಯುಲೆಕ್ಸ್' (skull caps) ಅನ್ನು ಧರಿಸಿರಲಿಲ್ಲ. ಆದ್ದರಿಂದ, ತಮಗೆ ಏನೇನು ಸಿಗುತ್ತದೋ ಅದನ್ನು ಹುಡುಕಿ ತಂದಿದ್ದರು. ಏಕೆಂದರೆ

ಯೆಹೂದಿ ಪೂಜಾ ಮಂದಿರದಲ್ಲಿರುವಾಗ ಪುರುಷರು ತಮ್ಮ ತಲೆಗಳನ್ನು ಮುಚ್ಚಿಕೊಂಡಿರಬೇಕೆಂಬುದು ಯೆಹೂದಿ ನಿಯಮವೆಂಬುದು ಅವರಿಗೆ ತಿಳಿದಿತ್ತು.

ಈ ಸತ್ಕಾರ ಕೂಟಕ್ಕೆ ಹೋಲಿಸಿದರೆ, ಕುಟುಂಬ ವರ್ಗದವರ ಕೊಶರ್ ಭೋಜನಕೂಟವು ಗಂಭೀರ ಹಾಗೂ ಉದ್ವೇಗರಹಿತವಾದದ್ದಾಗಿದ್ದು, ನನ್ನನ್ನು ದಢಾರನೆ ವಾಸ್ತವದ ನೆಲೆಗೆ ತಂದಿತು. ನನ್ನ ಅತ್ತೆಯವರ ತಾಟಸ್ಥ್ಯ ಮತ್ತು ಔದಾಸೀನ್ಯಗಳು ನಾನು ಅವರಿಗೆ ಕೃತಜ್ಞಳಾಗಿರುವಂತೆ ಮಾಡಿತು. ಏಕೆಂದರೆ, ಅವರ ಕುಟುಂಬ ವರ್ಗದ ಉಳಿದವರೆಲ್ಲರೂ ಈ ಕೂಟಕ್ಕೆ ಬರಲು ನಿರಾಕರಿಸಿದ್ದರು. ನನ್ನ ಸಂತೋಷಕ್ಕೆ ಅವರು ಅಡ್ಡಿಬರಲು ಎಡೆಗೊಡುವುದಿಲ್ಲವೆಂದು ನಾನು ನನ್ನ ಮನಸ್ಸಿನಲ್ಲಿಯೇ ಪ್ರತಿಜ್ಞೆ ಮಾಡಿದೆ ಮತ್ತು ಅವರ ಸಮ್ಮತಿಯನ್ನು ಗಳಿಸಲು ಏನು ಮಾಡಬೇಕು ಎಂಬುದರ ಬಗೆಗೆ ನಂತರ ಆಲೋಚಿಸುವುದೆಂದು ನಿರ್ಧರಿಸಿದೆ. ಉಳಿದ ಇಡೀ ದಿನವೂ ನಾನು ಅವರ ಅಸಮ್ಮತಿಯ ನೋಟಗಳನ್ನು ಅಲಕ್ಷಿಸಿದೆ ಮತ್ತು ನನಗೆ ಎಷ್ಟು ನೋವಾಗಿದೆ ಎಂಬುದನ್ನು ತೋರ್ಪಡಿಸಿಕೊಳ್ಳದಿರಲು ಪ್ರಯತ್ನಿಸಿದೆ. ಅದೃಷ್ಟವಶಾತ್ ನಾವು ಬೆಲ್‌ಫಾಸ್ಟ್‌ನಲ್ಲಿ ನೆಲೆನಿಲ್ಲುವ ಬಗೆಗೆ ಯಾವುದೇ ಯೋಜನೆಗಳನ್ನು ಹಾಕಿಕೊಂಡಿರಲಿಲ್ಲವಾಗಿ ನಾನು ಅವರನ್ನು ಪದೇ ಪದೇ ನೋಡುವ ಅಗತ್ಯವಿರಲಿಲ್ಲ.

ನಮ್ಮ ಪುಟ್ಟ ಕಾರಿನಲ್ಲಿ ಡೆವಾನ್ ಮತ್ತು ಕಾರ್ನ್‌ವಾಲ್‌ಗಳಲ್ಲಿ ಪ್ರವಾಸ ಮಾಡುತ್ತಾ ನಮ್ಮ ಮಧುಚಂದ್ರ ಕಳೆಯಿತು. ಸೂರ್ಯ ಪ್ರಕಾಶಿಸಿ ಹೊಳೆಯುತ್ತಿದ್ದ ಮತ್ತು ಆಕಾಶ ನೀಲಿಯಾಗಿತ್ತು. ನಾನು ಇಷ್ಟೊಂದು ಸಂತೋಷವಾಗಿರುತ್ತೇನೆಂದು ಎಂದೂ ಕನಸು ಕಂಡಿರಲಿಲ್ಲ. ತಾನು ನನ್ನನ್ನು ಎಷ್ಟೊಂದು ಪ್ರೀತಿಸುತ್ತಾನೆಂದು ಬಿಲ್ ಕೇವಲ ಹೇಳಿದ್ದಲ್ಲದೆ, ಅನೇಕ, ವಿಭಿನ್ನ ರೀತಿಗಳಲ್ಲಿ ಅದನ್ನು ಪ್ರದರ್ಶಿಸಿ ವ್ಯಕ್ತಪಡಿಸಿದ ಕೂಡ. ಸೂಕ್ತವಾದ ಷೇಕ್ಸ್‌ಪಿಯರ್‌ನ ಉದ್ಧರಣಗಳನ್ನು, ಅರ್ಪಣೆಯಂತೆ ಇಟ್ಟಿದ್ದ ಪುಸ್ತಕದೊಡನೆ ಮನೆಗೆ ಬರುತ್ತಿದ್ದ ಅಥವಾ ಕೆಂಪು ಗುಲಾಬಿಗಳ ದೊಡ್ಡ ಗೊಂಚಲನ್ನು ನನಗೆ ಕೊಡುಗೆಯಾಗಿ ನೀಡುತ್ತಿದ್ದ ಅಥವಾ ತಾನು ಎಚ್ಚರಿಕೆಯಿಂದ ನನಗಾಗಿ ಆಯ್ಕೆ ಮಾಡಿದ್ದ ಯಾವುದೋ ಒಂದು ಸಣ್ಣ ಥಳಕು ಆಭರಣವೊಂದನ್ನು ತಂದುಕೊಡುತ್ತಿದ್ದ. ಬಿಲ್‌ನಂತಹ ಅಸಾಧಾರಣ ಬುದ್ಧಿಮತ್ತೆಯುಳ್ಳ ವ್ಯಕ್ತಿಯಲ್ಲಿ, ಇಂತಹ ಪರರ ಬಗೆಗೆ ಆಲೋಚಿಸುವ ಚಿಂತನಾಪರತೆ ನನಗೆ ತೀರಾ ಅಸಾಮಾನ್ಯ, ಅನನ್ಯವೆನಿಸಿತ್ತು. ಜೀವನಕ್ಕೆ ಹೊಸದೊಂದು ಉದ್ದೇಶವಿತ್ತು ಮತ್ತು ಅದನ್ನು ಹಂಚಿಕೊಳ್ಳಲು, ನಾನು ಪ್ರಗಾಢವಾಗಿ ಪ್ರೀತಿಸಿದ ವ್ಯಕ್ತಿ ನನ್ನ ಬಳಿ ಇದ್ದ.

* * * *

# ೧೨. ಮನಸುಗಳ ಮದುವೆ

ಮ್ಯಾಂಚೆಸ್ಟರ್‌ಗೆ ಹಿಂತಿರುಗಿದ ನಂತರ ನಾನು ಮತ್ತು ಬಿಲ್ ವಿಶ್ವವಿದ್ಯಾಲಯಕ್ಕೆ ದೂರವಿರದಿದ್ದ ಸಣ್ಣದೊಂದು ಬಾಡಿಗೆಯ ಫ್ಲಾಟಿನಲ್ಲಿ ನಮ್ಮ ವಾಸ್ತವ್ಯ ಹೂಡಿದೆವು. ನಮ್ಮ ಹೊಸ ಮನೆಗಾಗಿ, ಒಮ್ಮೆ ಉಪಯೋಗಿಸಿ ಮಾರಾಕ್ಕಿಟ್ಟಿರುವ ವಸ್ತುಗಳನ್ನು ಹುಡುಕುತ್ತಾ, ಚೌಕಾಸಿ ಮಾಡುತ್ತಾ, ಒಟ್ಟಿಗೇ ಅಲೆದಾಡುವುದನ್ನು ನಾವು ಪ್ರೀತಿಸುತ್ತಿದ್ದೆವು. ನನ್ನ ತಂದೆತಾಯಿ ಏನೋ ನಾವು ಅವರ ಜೊತೆಯಲ್ಲಿಯೇ ಇರುವಂತೆ ಇಷ್ಟಪಟ್ಟರು. ಆದರೆ ನಾವು ಆದಷ್ಟೂ ನಯವಾಗಿ, ನಾವು ನಮ್ಮ ವೈವಾಹಿಕ ಜೀವನವನ್ನು ಜೊತೆಯಲ್ಲಿ, ನಮ್ಮ ಪಾಡಿಗೆ ನಾವೇ ಆರಂಭಿಸಲು ಇಷ್ಟಪಡುತ್ತೇವೆಂದು ಅವರಿಗೆ ತಿಳಿಸಿದ್ದೆವು. ನಾನು ನನ್ನ ವಚನವನ್ನು ಉಳಿಸಿಕೊಂಡೆ ಮತ್ತು ಹೇಗೆ ಮಾಡಬೇಕು ಎಂಬುದನ್ನು ಓದಿ ತಿಳಿದುಕೊಂಡು ಕೊಶರ್ ಭೋಜನ ಗೃಹವನ್ನು ಅಣಿಗೊಳಿಸಿದೆ. ಹಾಲು ಮತ್ತು ಮಾಂಸಗಳನ್ನು ಬೇರೆಬೇರೆಯಾಗಿ ಇಡುವುದನ್ನು ಅಭ್ಯಾಸ ಮಾಡಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು. ನಿಜವಾಗಿ ನಾನು ಈ ತತ್ತ್ವವನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಇದು ಬಿಲ್‌ನ ದೃಷ್ಟಿಯಲ್ಲಿ ಮುಖ್ಯವಾಗಿತ್ತು. ಆದ್ದರಿಂದ ನಾನು ಈ ಅನಾನುಕೂಲತೆಯನ್ನು ಸಹಿಸಿಕೊಂಡೆ.

ಜೀವನದಲ್ಲಿ ಪತ್ನಿಯಾಗಿ ಹೊಂದಿಕೊಳ್ಳುತ್ತಿರುವುದರೊಂದಿಗೇ, ನಾನು ನನ್ನ ಪಿಎಚ್.ಡಿ. ಮಹಾಪ್ರಬಂಧವನ್ನು ಸಂಪೂರ್ಣಗೊಳಿಸಲೂ ಪ್ರಯತ್ನಿಸುತ್ತಿದ್ದೆ. ಇದು ನನ್ನನ್ನು ಅಗಾಧ ಪ್ರಮಾಣದ ಒತ್ತಡಕ್ಕೆಡೆಮಾಡಿತು. ಬಿಲ್ ನನ್ನ ಬಳಿಯಿರುವುದು ಒಂದು ಚೈತನ್ಯದಾಯಕ ಶಕ್ತಿಯಂತಿದ್ದು, ನಾನು ಅನುಭವಿಸುತ್ತಿದ್ದ ಎಲ್ಲವನ್ನೂ ಸಹಾನೂಭೂತಿಯಿಂದ ಕಾಣುತ್ತಿದ್ದುದಲ್ಲದೇ ನಾನು ಎದುರಿಸುತ್ತಿದ್ದ ಎಲ್ಲ ಸಮಸ್ಯೆಗಳನ್ನೂ ನನ್ನೊಡನೆ ಚರ್ಚಿಸಿ, ಸಲಹೆಗಳನ್ನು ನೀಡಲು ಅವನು ಯಾವಾಗಲೂ ಸಿದ್ಧವಿರುತ್ತಿದ್ದ. ಕೇವಲ ನನ್ನ ವೈಯಕ್ತಿಕ ಜೀವನವನ್ನು ಮಾತ್ರವಲ್ಲ, ನನ್ನ ವೃತ್ತಿ ಜೀವನವನ್ನೂ ಸಹ ಹಂಚಿಕೊಳ್ಳಬಹುದಾಗಿದ್ದ ಇಂತಹ ಪತಿಯನ್ನು ಪಡೆದಿದ್ದಕ್ಕಾಗಿ ನಾನು ಬಹಳ ಅದೃಷ್ಟವಂತೆ ಎನಿಸಿತ್ತು ನನಗೆ. ನನ್ನ ಪಿಎಚ್.ಡಿ. ಪ್ರಬಂಧವನ್ನು ಒಪ್ಪಿಸುವ ಮುಂಚಿನ ಕೆಲವು ವಾರಗಳಂತೂ ಭಯಂಕರವೆನಿಸುತ್ತಿತ್ತು. ಮಹಾಪ್ರಬಂಧವು ಸಾಕಷ್ಟು ಉತ್ತಮವಾಗಿಲ್ಲವೆಂಬ ನಿಶ್ಚಿತ ಅಭಿಪ್ರಾಯದಿಂದಾಗಿ, ನನಗೆ ನಿದ್ರೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ನನಗೆ ಮನಸ್ಸನ್ನು ಏಕಾಗ್ರಗೊಳಿಸಲು

ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ, ಒಲೆಯ ಮೇಲಿಟ್ಟು ನೋಡಲು ಮರೆತು ಸುಟ್ಟು ಕರಕಲಾಗಿದ್ದ ಬಾಣಲೆ ಪಾತ್ರೆಯನ್ನು, ಸತತ ಉಜ್ಜುತ್ತಿದ್ದೆ.

ವಿದ್ವಾಂಸಳಾಗಿಯಲ್ಲದೇ, ಪತ್ನಿಯಾಗಿಯೂ ನಾನು ಸಂಪೂರ್ಣವಾಗಿ ಅಪರಿಪೂರ್ಣಳು ಎಂದು ಭಾವಿಸಿದೆ. ನನ್ನ ಆತ್ಮವಿಶ್ವಾಸವನ್ನು ಮತ್ತೆ ಗಳಿಸಿಕೊಳ್ಳಲು, ಬಿಲ್ ತನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸಿದ. ನಾನು ಅರ್ಥಶಾಸ್ತ್ರದ ಅಧ್ಯಯನ ಮತ್ತು ಸಾಮಾಜಿಕ ಮಾನವ ವಿಜ್ಞಾನ ಎರಡನ್ನೂ ಸೇರಿಸಿ ಅಧ್ಯಯನ ಮಾಡುತ್ತಿರುವುದರಿಂದಾಗಿ, ಹೊಸದೊಂದು ವಿಷಯವನ್ನು ಮಂಡಿಸುತ್ತಿರುವು ದಾಗಿಯೂ, ಅವನು ನನ್ನ ಯಶಸ್ಸಿನ ಬಗೆಗೆ ಸಂಪೂರ್ಣ ಭರವಸೆ ಹೊಂದಿರುವು ದಾಗಿಯೂ ತಿಳಿಸಿದ. ಇಂತಹ ಮಾತುಗಳನ್ನು ಕೇಳುವುದು ನನಗೆ ಅಗತ್ಯವಾಗಿದ್ದಿತು. ಆದರೂ ನಾನು ನಿರಾಶಳಾಗಿದ್ದೆ. ವಿಷಣ್ಣಳಾಗಿದ್ದೆ ಮತ್ತು ಬಿಲ್‌ನ ಸತತ ಪ್ರೋತ್ಸಾಹವಿರದಿದ್ದರೆ, ನಾನು ಎಲ್ಲವನ್ನೂ ಬಿಟ್ಟುಬಿಡುತ್ತಿದ್ದೆನೆನಿಸುತ್ತದೆ. ನನ್ನ ಸಂಶೋಧನೆಯ, ಆಧಾರ ಮತ್ತು ಮೂಲವನ್ನೇ ನಾನು ಪ್ರಶ್ನಿಸತೊಡಗಿದ್ದೆ. ಬಿಲ್‌ನೊಡನೆ ನಾನು ನಡೆಸುತ್ತಿದ್ದ ಅಸಂಖ್ಯ ಚರ್ಚೆಗಳು ಅವನ ಉತ್ಕೃಷ್ಟ ಮತ್ತು ಉಜ್ವಲ ಮನಸ್ಸನ್ನು ತೆರೆದಿಟ್ಟು, ನನ್ನಲ್ಲಿ ಒಂದು ರೀತಿಯ ಭಯವನ್ನುಂಟುಮಾಡಿ, ಅಂತಹ ಮನಸ್ಸಿನೊಂದಿಗೆ ತುಲನೆ ಮಾಡಿಕೊಂಡಾಗ ನನ್ನಲ್ಲಿ ಒಂದು ರೀತಿಯ ಅಜ್ಞಾನದ ಭಾವನೆ ಉಂಟಾಗುತ್ತಿತ್ತು. ಅವನ ಅಧ್ಯಯನ ಅತ್ಯಂತ ವ್ಯಾಪ್ತವಾಗಿದ್ದು, ಅವನಿಗೆ ವಿಶ್ವಕೋಶದಂತಹ ಮನಸ್ಸಿದೆ ಎನಿಸುತ್ತಿತ್ತು. ಅದಕ್ಕೆ ಪ್ರತಿಯಾಗಿ ನನ್ನ ಪರಿಸ್ಥಿತಿಯು ನನ್ನನ್ನು ಕೆಲವು ಸಂಗತಿಗಳ ಬಗೆಗೆ ಮಾತ್ರ ಕೇಂದ್ರೀಕರಿಸಿದ ದೃಷ್ಟಿಯುಳ್ಳ ಓದುಗಳನ್ನಾಗಿ ಮಾಡಿತ್ತು. ಹಾಗಾಗಿ ನನ್ನ ವಿಶ್ವವಿದ್ಯಾಲಯದ ಅಧ್ಯಯನದ ಅವಧಿ ಪೂರ್ತಿ ನನಗೆ ಬೇಕಾದ ಕನಿಷ್ಠ ಮಿತಿಯಷ್ಟನ್ನು ಮಾತ್ರವೇ ನಾನು ಓದಿದ್ದೆ. ನನ್ನ ನಿರಾಶ್ರಿತಳ ಅನುಭವವು, ದಿನನಿತ್ಯದ ವ್ಯಾವಹಾರಿಕ ಸಮಸ್ಯೆಗಳ ನಿರ್ವಹಣೆಯಲ್ಲಿ ಆತ್ಮವಿಶ್ವಾಸವನ್ನು ತಂದುಕೊಟ್ಟಿತ್ತು. ಆದರೆ, ವ್ಯಾಪಕವಾಗಿ ಅಧ್ಯಯನ ಮಾಡಲು, ನನ್ನ ಮನಸ್ಸನ್ನು ವಿಸ್ತಾರಗೊಳಿಸಲು ಬೇಕಾಗುವ ಕಾಲವನ್ನು ದೋಚಿಕೊಂಡಿತ್ತು. ನಾನೊಂದು ಪೇಚಿನಲ್ಲಿ ಸಿಕ್ಕಿದ್ದೆ. ನಾನೇನಾದರೂ ಈ ಮಹಾಪ್ರಬಂಧವನ್ನು ಒಪ್ಪಿಸಿದರೆ ನಾನು ಅನುತ್ತೀರ್ಣಳಾಗುತ್ತೇನೆ ಮತ್ತು ಬಿಲ್ ನನ್ನನ್ನು ಪ್ರೀತಿಸುವುದನ್ನು ನಿಲ್ಲಿಸಿಬಿಡುತ್ತಾನೆ. ಅಲ್ಲದೆ, ನಾನೇನಾದರೂ ಈ ಪ್ರಬಂಧವನ್ನು ಒಪ್ಪಿಸದೇ ಹೋದರೆ, ಬಿಲ್ ನನ್ನ ಬಗೆಗೆ ಅವನಿಗಿರುವ ಗೌರವವನ್ನೂ ಕಳೆದುಕೊಳ್ಳುತ್ತಾನೆ ಮತ್ತು ನನ್ನನ್ನು ಪ್ರೀತಿಸುವುದನ್ನೂ ನಿಲ್ಲಿಸಿಬಿಡುತ್ತಾನೆ. ಬಿಲ್, ಇನ್ನು ನನಗೆ ಸಹಾಯ ಮಾಡಲು ಸಾಧ್ಯವಿರಲಿಲ್ಲ. ರಾತ್ರಿಯಿಡೀ ನಿದ್ರೆಯಿರದೆ ಅತ್ತಿಂದಿತ್ತ ತಿರುಗುತ್ತಾ, ಹೊರಳುತ್ತಾ ಇರುವುದನ್ನು ಸುಮ್ಮನೆ ನೋಡುವುದುದನ್ನುಳಿದು, ನಮ್ಮಲ್ಲಿ ಪರಸ್ಪರರ ಬಗ್ಗೆ ಇದ್ದ ಕೇವಲ ಪ್ರೀತಿ, ಗೌರವಗಳು, ಆ ಅವಧಿಯ ಒತ್ತಡ, ಸಂಕಷ್ಟಗಳನ್ನು

ಹಾದುಬರಲು ನೆರವಾದವು.

ದೀರ್ಘಕಾಲ ಸೂಕ್ಷ್ಮ ಪರಿಶೀಲನೆಯ ನಂತರ, ಕಡೆಗೆ ಮಹಾಪ್ರಬಂಧವನ್ನು ಸಂಪೂರ್ಣಗೊಳಿಸಿದೆ ಮತ್ತು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದೆ. ಮ್ಯಾಂಚೆಸ್ಟರ್ ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರದ ಪ್ರೊಫೆಸರ್ ಆದ ಡಾ॥ ಎಲಿ ಡೆವಾನ್ಸ್ ಅವರು ಆಂತರಿಕ ಪರೀಕ್ಷಕರಾಗಿಯೂ ಮತ್ತು ಪ್ರೊಫೆಸರ್ ರೇಮಂಡ್ ಫರ್ಕ್ ಅವರು ಬಾಹ್ಯ ಪರೀಕ್ಷಕರಾಗಿಯೂ ಇರುವಂತೆ ಮ್ಯಾಕ್ಸ್ ವ್ಯವಸ್ಥೆ ಮಾಡಿದ. ನನ್ನ ಮೌಖಿಕ ಪರೀಕ್ಷೆಯ ದಿನ ಸಮೀಪಿಸಿದಂತೆ, ನಾನು ಹೆಚ್ಚು ಅಧೀರಳಾದೆ. ತನ್ನ ಸೌಮ್ಯವಾದ, ತಾಳ್ಮೆಯ ರೀತಿಯಲ್ಲಿ ನನ್ನಲ್ಲಿ ಮತ್ತೆ ಮತ್ತೆ ಭರವಸೆ ತುಂಬುವುದನ್ನು ಮುಂದುವರೆಸಿದ. ಅವನಿರದಿದ್ದರೆ ನಾನು ಖಂಡಿತವಾಗಿಯೂ ಯಶಸ್ವಿಯಾಗಿ ಹೊರಬರುತ್ತಿರಲಿಲ್ಲ ವೆಂದು ನಾನು ನಿಜವಾಗಿ ನಂಬುತ್ತೇನೆ. ನನ್ನ ಪರೀಕ್ಷೆಯ ದಿನ ಬಿಲ್ ನನ್ನ ಜೊತೆಗೇ ಪರೀಕ್ಷಾ ಕೊಠಡಿಯ ತನಕವೂ ಬಂದ. ದಾರಿಯುದ್ದಕ್ಕೂ ನನ್ನ ಕೈಗಳನ್ನು ಮೆದುವಾಗಿ ಹಿಸುಕುತ್ತಾ ಮತ್ತೆ ಮತ್ತೆ ಪುನರುಚ್ಚರಿಸುತ್ತಿದ್ದ: "ನೀನು ಉತ್ತಮವಾಗಿ ತೇರ್ಗಡೆಯಾಗುತ್ತೀ, ನೋಡ್ತಾ ಇರು!" ನಾನು ಕೊಠಡಿಯನ್ನು ಪ್ರವೇಶಿಸುತ್ತಲೇ ನನ್ನ ಕಾಲುಗಳು ಕುಸಿದುಬಿಡುತ್ತಿರುವಂತೆ ನನಗನ್ನಿಸಿತು. ಮ್ಯಾಕ್ಸ್ ಮತ್ತು ಉಳಿದ ಇಬ್ಬರು ಪರೀಕ್ಷಕರು ಈಗಾಗಲೇ ಅಲ್ಲಿ ಕುಳಿತಿದ್ದರು. ನನಗಂತೂ ನಾನು 'ಆರೇಕಲ್' ನೊಡನೆ ಮುಖಾಮುಖಿಯಾಗುತ್ತಿದ್ದೇನೆನಿಸಿತು. ಯಾವುದಾದರೂ ಕುರುಹು ಗಳಿಗಾಗಿ ನಾನು ಅವರ ಮುಖಗಳಲ್ಲಿ ಹುಡುಕಲು ಪ್ರಯತ್ನಿಸಿದೆ. ಆದರೆ, ನನ್ನ ಮುಖವನ್ನು ನೆಲದಿಂದ ಮೇಲಕ್ಕೆತ್ತಲೂ ಅಸಮರ್ಥಳಾದೆ. ನಾನು ಕುಳಿತುಕೊಂಡ ಕೂಡಲೇ ಪ್ರೊಫೆಸರ್ ಫರ್ತ್ ನಿಂತುಕೊಂಡರು ಮತ್ತು ನನಗೆ ಹಸ್ತಲಾಘವ ವನ್ನಿತ್ತರು. ನಾನು ಕತ್ತೆತ್ತಿ ನೋಡಿದೆ ಮತ್ತು ನನ್ನೆಡೆಗೆ ನೋಡುತ್ತಾ ಅವರು ಮುಗುಳ್ನಗುತ್ತಿರುವುದನ್ನು ಕಂಡೆ. ಅವರು ಹೀಗೆ ಹೇಳುತ್ತಿರುವುದನ್ನು ಕೇಳಿಸಿಕೊಂಡೆ ಎಂದು ಯೋಚಿಸಿದೆ: "ಅಭಿನಂದನೆಗಳು ಡಾ॥ ಎಪ್‌ಸ್ಟೈನ್, ನೀವು ಸೊಗಸಾದ ಮಹಾಪ್ರಬಂಧವನ್ನು ಮಂಡಿಸಿದ್ದೀರಿ." ಆದರೆ, ನಾನು ನನ್ನ ಕಿವಿಗಳನ್ನು ಸಂಪೂರ್ಣವಾಗಿ ನಂಬಲಾರದಾದೆ. ಅವರ ಮತ್ತೆ ಅದನ್ನು ಪುನರುಚ್ಚರಿಸಿದರು. ಈ ಬಾರಿ ಮತ್ತಷ್ಟು ನಿಧಾನವಾಗಿ, ಏಕೆಂದರೆ ಅವರು ಮಾತುಗಳು ನನ್ನ ಮನಸ್ಸಿನಲ್ಲಿ ಇಳಿದಿರಲಿಲ್ಲ ಎಂಬುದನ್ನು ಅವರು ನೋಡಿದ್ದರು ಅರಿತಿದ್ದರು. ಪರೀಕ್ಷೆಯ ಉಳಿದ ಅವಧಿಯನ್ನು ಈ ಪ್ರಬಂಧವನ್ನು ಪ್ರಕಟಣೆಗಾಗಿ ಹೇಗೆ ಪರಿಷ್ಕರಿಸಬೇಕು ಎನ್ನುವ ಚರ್ಚೆಯಲ್ಲಿ ತಾವು ತೊಡಗಿಸಿಕೊಳ್ಳಬೇಕೆಂದು ಅವರು ತಮ್ಮ ಮಾತನ್ನು ಮುಂದುವರೆಸಿದರು. ನಾನು ಮಾತನಾಡಲಾರದಂಥವಳಾದೆ ಮತ್ತು ದಿಗ್ಭ್ರಮೆಯ ದೃಷ್ಟಿಯಿಂದ ಆ ಮೂರೂ ಜನರತ್ತ ನೋಡಿದೆ. ಮ್ಯಾಕ್ಸ್ ಮುಕ್ತವಾಗಿ ನಗುತ್ತಾ, ನಡುಗುತ್ತಿದ್ದ ನನ್ನ ಕೈಯನ್ನು ಅವನ ಕೈಗಳಲ್ಲಿ ತೆಗೆದುಕೊಂಡ. 'ಪ್ರಕಟಣೆ' ಎನ್ನುವ

ಪದ ನನ್ನ ತಲೆಯ ಸುತ್ತಲೂ ಈಜುತ್ತಿತ್ತು. ಅಷ್ಟೊಂದು ಚಿಂತೆ ಮಾಡಿದ್ದು, ಒಂದೇ ಅರ್ಥವಿಲ್ಲದೆ ! ಎಪ್‌ಸ್ಟೈನ್ ಕುಟುಂಬದಲ್ಲಿ ಈಗ ಇಬ್ಬರು ಡಾಕ್ಟರೇಟ್ ಪಡೆದಿರುವವರು ಇದ್ದಾರೆಂಬುದನ್ನು ಬಿಲ್ ತಿಳಿಯಬೇಕು ಎಂದು ಹೇಳಿ ಮ್ಯಾಕ್ಸ್ ಕೊಠಡಿಯಿಂದ ಹೊರಗೆ ಹೋದ. ಪರೀಕ್ಷಾ ಕೊಠಡಿಯ ಹೊರಭಾಗದಲ್ಲಿ ಓಣಿಯಲ್ಲಿ ಮಗುವಿನ ಜನನ ವಾರ್ತೆಗಾಗಿ ನಿರೀಕ್ಷಿಸುತ್ತಿರುವ ತಂದೆಯಂತೆ, ಬಿಲ್ ಶತಪಥ ಹಾಕುತ್ತಿದ್ದ. ಅವನು ಜೋರಾಗಿ ಕೂಗಿದ್ದು ನನಗೆ ಕೇಳಿಸಿತು: “ಅವಳು ಖಂಡಿತ ಮಾಡುವಳೆಂದು ನನಗೆ ಗೊತ್ತಿತ್ತು !” ಮೌಖಿಕ ಪರೀಕ್ಷೆಯ ಉಳಿದ ಸಮಯವನ್ನು, ತಿಳಿಗೇಡಿಯ ನಗುವನ್ನು ನಗುತ್ತಾ, ನನ್ನನ್ನು ನಾನು ಸ್ಥಿಮಿತಕ್ಕೆ ತಂದುಕೊಳ್ಳಲು ಪ್ರಯತ್ನಿಸಿದೆ. ಬೇಗನೆ ಅದು ಮುಗಿಯಿತು ಕೂಡಲೇ, ನಾನು ನನಗಾಗಿ ಕಾಯುತ್ತಿದ್ದ ಬಿಲ್‌ನ ಬಾಹುಗಳೊಳಕ್ಕೆ ಧಾವಿಸಿದೆ.

ನನ್ನ ಡಾಕ್ಟರೇಟ್ ಪದವಿಯಿಂದಾಗಿ ನಾನು ಮತ್ತು ಬಿಲ್ ಕೂಡ ಸಹೋದ್ಯೋಗಿಗಳಾಗಿದ್ದೆವು. ನಾವು ನಮ್ಮ ನಮ್ಮ ಪ್ರತ್ಯೇಕವಾದ ಕೌಶಲ್ಯ, ಸಹಜ ಸಾಮರ್ಥ್ಯ ಪ್ರತಿಭೆಗಳ ಬಗೆಗೆ ಚರ್ಚಿಸಿದೆವು ಮತ್ತು ನಾವು ಪರಿಪೂರ್ಣ ರೀತಿಯಲ್ಲಿ ಪರಸ್ಪರ ಪೂರಕವಾಗಿದ್ದೆವೆಂದು ನಿರ್ಧರಿಸಿದೆವು. ಬಿಲ್ ಅತ್ಯಂತ ವ್ಯಾಪಕವಾಗಿ ಅಧ್ಯಯನ ಮಾಡಿದ್ದು ಮತ್ತು ಅತ್ಯಂತ ಮೇಧಾವಿಯಾದ ಮನಸ್ಸನ್ನು ಪಡೆದಿದ್ದ, ಅದು ಅವನನ್ನು ಪರಿಣತ ಸಿದ್ಧಾಂತಿಯನ್ನಾಗಿಸಿತ್ತು. ಆದರೆ, ನನ್ನ ಸಾಮರ್ಥ್ಯವು ಹೆಚ್ಚಾಗಿ ಸಮಾಜೋ ಆರ್ಥಿಕ ಅಭಿವೃದ್ಧಿಯ ಅನ್ವಯಿಕ ಕ್ಷೇತ್ರದಲ್ಲಿ ನೆಲೆಗೊಂಡಿತ್ತು. ಹೀಗೆ ನಾವು ಒಂದು ಆದರ್ಶ ಕಾರ್ಯಶೀಲ ಸಹಭಾಗಿತ್ವವನ್ನು ರೂಪಿಸಿದೆವು. ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಬಿಲ್‌ನು ಸ್ನಾತಕೋತ್ತರ ಸಂಶೋಧನಾ ವಿದ್ಯಾರ್ಥಿವೇತವನ್ನು ಪಡೆದ. ಆದರೆ, ಈ ಬಾರಿ ವಿದ್ಯಾರ್ಥಿವೇತನವನ್ನು ಕ್ಯಾನ್‌ಬೆರಾದ ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿಯಿಂದ ನೀಡಲಾಗಿತ್ತು. ಆಸ್ಟ್ರೇಲಿಯಾಗೆ ಹೋಗುವ ಪ್ರತೀಕ್ಷೆಯಿಂದ ನಾವಿಬ್ಬರೂ ಉತ್ಸಾಹಿತರಾದೆವು: ಯುದ್ಧದ ಅವಧಿಯಲ್ಲಿ ನಾವಿಕನಾಗಿ ಅಲ್ಲಿ ತಾನು ಕಳೆದಿದ್ದ ಸಂತೋಷದ ದಿನಗಳ ನೆನಪಿನಿಂದಾಗಿ ಬಿಲ್ ಖುಷಿಯಾಗಿದ್ದ. ನನ್ನ ಸೋದರ ಓಟ್ಟೋನೊಡನೆ ಮತ್ತೆ ಒಟ್ಟುಗೂಡಬಹುದೆಂದು ನಾನು ಸಂತುಷ್ಟಳಾಗಿದ್ದೆ. ತಮ್ಮ ಮಗಳು ತಮ್ಮ ಕೈತಪ್ಪಿ ದೂರ ಹೋಗುತ್ತಿದ್ದಾಳೆಂದು ನನ್ನ ತಂದೆ ತಾಯಿ ಅಸಂತುಷ್ಟರಾಗಿದ್ದರು. ಆದರೆ, ಅವರು ತಮ್ಮ ಭಾವನೆಗಳನ್ನು ನಿಗ್ರಹಿಸಿಕೊಂಡರು ಹಾಗೂ ನಾನು ಹೊಸದಾಗಿ ಕಂಡುಕೊಂಡ ಈ ಸಂತೋಷದಲ್ಲಿ ತಾವೂ ಕೂಡ ಭಾಗಿಗಳಾದರು.

ಪದವೀ ಪ್ರದಾನ ಸಮಾರಂಭಕ್ಕಾಗಿ ನಾನು ಎದುರು ನೋಡುತ್ತಿದ್ದೆ. ನನ್ನ ಆ ಎಲ್ಲ ಪ್ರಯತ್ನದ ಪರಾಕಾಷ್ಠೆಯಾಗಿತ್ತು ಅದು. ತಮ್ಮ ಡಾಕ್ಟರೇಟ್ ಪದವಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಬೇಕಾಗಿದ್ದ ಸ್ನಾತಕ ವಿದ್ಯಾರ್ಥಿಗಳ ಮೆರವಣಿಗೆಯ

ಮುಂದಾಳತ್ವವನ್ನು ನಾನು ವಹಿಸಿ, ಮೆರವಣಿಗೆಯನ್ನು ಮುನ್ನಡೆಸಿದಾಗ ನಾನು ಪ್ರಕಾಶಮಾನವಾದ ಮಂದಹಾಸ ಬೀರುತ್ತಿದ್ದೆ. ನನ್ನ ಆ ಸ್ನಾತಕ ಮೇಲುಡುಪಿನಲ್ಲಿ ನಾನು ಆ ಸಭಾಂಗಣದಲ್ಲಿ ಗಂಭೀರವಾಗಿ ನಡೆಯುತ್ತಿದ್ದಾಗ, ಬಿಲ್ ಮತ್ತು ನನ್ನ ತಂದೆತಾಯಿ ಹೆಮ್ಮೆಯಿಂದ ನನ್ನನ್ನು ವೀಕ್ಷಿಸುತ್ತಿರುವುದನ್ನು ನೋಡಿದೆ ಮತ್ತು ನಾನು ಹಗುರಾಗಿ ತೇಲುತ್ತಿದ್ದೇನೆಂದು ಭಾವಿಸಿದೆ. ನಮ್ಮ ಸ್ನೇಹಿತರು ಅನೇಕರು ಈ ಸಮಾರಂಭವನ್ನು ವೀಕ್ಷಿಸುವ ಸಲುವಾಗಿ ಬಂದಿದ್ದರು ಮತ್ತು ನನ್ನ ಯಶಸ್ಸನ್ನು ಪ್ರಶಂಸಿಸಿ, ಆಚರಿಸಲು ಸಮಾರಂಭದ ನಂತರ ಸಂತೋಷಕೂಟಗಳನ್ನು ವ್ಯವಸ್ಥೆ ಮಾಡಿದ್ದರು. ಬಿಲ್ ನನ್ನ ತಂದೆ ತಾಯಿಯನ್ನು ಮನೆಗೆ ಕರೆದುಕೊಂಡು ಹೋದಾಗ, ನಾನು ಪಡೆಯುತ್ತಿದ್ದ ಗಮನದಿಂದ ಸಂತೋಷಪಡುತ್ತಿದ್ದೆ. ನನಗಾಗಿ ಮತ್ತೆ ಸ್ವಸ್ತಿಪಾನ ಮಾಡಿದಾಗ, ಇದ್ದಕ್ಕಿದ್ದಂತೆ, ನನ್ನ ಕಾಲಕೆಳಗಿನ ನೆಲವೇ ಮೆಲಕ್ಕೆ ಬಂದಂತೆನಿಸಿತು ಮತ್ತು ಜನರೆಲ್ಲರೂ ನನ್ನನ್ನು ಸುತ್ತುವರೆದಂತೆನಿಸಿತು. ನನಗೆ ತಿಳಿದ ಮುಂದಿನ ಸಂಗತಿ ಎಂದರೆ, ನಾನು ಮ್ಯಾಕ್ಸ್‌ನ ಆಫೀಸಿನಲ್ಲಿ ಸ್ಟ್ರೆಚರ್ ಮೇಲೆ ಮಲಗಿದ್ದೆ. ಕಳೆದ ಕೆಲವು ತಿಂಗಳುಗಳಿಂದ ಕೆಲಸದ ಒತ್ತಡ ತೀರಾ ಹೆಚ್ಚಿನದಾಗಿತ್ತೆಂದು ಪ್ರತಿಯೊಬ್ಬರೂ ಉದ್ಗರಿಸುತ್ತಿದ್ದರು. ಆದರೆ, ನನಗೆ ನಿಜ ಸಂಗತಿ ತಿಳಿದಿತ್ತು– ನಾನು ಗರ್ಭಿಣಿಯಾಗಿದ್ದೆ. ಪದವಿ ಸಮಾರಂಭದ ಎರಡು ವಾರಗಳ ಹಿಂದೆ, ನನ್ನ ಗರ್ಭದ ಬಗೆಗೆ ಸಕಾರಾತ್ಮಕ ಫಲಿತಾಂಶ ಬಂದಿತ್ತು. ಮಕ್ಕಳನ್ನು ಪಡೆಯಲು ನಮಗಿಬ್ಬರಿಗೂ ತೀವ್ರ ಆಸಕ್ತಿಯಿದ್ದುದರಿಂದ, ನಾವಿಬ್ಬರೂ ಅತ್ಯಂತ ಹರ್ಷಿತರಾಗಿದ್ದೆವು. ಈ ಸಿಹಿಸುದ್ದಿಯನ್ನು ಯಾರ ಎದುರಿಗಾದರೂ ಪ್ರಕಟಿಸಲು ಖಂಡಿತವಾಗಿಯೂ ಇದು ತೀರಾ ಬೇಗ ಎನಿಸಿತ್ತು. ಆದ್ದರಿಂದ, ನನ್ನನ್ನು ಕರೆದುಕೊಂಡು ಹೋಗಲು ಬಿಲ್ ಹಿಂತಿರುಗಿದಾಗ ಇಲ್ಲಿ ನಡೆದ ಘಟನೆಯನ್ನು ಅವನಿಗೆ ಹೇಳಿದಾಗ, ಪರಸ್ಪರ ಅರಿತವರಂತೆ ನಾವು ಸುಮ್ಮನೆ ಮುಗುಳ್ನಕ್ಕೆವು ಮತ್ತು ಅವನು ಮೃದುವಾಗಿ ನನ್ನನ್ನು ನಮ್ಮ ಕಾರಿನ ಬಳಿಗೆ ನಡೆಸಿಕೊಂಡು ಬಂದ. ಮನೆಗೆ ಬರುವಾಗ ದಾರಿಯಲ್ಲಿ, ನಾನು ಹೇಗೆ ಗರ್ಭಿಣಿ ಮಹಿಳೆಯ ಸಾಂಪ್ರದಾಯಕ, ಏಕ ಪ್ರಕಾರದ ಮಾದರಿಯಲ್ಲಿ, ಜ್ಞಾನ ತಪ್ಪುವ ಮೂಲಕ ಎಲ್ಲರೆದುರಿಗು ನಾನು ಗರ್ಭಿಣಿ ಎನ್ನುವುದನ್ನು ಹೇಗೆ ಪ್ರಕಟಿಸಿಕೊಂಡುಬಿಟ್ಟೆ ಎನ್ನುವುದರ ಬಗೆಗೆ ತಮಾಷೆ ಮಾಡಿಕೊಂಡೆವು. ಹೆಚ್ಚು ದಿನಗಳ ತನಕ ಈ ಸುದ್ದಿಯನ್ನು ನಮ್ಮಲ್ಲಿಯೇ ಇಟ್ಟುಕೊಳ್ಳಲಾಗಲಿಲ್ಲ. ಶೀಘ್ರವೇ ನನ್ನ ತಂದೆ ತಾಯಿ ಮತ್ತು ಸ್ನೇಹಿತರಿಗೆ ತಿಳಿಸಿದೆವು. ಆದರೆ, ಅವರೆಲ್ಲರೂ ಈಗಾಗಲೇ ಊಹಿಸಿದ್ದರು.

೧೯೫೪ನೇ ಇಸವಿ ಆಗಸ್ಟ್ ತಿಂಗಳಲ್ಲಿ ಸೌತ್‌ಹ್ಯಾಂಪ್ಟನ್‌ನಿಂದ ಹೊರಡ ಬೇಕಾಗಿದ್ದ P ಮತ್ತು O ಲೈನರ್‌ನಲ್ಲಿ ನಮ್ಮ ಪ್ರಯಾಣವನ್ನು ಸಿಡ್ನಿಗೆ ಕಾದಿರಿಸಿದೆವು. ನಾವು ಹೊರಡುವ ಮುನ್ನ ಕಡೆಯ ಕೆಲವು ದಿನಗಳವರೆಗೆ ನನ್ನ ತಂದೆ ತಾಯಿಯೊಡನೆ

ಇದ್ದೆವು. ಅವರು ಸಂತೋಷಚಿತ್ತರಾಗಿಯೇ ಇರಲು ಪ್ರಯತ್ನಿಸಿದರು. ಆದರೆ, ಅವರಿಬ್ಬರೂ ತೀರಾ ವೃದ್ಧರಾಗಿಯೂ, ದುಃಖಿತರಂತೆಯೂ ಕಂಡುಬಂದರು. ದೀರ್ಘ ಸಮಯದವರೆಗೂ ನಾನು ಅವರನ್ನು ನೋಡಿಕೊಂಡಿದ್ದೆ ಮತ್ತು ನನ್ನ ಜೀವನದ ಮೇಲೆ ಅವರು ಅತ್ಯಂತ ಹೆಚ್ಚು ಪ್ರಭಾವವನ್ನು ಬೀರಿದ್ದರು. ಹಾಗಾಗಿ ಈಗ ಅವರನ್ನು ಬಿಟ್ಟುಹೋಗುತ್ತಿರುವೆನೆಂದಾಗಿ, ಒಂದು ರೀತಿಯ ಅಪರಾಧ ಪ್ರಜ್ಞೆ ನನ್ನನ್ನು ಬಾಧಿಸಿತು. ಸೌತ್‌ಹ್ಯಾಂಪ್ಟನ್‌ಗೆ ರೈಲು ಹಿಡಿಯಲು ಹೊರಡುವ ಸಮಯ ಬಂದಾಗ ನನ್ನ ಮನಸ್ಸು ಛಿದ್ರವಾದಂತಾಯಿತು. ನಾವು ಪರಸ್ಪರ ಆಲಂಗಿಸಿಕೊಂಡೆವು, ಚುಂಬಿಸಿದೆವು ಮತ್ತು ಅಮ್ಮ ನನ್ನನ್ನು ಅಪ್ಪಿ ಹಿಡಿದಿದ್ದಾಗ ಪಿಸುಗುಟ್ಟಿದಳು “ಕುರ್ಟ್‌ನನ್ನು ನೋಡಿಕೊಳ್ಳುವೆ ಎಂದು ವಚನ ನೀಡು.” ಇಷ್ಟೆಲ್ಲ ವರ್ಷಗಳ ನಂತರವೂ ಅವಳು ಇನ್ನೂ ತನ್ನ ಮಗ ಕುರ್ಟ್‌ನ ಬಗೆಗೆ ಚಿಂತಿಸು ತ್ತಿದ್ದಾಳೆ ಮತ್ತು ಅವನಿಗಿಂತಲೂ ನಾಲ್ಕು ವರ್ಷ ಚಿಕ್ಕವಳಾದ ನಾನು ಅವನನ್ನು ನೋಡಿಕೊಳ್ಳಬೇಕೆಂದು ನಿರೀಕ್ಷಿಸುತ್ತಿದ್ದಾಳೆ ಎನ್ನುವುದು ನನಗೆ ವಿಚಿತ್ರವಾಗಿ ಕಂಡಿತು. ಆದರೂ, ನಾನು ವಚನ ನೀಡಿದೆ. ಅಂತಿಮವಾಗಿ ನಾವು ಪರಸ್ಪರ ಬೇರ್ಪಡ ಬೇಕಾಯಿತು ಮತ್ತು ರೈಲು ನಿಲ್ದಾಣಕ್ಕೆ ಹೊರಡಬೇಕಾಯಿತು.

ನಾನು ಮೂಲೆಯ ತಿರುವನ್ನು ದಾಟುತ್ತಿದ್ದಂತೆ ಅದೇಕೋ, ನಾನು ಮತ್ತೆ ಅಮ್ಮನನ್ನು ನೋಡುವುದಿಲ್ಲವೆಂಬ ಮೈ ನಡುಗಿಸುವ ಪೂರ್ವ ಸೂಚನೆಯೊಂದು ನನ್ನ ಮನಸ್ಸಿನಲ್ಲಿ ಬಂದಿತು. ಕಣ್ಣೀರು ಸ್ಫೋಟಿಸಿ ಅಳತೊಡಗಿದೆ. ನಾವು ಜೊತೆಯಾಗಿ ನಮ್ಮ ಹೊಸ ಜೀವನಕ್ಕೆ ಪ್ರವೇಶಿಸುತ್ತಿರುವುದಾಗಿಯೂ, ಶೀಘ್ರದಲ್ಲಿಯೇ ನಾವು ಮೂರು ಜನರಾಗುವೆವೆಂದೂ ನೆನಪಿಸುತ್ತಾ ಬಿಲ್ ನನ್ನನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದ. ನಿಲ್ದಾಣವನ್ನು ತಲುಪುತ್ತಿದ್ದಂತೆಯೇ ನನ್ನ ಮನೋಭಾವ ಬದಲಾಯಿತು. ಅಲ್ಲಿ ನಮ್ಮನ್ನು ಬೀಳ್ಕೊಡಲೆಂದು ನಮ್ಮ ಸ್ನೇಹಿತರ ಒಂದು ಗುಂಪೇ ಬಂದಿತ್ತು. ಅವರ ಶುಭಾಶಯಗಳು, ಹರ್ಷೋದ್ಗಾರಗಳ ನಡುವೆ ನಾವು ರೈಲನ್ನು ಹತ್ತಿದೆವು ಮತ್ತು ರೈಲು ನಿಲ್ದಾಣದಿಂದ ಆಚೆ ಬರುತ್ತಿದ್ದಂತೆಯೇ ನನ್ನ ಉತ್ಸಾಹವು ನನ್ನ ದುಃಖ ಬೇಸರಗಳನ್ನು ಹಿಂದಕ್ಕೆ ಹಾಕಿತು. ಮತ್ತೆ ನನ್ನ ಪ್ರಯಾಣದಲ್ಲಿ ತೊಡಗಿದ್ದುದು ಆಶ್ಚರ್ಯಕರವೆನಿಸುತ್ತಾ ಬೆರಗುಗೊಳಿಸುತ್ತಿತ್ತು. ಆದರೆ ಈ ಬಾರಿ ನಾನು ಒಬ್ಬಳೇ ಆಗಿರಲಿಲ್ಲ. ನಾನು ಪ್ರೀತಿಸಿದ ಪುರುಷ ನನ್ನ ಪಕ್ಕದಲ್ಲಿದ್ದ ಮತ್ತು ಅವನ ಮಗುವನ್ನು ನಾನು ನನ್ನ ಹೊಟ್ಟೆಯಲ್ಲಿ ಹೊತ್ತಿದ್ದೆ. ನನ್ನ ಜೀವನವು ನಿಜವಾಗಿಯೂ ಒಂದು ಸಂಧಿಕಾಲವನ್ನು ದಾಟಿತ್ತು ಮತ್ತು ಪರಿಸ್ಥಿತಿ ಉತ್ತಮಗೊಂಡಿತ್ತು. ನಾನು ಬಿಲ್‌ನಲ್ಲಿ ವಿಶ್ರಮಿಸಿದೆ. ಅವನು ನನ್ನ ಸುತ್ತಲೂ ತನ್ನ ತೋಳುಗಳನ್ನು ಹಾಕಿದ. ಹಿಂದೆ ಎಂದೂ ಪಡೆಯದಿದ್ದಂತಹ ತೃಪ್ತಿಯನ್ನು ನಾನು ಅನುಭವಿಸಿದೆ.

ವಿಶ್ರಮಿಸುತ್ತಾ ಮತ್ತು ಪರಸ್ಪರರು ಜೊತೆಗಿರುವುದನ್ನು ಆನಂದಿಸುತ್ತಾ ನಾವು

ಪ್ರಯಾಣವನ್ನು ಕಳೆದೆವು. ಆ ಪ್ರಯಾಣವು ನಿಜವಾಗಿಯೂ ಎರಡನೆಯ ಮಧು ಚಂದ್ರವಾಗಬೇಕಾಗಿದ್ದಿತು. ಆದರೆ ವಿಧಿಯು ನನ್ನ ಜೊತೆ ಕ್ರೂರವಾಗಿ ಕುತಂತ್ರ ನಡೆಸಲು ನಿರ್ಧರಿಸಿತ್ತು. ಹಡಗು ಆಸ್ಟ್ರೇಲಿಯಾದ ತೀರವನ್ನು ಸಮೀಪಿಸುತ್ತಿದ್ದಂತೆಯೇ ನಾನು ಭಯಂಕರವಾದ ಸ್ನಾಯು ಸೆಳೆತದಿಂದ ಯಾತನೆಪಡತೊಡಗಿದೆ ಹಾಗೂ ಏನೋ ತೊಂದರೆಯಾಗಿದೆಯೆಂದು ತಕ್ಷಣವೇ ನನಗನ್ನಿಸಿತು. ಹಡಗಿನ ಸಣ್ಣ ಆಸ್ಪತ್ರೆಗೆ ನನ್ನನ್ನು ಸೇರಿಸಿದರು ಮತ್ತು ನನಗೆ ರಕ್ತಸ್ರಾವವಾಗುತ್ತಿರುವುದನ್ನು ಕಂಡುಕೊಂಡೆ. ಬಿಲ್ ತಕ್ಷಣವೇ ಸನ್ನಿವೇಶದ ಹೊಣೆ ಹೊತ್ತು, ಓಟ್ಟೊಗೆ ಫೋನ್ ಮಾಡಿದ ಮತ್ತು ನಾವು ಸಿಡ್ನಿಗೆ ತಲುಪುತ್ತಲೇ ಅನುಕೂಲವಾಗುವಂತೆ ಆ್ಯಂಬ್ಯುಲೆನ್ಸ್‌ನ ವ್ಯವಸ್ಥೆ ಮಾಡಿರುವಂತೆ ತಿಳಿಸಿದ. ಹಡಗಿನ ವೈದ್ಯರು ರಕ್ತಸ್ರಾವವನ್ನು ನಿಲ್ಲಿಸಲು ಏನೂ ಮಾಡುವಂತಿರಲಿಲ್ಲ. ನಾನು ಉಳಿದ ನನ್ನ ಪ್ರಯಾಣವನ್ನು ಬಿಕ್ಕಳಿಸಿ ಅಳುತ್ತಾ ಕಳೆದೆ. ಬಿಲ್ ನನ್ನ ಪಕ್ಕದಲ್ಲಿಯೇ ಕುಳಿತುಕೊಂಡು, ಹೆಚ್ಚಿನ ಸಂಖ್ಯೆಯ ಮಹಿಳೆಯರು ಮೊದಲ ಸಾರಿ ಗರ್ಭವತಿಯರಾದಾಗ, ಈ ರೀತಿ ಗರ್ಭಪಾತ ಕ್ಕೊಳಗಾಗುತ್ತಾರೆ ಎಂದು ನನಗೆ ಸಮಾಧಾನ ಹೇಳಲು ಪ್ರಯತ್ನಿಸುತ್ತಿದ್ದ. ಅವನನ್ನು ನಂಬಬೇಕೆಂದು ನಾನು ತೀವ್ರವಾಗಿ ಬಯಸಿದೆ. ಆದರೆ, ನನಗೇ ಏಕೆ ಹೀಗಾಯಿತೆಂದು ಚಿಂತಿಸತೊಡಗಿದೆ.

ನಾವು ಸಿಡ್ನಿಯ ಹಡಗುಕಟ್ಟೆಯಲ್ಲಿ ಇಳಿದಾಗ, ಓಟ್ಟೊ ಮತ್ತು ಅವನ ಕುಟುಂಬದೊಡನೆ ನಮ್ಮ ಹರ್ಷಪೂರ್ಣ ಪುನರ್ಮಿಲನದ ಬದಲಾಗಿ, ನನ್ನನ್ನು ಸ್ಟ್ರೆಚರ್ ಮೇಲೆ ಮಲಗಿಸಿ ಕಾಯುತ್ತಿದ್ದ ಆ್ಯಂಬುಲೆನ್ಸಿಗೆ ಸಾಗಿಸಿ, ಅವಸರದಿಂದ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಎಷ್ಟು ಹೆಚ್ಚು ಹೊತ್ತು ಸಾಧ್ಯವೋ ಅಷ್ಟು ಸಮಯ ಬಿಲ್ ನನ್ನ ಜೊತೆಯಲ್ಲಿಯೇ ಇದ್ದ. ನಂತರ ತನ್ನ ಹೊಸ ಭಾವ ಮೈದುನನನ್ನು ಭೇಟಿ ಮಾಡಲು ಹೊರಟ. ಅವನು ಎಂದೂ ನೋಡಿರದಿದ್ದ ಕುಟುಂಬದೊಡನೆ ವ್ಯವಹರಿಸಲು ಬಿಲ್‌ನನ್ನು ಅವನದೇ ವಿಧಾನಗಳಿಗೆ ಬಿಡಬೇಕಾಗಿದ್ದು, ನನ್ನ ಮನಸ್ಸಿನಲ್ಲಿ ತಪ್ಪಿತಸ್ಥ ಮನೋಭಾವವನ್ನುಂಟುಮಾಡಿತ್ತು. ಆದರೆ ನಾನು ಏನನ್ನೂ ಮಾಡುವಂತಿರಲಿಲ್ಲ. ಎರಡು ದಿನಗಳ ನಂತರ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದರು. ನನ್ನ ಮನಸ್ಸು ವಿಷಣ್ಣತೆ ಮತ್ತು ಶೂನ್ಯದ ಭಾವನೆಯಿಂದ ತುಂಬಿತ್ತು. ಬಿಲ್ ಮತ್ತು ಓಟ್ಟೊ ನನ್ನನ್ನು ಕರೆದುಕೊಂಡು ಹೋಗಲು ಬಂದರು. ಅವರಿಬ್ಬರೂ ಆಗಲೇ ನಿಕಟವಾದ ಬಾಂಧವ್ಯ ಬೆಳೆಸಿಕೊಂಡಿರುವುದನ್ನು ಕಂಡು ನನಗೆ ಸಂತೋಷವಾಯಿತು. ಅವರು ಅದ್ಭುತವಾದ ಪುನರ್ಮಿಲನ ಸಮಾರಂಭವನ್ನು ಷಾಂಪೇನಿನೊಡನೆ ವ್ಯವಸ್ಥೆಗೊಳಿಸಿದ್ದರು. ನಾನು ಆಗಿನ್ನೂ ಅನುಭವಿಸಿದ್ದ ಘಟನೆಯ ನಂತರ ಹೀಗೆ ಸಂಭ್ರಮವನ್ನಾಚರಿಸುವುದು ಒಂದು ರೀತಿಯಲ್ಲಿ ವಿಲಕ್ಷಣವೆನಿಸಿತ್ತು. ಆದರೆ, "ಭವಿಷ್ಯದಲ್ಲಿನ ಎಪ್‌ಸ್ಟೈನ್ ಸಂತಾನಕ್ಕಾಗಿ"

ಎಂದು ಹೇಳುತ್ತಾ ಓಟ್ಟೊ ಸ್ವಸ್ತಿಪಾನಕ್ಕಾಗಿ ತನ್ನ ಗ್ಲಾಸನ್ನು ಎತ್ತಿ ಹಿಡಿದಾಗ, ನಾನು ನನ್ನ ವಿಷಣ್ಣತೆಯಿಂದ ಹೊರಬರಲು ಪ್ರಯತ್ನಿಸಿ ಹೇಗೋ ಯಶಸ್ವಿಯಾದೆ.

ಸಿಡ್ನಿಯಲ್ಲಿ ಒಂದೆರಡು ವಾರಗಳು ಇದ್ದನಂತರ ಬಿಲ್ ಮತ್ತು ನಾನು ಕ್ಯಾನ್‌ಬೆರಾಗೆ ಹೋದೆವು ಮತ್ತು ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿಯಲ್ಲಿ (ANU) ನಮ್ಮನ್ನು ನಾವು ಪರಿಚಯಿಸಿಕೊಂಡೆವು. ಸಾಮಾಜಿಕ ಮಾನವಶಾಸ್ತ್ರ ವಿಭಾಗದಲ್ಲಿ ಬಿಲ್ ಈಗಾಗಲೇ ವಿದ್ಯಾರ್ಥಿವೇತನ ಪಡೆದಿದ್ದ, ನಂತರ ಹೊಸದಾಗಿ ಸ್ಥಾಪಿತಗೊಂಡಿದ್ದು, ಆಸ್ಟ್ರೇಲಿಯಾದ ಅತ್ಯಂತ ಪ್ರಸಿದ್ಧ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾದ ಸರ್ ಜಾನ್ ಕ್ರಾಫರ್ಡ್ ಮುಖ್ಯಸ್ಥರಾಗಿದ್ದ ಅರ್ಥಶಾಸ್ತ್ರದ ವಿಭಾಗದಲ್ಲಿ ನನಗೂ ಕೂಡ, ಅಂತಹುದೇ ಹುದ್ದೆಯನ್ನು ನೀಡಲಾಯಿತು. ನಾವು ಯಾವ ರೀತಿಯ ಅಧ್ಯಯನಗಳನ್ನು ಎಲ್ಲಿ ಕೈಗೊಳ್ಳಬೇಕು ಎಂಬುದರ ಬಗೆಗೆ ಚರ್ಚೆ ಮಾಡುತ್ತಾ ಬಿಲ್ ಮತ್ತು ನಾನು ಗಂಟೆಗಳನ್ನು ಕಳೆಯುತ್ತಿದ್ದೆವು. ವಿವಾಹಿತರಾದ ಇತರ ಸಾಮಾಜಿಕ ಮಾನವ ಶಾಸ್ತ್ರಜ್ಞರ ಕ್ಷೇತ್ರ ಕಾರ್ಯದ ಅನುಭವದಿಂದ, ಜಂಟಿ ಅಧ್ಯಯನಗಳು, ಬಾಂಧವ್ಯದ ಮೇಲೆ ಒತ್ತಡ ತರಬಹುದೆಂದು ನಾವು ತಿಳಿದಿದ್ದೆವು, ಆದ್ದರಿಂದ ನಾವು ಬೇರೆ ಬೇರೆ ಸಮಾಜವನ್ನು ಅಧ್ಯಯನ ಮಾಡಲು ನಿರ್ಧರಿಸಿದೆವು. ಆದಾಗ್ಯೂ ಪರಸ್ಪರರು ಸುಲಭವಾಗಿ ಭೇಟಿಯಾಗುವಷ್ಟು ದೂರದಲ್ಲಿರಬೇಕೆಂದು ಬಯಸಿದೆವು.

ಕಡೆಗೆ, ನ್ಯೂ ಬ್ರಿಟನ್ನಿನ ಗಾಜೆಲ್ಲೆ ಪರ್ಯಾಯ ದ್ವೀಪದಲ್ಲಿ ವಾಸಿಸುತ್ತಿದ್ದ ತೊಲಾಯ್ ಎಂಬ ನ್ಯೂಗಿನಿಯ ಬುಡಕಟ್ಟಿನವರೊಡನೆ ಎರಡು ಪೂರಕ ಅಧ್ಯಯನಗಳನ್ನು ನಡೆಸುವ ಯೋಜನೆಯನ್ನು ತಯಾರಿಸಿಕೊಂಡೆವು. ಮಧ್ಯ ಆಫ್ರಿಕಾದಲ್ಲಿ ಬಿಲ್ ಈ ಮೊದಲು ನಡೆಸಿದ್ದ ನಗರ ಸಮಾಜದ ರಾಜಕಾರಣದ ಮೇಲೆ ಕೇಂದ್ರೀಕರಿಸಿದ್ದ, ಅಧ್ಯಯನದ ಕ್ರಮದಂತೆ, ತೊಲಾಯ್‌ನಲ್ಲಿ ಇದ್ದುದ್ದರಲ್ಲಿ ವಿಶಾಲವಾಗಿದ್ದ ಒಂದೇ ಒಂದು ಪಟ್ಟಣ ರಬಾಉಲ್ ಪಟ್ಟಣವನ್ನು ಅಧ್ಯಯನ ಮಾಡಲು ಯೋಜನೆ ಹಾಕಿಕೊಂಡ. ನಾನು, ದಕ್ಷಿಣ ಭಾರತದಲ್ಲಿ ನಡೆಸಿದ್ದಂತಹುದೇ ಅಧ್ಯಯನವನ್ನು ತೊಲಾಯ್‌ನ ಗ್ರಾಮೀಣ ಸಮಾಜದಲ್ಲಿ ಸಮಾಜೋ ಆರ್ಥಿಕ ಅಧ್ಯಯನ ನಡೆಸಲು ಉದ್ದೇಶಿಸಿದೆ. ನಮ್ಮ ನಮ್ಮ ವಿಭಾಗಗಳ ಮುಖ್ಯಸ್ಥರು ನಮ್ಮ ಯೋಜನೆಗಳನ್ನು ಒಪ್ಪಿಕೊಂಡರು ಮತ್ತು ಆಸ್ಟ್ರೇಲಿಯಾದ ಅಧಿಕಾರಿಗಳಿಂದ ಒಪ್ಪಿಗೆ ಪಡೆಯುವುದರಲ್ಲಿ ಉಂಟಾದ ಕೆಲವು ತೊಂದರೆಗಳನ್ನು ಪರಿಹರಿಸಿಕೊಂಡ ನಂತರ ನಾವು ರಬಾಉಲ್‌ಗೆ ಹೊರಟೆವು.

ನಮಗೆ ಹೊಸದಾಗಿದ್ದ ಪ್ರದೇಶಕ್ಕೆ ಸಾಹಸದಿಂದ ಮುನ್ನುಗ್ಗುವ ಈ ನಿರೀಕ್ಷೆಯಿಂದ ನಾವಿಬ್ಬರೂ ಬಹಳ ಉತ್ತೇಜಿತರಾಗಿದ್ದೆವು. ಬುಡಕಟ್ಟು ಸಮಾಜಗಳ ಅಧ್ಯಯನವನ್ನು ಮಾಡಿದ್ದ ಬಿಲ್‌ನ ಆಫ್ರಿಕಾದ ಅನುಭವದಿಂದ ಅವನಿಗೆ ನ್ಯೂಗಿನಿಯ

ಬುಡಕಟ್ಟು ಸಂಸ್ಕೃತಿಗೆ ಹೊಂದಿಕೊಳ್ಳಲು ಸುಲಭವಾಯಿತು. ಆದರೆ ಬುಡಕಟ್ಟು ಜನಾಂಗಗಳ ಬಗೆಗಿನ ನನ್ನ ತಿಳಿವು ಸಂಪೂರ್ಣವಾಗಿ ನಾನು ಏನು ಓದಿದ್ದೆನೋ ಅದನ್ನು ಆಧರಿಸಿತ್ತು. ನಾನು ಕೇವಲ ದಕ್ಷಿಣ ಭಾರತದ ಜಾತಿ ಪ್ರಧಾನವಾದ ಸಮಾಜಗಳನ್ನು ಅಧ್ಯಯನ ಮಾಡಿದ್ದೆ, ಅವು ಸಂಪೂರ್ಣವಾಗಿ ಭಿನ್ನವಾಗಿದ್ದವು.

ರಬಾಉಲ್ ರಜಾದಿನಗಳ ಪ್ರವಾಸದ ಕೈಪಿಡಿಯೊಳಗಣ ಯಾವುದೋ ಒಂದು ಚಕ್ರದಂತಿತ್ತು; ಸಮೃದ್ಧವಾದ, ಉಷ್ಣವಲಯದ ಹಸಿರು ಸಸ್ಯವರ್ಗದಿಂದ ತುಂಬಿದ್ದ ಅಗ್ನಿ ಪರ್ವತಗಳಿಂದ ಸುತ್ತುವರೆದಿದ್ದ ಸುಂದರ ಪ್ರಾಕೃತಿಕ ಬಂದರು, ಮೈಲುಗಳ ತನಕ ಹರಡಿ ಸಾಲುಗಟ್ಟಿ ನಿಂತಿದ್ದ ತಾಳೆಮರಗಳಿರುವ ಬೀಚ್‌ಗಳು, ಸಮುದ್ರತೀರ, ರಮಣೀಯವಾಗಿದ್ದವು. ಹವಾಗುಣ ಸೆಖೆ ಮತ್ತು ತೇವದಿಂದ ಕೂಡಿದ್ದು, ರಮ್ಯವಾದ ಉಷ್ಣವಲಯದ ಸಾಯಂಕಾಲಗಳನ್ನು ನಾವು ಬಹಳವಾಗಿ ಇಷ್ಟಪಡುತ್ತಿದ್ದೆವು. ಹಗಲಿನಲ್ಲಿ ನಮ್ಮ ಕ್ಷೇತ್ರ ಅಧ್ಯಯನವನ್ನು ವ್ಯವಸ್ಥೆಗೊಳಿಸಲು ಅಣಿಮಾಡಿಕೊಳ್ಳುತ್ತಿದ್ದೆವು. ನಮ್ಮ ಆಲೋಚನೆಗಳನ್ನು ಹಂಚಿಕೊಂಡು, ನಮ್ಮ ಯೋಜನೆ, ಸಿದ್ಧತೆಗಳ ಬಗೆಗೆ ಚರ್ಚಿಸಬಹುದಾಗಿದ್ದುದರಿಂದ, ಒಂದು ಸಂಶೋಧನೆಯ ತಂಡವಾಗಿರುವುದು ಉತ್ತಮ ಎನಿಸುತ್ತಿತ್ತು. ಸೂಕ್ತವಾದ ಗ್ರಾಮೀಣ ಕ್ಷೇತ್ರ ಪ್ರದೇಶವನ್ನು ಕಂಡುಕೊಳ್ಳುವುದು ನನಗೆ ಬಹಳವೇ ಸುಲಭವಾಗಿತ್ತು. ಅನೇಕ ಜನ ಗ್ರಾಮೀಣ ಮುಖ್ಯಸ್ಥರನ್ನು ಭೇಟಿ ಮಾಡಿದ ನಂತರ, ರಬಾಉಲ್‌ನಿಂದ ಸುಮಾರು ೧೫ ಮೈಲಿ ದೂರದಲ್ಲಿ ಗಾಜೆಲ್ಲೆ ಪರ್ಯಾಯ ದ್ವೀಪದ ಪರ್ವತ ಪ್ರದೇಶದ ಭಾಗದಲ್ಲಿರುವ ರ‍್ಯಾಪಿಟಾಕ್‌ನಲ್ಲಿ ನೆಲೆಸಲು ನಿರ್ಧರಿಸಿದೆ.

ನಾವಿಬ್ಬರೂ ನಮ್ಮ ಅಧ್ಯಯನದಲ್ಲಿ ಯಾವುದೇ ಪ್ರಗತಿ ಸಾಧಿಸುವುದಕ್ಕೂ ಮೊದಲು 'ತೊಲಾಯ್ ಭಾಷೆಯನ್ನು ಕಲಿಸುವುದಕ್ಕೂ ಮತ್ತು ದುಭಾಷಿಯಾಗಿ ವರ್ತಿಸುವುದಕ್ಕೂ ಸಹಾಯಕರನ್ನು ಹುಡುಕಿಕೊಳ್ಳಬೇಕಾಗಿತ್ತು. ಬೆರಕೆ ಇಂಗ್ಲಿಷ್ ಭಾಷೆಯನ್ನಂತೂ ಪಟ್ಟಣಗಳಲ್ಲಿ ಮಾತನಾಡುತ್ತಿದ್ದರು. ಆದರೆ, ನಾವು ತೊಲಾಯ್ ಗ್ರಾಮದಲ್ಲಿಯೇ ವಾಸಿಸುವ ಉದ್ದೇಶ ಹೊಂದಿದ್ದುದರಿಂದಲೂ ನಾನು ಬೆರಕೆ ಇಂಗ್ಲಿಷ್ ಭಾಷೆಯಲ್ಲಿ ಅವರೊಡನೆ ಸಂವಹಿಸಲು ಇಷ್ಟಪಡಲಿಲ್ಲ. ಅದಕ್ಕೆ ಬದಲು ಸ್ಥಳೀಯ ಭಾಷೆಯನ್ನು ಕಲಿಯುವುದನ್ನೇ ಹೆಚ್ಚು ಇಷ್ಟಪಟ್ಟೆವು. ಇಂಗ್ಲಿಷ್ ಭಾಷೆಯನ್ನು ಮಾತನಾಡಬಲ್ಲ ಕೆಲವೇ ಮಂದಿ ತೊಲಾಯ್‌ಗಳಿದ್ದರೆಂದು, ಅವರೆಲ್ಲರೂ ಸರ್ಕಾರಿ ಸೇವೆಯಲ್ಲಿ ಉದ್ಯೋಗಸ್ಥರಾಗಿದ್ದರೆಂದೂ ನಮಗೆ ಬೇಗನೇ ತಿಳಿಯಿತು. ಸಹಾಯಕರ ಕೊರತೆಯಿಂದಾಗಿ ರಬಾಉಲ್ ಪಟ್ಟಣದ ಅಧ್ಯಯನ ಅಸಾಧ್ಯವಾಗುತ್ತಿದೆಯೆಂದು ಬಿಲ್ ಬಹಳ ಅತೃಪ್ತನಾಗಿದ್ದ. ಆದ್ದರಿಂದ, ಅಧ್ಯಯನದ ಬೇರೆ ಯೋಜನೆಗಳನ್ನು ತಯಾರಿಸಿಕೊಳ್ಳಲು, ತನಗೆ ಕಾಲ ದೊರಕಿಸಿ ಕೊಳ್ಳುವುದಕ್ಕಾಗಿ ಬಿಲ್ ಕೂಡ ರ‍್ಯಾಪಿಟಾಕ್‌ಗೇ ಬಂದು ನನ್ನ ಜೊತೆಯೇ ಇರಲು ನಿರ್ಧರಿಸಿದ. ಅಲ್ಲಿ ನಾವಿಬ್ಬರೂ

ಸ್ಥಳೀಯ ಭಾಷೆಯನ್ನು ಕಲಿಯಲು ಆರಂಭಿಸ ಬಹುದಾಗಿತ್ತು.

ANU ನಮಗೆ ಕೊಟ್ಟಿದ್ದ ಗುಡಾರವನ್ನು, ಹಲವು ಗ್ರಾಮಸ್ಥರ ನೆರವಿನಿಂದ ರ್‍ಯಾಪಿಟಾಕ್ ಗ್ರಾಮದ ಮಧ್ಯಭಾಗದಲ್ಲಿ ಹಾಕಿಕೊಂಡೆವು. ಇಬ್ಬರು ಬಿಳಿಯ ಜನರು ತಮ್ಮ ನಡುವೆ ವಾಸಿಸಬಯಸುತ್ತಾರೆ ಎಂಬುದು ತೊಲಾಯ್‌ನ ನಮ್ಮ ನೆರೆಹೊರೆಯವರಿಗೆ ಬಹಳ ಆಶ್ಚರ್ಯ ಉಂಟುಮಾಡುವ ಆಲೋಚನೆಯಾಗಿತ್ತು. ವಿಶಾಲವಾದ, ಪೀಠೋಪಕರಣಗಳಿಂದ ಸುಸಜ್ಜಿತವಾದ ಮನೆಗಳಲ್ಲಿ ವಾಸಿಸುವ ಇತರ ಬಿಳಿಯ ಜನರಂತಲ್ಲದೆ, ನಾವೇಕೆ ಇಂತಹುದೊಂದು ಗುಡಾರದಲ್ಲಿ ವಾಸಿಸಲು ಸಿದ್ಧರಾಗಿದ್ದೆವೆಂಬುದು ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರ ಮಾತುಗಳನ್ನು ನಾವು ಆಲಿಸಿ ಕೇಳುತ್ತಿದ್ದಾಗ, ಹಾಗೂ ಅವರಾಡಿದ ಮಾತುಗಳನ್ನು ಆತುರಾತುರವಾಗಿ ಗೀಚಿಕೊಳ್ಳುತ್ತಿದ್ದಾಗ, ಅವರು ನಮ್ಮನ್ನು ನೋಡಿ ನಗುತ್ತಿದ್ದರು. ನಾವು ಹೀಗೆ ಗುರುತು ಹಾಕಿಕೊಂಡಿದ್ದ ಟಿಪ್ಪಣಿಗಳನ್ನು ಬಿಲ್ ಮತ್ತು ನಾನು, ನಾವು ಅವರ ಮಾತುಗಳನ್ನು ಹೇಗೆ ಅರ್ಥಮಾಡಿಕೊಂಡಿದ್ದೇವೆಂದು ತಿಳಿಯಲು ಹೋಲಿಸಿ ನೋಡುತ್ತಿದ್ದೆವು ಮತ್ತು ಇಬ್ಬರೂ ಒಂದೇ ರೀತಿಯಲ್ಲಿ ಭಾಷಾಂತರಿಸಿರುವುದನ್ನು ಕಂಡಾಗ ಹರ್ಷಿತರಾಗುತ್ತಿದ್ದೆವು. ಈ ರೀತಿಯಲ್ಲಿ ನಾವು ನಮ್ಮ ಕಲಿಕೆಯ ವೇಗವನ್ನು ಹೆಚ್ಚಿಸಿದೆವು ಮತ್ತು ಗ್ರಾಮಸ್ಥರೊಡನೆ ಸ್ನೇಹ ಬೆಳೆಸಿದೆವು. ಅವರಿಗಾದರೋ, ಅವರ ತೊಲಾಯ್ ಭಾಷೆಯನ್ನು ಮಾತನಾಡಲು ನಾವು ಮಾಡುವ ಪ್ರಯತ್ನಗಳು ಅತ್ಯಂತ ಮನೋರಂಜಕವಾಗಿದ್ದವು.

ನಾವು ಮೊದಲು ಇಲ್ಲಿಗೆ ಬಂದಾಗ, ನಾನು ನಮ್ಮ ಜೊತೆಯಲ್ಲಿ ತಂದಿದ್ದ ಸೀಮೆಎಣ್ಣೆಯ ಸಣ್ಣ ಸ್ಟವ್ ಮೇಲೆ ಅಡಿಗೆ ಮಾಡಲು ಯೋಚಿಸಿದ್ದೆ. ಆದರೆ, ಆ ಗ್ರಾಮಸ್ಥರು ನಮ್ಮನ್ನು ಅವರ ಅತಿಥಿಗಳೆಂದು ಪರಿಗಣಿಸಿದ್ದುದರಿಂದ, ಅವರು ನನ್ನ ಈ ಅಡಿಗೆ ಪ್ರಯತ್ನಕ್ಕೆ ಆಸ್ಪದ ನೀಡಲಿಲ್ಲ. ನಮ್ಮ ಮೊದಲನೆಯ ಬೆಳಗಿನ ಉಪಾಹಾರದಿಂದಲೇ ಅವರು ನಮಗೆ ಬೇಯಿಸಿದ ಆಹಾರವನ್ನು ಒದಗಿಸಿಕೊಡುವುದಾಗಿ ಒತ್ತಾಯ ಮಾಡಿದರು. ಅವರ ಆಹಾರವು ಬಹಳ ರುಚಿಯಾಗಿದ್ದುದರಿಂದ, ನಾನು ಅಡಿಗೆ, ಊಟ, ಸಿದ್ಧ ಮಾಡಲು ಚಿಂತಿಸ ಬೇಕಾಗಿಲ್ಲವೆಂದು ಖುಷಿಪಟ್ಟೆ. ನಾವು ಕೊಡುತ್ತಿದ್ದ ಸಿಹಿತಿಂಡಿಗಳಿಗೆ ಬದಲಾಗಿ ಮಕ್ಕಳು ನಮಗೆ ಹಣ್ಣುಗಳು ಮತ್ತು ಕಾಯಿ, ಬೀಜಗಳನ್ನು ತಂದುಕೊಡುತ್ತಿದ್ದರು. ಸಾಯಂಕಾಲಗಳಲ್ಲಿ ನಮ್ಮ ಪ್ರೆಷರ್ ಲ್ಯಾಂಪಿನ ಸುತ್ತಲೂ, ನಮ್ಮೊಡನೆ ಮಾತನಾಡಲು ಬಂದ ಗ್ರಾಮಸ್ಥರಿಂದ ನಮ್ಮ ಗುಡಾರವು ತುಂಬಿಹೋಗಿರುತ್ತಿತ್ತು. ಬಿಲ್ ಮತ್ತು ನಾನು ನಮ್ಮ ಹೊಸ ಪದಗಳನ್ನು ಹಿಂಜರಿಕೆ, ಸಂಕೋಚಗಳಿಂದ ಉಪಯೋಗಿಸಲು ಪ್ರಯತ್ನಿಸಿದಾಗ ಉಲ್ಲಾಸ, ಸಂಭ್ರಮ, ನಗುಗಳ ಪ್ರತಿಕ್ರಿಯೆ ದೊರೆಯುತ್ತಿತ್ತು. ಭಾಷೆಯ ಸಂವಹನದ ಎಲ್ಲ ರೀತಿಯೂ ವಿಫಲವಾದಾಗ ನಾವು ಸಂಜ್ಞೆಗಳ ಭಾಷೆಗೆ ಮೊರೆಹೋಗುತ್ತಿದ್ದೆವು

ಮತ್ತು ಅದೊಂದು ಪದಬಂಧದಾಟದ ಸಂಜೆಯಂತೆ ಎನಿಸುತ್ತಿತ್ತು.

ನಾವು ಪಡೆದ ಸ್ನೇಹಮಯ ಸ್ವಾಗತ, ನಮ್ಮ ಅಧ್ಯಯನಗಳಿಗೆ ಶುಭ ಸೂಚನೆಯನ್ನೇ ನೀಡಿತು. ಆದ್ದರಿಂದ ನಾವು ನಮ್ಮ ವಾಸಸ್ಥಳವನ್ನು ಹೆಚ್ಚು ಸ್ಥಿರವಾಗಿ ಮಾಡಲು ನಿರ್ಧರಿಸಿದೆವು. ಮರದ ಆಧಾರಸ್ತಂಭಗಳ ಮೇಲೆ ಬೊಂಬುಗಳಿಂದ ನಿರ್ಮಿಸಿ ಹುಲ್ಲಿನ ಮಾಡವಿದ್ದ ಆ ಹಳ್ಳಿಯವರ ಮನೆಯಂತಹುದೇ ಮನೆಯನ್ನು ನಾವು ನಿರ್ಮಿಸಿಕೊಂಡೆವು. ಕಟ್ಟಡ ನಿರ್ಮಾಣದ ಪ್ರಕ್ರಿಯೆಯ ವೀಕ್ಷಣೆ ನಮ್ಮನ್ನು ಆಕರ್ಷಿಸಿ ಮರುಳುಗೊಳಿಸುತ್ತಿತ್ತು. ಕಟ್ಟಡ ಸಿದ್ಧವಾದ ನಂತರ ನಾವು ಹೆಮ್ಮೆಯಿಂದ ಅಲ್ಲಿಗೆ ನಮ್ಮ ವಾಸ್ತವ್ಯವನ್ನು ಬದಲಾಯಿಸಿದೆವು. ಈ ವೇಳೆಗೆ, ತಾನು ತೀರಾ ಆರಾಮಕರವಾಗಿ ಕಾಲ ಕಳೆಯುತ್ತಿದ್ದೇನೆಂದು ಮತ್ತು ತನ್ನ ಸ್ವಂತ ಕ್ಷೇತ್ರದ ಅಧ್ಯಯನ ಯೋಜನೆಗಳನ್ನು ಮುಂದುವರೆಸಬೇಕೆಂದೂ ಬಿಲ್ ಮನಗಂಡ. ಅವನು ಆ ಪ್ರದೇಶವನ್ನೆಲ್ಲಾ ಶೋಧಿಸಿದ ಮತ್ತು ಅಲ್ಲಿ ಮಾಟುಪಿಟ್ ಎಂಬ ಒಂದು ದ್ವೀಪವಿರುವುದಾಗಿಯೂ, ಆ ದ್ವೀಪವು ಒಂದು ಸೇತುವೆಯ ಮೂಲಕ ರಬಾಉಲ್‌ನೊಡನೆ ಸಂಪರ್ಕ ಹೊಂದಿರುವುದಾಗಿಯೂ ದೃಢಪಡಿಸಿದ ಮತ್ತು ಆ ಪ್ರದೇಶದಲ್ಲಿ ಬಹಳ ಮಂದಿ ಪಟ್ಟಣದ ಕೆಲಸಗಾರರ ಸಮೂಹ ವಾಸಿಸುತ್ತೆಂದೂ ಕಂಡುಕೊಂಡ. ಬಿಲ್‌ನ ಅಧ್ಯಯನಕ್ಕೆ ಇದು ಅತ್ಯಂತ ಉತ್ತಮವಾದ ಪರಿಸರವನ್ನು ಒದಗಿಸುವಂತೆ ತೋರಿತು. ನಾವು ಆ ಸ್ಥಳವನ್ನು ಪರೀಕ್ಷಿಸಲು ಹೊರಟೆವು.

ಅಲ್ಲಿ ನಮ್ಮ ಸ್ವಾಗತ ರ್‍ಯಾಪಿಟೋಕ್‌ಗಿಂತ ಬಹಳ ಬೇರೆಯ ರೀತಿಯಲ್ಲಿತ್ತು. ಮಾಟುಪಿಟ್‌ನ ಹಿರಿಯರಲ್ಲಿ ಒಬ್ಬ ನಮ್ಮನ್ನು ಸ್ವಾಗತಿಸಿದ. ಬಹುತೇಕ ಇತರ ಬಿಳಿಯ ಆಸ್ಟ್ರೇಲಿಯದವರಂತೆಯೇ ತನ್ನ ಜನಗಳನ್ನು ಶೋಷಣೆ ಮಾಡಲು ನಾವು ಅಲ್ಲಿಗೆ ಬಂದಿದ್ದೇವೆಂದು ಬೆರಕೆ ಇಂಗ್ಲಿಷಿನಲ್ಲಿ ನಮ್ಮನ್ನು ದೂಷಿಸಿದ. ಅವನ ಮಾತುಗಳಿಗೆ ಒಂದೂ ಪ್ರತಿ ಮಾತನ್ನಾಡದೆ ನಾವು ಅವನು ಹೇಳಿದ್ದನ್ನು. ಕೇಳಿಸಿಕೊಂಡೆವು; ಅವನು ಸಂಪೂರ್ಣವಾಗಿ ತನ್ನ ಮಾತನ್ನು ನಿಲ್ಲಿಸಿದ ನಂತರವೇ ಬಿಲ್ ಆ ಸ್ಥಳದ ಭಾಷೆಯಲ್ಲಿ ಸಮಾಧಾನದಿಂದ ಹೇಳಿದ: "ಬೆರಕೆ ಭಾಷೆ ಅರ್ಥವಾಗುವುದಿಲ್ಲ. ನಾವು ಇಲ್ಲಿಯ ಸ್ಥಳೀಯ ಭಾಷೆಯನ್ನು ಕಲಿಯುವ ಪ್ರಯತ್ನದಲ್ಲಿದ್ದೇವೆ. ಇಂಗ್ಲೆಂಡಿನ ಅಷ್ಟು ದೂರದಿಂದ ನಾವು ನಿಮ್ಮ ಸಂಸ್ಕೃತಿಯ ಬಗೆಗೆ ಕಲಿಯಲು ಬಂದಿದ್ದೇವೆ; ನಾವು ಈ ಭಾಷೆಯಲ್ಲಿ ಇನ್ನೂ ಸರಾಗವಾಗಿ ಮಾತನಾಡಲು ಆಗದೇ ಇರುವುದಕ್ಕೆ ದಯವಿಟ್ಟು ನಮ್ಮನ್ನು ಕ್ಷಮಿಸಿ. ಆದರೆ, ನಾವು ಇಲ್ಲಿಗೆ ಬಂದು ಕೇವಲ ಕೆಲವೇ ವಾರಗಳು ಮಾತ್ರ ಕಳೆದಿವೆ."

ಆ ವೃದ್ಧ ಅವನ ಸುತ್ತಲೂ ಸೇರಿದ್ದ ಉಳಿದ ಜನರೊಂದಿಗೆ ಆಶ್ಚರ್ಯ ಚಕಿತನಾದ, ಬಿಲ್ ಸ್ಥಳೀಯ ಭಾಷೆಯಲ್ಲಿ ಮಾತನಾಡುವುದನ್ನು ಕೇಳಿಸಿಕೊಂಡು, ತಕ್ಷಣವೇ ಇದು ವೈಮನಸ್ಯವನ್ನು ಪರಿಹರಿಸಿ ಮಾತುಕತೆಗೆ ಎಡೆಮಾಡಿತು. ಅವನು

ನಮ್ಮನ್ನು ಮುಖ್ಯ ಸಭೆ ಸೇರುವ ಸ್ಥಳಕ್ಕೆ ಕರೆದುಕೊಂಡು ಹೋದ ಮತ್ತು ಕುಳಿತು ಕೊಳ್ಳಲು ಹೇಳಿದ. ನಂತರ, ಮೊದಲನೆಯ ಮಹಾಯುದ್ಧಕ್ಕೂ ಮೊದಲು ಜರ್ಮನಿಯ ವಸಾಹತು ಆಡಳಿತದ ಅವಧಿಯಲ್ಲಿ ತಾನು ಹೇಗೆ ಆ ಆಡಳಿತದ ಕೈಕೆಳಗೆ ಬ್ಯಾಂಕಿನ ಕ್ಲರ್ಕ್ ಆಗಿ ಕೆಲಸ ಮಾಡಿದ್ದೆನೆಂಬುದನ್ನೂ ಮತ್ತು ತನಗೆ ಜರ್ಮನ್ ಭಾಷೆ ತಿಳಿದಿರುವುದೆಂದು ಹೇಳಿ ತನ್ನ ಮಾತನ್ನು ಮುಂದುವರೆಸಿದ. ನಾನು ಜರ್ಮನ್ ಭಾಷೆಯಲ್ಲಿ ಮಾತನಾಡಲು ಆರಂಭಿಸಿದಾಗ ಅವನಿಗೆ ನಂಬುವುದಕ್ಕೇ ಸಾಧ್ಯವಾಗಲಿಲ್ಲ ಮತ್ತು ಅವನ ಸಂಪೂರ್ಣ ವರ್ತನೆಯೇ ಬದಲಾಯಿತು. ನಂತರ ಶೀಘ್ರದಲ್ಲಿಯೇ ಆ ದ್ವೀಪದಲ್ಲಿ ಮನೆಯೊಂದನ್ನು ಬಾಡಿಗೆಗೆ ಹಿಡಿಯಲು ನಿಭಾಯಿಸಿಕೊಂಡು ಬಿಲ್ ಮಾಟುಪಿಟ್‌ಗೆ ಹೊರಟ.

ರ್‍ಯಾಪಿಟೋಕ್‌ನಲ್ಲಿ ನಾನೊಬ್ಬಳೇ ಇರಬೇಕಾದ ಮೊದಲ ರಾತ್ರಿಯಲ್ಲಿ ನಾನು ಬಹಳ ಒಂಟಿತನವನ್ನನುಭವಿಸಿದೆ ಮತ್ತು ನಾವಿಬ್ಬರೂ ಒಟ್ಟಿಗೆ ಹತ್ತಿರವೇ ಇದ್ದು, ಕೆಲಸ ಮಾಡಬಹುದಾಗಿತ್ತೆಂದೂ ಅಂದುಕೊಂಡೆ. ಪ್ರತಿ ವಾರದಲ್ಲಿಯೂ ಕಡೆಯ ಪಕ್ಷ ಒಂದು ರಾತ್ರಿಯಾದರೂ ಒಟ್ಟಿಗೆ ಇರಲು ಪ್ರಯತ್ನಿಸಬೇಕೆಂದು ಇಬ್ಬರೂ ಒಪ್ಪಿಕೊಂಡೆವು. ಆದರೆ, ಅದೂ ಕೂಡ ಸಾಕಷ್ಟು ಕಷ್ಟವೆಂದು ಸಾಧಿತವಾಯಿತು. ನಮ್ಮಿಬ್ಬರ ಬಳಿಯೂ ಒಂದೊಂದು ಕಾರು ಇತ್ತು. ಆದರೆ, ರಸ್ತೆಗಳ ಸ್ಥಿತಿ ಹೇಗಿತ್ತೆಂದರೆ, ರ್‍ಯಾಪಿಟೋಕ್‌ನಿಂದ ಮಾಟುಪಿಟ್‌ಗೆ ಪ್ರಯಾಣಿಸಬೇಕಾಗಿದ್ದ ೨೦ ಮೈಲಿಗಳನ್ನು ಕ್ರಮಿಸಲು ನನಗೆ ಸಾಮಾನ್ಯವಾಗಿ ಒಂದು ಘಂಟೆಯ ಸಮಯ ಬೇಕಾಗುತ್ತಿತ್ತು. ರ್‍ಯಾಪಿಟೋಕ್ ಸ್ನೇಹಿತರೊಡನೆ ರಬಾಉಲ್ ಮಾರ್ಕೆಟ್ಟಿಗೆ ಶನಿವಾರಗಳಂದು ಹೋದಾಗ ನಾನು ಬಿಲ್ ಜೊತೆ ರಾತ್ರಿ ಉಳಿದುಕೊಂಡು ಮರುದಿನ ಸಾಯಂಕಾಲ ನನ್ನ ಗ್ರಾಮದ ಮನೆಗೆ ಹಿಂತಿರುಗುತ್ತಿದ್ದೆ. ವಾರದ ಅವಧಿಯಲ್ಲಿಯೂ, ನಮ್ಮ ನಮ್ಮ ಗ್ರಾಮದ ಸ್ನೇಹಿತರೊಡನೆ ಒಂದಲ್ಲ ಒಂದು ತೊಲಾಯ್ ಕಾರ್ಯಕ್ರಮಕ್ಕೆ ಹೋದಾಗಲೂ ನಾವು ಪರಸ್ಪರ ಭೇಟಿಯಾಗುತ್ತಿದ್ದೆವು. ಬಿಲ್‌ನ ಮಾಟುಪಿಟ್ ಸ್ನೇಹಿತರು ನನ್ನ ರ್‍ಯಾಪಿಟೋಕ್ ಸ್ನೇಹಿತರನ್ನು ಅಜ್ಞಾನಿ, ಪೊದೆಗಳ ನಿವಾಸಿಗಳೆಂದು ಪರಿಗಣಿಸುವುದನ್ನೂ, ನನ್ನ ಸ್ನೇಹಿತರು ಮಾಟುಪಿಟ್ ದ್ವೀಪವಾಸಿಗಳನ್ನು ಅಹಂಕಾರಿ ನಗರವಾಸಿಗಳೆಂದು ಪರಿಗಣಿಸುವುದನ್ನೂ ಕಂಡು ನಾವು ಉಲ್ಲಾಸಗೊಂಡು ರಂಜನೆ ಪಡೆಯುತ್ತಿದ್ದೆವು.

ತೊಲಾಯ್ ಭಾಷಾಜ್ಞಾನಕ್ಕಾಗಿಯೂ ಮತ್ತು ತೊಲಾಯ್ ಜನರ ಸಂಪ್ರದಾಯಗಳ ಅರಿವಿನಿಂದಾಗಿಯೂ, ಬಿಲ್ ಶೀಘ್ರವಾಗಿ ತೊಲಾಯ್ ಜನರ ಗೌರವವನ್ನು ಗಳಿಸಿದ. ಅವನ ಶಾಂತ, ನಿರಾಡಂಬರ ಸ್ವಭಾವದ ರೀತಿನೀತಿಗಳು ತೊಲಾಯ್ ಜನರ ಹೃದಯದಲ್ಲಿ ಅವನಿಗೆ ಒಂದು ಸ್ಥಾನವನ್ನು ಗೆದ್ದುಕೊಟ್ಟವು ಮತ್ತು ಅದು ಈಗಲೂ ಕೂಡ ಮುಂದುವರಿಯುತ್ತಿದೆ. ನನ್ನನ್ನು ಜನರು ಬೇರೆಯೇ

ಸ್ತರದಲ್ಲಿ ಒಪ್ಪಿಕೊಂಡಿದ್ದರು. ನನ್ನ ಖ್ಯಾತಿಯು, ಸ್ಥಳೀಯ ಮಹಿಳೆಯರೊಡನೆ ನರ್ತನದಲ್ಲಿ ಭಾಗವಹಿಸಿದ ಮೊದಲ ಬಿಳಿಯ ಮಹಿಳೆ ಎನ್ನುವ ವಾಸ್ತವ ಸಂಗತಿಯನ್ನು ಆಧರಿಸಿತ್ತು. ತೊಲಾಯ್ ಜನರು ಹಾಗೂ ನಮ್ಮ ನಡುವೆ ಪರಸ್ಪರ ಪ್ರತಿಕ್ರಿಯೆಯಿಂದ ನಾವು ವಿಭಿನ್ನ ನಡವಳಿಕೆಗಳ ಬಗೆಗೆ ನಾವು ಅನೇಕ ಬಾರಿ ಚರ್ಚಿಸಿದೆವು. ತೊಲಾಯ್ ಆದ್ಯಂತ ನಾವು ಸ್ಥಾಪಿಸಿದ್ದ ಖ್ಯಾತಿಯಿಂದಾಗಿ ನಾವಿಬ್ಬರೂ ಹೆಮ್ಮೆ ಪಡುತ್ತಿದ್ದೆವು ಹಾಗೂ ಉಲ್ಲಾಸಗೊಳ್ಳುತ್ತಿದ್ದೆವು.

ತೊಲಾಯ್ ಸಮುದಾಯದಲ್ಲಿ ಅವರ ಸಂಸ್ಕೃತಿಗೆ ಪ್ರಧಾನವಾದಂತಹ ಒಂದು ಪುರುಷರ ರಹಸ್ಯ ಸಂಘವಿರುತ್ತದೆ ಮತ್ತು ಬಹುತೇಕ ತೊಲಾಯ್ ಯುವಕರು ಆ ಸಂಘದ ದೀಕ್ಷೆ ಪಡೆಯಲು ಇಚ್ಛಿಸುತ್ತಾರೆ. ಆ ದೀಕ್ಷೆಯ ಕಾರ್ಯವು ಯಾವ ವಿಧಿಗಳನ್ನು ಒಳಗೊಂಡಿತ್ತು ಎಂಬುದನ್ನು ಕಂಡುಕೊಳ್ಳಲು ಬಿಲ್‌ನ ಸಂಶೋಧನಾ ಆಸಕ್ತಿಯು ಅವನನ್ನು ತೀವ್ರವಾಗಿ ಉತ್ತೇಜಿಸಿತಾದರೂ ಮಾಟುಪಿಟ್‌ನ ಜನರಿಗೆ ಈ ವಿಷಯದಲ್ಲಿ ಯಾವುದೇ ರೀತಿಯ ಬೆಳಕು ಚೆಲ್ಲಲು ಮನಸ್ಸಿರಲಿಲ್ಲ. ಆದಾಗ್ಯೂ ರ್‍ಯಾಪಿಟೋಕ್‌ನ ನನ್ನ ಸ್ನೇಹಿತರು ಹೆಚ್ಚು ಮುಕ್ತ ಮನಸ್ಸಿನವರಾಗಿದ್ದರು ಮತ್ತು ದೀಕ್ಷಾವಧಿಯ ಮೊದಲ ಹಂತದಲ್ಲಿ ನಾನು ಅಲ್ಲಿರುವುದಕ್ಕೆ ಒಪ್ಪಿಕೊಂಡರು ಮತ್ತು ಗ್ರಾಮದ ಮಹಿಳೆಯರಿಗೆ, ಆ ಪುರುಷರ ರಹಸ್ಯವನ್ನು ತಿಳಿಸುವುದಿಲ್ಲವೆಂದು ಪುರುಷರ ರಹಸ್ಯ ಸಂಘದ ವ್ಯವಸ್ಥಾಪಕರಿಗೆ ನಾನು ವಚನ ನೀಡಿದೆ. ಅತ್ಯಂತ ಉತ್ಸಾಹದಿಂದ ಬಿಲ್ ಮತ್ತು ನಾನು ಈ ಸಮಾರಂಭದ ಆಚರಣೆಯನ್ನು ಎದುರು ನೋಡುತ್ತಿದ್ದೆವು.

ನನ್ನ ಈ ದೀಕ್ಷಾವಿಧಿಯ ಸುಮಾರು ಒಂದು ತಿಂಗಳಿಗೆ ಮುಂಚೆ, ನಾನು ಗರ್ಭಿಣಿಯಾಗಿರುವುದು ನನಗೆ ತಿಳಿಯಿತು. ತಂದೆ ತಾಯಿಯಾಗುವುದರ ಬಗೆಗೆ ಬಿಲ್ ಮತ್ತು ನಾನು ಆನಂದಾತಿಶಯ ಹೊಂದಿದ್ದೆವು ಮತ್ತು ಈ ಘಟನೆಗಾಗಿ ಯೋಜನೆಗಳನ್ನು ರೂಪಿಸತೊಡಗಿದೆವು. ಈ ಬಾರಿ ನಮ್ಮ ಈ ಸುದ್ದಿಯನ್ನು ಪ್ರಕಟಗೊಳಿಸಲು ಕಾಯಬೇಕೆಂದು ನಾವು ನಿರ್ಧರಿಸಿದೆವು ಹಾಗೂ ನಾನು ಆಸ್ಟ್ರೇಲಿಯಾಕ್ಕೆ ಹಿಂದಿರುಗುವ ಮೊದಲು ಕೆಲವು ತಿಂಗಳುಗಳವರೆಗೂ ನನ್ನ ಸಂಶೋಧನೆಯನ್ನು ಮುಂದುವರಿಸಬೇಕೆಂದು ತೀರ್ಮಾನಿಸಿದೆವು. ನನ್ನ ಹಿಂದಿನ ಅನುಭವದ ಬಗೆಗೆ ಆಲೋಚಿಸದಿರಲು ನಾನು ಪ್ರಯತ್ನಿಸಿದೆ ಮತ್ತು ನನ್ನ ಮಗುವನ್ನು ತೋಳುಗಳಲ್ಲಿ ಎತ್ತಿಕೊಳ್ಳುವ ದಿನದ ಬಗೆಗೆ ಕಲ್ಪಿಸಿಕೊಂಡೆ. ಆದರೂ, ನಾನು ದೀಕ್ಷಾವಿಧಿಯಲ್ಲಿ ಭಾಗವಹಿಸಬೇಕಾಗಿದ್ದ ದಿನವೇ ಮತ್ತೆ ರಕ್ತಸ್ರಾವವಾಗುತ್ತಿರುವುದನ್ನು ಅರಿತೆ. ಅದು ಭಯಾನಕವಾಗಿತ್ತು. ನನ್ನ ಗ್ರಾಮದ ಮುಖ್ಯಸ್ಥನನ್ನು ಅವನ ಕಾರಿನಲ್ಲಿ ಕಳಿಸಿ, ಬಿಲ್‌ಗೆ ಒಂದು ಪತ್ರ ಬರೆದು ಈಗ ಆಗಿರುವ ಸಂಗತಿಯನ್ನು ತಿಳಿಸಿ, ಆ್ಯಂಬುಲೆನ್ಸ್‌ನಲ್ಲಿ ನನ್ನನ್ನು ಕರೆದುಕೊಂಡು ಹೋಗುವಂತೆ ತಿಳಿಸಿದೆ. ನನ್ನ ಮಂಚದ

ಮೇಲೆ ನನ್ನ ಪಾಡಿಗೆ ನಾನು ಮೆಲ್ಲನೆ ಅಳುತ್ತಾ ಮಲಗಿದೆ. ಅವರು ಹೇಗಾದರೂ ಮಾಡಿ ಮಗುವನ್ನು ಉಳಿಸುತ್ತಾರೆಂದು ನಾನು ತೀವ್ರವಾಗಿ ಆಶಿಸುತ್ತಿದ್ದೆ. ಆದರೆ, ಅಂತರಂಗದಲ್ಲಿ ನನಗೆ ಗೊತ್ತಿತ್ತು, ಈಗಾಗಲೇ ನಾನದನ್ನು ಕಳೆದು ಕೊಂಡಿದ್ದೇನೆಂದು. ನಾನಿನ್ನು ಎಂದೆಂದಿಗೂ ಮಗುವನ್ನು ಪಡೆಯಲು ಸಾಧ್ಯವಿಲ್ಲವೆಂದು ಯೋಚಿಸತೊಡಗಿದೆ. ಆದ್ದರಿಂದ ಬಿಲ್ ನನ್ನನ್ನು ಪ್ರೀತಿಸುವುದನ್ನು ನಿಲ್ಲಿಸಿಬಿಡುತ್ತಾನೆ ಎಂದುಕೊಂಡೆ. ನಾನು ನನ್ನ ಎರಡನೆಯ ಮಗುವನ್ನೂ ಕಳೆದು ಕೊಂಡಿದ್ದೆ. ಅಲ್ಲದೆ, ನಾನು ಕಾತುರದಿಂದ ಎದುರು ನೋಡುತ್ತಿದ್ದ ದಿನದಂದೇ ಅದೂ ಆ ದಿನದ ಕಾರ್ಯದಲ್ಲಿ ಭಾಗವಹಿಸುವ ಅವಕಾಶಕ್ಕಾಗಿ ಎಷ್ಟು ಪ್ರಯತ್ನ ಪಟ್ಟು ಸಾಧಿಸಿದ್ದೆ– ಆ ದಿನವೇ ಹೀಗೆ ನಡೆದದ್ದು ನಿಜವಾಗಿಯೂ ತೀರಾ ಅನ್ಯಾಯವೆನಿಸಿತು.

ರಬಾಉಲ್‌ನ ಖಾಸಗಿ ಆಸ್ಪತ್ರೆಯಲ್ಲಿ ಮೂರು ದಿನಗಳು ಇದ್ದ ಬಳಿಕ ನಾನು ರ್‍ಯಾಪಿಟೋಕ್‌ಗೆ ಹಿಂದಿರುಗಲು ಸಿದ್ಧಳಾದೆ. ಪೇಲವವಾಗಿ ಇನ್ನೂ ನಿತ್ರಾಣಳಾಗಿದ್ದ ನಾನು ನಿಧಾನವಾಗಿ ಕಾರಿನಿಂದ ಕೆಳಗಿಳಿದೆ. ಗ್ರಾಮದಲ್ಲಿನ ನನ್ನ ಸ್ನೇಹಿತರು ನನ್ನನ್ನು ಸ್ವಾಗತಿಸಲು ಧಾವಿಸಿ ಬಂದರು. ನಾನು ಆಸ್ಪತ್ರೆಗೆ ಅಷ್ಟೊಂದು ಆತುರದಿಂದ ಏಕೆ ಹೋಗಬೇಕಾಯಿತೆಂಬುದನ್ನು ಅವರಿಗೆ ತಿಳಿಸಿರಲಿಲ್ಲ. ಆದರೆ, ಆ ಮಹಿಳೆಯರು ಯಾವ ರೀತಿಯ ತೊಂದರೆ, ಸಮಸ್ಯೆ ಉಂಟಾಗಿದ್ದಿರಬಹು ದೆಂದು ಊಹಿಸಿದ್ದರು. ಹೇಗೆ ಎಂಬುದು ನನಗೆ ತಿಳಿಯದಿದ್ದರೂ, ನಾನು ಅವರ ಕೆಲವು ಪುರುಷರೊಂದಿಗೆ, ಪುರುಷರ ರಹಸ್ಯ ಸಂಘಕ್ಕೆ ಸೇರುವ ವ್ಯವಸ್ಥೆ ಮಾಡಿಕೊಂಡಿದ್ದೆ ಎನ್ನುವುದನ್ನು ಅವರು ತಿಳಿದಿದ್ದರು. ಅಂದಿನ ಸಾಯಂಕಾಲ ನನ್ನ ಪ್ರಶರ್ ಲ್ಯಾಂಪಿನ ಸುತ್ತಲೂ ಕುಳಿತುಕೊಂಡು ಅವರು ನನಗೇಕೆ ಗರ್ಭಪಾತ ವಾಯಿತು ಎಂಬುದನ್ನು ವಿವರಿಸಿದರು. ಪುರುಷರು ರಹಸ್ಯ ಸಂಘದ ಆತ್ಮವಾದ 'ಡುಕ್‌ಡುಕ್', ನಾನು ರಹಸ್ಯವಾದ ಪುರುಷರ ಪಂಥವನ್ನು ಸೇರಲು ಪ್ರಯತ್ನಿಸಿದ್ದಕ್ಕಾಗಿ ನನ್ನನ್ನು ಶಿಕ್ಷಿಸಿತು ಎಂದು ಹೇಳಿದರು. ನಾನು ಕೇವಲ ಹೆಣ್ಣು ಎಂಬುದನ್ನು ನೆನಪಿಸುವುದಕ್ಕಾಗಿ ಅದು ನಾನು ನನ್ನ ಮಗುವನ್ನು ಕಳೆದುಕೊಳ್ಳುವಂತೆ ಮಾಡಿತು ಎಂದರು.

ಕೆಲವು ತಿಂಗಳುಗಳ ನಂತರ ನಾವು ಆಸ್ಟ್ರೇಲಿಯಾಕ್ಕೆ ಹಿಂತಿರುಗಿದೆವು. ನಾನು ಅಲ್ಲಿ ಒಬ್ಬ ಸ್ತ್ರೀರೋಗ ತಜ್ಞರೊಡನೆ ಸಮಾಲೋಚಿಸಿದೆ. ನಾನು ಫೈಬ್ರಾಯಿಡ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದೂ, ನಂತರ ಎಲ್ಲವೂ ಸರಿಹೋಗಬಹುದೆಂದು, ಆ ವೈದ್ಯರು ಹೇಳಿದರು. ಶಸ್ತ್ರ ಚಿಕಿತ್ಸೆಯ ಒಂದೆರಡು ದಿನಗಳ ನಂತರ, ನಾನು ಚೇತರಿಸಿಕೊಳ್ಳುತ್ತಿದ್ದಾಗ ಬಿಲ್ ಮತ್ತು ಓಟ್ವೊ ನನ್ನನ್ನು ಆಸ್ಪತ್ರೆಯಲ್ಲಿ ಭೇಟಿಯಾದರು, ಅದೂ ಅಮ್ಮನು ಇಂಗ್ಲೆಂಡಿನಲ್ಲಿ ಮರಣಹೊಂದಿದ್ದಳೆಂಬ ಸುದ್ದಿಯೊಡನೆ. ನಾನು ನನ್ನದೇ ಜೀವನದ ಸಂಗತಿಗಳಲ್ಲಿ ವ್ಯಸ್ತಳಾಗಿಬಿಟ್ಟಿದ್ದು, ನನ್ನ ತಂದೆ ತಾಯಿಯ

ಬಗೆಗೆ ಯೋಚಿಸಲು ಸಮಯವೇ ಇರಲಿಲ್ಲ. ಹಾಗಾಗಿ ಈ ಸುದ್ದಿಯು ನನಗೆ ದೊಡ್ಡ ಆಘಾತದಂತೆ ಬಂದಿತು. ಆಸ್ಟ್ರೇಲಿಯಾಗೆ ಹೊರಡುವುದಕ್ಕೆ ಮುಂಚೆ, ನಾನು ಕಟ್ಟಕಡೆಯ ಬಾರಿಗೆಂಬಂತೆ ಅವಳಿಗೆ ವಿದಾಯ ಹೇಳಿದಾಗ ಅವಳ ಒಣಗಿದ ಮುಖದ ಮೇಲಿನ, ವಿಷಣ್ಣತೆಯ ಭಾವವನ್ನು ನಾನು ನೆನಪು ಮಾಡಿಕೊಂಡೆ. ನಾನು ಅಲ್ಲಿಂದ ಹೊರಟುಬಂದಿದ್ದೇ ಅವಳ ಸಾವಿಗೆ ಕಾರಣವಾಯಿತು ಎಂದು ನಾನು ಯೋಚಿಸದೆ ಇರಲಾರದಾದೆ. ಅವಳನ್ನು ಮತ್ತೆ ನಾನು ನೋಡುವುದೇ ಇಲ್ಲವೆಂದು ನನಗೆ ನಂಬಲು ಸಾಧ್ಯವಾಗಲಿಲ್ಲ. ನನಗೆ ಅಳುವುದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ; ಸಾವು ನನ್ನನ್ನು ಸುತ್ತುವರಿದಿತ್ತು. ನನ್ನ ಮಗು, ನನ್ನ ಅಮ್ಮ ಮುಂದೆ ಮತ್ತೇನು? ಬಿಲ್ ನನ್ನನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದ, ಆದರೆ ಏನೂ ಉಪಯೋಗವಾಗಲಿಲ್ಲ. ಕಡೆಗೆ ಅವನು ಮತ್ತು ಓಟ್ಟೊ ಹೊರಡಲೇ ಬೇಕಾಯಿತು.

ಅವರು ಹೊರಟ ಸ್ವಲ್ಪ ಸಮಯದಲ್ಲಿಯೇ, ನಾನು ಕೊಠಡಿಯನ್ನು ಹಂಚಿಕೊಂಡಿದ್ದ ರೋಗಿಯು ನಾನೇಕೆ ಅಷ್ಟೊಂದು ಕ್ಷೋಭೆಗೊಂಡಿದ್ದೆನೆಂದು ಕೇಳಿದಳು. ನಾನು ನನ್ನ ತಾಯಿಯ ಸಾವಿನ ಬಗೆಗೆ ಹೇಳಿದಾಗ, ಅವಳು ನನ್ನ ಕಡೆಗೆ ತಿರುಗಿಕೊಂಡಳು ಮತ್ತು ದೃಢವಾದ ಧ್ವನಿಯಲ್ಲಿ ಹೇಳಿದಳು: "ಅಳಬೇಡ, ಸ್ವರ್ಗದಿಂದ ನಿನ್ನನ್ನು ವೀಕ್ಷಿಸುತ್ತಿರುವ ನಿನ್ನ ಅಮ್ಮನನ್ನು ಅದು ದುಃಖ ಗೊಳಿಸುವುದು." ಅವಳ ಮಾತುಗಳನ್ನು ಕೇಳುತ್ತಿರುವಾಗ ನಾನು ಯೋಚಿಸ ತೊಡಗಿದೆ: "ದೇವರಲ್ಲಿ ಮತ್ತು ಮರಣಾನಂತರದ ಜೀವನದಲ್ಲಿ ಅವಳ ನಂಬಿಕೆಯನ್ನು ನಾನೂ ಹಂಚಿಕೊಳ್ಳಬಹುದಾಗಿದ್ದರೆ ಎಷ್ಟು ಅದ್ಭುತವಾಗಿರುತ್ತಿತ್ತು; ಎಲ್ಲವನ್ನೂ ಅದು ಎಷ್ಟು ಸುಲಭಗೊಳಿಸಿರುತ್ತಿತ್ತು. ಆದರೆ ನಾನು ಎಷ್ಟೇ ಪ್ರಯತ್ನಿಸಿದರೂ, ನನ್ನ ತಾಯಿಯು ಎಲ್ಲಿಯೋ ಒಂದು ಮೋಡದ ಮೇಲೆ ತೇಲುತ್ತಿರುವಳೆಂದೂ ಈಗಲೂ ನನ್ನ ಜೀವನದ ಒಂದು ಭಾಗವಾಗಿದ್ದಾಳೆಂದೂ, ನನ್ನನ್ನು ನಾನು ನಂಬಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಸಾವು ಎನ್ನುವುದು ಅಂತಿಮ ವಾಸ್ತವವಾಗಿ ತೋರಿತ್ತು ನನಗೆ.

ಅಮ್ಮನ ಸಾವಿನ ನಂತರ, ಅಪ್ಪನು ಸಿಡ್ನಿಗೆ ಬಂದಿರುವುದು ಉತ್ತಮ ಎಂದು ನಾನು ಮತ್ತು ಓಟ್ಟೊ ನಿರ್ಧರಿಸಿದೆವು. ೧೯೫೩ರಿಂದಲೂ ಓಟ್ಟೊನನ್ನು ನೋಡಿರಲಿಲ್ಲವಾಗಿ ಅವನ ಜೊತೆಯಲ್ಲಿ ಬಂದಿರುವ ಸಂಭವತೆಯಿಂದ ಅಪ್ಪ ಹರ್ಷಿತರಾದರು. ಅಮ್ಮನ ಜೊತೆಯಿರದೆ ಅವರನ್ನು ಸ್ವಾಗತಿಸುವುದು ತೀರಾ ವಿಚಿತ್ರ ಎನಿಸಿತು ಮತ್ತು ನನ್ನ ದುಃಖವನ್ನು ಮತ್ತಷ್ಟು ಹೆಚ್ಚು ವಾಸ್ತವಗೊಳಿಸಿತು. ನನಗೆ ಅಮ್ಮನ ಅವಶ್ಯಕತೆಯಿದೆ ಎಂದು ಬಹಳ ದಿನಗಳಿಂದಲೂ ಅನ್ನಿಸುತ್ತಿತ್ತು ಮತ್ತು ಮಗಳಿಗೆ ಯಾವಾಗ ತಾಯಿಯು ಹತ್ತಿರ ಇದ್ದು ನೆರವು ನೀಡಿ ಮಾರ್ಗ

ದರ್ಶನ ಮಾಡಬೇಕೋ ಆಗ ಅವಳು ಎಂದಿಗೂ ಇಲ್ಲವಾಗಿದ್ದಳು. ನಾನು ತಬ್ಬಲಿಯಾಗಿದ್ದೆ.

* * * *

# ೧೩. 'ಸಮತೋಲನ ಕಾರ್ಯ'

ಕ್ಯಾನ್‌ಬೆರಾದಲ್ಲಿ ನಮ್ಮ ಜೀವನ ದಿನನಿತ್ಯದ ಕಾರ್ಯಕಲಾಪಗಳಲ್ಲಿ ನೆಲೆಗೊಂಡಿತು ಮತ್ತು ಕೆಲವು ವರ್ಷಗಳ ನಂತರ ನಾವು ಅಲ್ಲಿಂದ ಹೊರಡಲು ಸಿದ್ಧರಿದ್ದೆವು. ೧೯೬೧ರಲ್ಲಿ, ಮ್ಯಾಕ್ಸ್ ಗ್ಲುಕ್‌ಮನ್‌ನಿಂದ ಮ್ಯಾಂಚೆಸ್ಟರ್ ಯೂನಿವರ್ಸಿಟಿಯಲ್ಲಿ ಉಪನ್ಯಾಸಕ ಹುದ್ದೆಯನ್ನು ನೀಡುವ ಒಂದು ಪತ್ರ ನಮಗೆ ಬಂದಿತು. ಸೊಂಟದ ಭಾಗದಲ್ಲಿ ನಾವಿಬ್ಬರೂ ಕೂಡಿಕೊಂಡು ಒಟ್ಟಿಗೇ ಉಪನ್ಯಾಸ ನೀಡುತ್ತಿರುವಂತೆ ಕಲ್ಪಿಸಿಕೊಂಡು ನಾವಿಬ್ಬರೂ ಮನಸಾರೆ ನಕ್ಕೆವು. ಯಾರು ಈ ಹುದ್ದೆಯನ್ನು ಒಪ್ಪಿಕೊಳ್ಳಬೇಕೆಂಬುದರ ಬಗೆಗೆ ನಾವಿಬ್ಬರೂ ಚರ್ಚಿಸಿದೆವು. ಸುರಕ್ಷಿತವಾಗಿದ್ದ ಅಕಡೆಮಿಕ್ ಹುದ್ದೆಯನ್ನು ನಾನು ಪಡೆದುಕೊಳ್ಳಬೇಕೆಂದು ಬಿಲ್ ಭಾವಿಸಿದ. ಆದರೆ, ವಿವಿಧ ರೀತಿಯ ವ್ಯಾಪಕ ಕೌಶಲ್ಯಗಳನ್ನು ನಾನು ಹೊಂದಿದ್ದೆನೆಂದೂ ಮತ್ತು ಬೇರೊಂದು ಕೆಲಸವನ್ನು ಪಡೆಯುವುದು ನನಗೆ ಸುಲಭವಾಗುವುದೆಂದೂ ನಾನು ಪಟ್ಟು ಹಿಡಿದೆ. ಹಾಗಾಗಿ ಆ ಹುದ್ದೆಯನ್ನು ಬಿಲ್ ಒಪ್ಪಿಕೊಂಡ. ನಾವು ಅಲ್ಲಿಂದ ಹೊರಡಲು ಸಿದ್ಧರಾದೆವು. ಅಲ್ಲಿಂದ ಹೊರಡುವುದಕ್ಕೆ ಮೊದಲು, ಆಸ್ಟ್ರೇಲಿಯಾ ಯೂನಿವರ್ಸಿಟಿಯ ಉಪಕುಲಪತಿಗಳಾಗಿದ್ದ ಸರ್ ಜಾನ್ ಕ್ರಾಫರ್ಡ್‌ರು ನನ್ನನ್ನು ತಮ್ಮ ಆಫೀಸಿಗೆ ಕರೆದು ಹೇಳಿದರು: "ಸ್ಕಾರ್ಲೆಟ್, ನಿನ್ನ ಅಧ್ಯಯನದಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ, ನೀನು ಎಂದಾದರೂ ಆಸ್ಟ್ರೇಲಿಯಾಕ್ಕೆ ಹಿಂದಿರುಗಲು ನಿರ್ಧರಿಸಿದರೆ, ಇಲ್ಲಿ ಯಾವಾಗಲೂ ನಿನಗೆ ಒಂದು ಹುದ್ದೆಯು ತೆರವಾಗಿರುತ್ತದೆ." ನಾನು ಉತ್ಕಟವಾಗಿ ಹಾತೊರೆಯುತ್ತಿದ್ದ ಮನ್ನಣೆಯನ್ನು ಕಡೆಗೂ ಪಡೆದೆನೆಂದೆನಿಸಿತು.

ಹಿಂದಿರುಗುವ ವಿಮಾನಯಾನವು, ಹವಾಯಿಯಲ್ಲಿ ಉಳಿದುಕೊಂಡಿದ್ದುದರಿಂದಲೂ, ಬಹಳ ಹಿತಕರವಾಗಿತ್ತು. ಆದರೆ, ಆಸ್ಟ್ರೇಲಿಯಾಕ್ಕೆ ಹೋಗುವಾಗ ನಾನು ಕಳೆದುಕೊಂಡಿದ್ದ ಮಗುವಿನ ಬಗೆಗೆ ನಾನು ಯೋಚಿಸದಿರಲು ಸಾಧ್ಯವಾಗಲಿಲ್ಲ. ಜೀವನ ಈಗ ಎಷ್ಟೋ ಬೇರೆಯಾಗಿಯೇ ತೋರಿತು. ತನ್ನ ಬಾಹುಗಳನ್ನು ತೆರೆದುಕೊಂಡು, ಅಮ್ಮ ಅಪ್ಪ ಇಬ್ಬರೂ ಮ್ಯಾಂಚೆಸ್ಟರ್‌ನಲ್ಲಿ ನಮಗಾಗಿ ಕಾಯುತ್ತಿರುತ್ತಾರೆಂದು ನಾನು ಅರ್ಧ ನಿರೀಕ್ಷೆಯಲ್ಲಿದ್ದೆ. ಹೇಗೇ ಆದರೂ ನಾವು ಬರುವ ಸಮಯಕ್ಕೆ ಕುರ್ಟ್ ವಿಮಾನ ನಿಲ್ದಾಣದಲ್ಲಿ ತಾನೇ ಕಾಯುತ್ತಿದ್ದ. ಮ್ಯಾಂಚೆಸ್ಟರ್‌ನಲ್ಲಿ

ತನ್ನ ಅತ್ತೆಯ ಮಹಡಿ ಮನೆಯ ಮೊದಲ ಅಂತಸ್ತನ್ನು ನಮಗೆ ಬಾಡಿಗೆಗೆ ಕೊಡುವಂತೆ, ಕುರ್ಟ್ ಅನುಕೂಲಕರವಾದ ವ್ಯವಸ್ಥೆ ಮಾಡಿದ್ದ. ನಾವು ಸರಿಯಾಗಿ ನೆಲೆ ನಿಂತ ಕೂಡಲೇ ನಾನು ನನ್ನ ಅನೇಕ ಹಳೆಯ ಸ್ನೇಹಿತರನ್ನು ಸಂಪರ್ಕಿಸಿ, ನನಗೆಲ್ಲಿಯಾದರೂ ಕೆಲಸ ಸಿಗಬಹುದು ಎನ್ನುವ ಬಗೆಗೆ ತಿಳಿದಿದೆಯೇ ಎಂದು ವಿಚಾರಿಸಿದೆ. “ಸಾಲ್‌ಫೋರ್ಡ್ ಕಾಲೇಜ್ ಆಫ್ ಅಡ್ವಾನ್ಸಡ್ ಟೆಕ್ನಾಲಜಿ”ಯು ಹಿರಿಯ ಶ್ರೇಣಿಯ ಅಧ್ಯಾಪಕರಿಗಾಗಿ ಇತ್ತೀಚೆಗೆ ಜಾಹೀರಾತು ನೀಡಿತ್ತೆಂದು ಆ ಸ್ನೇಹಿತರಲ್ಲಿ ಒಬ್ಬರು ಹೇಳಿದರು. ಆದರೆ, ದುರದೃಷ್ಟವಶಾತ್ ಅರ್ಜಿ ಹಾಕಲು ಕಡೆಯ ದಿನಾಂಕ ಆಗಲೇ ಮುಗಿದುಹೋಗಿತ್ತು. ಇದನ್ನು ಕೇಳಿದ ನಾನು ಈ ಖಾಲಿಯಿರುವ ಹುದ್ದೆಯ ಬಗೆಗೆ ಹೆಚ್ಚು ವಿಷಯ ತಿಳಿಯಲು ನಿರ್ಧರಿಸಿದೆ. ಕಾಲೇಜಿನ ಪ್ರಾಂಶುಪಾಲರಿಗೆ ದೂರವಾಣಿಯ ಮೂಲಕ ಕರೆ ಮಾಡಿದೆ ಮತ್ತು ನನ್ನ ಅಕೆಡೆಮಿಕ್ ಅರ್ಹತೆಗಳು, ಸಂಶೋಧನೆಯ ಅನುಭವಗಳಿಂದಾಗಿ ಅವರನ್ನು ಪ್ರಭಾವಿಸಿದುದರಿಂದಾಗಿ ಅವರು ನನ್ನನ್ನು ವಿಶೇಷ ಅಭ್ಯರ್ಥಿಯಾಗಿ ಪರಿಗಣಿಸುವಂತೆ ಕೋರಿಕೊಂಡೆ. ನನ್ನ C.V.ಯೊಡನೆ ನಾನು ಧಾವಿಸಿದೆ, ಅಭ್ಯರ್ಥಿಗಳ ಪಟ್ಟಿಯಲ್ಲಿ ನನ್ನ ಹೆಸರನ್ನೂ ಷಾರ್ಟ್ ಲಿಸ್ಟಿನಲ್ಲಿ ಸೇರಿಸಲೆಂದು.

ಹಿರಿಯ ಶ್ರೇಣಿಯ ಉಪನ್ಯಾಸಕಿಯಾಗುವ ಪ್ರತೀಕ್ಷೆಯಿಂದ ನಾನು ಬಹಳ ಉತ್ತೇಜಿತಳಾಗಿದ್ದೆ ಮತ್ತು ಆ ಸಾಯಂಕಾಲ ಬಿಲ್ ಮನೆಗೆ ಬರುವ ವೇಳೆಗೆ ನಾನು ಸಂತೋಷದಿಂದ ಉಬ್ಬಿದ್ದೆ. ಬಿಲ್ ಯಾವಾಗಲೂ ನನಗಿಂತಲು ವಿವೇಕಿಯೂ, ದೂರದೃಷ್ಟಿಯುಳ್ಳವನೂ ಆಗಿದ್ದ. ನನ್ನ ಮುಂದೆ ಉಂಟಾಗಬಹುದಾದ ನಿರಾಶೆಯಿಂದ ರಕ್ಷಿಸಲೆಂದು ಒಮ್ಮೆಗೇ ವಾಸ್ತವಿಕತೆಗೆ ಇಳಿಸಿದ. ಆದರೆ, ನಾನು ಅವನ ಮಾತಿಗೆ ಕಿವಿಗೊಡಲಿಲ್ಲ; ಆ ಕೆಲಸವನ್ನು ಪಡೆಯಲೇಬೇಕೆಂದು ನಾನು ನಿರ್ಧರಿಸಿದ್ದೆ. ಮರುದಿನ ನಾನು ಸಂದರ್ಶನಕ್ಕಾಗಿ ಆಹ್ವಾನಿತಳಾದೆ. ನಾನು ಹೊರಟಾಗ ಬಿಲ್ ನನ್ನನ್ನು ಆಲಂಗಿಸಿಕೊಂಡ ಮತ್ತು ನನಗೇನಾದರೂ ಈ ಕೆಲಸ ಸಿಗದಿದ್ದಲ್ಲಿ ನಾನು ಹೆಚ್ಚು ತಳಮಳಗೊಳ್ಳಬಾರದೆಂದು ನನ್ನಿಂದ ವಚನ ತೆಗೆದುಕೊಂಡ. ನಾನು ಕೋಪೋದ್ರಿಕ್ತಳಾದೆ ಮತ್ತು ಹರಿತವಾಗಿ ಉತ್ತರಿಸಿದೆ: “ನೀನೇನೂ ಚಿಂತಿಸಬೇಡ, ನಾನು ಆ ಕೆಲಸವನ್ನು ಪಡೆದೇ ಪಡೆಯುತ್ತೇನೆ.”

ಕಾಲೇಜಿಗೆ ಬಂದ ನಂತರ, ಸಂದರ್ಶನಕ್ಕಾಗಿ ಬೇರೆ ಇಬ್ಬರು ಅಭ್ಯರ್ಥಿಗಳು ಕಾಯುತ್ತಿದ್ದ ಕೋಣೆಯೊಳಕ್ಕೆ ನನ್ನನ್ನೂ ಕರೆದೊಯ್ಯಲಾಯಿತು, ಅವರಿಬ್ಬರೂ ಲಿಬರಲ್ ಸ್ಟಡೀಸ್ ವಿಭಾಗದಲ್ಲಿ ಪ್ರಸ್ತುತ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದರೆಂದೂ, ಮುಂಬಡ್ತಿಗಾಗಿ ಅರ್ಜಿ ಹಾಕಿಕೊಂಡಿದ್ದರೆಂದೂ ನಾನು ಶೀಘ್ರವೇ ಕಂಡುಕೊಂಡೆ. ತಾವು ಯಶಸ್ವಿಯಾಗುವೆವು ಎಂಬುದರ ಬಗೆಗೆ ಇಬ್ಬರೂ ಭರವಸೆ ಹೊಂದಿದ್ದಂತೆ ತೋರಿತು. ಅವರಿಬ್ಬರೂ ಸಂದರ್ಶನ ಕೊಠಡಿಯಿಂದ ಬೇರೆ

ಬೇರೆಯಾಗಿ ಹೊರಬರುವುದನ್ನು ನೋಡಿದಾಗ ಕೂಡ ಅವರು, ಭರವಸೆ, ಆತ್ಮವಿಶ್ವಾಸವುಳ್ಳವರಂತೆಯೇ ಕಂಡರು. ನನ್ನ ಕಡೆಗೆ ತಿರುಗಿ ಅವರು ತಲೆಯಾಡಿಸಿ, ಪ್ರಾಂಶುಪಾಲರು ತಮ್ಮ ನಿರ್ಧಾರವನ್ನು ಸಾಯಂಕಾಲದ ಒಳಗೆ ತಿಳಿಸುವುದಾಗಿ ಹೇಳಿದ್ದಾರೆ ಎಂದರು. ಅವರ ಆತ್ಮವಿಶ್ವಾಸ ನನ್ನನ್ನು ಚಿಂತೆಗೀಡು ಮಾಡಿದಂತೆ ನಾನು ಪ್ರಯತ್ನಿಸಿದೆ ಮತ್ತು ನನ್ನ ಡಾಕ್ಟರೇಟ್ ಪದವಿ, ಸಂಶೋಧನೆಯ ಅನುಭವ ಮತ್ತು ಮುಂದೆ ಪ್ರಕಟಣೆಯಾಗಲಿರುವ ನನ್ನ ಪುಸ್ತಕ ಇವುಗಳಿಂದ ನನ್ನನ್ನು ನಾನು ಭರವಸೆಗೊಳಿಸಿಕೊಳ್ಳುತ್ತಾ ಅವರಿಬ್ಬರಿಗಿಂತಲೂ ನಾನು ಅರ್ಹ ಅಭ್ಯರ್ಥಿ ಎಂದುಕೊಂಡೆ. ನನ್ನ ಹೆಸರನ್ನು ಕರೆದಾಗ ನನ್ನನ್ನು ನಾನು ಸಾವರಿಸಿಕೊಂಡು ಯುದ್ಧಕ್ಕೆ ಸಿದ್ಧಳಾದೆ.

ಸಂದರ್ಶನ ತಜ್ಞರ ಸಮಿತಿಯು ಮೂರು ಜನರನ್ನು ಒಳಗೊಂಡಿತ್ತು. ಅವರೆಲ್ಲರೂ ಕೂಡ, ಈ ಹುದ್ದೆಗೆ ಅಗತ್ಯವಾಗಿರುವ ನನ್ನ ಜ್ಞಾನವನ್ನೂ, ಅರ್ಹತೆಯನ್ನೂ ಕಡೆಯ ತನಕ ಪರೀಕ್ಷಿಸುವ ಉದ್ದೇಶ ಹೊಂದಿದ್ದಂತೆ ತೋರಿತು. ಇದು ಈ ಸವಾಲನ್ನು ಎದುರಿಸಲು ಸಿದ್ಧವಾಗುವಂತೆ ನನ್ನನ್ನು ಉತ್ತೇಜನಗೊಳಿಸಿತು ಮತ್ತು ಮುಂದೆ ಅರ್ಧ ಘಂಟೆಗೂ ಹೆಚ್ಚಾಗಿ ನಾವು ವಾಗ್ವಾದದಲ್ಲಿ ನಿರತರಾದೆವು. ಅಂತಿಮವಾಗಿ, ಪ್ರಾಂಶುಪಾಲರು ಮಧ್ಯೆ ಬಂದರು ಮತ್ತು ಸಂದರ್ಶನದ ರೀತಿ ಬದಲಾಯಿತು. ಇದ್ದಕ್ಕಿದ್ದಂತೆಯೇ ನನ್ನನ್ನು ಹೀಗೆ ಕೇಳಿದರು: “ತಮ್ಮ ಬಗೆಗೆ ಅತೀವ ಭರವಸೆಯಿದ್ದ, ಅನೇಕ ಬಾರಿ ನಿಯಂತ್ರಿಸಲು ಬಹಳ ಕಷ್ಟವಾಗುತ್ತಿದ್ದ ಕಿರಿಯ ಕಾರ್ಯನಿರ್ವಾಹಕರ ತರಗತಿಗಳನ್ನು ನಿರ್ವಹಿಸಲು ನಿಮಗೆ ಸಾಧ್ಯ ವಾಗುತ್ತದೆಯೇ?” ನಾನು ಅತಿಯಾದ ಆತ್ಮವಿಶ್ವಾಸ ಮತ್ತು ಹೆಮ್ಮೆಯಿಂದ ಉತ್ತರಿಸಿದೆ: “ಸರ್, ಇತ್ತೀಚಿನತನಕ ನರಭಕ್ಷಕರಾಗಿದ್ದ, ನ್ಯೂಗಿನಿಯ ಬುಡಕಟ್ಟು ಜನಾಂಗವನ್ನು ಅಧ್ಯಯನ ಮಾಡುತ್ತಾ, ಅವರೊಡನೆಯೇ ವಾಸಿಸುತ್ತಾ ಒಂದು ವರ್ಷವನ್ನು ಕಳೆದು ಬಂದಿದ್ದೇನೆ. ಅವರಲ್ಲಿ ಅನೇಕರೊಡನೆ ನಾನು ಸ್ನೇಹ ಬೆಳೆಸಿದ್ದೆ. ಅನೇಕರು ಸ್ನೇಹಿತರಾಗಿ ಉಳಿದಿದ್ದಾರೆ. ಆದ್ದರಿಂದ ಅತ್ಯಂತ ಕಷ್ಟಸಾಧ್ಯರಾದ ಕಿರಿಯ ಕಾರ್ಯ ನಿರ್ವಾಹಕರನ್ನು ಸಹ ನಾನು ಪಳಗಿಸಬಲ್ಲೆ ಎಂಬ ಖಚಿತ ಭರವಸೆ ನನಗಿದೆ!” ನನ್ನ ಪ್ರತಿಸ್ಪಂದನ, ಪ್ರತಿಕ್ರಿಯೆಗಳನ್ನು ಕೇಳಿದ ಆ ಜನರು ಒಳಗೊಳಗೇ ಮುಸಿ ಮುಸಿ ನಕ್ಕರು ಮತ್ತು ಆ ತಕ್ಷಣವೇ ನನಗೆ ಹಿರಿಯ ಶ್ರೇಣಿಯ ಉಪನ್ಯಾಸಕ ಹುದ್ದೆಯನ್ನು ನೀಡಿದರು. ನಾನು ರೋಮಾಂಚಿತಳಾದೆ ಮತ್ತು ಯುದ್ಧಾನಂತರದ ವಿಜಯೀಭಾವವನ್ನನುಭವಿಸಿದೆ. ಸಂತೋಷ ನೀಡಿದಂತಹ ಸಂದರ್ಶನಕ್ಕಾಗಿ ತಜ್ಞರ ಸಮಿತಿಯನ್ನು ವಂದಿಸಿದೆ ಮತ್ತು ಶಾಂತಚಿತ್ತಳಾಗಿ ಆ ಸಭಾಂಗಣದಿಂದ ಹೊರಗೆ ಬರಲು ಪ್ರಯತ್ನಿಸಿದೆ. ಆದರೆ, ನಿಜವಾಗಿಯೂ ನನಗೆ ಕಿರುಚಾಡಿ, ಕುಣಿದಾಡಬೇಕೆನ್ನಿಸಿತು. ನಿರೀಕ್ಷಾ ಕೊಠಡಿಗೆ ಪ್ರವೇಶಿಸಿದಾಗ ಅಲ್ಲಿ ಆ ಇಬ್ಬರು

ಅಭ್ಯರ್ಥಿಗಳೂ ಪ್ರಾಯಶಃ ತಮ್ಮ ಅವಕಾಶಗಳ ಬಗೆಗೆ ಚರ್ಚಿಸುತ್ತಿರುವುದನ್ನು ನೋಡಿದೆ. ಆಗ ತಾನೇ ಆ ಹುದ್ದೆಯು ನನಗೆ ಕೊಡಲ್ಪಟ್ಟಿತೆಂದು, ನಾನು ಖುಷಿಯಿಂದ ಹೇಳದೇ ಇರಲು ನನಗೆ ಸಾಧ್ಯವಾಗಲಿಲ್ಲ, ಕಾಲೇಜು ವಿಭಾಗದಲ್ಲಿ ನಾನು ಸ್ನೇಹಿತರನ್ನು ಗಳಿಸಿಕೊಳ್ಳುವ ವಿಧಾನ ಇದಲ್ಲವೆಂದು ನಾನು ಅರಿಯಬೇಕಾಗಿತ್ತು. ಆದರೆ, ನಾನು ಕೆನೆಯನ್ನು ಪಡೆದ ಬೆಕ್ಕಿನಂತಾಗಿದ್ದು, ನಿಜವಾಗಿ ಏನನ್ನೂ ಯೋಚಿಸುತ್ತಿರಲಿಲ್ಲ.

ಬಿಲ್‌ಗೆ ತಿಳಿಸಲೆಂದು ನಾನು ಯೂನಿವರ್ಸಿಟಿಗೆ ಧಾವಿಸಿದೆ. ನನ್ನ ಯಶಸ್ಸಿನಿಂದಾಗಿ ಅವನು ಹರ್ಷಚಿತ್ತನಾದ ಮತ್ತು ನಮ್ಮ ಇತರ ಅಕಡೆಮಿಕ್ ಸಹೋದ್ಯೋಗಿಗಳೂ ಹರ್ಷಚಿತ್ತರಾದರು. ನಾನು ಈಗ ಹಿರಿಯ ಶ್ರೇಣಿಯ ಉಪನ್ಯಾಸಕಳ ಹುದ್ದೆಯನ್ನು ಪಡೆದಿದ್ದು, ತಾನು ಕೇವಲ ಉಪನ್ಯಾಸಕ ಹುದ್ದೆಯನ್ನು ಪಡೆದಿರುವುದರ ಬಗೆಗೆ ಬಿಲ್‌ನ ಮನಸ್ಸಿನಲ್ಲಿ ಕಳವಳವೇನಾದರೂ ಇರಬಹುದೇ ಎಂದು ನಾನು ಚಿಂತಿಸಿದೆ. ಅವನ ಮನಸ್ಸಿನಲ್ಲಿ ಅಂತಹ ಅಸೂಯೆಯ ಭಾವನೆಗಳು ಎಂದಿಗೂ ಬರಲಾರವೆಂದು ನಾನು ತಿಳಿದಿರಬೇಕಿತ್ತು. ಆ ದಿನ ಸಾಯಂಕಾಲ ಬಿಲ್ ನನ್ನನ್ನು ರಾತ್ರಿಯೂಟಕ್ಕೆ ಹೊರಗೆ ಕರೆದುಕೊಂಡು ಹೋದ. ನನ್ನ ಹುದ್ದೆಯ ನೇಮಕಾತಿಯನ್ನು ನಮ್ಮ ಯಶಸ್ವೀ ಭವಿಷ್ಯಕ್ಕಾಗಿ ಒಂದು ಶೀಷೆ ಷಾಂಪೇನಿನೊಂದಿಗೆ, ಸ್ವಸಸ್ತಿಪಾನ ಮಾಡುತ್ತಾ ಒಟ್ಟಿಗೇ ಆಚರಿಸಿದೆವು.

ಈ ಸಂತೋಷದ ಚಿತ್ರವನ್ನು ಪೂರ್ಣಗೊಳಿಸಲೆಂಬಂತೆ, ನಾನು ಮತ್ತೆ ಗರ್ಭಿಣಿಯಾಗಿರುವುದು ತಿಳಿಯಿತು. ನಾನು ಫೈಬ್ರಾಯಿಡ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರಿಂದ ಎಲ್ಲವೂ ನಮ್ಮ ಯೋಜನೆಯಂತೆ ನಡೆಯುವುದೆನ್ನುವ ಬಗೆಗೆ ನಾವು ಸಾಕಷ್ಟು ವಿಶ್ವಾಸ ತಳೆದಿದ್ದೆವು. ಆದಾಗ್ಯೂ, ಕೆಲವು ವಾರಗಳ ನಂತರ, ನಾವು ಮತ್ತೆ ಮಗುವನ್ನು ಕಳೆದುಕೊಳ್ಳುವೆವೇನೋ ಎಂದು ಚಿಂತಿಸುತ್ತಿದ್ದುದನ್ನು ಪರಸ್ಪರ ಹೇಳಿ ಒಪ್ಪಿಕೊಂಡೆವು. ಆದ್ದರಿಂದ ನಾನು ಮತ್ತೆ ಬೆಕ್ಕಿಯ ಸಲಹೆ ಕೇಳಿದೆ: ಅವಳ ಸಲಹೆಯನ್ನನುಸರಿಸಿ ಮ್ಯಾಂಚೆಸ್ಟರ್‌ನಲ್ಲಿ ಬಹಳ ಶ್ರೇಷ್ಠರಾಗಿದ್ದ ಸ್ತ್ರೀರೋಗ ತಜ್ಞರೊಡನೆ ಸಮಾಲೋಚಿಸಿದೆ. ಯಾವುದೇ ರೀತಿಯ ಚಿಂತೆಗೆ ಕಾರಣವಿಲ್ಲವೆಂದು ನನ್ನನ್ನು ಪರೀಕ್ಷಿಸಿದ ಅವರು ಹೇಳಿದರು. ಇದು ನಮ್ಮಲ್ಲಿ ಮತ್ತೆ ಆತ್ಮವಿಶ್ವಾಸ ಮೂಡಿಸಿತು ಮತ್ತು ನಮ್ಮ ನರ್ಸರಿಗಾಗಿ ಯೋಜನೆ ಮಾಡುತ್ತಾ ನಾವು ಬೇರೆ ಬೇರೆ ಮಕ್ಕಳ ಅಂಗಡಿಗಳಲ್ಲಿ ಗಂಟೆಗಟ್ಟಳೆ ಕಾಲ ಕಳೆದೆವು. ಕಡೆಗೂ ನಾವು ಅಪ್ಪ ಅಮ್ಮ ಆಗುತ್ತೇವೆಂದು ನಂಬತೊಡಗಿದ್ದೆವು. ಆಗಲೇ ಮಧ್ಯರಾತ್ರಿ ಮತ್ತೊಂದು ಗರ್ಭಪಾತದ ಹೆದರಿಕೆಯಿಂದ ನನ್ನನ್ನು ದಿಢೀರನೆ ಆಸ್ಪತ್ರೆಗೆ ಕರೆದೊಯ್ಯಬೇಕಾಯಿತು. ನಾನು ತಳಮಳಗೊಂಡಿದ್ದೆ, ಅಳುವುದನ್ನು ನಿಲ್ಲಿಸಲು ನನಗೆ ಸಾಧ್ಯವಾಗಲೇ ಇಲ್ಲ. ನನ್ನ ಜೀವನವು ಎಂದಾದರೂ ಅಷ್ಟೊಂದು ಸರಳವಾಗಿರುವುದೆಂದು

ನಂಬಿಕೊಂಡಿದ್ದಕ್ಕೆ, ನನ್ನ ಬಗೆಗೆ ನಾನೇ ಕ್ರೋಧಗೊಂಡಿದ್ದೆ. ಸತತವಾಗಿ ಮೇಲಕ್ಕೂ ಕೆಳಕ್ಕೂ ಪುಟಿಯುತ್ತಿರುವ ಒಂದು ಭಾವನಾತ್ಮಕ ಚೆಂಡಿನಂತೆ ನಾನು ಎಂದು ಭಾವಿಸಿಕೊಂಡೆ.

ನನ್ನ ಸ್ತ್ರೀರೋಗತಜ್ಞರ ಖಾಸಗಿ ರೋಗಿಯಾಗಿ ನಾನು ಆಸ್ಪತ್ರೆಗೆ ದಾಖಲಾದೆ. ಮತ್ತು ನನಗೆ ನಿದ್ರೆ ಬರಿಸಲು ಶಮನಕಾರಿ ಔಷಧಿಗಳನ್ನು ನೀಡಿದರು. ಬೆಳಿಗ್ಗೆ ನನ್ನನ್ನು ಪರೀಕ್ಷಿಸಿದ ಪರಿಣತ ವೈದ್ಯರು ಗರ್ಭವು ಪೂರ್ಣಾವಧಿಯವರೆಗೆ ಉಳಿಯುವ ಅವಕಾಶ ಇನ್ನೂ ಇದೆಯೆಂದೂ, ಎಲ್ಲ ಭರವಸೆಯೂ ನಾಶವಾಗಿಲ್ಲವೆಂದೂ ತಿಳಿಸಿದ. ನಾನು ತಕ್ಷಣವೇ ಸಂತೋಷಗೊಂಡೆ ಮತ್ತು 'ನಮ್ಮ ಮಗು'ವಿನ ಬಗೆಗೆ ಮಾತನಾಡುವುದನ್ನು ನಾವು ಮುಂದುವರೆಸಿದೆವು. ಐದು ದಿನಗಳವರೆಗೂ ನಾನು ಹಾಸಿಗೆಯಲ್ಲಿ ಮಲಗಿಯೇ ಇದ್ದೆ. ಬೇಸರವಾಗಿದ್ದರೂ ಒಂದು ರೀತಿಯ ನೆಮ್ಮದಿಯಿತ್ತು. ನಾನು ಬಹಳ ಉತ್ತಮ ಸ್ಥಿತಿಯಲ್ಲಿರುವುದನ್ನು ಕಂಡ ಪರಿಣತ, ನಾನು ಮನೆಗೆ ಹೋಗಬಹುದೆಂದು ಹೇಳಿದ. ನಾನು ಆನಂದೋಲ್ಲಾಸದಲ್ಲಿದ್ದೆ. ಬಿಲ್ ಕೂಡ ಅಷ್ಟೆ. ಮರುದಿನ ಬಿಲ್ ನನ್ನನ್ನು ಕರೆದುಕೊಂಡು ಹೋಗಲು ಬಂದ. ಆದರೆ, ನಾನು ವಸ್ತ್ರ ಧರಿಸಲು ಆರಂಭಿಸಿದಾಗ ತಕ್ಷಣವೇ ನನಗೆ ಗರ್ಭಪಾತವಾಗುತ್ತಿರುವುದು ತಿಳಿಯಿತು. ನಾನು ಹುಚ್ಚಿಯಂತಾದೆ. ಮತ್ತು ಪರಿಣತ ಬಂದ ಕೂಡಲೇ ಅವನತ್ತ ತಿರುಗಿ ಕಿರುಚಿದೆ: "ನೀನೇಕೆ ನನಗೆ ಸುಳ್ಳು ಹೇಳಿದೆ? ನನ್ನ ಗರ್ಭಧಾರಣೆಯಲ್ಲಿ ಯಾವುದೋ ದೋಷವಿದೆಯೆಂದು ನಿನಗೆ ಮೊದಲಿನಿಂದಲೂ ತಿಳಿದಿದ್ದರೂ, ನನ್ನ ಮಗುವು ಚೆನ್ನಾಗಿದೆಯೆಂದು ನೀನು ಹೇಗೆ ತಾನೇ ನನ್ನನ್ನು ನಂಬಿಸಿದೆ?" ಅವನು ತಳಮಳಗೊಂಡಂತೆ ತೋರಿತು ಮತ್ತು ಇದನ್ನು ಅವನು ಮೊದಲೇ ನಿರೀಕ್ಷಿಸಲಾಗುತ್ತಿರಲಿಲ್ಲವೆಂದು ನನಗೆ ಹೇಳಿದ. ನನ್ನನ್ನು ನಾನು ದ್ವೇಷಿಸತೊಡಗಿದೆ. ನಾವಿಬ್ಬರೂ ಅಷ್ಟೊಂದು ತೀವ್ರವಾಗಿ ಬಯಸುತ್ತಿದ್ದ ಮಗುವನ್ನು ನನ್ನಿಂದ ಸೃಷ್ಟಿಸಲು ಸಾಧ್ಯವಾಗದಿದ್ದುದಕ್ಕಾಗಿ ನಾನು ಬಹಳ ಅಯಶಸ್ವಿ ಎಂದು ಭಾವಿಸಿದೆ. ನಾನು ಬಿಲ್‌ನಿಂದ ಮುಖ ತಿರುಗಿಸಿಕೊಂಡೆ. ಏಕೆಂದರೆ, ಅವನ ನೋವನ್ನು ನೋಡಿ ಸಹಿಸಲು ನನಗೆ ಸಾಧ್ಯವಾಗಲಿಲ್ಲ. ನನಗೆ ಸಾಯಬೇಕೆನಿಸಿತು. ನನ್ನ ಜೀವನವು ಇನ್ನು ಬದುಕಲು ಅರ್ಹವಾದುದಲ್ಲ ಎನ್ನುತ್ತಾ ಒಂದೇ ಸಮನೆ ಅಳತೊಡಗಿದೆ. ಆ ಸಮಯದಲ್ಲಿ, ನನ್ನನ್ನು ನೋಡಿಕೊಳ್ಳಲೆಂದು ನನ್ನ ಹಾಸಿಗೆಯ ಮಗ್ಗುಲಲ್ಲಿಯೇ ಒಬ್ಬ ನರ್ಸ್ ಅನ್ನು ನೇಮಿಸಿದರು. ಈ ಜಗತ್ತಿನಲ್ಲಿ ಹೇಗೆ ನ್ಯಾಯವೇ ಇಲ್ಲವೆಂದು ಹೇಳುತ್ತಾ ಅವಳು ನನ್ನನ್ನು ಸಮಾಧಾನಪಡಿಸಲು ಯತ್ನಿಸಿದಳು. ಇಲ್ಲಿ ನಾನು ಒಂದು ಮಗುವಿಗಾಗಿ ತೀರಾ ಹತಾಶಳಾಗಿದ್ದೆ. ಆದರೂ, ಪ್ರತಿರಾತ್ರಿಯೂ ತಮ್ಮ ಗರ್ಭಗಳನ್ನು ತೆಗೆಸಿಕೊಳ್ಳಲು ಎಲ್ಲ ವಿಧವಾದ ಪ್ರಯತ್ನಗಳನ್ನೂ ಮಾಡುವ ಯುವತಿಯರ ಶುಶ್ರೂಷೆಯನ್ನು ಆ ನರ್ಸ್ ಮಾಡುತ್ತಿದ್ದಳು.

ಮರುದಿನ ಪರಿಣತ ವೈದ್ಯರು ಬಂದರು. ಗರ್ಭದ ಹೆರೆಯುವಿಕೆಯನ್ನು ಸುಲಭಗೊಳಿಸಲು ಅಗತ್ಯವಾದ, ಭ್ರೂಣವನ್ನು ಹೊರದಬ್ಬಲು ಅನುಕೂಲಿಸುವಂತಹ ಶಕ್ತ ವಿರೇಚಕಗಳನ್ನು ಅವರು ವಿಧಿಸಿದರು. ಇದರಿಂದಾಗಿ, ನಾನು ಇನ್ನೂ ಹುಟ್ಟದಿರುವ ನನ್ನ ಮಗುವಿನ ಭ್ರೂಣವನ್ನು ನೋಡುವೆನೆಂದು ಅವರು ಯೋಚಿಸಿರಲೇ ಇಲ್ಲ. ನಾನಾಗಲೇ ನಾಲ್ಕು ತಿಂಗಳ ಗರ್ಭಿಣಿಯಾಗಿದ್ದೆ. ಹಾಗಾಗಿ ಭ್ರೂಣವು ಚಿಕ್ಕದಾಗಿದ್ದರೂ ಪೂರ್ಣವಾಗಿ ರೂಪುಗೊಂಡಿತ್ತು. ಅದೊಂದು ಗಂಡು ಮಗುವಾಗುತ್ತಿತ್ತು. ನನ್ನನ್ನು ನನ್ನ ಆ ಮಗುವಿನಿಂದ ಮೀಟಿ ಬೇರ್ಪಡಿಸಬೇಕಾಯಿತು. ನನ್ನ ಆ ಪುಟ್ಟ ಹುಡುಗನನ್ನು ಬಿಟ್ಟುಕೊಡಲು ನಾನು ಇಷ್ಟಪಡಲಿಲ್ಲ. ಪುಟ್ಟ ಕೈಕಾಲುಗಳು ನನ್ನ ಆ ಮೊದಲ ಮಗುವಿನ ನೋಟವನ್ನು ನಾನು ಎಂದಿಗೂ ಮರೆಯುವುದಿಲ್ಲವೆಂದು ನನಗೆ ತಿಳಿಯಿತು. ಅವನನ್ನು ಅಪ್ಪಿ ಹಿಡಿಯಬೇಕೆಂದು ಬಹುವಾಗಿ ಬಯಸಿದೆ, ಆದರೆ ಅವನಾಗಲೇ ಹೊರಟುಹೋಗಿದ್ದನೆಂಬುದನ್ನು ತಿಳಿದಿದ್ದೆ.

ಆ ರಾತ್ರಿ, ನಾನು ಎಚ್ಚರವಾಗಿಯೇ ಇದ್ದಾಗ ಮತ್ತೊಂದು ಗರ್ಭಪಾತವನ್ನು ನಾನು ಸಹಿಸಲಾರೆ ಎಂದು ನಿರ್ಧರಿಸಿದೆ. ಆದ್ದರಿಂದ ಬಿಲ್ ತನಗೆ ಮಗುವನ್ನು ಹಡೆದು ಕೊಡುವಂತಹ ಮತ್ತೊಬ್ಬ ಹೆಂಡತಿಯನ್ನು ಕಂಡುಕೊಳ್ಳಬೇಕೆಂದೂ ಆಶಿಸಿದೆ. ಇದನ್ನೆಲ್ಲಾ ವಿವರಿಸಿ ನಾನು ಅವನಿಗೆ ಒಂದು ಪತ್ರವನ್ನು ಕೂಡಾ ಬರೆದೆ: ನಾನು ಅವನನ್ನು ಎಷ್ಟೇ ಪ್ರೀತಿಸುತ್ತಿದ್ದರೂ, ಅವನು ಮತ್ತೊಬ್ಬ ಉತ್ತಮಳಾದ, ಹೆಚ್ಚು ಸೃಷ್ಟಿ ಸಾಮರ್ಥ್ಯವಿರುವ ಹೆಣ್ಣನ್ನು ಹೆಂಡತಿಯಾಗಿ ಪಡೆಯಲು ನಾನು ಅವನಿಗೆ ವಿವಾಹ ವಿಚ್ಛೇದನ ನೀಡಲು ಕೂಡಾ ಸಿದ್ಧಳಿದ್ದೆ. ಬಿಲ್ ಇರದಿರುವ, ಒಂದು ಮಗುವೂ ಇರದಿರುವ ಏಕಾಂಗಿ ಜೀವನಕ್ಕೆ ನನ್ನನ್ನು ನಾನು ಸಿದ್ಧಗೊಳಿಸಿಕೊಳ್ಳುತ್ತಿದ್ದೆ. ಒಳಗೊಳಗೇ ನಾನು ಸಾಯುತ್ತಿದ್ದೆ.

ಎರಡು ದಿನಗಳ ನಂತರ, ಬಿಲ್‌ನೊಡನೆ ಮನೆಗೆ ಹಿಂತಿರುಗುತ್ತಿದ್ದಾಗ ನನ್ನ ನಿರ್ಧಾರವನ್ನು ಅವನಿಗೆ ತಿಳಿಸಿದೆ. ಕಣ್ಣುಗಳ ತುಂಬಾ ನೀರು ತುಂಬಿಕೊಂಡಿದ್ದ ಬಿಲ್ ನನ್ನನ್ನು ನೋಡಲೆಂದು ನನ್ನ ಕಡೆಗೆ ತಿರುಗಿದ. ಕೋಪಾವಿಷ್ಟನಾಗಿ ಅವನು ಹೇಳಿದ: "ನಿಜವಾಗಿಯೂ ನೀನೆಲ್ಲೋ ತಮಾಷೆ ಮಾಡುತ್ತಿದ್ದೀ ಎನಿಸುತ್ತದೆ. ನಿನ್ನನ್ನು ಪ್ರೀತಿಸುತ್ತೇನಾದ್ದರಿಂದ ನಿನ್ನನ್ನು ಮದುವೆಯಾದೆ. ನಾನು ಮಗುವಿಗಾಗಿ ಬಹಳ ಇಷ್ಟ ಪಡುತ್ತೇನಾದರೂ ನಾನು ನಿನ್ನಿಂದ ಮಾತ್ರವೇ ಮಗುವನ್ನು ಬಯಸುತ್ತೇನೆ. ಬೇರೆ ಯಾವುದೇ ಹೆಂಗಸಿನಿಂದಲೂ ಅಲ್ಲ. ಆದ್ದರಿಂದ ಇಂತಹ ಅಬದ್ಧದ ಮಾತುಗಳನ್ನಾಡುವುದನ್ನು ನಿಲ್ಲಿಸು. ಹೇಗೋ ನಾವು ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸೋಣ. ಆದರೆ, ನಾನು ಯಾವಾಗಲೂ ಪ್ರೀತಿಸಿರುವ ಮತ್ತು ಎಂದಿಗೂ ಪ್ರೀತಿ ಮಾಡುವ ಹೆಣ್ಣು ನೀನೊಬ್ಬಳು ಮಾತ್ರ ಎಂಬುದನ್ನು ದಯವಿಟ್ಟು ನಿನ್ನ ತಲೆಯೊಳಗೆ ಇರುವಂತೆ ನೋಡಿಕೊ. ದಯವಿಟ್ಟು ಇದನ್ನು ಅರ್ಥ ಮಾಡಿಕೋ."

ನಾನು ಖಂಡಿತ ಅವನನ್ನು ನಂಬಲು ಇಚ್ಛಿಸಿದೆ.

ನಂತರದ ಎರಡು ವರ್ಷಗಳ ಅವಧಿಯಲ್ಲಿ ನಾನು ಮತ್ತೆ ಎರಡು ಬಾರಿ ಗರ್ಭಪಾತಕ್ಕೊಳಗಾಗಿದ್ದೆ. ಇದು ನನ್ನನ್ನು ಉದಾಸೀನಳನ್ನಾಗಿಸಿತು. ನಾವು ನಮ್ಮದೇ ಸ್ವಂತ ಮಗುವನ್ನು ಪಡೆಯಲಾಗುವುದಿಲ್ಲವೆಂಬ ವಾಸ್ತವವನ್ನು ಒಪ್ಪಿಕೊಳ್ಳುವಂತೆ ಮಾಡಿತು. ಹೊರನೋಟಕ್ಕೆ ನಮ್ಮ ಜೀವನಗಳು ಸುಸ್ಥಿರವಾಗಿ ನೆಲೆಗೊಂಡಂತೆ ತೋರುತ್ತಿತ್ತು. ನಮ್ಮಿಬ್ಬರಿಗೂ ಆಸಕ್ತಪೂರ್ಣವಾದ, ತೃಪ್ತಿಪಡುವಂತಹ ಅಕಾಡೆಮಿಕ್ ಹುದ್ದೆಗಳಿದ್ದವು. ಸಾಕಷ್ಟು ಆದಾಯ ಹಾಗೂ ಭರವಸೆಯ ಭವಿಷ್ಯಗಳಿದ್ದವು; ಮ್ಯಾಂಚೆಸ್ಟರ್‌ನ ಸುಂದರವಾದ ಉಪನಗರಗಳಲ್ಲೊಂದರಲ್ಲಿ ಮನೋಹರವಾದ, ವಿಶಾಲವಾದ ಹಳೆಯ ವಿಕ್ಟೋರಿಯಾ ವಿನ್ಯಾಸದ ಮನೆಯೊಂದನ್ನು ಕೊಂಡು ಕೊಂಡಿದ್ದೆವು. ಆದರೂ ಅಂತರಂಗದಲ್ಲಿ ನಾವಿಬ್ಬರೂ ದುಃಖಿಸುತ್ತಿದ್ದೆವು. ಹಾಗಾಗಿ ಬಿಲ್ ಮತ್ತು ನಾನು ದತ್ತು ತೆಗೆದುಕೊಳ್ಳುವ ಬಗೆಗೆ ಪರಿಶೀಲಿಸತೊಡಗಿದೆವು. ನಾವು ಸಂಪೂರ್ಣವಾಗಿ ಯೆಹೂದಿ ಜನಾಂಗಕ್ಕೆ ಸೇರಿದ ಮಗುವನ್ನೇ ದತ್ತು ತೆಗೆದುಕೊಳ್ಳಬೇಕೆಂದು ಬಿಲ್ ಒತ್ತಾಯಿಸಿದ. ತನ್ನ ಹೆಸರನ್ನು ಪಡೆಯುವ ಮಗುವು ಸಮರ್ಥ ಯೆಹೂದಿ ಅನನ್ಯತೆಯನ್ನೇ ಪಡೆದಿರಬೇಕೆಂಬುದನ್ನು ಖಚಿತಗೊಳಿಸಿ ಕೊಳ್ಳಲು ಇಚ್ಛಿಸಿದ. ಏಕೆಂದರೆ, ಯೆಹೂದಿಯಲ್ಲದ ಮಗುವಿನ ಮೇಲೆ ಈ ನಿಯಮಗಳನ್ನು ಹೇರುವುದು ನ್ಯಾಯವಲ್ಲ ಎಂಬುದು ಬಿಲ್‌ನ ಆಲೋಚನೆಯಾಗಿತ್ತು. ನಾವು ಅನೇಕ ಸಂಸ್ಥೆಗಳೊಂದಿಗೆ ಸಮಾಲೋಚಿಸಿದೆವು ಮತ್ತು ಯೆಹೂದಿ ಮಗುವನ್ನು ದತ್ತು ತೆಗೆದುಕೊಳ್ಳಲು ಸಿಗುವ ಅವಕಾಶ ತೀರಾ ಕಡಿಮೆ ಎಂದು ತಿಳಿದುಕೊಂಡೆವು.

ಆಗ ೧೯೬೩ರ ಒಂದು ಸಾಯಂಕಾಲ ಬೆಕ್ಕಿಯ ವೈದ್ಯ ಸೋದರ ಜಾಕ್ ಫೋನ್ ಮಾಡಿ ನಾವಿನ್ನೂ ಯೆಹೂದಿ ಮಗುವನ್ನು ಬಯಸುತ್ತಿದ್ದೇವೆಯೇ ಎಂದು ಕೇಳಿದ. ಇದೇನೋ ತಮಾಷೆಯೋ, ತಂತ್ರವೋ ಇರಬಹುದೆಂದು ನಾನು ಮೌನವಾಗಿದ್ದೆ. ಆದರೆ ಜಾಕ್ ತನ್ನ ವಿವರಣೆಯನ್ನು ಮುಂದುವರೆಸಿದ, ತನ್ನ ಮಹಿಳಾ ಯೆಹೂದಿ ರೋಗಿಗಳಲ್ಲೊಬ್ಬಳು ಬಂದಿದ್ದುದಾಗಿಯೂ, ತಾನು ಏಳು ತಿಂಗಳ ಗರ್ಭಿಣಿಯೆಂದು ರಹಸ್ಯವಾಗಿ ತಿಳಿಸಿರುವುದಾಗಿಯೂ ಜಾಕ್ ಹೇಳಿದ. ಆ ಮಹಿಳೆಯು ಮ್ಯಾಂಚೆಸ್ಟರ್ ಯೂನಿವರ್ಸಿಟಿಯಲ್ಲಿ ಕಾನೂನು ವಿದ್ಯಾರ್ಥಿನಿಯಾಗಿದ್ದು, ಕಳೆದ ಬೇಸಿಗೆಯಲ್ಲಿ ಕ್ರಯ ಪತ್ರ ಬರೆಯುವ, ಕೆಳ ಕೋರ್ಟಿನಲ್ಲಿ ವಾದಿಸುವ ಯೆಹೂದಿ ಶಿಬಿರವೊಂದಕ್ಕೆ ಭೇಟಿ ಕೊಟ್ಟಿದ್ದಳು ಮತ್ತು ಅಲ್ಲಿ ಯುವ ವಕೀಲನೊಬ್ಬನನ್ನು ಭೇಟಿಯಾಗಿದ್ದಳು. ಅವನು ಇವಳನ್ನು ಮದುವೆಯಾಗಲು ತೀವ್ರವಾದ ಆಸಕ್ತಿ ಹೊಂದಿದ್ದ. ಆದರೆ, ತಾನು ಅವನನ್ನು ಪ್ರೀತಿಸುತ್ತಿಲ್ಲವೆಂದು ಅವಳಿಗೆ ಬೇಗನೇ ಅರಿವಾಯಿತು. ತಾನು ಗರ್ಭಿಣಿಯೆಂದು ತಿಳಿದು ಬಂದಾಗ, ಕೇವಲ ಮಗುವಿಗೋಸ್ಕರ, ತಾನು ಪ್ರೀತಿಸುತ್ತಿಲ್ಲದ ವ್ಯಕ್ತಿಯನ್ನು ಮದುವೆಯಾಗುವುದೂ

ಅವಳಿಗೆ ಇಷ್ಟವಿರಲಿಲ್ಲ. ಬದಲಿಗೆ ಆ ಮಗುವನ್ನು ದತ್ತು ತೆಗೆದುಕೊಳ್ಳುವವರಿಗೆ ಕೊಟ್ಟುಬಿಡಲು ನಿರ್ಧರಿಸಿದಳು. ಇದರಿಂದ ತನ್ನ ಜೀವನವನ್ನು ತಾನು ತನ್ನಿಚ್ಛೆಯಂತೆ ಮುಂದುವರೆಸಬಹುದೆಂದುಕೊಂಡಳು. ಅವಳು ದೃಢನಿಶ್ಚಯ ಮಾಡಿದ್ದಂತೆ ಕಂಡಿತು. ಆದ್ದರಿಂದ ಅವಳ ಯೋಚನೆಯ ಬಗೆಗೆ ಮರು ಯೋಚಿಸುವಂತೆ ಮನ ಒಲಿಸಲು ಜಾಕ್ ಕೂಡ ಪ್ರಯತ್ನಿಸಲಿಲ್ಲ ಮತ್ತು ಯಾರಾದರೂ ಯೆಹೂದಿ ದಂಪತಿ ಅವಳ ಮಗುವನ್ನು ಪ್ರೀತಿಯಿಂದ ನೋಡಿಕೊಳ್ಳುವವರು ಸಿಗುವಂತೆ ಜಾಕ್ ಸಹಾಯ ಮಾಡಬಹುದೇ ಎಂದು ಅವಳು ಕೇಳಿದಾಗ ಜಾಕ್‌ಗೆ ನಮ್ಮ ನೆನಪಾಯಿತಂತೆ.

ನನ್ನ ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು ಮತ್ತು ನನ್ನ ಮನಸ್ಸು ಓಡಿತು. ಜಾಕ್ ತನ್ನ ಮಾತನ್ನು ಮುಂದುವರೆಸುತ್ತಾ ಆ ಹುಡುಗಿಯು ಎಷ್ಟು ಚೆಲುವಿ ಮತ್ತು ಬುದ್ಧಿವಂತಳೆಂದೂ, ಅವಳು ಎಷ್ಟು ಸುಂದರ ಮತ್ತು ಸ್ವಾಸ್ಥ್ಯಪೂರ್ಣ ಮಗುವನ್ನು ಸೃಷ್ಟಿಸುವಳೆಂದು ತನಗೆ ಸಂಪೂರ್ಣ ಭರವಸೆಯಿರುವುದೆಂದೂ ಅವನು ಹೇಳಿದಾಗ ನಾನು ಆಗಲೇ ಅಲ್ಲಿಯೇ ಜಾಕ್‌ನನ್ನು ಅಪ್ಪಿಕೊಳ್ಳಬಯಸಿದೆ. ಕಡೆಗೆ, ಜಾಕ್ ಉಸಿರು ತೆಗೆದುಕೊಳ್ಳಲು ನಿಲ್ಲಿಸಿದ ಮತ್ತು ನಮಗೆ ಆಸಕ್ತಿಯಿದೆಯೇ ಎಂದು ಕೇಳಿದ. ನಾನು ಅವನಿಗೆ ಕಿರಿಚಿಕೊಂಡು "ಹೌದು, ನಮಗೆ ಆಸಕ್ತಿಯಿದೆ, ಇದು ನನಸಾಗುತ್ತಿರುವ ನಮ್ಮ ಕನಸು !" ಎಂದು ಹೇಳಬೇಕೆಂದುಕೊಂಡೆ. ಆದರೆ ನಾನು ಹೇಳಿದ್ದೆಲ್ಲಾ ಇಷ್ಟೇ: "ನಿನಗೆ ಧನ್ಯವಾದಗಳು, ನಿನಗೆ ತುಂಬಾ ಧನ್ಯವಾದಗಳು." ನನ್ನ ಪ್ರತಿಕ್ರಿಯೆಯಿಂದಾಗಿ, ನಾನು ಅದೆಷ್ಟು ಮೂಕವಿಸ್ಮಿತೆಯಾಗಿದ್ದೆನೆಂದು ಜಾಕ್ ಹೇಳಬಲ್ಲವನಾಗಿದ್ದ. ಹಾಗಾಗಿ ಬಿಲ್‌ನೊಡನೆ ಚರ್ಚಿಸಿ ಮತ್ತೆ ನನಗೆ ಕರೆ ಮಾಡುವಂತೆ ಜಾಕ್ ತಿಳಿಸಿದ. ನಾನು ನಡುಗುತ್ತಾ ಫೋನನ್ನು ಬಿಟ್ಟು ಬಂದೆ. ನನ್ನ ಈ ಸ್ಥಿತಿಯನ್ನು ಕಂಡು ಬಿಲ್ ಧಾವಿಸಿ ಬಂದು ಏನಾಯಿತೆಂದು ಕೇಳಿದ. ನಾನು ಸಮಾಧಿ ಸ್ಥಿತಿಯಲ್ಲಿರುವವಳಂತೆ ಸುಮ್ಮನೆ, ಅವನ ಕತ್ತಿನ ಸುತ್ತಲೂ ನನ್ನ ಕೈಗಳನ್ನು ಹಾಕಿ ಪಿಸುಗುಟ್ಟಿದೆ. "ನಮಗೆ ನಮ್ಮ ಮಗು ಸಿಕ್ಕಿದೆ." ನಾನು ಎಲ್ಲೋ ಹುಚ್ಚಾಗಿದ್ದೇನೆ ಎಂದುಕೊಂಡ ಬಿಲ್, ನನಗೆ ಕುಳಿತುಕೊಳ್ಳುವಂತೆ ಹೇಳಿದ ಮತ್ತು ಏನಾಗುತ್ತಿದೆಯೆಂದು ಹೇಳುವಂತೆ ಕೇಳಿದ. ಜಾಕ್‌ನ ಫೋನಿನ ಕರೆಯ ಬಗೆಗೆ ನಾನು ಹೇಳಿದ ಕೂಡಲೇ ಅವನು ಮೇಲಕ್ಕೆ ನೆಗೆದ ಮತ್ತು ಕಿರುಚಿದ: "ಪವಾಡಗಳು ನಡೆಯುವುದಿಲ್ಲವೆಂದು ಯಾರು ಹೇಳಿದರು?" ಚರ್ಚೆ ಮಾಡಲು ಏನೂ ಇರಲಿಲ್ಲವೆಂದು ನಮಗೆ ತಿಳಿದಿತ್ತು; ನಾವಿಬ್ಬರೂ ಕನಸು ಕಾಣುತ್ತಿದ್ದುದು ಇದನ್ನೇ. ಆದರೆ ಅದನ್ನು ನಾವು ಎಂದಾದರೂ ಪಡೆಯುತ್ತೇವೆ ಎಂದು ಯೋಚಿಸಿರಲಿಲ್ಲ. ಕೆಲವೇ ನಿಮಿಷಗಳಲ್ಲಿಯೇ ನಾವು ಜಾಕ್‌ಗೆ ಫೋನ್ ಮಾಡಿದೆವು ಮತ್ತು ನಮಗೆ ಮಗು ಬೇಕು ಎಂದು ಹೇಳಿದೆವು.

ಆ ದಿನ ರಾತ್ರಿ ಬಿಲ್‌ಗಾಗಲೀ, ನನಗಾಗಲೀ ನಿದ್ರಿಸಲು ಆಗಲಿಲ್ಲ. ಇಬ್ಬರಲ್ಲಿ

ಒಬ್ಬರಿಗೆ ಇನ್ನೇನು ನಿದ್ರೆ ಹತ್ತುತ್ತದೆ ಎನ್ನುವಾಗ ನಮಗೆ ಸಿಗಲಿರುವುದು ಗಂಡು ಮಗುವೋ, ಹೆಣ್ಣು ಮಗುವೋ ಎಂದು ಚಿಂತಿಸತೊಡಗುತ್ತಿದ್ದೆವು; ನಾವು ಇಷ್ಟ ಪಟ್ಟ ಹೆಸರು ಯಾವುದು; ಮಗು ಹೇಗೆ ಕಾಣಿಸುತ್ತದೆ? ನಮ್ಮ ಮೊದಲ ಮಗುವನ್ನು ಬರಮಾಡಿಕೊಳ್ಳಲು ನಮ್ಮ ಜೀವನಗಳನ್ನು ನಾವು ಹೇಗೆ ಹೊಂದಿಸಿಕೊಳ್ಳಬೇಕು ಮುಂತಾದ ವಿಷಯಗಳನ್ನು ಚರ್ಚಿಸಲಾರಂಭಿಸಿದ್ದೆವು. ಬಹುತೇಕ ತಂದೆತಾಯಿಗಳಿಗೆ ಇಂತಹ ಸಂಗತಿಗಳ ಬಗೆಗೆ ಉದ್ದೇಶಿಸಿ ಆಲೋಚಿಸಲು ಹಲವಾರು ತಿಂಗಳುಗಳ ಕಾಲಾವಕಾಶವಿರುತ್ತದೆ. ಆದರೆ, ನಮಗೆ ಕೇವಲ ಕೆಲವು ವಾರಗಳಷ್ಟು ಮಾತ್ರವೇ ಕಾಲಾವಕಾಶವಿತ್ತು. ಒಂದೊಂದು ವಸ್ತುವನ್ನು ಕೊಂಡು ತಂದಾಗಲೂ, ಗುರುತು ಮಾಡಿಡುತ್ತಿದ್ದ, ಬಹು ದೊಡ್ಡ ಸಂಖ್ಯೆಯ ಪಟ್ಟಿಗಳೊಡನೆ ನಾವು "ಶಿಶು ಕಾರ್ಯಾಚರಣೆ" ಎಂಬ ಹೆಸರಿನ ಯೋಜನೆಯಿಂದ ಆರಂಭಿಸಿದೆವು. ನವಜಾತ ಶಿಶುವನ್ನು ಹೇಗೆ ನೋಡಿಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಲು ನಾವು ಅಸಂಖ್ಯ ಪುಸ್ತಕಗಳನ್ನು ಓದಿದೆವು ಮತ್ತು ಬಿಲ್, ಮಗುವಿನ ಪರವಾಗಿ ಮೊದಲೇ ಇಂತಹ ಪಾತ್ರ ವಹಿಸುವುದು ಕಂಡು ನಾನು ಹರ್ಷಿತಳಾದೆ. ಇನ್ನೂ ಹುಟ್ಟದಿರುವ ಆ ಮಗು ಈಗಾಗಲೇ ನಮ್ಮ ಮಗುವಾಗಿ ಬಿಟ್ಟಿತ್ತು ಮತ್ತು ಯಾವುದೂ ಅದಕ್ಕೆ ಅತ್ಯುತ್ತಮವಾದದ್ದೆಂದು ನಮಗೆ ಅನ್ನಿಸಿರಲಿಲ್ಲ. ಅಂಗಡಿಗಳಿಗೆ ಹೋಗಿ ಕೊಂಡುಕೊಳ್ಳುವ ಸಡಗರ ಮತ್ತು ಮನೆಯನ್ನು ಸಿದ್ಧಗೊಳಿಸುವುದರಲ್ಲಿ ದಿನಗಳು ಕಳೆದವು. ನಮ್ಮ ಪಾಲಿಗೆ ಅವು ಸುಖ, ಸಂತೋಷದ ದಿನಗಳಾಗಿದ್ದವು. ನನ್ನ ಗರ್ಭಪಾತಗಳ ದುಃಖ, ಯಾತನೆಗಳನ್ನೆಲ್ಲಾ ನಾವು ನಮ್ಮ ಮನಸ್ಸಿನಿಂದ ದೂರವಿಟ್ಟೆವು ಮತ್ತು ಕಡೆಗೂ ನಾವು ಒಂದು ಕುಟುಂಬವನ್ನು ಆರಂಭಿಸುತ್ತಿದ್ದೇವೆಂಬ ವಾಸ್ತವದ ಮೇಲೆ ನಮ್ಮ ಮನಸ್ಸುಗಳನ್ನು ಕೇಂದ್ರೀಕರಿಸಿದೆವು.

ನಮ್ಮ ಹೆಣ್ಣು ಶಿಶುವಿನ ಜನನದ ಬಗೆಗೆ ನಮ್ಮನ್ನು ಅಭಿನಂದಿಸಲು ೧೯೬೩ನೆಯ ಫೆಬ್ರುವರಿ ೭ರಂದು ಜಾಕ್ ನಮಗೆ ಫೋನ್ ಮಾಡಿದ. ಅವಳು ಚೆಲುವಾದ ಶಿಶುವೆಂದು ಅವನು ನಮಗೆ ಹೇಳಿದ. ಅವಳಿಗೆ ಏನಾದರೂ ತೊಂದರೆಯಾಗಿರಬಹುದೇ ಎಂದು ನನಗೆ ತಕ್ಷಣವೇ ಚಿಂತೆ ಆರಂಭವಾಯಿತು. ಆದರೆ ಅವಳು ಯಾವುದೇ ತೊಂದರೆ, ದೋಷಗಳಿರದೆ ಪರಿಪೂರ್ಣಳಾಗಿದ್ದಾಳೆಂದು ಜಾಕ್ ನನಗೆ ಭರವಸೆ ನೀಡಿದ. ಅದೆಷ್ಟು ಮಾತೃ ಸಹಜ ಭಾವನೆಗಳನ್ನು ನಾನು ಅನುಭವಿಸುತ್ತಿದ್ದೆ ಎಂಬುದರ ಬಗೆಗೆ ನಾನು ಅಚ್ಚರಿಗೊಂಡಿದ್ದೆ. ಮೊದಲ ನಾಲ್ಕು ವಾರಗಳವರೆಗೂ ಮಗುವನ್ನು ಆರೈಕೆ ಮಾಡುವುದರ ಬಗೆಗೆ ಕಲಿಯಲು ಒಬ್ಬ ನರ್ಸನ್ನು ಗೊತ್ತುಮಾಡಿಕೊಳ್ಳುವಂತೆ ಜಾಕ್ ನಮಗೆ ಸಲಹೆ ನೀಡಿದ. ಮತ್ತು ಅಂತಹ ಒಬ್ಬ ನರ್ಸನ್ನು ಹುಡುಕಲು ಕೂಡಾ ನಮಗೆ ನೆರವು ನೀಡಿದ. ನಮ್ಮ ಮಗಳನ್ನು ಕರೆದುಕೊಂಡು ಬರುವ ತಾರೀಖು ಮತ್ತು ದಿನವನ್ನು ಗೊತ್ತುಮಾಡಿದ

ನಂತರ ನಾವು ಫೋನನ್ನು ಕೆಳಗಿಟ್ಟು, ಕೊಠಡಿಯ ಸುತ್ತಲೂ ನರ್ತಿಸಿದೆವು. ಸ್ವಲ್ಪ ಸಮಾಧಾನಚಿತ್ತರಾದ ಬಳಿಕ ಒಂದು ಷಾಂಪೇನಿನ ಬಾಟಲನ್ನು ತೆರೆದು "ನಮ್ಮ ಪುಟ್ಟ ಮಿಕ್ಕಿ"ಗಾಗಿ ಸ್ವಸ್ತಿಪಾನ ಮಾಡಿದೆವು.

ಮುಂದಿನ ಐದು ದಿನಗಳು ತೀರಾ ನಿಧಾನವಾಗಿ ಸಾಗಿದವು. ನನ್ನ ಮಗುವನ್ನು ನನ್ನ ತೋಳುಗಳಲ್ಲಿ ಎತ್ತಿಕೊಳ್ಳಲು ನಾನು ತೀವ್ರವಾಗಿ ಇಚ್ಛಿಸುತ್ತಿದ್ದೆ. ಕಡೆಗೂ ಆ ದಿನ ಬಂದಿತು. ಅವಳನ್ನು ಕರೆದುಕೊಂಡು ಬರಲು ನಾವು ಹೊರಟೆವು. ನವಜಾತ ಶಿಶುಗಳ ರಾಶಿರಾಶಿ ಛಾಯಾಚಿತ್ರಗಳನ್ನು ನೋಡಿದ್ದ ನಾನು, ಕೆಂಪು ಕೆಂಪಾಗಿದ್ದ ಪುಟ್ಟ, ಸುಕ್ಕುಸುಕ್ಕು ಮುಖವನ್ನು ನೋಡಲು ಸಿದ್ಧಳಾಗಿದ್ದೆ. ಆದರೆ ಜಾಕ್ ಒಂದು ಪುಟ್ಟ ಕಂತೆಯನ್ನು ನನ್ನ ಕೈಗಳಿಗೆ ಕೊಟ್ಟಾಗ ನಾನು ನೋಡಲು ಸಾಧ್ಯವಾದದ್ದು ನನ್ನನ್ನೇ ನೋಡುತ್ತಿದ್ದ ಆ ದೊಡ್ಡ ಕಣ್ಣುಗಳು. ಅವಳು ಸುಂದರವಾಗಿದ್ದಳು, ಅವಳಿಂದ ನಾನು ನನ್ನ ಕಣ್ಣುಗಳನ್ನು ಕೀಲಿಸದಾದೆ. ನಮ್ಮ ತೋಳುಗಳಲ್ಲಿ ಅವಳು ಬಹು ನೆಮ್ಮದಿಯಿಂದಿದ್ದಂತೆ ಇದ್ದುದನ್ನು ಕಂಡು ನನ್ನ ಮನಸ್ಸಿಗೆ ಸಮಾಧಾನವಾಯಿತು. ನಾವು ಒಬ್ಬರ ನಂತರ ಒಬ್ಬರು ಎತ್ತಿಕೊಂಡಾಗಲೂ ಅವಳು ಅಳಲಿಲ್ಲ. ಅವಳಿಗೆ ಮಿಷೆಲ್ ಎಂದು ಹೆಸರಿಡಲು ಮತ್ತು ಅವಳು ಚಿಕ್ಕವಳಿರುವಾಗ ಮಿಕ್ಕೀ ಎಂದು ಕರೆಯಲು ನಿರ್ಧರಿಸಿದ್ದೆವು. ಬಿಲ್ ಅವಳನ್ನು ತನ್ನ ತೋಳುಗಳಲ್ಲಿಟ್ಟುಕೊಂಡು ತೂಗುತ್ತಿರುವುದನ್ನು ವೀಕ್ಷಿಸಿದಾಗ, ನಾವು ಸರಿಯಾದ ನಿರ್ಧಾರ ತೆಗೆದುಕೊಂಡಿದ್ದೆ ವೆನಿಸಿತು ನನಗೆ: ಅವನು ಪರಿಪೂರ್ಣ ಸುಖೀ ತಂದೆಯಂತೆ ಕಾಣಿಸುತ್ತಿದ್ದ. ನಾವು ಹೆಚ್ಚು ಸಮಯ ಅಲ್ಲಿ ಉಳಿದುಕೊಳ್ಳಲಿಲ್ಲ. ಮಿಕ್ಕಿಯನ್ನು ಅವಳ ಹೊಸ ಮನೆಗೆ ಪರಿಚಯಿಸಬೇಕಾಗಿತ್ತು. ಹಾಗಾಗಿ ಜಾಕ್‌ಗೆ ಮತ್ತೆ ಮತ್ತೆ ಧನ್ಯವಾದಗಳನ್ನು ಸಲ್ಲಿಸಿ, ನಾವು ನಮ್ಮ ಮಗಳು ಮತ್ತು ಅವಳ ನರ್ಸ್‌ನ ಜೊತೆ ಹೊರಟುಬಂದೆವು.

ಮಿಕ್ಕಿ ಬಹಳ ಬೇಗ ಹೊಂದಿಕೊಂಡಳು ಮತ್ತು ಅವಳು ಒಂದು ಸಂತೋಷದ ಮೂಟೆಯಾಗಿದ್ದಳು. ನಮ್ಮ ಬದುಕನ್ನು ಅವಳು ಹೇಗೆ ಶ್ರೀಮಂತಗೊಳಿಸುವಳು ಎಂಬುದರ ಬಗೆಗೆ ನಮಗೆ ಯಾವುದೇ ವಿಚಾರಗಳಿರಲಿಲ್ಲ. ಅವಳು ಒಂದು ಅತ್ಯಂತ ಸಮರ್ಪಕ ಹಾಗೂ ಉತ್ಕೃಷ್ಟ ಮಗುವಿನಂತೆ ವರ್ತಿಸುತ್ತಿದ್ದಳು; ಯಾವಾಗಲೂ ಅಳುತ್ತಲೇ ಇರಲಿಲ್ಲ; ಮತ್ತು ಚೂರೂ ತಂಟೆ ಮಾಡದೇ ಹಾಲು ಕುಡಿಯುತ್ತಿದ್ದಳು. ಮಿಕ್ಕಿಯನ್ನು ಪಕ್ಕದಲ್ಲಿ ಮಲಗಿಸಿಕೊಂಡೇ ಕೆಲಸ ಮಾಡಲು ನಾನು ಆರಂಭಿಸಿದೆ. ಅವಳು ಗಂಟಲಿನಲ್ಲಿ ಉಂಟುಮಾಡುವ ಗುಳುಗುಳು ಶಬ್ದವನ್ನು ಮತ್ತು ಜೋರಾಗಿ ಕಿರಿಚುವುದನ್ನು ಕೇಳುತ್ತಾ ನಾನು ಆನಂದಿಸುತ್ತಿದ್ದೆ. ಆ ವಯಸ್ಸಿನ ಮಕ್ಕಳು ಮುಗುಳ್ನಗಲಾರವು ಎಂದು ನನ್ನ ಸ್ನೇಹಿತರು ಹೇಳಿದರೂ, ಮಿಕ್ಕಿಯು ಹೊರಡಿಸುವ ಅರ್ಥರಹಿತ ಸದ್ದುಗಳು, ಖಂಡಿತವಾಗಿಯೂ ನಗುವೆಂದೇ ನಾನು ದೃಢವಾಗಿ ನಂಬಿದ್ದೆ ಮತ್ತು ನಾನು ಅವಳ ಜೊತೆಯಲ್ಲಿದ್ದರೆ ಎಷ್ಟು ನೆಮ್ಮದಿಯಿಂದಿರುತ್ತೇನೆಯೋ,

ಅವಳು ನನ್ನ ಜೊತೆಯಲ್ಲಿದ್ದರೆ ಅಷ್ಟೇ ನೆಮ್ಮದಿಯಿಂದಿರುತ್ತಾಳೆ ಎಂಬ ನಂಬಿಕೆಯಿಂದ ನಾನು ಹರ್ಷಚಿತ್ತಳಾಗುತ್ತಿದ್ದೆ. ಬಿಲ್ ಕೂಡಾ ಮಿಕ್ಕಿಯ ಬಗೆಗೆ ನನ್ನಷ್ಟೇ ಮರುಳಾಗಿದ್ದ ಮತ್ತು ಅವಳ ಬೆಳವಣಿಗೆಯ ಪ್ರತಿಯೊಂದು ಹಂತವನ್ನು ಸೆರೆಹಿಡಿದು ರಕ್ಷಿಸಿಡಲೆಂದು ಒಂದು ಯಾದೀ ಕ್ಯಾಮೆರಾದ ಮೇಲೆ ಹಣ ತೊಡಗಿಸಿದ. ನನ್ನ ಅಪ್ಪ ಕೂಡ ನಮ್ಮ ಉತ್ಸಾಹದಲ್ಲಿ ಭಾಗಿಯಾದುದು ಹೆಚ್ಚು ಖಚಿತವಾಯಿತು. ಅವರು ಮಿಕ್ಕಿಯನ್ನು ನೋಡಲು ಇಷ್ಟಪಟ್ಟರು. ಆದ್ದರಿಂದ ಅವರು ಮತ್ತೆ ಇಂಗ್ಲೆಂಡಿಗೆ ಹಿಂದಿರುಗಿ ಸಮುದ್ರಯಾನ ಮಾಡಿ ಬರುವಂತೆ ಮತ್ತು ನಮ್ಮ ಜೊತೆಯಲ್ಲಿಯೇ ಇರುವಂತೆ ವ್ಯವಸ್ಥೆ ಮಾಡಿದೆವು. ಸೌಥ್ ಹ್ಯಾಂಪ್ಟನ್ನಿನಿಂದ ಅವರನ್ನು ನಾನೇ ಕರೆದುಕೊಂಡು ಬಂದೆ ಮತ್ತು ಅವರ ಹೊಸ ಮೊಮ್ಮಗಳನ್ನು ಪರಿಚಯಿಸುವುದಕ್ಕಾಗಿ ಆತುರದಿಂದ ನೇರವಾಗಿ ಮ್ಯಾಂಚೆಸ್ಟರ್‌ಗೇ ಕರೆದುಕೊಂಡು ಬಂದೆ. ನಾವು ಮನೆಗೆ ಬಂದಾಗ, ಆಗಲೇ ರಾತ್ರಿ ತಡವಾಗಿದ್ದರೂ ಕೂಡ, ಮಗುವನ್ನು ನೋಡಲು ಅವರು ತೀವ್ರ ಕಾತರ ವ್ಯಕ್ತಪಡಿಸಿದರು, ಮಲಗಿದ್ದ ಮಿಕ್ಕಿಯನ್ನು ಅವಳಿಗೆ ಎಚ್ಚರವಾಗದಂತೆ ಮೆತ್ತಗೆ ಎತ್ತಿಕೊಂಡೆ. ಆದಾಗ್ಯೂ ಅವಳು ಕಣ್ಣುಗಳನ್ನು ತೆರೆದಳು ಮತ್ತು ಕಿರಿಚಿಕೊಂಡು ಅಳುವುದಕ್ಕೆ ಬದಲಾಗಿ ತನ್ನ ಅಜ್ಜನ ಕಡೆಗೆ ಕೈ ನೀಡಿದಳು. ಅವರು ಕರಗಿ ಹೋದರು. ಅವರು ಏನು ಯೋಚಿಸುತ್ತಿದ್ದರೆಂದು ನನಗೆ ತಿಳಿದಿತ್ತು. ಈ ಕ್ಷಣದಲ್ಲಿ ಭಾಗಿಯಾಗಲು ಅಮ್ಮ ನಮ್ಮೊಡನೆ ಇರಬೇಕಾಗಿತ್ತು ಎಂದು ಆಶಿಸುತ್ತಾ ನಾವು ಮೌನವಾಗಿ ಪರಸ್ಪರ ಆಲಂಗಿಸಿಕೊಂಡೆವು.

ಮಿಕ್ಕಿಯ ಆಗಮನದಿಂದಾಗಿ ನಾನು ಗರ್ಭಿಣಿಯಾಗಬೇಕೆಂದು ಪ್ರಯತ್ನಿಸುವುದನ್ನು ಮರೆತೇಬಿಟ್ಟಿದ್ದೆ. ಹಾಗಾಗಿ ನಾವು ಮಿಕ್ಕಿಯ ಮೊದಲನೆಯ ಹುಟ್ಟು ಹಬ್ಬವನ್ನು ಆಚರಿಸಿದ್ದ ಸ್ವಲ್ಪ ದಿನದಲ್ಲಿಯೇ ನಾನು ಗರ್ಭಿಣಿಯಾಗಿದ್ದುದನ್ನು ತಿಳಿದು ನಾನು ಆಶ್ಚರ್ಯಗೊಂಡೆ. ಈ ವಿಷಯವನ್ನು ಬಿಲ್‌ಗೆ ಹೇಳಿದಾಗ ಅವನು ರೋಮಾಂಚಿತನಾದ. ಆದರೆ ನಾನು ಇದರ ಬಗೆಗೆ ಅತಿ ಉತ್ಸಾಹ ತಾಳಲು ನಿರಾಕರಿಸಿದೆ. ಈಗಾಗಲೇ ನನಗೆ ಮಿಕ್ಕಿ ಇದ್ದಳು, ಅಕಸ್ಮಾತ್ ಗರ್ಭಪಾತವಾದರೂ ಕೂಡ ನನ್ನ ಸುಂದರವಾದ ಮಗಳು ನನ್ನ ಬಳಿಯೇ ಇರುತ್ತಾಳೆ. ಯಾವ ವೈದ್ಯರೊಡನೆ ಸಮಾಲೋಚಿಸಬೇಕೆಂಬುದರ ಬಗೆಗೆ ನಾವು ದೀರ್ಘವಾಗಿ ಚರ್ಚಿಸಿದೆವು. ಕಡೆಗೆ ವಿಶ್ವವಿದ್ಯಾಲಯದ ಸ್ತ್ರೀರೋಗತಜ್ಞರ ವಿಭಾಗದೊಡನೆ ಸಂಪರ್ಕಿಸಿ, ಅವರೇನಾದರೂ ಸಲಹೆ ನೀಡಬಹುದೇನೋ ಎಂದು ಕೇಳಲು ನಿರ್ಧರಿಸಿದೆವು. ನನ್ನನ್ನು ಪರೀಕ್ಷಿಸಿದ ಸ್ತ್ರೀರೋಗ ತಜ್ಞರಾದ ಪ್ರೊಫೆಸರ್ ಡಾ॥ ಮಾರಿಸ್ ಅವರು ನನ್ನ ಗರ್ಭಾಶಯದ ಸುತ್ತಲೂ ಒಂದು ಸೋಮಾರಿ ಮಾಂಸಖಂಡವಿರುವುದನ್ನು ಪತ್ತೆಹಚ್ಚಿದರು. ಮತ್ತು ಅದರ ಸುತ್ತಲೂ ಒಂದು ಉಂಗುರವನ್ನು ಕಟ್ಟಿದರು. ಇದು ನನ್ನ ಗರ್ಭಪಾತವನ್ನು ನಿಲ್ಲಿಸುವುದೆಂದು ಅವರು

ಹೇಳಿದರು. ಆದರೆ ಇದು ನನಗೆ ನಂಬಲು ಕಷ್ಟವಾಯಿತು. ಶೀಘ್ರವಾಗಿಯೇ ನಾನು ನನ್ನ ಒಳಗೆ ಮಗುವಿನ ಚಲನೆಗಳನ್ನು ಅನುಭವಿಸಿದೆ. ನಾನು ಮಗುವನ್ನು ಪಡೆಯುತ್ತೇನೆ ಎನ್ನುವುದನ್ನು ನಾನು ಖಂಡಿತ ಒಪ್ಪಿಕೊಳ್ಳಲಾರದವಳಾಗಿದ್ದೆ. ಆದರೆ ಈ ವಾಸ್ತವಕ್ಕೆ ಬೆಳೆಯುತ್ತಿದ್ದ ನನ್ನ ಹೊಟ್ಟೆಯೇ ಸಾಕ್ಷಿಯಾಗಿತ್ತು.

೧೯೬೪ರ ನವೆಂಬರ್ ೨೬ರಂದು ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕ ಡೆಬ್ಬಿ ಜನಿಸಿದಳು. ನನ್ನ ಅನೇಕ ಗರ್ಭಪಾತಗಳ ನಂತರ, ನಾವು ನಮ್ಮದೇ ಮಗುವನ್ನು ಪಡೆಯಲು ಸಹಾಯ ಮಾಡಿದ್ದಕ್ಕಾಗಿ ಪ್ರೊಫೆಸರ್ ಮಾರಿಸ್ ಸಹಜವಾಗಿಯೇ ಹೆಮ್ಮೆ ತಾಳಿದ್ದರು. ಹೀಗೆ ಡೆಬ್ಬಿಯ ಜನನವು ವೈದ್ಯಕೀಯ ಇತಿಹಾಸದಲ್ಲಿನ ಒಂದು ಪ್ರಸಂಗವಾಯಿತು ಮತ್ತು ಮಗುವಿನ ಜನನದ ಸುದ್ದಿಗಾಗಿ ಬಿಲ್ ಆಸ್ಪತ್ರೆಯ ಆ ಓಣಿಯಲ್ಲಿ ಶಥಪಥ ತಿರುಗುತ್ತಿದ್ದಾಗ ವೈದ್ಯಕೀಯ ವಿದ್ಯಾರ್ಥಿಗಳು ಡೆಬ್ಬಿಯ ಜನನವನ್ನು ವೀಕ್ಷಿಸುತ್ತಿದ್ದರು. ಅರಿವಳಿಕೆಯ ಪ್ರಭಾವದಿಂದ ಎಚ್ಚರಗೊಂಡು, ನನ್ನ ಮಗುವು ನನ್ನ ಹಾಸಿಗೆಯ ಪಕ್ಕದ ಪುಟ್ಟ ಮಂಚದಲ್ಲಿ ನಿದ್ರಿಸುತ್ತಿರುವುದನ್ನು ಕಂಡಾಗ ಇದೆಲ್ಲವು ಕನಸಿರಬೇಕೆಂದುಕೊಂಡೆ ನಾನು; ನಿಜವಾಗಲೂ ಅದು ನಿಜಕ್ಕೂ ತೀರಾ ಅದ್ಭುತ, ಆಶ್ಚರ್ಯಕರವಾಗಿತ್ತು. ಕಪ್ಪು ಕೂದಲು, ಸುಂದರವಾದ ಪುಟ್ಟ ಮುಖದಿಂದ ಅವಳು ತೀರಾ ಚಿಕ್ಕದಾಗಿದ್ದಳು. ಅವಳು ಒಂದು ಬೊಂಬೆಯಂತೆ ಕಾಣಿಸುತ್ತಿದ್ದಳು, ನನ್ನ ಹೃದಯ ತುಂಬಿ ಅವಳನ್ನು ನಾನು ಪ್ರೀತಿಸಿದೆ.

ಮಿಕ್ಕಿಯು ಸಂಪೂರ್ಣ ಆರೋಗ್ಯದ ಪಟ್ಟಿ ಪಡೆದು ಬಂದಿದ್ದಳೆನ್ನಿಸಿತ್ತು. ಆದರೆ, ಎಲ್ಲವು ಅಪಾಯದ ಚಿಹ್ನೆಯೆಂಬಂತೆ, ಡೆಬ್ಬಿಯ ಆರೋಗ್ಯದ ಬಗೆಗೆ ನಾನು ಆತಂಕಗೊಂಡೆ. ಅವಳು ಅತ್ತಾಗ, ಸತ್ತೇ ಹೋಗುತ್ತಾಳೆಂದು ನಾನು ನಿಶ್ಚಯಿಸುತ್ತಿದ್ದೆ. ನಿದ್ರೆ ಮಾಡಿದರೆ ಅವಳು ಉಸಿರಾಡುವುದನ್ನು ನಿಲ್ಲಿಸಿದ್ದಾಳೆ ಎಂದು ಯೋಚಿಸುತ್ತಿದ್ದೆ. ಬಿಲ್ ಅವಳನ್ನು ಮೊದಲ ಬಾರಿ ನೋಡಿದಾಗ, ಅವಳು ಚೀನಾದ ನಾಯಕ ಮಾವೊ ತ್ಸೆ–ತುಂಗನಂತೆ ಕಾಣಿಸುತ್ತಾಳೆ ಎಂದು ತಮಾಷೆ ಮಾಡಿದ್ದ. ಅದು ನನಗೆ ಎಷ್ಟು ನೋವುಂಟುಮಾಡಿತ್ತೆಂಬುದನ್ನು ಅವನು ತಿಳಿದಿದ್ದರೆ; ನನ್ನ ಗರ್ಭಾವಧಿಯ ಪೂರ್ತಿ ನಾನು, ಈ ಮಗುವು "ಡೌನ್ಸ್ ಸಿಂಡ್ರೋಮ್"ಗೆ ಗುರಿಯಾಗುವುದೆಂಬ ಆಲೋಚನೆಯಿಂದಾಗಿ ಕಲ್ಲಿನಂತಾಗಿದ್ದೆ. ಡೆಬ್ಬಿಯನ್ನು ನಾನು ಪಡೆದಾಗ ನನಗಾಗಲೇ ೪೨ ವರ್ಷಗಳಾಗಿದ್ದವು ಮತ್ತು, ಹೆಚ್ಚು ವಯಸ್ಸಾದಂತೆಲ್ಲಾ ಹುಟ್ಟುವ ಮಕ್ಕಳು ಡೌನ್ಸ್ ಸಿಂಡ್ರೋಮ್‌ಗೆ ಒಳಗಾಗುವ ಪ್ರಸಂಗ ಹೆಚ್ಚಾಗುತ್ತದೆಂದು ನನಗೆ ಚೆನ್ನಾಗಿ ತಿಳಿದಿತ್ತು. ಆದಾಗ್ಯೂ, ಪ್ರೊಫೆಸರ್ ಮಾರಿಸ್ ಮತ್ತು ನರ್ಸಿಂಗ್ ಸಿಬ್ಬಂದಿಯವರು ಡೆಬ್ಬಿಯು ಮಾಮೂಲಿ ಮಗುವಾಗಿಯೇ ಇರುವಳೆಂದು ನನಗೆ ಆಶ್ವಾಸನೆ ನೀಡಿದರು. ಬಿಲ್ ಮತ್ತೆ ಭೇಟಿಯಿತ್ತಾಗ ಅವಳು ಈಗ ಮುಸಲೋನಿಯಂತೆ ಕಾಣಿಸುತ್ತಿದ್ದಾಳೆ ಎಂದು ಹೇಳಿದಾಗ, ನನ್ನ ಚಿಂತೆಗಳು ಆಧಾರರಹಿತವಾದುವು

ಎಂದು ನಾನು ಅರಿತೆ.

ಮೊದ ಮೊದಲು ಮಿಕ್ಕಿಯು ತನ್ನ ಈ ತಂಗಿಯನ್ನು, ಆಡಲು ಜೊತೆಗಿರುವ ಒಂದು ಬೊಂಬೆ ಎಂದು ತಿಳಿದು ಅದರೊಡನೆ ನರ್ತಿಸಿದಳು. ಆದರೆ, ಡೆಬ್ಬಿಯು ಯಾವುದೇ ರೀತಿಯಲ್ಲಿ ತನ್ನ ಇಷ್ಟದಂತೆ ಪ್ರತಿಸ್ಪಂದಿಸದಿದ್ದಾಗ, ಅವಳು ಹೆಚ್ಚು ನಿರಾಶಳಾದಳು. ಡೆಬ್ಬಿಗೆ ಹೋಲಿಸಿದರೆ ಮಿಕ್ಕಿಯು ಬಹಳ ಸರಳವಾದ ಮತ್ತು ಆತಂಕ ನೀಡದಂತಹ ಮಗುವಾಗಿದ್ದಳು. ಡೆಬ್ಬಿಗೆ ಏನು ತೊಂದರೆಯಾಗಿದೆ ಎಂದು ನಾನು ಸತತವಾಗಿ ಚಿಂತಿಸುತ್ತಿದ್ದೆ. ಹೆಚ್ಚು ಸಮಯದಲ್ಲಿ ಅವಳು ಅಳುತ್ತಲೇ ಇರುತ್ತಿದ್ದಳು ಮತ್ತು ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾ ನಾನು ಸೋತು ಸುಣ್ಣವಾಗುತ್ತಿದ್ದೆ. ಪ್ರತಿ ರಾತ್ರಿಯೂ ಅವಳು ಕಿರಿಚುತ್ತಾ ನನ್ನ ಪಕ್ಕದಲ್ಲಿ ಮಲಗಿರುತ್ತಿದ್ದಳು. ಹಾಗಾಗಿ, ಮಗುವನ್ನು ಆರೈಕೆ ಮಾಡಿ ನೋಡಿಕೊಳ್ಳಲು ನನಗೆ ಬಹಳ ವಯಸ್ಸಾಯಿತೆಂದು ನಾನು ಹೆದರಲು ಆರಂಭಿಸಿದೆ ಅಥವಾ ಅವಳಿಗೆ ಭಯಂಕರವಾದ ಕಾಯಿಲೆಯಾಗಿರಬಹುದೆಂದು ಚಿಂತಿಸತೊಡಗಿದೆ. ಮಿಕ್ಕಿಯು ಅಷ್ಟೊಂದು ಸಂತೋಷ ಕೊಟ್ಟಿರುವಾಗ, ನನ್ನ ಸ್ವಂತ ಮಗುವೇ ಏಕೆ ನನಗೆ ಇಷ್ಟೊಂದು ಕಷ್ಟವೆನಿಸಬೇಕು ಎನ್ನುವುದನ್ನು ನಾನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿಯೇ ಸ್ಥಳೀಯ ಕ್ಲಿನಿಕ್ ಒಂದರಲ್ಲಿನ ನರ್ಸ್ ಶೀಷೆಯ ಹಾಲು ಕುಡಿಸುವುದನ್ನು ಅಭ್ಯಾಸ ಮಾಡಿಸುವಂತೆ ಸಲಹೆ ನೀಡಿದಾಗಲೇ ನನಗೆ ಅರ್ಥವಾಗಿದ್ದು, ನನ್ನಲ್ಲಿ ಸಾಕಷ್ಟು ಹಾಲು ಉತ್ಪತ್ತಿಯಾಗುತ್ತಿರಲಿಲ್ಲವೆಂದೂ, ಡೆಬ್ಬಿಯು ಸತತವಾಗಿ ಹಸಿವಿನಿಂದಿರುತ್ತಿದ್ದಳೆಂದೂ ಅರ್ಥವಾಯಿತು. ನನಗೆ ನಾನು ಬಹಳ ಅಸಫಲೆ ಎನ್ನಿಸಿತು. ನಾನು ಒಬ್ಬ ಪರಿಪೂರ್ಣ ತಾಯಿಯಾಗಬೇಕೆಂದು ಇಷ್ಟಪಟ್ಟಿದ್ದೆ. ಆದರೆ, ಈಗಾಗಲೇ ನನ್ನ ವಯಸ್ಸು ನನ್ನ ವಿರುದ್ಧವಾಗಿ ಕೆಲಸ ಮಾಡುತ್ತಿತ್ತು. ಆದಾಗ್ಯೂ ಡೆಬ್ಬಿಯಲ್ಲಿ ನಾನು ಬದಲಾವಣೆಯನ್ನು ನೋಡಿದಾಗ ನಾನು ಸೂಕ್ತವಾದ ಕಾರ್ಯವನ್ನೇ ಮಾಡಿದ್ದೇನೆಂದು ಅರಿತೆ.

ಮಿಕ್ಕಿಯ ನರ್ಸ್ ಬಿಟ್ಟು ಹೋದ ಸ್ವಲ್ಪ ಸಮಯದಲ್ಲಿಯೇ ಊಟ ವಸತಿಗಳಿಗೆ ಬದಲಾಗಿ ಮನೆಗೆಲಸಗಳನ್ನು ಮಾಡಿಕೊಡಲು ನಮ್ಮಲ್ಲಿಗೆ ಬಂದ ಫ್ರೆಂಚ್ ಯುವತಿಯು, ಮಕ್ಕಳೊಡನೆ ಸೋಜಿಗಗೊಳಿಸುವಂತಹ ಉತ್ತಮ ಬಾಂಧವ್ಯ ಹೊಂದಿದ್ದಳು. ಬಿಲ್ ಮತ್ತು ನಾನು ಸಾಕಷ್ಟು ವಯಸ್ಸಾದ ತಂದೆ ತಾಯಿಯಾಗಿದ್ದೇವೆ ಎಂದು ನಾವು ಆಲೋಚಿಸಿದುದರಿಂದ, ಒಬ್ಬ ಯುವ ವಯಸ್ಸಿನ ವ್ಯಕ್ತಿ ಹತ್ತಿರ ಇರುವುದು ಒಳ್ಳೆಯದೆಂದೂ ನಾವು ಯೋಚಿಸಿದೆವು. ನಮ್ಮ ಜವಾಬ್ದಾರಿಗಳನ್ನು ವಿಭಜಿಸಿಕೊಳ್ಳಲು ನಾವು ನಿರ್ಧರಿಸಿದೆವು: ನಾನು ಮಗುವಿನ ಮೇಲೆ ನನ್ನ ಗಮನವನ್ನು ಕೇಂದ್ರೀಕರಿಸಿದೆ. ಬಿಲ್, ಮಿಕ್ಕಿಯ ನಿಗಾ ನೋಡಲು ನಿರ್ಧರಿಸಿದ. ಇದರಿಂದಾಗಿ ಮಿಕ್ಕಿಯು ತನ್ನ ತಂದೆಯ ಮಗಳಾದಳು. ಡೆಬ್ಬಿಗೂ ನನಗೂ ನಡುವೆ ನಿಕಟವಾದ ಬಾಂಧವ್ಯ ಬೆಳೆಯಿತು.

ಬಿಲ್‌ನ ತಂದೆ ತಾಯಿ ಇದುವರೆಗೂ ನಮ್ಮನ್ನು ಭೇಟಿ ಮಾಡಲು ಬಂದಿರಲಿಲ್ಲ. ಆದರೆ, ತಾವು ಬಹುಕಾಲದಿಂದ ಕಾಯುತ್ತಿದ್ದ ಮೊಮ್ಮಗುವನ್ನು ನಾನು ‘ಸೃಷ್ಟಿ’ಸಿದ್ದೇನೆಂದು ಕೇಳಿದ ಕೂಡಲೇ, ಬೆಲ್‌ಫಾಸ್ಟ್‌ನಿಂದ ಇಲ್ಲಿಗೆ ಬರಲು ಯೋಜನೆಯನ್ನು ಮಾಡಿಕೊಂಡರು. ನಾನು ಹೆಂಡತಿಯಾಗಿ ಮತ್ತು ಸೊಸೆಯಾಗಿ ವಿಫಲಳಾಗಿದ್ದೇನೆ ಎಂದು ಭಾವಿಸಿದುದರಿಂದಾಗಿ ಬಿಲ್‌ನ ತಾಯಿಯು ಮಿಕ್ಕಿಯನ್ನು ಎಂದೂ ಮನಃಪೂರ್ತಿ ಒಪ್ಪಿಕೊಂಡಿರಲಿಲ್ಲ. ಹಾಗಾಗಿ, ಡೆಬ್ಬಿ ಹುಟ್ಟಿದ ನಂತರ, ನಮ್ಮ ಮನೆಗೆ ಬರಬೇಕಾದರೆ, ತಾನು ತನ್ನ ಮನೋಭಾವವನ್ನು, ಬದಲಾಯಿಸಿಕೊಳ್ಳಬೇಕೆಂದು ಬಿಲ್‌ನ ತಾಯಿಗೆ ತಿಳಿದಿತ್ತು. ಅವರು ನಮ್ಮೊಡನೆ ಈ ಬಾರಿ ಬಹುಮಟ್ಟಿಗೆ ಅನ್ಯೋನ್ಯವಾಗಿಯೇ ಇದ್ದರು. ಅಲ್ಲದೆ, ಜೊತೆಯಲ್ಲಿರುವಾಗ ಬಹಳ ಸಮಯ ಮಗುವಿನ ಬಗೆಗಿನ ಮಾತಿನಲ್ಲೇ ಕಳೆಯುತ್ತಿದ್ದುದರಿಂದಾಗಿ, ಈ ಭೇಟಿ ಸುಗಮವಾಗಿ ನಡೆಯಿತು. ಬಿಲ್‌ನ ತಂದೆಯು ಮೃದುಸ್ವಭಾವದವರೂ, ಪ್ರೀತಿ ಮಾಡುವಂಥವರೂ ಆಗಿದ್ದು, ನವಜಾತ ಶಿಶುವಿನೊಂದಿಗೆ ಕಾಲ ಕಳೆಯುವುದಕ್ಕಿಂತಲೂ, ಸ್ವಲ್ಪ ಓಡಾಡುತ್ತಿದ್ದ ಮಗುವಿನೊಡನೆ ಕಾಲ ಕಳೆಯುವುದನ್ನು ಇಷ್ಟಪಟ್ಟಿದ್ದರಿಂದಾಗಿ ಮಿಕ್ಕಿಯೊಡನೆ ಹೊಂದಿಕೊಂಡಿದ್ದರು. ಅವರು ನಮ್ಮ ಜೊತೆ ಹೆಚ್ಚು ಕಾಲ ಕಳೆಯಲಿ ಎಂದು ನಾನು ಇಷ್ಟಪಟ್ಟೆ. ಮತ್ತು ಶೀಘ್ರವೇ ಮತ್ತೆ ಬರುವಂತೆ ಒತ್ತಾಯ ಮಾಡಿದೆ. ಅದು ಒಂದು ರೀತಿಯಲ್ಲಿ ಭವಿಷ್ಯಸೂಚಕ ಮನನಿಯಾಗಿತ್ತೋ ಏನೋ. ಏಕೆಂದರೆ, ಕೆಲವೇ ದಿನಗಳ ನಂತರ, ಅವರಿಗೆ ತೀವ್ರ ರೀತಿಯ ಹೃದಯಾಘಾತವಾಗಿತ್ತೆಂದು, ತಡರಾತ್ರಿಯಲ್ಲಿ ಫೋನಿನ ಕರೆಯಿಂದ ನಮಗೆ ತಿಳಿಯಿತು. ತಕ್ಷಣವೇ ಬಿಲ್ ಬೆಲ್‌ಫಾಸ್ಟಿಗೆ ವಿಮಾನದಲ್ಲಿ ಹೋದ, ಮತ್ತು ತನ್ನ ತಂದೆಯ ಮರಣಸಮಯದಲ್ಲಿ ಅವರ ಪಕ್ಕದಲ್ಲಿಯೇ ಇದ್ದ. ತನ್ನ ತಂದೆಯೊಡನೆ ಬಿಲ್ ಅತ್ಯಂತ ನಿಕಟಬಾಂಧವ್ಯ ಹೊಂದಿದ್ದನಾಗಿ, ತಂದೆಯ ವಿಯೋಗದ ದುಃಖವನ್ನು ಭರಿಸುವುದು ಅವನಿಗೆ ಅತ್ಯಂತ ಕಷ್ಟವೆನಿಸಿತು. ಅನೇಕ ದಿನಗಳ ತನಕ, ಕೋಣೆಯ ಬಾಗಿಲು ಮುಚ್ಚಿ ಪುಸ್ತಕಗಳಲ್ಲಿ ಮುಳುಗಿಹೋಗಿರಲು ಪ್ರಯತ್ನಿಸಿದ. ಅವನ ದುಃಖವನ್ನು ಭೇದಿಸಿ ಹೋಗಿ ಅವನ ಮನಸ್ಸನ್ನು ಸಾಂತ್ವನಗೊಳಿಸಲು ಸಾಧ್ಯವಾದದ್ದು ಕೇವಲ ಮಿಕ್ಕಿಗೆ ಮಾತ್ರ.

ಹೆರಿಗೆ ನಂತರದ ನನ್ನ ಮೂರು ತಿಂಗಳುಗಳ ರಜವು ಬೇಗನೆ ಮುಗಿಯಿತು. ನಾನು ಕಾಲೇಜಿನಲ್ಲಿನ ಬೋಧನಾ ಕರ್ತವ್ಯಳಿಗೆ ಹಿಂದಿರುಗಲೇಬೇಕಾಗಿತ್ತು. ನನ್ನ ಆದ್ಯತೆಗಳು ಬದಲಾಗಿದ್ದುವು ಮತ್ತು ನನ್ನ ಮೇಲೆ ಬಿದ್ದಂತಹ ಹೊಸ ಹೊಣೆಗಳಿಗೆ, ಬೇಡಿಕೆಗಳಿಗೆ ಹೊಂದಿಕೊಳ್ಳುವುದು ಕಷ್ಟವೆಂದು ಕಂಡಿತ್ತು ನನಗೆ. ತೀರಾ ತಡವಾಗುವ ತನಕ ಕಾಲೇಜಿನಲ್ಲಿ ಉಳಿಯಲು ನಾನು ಇಷ್ಟಪಡುತ್ತಿರಲಿಲ್ಲ ಮತ್ತು ರಾತ್ರಿ ನಿದ್ರಿಸುವ ಸಮಯವನ್ನು ಕಳೆದುಕೊಳ್ಳಲೂ ಬಯಸುತ್ತಿರಲಿಲ್ಲ ಹಾಗೂ ನನ್ನ ಉಪನ್ಯಾಸಗಳಿಗೆ

ಸಿದ್ಧತೆಗಳನ್ನು ಮಾಡಿಕೊಳ್ಳಲೂ ಈಗ ನನಗೆ ಅಪರಿಮಿತ ಕಾಲವೂ ಸಿಗುತ್ತಿರಲಿಲ್ಲ. ಈಗ ಬೇರೆ ಯಾವುದಕ್ಕೂ, ಇನ್ನು ನೂರಕ್ಕೆ ನೂರರಷ್ಟು ಗಮನ ಕೊಡಲಾರೆನೆಂದು ಕಂಡುಕೊಂಡೆನಾಗಿ ಸತತವಾಗಿ, ಹತಾಶಳಾಗಿ, ಚೂರು ಚೂರಾದಂತೆ ಭಾವಿಸುತ್ತಿದ್ದೆ. ಪ್ರತಿಯೊಂದರಲ್ಲಿಯೂ ರಾಜಿ ಮಾಡಿಕೊಳ್ಳಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿ, ಅಮ್ಮ ಏನು ಮಾಡುತ್ತಿದ್ದಳೆಂದು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದೆ. ಆದರೆ, ನಮ್ಮ ಪರಿಸ್ಥಿತಿಯು ಸಂಪೂರ್ಣವಾಗಿ ಭಿನ್ನವಾಗಿದ್ದಿತು. ಹಾಗಾಗಿ ನಾನೇ ನನ್ನದೇ ಆದ ಮಾರ್ಗವನ್ನು ಕಂಡುಕೊಳ್ಳಬೇಕಾಗಿತ್ತು. ವಾರದ ಕಡೆಯ ದಿನಗಳನ್ನು ನಾನು ಈ ಹುಡುಗಿಯರಿಗಾಗಿ ಮೀಸಲಿಟ್ಟೆ ಮತ್ತು ಭಾನುವಾರಗಳಲ್ಲಿ ಯಾವಾಗಲೂ ಹಾಸಿಗೆಯ ಮೇಲೆ ನಮ್ಮ ಕುಟುಂಬದ ಅಪ್ಪುಗೆ, ಮುದ್ದಾಟಗಳು ನಡೆಯುತ್ತಿದ್ದವು. ಮಕ್ಕಳಿಗೆ ನಾನು ಕಥೆಗಳನ್ನು ಸೃಷ್ಟಿಸತೊಡಗಿದೆ ಮತ್ತು ವಿಭಿನ್ನ ವಿಷಯ, ಪರಿಕಲ್ಪನೆಗಳನ್ನು ಪರಿಚಯಿಸಲು ಇದು ಬಹಳ ಉತ್ತಮ ಮಾರ್ಗ ಎಂದು ಅರಿತೆ. ನಾನು ನನ್ನ ಕಥೆಗಳನ್ನು ಎರಡು ಪಾತ್ರಗಳ ಸುತ್ತ ಹೆಣೆದು ಡಿಬ್ಬಿ–ಡೆಬ್ಬಿ–ಡ್ಯಾಬಲ್. ಒಂದು ಸ್ತರದಲ್ಲಿ ಈ ಹುಡುಗಿಯರು, ಆ ಪಾತ್ರಗಳನ್ನು ಮತ್ತು ಅವರ ಸಾಹಸಗಳನ್ನು ಕೇವಲ ಕಾಲ್ಪನಿಕವೆಂಬಂತೆ ನೋಡಿದರು. ಮತ್ತೊಂದು ಸ್ತರದಲ್ಲಿ ಆ ಪಾತ್ರಗಳು ತಮ್ಮನ್ನೇ ಪ್ರತಿನಿಧಿಸುತ್ತವೆಂದೂ ಅರಿತರು. ಡೆಬ್ಬಿಯು ಅನೇಕ ಬಾರಿ ಕೇಳುತ್ತಿದ್ದಳು: "ನಾನು ದತ್ತು ತೆಗೆದುಕೊಂಡ ಹುಡುಗಿಯಾ ಅಮ್ಮಾ?" ಮತ್ತು ನಂತರ ಮಿಕ್ಕಿಯೂ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಳು. ನಾನು ಆಗ ತಮಾಷೆಯಾಗಿ ಉತ್ತರಿಸುತ್ತಿದ್ದೆ: "ನೀವಿಬ್ಬರೂ ಕೂಡ ದತ್ತು ತೆಗೆದುಕೊಂಡಿರುವ ಹುಡುಗಿಯರು!" ಮತ್ತು ಅದನ್ನು ಅಲ್ಲಿಗೇ ಬಿಟ್ಟುಬಿಡುತ್ತಿದ್ದೆ. ಮಿಕ್ಕಿಗೆ, ಅವಳನ್ನು ದತ್ತು ತೆಗೆದುಕೊಂಡಿರುವ ಸಂಗತಿಯನ್ನು ಯಾವಾಗ ಹೇಳಬೇಕು ಎಂಬುದರ ಬಗೆಗೆ ಬಿಲ್ ಮತ್ತು ನಾನು ಚರ್ಚಿಸಿದೆವು ಮತ್ತು ಮಿಕ್ಕಿಯು ಸ್ವಲ್ಪ ದೊಡ್ಡವಳಾಗುವ ತನಕ ಕಾಯೋಣವೆಂದು ನಿರ್ಧರಿಸಿದೆವು. ಇದು ಉಂಟುಮಾಡಬಹುದಾದ ಒಡಹುಟ್ಟಿದವರಲ್ಲಿನ ಪೈಪೋಟಿಯ ಬಗೆಗೆ ನಾವು ಹೆದರಿದೆವು. ಇಬ್ಬರು ಹುಡುಗಿಯರನ್ನೂ ನಾವು ಸಮಾನವಾಗಿ ಪ್ರೀತಿಸುತ್ತಿದ್ದೆವು. ಆದರೆ, ತಾನು ದತ್ತು ತೆಗೆದುಕೊಂಡವಳು ಎಂಬ ಸಂಗತಿಯನ್ನು ಒಪ್ಪಿಕೊಳ್ಳುವುದು ಮಿಕ್ಕಿಗೆ ಕಷ್ಟವಾಗ ಬಹುದು ಎಂದು ನಾವು ಚಿಂತಿತರಾಗಿದ್ದೆವು. ಹಾಗಾಗಿ ಸತ್ಯದ ಕ್ಷಣವನ್ನು ಮುಂದೂಡುತ್ತ ಬಂದೆವು.

ಬದುಕು ಒಂದು ಸ್ವರೂಪ ತಳೆದು ನೆಲೆಗೊಂಡಿತು. ಆದರೆ, ಹೊರಗಡೆಯ ಕೆಲಸ ಮತ್ತು ಗೃಹ ಜೀವನದ ನಡುವೆ ಸಮನ್ವಯ ಸಾಧಿಸುವ, ಸಮತೋಲನ ಸಾಧಿಸುವ ಸವಾಲನ್ನು ನಾನು ಯಶಸ್ವಿಯಾಗಿ ನಿರ್ವಹಿಸಿದ ಬಳಿಕ, ಬೇರೆ ಏನಾದರೂ ಹೊಸದೊಂದಕ್ಕಾಗಿ ನಾನು ತೀವ್ರವಾಗಿ ಇಚ್ಛಿಸತೊಡಗಿದೆ. ಕಳೆದ ಕೆಲವು ವರ್ಷಗಳೂ, ಬೋಧನೆ ಮತ್ತು ಮಕ್ಕಳನ್ನು ಸಾಕುವುದರಲ್ಲಿ ಕಳೆದುಹೋಗಿದ್ದವು. ಈಗ ಮತ್ತೆ

ನಾನು ನನ್ನ ಸಂಶೋಧನಾ ಕಾರ್ಯಕ್ಕೆ ಹಿಂತಿರುಗಲು ಬಯಸಿದೆ. ನಾನು ಹೇಳಿಕೊಳ್ಳುತ್ತಿದ್ದುದನ್ನು ಯಾರೋ ಕೇಳಿಸಿಕೊಳ್ಳುತ್ತಿದ್ದಿರಬಹುದು. ಏಕೆಂದರೆ, ನಾನು ದೇಶ ಸುತ್ತುವ ನನ್ನ ಗೀಳಿನ ಬಗೆಗೆ ಬಿಲ್‌ನೊಡನೆ ತಿಳಿಸುತ್ತಿದ್ದೆ. ಆ ಸಮಯದಲ್ಲಿಯೇ, ಆಸ್ಟ್ರೇಲಿಯಾದ ನ್ಯಾಷನಲ್ ಯೂನಿವರ್ಸಿಟಿಯಿಂದ, ಸಾಮಾಜಿಕ ಮಾನವಶಾಸ್ತ್ರ ವಿಭಾಗದಿಂದ, ಬಿಲ್‌ಗೆ ಸ್ನಾತಕೋತ್ತರ ವಿದ್ಯಾರ್ಥಿ ವೇತನದ ಆಹ್ವಾನ ಬಂದಿತು. ನಾನು ಬಹಳ ಉತ್ಸಾಹಿತಳಾದೆ. ಆದರೆ, ಇಲ್ಲಿ ನಾನು ಹಿರಿಯ ಶ್ರೇಣಿಯ ಪ್ರಾಧ್ಯಾಪಕ ವೃತ್ತಿಯನ್ನು ಬಿಟ್ಟುಬಿಟ್ಟು, ಯಾವುದೇ ನಿರ್ದಿಷ್ಟ ಹುದ್ದೆಯಿರದೆ, ಕ್ಯಾನ್‌ಬೆರೀಗೆ ಹೋಗುವುದರ ಬಗೆಗೆ ಬಿಲ್ ಚಿಂತಿತನಾಗಿದ್ದ. ನಾನು ಬಿಲ್‌ನ ಕಳವಳವನ್ನು ಅಲಕ್ಷಿಸಿದೆ, ಯಾವುದಾದರೂ ಒಂದು ಕೆಲಸ ಸುಲಭವಾಗಿ ದೊರೆಯುವುದೆಂಬ ವಿಶ್ವಾಸ ನನಗಿತ್ತು. ನನಗಾಗಿ ಯಾವಾಗಲೂ ಒಂದು ಹುದ್ದೆಯು ತೆರವಾಗಿರುತ್ತದೆಂದು ಉಪಕುಲಪತಿಗಳು ನೀಡಿದ್ದ ವೈಯಕ್ತಿಕ ಆಶ್ವಾಸನೆಯ ಭರವಸೆ ನನಗಿತ್ತು. ಹೀಗೆ ಮನಗಾಣಿಸಿದುದರಿಂದ ಬಿಲ್ ಕೂಡ ಹರ್ಷಿತನಾದ. ಮತ್ತು ನಾವು ಹೊರಡುವ ಸಿದ್ಧತೆಯನ್ನು ಆರಂಭಿಸಿದೆವು. ನಮ್ಮ ಹಿಂದಿನ ಪ್ರಯಾಣದಿಂದ ಈಚೆಗೆ, ನಮ್ಮ ಜೀವನಗಳು ಅದೆಷ್ಟು ಬದಲಾಗಿದ್ದ ವೆಂಬುದನ್ನು ನಮಗೆ ನಂಬುವುದಕ್ಕೇ ಸಾಧ್ಯವಿರಲಿಲ್ಲ. ನಾವೀಗ ಬರಿಗೈಲಿ ಪ್ರಯಾಣಿಸುತ್ತಿರಲಿಲ್ಲ. ಆದರೆ ನಮ್ಮೊಡನೆ ಇಬ್ಬರು ಮಕ್ಕಳಿದ್ದರು ಜೊತೆಯಲ್ಲಿ. ನಮ್ಮನ್ನು ಹಿಂಬಾಲಿಸುತ್ತಾ ಗೃಹೋಪಯೋಗಿ ವಸ್ತುಗಳಿದ್ದವು. ಈಗ ನಾವು ಒಂದು ಕುಟುಂಬವಾಗಿದ್ದೆವು.

೧೯೬೬ ಫೆಬ್ರವರಿಯಲ್ಲಿ ನಾವು ಸಿಡ್ನಿಗೆ ಹಡಗಿನಲ್ಲಿ ಹೊರಟೆವು. ಜೀವನದಲ್ಲಿ ಈಗ ನಾವು ಎಷ್ಟು ಮೇಲಿನ ಅಂತಸ್ತನ್ನು ತಲುಪಿದ್ದೆವೆಂದು ಆಲೋಚಿಸಿ ನಾನು ನಗುತ್ತಿದ್ದೆ. ಏಕೆಂದರೆ, ಈ ಬಾರಿ ನಾವು ಹಡಗಿನಲ್ಲಿ ಅತ್ಯುತ್ತಮ ಕ್ಯಾಬಿನ್ ಅನ್ನು ಪಡೆದಿದ್ದೆವು. ನಾನು ಎಷ್ಟು ಅದೃಷ್ಟವಂತೆ ಎಂದು ಆಲೋಚಿಸುತ್ತಾ, ಹಡಗಿನ ಸಣ್ಣ ಕಿಟಕಿಯಿಂದ ಸಮುದ್ರದತ್ತ ನೋಡುತ್ತಿದ್ದೆ. ವಿಯೆನ್ನಾದಲ್ಲಿನ ಆ ಹಿಂದಿನ ದಿನಗಳನ್ನೂ, ಮತ್ತು ಆ ಶಿಕ್ಷಕನು ನುಡಿದಿದ್ದ ಮರ್ಮಭೇದಿ, ಕಟುವಾದ ಭವಿಷ್ಯದ ಬಗೆಗೂ ಆಲೋಚಿಸುತ್ತಿದ್ದೆ. ಚರಂಡಿಯಿಂದ ನಾನು ಅದೆಷ್ಟು ದೂರ ಇದ್ದೆ ಎಂದು ಅವನಿಗೆ ತೋರಿಸುವಂತಿದ್ದರೆ ಎಂದು ಅದೆಷ್ಟು ಬಯಸುತ್ತಿದ್ದೆ ! ಯಾರ ಬಗೆಗೆ ಯೋಚಿಸುತ್ತಿರುವೆ ಎಂದು ಬಿಲ್ ಕೇಳಿದಾಗ, ಸುಮ್ಮನೆ ಭುಜ ಅಲ್ಲಾಡಿಸಿ, ನಿರ್ಲಕ್ಷ್ಯದಿಂದ, ಪ್ರಾಮುಖ್ಯತೆಯಿರುವ ಯಾರ ಬಗೆಗೂ ಅಲ್ಲ ಎಂದು ಹೇಳಿದೆ. ಬಿಲ್ ತನ್ನ ತೋಳುಗಳನ್ನು ನನ್ನ ಸುತ್ತಲೂ ಹಾಕಿದ ಮತ್ತು ಇನ್ನೆಂದೂ ಯಾವುದೂ ನನ್ನನ್ನು ಘಾಸಿಗೊಳಿಸುವುದಿಲ್ಲವೆಂದು ಭಾವಿಸಿದೆ.

ಸಿಡ್ನಿಯಲ್ಲಿ ನಾವು ಹಡಗಿನಿಂದ ಇಳಿಯುವ ದಿನಗಳ ಮೊದಲು ಒಂದು ಬೆಳಿಗ್ಗೆ ನಾನು ಎದ್ದವಳು, ಡೆಬ್ಬಿ ಏಕೆ ಇನ್ನೂ ಹಾಸಿಗೆಯಲ್ಲಿಯೇ ಮಲಗಿದ್ದಾಳೆ

ಎಂದು ಅಚ್ಚರಿಗೊಂಡೆ. ನಾವು ಮೇಲೆದ್ದು ಬರುವುದಕ್ಕೆ ಮುಂಚೆಯೇ, ಸಾಧಾರಣವಾಗಿ ಈ ಹುಡುಗಿಯರು ಎದ್ದು ಸುತ್ತಲೂ ಕುಣಿದಾಡುತ್ತಿದ್ದರು. ನಾನು ಡೆಬ್ಬಿಯ ಕಿರುಹಾಸಿಗೆಯ ಬಳಿ ಹೋಗಿ ನೋಡಿದಾಗ, ಅವಳು ಬೆವರಿನಿಂದ ತೊಯ್ದುಹೋಗಿದ್ದಳು ಮತ್ತು ಅವಳ ಹಣೆ ಜ್ವರದಿಂದ ಸುಡುತ್ತಿತ್ತು. ಅವಳು ಪೇಲವವಾಗಿದ್ದು , ಉತ್ಸಾಹಹೀನಳಾಗಿದ್ದಳು. ಅವಳ ಕಣ್ಣುಗಳು ಹೊಳೆಯುತ್ತಿದ್ದುವು. ನಾನು ಬಿಲ್‌ನನ್ನು ಕೂಗಿ ಕಿರುಚಿಕೊಂಡೆ ಮತ್ತು ನನ್ನ ಸಂತೃಪ್ತಿಯ ಬಗೆಗೇ ಆಲೋಚಿಸುತ್ತಾ ಒಂದು ಕ್ಷಣ ಮೈಮರೆತಿದ್ದಕ್ಕಾಗಿ ನನ್ನನ್ನು ನಾನು ಬಯ್ದುಕೊಂಡೆ. ಹಡಗಿನ ವೈದ್ಯರನ್ನು ಕರೆತರಲು ಬಿಲ್ ಕೂಡಲೇ ಧಾವಿಸಿದ. ಆ ವೈದ್ಯರು ಕೂಡಲೇ ನನ್ನನ್ನು ಚಿತ್ತಕ್ಷೋಭೆಯ, ಅತಿ ಕಾಳಜಿಯ ತಾಯಿ ಎಂದು ನನ್ನನ್ನು ನಿರ್ಲಕ್ಷಿಸಿದರು. ಮತ್ತು ಇದು ಕೇವಲ ಶೀತ ಅಥವಾ ಪ್ರಾಯಶಃ ಫ್ಲೂ ಇರಬಹುದು ಅಷ್ಟೇ ಎಂದುಬಿಟ್ಟರು. ತೇವವಾದ ಫ್ಲಾನೆಲ್‌ನಿಂದ ನಾನು ಡೆಬ್ಬಿಯನ್ನು ತಂಪಾಗಿರಿಸಲು ಪ್ರಯತ್ನಿಸಿದೆ. ಆದರೆ, ಅವಳ ಜ್ವರ ಇಳಿಯಲು ನಿರಾಕರಿಸಿತು. ನನಗೆ ತೋರಿದ್ದನ್ನೆಲ್ಲಾ ನಾನು ಪ್ರಯತ್ನಿಸಿದೆ. ಬಿಲ್ ಮತ್ತು ನಾನು ಸರದಿಯ ಪ್ರಕಾರ ಅವಳ ಪಕ್ಕದಲ್ಲಿ ಕುಳಿತು ಮುಂದಿನ ೨೪ ಗಂಟೆಗಳು ಅವಳ ನಿಗಾ ನೋಡಿಕೊಂಡೆವು. ಮಗು ತೀರಾ ನಿತ್ರಾಣವಾಯಿತು. ಚಿಕ್ಕ ಮಕ್ಕಳಲ್ಲಿ ಅಧಿಕ ತಾಪಮಾನದ ಜ್ವರಗಳು ಆಗಾಗ್ಗೆ ಬರುವುದು ಸಾಮಾನ್ಯವೆಂದು ಅನೇಕ ಮಕ್ಕಳು ಬಹಳ ಬೇಗ ಗುಣಮುಖ ರಾಗುವರೆಂದೂ ನನಗೆ ಆಶ್ವಾಸನೆ ನೀಡಲು ಬಿಲ್ ಬಹಳ ಪ್ರಯತ್ನಿಸಿದ. ಆದರೆ ಡೆಬ್ಬಿಯಲ್ಲಿ ಗುಣಮುಖಳಾಗುವ ಚಿಹ್ನೆಗಳು ಕಂಡುಬರಲೇ ಇಲ್ಲ. ಅವಳು ಭ್ರಮಾಧೀನಳಾದಂತೆ ಕಂಡುಬಂದಳು. ಮತ್ತು ವಾಂತಿ ಮಾಡಿಕೊಳ್ಳತೊಡಗಿದಳು. ನಾವು ಬೇರೆ ಏನನ್ನಾದರೂ ಮಾಡದಿದ್ದರೆ ಡೆಬ್ಬಿಯನ್ನು ಕಳೆದುಕೊಳ್ಳುತ್ತೇವೆ ಎಂದು ನಾನು ಬಿಲ್‌ನೊಡನೆ ಕಿರಿಚತೊಡಗಿದೆ. ನಮ್ಮ ಮಕ್ಕಳಿಬ್ಬರೂ ಇನ್ನೂ ಅಷ್ಟು ಚಿಕ್ಕವರಿರುವಾಗ ಇಷ್ಟು ದೀರ್ಘವಾದ ಸಮುದ್ರಯಾನ ಕೈಗೊಳ್ಳುವ ನಮ್ಮ ನಿರ್ಧಾರವನ್ನು ನಾನು ಶಪಿಸಿದೆ.

ನಾವು ಸಿಡ್ನಿಯನ್ನು ಸಮೀಪಿಸುತ್ತಿದ್ದಾಗ, ಆಗಲೇ ಡೆಬ್ಬಿ ಆಹಾರ, ನೀರು ಏನನ್ನೂ ತೆಗೆದುಕೊಳ್ಳದೇ ಐದು ದಿನಗಳಾಗಿದ್ದವು. ಕೆಲವು ಟೀ ಚಮಚಗಳಷ್ಟು ಹಾಲನ್ನು ಬಲವಂತವಾಗಿ ನಾನು ಅವಳ ಗಂಟಲೊಳಕ್ಕೆ ಹಾಕುತ್ತಿದ್ದೆ. ಅದು ಸೀದಾ ಹಾಗೆಯೇ ಹೊರಕ್ಕೆ ಬಂದುಬಿಡುತ್ತಿತ್ತು. ಹಡಗಿನ ವೈದ್ಯರನ್ನು ನಾವು ಹಲವು ಬಾರಿ ಕರೆದೆವು ಮತ್ತು ಯವುದಾದರೂ ಔಷಧ, ಚಿಕಿತ್ಸೆಗಾಗಿ ಮನವಿ ಮಾಡಿಕೊಂಡೆವು. ಅದರೆ ಅವರು ಅತಿ ಹಠಮಾರಿಯಾಗಿದ್ದರು. ಡೆಬ್ಬಿಯು ಕೇವಲ ಫ್ಲೂನಿಂದ ನರಳುತ್ತಿದ್ದಾಳೆಂದೂ, ಅವಳು ಬೇಗನೇ ಗುಣಮುಖಳಾಗುತ್ತಾಳೆಂದೂ ಹೇಳಿದರು. ನನಗೆ ಆ ವೈದ್ಯರ ಕತ್ತು ಹಿಡಿದು ಉಸಿರು ಕಟ್ಟಿಸಿ ಸಾಯಿಸಬೇಕೆನ್ನಿಸಿತ್ತು.

ಆದರೆ, ನನ್ನನ್ನು ನಾನು ನಿಯಂತ್ರಿಸಿಕೊಳ್ಳಬೇಕಾಗಿತ್ತು. ನಮ್ಮ ಪುಟ್ಟ ಡೆಬ್ಬಿಯ ಶರೀರದಿಂದ, ಎಲ್ಲ ಚೈತನ್ಯವೂ ಹೋಗಿಬಿಟ್ಟಿತ್ತು, ಬಿಲ್ ಮತ್ತು ನಾನು ದುಃಖಿತಪ್ತ ರಾಗಿದ್ದೆವು. ನಾವು ಸಿಡ್ನಿಗೆ ಬಂದ ಕೂಡಲೇ ನಮಗೆ ವೈದ್ಯರ ಅವಶ್ಯಕತೆ ಇದೆಯೆಂದು ಓಟ್ಟೋಗೆ ಮುಂದಾಗಿ ತಿಳಿಸುವ ವ್ಯವಸ್ಥೆ ಮಾಡಿದೆವು. ನಾವು ಅಲ್ಲಿಗೆ ಹೋದ ಕೂಡಲೇ ಒಬ್ಬ ವೈದ್ಯರನ್ನು ನೋಡುವ ವ್ಯವಸ್ಥೆಯನ್ನು ಅವನು ಮಾಡಿದ. ಕಳೆದ ಬಾರಿ ನಾವು ಇಲ್ಲಿಗೆ ಬಂದಾಗ ನಾನು ಒಂದು ಮಗುವನ್ನು ಕಳೆದುಕೊಂಡಿದ್ದೆ. ವಿಧಿಯು ಅಂತಹ ಕ್ರೂರ ತಂತ್ರವನ್ನು ಮತ್ತೊಮ್ಮೆ ಮಾಡುವುದೆಂದು, ನಾನು ನಂಬಲು ಸಿದ್ಧಳಿರಲಿಲ್ಲ.

ನಾವು ಸಿಡ್ನಿಗೆ ಬಂದಾಗ, ಓಟ್ಟೋ ಕರೆತಂದಿದ್ದ ವೈದ್ಯರು ಡೆಬ್ಬಿಯನ್ನು ಪರೀಕ್ಷಿಸಿದರು. ಅವರು ಇದು ನ್ಯೂಮೋನಿಯಾ ಎಂದು ಕೂಡಲೇ ಕಂಡುಹಿಡಿದರು ಮತ್ತು ಒಂದು ಕೋರ್ಸ್ ಪ್ರತಿಜೀವಾಣುಗಳ (antibiotics) ಚಿಕಿತ್ಸೆಯನ್ನು ವಿಧಿಸಿದರು. ಡೆಬ್ಬಿಯು ಮತ್ತೆ ಚೈತನ್ಯಪೂರ್ಣಳಾಗುವುದನ್ನು ನೋಡುವುದು ಆಶ್ಚರ್ಯಜನಕವಾಗಿತ್ತು. ಜೀವನ ಮತ್ತು ಮರಣಗಳ ನಡುವಿನ ಸಂತುಲನ ಅದೆಷ್ಟು ಅನಿಶ್ಚಿತ ಮತ್ತು ಅಪಾಯಕಾರಿ ಎಂಬುದನ್ನು ಇದು ನನಗೆ ಅರ್ಥ ಮಾಡಿಸಿತು.

ಸಮುದ್ರಯಾನದ ಆಯಾಸದ ನಂತರ ಮತ್ತೆ ಮನೆಯನ್ನು ಜೋಡಿಸಿ ಕೊಳ್ಳುವುದು ಹಾಗೂ ಸೂರ್ಯನ ಬಿಸಿಲಿನಲ್ಲಿ ನಮ್ಮ ಮಕ್ಕಳು ಓಡಾಡುತ್ತಿರುವುದನ್ನು ನೋಡುವಾಗ ಸಂತೋಷವೆನಿಸುತ್ತಿತ್ತು. ನಾನು ಭವಿಷ್ಯ ನುಡಿದಿದ್ದಂತೆಯೇ, ಆ ಉಪಕುಲಪತಿಗಳು ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿಯಲ್ಲಿ, ನನಗೆ ಸಂದರ್ಶಕ ಫೆಲೋಷಿಪ್ ಅನ್ನು ನೀಡಿದರು ಮತ್ತು ನನ್ನ ವೃತ್ತಿಗೆ ಸಂಬಂಧಪಟ್ಟ ಕಾರ್ಯ ನಿರ್ವಹಿಸುತ್ತಿರುವಾಗ ನಮ್ಮ ಮಕ್ಕಳನ್ನು ನೋಡಿಕೊಳ್ಳಲು, ನಮ್ಮ ಮನೆಯಲ್ಲಿಯೇ ಇರುವಂತಹ ಸಹಾಯಕರನ್ನು ನಾನು ಸಂಬಳಕ್ಕೆ ಇರಿಸಿಕೊಳ್ಳ ಬೇಕಾಯಿತು.

ಜೀವನ ಪರಿಪೂರ್ಣವೆನಿಸಿತ್ತು ಮತ್ತು ನಾವು ಬೇಗನೆ, ಕ್ಯಾನ್‌ಬೆರಾದಲ್ಲಿನ ಚಿಕ್ಕ ಯೆಹೂದೀ ಸಮುದಾಯದ ಸಕ್ರಿಯ ಸದಸ್ಯರಾದೆವು. ಈ ಸಮುದಾಯದ ಬಹುತೇಕ ಜನರು ವಿದ್ವಾಂಸರು ಹಾಗೂ ಚಿಂತನಶೀಲರೂ ಆಗಿದ್ದರು. ನಮ್ಮ ಸಮುದಾಯದವರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದುದರಿಂದ, ನಾವು ಬದ್ಧರಾಗಿರದಿದ್ದರೆ ಸಮುದಾಯವು ಕುಸಿದುಹೋಗುತ್ತಿತ್ತು. ನಮ್ಮ ಪೂಜೆ, ಆರಾಧನೆಗಳನ್ನು ನಾವು ಬಾಡಿಗೆಗೆ ತೆಗೆದುಕೊಂಡ ಒಂದು ಸಭಾಭವನದಲ್ಲಿ ನಡೆಸುತ್ತಿದ್ದೆವು. ಇಡಿಯ ಕ್ಯಾನ್‌ಬೆರಾದಲ್ಲಿ ಒಂದೇ ಒಂದಾದರೂ ಯೆಹೂದಿಗಳ ಪೂಜಾ ಮಂದಿರ ಇರಲಿಲ್ಲ. ವಾರದ ವಿಶ್ರಾಂತಿ ದಿನದ ಆರಾಧನೆಗಳಲ್ಲಿ (ಯೆಹೂದಿಗಳಲ್ಲಿ ಶನಿವಾರ) ಇರಬೇಕಾದ ಕನಿಷ್ಠ ಸಂಖ್ಯೆಯಷ್ಟು ಜನರು ಇರುವಂತೆ

ನೋಡಿಕೊಳ್ಳುವ ಜವಾಬ್ದಾರಿಯನ್ನು ಬಿಲ್ ವಹಿಸಿಕೊಂಡ ಮತ್ತು ನನಗೇ ಆಶ್ಚರ್ಯವೆನಿಸುವಂತೆ, ಯೆಹೂದಿ ಮಹಿಳೆಯರ ಆಸ್ಟ್ರೇಲಿಯಾ ಪರಿಷತ್ತಿನ ಕ್ಯಾನ್‌ಬೆರ್‍ರಾ ಶಾಖೆಗೆ ನಾನು ಮುಖ್ಯಸ್ಥೆ–ಅಧ್ಯಕ್ಷಿಣಿಯಾದೆ, ಮತ್ತು ಹಲವಾರು ಕಾರ್ಯಕ್ರಮಗಳಿಗಾಗಿ, ಹಣ ಸಂಗ್ರಹಿಸುವುದರಲ್ಲಿ ವಾರಾಂತ್ಯಗಳನ್ನು ಕಳೆಯತೊಡಗಿದೆ.

ಕ್ಯಾನ್‌ಬೆರಾದ ಉಪನಗರಗಳ ಆನಂದವನ್ನು ಕೆಲವು ತಿಂಗಳುಗಳು ಅನುಭವಿಸಿದ ನಂತರ, ತೊಲಾಯ್ ಬುಡಕಟ್ಟು ಜನಾಂಗದವರ ನಡುವೆ ಮತ್ತಷ್ಟು ಮುಂದುವರಿದ ಅಧ್ಯಯನವನ್ನು ನಡೆಸುವುದಕ್ಕಾಗಿ ನ್ಯೂಗಿನಿಗೆ ಹಿಂದಿರುಗಲು ನಿರ್ಧರಿಸಿದೆವು. ಈ ವೇಳೆಗೆ ರಬಾಉಲ್‌ನಲ್ಲಿ ವಿಶ್ವವಿದ್ಯಾಲಯವು ಮನೆಗಳನ್ನು ಪಡೆದಿತ್ತು. ಹಾಗಾಗಿ, ನಾವು ಒಟ್ಟಿಗೇ ಇರಲು ಸಾಧ್ಯವಾಯಿತು. ನಾವು ರ್‍ಯಾಪಿಟೋಕ್‌ಗೆ ಹೊರಟಾಗ ನಾನು ಅತ್ಯಂತ ಉತ್ಸಾಹಿತಳಾಗಿದ್ದೆ. ಮತ್ತು ಹೆಮ್ಮೆಯಿಂದ ನನ್ನ ಪುತ್ರಿಯರನ್ನು ತೋರಿಸಿದೆ. ಒಬ್ಬ ಹೆಣ್ಣಾಗಿ ನನ್ನ ಜವಾಬ್ದಾರಿಯನ್ನು ಪೂರೈಸಿರುವುದರಿಂದಾಗಿ ಈಗ, ಇನ್ನೆಂದೂ ನಾನು 'ಒಣಗಿಹೋದ ಅಡಕೆಯ ಬಟ್ಟು' ಎಂದು ಕರೆಸಿಕೊಳ್ಳುವುದಿಲ್ಲ ಎಂದು ಕೇಳಿಸಿಕೊಳ್ಳಲು ನಾನು ಸಂತೋಷಗೊಂಡೆ.

ಅನುಭವೀ ಸಂಶೋಧಕರಂತೆ ಭಾವಿಸುತ್ತಾ ನಾವು ಶೀಘ್ರವಾಗಿ ನಮ್ಮ ನಮ್ಮ ವಿಷಯಗಳನ್ನು ಆಯ್ಕೆ ಮಾಡಿಕೊಂಡೆವು. ನ್ಯೂಗಿನಿಯಲ್ಲಿ, ಮುಂದೆ ಬರಲಿರುವ ಮೊದಲನೆಯ ಪಾರ್ಲಿಮೆಂಟರಿ (ಲೋಕಸಭಾ) ಚುನಾವಣೆಗಳ ಬಗೆಗೆ, ಬಿಲ್ ತನ್ನ ಅಧ್ಯಯನವನ್ನು ಕೇಂದ್ರೀಕರಿಸಲು ನಿರ್ಧರಿಸಿದ. ನಾನು ಮುಕ್ತ ಮಾರುಕಟ್ಟೆಗಳಲ್ಲಿನ dynamicsನ (ಚಲನಶೀಲ ವಸ್ತುಗಳ ಅಧ್ಯಯನ) ಅಧ್ಯಯನದ ಮೇಲೆ ನನ್ನ ಸಂಶೋಧನೆ, ಅಧ್ಯಯನವನ್ನು ಕೇಂದ್ರೀಕರಿಸಲು ಆಯ್ಕೆ ಮಾಡಿಕೊಂಡೆ. ಅಲ್ಲಿನ ಎಲ್ಲ ಸ್ಥಳೀಯ ಬೆಳೆಗಾರರೂ ತಮ್ಮ ಸ್ವಂತ ಉತ್ಪನ್ನಗಳನ್ನು ಮಾರಾಟಕ್ಕಾಗಿ ತಾವೇ ತರುತ್ತಿದ್ದರಲ್ಲದೇ ಮಧ್ಯವರ್ತಿಗಳ ಉಪಯೋಗವನ್ನು ಪಡೆಯುತ್ತಿರಲಿಲ್ಲ. ಆದರೂ, ಯಾರು ಮಾರುತ್ತಿದ್ದಾರೆಂಬುದಕ್ಕೆ ಲಕ್ಷ್ಯ ಕೊಡದೆ, ವಿವಿಧ ರೀತಿಯ ಹಣ್ಣುಗಳು ಮತ್ತು ತರಕಾರಿಗಳಿಗೆ ಒಂದೇ ರೀತಿಯ ನಿಗದಿತ ಬೆಲೆಯಿರುವಂತೆ ತೋರುತ್ತಿದ್ದುದನ್ನು ನಾನು ಕಂಡುಕೊಂಡೆ. ಅಲ್ಲಿ ಕಂಡುಬಂದ ಏಕಸ್ವಾಮ್ಯವೆನ್ನುವಂತಹ ಧಾರಣೆಯ ವಿನ್ಯಾಸ ನನಗೆ ಅತ್ಯಾಶ್ಚರ್ಯವೆನ್ನುವಂತೆ ತೋರಿತು. ಹಾಗಾಗಿ ಅದು ಹೇಗೆ ಕಾರ್ಯ ನಿರ್ವಹಿಸಿ ತ್ತೆಂಬುದನ್ನು ದೃಢೀಕರಿಸಲು, ಪ್ರಯತ್ನಪಡಬೇಕೆಂದು ನಿಶ್ಚಯಿಸಿದೆ. ಈ ಕಾರ್ಯಕ್ಕಾಗಿ ನಾನು, ಮಾರಾಟಗಾರರು ಬರುವ ಸಮಯಕ್ಕೆ ಅಂದರೆ ಬೆಳಿಗ್ಗೆ ೬ ಗಂಟೆಗೆ ನಾನು ಮಾರ್ಕೆಟ್ ಪ್ರದೇಶದಲ್ಲಿ ಇರಬೇಕಾಗಿತ್ತು ಮತ್ತು ಅಲ್ಲಿಂದ ಅವರೆಲ್ಲ ಹೊರಡುವುದಕ್ಕೆ ಮುಂಚೆ ಸಂಜೆ ೫ ಗಂಟೆಗೆ ಮಾತ್ರವೇ ಹೊರಟು ಬರಬೇಕಾಗಿತ್ತು.

ಮೊದಮೊದಲು ಇದು ಬಿಲ್‌ನ ಕಾರ್ಯಕ್ರಮಗಳೊಡನೆ ಯಾವುದೇ

ಸಮಸ್ಯೆಯನ್ನು ಸೃಷ್ಟಿಸಲಿಲ್ಲ. ಆದರೆ, ರಬಾಉಲ್‌ಗೆ ನಾವು ಬಂದ ಕೂಡಲೇ, ಸಾಮಾಜಿಕ ಮಾನವಶಾಸ್ತ್ರ ವಿಭಾಗದ ಹಂಗಾಮಿ ಮುಖ್ಯಸ್ಥನಾಗಿ ಹುದ್ದೆಯನ್ನು ನಿರ್ವಹಿಸಲು ಬಿಲ್‌ನನ್ನು ಮತ್ತೆ ಕ್ಯಾನ್‌ಬೆರಾಗೆ ಬರುವಂತೆ ಕೇಳಲಾಯಿತು. ಮಕ್ಕಳನ್ನು ಮತ್ತು ನನ್ನನ್ನು ಬಿಟ್ಟುಹೋಗಲು ಇಷ್ಟವಿರದಿದ್ದರಿಂದ, ಬಿಲ್‌ಗೆ ಮೊದಲು ಆ ಹುದ್ದೆಯನ್ನು ಒಪ್ಪಿಕೊಳ್ಳಲು ಇಷ್ಟವಿರಲಿಲ್ಲ. ಆದರೆ, ಇವತ್ತಲ್ಲ ನಾಳೆ ಅವನು ಪ್ರೊಫೆಸರ್ ಆಗಲು ಸಿದ್ಧನಾಗಬೇಕಾಗಿದ್ದುದರಿಂದ, ಈ ಆಹ್ವಾನವನ್ನು ಒಪ್ಪಿಕೊಳ್ಳಲು ನಾವು ಒಟ್ಟಾಗಿ ತೀರ್ಮಾನಿಸಿದೆವು. ಆದರೆ ನಾನು, ಹೆಚ್ಚುವರಿ ಕಾರ್ಯಭಾರಕ್ಕಾಗಿ ನಿಜವಾಗಿಯೂ, ನಾನು ಚೌಕಾಶಿ ಮಾಡಿ ಕೇಳಿರಲಿಲ್ಲ. ನನ್ನದೇ ಅಧ್ಯಯನಗಳು ನನಗಿದ್ದವು. ಜೊತೆಯಲ್ಲಿ ಬಿಲ್‌ನ ಸಂಶೋಧನಾ ಪ್ರಾಯೋಜಿತ ಕಾರ್ಯವನ್ನು ನಾನೇ ವಹಿಸಿಕೊಳ್ಳುವಂತೆ ಕೇಳಲಾಯಿತು. ಮಕ್ಕಳ ಮತ್ತು ನನ್ನದೇ ದೈನಂದಿನ ಕಾರ್ಯಕ್ರಮಗಳ ಬೇಡಿಕೆಗಳೊಡನೆ ಇದನ್ನು ಹೇಗೆ ನಿರ್ವಹಿಸಬೇಕೆಂಬುದು, ಒಂದು ಆಘಾತದಂತೆಯೇ ಬಂದಿತು. ಮಿಕ್ಕಿಯನ್ನು ಶಾಲೆಗೆ, ಡೆಬ್ಬಿಯನ್ನು ಕೇರ್ ಸೆಂಟರ್‌ಗೆ ಬಿಟ್ಟು ನೂರಕ್ಕಿಂತಲೂ ಹೆಚ್ಚಿಗೆ ಇದ್ದ– ನನ್ನ ಸಂಶೋಧನಾ ಸಹಾಯಕರ– ಮೇಲುಸ್ತುವಾರಿಗಾಗಿ ಮಾರ್ಕೆಟ್ಟಿಗೆ, ಮತ್ತೆ ಹುಡುಗಿಯರನ್ನು ಮನೆಗೆ ಕರೆದುಕೊಂಡು ಹೋಗುವುದಕ್ಕೆ ಎಂದು ನಾನು ಒಂದೇ ಸಮನೆ ತಿರುಗುತ್ತಿದ್ದುದು ನನ್ನ ಅನುಭವಕ್ಕೆ ಬಂದಿತು. ಮಕ್ಕಳನ್ನು ಸರಿಯಾದ ಸಮಯಕ್ಕೆ ಕರೆದುಕೊಂಡು ಹೋಗಬೇಕಾಗಿದ್ದುದರಿಂದ ನಾನು ಬೇಗನೇ ಮಾರ್ಕೆಟ್ಟಿನಿಂದ ಹೊರಡಬೇಕಾಗುತ್ತಿತ್ತು. ಹಾಗಾಗಿ, ಮಾರುಕಟ್ಟೆಯ ವ್ಯವಹಾರದ ವಿವರಗಳ ಬಗೆಗೆ ನನ್ನ ಸಹಾಯಕರ ಮಾಹಿತಿಗಳನ್ನು ತಾಳೆ ಮಾಡಿ ನೋಡಲು ನನಗೆ ಸಾಧ್ಯವಾಗುತ್ತಿರಲಿಲ್ಲ. ನಾನೇನಾದರೂ ಸ್ವಲ್ಪ ಹೆಚ್ಚು ಸಮಯ ಮಾರುಕಟ್ಟೆಯಲ್ಲಿ ಉಳಿದುಕೊಂಡರೆ, ಅಲ್ಲಿ ಮಕ್ಕಳು ಕಾಯಬೇಕಾಗುತ್ತಿತ್ತು. ಇದು ಕೂಡ ಬೇರೆ ಬೇರೆ ಪರಿಣಾಮಗಳನ್ನುಂಟುಮಾಡುವುದೆಂದು ನನಗೆ ತಿಳಿದಿತ್ತು. ನಾನು ಮಕ್ಕಳೊಡನೆ ಹೆಚ್ಚು ಕಾಲ ಕಳೆಯಲು ಪ್ರಯತ್ನಿಸಿದೆ. ನಮ್ಮೆಲ್ಲರಿಗೂ ಇದು ಕಠಿಣ ಸಮಯವೆಂದು ನನಗೆ ಅರಿವಿತ್ತು. ಸಂಶೋಧನಾ ಮೇಲ್ವಿಚಾರಕಿಯ ಕಷ್ಟಕರ ಕೆಲಸದ ನಂತರ, ಮಕ್ಕಳೊಡನೆ, ಉತ್ತಮವಾದ ಕಾಲ ಕಳೆಯಲು ನಾನು ಸಾಧಾರಣವಾಗಿ ಸಂತುಷ್ಟಳಾಗಿರುತ್ತಿದ್ದೆ. ನಾನು ಹಗಲೆಲ್ಲಾ ಅವರಿಂದ ದೂರವಾಗಿದ್ದು ಕೆಲಸ ಮಾಡುತ್ತಿದ್ದರೂ ಅವರನ್ನು ಬಹಳ ಪ್ರೀತಿಸುತ್ತಿದ್ದೆನೆಂದು ಅವರು ತಿಳಿದುಕೊಳ್ಳಲಿ ಎಂದು ಬಯಸುತ್ತಿದ್ದೆ. ಆದರೂ ಕೆಲವು ಬಾರಿ, ಇವೆಲ್ಲವುಗಳಿಂದ ಸುಮ್ಮನೆ ದೂರ ಹೋಗಿಬಿಡಬೇಕು, ಎಲ್ಲ ಕೋರಿಕೆ, ಕೆಲಸಗಳನ್ನು ಹಿಂದಕ್ಕೆ ಬಿಟ್ಟು, ಒಂದೇ ಒಂದು ನಿಮಿಷದ ಮಟ್ಟಿಗಾದರೂ, ಹೊರಟುಹೋಗಬೇಕು ಎನಿಸುತ್ತಿರಲಿಲ್ಲ ಎಂದರೆ ನಾನು ಸುಳ್ಳು ಹೇಳಿದ ಹಾಗಾಗುತ್ತದೆ.

ಬಿಲ್, ನಾನು ಮತ್ತು ಮಕ್ಕಳು ಮತ್ತೆ ಒಂದುಗೂಡಿದಾಗ ನಾನು ಹರ್ಷಪಟ್ಟೆ. ನಾನು ರಬಾಉಲ್ ಅನ್ನು ಬಿಟ್ಟು ಬಂದಿದ್ದರಿಂದ ಬೇಸರವಾದರೂ, ಮತ್ತೆ ಮಾತೃತ್ವ–ಪಿತೃತ್ವಗಳ ಹೊಣೆಯನ್ನು ಹಂಚಿಕೊಳ್ಳಲು ಸಾಧ್ಯವಾದದ್ದಕ್ಕಾಗಿ ನೆಮ್ಮದಿ ಪಡೆದೆ. ನಾವು ನಮ್ಮ ಹಿಂದಿನ ದಿನಗಳು ಇದ್ದಂತೆ ಆರಾಮವಾಗಿ ವಿಶ್ರಾಂತಿಯಿಂದಿರುತ್ತೇವೆಂದು ಯೋಚಿಸಿದ್ದೆ. ಆದರೆ, ಕ್ಯಾನ್‌ಬೆರಾಕ್ಕೆ ಹಿಂದಿರುಗಿದ ಕೂಡಲೇ ನಾವು ಆಗಲೇ ವಿಶೇಷ ಅಧ್ಯಯನ ಹಾಗೂ ಪ್ರವಾಸಕ್ಕಾಗಿ ಸಿಗುವ ವೇತನ ಸಹಿತ ರಜೆಯನ್ನು ಉಪಯೋಗಿಸಲು ಸಿದ್ಧರಾಗುತ್ತಿದ್ದೆವು. ಹಾಂಗ್‌ಕಾಂಗ್, ಇಸ್ರೇಲ್, ಆಸ್ಟ್ರಿಯಾ, ಇಂಗ್ಲೆಂಡ್, ಅಮೆರಿಕಾ ಮತ್ತು ಜಪಾನ್ ಕಡೆಯ ನಿಲುಗಡೆಯಾಗುವ ಪ್ರಪಂಚ ಪರ್ಯಟನದ ಪ್ರವಾಸವೊಂದನ್ನು ನಾವು ಯೋಚಿಸಿದೆವು.

ಕಾಲ ಹಾರಿಹೋಗುತ್ತಿತ್ತು ಮತ್ತು ನಮ್ಮ ಹುಡುಗಿಯರು ಅನುಭವೀ ಪ್ರಯಾಣಿಕರಾಗಿಬಿಟ್ಟರು. ಅವರಿಬ್ಬರೂ ಒಂದೊಂದು ಭುಜಕ್ಕೆ ನೇತುಹಾಕಿಕೊಳ್ಳುವ ಚೀಲವನ್ನು ಪಡೆದಿದ್ದರು ಮತ್ತು ಅವರು ಅದರೊಳಗೆ ಎಷ್ಟು ಸಾಧ್ಯವೋ ಅಷ್ಟು ಆಟಿಕೆಗಳನ್ನು ತುರುಕಿಕೊಳ್ಳಲು ಅನುಮತಿಸಲಾಯಿತು. ನಾವು ಉಳಿದುಕೊಳ್ಳುತ್ತಿದ್ದ ಹಲವಾರು ಅಪರಿಚಿತ ಹೋಟೆಲ್‌ಗಳಲ್ಲಿ ಹೇಗೆ ಪರಿಚಿತ ಪರಿಸರವನ್ನು ಸೃಷ್ಟಿಸಿಕೊಳ್ಳಬೇಕು ಎನ್ನುವುದನ್ನು ಅವರು ಬೇಗ ಕಲಿತರು. ಹೋಟೆಲಿನಲ್ಲಿ ತಮ್ಮ ಕೋಣೆಯನ್ನು ತಲುಪಿದ ಕೂಡಲೇ ಅವರು ತಮ್ಮ ಚೀಲಗಳನ್ನು ಬರಿದು ಮಾಡುತ್ತಿದ್ದರು ಮತ್ತು ತಮ್ಮ ಆಟಿಕೆಗಳನ್ನೆಲ್ಲಾ ತಮ್ಮ ಹಾಸಿಗೆಯ ಸುತ್ತಲೂ ಜೋಡಿಸುತ್ತಿದ್ದರು. ನಾವು ಉಳಿದುಕೊಳ್ಳುತ್ತಿದ್ದ ಅಪರಿಚಿತ, ಕೆಲವೊಮ್ಮೆ ವಿಚಿತ್ರ ಜಾಗಗಳಲ್ಲಿ ಅವರು ಎಷ್ಟು ಬೇಗ ಹೊಂದಿಕೊಳ್ಳುತ್ತಿದ್ದರು ಮತ್ತು ಪ್ರಯಾಣ ಕಾಲದಲ್ಲಿ ನಾವು ಭೇಟಿ ಮಾಡುತ್ತಿದ್ದ ಅನೇಕ ಅಪರಿಚಿತರೊಡನೆ ನಮ್ಮ ಈ ಚಿಕ್ಕ ಹುಡುಗಿಯರು ಎಷ್ಟು ಚೆನ್ನಾಗಿ ವರ್ತಿಸುತ್ತಿದ್ದರು ಎಂಬುದನ್ನು ನೋಡಿ ಬಿಲ್ ಮತ್ತು ನಾನು ಹೆಮ್ಮೆಪಡುತ್ತಿದ್ದೆವು. ಕ್ಯೋಟೋದಲ್ಲಿ, ಸಣ್ಣದಾದ, ವಿಶಿಷ್ಟವಾದ ಜಪಾನೀ ಇನ್‌ನಲ್ಲಿ (Inn) ಕೇವಲ ನಾವು ಮಾತ್ರ ಅತಿಥಿಗಳಾಗಿದ್ದೆವು. ನಮಗೆ ಯಾರಿಗೂ ಜಪಾನೀ ಭಾಷೆ ಮಾತನಾಡಲು ತಿಳಿಯದಿದ್ದರೂ, ಆ ಹೋಟೆಲನ್ನು ನಡೆಸುತ್ತಿದ್ದ ವೃದ್ಧೆಗೆ ಇಂಗ್ಲಿಷಿನಲ್ಲಿ ಮಾತನಾಡುವುದು ತಿಳಿಯದಿದ್ದರೂ ನಾವು ಹೇಗೋ ಸಂವಹನವನ್ನು ನಿರ್ವಹಿಸಿದೆವು. ನಾವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋಗುವಾಗ, ಈ ಮಕ್ಕಳನ್ನು ತನ್ನ ಜೊತೆ ಸುರಕ್ಷಿತವಾಗಿ ಬಿಟ್ಟು ಹೋಗಬಹುದು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳುವಂತೆ ಆ ವೃದ್ಧೆ ತಿಳಿಸಿದಳು. ಮಿಕ್ಕಿ ಮತ್ತು ಡೆಬ್ಬಿ, ಆ ವೃದ್ಧೆಯ ಕೊಳದಲ್ಲಿ ನಿರಂತರವಾಗಿ ಗೋಲ್ಡ್‌ಫಿಷ್‌ನ್ನು ಹಿಡಿಯುತ್ತಾ ಅವಳ ಜೊತೆ ಸಂತೋಷದಿಂದ ಇದ್ದುಬಿಟ್ಟರು. ಅವಳನ್ನು 'ಅಜ್ಜಿ' ಎಂದು ಕರೆಯಲು ಕೂಡಾ ಮಕ್ಕಳು ಕಲಿತರು.

ನಾವು ಇಂಗ್ಲೆಂಡಿನಲ್ಲಿ ಉಳಿದುಕೊಂಡಿದ್ದಾಗ, ಸಾಮಾಜಿಕ ಮಾನವ ಶಾಸ್ತ್ರದಲ್ಲಿ ಪ್ರೊಫೆಸರ್ ಹುದ್ದೆಗೆ ಅರ್ಜಿ ಹಾಕುವಂತೆ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಸಸೆಕ್ಸ್ ಯೂನಿವರ್ಸಿಟಿ, ಎರಡು ಕಡೆಗಳಿಂದಲೂ ಬಿಲ್ ಆಹ್ವಾನಿಸಲ್ಪಟ್ಟ. ಆಗ ಬಿಲ್ ತಾನು ಈ ಎರಡರಲ್ಲಿ ಯಾವುದೇ ಒಂದು ಹುದ್ದೆಯನ್ನು ಒಪ್ಪಿಕೊಳ್ಳ ಬೇಕಾದರೂ, ನನಗೂ ಕೂಡ ಒಂದು ಹುದ್ದೆಯನ್ನು ನೀಡಿ ಎಂಬುದನ್ನು ಸ್ಪಷ್ಟಪಡಿಸಿದ. ಈ ವೇಳೆಗೆ, ನಮ್ಮ ಮಕ್ಕಳು ಇಂಗ್ಲೆಂಡಿನ ಯೆಹೂದೀ ಸಮುದಾಯದ ನಡುವೆ ಬೆಳೆಯಬೇಕು ಎಂದು ನಾವು ನಿರ್ಧರಿಸಿದ್ದೆವು. ಕ್ಯಾನ್‌ಬೆರಾಗೆ ನಾವು ಹಿಂತಿರುಗಿದ ನಂತರ, ಸಸೆಕ್ಸ್ ಯೂನಿವರ್ಸಿಟಿಯಲ್ಲಿ ನಮಗಿಬ್ಬರಿಗೂ ಪ್ರೊಫೆಸರರ ಹುದ್ದೆಗಳನ್ನು ನೀಡಲಾಗಿದೆಯೆಂಬುದನ್ನು ನಮಗೆ ನಂಬಲು ಸಾಧ್ಯವೇ ಆಗಲಿಲ್ಲ; ಬಿಲ್‌ನನ್ನು ಸಾಮಾಜಿಕ ಮಾನವಶಾಸ್ತ್ರದ ಪ್ರೊಫೆಸರ್ ಮತ್ತು ನನ್ನನ್ನು ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್(IDS)ನಲ್ಲಿ ಸಂಶೋಧನಾ ಪ್ರೊಫೆಸರ್ ಆಗಿ ನೇಮಿಸಲಾಗಿತ್ತು. ಒಂದು ಕುಟುಂಬದಲ್ಲಿ ಇಬ್ಬರು ಡಾಕ್ಟರೇಟ್ ಪದವಿ ಪಡೆದವರೆಂದರೆ, ಬಹಳಷ್ಟು ಭರವಸೆಯಿತ್ತೆಂದು ನಾನು ಆಲೋಚಿಸಿದ್ದೆ. ಆದರೆ, ಇಬ್ಬರು ಪ್ರೊಫೆಸರ್‌ಗಳು?

೧೯೭೨ರಲ್ಲಿ ನಾವು ಇಂಗ್ಲೆಂಡಿಗೆ ಹಿಂದಿರುಗಲು ಯೋಚಿಸಿದೆವು. ನನ್ನ ಆಶ್ಚರ್ಯಕ್ಕೆ, I.D.S. ಮೂರು ತಿಂಗಳುಗಳ ಮುಂಚೆಯೇ ತಮ್ಮ ಅಧ್ಯಯನ ಸಂಕಿರಣವೊಂದನ್ನು ಭಾಗವಹಿಸಲು ನನ್ನನ್ನು ಆಹ್ವಾನಿಸಿತು. ಇಂಗ್ಲೆಂಡಿನ ಈ ಭೇಟಿಯು ಕೇವಲ ಮೂರು ವಾರಗಳು ಮಾತ್ರವಾದರೂ, ನಾವು ಕುಟುಂಬ ಸಮೇತ ಇಲ್ಲಿಗೆ ಬರುವ ಮುಂಚೆ, ಅಗತ್ಯವಾದ ಗೃಹಕೃತ್ಯದ ಸಿದ್ಧತೆಗಳನ್ನೆಲ್ಲಾ ಏರ್ಪಾಡು ಮಾಡಲು ನನಗೆ ಅನುಕೂಲವಾಯಿತು. ಸಮುದ್ರಕ್ಕೆ ಹತ್ತಿರವಾಗಿ ವಾಸಿಸಬೇಕೆಂಬುದು ಯಾವಾಗಲೂ ನನ್ನ ಕನಸಾಗಿತ್ತು. ಆದ್ದರಿಂದ ಬ್ರಿಟನ್‌ನಲ್ಲಿ ಸಮುದ್ರಕ್ಕೆದುರಾಗಿ ಮನೆಯನ್ನು ಕೊಂಡುಕೊಳ್ಳುವ ಅವಕಾಶ ನನ್ನನ್ನು ಉತ್ಸಾಹಿತಳನ್ನಾಗಿ ಮಾಡಿತು. ಆದಾಗ್ಯೂ, ಅದು ಆಸ್ತಿಯ ಕಾಲವಾಗಿತ್ತು. ಹಾಗಾಗಿ ನಾನು ಇಷ್ಟಪಟ್ಟು ನೋಡಿದ ಪ್ರತಿಯೊಂದು ಮನೆಯೂ ಹರಾಜಿನಲ್ಲಿ ಹೆಚ್ಚು ಹಣಕ್ಕೆ ಕೂಗಲ್ಪಡುತ್ತಿತ್ತು. ಯೂನಿವರ್ಸಿಟಿಯಲ್ಲಿನ ನನ್ನ ಅನೇಕ ಕಾರ್ಯಗಳ ಬದ್ಧತೆಯ ನಂತರ, ಪ್ರತಿದಿನವೂ ಮನೆಯನ್ನು ಹುಡುಕುತ್ತಾ ಕಾಲ ಕಳೆಯುತ್ತಿದ್ದೆ. ನಾನು ಹೆಚ್ಚು ಹೆಚ್ಚು ನಿರಾಶಳಾಗ ತೊಡಗಿದ್ದೆ. ಕಡೆಗೆ, ಅಂತಿಮವಾಗಿ ಬ್ರಿಟನ್‌ಗೆ ಹತ್ತಿರದ ಒಂದು ಹಳ್ಳಿ ಹ್ಯಾಸಕ್ಸ್‌ನ ಪ್ರಶಾಂತವಾದ ರಸ್ತೆಯಲ್ಲಿದ್ದ, ನಮಗೆ ಅವಶ್ಯಕವಾಗಿದ್ದ ವಿಸ್ತೀರ್ಣದ, ಯೋಗ್ಯ ಬೆಲೆಯ ವಿಕ್ಟೋರಿಯನ್ ಗೃಹವೊಂದನ್ನು ನನಗೆ ತೋರಿಸಿದರು. ಅದು ತೀರಾ ದುಸ್ಥಿತಿಯಲ್ಲಿದ್ದು, ದುರಸ್ತಿಯಾಗಬೇಕಾಗಿತ್ತಾದರೂ, ಆಲ್‌ಟ್ರೆನ್‌ಚಮ್‌ನಲ್ಲಿದ್ದ ನಮ್ಮ ಮನೆಯನ್ನು ಅದು ನೆನಪಿಸುತ್ತಿದ್ದುದರಿಂದ ನಾನು

ಆ ಮನೆಯಿಂದ ಆಕರ್ಷಿತಳಾದೆ. ಫೋನಿನ ಮೂಲಕ ಬಿಲ್‌ನ ಒಪ್ಪಿಗೆಯನ್ನು ಪಡೆದ ನಂತರ ನಾನು ಆ ಮನೆಯನ್ನು ಕೊಂಡುಕೊಂಡೆ. ಮನೆಯ ಸಾಮಾನುಗಳ ಗಂಟುಮೂಟೆ ಕಟ್ಟಲು ಕ್ಯಾನ್‌ಬೆರಾಗೆ ನಾನು ಹಿಂತಿರುಗಿದಾಗ ನಾನು ವಿಜಯೋತ್ಸಾಹದಿಂದೆಂಬಂತೆ ಹರ್ಷಗೊಂಡೆ.

ನಾವು ಇಂಗ್ಲೆಂಡಿಗೆ ಹಿಂದಿರುಗುತ್ತಿದ್ದೇವೆ ಎಂಬುದನ್ನು ಅಪ್ಪ ಕೇಳಿದಾಗ, ಅವರು ಕೂಡ ನಮ್ಮೊಡನೆ ಬರುವುದಾಗಿ ಪಟ್ಟು ಹಿಡಿದರು. ಹಾಗಾಗಿ ೧೯೭೨, ಜೂನ್ ತಿಂಗಳಿನಲ್ಲಿ ನಾವೆಲ್ಲರೂ ಒಟ್ಟಿಗೇ ಸಮುದ್ರಯಾನದ ಮೂಲಕ ಹಿಂದಿರುಗಿದೆವು ಮತ್ತು ಕೆಲವೇ ತಿಂಗಳುಗಳಲ್ಲಿ, ನಾವು ಇಲ್ಲಿಂದ ಎಲ್ಲಿಗೂ ಹೋಗಿಯೇ ಇರಲಿಲ್ಲವೇನೋ ಎಂದೆನಿಸಿತು ನಮಗೆ. ಹುಡುಗಿಯರನ್ನು ಸ್ಥಳೀಯ ಜೂನಿಯರ್ ಶಾಲೆಗೆ ಸೇರಿಸಲಾಯಿತು ಮತ್ತು ಅವರನ್ನು ನೋಡಿಕೊಳ್ಳಲು ಒಬ್ಬ ಸುಂದರ ಫ್ರೆಂಚ್ ಮಹಿಳೆಯು– ಊಟ, ವಸತಿಗಳೊಡನೆ, ಕೆಲಸ ಮಾಡಿಕೊಡಲು– ನಮಗೆ ದೊರೆತಳು. ಎಲ್ಲಿಯಾದರೂ ದೀರ್ಘ ಸಮಯದ ನಂತರ ನಿಜವಾಗಿಯೂ ನಾನು ನೆಲೆನಿಂತದ್ದು ಅದೇ ಮೊದಲ ಬಾರಿಯಾಗಿತ್ತು ಮತ್ತು ಆ ಮನೆಯಲ್ಲಿ ಕುಟುಂಬದೊಡನೆ ನಾನು ಹರ್ಷದಿಂದ ಕಾಲ ಕಳೆದೆ.

ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್‌ನಲ್ಲಿ, ಕೆಲಸವು ಉತ್ಸಾಹ ದಾಯಕವಾಗಿಯೂ, ತೃಪ್ತಿಕರವಾಗಿಯೂ ಇತ್ತು. ಹಾಗಾಗಿ ನಾನು ನನ್ನ ಸೂಕ್ತ ಸ್ಥಳವನ್ನು ಕಂಡುಕೊಂಡಿದ್ದೆನೆನಿಸಿತು. ಪ್ರಪಂಚದ ನಾನಾ ಭಾಗಗಳ ಸಂಸ್ಥೆಗಳಿಂದ ಅಭಿವೃದ್ಧಿ, ವಿಕಾಸಗಳ ಬಗೆಗಿನ ನನ್ನ ಕಾರ್ಯಗಳಿಗೆ ಮನ್ನಣೆ ಸಿಕ್ಕಲಾರಂಭಿಸಿತ್ತು ಮತ್ತು ಹೀಗೆ ಅನೇಕ ಪ್ರದೇಶಗಳಿಂದ ಭೇಟಿ ಕೊಡುವಂತೆ, ನನಗೆ ಬರುತ್ತಿದ್ದ ಆಹ್ವಾನಗಳು ನನ್ನ ಪ್ರಪಂಚ ಪರ್ಯಟನೆಯ ಗೀಳನ್ನು ತೃಪ್ತಿಪಡಿಸಿದವು. ನ್ಯೂಯಾರ್ಕ್‌ನಲ್ಲಿದ್ದ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಕೌನ್ಸಿಲ್ (ADC) ತಮ್ಮ ಮಂಡಲಿಯ ವಿಶ್ವಸ್ಥರನ್ನು ಸೇರುವಂತೆ ನನ್ನನ್ನು ಆಹ್ವಾನಿಸಿತು. ನಾನು ಅವರ ಪ್ರಥಮ ಮಹಿಳಾ ಸದಸ್ಯೆಯಾಗಿದ್ದೆ. ನನ್ನ ಕ್ಷೇತ್ರದಲ್ಲಿ ನಾನು ಆದ್ಯಪ್ರವರ್ತಕಳಾಗು ತ್ತಿದ್ದೇನೆ ಎನಿಸಿತು. ಮತ್ತು ನಾನು ಒಂದು ಹೊಸ ಸಂಶೋಧನೆಯ ಮಾದರಿಯನ್ನು ಅಬಿವೃದ್ಧಿಪಡಿಸಿದೆ. ಕೇಂದ್ರ ವಿಷಯವನ್ನು ನಾನು ಆಯ್ಕೆಮಾಡಿದೆ. ಹಣದ ವ್ಯವಸ್ಥೆಯನ್ನು ಗಟ್ಟಿಮಾಡಿಕೊಂಡೆ ಮತ್ತು ತೃತೀಯ ಜಗತ್ತಿನ– ಅಭಿವೃದ್ಧಿಶೀಲ ರಾಷ್ಟ್ರಗಳ– ಡಾಕ್ಟರೇಟ್ ಪಡೆಯಲಿರುವ ವಿದ್ಯಾರ್ಥಿಗಳ ಒಂದು ತಂಡವನ್ನು, ತಮ್ಮ ತಮ್ಮ ತಾಯ್ನಾಡುಗಳಲ್ಲಿ, ದೇಶಗಳಲ್ಲಿ ಕಾರ್ಯಶೀಲತೆಯನ್ನು ಗುರಿಯಾಗಿಟ್ಟು ಕೊಂಡು ಸಣ್ಣ ಸಮಾಜಗಳ ಅಧ್ಯಯನ ನಡೆಸುವಂತೆ ಹೇಳಿ ನೇಮಕ ಮಾಡಿಕೊಂಡೆ. ಹೀಗೆ ನಾನು ನಮ್ಮ 'ಜನಸಂಖ್ಯಾ ಬೆಳವಣಿಗೆ ಮತ್ತು ಗ್ರಾಮೀಣ ಬಡತನಗಳ ಮಿಶ್ರ–ಸಾಂಸ್ಕೃತಿಕ ಅಧ್ಯಯನ'ವನ್ನು, ೧೯೭೩ರಲ್ಲಿ ಐದು ಜನ ಏಷಿಯಾ ಹಾಗೂ

ಮೂರು ಜನ ಆಫ್ರಿಕಾದ ಪಿಎಚ್.ಡಿ. ವಿದ್ಯಾರ್ಥಿಗಳೊಡನೆ ಪ್ರಾರಂಭಿಸಿದೆ. ಡಾಕ್ಟರೇಟ್ ಪಡೆಯುತ್ತಿರುವ ಎಂಟು ಜನ ವಿದ್ಯಾರ್ಥಿಗಳ ಮೇಲ್ವಿಚಾರಣೆಯನ್ನು ಒಂದೇ ಬಾರಿಗೆ ಮಾಡುವುದು ಸುಲಭಸಾಧ್ಯವಾಗಿರಲಿಲ್ಲ. ಆದರೆ, ಕಟ್ಟಕಡೆಯಲ್ಲಿ, ಇದು ನನ್ನ ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದ ಅನೇಕ ವಿಭಿನ್ನ ಸಾಂಸ್ಕೃತಿಕ ಅಂಶಗಳಲ್ಲಿರುವ ಹೋಲಿಕೆ, ವೈದೃಶ್ಯಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವನ್ನು ನೀಡಿತು. ನನ್ನ ತಂಡದ ವಿದ್ಯಾರ್ಥಿಗಳು ಒಂದು ಕುಟುಂಬದಂತೆಯೇ ಆದರು ಮತ್ತು ಅವರ ಬಗೆಗೆ ನಾನು ತಳೆದ ಮಾತೃತ್ವದ ಭಾವನೆಯಿಂದ ನಾನು ಆನಂದವನ್ನನುಭವಿಸಿದೆ. ನಮ್ಮ ಮನೆಯಲ್ಲಿ ಪಲ್ಯದ ಸಾಯಂಕಾಲಗಳನ್ನು ನಡೆಸುತ್ತಿದ್ದೆವು ಮತ್ತು ಭಿನ್ನ ಭಿನ್ನ ದೇಶಗಳ ಮೂಲದಿಂದ ಬಂದಿದ್ದ ಅವರ ಆಹಾರ ಪದಾರ್ಥಗಳ ರುಚಿ ನೋಡುತ್ತಿದ್ದೆವು. ಮನೆಯು ಪ್ರಪಂಚದ ನಾನಾ ಭಾಗದಿಂದ ಬಂದಿದ್ದ ಅಪರಿಚಿತ ಜನರಿಂದ ತುಂಬಿರುವಂತಹ ಸ್ಥಿತಿಗೆ ಮಕ್ಕಳು ಬೇಗ ಹೊಂದಿಕೊಂಡರು ಮತ್ತು ಮಸಾಲೆಯ ಆಹಾರದ ಬಗೆಗೆ ರುಚಿಯನ್ನು ಬೆಳೆಸಿಕೊಂಡರು.

ನನ್ನ ಅಧ್ಯಯನದ ಕಾರ್ಯಕ್ರಮವು ಮುಕ್ತಾಯವಾದಾಗ ಮತ್ತು ಜಂಟಿ ಅಧ್ಯಯನಗಳು ಪ್ರಕಟಗೊಂಡಾಗ ನಾನು ಖಿನ್ನಳಾಗಿದ್ದೆ. ಇದನ್ನು ಹೇಗೆ ಪರಮಾವಧಿ ಮಟ್ಟಕ್ಕೆ ತೆಗೆದುಕೊಂಡು ಹೋಗಬಹುದು ಎಂದು ತಿಳಿಯುವಲ್ಲಿ ನಾನು ಸೋತಿದ್ದೆ. ಆದಾಗ್ಯೂ, ನನ್ನ ಆಫ್ರಿಕಾದ ವಿದ್ಯಾರ್ಥಿಗಳಲ್ಲಿ ಒಬ್ಬನ ಶೋಧವನ್ನು ಆಧರಿಸಿ ಸಾಕ್ಷ್ಯಚಿತ್ರ ಮಾಡಲು ಹೇಗೋ ಆರ್ಥಿಕ ಸಹಾಯ ಪಡೆಯುವಲ್ಲಿ ಯಶಸ್ವಿಯಾದೆ. ಮತ್ತು "ಮಾರಗೋಲಿ" ನಿರ್ಮಾಣವಾದಾಗ ನಾನು ಅತ್ಯಂತ ಹೆಮ್ಮೆ ತಾಳಿದ್ದೆ. IDSನ ಸಂಶೋಧನೆಯಿಂದ ಪರಿಣಮಿಸಿದ ಮೊದಲ ಸಾಕ್ಷ್ಯಚಿತ್ರವಾಗಿತ್ತು ಅದು. ಅದಲ್ಲದೆ, ಆ ಚಿತ್ರವು ಪ್ರಪಂಚದಾದ್ಯಂತ ಎಲ್ಲ ಪ್ರದೇಶಗಳಿಂದಲೂ ಉತ್ಕೃಷ್ಟ ವಿಮರ್ಶೆಗಳನ್ನು ಪಡೆಯಿತು. ಕಡೆಗೂ ನಾನದನ್ನು ಮಾಡಿದೆನೆಂಬ ತೃಪ್ತಿಯನ್ನು ಅನುಭವಿಸಿದೆ. ಬಿಲ್‌ನ ಅಕಡೆಮಿಕ್ ವಿದ್ವತ್ತು ಮತ್ತು ಉತ್ಕೃಷ್ಟತೆಗಳು ಮಾರ್ಗದರ್ಶಕ ವಾಗಿರುವುದು ನನಗೆ ಅಭ್ಯಾಸವಾಗಿತ್ತು. ಆದರೆ ಈಗ ನಾನು ನನ್ನದೇ ಆದ ವೃತ್ತಿಯಲ್ಲಿ ಮನ್ನಣೆಯನ್ನು ಗಳಿಸುತ್ತಿದ್ದೆ.

೧೯೭೪ರಲ್ಲಿ, ಬಿಹೇವಿಯರಲ್ ಸೈನ್ಸಸ್(Behavioral sciences)ನಲ್ಲಿ 'ಸ್ಟಾನ್‌ಫೋರ್ಡ್ ಸೆಂಟರ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್'ನಲ್ಲಿ ಬಿಲ್ ಮತ್ತು ನನಗೆ ಒಂದು ವರ್ಷದ ಫೆಲೋಷಿಪ್ ದೊರೆಯಿತು. ಇದು ಬಹುದೊಡ್ಡ ಗೌರವವಾಗಿತ್ತು. ಇದು ನಮ್ಮಿಬ್ಬರಿಗೂ ಹೊರಗೆ ಹೋಗುವ ಅವಕಾಶ ನೀಡಿದುದಲ್ಲದೆ, ನಂತರದ ಪ್ರಕಟಣೆಗೆ ಬರೆಯಲು ವಸ್ತುವನ್ನು ನೀಡಿತು. ಒಂದು ವರ್ಷದ ಅವಧಿಗೆ ಮಕ್ಕಳನ್ನು ಶಾಲೆಯಿಂದ ಬಿಡಿಸಿ ಕರೆದುಕೊಂಡು ಹೋಗುವುದರಿಂದ, ವಿದ್ಯಾಭ್ಯಾಸ ತೀರಾ

ಅಸ್ಥಿರವಾಗುತ್ತದೆಂದೇನೂ ನಾವು ಯೋಚಿಸಲಿಲ್ಲ. ಅಲ್ಲದೆ, ಅಮೆರಿಕನ್ ಶಾಲೆಗೆ ಹೋಗುವ ಅನುಭವವನ್ನು ಅವರು ಖಂಡಿತ ಆನಂದಿಸುತ್ತಾರೆ ಎಂಬ ಬಗ್ಗೆ ನಮಗೆ ನಂಬಿಕೆಯಿತ್ತು. ಮನೋಹರವಾದ ಪ್ರದೇಶದಲ್ಲಿ ಒಂದು ಸುಂದರವಾದ ಮನೆಯನ್ನು ಪಡೆದೆವು. ಒಂದು ವರ್ಷ ಓಡುತ್ತಾ ಕಳೆದುಹೋಯಿತು. ಆ ಸೆಂಟರ್‌ನಲ್ಲಿ ನಮ್ಮ ವಾಸ್ತವ್ಯದ ಕೊನೆಯಲ್ಲಿ, ನಾವು ಮೆಕ್ಸಿಕೋದ ಪ್ರಾಕ್ತನಶಾಸ್ತ್ರ ಪ್ರದೇಶಗಳಿಗೆ ಪ್ರವಾಸ ಹೋಗಬೇಕಾದಾಗ, ಅಮೆರಿಕಾದ ಈಸ್ಟ್‌ಕೋಸ್ಟ್‌ನಲ್ಲಿ ವಾಸಿಸುತ್ತಿದ್ದ ನನ್ನ ಕಸಿನ್ ಪಾಲ್‌ನೊಡನೆ ಮಕ್ಕಳನ್ನು ಬಿಟ್ಟು ಹೋಗುವ ವ್ಯವಸ್ಥೆ ಮಾಡಿದೆವು. ಆ ಪ್ರವಾಸ ಒಂದು ಅದ್ಭುತ ಅನುಭವವಾಗಿತ್ತು.

ಇಂಗ್ಲೆಂಡಿಗೆ ಹಿಂದಿರುಗಲು ನಾವು ಹರ್ಷಚಿತ್ತರಾಗಿದ್ದೆವು. ಆದರೆ, ನಮ್ಮ ಹುಡುಗಿಯರಿಗೆ ಮತ್ತೆ ಇಲ್ಲಿ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕಾಯಿತು; ಅವರ ಅಮೆರಿಕನ್ ಉಚ್ಚಾರಣೆಗಳಿಂದಾಗಿ ಶಾಲೆಯಲ್ಲಿ ಅವರು ಹೊರಗೆ ನಿಲ್ಲ ಬೇಕಾಗುತ್ತಿತ್ತು. ಬೇರೆ ಬೇರೆ ವಿಷಯಗಳು ಮತ್ತು ವಿಭಿನ್ನ ಬೋಧನಾ ಕ್ರಮಗಳು ಅವರಿಗೆ ಇಷ್ಟೊಂದು ಅಡಚಣೆಯುಂಟುಮಾಡಬಹುದೆಂದು ನಾವು ನಿರೀಕ್ಷಿಸಿರಲಿಲ್ಲ.

ಮಕ್ಕಳು ವೇಗವಾಗಿ ಬೆಳೆಯುತ್ತಿದ್ದರು. ಮಿಕ್ಕಿಗೆ ೧೩ ವರ್ಷಗಳಾದವು. ಅವಳು ಮಿಕ್ಕಿ ಎಂದು ಕರೆಸಿಕೊಳ್ಳುವುದಕ್ಕಿಂತಲೂ ಮಿಷೆಲೆ ಎಂದು ಕರೆಸಿಕೊಳ್ಳಲು ಇಚ್ಛಿಸಿದಳು. ಗಂಡು ಹುಡುಗರು ಸ್ನೇಹಿತರಾಗಿ ಅವರ ಜೀವನದಲ್ಲಿ ಕಾಣಿಸಿಕೊಳ್ಳ ತೊಡಗಿದರು. ದಿಢೀರನೆ ನಾವು ಹದಿಹರೆಯದ ಪುತ್ರಿಯರನ್ನು ಪಡೆದುಬಿಟ್ಟಿದ್ದೆವು. ಮತ್ತು ಪ್ರತಿ ಅನನ್ಯತೆಯ ಅರಿವನ್ನು ನಾವು ಅವರಲ್ಲಿ ತುಂಬಲು ಪ್ರಯತ್ನಿಸಿದ್ದೆವು ಮತ್ತು ಪ್ರತಿ ವಾರಾಂತ್ಯದಲ್ಲಿಯೂ ಅವರನ್ನು ಭಾನುವಾರದ ಶಾಲೆಗೆ ಕರೆದುಕೊಂಡು ಹೋಗುತ್ತಿದ್ದೆವು. ಆದರೆ, ಒಂದೇ ಒಂದು ಯೆಹೂದಿ ಕುಟುಂಬವಿದ್ದ ಆ ಪಟ್ಟಣದಲ್ಲಿ ವಾಸಿಸುತ್ತಾ ಇದು ಕಷ್ಟವಾಗಿತ್ತು. ಪಕ್ಕದ ಗ್ರಾಮದ ಹುಡುಗನೊಬ್ಬನೊಂದಿಗೆ ಮಿಷೆಲ್ಲೆ, ತನ್ನನ್ನು ತೀವ್ರ ಸ್ನೇಹದಲ್ಲಿ ತೊಡಗಿಸಿಕೊಂಡಾಗ ನಾನು ನನ್ನ ಕರ್ತವ್ಯದಲ್ಲಿ ವಿಫಲಳಾದೆನೇನೋ ಎಂದು ಚಿಂತಿಸಿದೆ. ಆದರೆ, ನಾವು ಏನನ್ನೂ ಮಾಡಲು ಸಾಧ್ಯವಿರಲಿಲ್ಲ.

ಈ ಮಕ್ಕಳೊಡನೆ ನನ್ನನ್ನು ಸಮೀಕರಿಸಿಕೊಳ್ಳುವುದು ನನಗೆ ಕಷ್ಟವಾಗಿತ್ತು. ಏಕೆಂದರೆ, ಅವರ ವಯಸ್ಸಿನಲ್ಲಿ ನಾನಾಗಲೇ ಯೆಹೂದಿ ವಿರೋಧೀ ಭಾವನೆಗಳ ಕಷ್ಟವನ್ನು ಎದುರಿಸುತ್ತಿದ್ದೆ ಮತ್ತು ಹೊಂದಿ ಕೊಳ್ಳುವುದೆಂದರೆ, ಅದೊಂದು ಬೇರೆಯೇ ಸಂಗತಿಯಾಗಿತ್ತು. ತನ್ನ ತಿಳಿವಳಿಕೆಯ ಮಾತುಗಳನ್ನು ಹೇಳಲು ಅಮ್ಮ ಇರಬೇಕಾಗಿತ್ತು ಎನಿಸಿತು ನನಗೆ. ನಾನಿನ್ನೂ ಯುವ ಪ್ರಾಪ್ತ ವಯಸ್ಕಳಾಗುತ್ತಿದ್ದಂತೆಯೇ ಹೇಗೆ ಜವಾಬ್ದಾರಿಯನ್ನು ಹೊತ್ತಿದ್ದೆ ಎಂದು ನೆನಪು ಮಾಡಿಕೊಳ್ಳುವಾಗ ಆಶ್ಚರ್ಯವೆನಿಸುತ್ತೆ. ಆದರೆ, ಈಗ ನನ್ನದೇ ಮಕ್ಕಳಿರುವಾಗ, ತೀವ್ರವಾಗಿ ಅಮ್ಮನ ಅವಶ್ಯಕತೆ

ಕಂಡುಬರುವುದು ವಿಚಿತ್ರವೆನಿಸಿತ್ತು. ನಾನು ಅಪ್ಪನೊಡನೆ ಸಮಾಲೋಚಿಸುವಂತಿರಲಿಲ್ಲ. ಏಕೆಂದರೆ, ಅಮೆರಿಕಾದಲ್ಲಿರುವಾಗ ಅವರು ಮ್ಯಾಂಚೆಸ್ಟರ್‌ನಲ್ಲಿರುವ ವೃದ್ಧರ ವಸತಿ ಗೃಹಕ್ಕೆ ಹೋಗಿಬಿಟ್ಟಿದ್ದರು. ಉದ್ಯೋಗಸ್ಥ ತಾಯಿಯಾಗಿದ್ದುದರಿಂದ, ಮಕ್ಕಳ ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ನನಗೆ ಅಸಾಧ್ಯವಾಗಿತ್ತು. ಅಲ್ಲದೇ, ತಾಯ್ತನದ, ತಾಯಿಯಾಗುವುದರಲ್ಲಿರುವ ಪರೀಕ್ಷೆಗಳು, ಅಪಾರ ಕಷ್ಟ ತೊಂದರೆಗಳ ಬಗೆಗೆ ಚರ್ಚಿಸಲು ನನ್ನ ಸಹೋದ್ಯೋಗಿಗಳನ್ನು ಹೊರತುಪಡಿಸಿ ಬೇರೆ ಯಾವ ಗೆಳತಿಯರೂ ನನಗಿರಲಿಲ್ಲ. ನಾನೂ ತೀರಾ ಒಂಟಿ ಎನಿಸಿತು.

೧೯೭೬ರಲ್ಲಿ, ನಿದ್ರೆ ಮಾಡುತ್ತಿರುವಾಗಲೇ ಅಪ್ಪ ಮರಣ ಹೊಂದಿದರು. ಅವರ ಸಾವಿಗಾಗಿ ನಾನು ಗಾಢವಾಗಿ ದುಃಖಿಸಿದೆ. ಅಮ್ಮ ಮರಣ ಹೊಂದಿದಾಗ ನಾನು ನನ್ನದೇ ಸಂಘರ್ಷಗಳಲ್ಲಿ ಸಿಲುಕಿಹಾಕಿಕೊಂಡಿದ್ದೆ. ಆದರೆ ಈಗ ತಂದೆತಾಯಿ ಇಬ್ಬರೂ ಮರಣ ಹೊಂದಿರುವಾಗ, ನಾನು ಅವರನ್ನು ಎಷ್ಟು ಪ್ರೀತಿಸುತ್ತಿದ್ದೆ ಎನ್ನುವುದು ನನಗೆ ಮನದಟ್ಟಾಯಿತು. ಮತ್ತು ನನ್ನದೇ ಮಕ್ಕಳನ್ನು ಅರಿಯಲು ಪ್ರೀತಿಸಲು, ಅವರು ಇರಬೇಕಾಗಿತ್ತು ಎಂದು ನಾನು ಬಯಸುತ್ತಿದ್ದುದೂ ಅರ್ಥವಾಯಿತು.

* * * *

# ೧೪. "ದುರದೃಷ್ಟದ ಸಮಯ"

ಅಪ್ಪ ಇರದಿರುವ ಜೀವನಕ್ಕೆ ಹೊಂದಿಕೊಳ್ಳುವುದು ನನಗೆ ಕಠಿಣ ಎನಿಸುತ್ತಿತ್ತು. ನಾನು ಬಹಳ ಗಟ್ಟಿ ಮನಸ್ಸಿನ ವ್ಯಕ್ತಿ ಎಂದುಕೊಂಡಿದ್ದೆ. ಹಾಗಾಗಿ ನನ್ನ ಭಾವಾತಿರೇಕತೆ ಮತ್ತು ಸತತ ಕಣ್ಣೀರಿನಿಂದಾಗಿ ನಾನು ಆಶ್ಚರ್ಯಗೊಂಡೆ. ನಮ್ಮ ಜೊತೆಯಲ್ಲಿಯೇ ಇರಲೆಂದು ಇಲ್ಲಿಗೆ ಆಗಮಿಸಿದ ಬಿಲ್‌ನ ತಾಯಿಯಿಂದಾಗಿ, ಇದು ಮತ್ತಷ್ಟು ಅಧಿಕವಾಯಿತು. ಬೆಲ್‌ಫಾಸ್ಟ್ ಈಗ ಸುರಕ್ಷಿತ ಪ್ರದೇಶವಾಗಿರಲಿಲ್ಲ ಮತ್ತು ಅಶಾಂತಿ, ಕ್ಷೋಭೆಗಳೂ ಹೆಚ್ಚುತ್ತಲೇ ಇದ್ದವು. ಕೆಲವು ದಿನಗಳಿಂದಲೂ ಬಿಲ್ ತನ್ನ ತಾಯಿಯ ಬಗೆಗೆ ಚಿಂತಿಸುತ್ತಲೇ ಇದ್ದ. ಆದರೆ, ಕೆಲವು ಪುಂಡಯುವಕರು, ಬಿಲ್‌ನ ತಾಯಿಯ ಮನೆಗೆ ಬಲವಂತವಾಗಿ ನುಗ್ಗಿ, ಅವರನ್ನು ಅಡಿಗೆ ಕೋಣೆಯಲ್ಲಿ ಕೂಡಿಹಾಕಿ, ಮನೆಯನ್ನೆಲ್ಲಾ ಕೊಳ್ಳೆ ಹೊಡೆದುಕೊಂಡು ಹೋದ ನಂತರ, ಅವರೂ ಇಲ್ಲಿಗೇ ಬಂದು ನಮ್ಮ ಜೊತೆಯಲ್ಲಿಯೇ ಇರಬೇಕೆಂದು ನಾವು ನಿರ್ಧರಿಸಿದೆವು. ಅದೃಷ್ಟವಶಾತ್, ನಾವು, ಉಪಯೋಗಿಸದೆ ಇದ್ದ, ಗಟ್ಟಿಯಾಗಿದ್ದ ಒಂದು ಕಟ್ಟಡ ನಮಗೆ ಸೇರಿತ್ತು. ಅದನ್ನು ಅವರಿಗಾಗಿ ಅಜ್ಜಿಯ ಬಂಗಲೆಯಾಗಿ ಪರಿವರ್ತಿಸಿದೆವು. ಅವರು ಅಷ್ಟು ಸಮೀಪದಲ್ಲಿಯೇ ಇರುವುದರ ಬಗೆಗೆ ನನಗೆ ಯಾವುದೇ ಉತ್ಸಾಹವಿರಲಿಲ್ಲ. ಆದರೆ, ಅವರು ಬೆಲ್‌ಫಾಸ್ಟ್‌ನಲ್ಲಿ ವಾಸಿಸುವುದು ಸಾಧ್ಯವಿಲ್ಲವೆಂದು ನನಗೆ ತಿಳಿದಿತ್ತು. ನನ್ನ ಅಪ್ಪನ ಮರಣದ ನಂತರ, ಮಕ್ಕಳಿಗೆ ಉಳಿದಿದ್ದ ಹಿರಿಯರು, ಅಜ್ಜಿ ಅವರೊಬ್ಬರೇ ಆಗಿದ್ದುದರಿಂದ, ಮಕ್ಕಳಿಗೆ ಅಜ್ಜಿಯು ಹತ್ತಿರದಲ್ಲಿಯೇ ಇರುವುದು ಹಿತಕರ ವಾಗಿರುತ್ತದೆಂದು ಯೋಚಿಸಿ ಹರ್ಷಿತಳಾದೆ. ಆದರೆ, ಅವರು ಅಂತಹ ಪ್ರೀತಿರಹಿತ ಅಜ್ಜಿಯಾಗಿರುತ್ತಾರೆಂದು ನಾನು ನಿರೀಕ್ಷಿಸಿರಲಿಲ್ಲ; ಅವರಿಗೆ ತಮ್ಮ ಇಬ್ಬರು ಮೊಮ್ಮಕ್ಕಳಿಗಿಂತಲೂ ತಮ್ಮ ಮೊಗಸಾಲೆಯ ನೆಲದ ಬಗೆಗಿನ ಕಾಳಜಿಯೇ ಹೆಚ್ಚಾಗಿತ್ತು. ಮಿಷೆಲ್ ಮತ್ತು ಡೆಬ್ಬಿ ತಮ್ಮ ಶಾಲೆ ಮುಗಿದ ಕೂಡಲೇ, ಅಜ್ಜಿಯ ಮನೆಯಲ್ಲಿರುವ ಬಣ್ಣದ ದೂರದರ್ಶನವನ್ನು ವೀಕ್ಷಿಸಲು ಧಾವಿಸುತ್ತಿದ್ದರು. ಆದರೆ, ಅಲ್ಲಿ ಅವರಿಗೆ ಪ್ರೀತಿಯ ಸ್ವಾಗತವಿರಲಿಲ್ಲವೆಂಬುದನ್ನು ಬೇಗ ಅರಿತರು. ಬಿಲ್‌ನ ತಾಯಿಗೆ ಒಂದು ರೀತಿಯಲ್ಲಿ ಸ್ವಚ್ಛತೆಯ ಗೀಳು ಹಿಡಿದಿತ್ತು ಮತ್ತು ಮಕ್ಕಳು ತನ್ನ ಮನೆಯಲ್ಲಿ ಇರುವುದರ ಬಗೆಗೆ ಯಾರಿಗೂ ಅನುಮಾನ ಬರದಂತೆ ತಮ್ಮ ಅಭಿಪ್ರಾಯ ತಿಳಿಸಿದ್ದರು. ಇದನ್ನು ಅರ್ಥಮಾಡಿಕೊಂಡ ಡೆಬ್ಬಿ ಒಂದು ಬಾರಿ ನನಗೆ ಹೇಳಿದಳು.

"ಅಪ್ಪ ಏಕೆ ಇನ್ನೂ ಎತ್ತರ ಬೆಳೆಯಲಿಲ್ಲವೆಂದು ನನಗೆ ತಿಳಿದಿದೆ. ಅಪ್ಪ ಸಣ್ಣ ಹುಡುಗನಿದ್ದಾಗ ಅಜ್ಜಿ ಅವರಿಗೆ ತೀರಾ ಹೆಚ್ಚಾಗಿ ಸ್ನಾನ ಮಾಡಿಸಿದರು."

ಅಜ್ಜಿಯು ಚತುರ ಹಾಗೂ ಸೂಕ್ಷ್ಮಬುದ್ಧಿಯ ಮಹಿಳೆಯಾಗಿದ್ದರು; ತಾವು ಈಗ ನನ್ನನ್ನು ಅವಲಂಬಿಸಿರಬೇಕಾಗಿದೆಯೆನ್ನುವುದನ್ನು ಬೇಗ ಅರಿತರು. ನನ್ನ ಜೊತೆ ಅತ್ಯಂತ ಹಿತಕರವಾಗಿ ನಡೆದುಕೊಳ್ಳತೊಡಗಿದರು ಮತ್ತು ಯಾರಾದರೂ ನನ್ನ ಸ್ನೇಹಿತರನ್ನು ಭೇಟಿಯಾದಾಗಲೆಲ್ಲಾ, ನನ್ನನ್ನು ಭೇಟಿಯಾದ ಕ್ಷಣದಿಂದಲೂ ಅವರು ನನ್ನನ್ನು ಇಷ್ಟಪಡುತ್ತಿದ್ದರೆಂದು ಯಾವಾಗಲೂ ಹೇಳುತ್ತಿದ್ದರು. ಜೊತೆಗೆ, ಅವರು ಹೇಗೆ ನನ್ನನ್ನು ತಮ್ಮ ಸೋದರಿಯರಲ್ಲಿ ಒಬ್ಬರೆಂದು ಪರಿಗಣಿಸಿದ್ದಾರೆಂದು ಕೂಡ ಹೇಳತೊಡಗಿದರು. ನಾನು ಅವರನ್ನು ನಂಬಬೇಕು ಎಂದುಕೊಂಡೆ. ಆದರೆ, ಅವರು ಸುಮ್ಮನೆ ನನಗೆ ಕಿರುಕುಳ ನೀಡಲು ಪ್ರಯತ್ನಿಸುತ್ತಿದ್ದಾರೆ ಎಂದು ನಾನು ಯೋಚಿಸದೆ ಇರಲಾರದಾದೆ. ಅವರು ನನ್ನ ಜೊತೆಯಲ್ಲಿ ಹೇಗೆ ವರ್ತಿಸಿದ್ದರು ಎಂಬುದರ ಸತ್ಯವಾದ ವರದಿಯನ್ನೇನಾದರೂ ಅವರ ಎದುರು ಇಟ್ಟಿದ್ದುದಾದರೆ, ಅವರು ನನ್ನನ್ನು ಸುಳ್ಳುಗಾರ್ತಿ ಎಂದೇ ಕರೆಯುತ್ತಿದ್ದರೆಂದು ನಾನು ಅನೇಕ ಬಾರಿ ಯೋಚಿಸಿದ್ದೇನೆ. ಹೇಗೇ ಆದರೂ, ಹೆಚ್ಚು ಕಡಿಮೆ ಶಾಂತವಾಗಿರುವ ಯಥಾಸ್ಥಿತಿಯನ್ನು ಕೆಡಿಸಿಕೊಳ್ಳಲು ಇಷ್ಟಪಡಲಿಲ್ಲ. ಆದ್ದರಿಂದ, ಅವರು ಮರಣ ಹೊಂದುವ ತನಕವೂ ಈ ತೋರಿಕೆಯ ಬಾಂಧವ್ಯವನ್ನೇ ಮುಂದುವರೆಸಿದೆ. ಅವರ ಬಗೆಗೆ ನನ್ನ ನಿಜವಾದ ಭಾವನೆಗಳೇನಿದ್ದವೆಂಬುದು ಅವರಿಗೆ ಎಂದೂ ಗೊತ್ತಾಗಲಿಲ್ಲ.

ಅದೇ ಸಮಯದಲ್ಲಿ ನಾನು ಅಪ್ಪನ ಮರಣ ಮತ್ತು ಎಥೆಲ್‌ರ ಆಗಮನ (ಬಿಲ್‌ನ ತಾಯಿ) ಎರಡಕ್ಕೂ ಹೊಂದಿಕೊಳ್ಳುತ್ತಿರುವಾಗ, ನನ್ನ ಮಿಶ್ರ-ಸಾಂಸ್ಕೃತಿಕ ಪ್ರಾಯೋಜಿತ ಕಾರ್ಯದ ಮುಂದಿನ ಹಂತದ ಬಗೆಗೆ ಯೋಜನೆಯನ್ನು ರೂಪಿಸುತ್ತಿದ್ದೆ. ಈ ಬಾರಿ ಅದು, ಏಷ್ಯಾದ ಗ್ರಾಮೀಣ ಅಭಿವೃದ್ಧಿಯಲ್ಲಿ, ಗ್ರಾಮೀಣ ಮಹಿಳೆಯರ ಪಾತ್ರ ಎಂಬ ನಾಲ್ಕು ವರ್ಷಗಳ ಅಧ್ಯಯನವಾಗಿತ್ತು. ನಾನು ಅದನ್ನು ACT/WOM ಎಂಬ ಹೆಸರಿನಿಂದ ಕರೆದೆ. ಕಡೆಯ ಪಕ್ಷ ಐದು ಏಷಿಯಾದ ರಾಷ್ಟ್ರಗಳಿಂದ ಹತ್ತು ಜನ ವಿದ್ಯಾರ್ಥಿಗಳನ್ನು ನೇಮಿಸಿಕೊಳ್ಳಬೇಕು ಎನ್ನುವ ಗುರಿ ಹೊಂದಿದೆ ಹಾಗೂ ನಾನು ಮತ್ತೆ ಪ್ರಮುಖವಾದ ಫಲಿತಾಂಶಗಳನ್ನು ಸೃಷ್ಟಿಸುತ್ತೇನೆ ಎಂಬ ಭರವಸೆಯನ್ನು ಹೊಂದಿದ್ದೆ. ಆದರೆ, ನನ್ನ ಈ ಪ್ರಸ್ತಾಪವನ್ನು IDS ಸಂಶೋಧನಾ ಸಮಿತಿಯ ಮುಂದೆ ಮಂಡಿಸಿದಾಗ, ಅನೇಕ ಜನ ನನ್ನ ಸಹೋದ್ಯೋಗಿಗಳು, ನಾನು ಅತ್ಯಂತ ದೊಡ್ಡದಾದ ಸಂಶೋಧನಾ ಸಾಹಸವನ್ನು ಕೈಗೊಳ್ಳುತ್ತಿರುವೆನು ಎಂದು ಪರಿಗಣಿಸಿದುದು ಕಂಡುಬಂದಿತು. ಜೊತೆಗೆ, ಡಾಕ್ಟರೇಟ್ ಪದವಿ ಪಡೆಯುತ್ತಿರುವ, ಏಷಿಯಾದ ಯುವ ವಿದ್ಯಾರ್ಥಿನಿಯರು ನನಗೆ ದೊರಕುವ

ಬಗೆಗೆ ಕೂಡ ಅವರು ತೀವ್ರವಾದ ಅನುಮಾನ ಹೊಂದಿದ್ದರು. ಅದೂ, ತಮ್ಮದೇ ವೆಚ್ಚದಲ್ಲಿ ದೀರ್ಘಕಾಲ ಗ್ರಾಮಗಳಲ್ಲಿ ವಾಸವಿರಲು ಸಿದ್ಧವಿದ್ದು ಪ್ರಮುಖವಾದ ಮೂಲ ಕ್ಷೇತ್ರ ಮಾಹಿತಿಯನ್ನು ಸಂಗ್ರಹಿಸುವಂತಹ ಡಾಕ್ಟರೇಟ್ ವಿದ್ಯಾರ್ಥಿನಿಯರು! ಅವರ ಸಂಸ್ಥೆಗೆ ನಾನು ತಂದುಕೊಡುತ್ತಿದ್ದ ಕೀರ್ತಿಯನ್ನು, ಹಣವನ್ನು, ಪರಿಗಣಿಸಿ ಅವರು ಸಂತುಷ್ಟರಾಗುತ್ತಾರೆಂದುಕೊಂಡಿದ್ದೆ. ಆದರೆ, ನನಗೆ ಒಂದು ರೀತಿಯ ಆಘಾತವಾಯಿತು. ಆ ಕೋಣೆಯಿಂದ ಹೊರಕ್ಕೆ ಬಂದಾಗ ನಾನು ಕೋಪಾವೇಶ ದಲ್ಲಿದ್ದೆ ಮತ್ತು ಹೇಗಾದರೂ ಮಾಡಿ ಕಾರ್ಯಯೋಜನೆಯನ್ನು ನೆಲದಿಂದ ಮೇಲಕ್ಕೆತ್ತಬೇಕೆಂದು ಮನಸ್ಸಿನಲ್ಲಿ ದೃಢನಿಶ್ಚಯ ಮಾಡಿದೆ.

ಆರ್ಥಿಕ ನೆರವಿನ ಅರ್ಜಿಗಳನ್ನು ಪೂರ್ಣಗೊಳಿಸುವ ಸುದೀರ್ಘ ಪ್ರಕ್ರಿಯೆಯನ್ನು ನಾನು ಆರಂಭಿಸಿದೆ ಮತ್ತು ದಾನ ನೀಡುವ ವಿಭಿನ್ನ ಸಂಸ್ಥೆಗಳಿಗೆ ಅವುಗಳನ್ನು ಕಳಿಸಿದೆ ಮತ್ತು ಈ ಪ್ರಾಯೋಜಿತ ಕಾರ್ಯಕ್ಕೆ, ಅದನ್ನು ಒಟ್ಟಾಗಿ ಪರಿಗಣಿಸಿ, ಆರ್ಥಿಕ ನೆರವು ನೀಡಲು ಬದ್ಧರಾಗಿರುವುದಕ್ಕಿಂತಲೂ, ಯಾವುದಾದರೂ ಒಂದೇ ಒಂದು ರಾಷ್ಟ್ರದ ಅಧ್ಯಯನಕ್ಕೆ ನೆರವು ನೀಡುವುದನ್ನು ಪರಿಗಣಿಸುವಂತೆ ಕೂಡ ಸೂಚಿಸಿದೆ. U.S.ನ ಮಿಲಿಯನ್ ಡಾಲರ್ಸ್‌ನ ನೆರವು ನೀಡುವುದಕ್ಕಿಂತಲೂ, ಈ ಸಂಸ್ಥೆಗಳು ಸುಮಾರು ೨೦೦,೦೦೦ದ ತನಕ ಆರ್ಥಿಕ ನೆರವು ಒದಗಿಸ ಬಹುದೆಂದು ನಾನು ಲೆಕ್ಕ ಹಾಕಿದ್ದೆ. ನಾನು ಹಣ ಪಡೆಯುವ ಅವಕಾಶಗಳ ಬಗೆಗೆ ನನ್ನ ಸಹೋದ್ಯೋಗಿಗಳು ಕಟುವಾಗಿ ಟೀಕಿಸುತ್ತಿದ್ದರು. ಪ್ರತಿದಿನ ಟಪಾಲನ್ನು ತೆರೆಯುವ ಮುನ್ನ ನಾನು ಹೆಚ್ಚು ಹೆಚ್ಚು ಆತಂಕಗೊಳ್ಳತೊಡಗಿದೆ. ನಿರಾಕರಣದ ನಂತರ ನಿರಾಕರಣದ ಪತ್ರಗಳನ್ನು ನಾನು ಪಡೆದಂತೆಲ್ಲಾ ಅವರು ವಿಜಯೋತ್ಸಾಹ ದಿಂದ ವೀಕ್ಷಿಸುತ್ತಿದ್ದರು. ಆದರೆ, ನಾನು ಬಿಟ್ಟುಬಿಡಲು ನಿರಾಕರಿಸದೆ, ಅವರಿಗೆಲ್ಲಾ ಯಶಸ್ವಿಯಾಗಿ ತೋರಿಸುವೆನೆಂದು ನಿಶ್ಚಯಿಸಿದೆ.

ಒಮ್ಮೆ, ಅಲ್ಪಾವಧಿಯ ಭೇಟಿಗಾಗಿ ವಾಷಿಂಗ್‌ಟನ್ DCಗೆ ಹೋಗಿದ್ದಾಗ ಅಲ್ಲಿ ಉನ್ನತ ದರ್ಜೆಯ US ನೆರವು ನೀಡುವ ಅಧಿಕಾರಿಯೊಬ್ಬರು ಅದೃಷ್ಟವಶಾತ್ ನನಗೆ ಭೇಟಿಯಾದರು. ನನ್ನ ಪ್ರಸ್ತಾಪಗಳು, ಇತ್ತೀಚೆಗೆ ನಾನು ಪಡೆದ ನಿರಾಕರಣಗಳ ಬಗೆಗೆ ನಾವು ಮಾತನಾಡತೊಡಗಿದೆವು. ಆಗ ತನ್ನ ಕಣ್ಣುಗಳನ್ನು ಮಿನುಗಿಸುತ್ತಾ ವ್ಯಾಪಾರದ ರಹಸ್ಯವನ್ನು ನನಗೆ ತಿಳಿಸಿಕೊಡುವುದಾಗಿ ಆಕೆ ಹೇಳಿದರು. ಮರುದಿನ ಅವರು ವರ್ಲ್ಡ್ ಬ್ಯಾಂಕ್ ಕೆಫಟೇರಿಯಾದಲ್ಲಿ ನನ್ನನ್ನು ಭೇಟಿ ಮಾಡಿದರು. ನಾನು ನನ್ನ ಅರ್ಜಿಗಳನ್ನು ಅವರಿಗೆ ತೋರಿಸಿದೆ. ಅವರು ನಕ್ಕುಬಿಟ್ಟರು ಮತ್ತು ತಕ್ಷಣವೇ, 'ನೀವು ಮೊದಲ ಬಲೆಗೆ ಬಿದ್ದಿದ್ದೀರಿ' ಎಂದು ಹೇಳಿದರು. ನಾನು ಯಾವುದರ ಬಗೆಗೆ ಮಾತನಾಡುತ್ತಿದ್ದೇನೆ ಎಂದು ನಿಜವಾಗಿ ತಿಳಿದುಕೊಂಡವರು ನನ್ನ ಈ ಅರ್ಜಿಗಳನ್ನು ಓದುತ್ತಾರೆ ಎಂದೇ ಭಾವಿಸಿದ್ದೆ. ಶಿಕ್ಷಣಕ್ಕೆ ಸಂಬಂಧಿಸಿದ ಬಹುತೇಕ

ಪಾಂಡಿತ್ಯಪೂರ್ಣ, ಅರ್ಥಿಕ ನೆರವಿಗಾಗಿ ಸಲ್ಲಿಸುವ ಅರ್ಜಿಗಳು ತೀರಾ ಬೇಸರ ಬರಿಸುವಷ್ಟು ದೀರ್ಘವಾಗಿರುತ್ತವೆಂದೂ ಮತ್ತು ಬಹಳ ಸೈದ್ಧಾಂತಿಕವಾಗಿ ರುತ್ತವೆಂದೂ ಮತ್ತು ಅವುಗಳನ್ನು ಓದುವವರು ಆಡಳಿತಾಧಿಕಾರರಾಗಿರುತ್ತಾರೆ, ವಿದ್ವಾಂಸರಲ್ಲವೆಂದೂ ಅವರು ನನಗೆ ವಿವರಿಸಿದರು. ಅಲ್ಲದೆ, ಇಂತಹ ಅರ್ಜಿಗಳನ್ನು ಪರಿಶೀಲಿಸುತ್ತಿರುವವರಿಂದ ಬಂದಿರಬಹುದಾದ, ನಗೆಯುಕ್ಕಿಸು ವಂತಹ ಟೀಕೆಗಳನ್ನೂ ಅವರು ನನಗೆ ಹೇಳತೊಡಗಿದರು ಮತ್ತು ಇಂತಹ ಯೋಜನೆಗಳನ್ನು, ಪ್ರಸ್ತಾಪಗಳನ್ನು ಹೇಗೆ ಸಿದ್ಧಪಡಿಸಬೇಕೆಂಬುದನ್ನು ಆಕೆ ನನಗೆ ಕಲಿಸತೊಡಗಿದರು ಮತ್ತು ಇದರಿಂದಾಗಿ ಈ ಪ್ರಸ್ತಾಪಗಳು ಅನುಕೂಲಕರವಾಗಿ ಸ್ವೀಕೃತವಾಗುವ ಅವಕಾಶಗಳು ಹೆಚ್ಚಾಗುವುವು ಎಂದು ತಿಳಿಸಿದರು. ಮಧ್ಯಾಹ್ನ ತಡವಾಗಿ ಪರಸ್ಪರ ಬೀಳ್ಕೊಡುವ ವೇಳೆಗೆ, ನಾನು ನನ್ನ ಕಾರ್ಯ ಯೋಜನೆಯ ಪರಿಷ್ಕೃತ ಕರಡಿನೊಂದಿಗೆ ಹೊರಬಂದೆ. ಅದು ಮೊದಲಿನ ಕರಡು ಪ್ರತಿಗಿಂತಲೂ ಹೆಚ್ಚು ಹ್ರಸ್ವವಾಗಿಯೂ ಮತ್ತು ವಿಷಯಕ್ಕೆ ಸೀಮಿತವಾಗಿಯೂ ಇತ್ತು. ಆಕೆಗೆ ಅನೇಕ ವಂದನೆಗಳನ್ನರ್ಪಿಸಿ, ಆಶಾವಾದಿಯಾಗಿ ಮನೆಗೆ ಬಂದೆ.

ನಾನು ಎರಡನೆಯ ಸುತ್ತಿನ ಅರ್ಜಿಗಳನ್ನು ಕಳಿಸಿದೆ ಮತ್ತು ಕೆಲವೇ ವಾರಗಳಲ್ಲಿ ಶ್ರೀಲಂಕಾದ ACT/WOM ಘಟಕಕ್ಕಾಗಿ ಮೊದಲ ಕೊಡುಗೆಯಾಗಿ ನಾನು $೨೦೦,೨೦೦ ಪಡೆದಿದ್ದೆ. ನಾನು ಆನಂದಪರವಶಳಾಗಿದ್ದೆ ಮತ್ತು ಉಳಿದ $೮೦೦,೦೦ನ್ನೂ ಸಹ ಕೂಡಿಸಲು ಸಾಧ್ಯವಾಗುತ್ತದೆ ಎಂಬ ಭರವಸೆ ತಳೆದೆ. ಹಣ ಸಂಗ್ರಹಿಸುವ ನನ್ನ ಈ ಚಟುವಟಿಕೆಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡು ಅದರಲ್ಲಿಯೇ ಮುಳುಗಿಹೋದೆ ಹಾಗೂ ನನ್ನ ಸಹೋದ್ಯೋಗಿಗಳಿಗೂ ನನಗೂ ನಡುವೆ ಬೆಳೆಯುತ್ತಿದ್ದ ದೂರವನ್ನು ನಾನು ಗಮನಿಸಲೇ ಇಲ್ಲ. ಆದ್ದರಿಂದ ಒಂದು ದಿನ ಬೆಳಿಗ್ಗೆ ಉಪಕುಲಪತಿಗಳ ಕೋಣೆಗೆ ಬರಬೇಕೆಂಬ ಕರೆ ಬಂದಾಗ ನಾನು ಆಶ್ಚರ್ಯಚಕಿತಳಾದೆ. ನಾನು ಆಗ ಯಾವುದೋ ಹಾಡನ್ನು ಗುನುಗುತ್ತಿದ್ದುದು ನನಗಿನ್ನೂ ನೆನಪಿದೆ. ಮತ್ತು ನಾನು ನಿರ್ವಹಿಸುತ್ತಿದ್ದ ಹಣ ಸಂಗ್ರಹದ, ಲೆಕ್ಕವನ್ನು ಆದ್ಯತನಗೊಳಿಸಿ– ಎಲ್ಲಿ ಎಲ್ಲಿ ಸಂಗ್ರಹಿಸುತ್ತಿದ್ದೆನೆಂಬುದನ್ನು ಒಟ್ಟು ಮಾಡಿದ್ದೆ. ಆದರೆ, ಅವರಿಗೆ ಇದನ್ನೆಲ್ಲಾ ಹೇಳುವ ಅವಕಾಶವೇ ನನಗೆ ಬರಲಿಲ್ಲ. ಏಕೆಂದರೆ ನಾನು ಕುಳಿತುಕೊಂಡ ಕೂಡಲೇ ಅವರು ಖಂಡಿತವಾಗಿಯೂ ತಾವು ಅಭ್ಯಸಿಸಿದ್ದ ಭಾಷಣವನ್ನು ಆರಂಭಿಸಿದರು. ಐದು ವರ್ಷಗಳ ನನ್ನ ಕರಾರನ್ನು ಇತ್ತೀಚೆಗೆ ಮರುಪರಿಶೀಲನೆ ಮಾಡಿರುವುದಾಗಿಯೂ, ಮುಂಬರುವ ವರ್ಷದಲ್ಲಿ ಅದು ಮುಗಿಯಲಿರುವುದರಿಂದಾಗಿ, ಈ ಕರಾರು ಇನ್ನೂ ಮೂರು ವರ್ಷಗಳವರೆಗೆ ಮಾತ್ರ ವಿಸ್ತರಿಸಲ್ಪಡುವುದೆಂದೂ ನಿರ್ಧರಿಸಲಾಗಿದೆಯೆಂದು ಹೇಳಿದರು. ಅಲ್ಲದೆ, ನನ್ನ ಪ್ರಕಟಣಾ ದಾಖಲೆಯು ನಿರೀಕ್ಷಿತ ಮಟ್ಟಕ್ಕಿಂತಲೂ ಕಡಿಮೆಯಿರುವುದಾಗಿ

ಸಮಿತಿಯು ಭಾವಿಸಿದೆ ಎಂದೂ ತಿಳಿಸಿದರು. ವ್ಯಂಗ್ಯದ ಒಂದು ಸಣ್ಣ ಅಣಕದೊಡನೆ ಅವರು ಹೇಳಿದರು: ನಾನೇನಾದರೂ ಒಂದು ಹಸ್ತಪ್ರತಿಯನ್ನು ನನ್ನ ಮೇಜಿನ ತಳದಲ್ಲಿನ ಸೆಳೆಖಾನೆಯಲ್ಲಿ ಏನಾದರೂ ಮುಚ್ಚಿಟ್ಟಿರುವುದಾದರೆ ಸಮಿತಿಯು ತನ್ನ ನಿರ್ಧಾರವನ್ನು ಮರುಪರಿಶೀಲಿಸಲೇ ಬೇಕಾಗುವುದೆಂದೂ ಹೇಳಿದರು.

ಮೊದಲು, ಅವರು ತಮಾಷೆ ಮಾಡುತ್ತಿದ್ದಾರೆ ಎಂದುಕೊಂಡೆ ನಾನು. ಆದರೆ, ಅವರ ಉಕ್ಕಿನಂತಹ ಕಣ್ಣುಗಳ ಕಡೆಗೆ ನೋಡಿದಾಗ ಅವರು ತೀರಾ ಗಂಭೀರವಾಗಿದ್ದರು ಎನ್ನುವುದು ನನಗೆ ತಿಳಿಯಿತು. ನನ್ನ ಧ್ವನಿಯಲ್ಲಿದ್ದ ನಡುಕವನ್ನು ಸ್ಥಿರಗೊಳಿಸುತ್ತಾ ನಾನು ವಿನಯಪೂರ್ವಕವಾಗಿ ಉತ್ತರಿಸಿದೆ. ಮೇಜಿನ ಕೆಳಭಾಗದ ಸೆಳೆಖಾನೆಯನ್ನು ಹೊಂದುವಷ್ಟು ಅದೃಷ್ಟಶಾಲಿ ನಾನು ಎಂದೂ ಆಗಿರಲಿಲ್ಲವಾಗಿ, ನಿಮಗೆ ಕೊಡಲು ನಾನು ಮುಚ್ಚಿಟ್ಟುಕೊಂಡಿರುವಂತಹ ಹಸ್ತಪ್ರತಿ ಯಾವುದೂ ನನ್ನಲ್ಲಿ ಇಲ್ಲ. ಇಷ್ಟು ಹೇಳಿದ ನಂತರ IDS ನೇಮಕಾತಿ ಛೇರ್ಮನ್ನರ ಸಂದೇಶವನ್ನು ತಿಳಿಸಿದುದಕ್ಕಾಗಿ ನಾನು ಅವರಿಗೆ ವಂದನೆಗಳನ್ನು ಹೇಳಿದೆ ಮತ್ತು ಈ ಸಂದೇಶವನ್ನು ಛೇರ್ಮನ್ನರು ತಾವೇ ಏಕೆ ತಿಳಿಸಲಿಲ್ಲವೆಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗಿದೆ ಎಂದೂ ಟೀಕಿಸಿದೆ. ಕಡೆಯ ವಿಧಾನ ಎಂಬಂತೆ ನಾನು ಹೇಳಿದೆ: ಪ್ರಾಯಶಃ ನಾನು ನನ್ನ ವಿದ್ಯಾರ್ಥಿಗಳ ಸಾಧನೆಯನ್ನು, ನನ್ನ ಸಾಧನೆಗಳಿಗಿಂತಲೂ ಹೆಚ್ಚಾಗಿ ಬಿಂಬಿಸುತ್ತೇನೆಂದು, ನನ್ನ ಸಹೋದ್ಯೋಗಿಗಳು ಆಕ್ಷೇಪಿಸಿದ್ದರೆಂದು ನಾನು ಊಹಿಸುತ್ತೇನೆ. ತೃತೀಯ ಪ್ರಪಂಚದ ತಮ್ಮ ಸಂಶೋಧನಾ ಸಹಾಯಕರ ಕೊಡುಗೆಯನ್ನು ಕೇವಲ ಅಡಿಟಿಪ್ಪಣಿಗಳಲ್ಲಿ ಮಾತ್ರ ಗುರುತಿಸುವ ನನ್ನ ಅನೇಕ IDS ಸಹೋದ್ಯೋಗಿಗಳಂತಲ್ಲದೆ, ನಾನು ಅವರ ಪ್ರಬಂಧಗಳನ್ನು, ನನ್ನ ಹೆಸರಿನಲ್ಲಿ ನನ್ನದೇ ಎಂದು ಹೇಳಿಕೊಳ್ಳುವ ಬದಲಿಗೆ, ಆ ಸಹಾಯಕರ ಹೆಸರಿನಲ್ಲಿಯೇ ಪ್ರಕಟಿಸುವ ಆಯ್ಕೆ ಮಾಡಿಕೊಂಡಿದ್ದೆ. ಹೊರಡಲು ನಾನು ಎದ್ದು ನಿಂತವಳು, ಕುಲಪತಿಗಳತ್ತ ತಿರುಗಿಕೊಂಡು ಸಲಹೆ ನೀಡಿದೆ. ನಾನು ನಾಲ್ಕು ವರ್ಷಗಳ ಪ್ರಾಯೋಜಿತ ಕಾರ್ಯಕ್ರಮವನ್ನು ಆರಂಭಿಸಲು ಯೋಚಿಸಿರುವಾಗ, ಅವರು ಕೇವಲ ಮೂರು ವರ್ಷಗಳ ಅವಧಿಗೆ ಮಾತ್ರ ಅನುಮತಿ ನೀಡಿರುವುದ ರಿಂದಾಗಿ, ನಂತರ ಆ ದಿನ ನನ್ನ ರಾಜೀನಾಮೆ ಪತ್ರವನ್ನು ಪಡೆಯುವರೆಂದು.

ನಾನು ದೃಢವಾಗಿ ಬಾಗಿಲು ಮುಚ್ಚಿದೆ ಮತ್ತು ನುಗ್ಗಿಬರುತ್ತಿದ್ದ ಅಳುವನ್ನು ನುಂಗಿಕೊಂಡೆ. ಬೇರೆಯವರು ನಾನು ಅಳುವುದನ್ನು ನೋಡಬಾರದು ಎಂದು ದೃಢಮಾಡಿಕೊಂಡೆ. ಆದರೆ, ನನ್ನ ಕಣ್ಣೀರನ್ನು ಹಿಂದಕ್ಕೆ ತಳ್ಳಲು ಪ್ರಯತ್ನಿಸಿದುದರಿಂದ ನನ್ನ ಗಂಟಲು ನೋವಾಯಿತು. ನಾನು ಈಗ ಇರುವ ಸ್ಥಾನವನ್ನು ತಲುಪಲು ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದೆ. ಆದರೆ, ಈ ಅರ್ಧಗಂಟೆಯು ಅದನ್ನೆಲ್ಲಾ ಸಂಪೂರ್ಣವಾಗಿ ಅಳಿಸಿಹಾಕಿಬಿಟ್ಟಿತೆಂದು ಭಾವಿಸಿದೆ. ನನ್ನ ಈ ಬೇಸರದಲ್ಲಿ, ನಾನು

ಮತ್ತೆ ಕೇವಲ ಯಂತ್ರಗಳನ್ನು ನಡೆಸುವುದೋ ಅಥವಾ ಒಬ್ಬ ಗುಮಾಸ್ತಳೋ ಆಗುವ ದೃಶ್ಯಗಳನ್ನು ಕಲ್ಪಿಸಿಕೊಂಡೆ. ಮನಸ್ಸಿಲ್ಲದೆಯೇ ನಾನು ಬಿಲ್‌ನ ಆಫೀಸಿನ ಮಾರ್ಗದಲ್ಲಿ ನಡೆದೆ. ಅವನ ಸಾಂತ್ವನ ನನಗೆ ತೀರಾ ಅಗತ್ಯವಾಗಿತ್ತು. ಆದರೆ, ನನ್ನ ಕಾರ್ಯಸಾಮರ್ಥ್ಯವು, ಪ್ರೊಫೆಸರರ ಮಟ್ಟಕ್ಕಿಂತ ಕಡಿಮೆಯಾಗಿತ್ತು ಎಂದು ನನಗೆ ಹೇಳಿದುದರ ಬಗೆಗೆ ನಾಚಿಗೆಗೊಂಡಿದ್ದೆ. ಬಿಲ್‌ನ ಕಾರ್ಯಕ್ಕೆ ಒಳ್ಳೆಯ ಸ್ವಾಗತ ಸಿಕ್ಕಿತ್ತೆಂದೂ, ಅವನ ವೃತ್ತಿಜೀವನವು ಸಾಮರ್ಥ್ಯದಿಂದ ಸಾಮರ್ಥ್ಯಕ್ಕೆ ಮುಂದುವರೆಯುತ್ತಿತ್ತೆಂದೂ, ನನಗೆ ತಿಳಿದಿತ್ತು ಮತ್ತು ಅವನೊಡನೆ ತುಲನೆ ಮಾಡಿದಾಗ ನನಗೆ ನಾನು ವಿಫಲಳಾಗಿದ್ದೇನೆನಿಸಿತು.

ನಾನು ಬೇಗನೇ ಬಿಲ್‌ನ ಬಾಗಿಲ ಹೊರಗೆ ನಿಂತಿದ್ದೆ. ಅವನು ಒಬ್ಬನೇ ಇರುವುದನ್ನು ಕಂಡು ನನಗೆ ಸಂತೋಷವಾಗಿತ್ತು ಮತ್ತು ನಾನು ಕೋಣೆಯೊಳಕ್ಕೆ ಪ್ರವೇಶಿಸುತ್ತಿದ್ದಂತೆಯೇ ಅವನು ಒಂದು ಬಾರಿ ನನ್ನ ಕಡೆ ನೋಡಿದ ಮತ್ತು ಕೇಳಿದ: “ಏನಾಯಿತು ಪ್ರಿಯೆ, ಒಳ್ಳೆ ಸಿಡಿಲು ಬಡಿದವಳಂತೆ ಕಾಣಿಸುತ್ತಿದ್ದೀಯಲ್ಲಾ!” ಏನಾಯಿತು ಎಂಬುದನ್ನು ತಕ್ಷಣವೇ ಹೇಳುತ್ತಾ ನಾನು ಸ್ಫೋಟಿಸಿದೆ. ಅಂತಿಮವಾಗಿ ನಾನು ಅನುಭವಿಸಿದ್ದ ನೋವು ಅವಮಾನಗಳಿಗೆ ಅಭಿವ್ಯಕ್ತಿ ನೀಡಿ, ನನ್ನ ಮನಸ್ಸಿನ ನೋವನ್ನು ಹೊರಹಾಕಿದೆ. ಅವನು ತನ್ನ ಸಹಜವಾದ ಮೃದುವಾದ ರೀತಿಯಲ್ಲಿ, ನನ್ನನ್ನು ತನ್ನ ತೋಳುಗಳಲ್ಲಿ ಹುದುಗಿಸಿಕೊಂಡ ಮತ್ತು ನನ್ನ ದುಃಖವನ್ನು ಕಡಿಮೆ ಮಾಡಲು ಪ್ರಯತ್ನಿಸಿದ– ಡೆಬ್ಬಿ ಅತವಾ ಮಿಷೆಲ್ಲೆ ತಮ್ಮ ಅಮೂಲ್ಯವಾದ ಆಟಿಕೆಗಳನ್ನು ಕಳೆದುಕೊಂಡು ದುಃಖಪಡುತ್ತಿದ್ದಾಗ ಅವರನ್ನು ಸಂತೈಸುವಷ್ಟೇ ತಾಳ್ಮೆ ಮತ್ತು ಪ್ರೀತಿಯಿಂದ ನನ್ನನ್ನು ಸಂತೈಸಿದ. ನನ್ನ ವೃತ್ತಿಜೀವನದ ಸಮಾಪ್ತಿಯಾಯಿತೆಂದೂ, ಮತ್ತು IDS ನಿರ್ದೇಶಕರು ತಮ್ಮ ಆ ಮೂರು ವರ್ಷದ ಒಪ್ಪಂದದೊಂದಿಗೆ ಏನು ಮಾಡುವರೆಂದು ಕೇಳುವೆನೆಂದೂ, ನಾನು ಪುನರುಚ್ಚರಿಸುತ್ತಲೇ ಇದ್ದೆ.

ಆಗ ಬಿಲ್ ನನಗೆ ಕುಳಿತುಕೊಳ್ಳುವಂತೆ ಹೇಳಿದ ಮತ್ತು ಪರಿಸ್ಥಿತಿಯನ್ನು ಎಚ್ಚರದಿಂದ ಪರಿಶೀಲಿಸತೊಡಗಿದ. ನಾನು ಈಗಾಗಲೇ $೨೦೦,೦೦೦ ಹಣವನ್ನು ನನ್ನ ಮಹಿಳಾ ಕಾರ್ಯ ಯೋಜನೆಗೆ ಪಡೆದಿದ್ದುದರಿಂದ, ನನ್ನ ನಿಧಿ ಸಂಗ್ರಹಿಸುವ ಸಾಮರ್ಥ್ಯದಿಂದಾಗಿ, ಹಲವಾರು ಅಕೆಡೆಮಿಕ್ ಸಂಸ್ಥೆಗಳು, ನನ್ನಂತಹವರನ್ನು ಸ್ವಾಗತಿಸುವುವು ಎನ್ನುವುದರ ಬಗೆಗೆ ಬಿಲ್ ಖಚಿತ ಅಭಿಪ್ರಾಯ ತಳೆದಿದ್ದ. ಅವನು ಕೆಲಸ ಮಾಡುತ್ತಿದ್ದ ಆಫ್ರಿಕಾ ಮತ್ತು ಏಷಿಯಾ ಅಧ್ಯಯನಗಳ ಸ್ಕೂಲ್ A7 RAS ನನಗೆ ಸಂಶೋಧನಾ ಪ್ರೊಫೆಸರ್ ಹುದ್ದೆಯನ್ನು ಕೊಡಬಹುದೆಂದೂ ಆದರೆ ನಾನು ಕೂಡಿಸಿದ್ದ ನಿಧಿ ಸಂಗ್ರಹವನ್ನು IDSನಿಂದ A7 RASಗೆ ವರ್ಗಾಯಿಸಲು ಸಾಧ್ಯವಾದರೆ, ಇದು ಸಾಧ್ಯವಾಗಬಹುದು ಎಂದು ಹೇಳಿದ ಬಿಲ್, ಇದು ತಕ್ಷಣವೇ

ನನ್ನ ಮನಸ್ಸಿಗೆ ಹಿಡಿಯಿತು ಎಂದು ಮುಂದಿನ ಕೆಲವು ದಿನಗಳು, ಎಲ್ಲ ವಿವರಗಳನ್ನೂ ಬಿಲ್ ಎಲ್ಲವನ್ನೂ ವಿಂಗಡಿಸಿ ಸ್ಪಷ್ಟ ಮಾಡುವ ತನಕ ನಾನು ಅವ್ಯಕ್ತ ಭಯ ಚಿಂತೆಗಳಲ್ಲಿ ಮುಳುಗಿದ್ದೆ. ಕೆಲವೇ ದಿನಗಳಲ್ಲಿ ಬಿಲ್, A7 RASನ ಡೀನ್‌ರೊಡನೆ ಮಾತನಾಡಿ, ನಾನು ಸಂಶೋಧನಾ ನಿಧಿಯೊಡನೆ ಬರುವುದಾದರೆ ಸಂಶೋಧನಾ ಪ್ರೊಫೆಸರರ ಹುದ್ದೆಯನ್ನು ನೀಡುವ ಕರಾರಿನೊಡನೆ, ನನಗೆ ಹುದ್ದೆ ನೀಡಲು ಅವರನ್ನು ಒಪ್ಪಿಸುವಲ್ಲಿ ಯಶಸ್ವಿಯಾದ. ದಾನ ನೀಡುವ ಸಂಸ್ಥೆಯು IDS ಅನ್ನೇ ನನಗಿಂತಲೂ ಹೆಚ್ಚು ಮುಖ್ಯವೆಂದು ಪರಿಗಣಿಸಬಹುದೆಂಬ ಭಯದಿಂದ ನಾನು ಕಲ್ಲಿನಂತಾದೆ ಮತ್ತು ಆ ಸಂಸ್ಥೆಯು ತನ್ನ ನಿಧಿಯನ್ನು A7 RASಗೆ ವರ್ಗಾಯಿಸು ವುದಕ್ಕಿಂತಲೂ IDSನವರೊಡನೆಯೇ ಬಿಟ್ಟುಬಿಡಲು ಹೆಚ್ಚು ಇಚ್ಛಿಸಬಹುದೆಂದೂ ಹೆದರಿದೆ. ಆದಾಗ್ಯೂ, ಒಮ್ಮೆ ಪ್ರಯತ್ನಿಸುವುದು ಸೂಕ್ತವೆನಿಸಿತು. ಮರುದಿನ, A7RASನಲ್ಲಿ ದೊರೆತಿರುವ ಹುದ್ದೆಗಾಗಿ ನಾನು IDS ಅನ್ನು ಬಿಟ್ಟು ಹೋಗುತ್ತಿರುವುದನ್ನು ವಿವರಿಸಿ ಒಂದು ಪತ್ರವನ್ನು ಬರೆದೆ ಮತ್ತು ಅವರು ಈಗಾಗಲೇ ನನ್ನ ಮಹಿಳಾಕಾರ್ಯ ಯೋಜನೆಗೆ ನೀಡಿದ್ದ ಹಣದ ನೆರವನ್ನು ನಾನು A7 RASಗೆ ವರ್ಗಾಯಿಸಿಕೊಳ್ಳಲು ಅವರ ಅನುಮತಿಯನ್ನು ಕೇಳಿದೆ.

ಮುಂದಿನ ಕೆಲವು ವಾರಗಳು ಅತ್ಯಂತ ಆತಂಕಭರಿತವಾಗಿದ್ದವು, ಕುಳಿತು ಕಾಯುವುದೊಂದೇ ನಾನು ಮಾಡಬಹುದಾಗಿದ್ದುದು. ಪ್ರತಿದಿನ ಬೆಳಿಗ್ಗೆ ಟಪ್ಪಾಲನ್ನು ಪರೀಕ್ಷಿಸುತ್ತಿದ್ದೆ. ದಾನಿ ಸಂಸ್ಥೆಯಿಂದ ಬಂದಿರಬಹುದಾದ ಉತ್ತರಕ್ಕಾಗಿ ವೇಗವಾಗಿ ಹುಡುಕುತ್ತಿದ್ದೆ. ಈ ಮಧ್ಯೆ IDSನಲ್ಲಿ ನನ್ನ ಕರ್ತವ್ಯ ಗಳನ್ನು ನಿರ್ವಹಿಸಬೇಕಾಗಿತ್ತು. ಇನ್ನೆಷ್ಟು ದಿನ ಇದನ್ನು ಸಹಿಸಬೇಕೆಂದು ತಿಳಿದಿರಲಿಲ್ಲ. ಆ ಸ್ಥಳವನ್ನು ನಾನು ದ್ವೇಷಿಸತೊಡಗಿದೆ ಹಾಗೂ ಎಲ್ಲರ ಕಣ್ಣುಗಳೂ ನನ್ನ ಮೇಲೆಯೇ ಇವೆ ಎನಿಸತೊಡಗಿತು ನನಗೆ, ನನ್ನ IDS ಸ್ನೇಹಿತರು ಒಬ್ಬರ ನಂತರ ಒಬ್ಬರು ಬಂದು ಭೇಟಿ ನೀಡುತ್ತಿದ್ದುದಲ್ಲದೆ, ನಾನು ಮೂರು ವರ್ಷಗಳ ಅವಧಿಯ ವಿಸ್ತರಣೆಯನ್ನು ಒಪ್ಪಿಕೊಳ್ಳಬೇಕೆಂದೂ, ಏಕೆಂದರೆ ಆ ಅವಧಿಯ ಮುಕ್ತಾಯದಲ್ಲಿ ಮತ್ತೆ ನಾನು ಖಂಡಿತ ಮತ್ತೆ ವಿಸ್ತರಣೆಯನ್ನು ಪಡೆಯಬಹುದೆಂದೂ ಸಲಹೆ ನೀಡಿದರು. ಹೀಗೆ ಪ್ರತಿಯೊಬ್ಬರೂ ನನ್ನನ್ನು ಮನಗಾಣಿಸಲು ಪ್ರಯತ್ನಿಸಿದಾಗಲೂ ನಾನು ತಲೆ ಅಲ್ಲಾಡಿಸಿದೆ ಮತ್ತು ನನ್ನ ಕಾರ್ಯಕ್ಷಮತೆಯನ್ನು ಕೆಳಮಟ್ಟದ್ದು ಎಂದು ಪರಿಗಣಿಸಿದ ಸ್ಥಳದಲ್ಲಿ ನಾನು ಕೆಲಸ ಮಾಡಲು ಇಚ್ಛಿಸುವುದಿಲ್ಲ ಎಂದು ಅವರಿಗೆ ವಿವರಿಸಲು ಪ್ರಯತ್ನಿಸಿದೆ ಮತ್ತು ನನ್ನ ಈ ಮಾತಿಗೆ ಅವರಿಗೆ ಪ್ರತಿಕ್ರಿಯಿಸಲು ತಿಳಿಯಲಿಲ್ಲ.

ಅಂತಿಮವಾಗಿ ಒಂದು ದಿನ ಬಹುದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಪತ್ರವನ್ನು ನನ್ನ ಟಪಾಲಿನಲ್ಲಿ ನೋಡಿದೆ. ಆ ಪತ್ರದಲ್ಲಿ ಯಾವ ಸುದ್ದಿಯಿದೆಯೋ

ಭಯದಿಂದಾಗಿ ಅದನ್ನು ತೆರೆಯಲೇ ಇಷ್ಟಪಡಲಿಲ್ಲ. ಪತ್ರ ತೆರೆಯುವ ಚಾಕುವನ್ನು ಕೈಯಲ್ಲಿ ಹಿಡಿದು ಆಟ ಆಡುತ್ತಾ ಆ ನಿರ್ಣಾಯಕ ಕ್ಷಣವನ್ನು ಮುಂದೂಡಲು ಪ್ರಯತ್ನಿಸುತ್ತಿದ್ದೆ. ಆದರೆ, ವಿಷಯ ಏನೆಂದು ತಿಳಿಯಲೇಬೇಕೆಂದೂ ನಾನು ಅರಿತಿದ್ದೆ. ನಾನು ನಿರೀಕ್ಷಿಸುತ್ತಿದ್ದ ಉತ್ತರಕ್ಕಾಗಿ ಹುಡುಕುತ್ತಾ, ಬೇಗಬೇಗ ಪತ್ರದ ಮೇಲೆ ಕಣ್ಣಾಡಿಸಿದೆ ಮತ್ತು ಆ ದಾನಿ ಸಂಸ್ಥೆಯವರು $೨೦೦,೦೦೦ ಮೊತ್ತದ ಹಣವನ್ನು IDSಗೆ ಅಲ್ಲ, ಆದರೆ ನನ್ನ ಮಹಿಳಾ ಕಾರ್ಯಯೋಜನೆಗೇ ಕೊಡಲು ನಿರ್ಧರಿಸಿರುವುದನ್ನು ತಿಳಿದು ನಾನು ನೆಮ್ಮದಿಯನ್ನು ಪಡೆದೆ. ಇವೆಲ್ಲವೂ ಎಷ್ಟೊಂದು ಸರಳವಾಗಿದೆ ಎನ್ನಿಸಿತು; ಹಣವನ್ನು ಎಲ್ಲಿಗೆ ಮರು ನಿರ್ದೇಶಿಸಬೇಕು ಎನ್ನುವುದನ್ನು ನಾನು ಸಲಹೆ ಮಾಡಬೇಕು ಎನ್ನುವುದನ್ನು ಮಾತ್ರವೇ ಅವರು ಕೇಳಿದ್ದರು. ಆ ಪತ್ರವನ್ನು ಥಟ್ಟನೆ ಹಿಡಿದುಕೊಂಡು ಬಿಲ್‌ನ ಆಫೀಸಿಗೆ ಹೋದೆ ಮತ್ತು ಅವನ ಆಫೀಸಿನ ಒಳಕ್ಕೆ ನುಗ್ಗುತ್ತಾ ಕೂಗಿಕೊಂಡೆ: “ಅದು ಫಲಪ್ರದವಾಯಿತು, ನಿನ್ನ ಸಲಹೆಯು ಫಲಿಸಿತು.” ಬಿಲ್ ಕೂಡ ನಿಜವಾಗಿ ಖುಷಿಯಾದ, ಆ ದಿನ ಈ ಸಂತೋಷಾಚರಣೆಯ ಭೋಜನದಲ್ಲಿ ನಾವು ಪರಸ್ಪರರ ಒಳಿತಿಗೆ ಸ್ವಸ್ತಿಪಾನ ಮಾಡಿದೆವು.

A7RAS ತಮ್ಮ ವಾಗ್ದಾನವನ್ನು ಪಾಲಿಸಿದರು, ಸಂಶೋಧನಾ ಪ್ರೊಫೆಸರರ ಹುದ್ದೆಯನ್ನು ನೀಡಿದರು. ಅಲ್ಲದೇ, ನನಗೂ ಮತ್ತು ನನ್ನ ಕಾರ್ಯದರ್ಶಿಗೂ, ಬಿಲ್‌ನ ಆಫೀಸಿನ ಎದುರಿಗೇ ಆಫೀಸ್‌ಗಳನ್ನು ಗೊತ್ತುಮಾಡಿದರು. ದಾನಿ ಸಂಸ್ಥೆಯಿಂದ ಬಂದಿದ್ದ ಹಣವನ್ನು ನಾನು A7RASಗೆ ವರ್ಗಾವಣೆ ಮಾಡಿಸಲು ಸಮರ್ಥಳಾದುದನ್ನು ತಿಳಿದ ನನ್ನ IDSನ ಸಹೋದ್ಯೋಗಿಗಳು ಆಶ್ಚರ್ಯಗೊಂಡಂತೆ ತೋರಿತು. ಅವರ ಹತಾಶೆಯಲ್ಲಿ ನಾನು ಸಂಭ್ರಮಿಸಿದೆ. ನಾನು ಅಲ್ಲಿಂದ ಬಿಟ್ಟುಬರುವ ಮುನ್ನ IDS ಒಂದು ಬೀಳ್ಕೊಡುಗೆಯ ಸಮಾರಂಭವನ್ನೇರ್ಪಡಿಸಿತ್ತು. ಅದು ಆತ್ಮವಂಚನೆಯ ಪರಾಕಾಷ್ಠೆ ಯೆನಿಸುತ್ತಿತ್ತು. ಆದರೂ, ನಾನು ಬಿಟ್ಟು ಹೋಗುವುದರ ಬಗೆಗೆ ಅವರೆಲ್ಲ ಎಷ್ಟು ದುಃಖಿತರಾಗಿದ್ದರೆಂದು ಹೇಳುತ್ತಿದ್ದ ಅನೇಕ ಭಾಷಣಗಳನ್ನು ಕೇಳುತ್ತಾ ಕುಳಿತಿದ್ದೆ. ನಿಜವಾದ ಸಂಗತಿಯ ಮೇಲೆ ಮಿಥ್ಯೆಯ ಹೊಳಪು ಬಳಿಯುವ ಅವರ ಸ್ಪಷ್ಟವಾದ ಸುಲಭ ತಂತ್ರದ ಬಗೆಗೆ ನಾನು ಅಚ್ಚರಿಗೊಂಡೆ ಹಾಗೂ ನನ್ನ ಅನೇಕ ಸಹೋದ್ಯೋಗಿಗಳು ಹೇಗೆ ಎರಡು ಮುಖ ಉಳ್ಳವರಾಗಿದ್ದರೆಂದೂ ಅರಿತೆ. ನಾನು ಏನನ್ನಾದರೂ ಹೇಳದೇ, ಇದನ್ನು ಇಲ್ಲಿಗೇ ಬಿಟ್ಟುಬಿಡಲು ಸಿದ್ಧಳಿರಲಿಲ್ಲ. ಆದ್ದರಿಂದ ಕೆಲವು ಮಾತುಗಳನ್ನಾಡುವಂತೆ IDS ಡೈರೆಕ್ಟರ್ ಅವರು ನನ್ನನ್ನು ಕೇಳಿದಾಗ ನಾನು ಹೇಳಿದೆ: “ನನ್ನ ರಾಜೀನಾಮೆಯ ಬಗೆಗೆ ಅಭಿವ್ಯಕ್ತಗೊಂಡ ಇಂತಹ ವಿಷಾದದ ಮಾತುಗಳನ್ನು ಕೇಳಿಸಿಕೊಳ್ಳಲು ನನಗೆ ಅತ್ಯಂತ ಆಶ್ಚರ್ಯ ವಾಗಿದೆಯೆಂದು ನಾನು ಒಪ್ಪಿಕೊಳ್ಳಲೇಬೇಕಾಗಿದೆ. ಅದೂ ನನ್ನ ಪ್ರಕಟಣಾ

ದಾಖಲೆಗಳು ಅವಶ್ಯಕವಾದ ವೃತ್ತಿನಿರತರ ಮಟ್ಟದಿಂದ ಕೆಳಮಟ್ಟದಲ್ಲಿದ್ದವು ಎಂಬ ಉಪಕುಲಪತಿಗಳ ಹೇಳಿಕೆಯ ಸತ್ಯಾಂಶದಿಂದ 'ನಾನು ಮತ್ತೆ ಮುಂದುವರೆಸಿದೆ'. ನನ್ನ ವಿದ್ಯಾರ್ಥಿಗಳ ಸಾಧನೆಗಳನ್ನು ನನ್ನ ಸಾಧನೆಗಿಂತಲೂ ಹೆಚ್ಚೆಂದು ಪರಿಗಣಿಸಿದುದರಲ್ಲಿ ನಾನು ಸರಿಯಿದ್ದೆನೋ, ಇಲ್ಲವೋ ಎನ್ನುವುದನ್ನು ಕಾಲವೇ ನಿರ್ಧರಿಸುತ್ತದೆ. ಆದರೆ, ಆ ವಿದ್ಯಾರ್ಥಿಗಳ ಭವಿಷ್ಯದ ವೃತ್ತಿಜೀವನವನ್ನು ಸುಭದ್ರಗೊಳಿಸಲು, ಯಾವುದು ಅವಶ್ಯಕವಾಗಿತ್ತೋ ಅದನ್ನೇ ನಾನು ಮಾಡಿದೆನೆಂದು ಭಾವಿಸುತ್ತೇನೆ. ಒಂದು ರೀತಿಯ ಅಹಿತಕರವಾದ ಮೌನವು ಸಂತೋಷಕೂಟದ ಮೇಲೆ ಬಿದ್ದಿತ್ತು ಎನಿಸಿತು ನನಗೆ. ಮುಕ್ತಾಯವಾದ ಕೆಲವೇ ನಿಮಿಷಗಳಲ್ಲಿ ಕೆಲವು ನನ್ನ ನಿಷ್ಠ ಸ್ನೇಹಿತರನ್ನುಳಿದು, ಆ ಕೋಣೆ ಸಂಪೂರ್ಣವಾಗಿ ಬರಿದಾಗಿತ್ತು.

IDSನಿಂದ A7RASಗೆ ಸ್ಥಳ ಬದಲಾಯಿಸುವುದೆಂದರೆ ನನ್ನ ಪಾಲಿಗೆ ಬಹಳ ಹೊಂದಾಣಿಕೆಗಳನ್ನು ಮಾಡಿಕೊಳ್ಳುವ ಅವಶ್ಯಕತೆಯಿತ್ತು. ಏಕೆಂದರೆ, ಅಲ್ಲಿ ನಾನು ಒಂದು ಸಂಶೋಧನಾ ಘಟಕವನ್ನು ಸಂಪೂರ್ಣವಾಗಿ ಒಬ್ಬಳೇ ನಿರ್ದೇಶಿಸಬೇಕಾಗಿತ್ತು. IDSನಲ್ಲಿ ನಾನು ಪಡೆಯುತ್ತಿದ್ದ ಯಾವುದೇ ರೀತಿಯ ಸಾಂಸ್ಥಿಕ ಬೆಂಬಲ ಸಹಕಾರಗಳಿಲ್ಲದೇ, ಇದೆಲ್ಲವನ್ನೂ ನಿರ್ವಹಿಸಲು ನಾನು ಸಮರ್ಥಳಾಗಲಾರೆ ಎಂಬ ಭಯ ದುಃಸ್ವಪ್ನದಂತೆ ನನ್ನನ್ನು ಕಾಡತೊಡಗಿತ್ತು. ಅಲ್ಲದೇ ನಾನು ಇನ್ನೂ, ಉಳಿದಿದ್ದ $೮೦,೦೦೦ ನಿಧಿ ಸಂಗ್ರಹಿಸಬೇಕಾಗಿತ್ತು. ಏಷಿಯಾದ ಸಂಶೋಧನಾ ವಿದ್ಯಾರ್ಥಿನಿಯರನ್ನು ನೇಮಕ ಮಾಡಿಕೊಳ್ಳಬೇಕಾಗಿತ್ತು ಹಾಗೂ ಅಧ್ಯಯನಕ್ಕೆ ಸಿದ್ಧಗೊಳಿಸಬೇಕಾಗಿತ್ತು. ನನ್ನ ಇಬ್ಬರೂ ಕಾರ್ಯದರ್ಶಿಗಳು ಗಾಢವಾಗಿ ಕೆಲಸಕ್ಕೆ ಬದ್ಧರಾಗಿದ್ದುದು ನನ್ನ ಅದೃಷ್ಟವಾಗಿತ್ತು. ಈ ಯೋಜಿತ ಕಾರ್ಯವು ನೆಲದಿಂದ ಮೇಲಕ್ಕೇಳುವುದನ್ನು ಖಚಿತಗೊಳಿಸಲು ಅವರು ನನ್ನೊಡನೆ ಕಾರ್ಯಪ್ರವೃತ್ತರಾದರು. ಅತ್ಯಂತ ಬುದ್ಧಿವಂತರಾದ, ಏಷಿಯಾದ ವಿದ್ಯಾರ್ಥಿನಿಯರ ಒಂದು ಗುಂಪನ್ನು ನೇಮಕ ಮಾಡಿಕೊಳ್ಳುವಲ್ಲಿ ಯಶಸ್ವಿಯಾದೆ. [ಬಾಂಗ್ಲಾದೇಶ, ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಇಂಡೋನೇಷಿಯಾಗಳಿಂದ ಪ್ರತಿಯೊಂದು ದೇಶದಿಂದಲೂ ಇಬ್ಬರು ವಿದ್ಯಾರ್ಥಿನಿಯರು ಮತ್ತು ಇಂಡೋನೇಷಿಯಾದ ಸಂಶೋಧಕಿಯರಲ್ಲಿ ಒಬ್ಬರ ಪತಿ] ಮತ್ತು ಯೋಜಿತ ಕಾರ್ಯವು ಶುಭಾರಂಭ ಮಾಡಿತು. ಏನಾದರೂ ಎಡವಟ್ಟು ಆಗಬಹುದೆಂದು ನಾನು ಇನ್ನೂ ಚಿಂತಿಸುತ್ತಿದ್ದೆ. ಆದರೆ, ಕೆಲವು ತಿಂಗಳುಗಳ ಬಳಿಕ ನಾನು ಚಿಂತೆಯಿಂದ ಮುಕ್ತಳಾದೆ ಮತ್ತು ನನ್ನ ಈ ಎರಡನೆಯ ಯೋಜಿತ ಕಾರ್ಯದಲ್ಲಿಯೂ ಮೊದಲಿನದರಷ್ಟೇ ಸಂತೋಷ ಅನುಭವಿಸತೊಡಗಿದೆ.

ಕಳೆದ ಕೆಲವು ತಿಂಗಳುಗಳ, ಏಳು–ಬೀಳಿನ, ಸಂಘರ್ಷಗಳ ಜೀವನ ಒಂದು

ನೆಲೆಗೆ ಬಂದು ನಿಂತಿತು ಮತ್ತು ಜೀವನವು ಹೊಸ ದಿನಚರಿಗೆ ಹೊಂದಿಕೊಂಡಿತು. ಬಿಲ್‌ನ ತಾಯಿ ನಮ್ಮ ಜೊತೆಯಲ್ಲಿ ಇರುವ ಒತ್ತಡಕ್ಕೆ ಕೂಡ ನಾನು ಹೊಂದಿಕೊಳ್ಳ ತೊಡಗಿದೆ. ನನಗೆ ನಾನೇ ಹೇಳಿಕೊಂಡೆ. ನಾವೀಗ ತೃಪ್ತಿ ಮತ್ತು ನೆಮ್ಮದಿಯ ಹಂತವನ್ನು ಪ್ರವೇಶಿಸಿದ್ದೇವೆ. ಆದರೆ, ದಿಗಂತದಲ್ಲಿ ಬೇರೆ ಏನೋ ಒಂದು ಮಬ್ಬುಮಬ್ಬಾಗಿ ಕಾಯುತ್ತಿತ್ತು ಎಂದು ನಾನು ಅರಿತೆ.

ಕೆಲವು ತಿಂಗಳಿನಿಂದಲೂ ನನ್ನ ಬಲಸ್ತನದಲ್ಲಿ ಒಂದು ಗಡ್ಡೆ ಉಂಟಾಗಿರುವ ಅನುಭವ ನನಗೆ ಆಗುತ್ತಿತ್ತು. ಆದರೆ, ಅದನ್ನು ನಾನು ಅಲಕ್ಷಿಸಲು ಪ್ರಯತ್ನಿಸಿದೆ. ಬಿಲ್ ಅದನ್ನು ಗಮನಿಸುವ ವೇಳೆಗೆ ನಾನು ಸ್ವಲ್ಪ ಚಿಂತಿಸತೊಡಗಿದ್ದೆ. ಬಹಳ ದಿನದ ಹಿಂದೆ ಮಾಡಿಸಿಕೊಂಡಿದ್ದ ಸ್ಕಿನ್ ಗ್ರಾಫ್ಟ್‌ನ ಪರಿಣಾಮ ಇದು ಅಷ್ಟೇ ಎಂದು ನಾವು ವಿಚಾರ ಮಾಡಿದೆವು. ಮತ್ತು ನಾನು ಈ ವಿಷಯವನ್ನು ನನ್ನ ಮನಸ್ಸಿನ ಕೆಳಭಾಗಕ್ಕೆ ತಳ್ಳಿದೆ. ಆದರೂ ನಾನು A7RASನಲ್ಲಿ ನೆಲೆನಿಂತ ಮೇಲೆ, ಇದು ನನ್ನನ್ನು ಹೆಚ್ಚು ಹೆಚ್ಚಾಗಿ ಚಿಂತೆಗೆ ಈಡುಮಾಡತೊಡಗಿತು. ಹಾಗಾಗಿ ನಾನು ಅದನ್ನು ನಿರ್ಲಕ್ಷಿಸಲು ಆಗಲೇ ಇಲ್ಲ. ಪ್ರಯಾಣಕಾಲದ ಚುಚ್ಚು ಮದ್ದುಗಳನ್ನು ತೆಗೆದುಕೊಳ್ಳುತ್ತಿದ್ದಾಗ ಒಮ್ಮೆ ನನ್ನ ವೈದ್ಯರನ್ನು ಸುಮ್ಮನೆ ಲೋಕಾಭಿರಾಮವಾಗಿ ಇದರ ಬಗೆಗೆ ಅವರ ಅಭಿಪ್ರಾಯ ಕೇಳಿದೆ. ಅವರು ನನ್ನನ್ನು ಪರೀಕ್ಷಿಸದೆಯೇ ಬಹುಶಃ ಅದು ಸ್ಕಿನ್‌ಗ್ರಾಫ್ಟ್‌ನ ಪರಿಣಾಮವೇ ಇರಬಹುದೆಂದು ನನಗೆ ಆಶ್ವಾಸನೆ ನೀಡಿದರು. ಅವರನ್ನು ನಂಬಬೇಕು ಎನಿಸಿದರೂ, ಅವರನ್ನು ಮತ್ತಷ್ಟು ಒತ್ತಾಯಿಸಿದೆ. ಆ ಒಂದು ಗಳಿಗೆಯಲ್ಲಿ ಅವರು ಒಬ್ಬ ಪರಿಣತರಿಗೆ ನನ್ನ ವಿಷಯವನ್ನು ಪ್ರಸ್ತಾಪಿಸಲು ಒಪ್ಪಿದರು.

ಕೆಲವು ವಾರಗಳ ನಂತರ ಬಿಲ್ ಮತ್ತು ನಾನು, ಗೊತ್ತುಮಾಡಿದ್ದ ವೈದ್ಯರ ಭೇಟಿಗಾಗಿ ಬಂದೆವು. ನಾನು ಹೆದರಿಕೆಯಿಂದ ತಳಮಳಗೊಂಡಿದ್ದೆ. ಪರಿಣತ ವೈದ್ಯರು ನನ್ನನ್ನು ಪರೀಕ್ಷಿಸಿದರು ಮತ್ತು ತಕ್ಷಣವೇ ನಾನು ಚೆಸ್ಟ್ X-rayಗೆ ಒಳಪಡುವಂತೆ ಏರ್ಪಾಟು ಮಾಡಿದರು. ನಾನು ಹೆದರಿದ್ದೆ. ಏಕೆಂದರೆ ಆ ವೈದ್ಯರು ಸ್ತನದ ಕ್ಯಾನ್ಸರ್ ಇರುವ ಸಂಭವನೀಯತೆಯನ್ನು ಪರೀಕ್ಷಿಸುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತಿತ್ತು. ನಾನು ತಪಾಸಣಾ ಕೋಣೆಯಿಂದ ಆಚೆಗೆ ಬರುತ್ತಿರುವಾಗ ಬಿಲ್ ನನ್ನ ಕಡೆಗೆ ನೋಡಿದ ಮತ್ತು ನನ್ನ ಸುತ್ತಲೂ ತನ್ನ ತೋಳುಗಳನ್ನು ಬಳಸುವುದಕ್ಕಾಗಿ ಓಡಿಬಂದ. ನನ್ನ ಕಣ್ಣುಗಳು ತುಂಬಿಬಂದವು. ಫಲಿತಾಂಶ ಬರುವ ತನಕವೂ ಏನನ್ನೂ ಊಹಿಸದಿರುವಂತೆ ನನಗೆ ಹೇಳಿದ. ಫಲಿತಾಂಶವನ್ನು ತಿಳಿದುಕೊಳ್ಳುವುದಕ್ಕಾಗಿ ಮರುದಿನ ತನ್ನ ದೂರವಾಣಿಯ ಕರೆಗೆ ಕಾಯುವಂತೆ ಆ ತಜ್ಞರು ಹೇಳಿದ್ದರು. ದಿನದ ಉಳಿದ ಭಾಗವನ್ನು ನಾನು ಉದ್ವೇಗ, ಆತಂಕಗಳಿಂದಲೇ ಕಳೆದೆ. ಯಾವುದರ ಮೇಲೂ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗಲಿಲ್ಲ

ಮತ್ತು ನೆಮ್ಮದಿಯಿಂದ ವಿಶ್ರಾಂತಿ ತೆಗೆದುಕೊಳ್ಳಲೂ ಆಗಲಿಲ್ಲ. ಒಂದು ವೇಳೆ ಅದೇನಾದರೂ ಹಾನಿಕರವಾದ, ಮಾರಕವಾದ ಬೆಳವಣಿಗೆಯೆಂದು ನನಗೆ ಹೇಳಿದರೆ, ನಾನೇನು ಮಾಡುವೆ ಎಂದು ಚಿಂತಿಸುತ್ತಿದ್ದೆ. ಇದನ್ನು ಬಿಲ್ ಹೇಗೆ ತಡೆದುಕೊಳ್ಳುತ್ತಾನೆ? ನನ್ನ ಹುಡುಗಿಯರ ಬಗೆಗೆ ಏನು ಮಾಡುವುದು?

ತಜ್ಞರ ಆಫೀಸ್ ತೆರೆಯುವ ಸಮಯಕ್ಕಾಗಿ ಕಾಯುತ್ತಾ ಮರುದಿನ ಬೆಳಿಗ್ಗೆ ನಿಮಿಷಗಳು ಟಿಕ್ ಟಿಕ್ ಎಂದು ಮುಂದೆ ಹೋಗುವುದನ್ನು ಗಮನಿಸುತ್ತಾ ಕಾಲ ಕಳೆದೆ. ಸರಿಯಾಗಿ ೯.೩೦ಕ್ಕೆ ದೂರವಾಣಿಯ ಕರೆ ಬಂದಿತು. ಅದು ಆ ತಜ್ಞರಿಂದಲೇ ಆಗಿತ್ತು. ಆಗಲೇ ನನಗೆ ತಿಳಿಯಿತು ಒಳ್ಳೆಯ ಸುದ್ದಿಯಲ್ಲ ಅದು ಎಂದು. ನಾನು ಕೇಳಿಸಿಕೊಂಡೆ, ಯಾವುದೋ ಸಮಾಧಿ ಸ್ಥಿತಿಯಲ್ಲಿದ್ದವಳಂತೆ: ನನ್ನನ್ನು X-rayಯು ನನ್ನಲ್ಲಿ ಕ್ಯಾನ್ಸರ್‌ನ ಬೆಳವಣಿಗೆಯಿರುವುದನ್ನು ತೋರಿಸಿದೆಯೆಂದೂ, ಆ ಕೂಡಲೇ ಅದನ್ನು ತೆಗೆದುಹಾಕುವ ಅಗತ್ಯವಿದೆಯೆಂದೂ ತಜ್ಞ ಹೇಳಿದರು. ಅವರೇನೋ ಅದೊಂದು ಮಾಮೂಲಿ ವಾಸ್ತವ ಸಂಗತಿಯೆಂಬಂತೆ ಹೇಳುತ್ತಾ ಮುಂದುವರೆಸಿದರು. ನಾನು ಅವರ ಸ್ವಾಗತಕಾರಿಣಿಯನ್ನು ಕಾಣಬೇಕೆಂದೂ, ಮುಂದಿನ ಅಗತ್ಯವಾದ ಸಿದ್ಧತೆಗಳನ್ನು ಏರ್ಪಾಡು ಮಾಡಬೇಕಾಗುತ್ತದೆಂದೂ ಹೇಳಿದರು. ಅವರು ಇಷ್ಟು ತಣ್ಣಗೆ ನಿರ್ಭಾವುಕರಾಗಿ ಉಲ್ಲೇಖಿಸುತ್ತಿರುವುದು ನನ್ನ ಜೀವದ ಬಗೆಗೆ ಎಂದು ನಾನು ಕಿರಿಚಿಕೊಳ್ಳಬೇಕು ಎನಿಸಿತು ನನಗೆ. ಆದರೆ, ಸುಮ್ಮನೆ ಅವರಿಗೆ ಕೃತಜ್ಞತೆಗಳನ್ನು ತಿಳಿಸಿ ಫೋನನ್ನು ಕೆಳಕ್ಕೆ ಇಟ್ಟೆ.

ಅನೇಕ ಸಂಕಷ್ಟ, ಅಡಚಣೆಗಳಿದ್ದಾಗ್ಯೂ ಬಹುಶಃ ಅವನ್ನೆಲ್ಲಾ ನಾನು ಗೆದ್ದು ಬಂದಿದ್ದರಿಂದಲೂ ಇರಬಹುದು, ಅನೇಕ ಬಾರಿ ನನ್ನನ್ನು ನಾನು, ಪ್ರಪಂಚದಲ್ಲಿ ನಾನು ಅತ್ಯಂತ ಅದೃಷ್ಟಶಾಲಿ ಮಹಿಳೆ ಎಂದೇ ಯೋಚಿಸಿಕೊಂಡಿದ್ದೆ. ಈ ಘಟನೆ ಯನ್ನೆದುರಿಸುವಾಗ ನಾನು ಐವತ್ತರ ದಶಕದಲ್ಲಿದ್ದ, ಸಂತೋಷವಾದ ವಿವಾಹ ಮತ್ತು ಮುದ್ದಾದ ಇಬ್ಬರು ಹದಿಹರೆಯದ ಹೆಣ್ಣುಮಕ್ಕಳಿದ್ದ ಮತ್ತು ಉತ್ತೇಜಕ ಮತ್ತು ಉತ್ಸಾಹಕಾರಿಯಾಗಿದ್ದ ವೃತ್ತಿಜೀವನಗಳನ್ನು ಹೊಂದಿದ್ದ ಮಹಿಳೆಯಾಗಿದ್ದೆ. ನನ್ನ ಈ ಎಲ್ಲ ಯೋಜನೆಗಳೊಂದಿಗೆ, ಕ್ಯಾನ್ಸರ್ ರೋಗವಿದೆಯೆಂಬ ನಿರ್ಣಯ, ಸ್ವಲ್ಪವೂ ಹೊಂದಿಕೊಳ್ಳುತ್ತಿರಲಿಲ್ಲ. ನಾನು ಯಾವಾಗಲೂ ಜಡದ ಮೇಲೆ ಚೈತನ್ಯದ ಪ್ರಭಾವ, ಶಕ್ತಿಗಳನ್ನು– ದೇಹದ ಮೇಲೆ ಮನಸ್ಸಿನ ಶಕ್ತಿಯಲ್ಲಿ– ದೃಢನಂಬಿಕೆ ಹೊಂದಿದ್ದವಳಾಗಿದ್ದೆ. ಆದರೆ, ಈಗ ನಾನು ತೀರಾ ದುರ್ಬಲಳೂ, ಆಕ್ರಮಣ ಕ್ಕೊಳಗಾಗಬಹುದಾದವಳೂ ಮತ್ತು ಯಾವ ನಿಯಂತ್ರಣವನ್ನೂ ಇನ್ನೂ ತಡೆಯ ಲಾರದವಳೂ ಆಗಿಬಿಟ್ಟಂತೆ ಭಾವಿಸಿದೆ. ನನ್ನ ಶರೀರವು ಅಜೇಯ ಎಂದು ನಂಬಿಬಿಟ್ಟಂತಹ ಮೂರ್ಖಳಾಗಿದ್ದುದಕ್ಕಾಗಿ ನನ್ನನ್ನು ನಾನು ಶಪಿಸಿಕೊಂಡೆ.

ನನ್ನ ದೇಹದ ವಿವಿಧ ಭಾಗಗಳಲ್ಲಿ ನಾನು ನೋವನ್ನು ಅನುಭವಿಸಲು

ಆರಂಭಿಸಿದೆ. ಮತ್ತು ಕ್ಯಾನ್ಸರ್ ನನ್ನ ದೇಹದಲ್ಲೆಲ್ಲಾ ಹರಡಿಬಿಟ್ಟಿದೆಯೆಂದು ನಂಬಿದೆ. ಈಗ ಪ್ರಸ್ತಾಪಿಸಿರುವ ಮ್ಯಾಸ್ಟ್‌ಕ್ಯಮಿಯು (ಶಸ್ತ್ರಚಿಕಿತ್ಸೆಯ ಮೂಲಕ ಸ್ತನವನ್ನು ತೆಗೆದುಹಾಕುವುದು) ಕೇವಲ ತಾತ್ಕಾಲಿಕ ಪರಿಹಾರವನ್ನು ಮಾತ್ರ ನೀಡುವುದು ಮತ್ತು ದುಃಖಕರವಾದ ನನ್ನ ಸಾವನ್ನು ಸುಮ್ಮನೆ ನಿಧಾನ ಗೊಳಿಸುವುದು ಅಷ್ಟೆ ಎಂದು ತರ್ಕಿಸಿದೆ. ನಾನು ಸಾವಿನ ಈ ದುಃಖವನ್ನು ಅನುಭವಿಸುವುದನ್ನು ನನ್ನ ಕುಟುಂಬದವರು ವೀಕ್ಷಿಸಿ ಯಾತನೆ ಪಡುವುದನ್ನು ನಾನು ನೋಡಲು ಬಯಸುವುದಿಲ್ಲವೆಂದು ನಿರ್ಧರಿಸಿದೆ ಮತ್ತು ಎಂದಿಗೂ ಎಚ್ಚರವಾಗದಂತೆ, ಮಿತಿಮೀರಿದ ಪ್ರಮಾಣದಲ್ಲಿ ನಿದ್ರೆ ಔಷಧವನ್ನು ಸೇವಿಸಬೇಕೆಂದೂ ನಿರ್ಧರಿಸಿದೆ. ಈ ಎಲ್ಲ ಆಲೋಚನೆಗಳೂ ನನ್ನ ಮನಸ್ಸಿನಲ್ಲಿ ಓಡುತ್ತಿದ್ದಾಗ, ಬಿಲ್ ನನ್ನ ಪಕ್ಕದಲ್ಲಿಯೇ ಇದ್ದ. ನನ್ನ ಯಾವ ಆಲೋಚನೆಗಳನ್ನೂ ಅವನಿಗೆ ಹೇಳಲೇಬೇಕಾಗದಿರುವಷ್ಟು ಆಳವಾಗಿ ನನ್ನನ್ನು ಅವನು ಅರ್ಥಮಾಡಿಕೊಂಡಿದ್ದ. ನನ್ನನ್ನು ಸಾಂತ್ವನಗೊಳಿಸಲು ತನಗೆ ಸಾಧ್ಯವಾದಷ್ಟೂ ಪ್ರಯತ್ನಿಸಿದ. ನನ್ನನ್ನು ವಿಚಾರ ಮಾಡುವಂತೆ ಪ್ರೇರೇಪಿಸಿದ ಮತ್ತು ಜೀವನಕ್ಕೆ, ಜೀವಕ್ಕೆ ಮತ್ತೊಂದು ಅವಕಾಶ ನೀಡುವಂತೆ, ಮೃದುವಾಗಿ ಮಾತನಾಡಿ ನನ್ನ ಮನವೊಲಿಸಿದ. ನಾನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡೆ. ಆದರೆ, ಒಂದು ಒಪ್ಪಂದದ ಮೇರೆಗೆ, ಅದೆಂದರೆ, ಶಸ್ತ್ರ ಚಿಕಿತ್ಸೆಯ ಅವಧಿಯಲ್ಲಿ ಕ್ಯಾನ್ಸರ್‌ನ ಮತ್ತಷ್ಟು ಹೆಚ್ಚು ಬೆಳವಣಿಗೆಯೇನಾದರೂ ಕಂಡುಬಂದಲ್ಲಿ (ಅನೇಕ ಸಂದರ್ಭದಲ್ಲಿ ಹಾಗಾಗಿದ್ದುದು ನನಗೆ ತಿಳಿದಿತ್ತು.) ಬಿಲ್ ನನ್ನನ್ನು ಮನೆಗೆ ಕರೆದು ಕೊಂಡು ಬರಬೇಕು– ನಾನೆಷ್ಟೇ ಕಾಯಿಲೆಯಿಂದಿದ್ದರೂ, ನಿರ್ಬಲಳಾಗಿದ್ದರೂ– ಅದರಿಂದ ನನ್ನನ್ನು ನಾನು ಶೀಘ್ರವಾಗಿ ಅಂತ್ಯಗೊಳಿಸಿಕೊಳ್ಳಲು ಸಾಧ್ಯವಾಗುವುದು. ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ತಮ್ಮ ವಿಧಿ, ಹಣೆಬರಹಗಳ ಮೇಲೆ ಯಾವುದೇ ಹತೋಟಿ, ನಿಯಂತ್ರಣಗಳು ಇರುವುದಿಲ್ಲವೆಂದು ನನಗೆ ಅನುಭವದಿಂದ ತಿಳಿದಿತ್ತು. ಅನೇಕ ಜನ ಕ್ಯಾನ್ಸರಿನಿಂದ ಯಾತನೆಪಡುತ್ತಿದ್ದ ಸ್ನೇಹಿತರು ನಿಧಾನ ಮತ್ತು ಯಾತನಾಪೂರ್ಣ ಮರಣಕ್ಕೊಳಗಾಗುವುದನ್ನು ನಾನು ವೀಕ್ಷಿಸಿದ್ದೆ.

ನಾನು ಆ ಆಸ್ಪತ್ರೆಯ ಸ್ವಾಗತಕಾರಿಣಿಗೆ ಕರೆ ಮಾಡಲಿಲ್ಲ. ಏಕೆಂದರೆ, ನಾನು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲೇಬೇಕಾದಲ್ಲಿ, ಬೇರೆ ಯಾರಾದರೂ, ಸಹಾನುಭೂತಿಯಿಂದ ಹತ್ತಿರ ಹೋಗಬಹುದಾದಂತಹವರಿಂದ ಚಿಕಿತ್ಸೆಗೊಳಪಡುತ್ತೇನೆ ಎಂದು ನಿರ್ಧರಿಸಿದೆ. ತನ್ನ ವೈಯಕ್ತಿಕ ಸಂಪರ್ಕಗಳಿಂದಾಗಿ, ಕೇವಲ ಸ್ವಲ್ಪ ಸಮಯದಲ್ಲಿಯೇ ಬಿಲ್, ಲಂಡನ್ನಿನ ಗೈಸ್ ಆಸ್ಪತ್ರೆಯ ಶಸ್ತ್ರ ಚಿಕಿತ್ಸಕ Mr. H ಅವರು ನನ್ನನ್ನು ಪರೀಕ್ಷಿಸುವಂತೆ ಗೊತ್ತುಮಾಡಿದ. ನಾವು ಲಂಡನ್ನಿಗೆ ಹೋಗುತ್ತಿದ್ದಾಗ, ಪರಸ್ಪರ ಒಂದೇ ಒಂದು ಮಾತೂ ಆಡಲಿಲ್ಲ. ಆಗಿಂದಾಗ್ಗೆ, ಬಿಲ್ ನನ್ನ ಕೈಗಳನ್ನು ಸಮೀಪಿಸುತ್ತಿದ್ದ ಮತ್ತು ನನ್ನ ಕೈಯನ್ನು ಮಿದುವಾಗಿ ಹಿಸುಕುತ್ತಿದ್ದ. “ನೀನು

ಎಂತಹ ಸಂಕಷ್ಟದ ಮೂಲಕ ಹಾದು ಹೋಗುತ್ತಿದ್ದೀ ಎಂದು ನನಗೆ ತಿಳಿದಿದೆ. ಆದರೆ, ಇದರಲ್ಲಿ ನಾವಿಬ್ಬರೂ ಜೊತೆಗಾರರಾಗಿದ್ದೇವೆ" ಎಂದು ಆ ಮೂಲಕ ನನಗೆ ಹೇಳುತ್ತಿದ್ದಾನೆ ಎನಿಸುತ್ತಿತ್ತು. ನಾವು ಆಸ್ಪತ್ರೆಗೆ ಬರುತ್ತಿದ್ದಂತೆಯೇ ನಮ್ಮನ್ನು ಪರೀಕ್ಷಾಕೋಣೆಗೆ ಕರೆದೊಯ್ಯಲಾಯಿತು ಮತ್ತು ಸ್ವಲ್ಪ ಸಮಯದ ನಂತರ Mr. H ಬಂದು ನಮ್ಮನ್ನು ಸೇರಿದರು.

ಆ ವೈದ್ಯರ ನಡವಳಿಕೆಯು ಓಟ್ಟೋನನ್ನು ನನ್ನ ಮನಸ್ಸಿಗೆ ನೆನಪು ಮಾಡಿದ್ದರಿಂದ ನಾನು ತಕ್ಷಣವೇ ಸಮಾಧಾನಗೊಂಡೆ. ಅಲ್ಲದೇ, ಅವರು ಅತ್ಯಂತ ಪ್ರಮುಖರಾದ, ಬ್ರಿಟನ್ನಿನ ಸ್ತನ ಕ್ಯಾನ್ಸರ್‌ನ ಪರಿಣತರಲ್ಲಿ ಒಬ್ಬರಾಗಿದ್ದುದರಿಂದ ನಾನು ಎಳ್ಳಷ್ಟೂ ಸಂಶಯವಿಲ್ಲದೆ ಅವರನ್ನು ನಂಬಿದೆ. ನನ್ನನ್ನು ಪರೀಕ್ಷಿಸಿದ ನಂತರ ಸ್ತನ ಕ್ಯಾನ್ಸರಿನ ರೋಗ ನಿರ್ಣಯವನ್ನು ಅವರು ದೃಢಪಡಿಸಿದರು ಮತ್ತು ನನ್ನ ಬಲಭಾಗದ ಸ್ತನವನ್ನು ತೆಗೆದುಹಾಕಬೇಕಾಗಿರುವ ತುರ್ತುಸ್ಥಿತಿಯನ್ನು ಸ್ಪಷ್ಟವಾಗಿ ವಿವರಿಸಿದರು. ಹಾಗಿದ್ದರೂ, ಅವರು ತಮ್ಮ ಈ ಭಯಂಕರ ಸಂದೇಶವನ್ನು, ತಮ್ಮ ಮನಸ್ಸು ಮತ್ತು ಹೃದಯಗಳು ನನ್ನನ್ನು ಮುಟ್ಟುವ ರೀತಿಯಲ್ಲಿ ಮೆದುವಾಗಿ ನನಗೆ ತಿಳಿಸಿದರು. ಅವರು ಶಾರೀರಿಕವಾಗಿ ಯಾವುದೇ ರೀತಿಯಲ್ಲಿಯೂ ಓಟ್ಟೋವನ್ನು ಹೋಲದಿದ್ದರೂ, ನನ್ನ ಕಣ್ಣೀರಿನ ಮೂಲಕ ನಾನು ಅವರಲ್ಲಿ ಅಪರಿಚಿತ ಶಸ್ತ್ರಚಿಕಿತ್ಸಕನಿಗಿಂತಲೂ, ನನ್ನ ಪ್ರೀತಿಯ ಸೋದರನ ರೂಪವನ್ನೇ ಕಂಡೆ. ಇದು ಪ್ರಶ್ನೆಗಳನ್ನು ಕೇಳಲು ಮತ್ತು ಮುಂದೆ ನಡೆಯಲಿರುವ ಶಸ್ತ್ರಚಿಕಿತ್ಸೆಯ ಸಂಭಾವ್ಯ ಫಲಿತಾಂಶಗಳ ಬಗೆಗೆ ಚರ್ಚಿಸಲು ನಾನು ಹೆಚ್ಚು ಸಿದ್ಧಳಿರುವಂತೆ ಪ್ರೇರೇಪಿಸಿತು. ಶಸ್ತ್ರಚಿಕಿತ್ಸೆಗೆ ನಾನು ಒಪ್ಪದಿದ್ದಲ್ಲಿ, ನಾನು ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಬದುಕಿರುವ ಅವಕಾಶ ತೀರಾ ಕಡಿಮೆಯಿದೆ ಎಂದು ಅವರು ನನಗೆ ಹೇಳಿದರು. ಅವರು ಹೇಳಿದರು: "ನೀವು ಶಸ್ತ್ರಚಿಕಿತ್ಸೆಯನ್ನು ತಡೆದು ಉಳಿದುಕೊಳ್ಳುವ ಅವಕಾಶಗಳು ಸಾಕಷ್ಟು ಹೆಚ್ಚಾಗಿವೆ. ಉತ್ತಮವಾಗಿವೆ. ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಉಳಿದುಕೊಳ್ಳುವ ವರ್ಷಗಳ ಸಂಖ್ಯೆಯು ಮರಣದ ಸಂಖ್ಯೆಯನ್ನು ಕಡಿಮೆಗೊಳಿಸುತ್ತದೆ ಎಂದು ಅಂಕಿ ಅಂಶಗಳು ತೋರಿಸುತ್ತವೆ." ನನಗೆ ಯಾವುದೇ ಆಯ್ಕೆ ಇರಲಿಲ್ಲವೆಂಬುದನ್ನು ನಾನು ಮನಗಂಡೆ. ಆದ್ದರಿಂದ ಸ್ತನವನ್ನು ತೆಗೆದುಹಾಕುವ ಶಸ್ತ್ರ ಚಿಕಿತ್ಸೆಗೆ ಒಪ್ಪಿ, ಮುಂದಿನ ವಾರ ಆಸ್ಪತ್ರೆಗೆ ಸೇರಲು ಅನುಮತಿಸಿದೆ.

ಆಸ್ಪತ್ರೆಗೆ ನಾನು ಸೇರಿಕೊಳ್ಳುವ ಮುಂಚಿನ ದಿನಗಳು ನಮಗೆಲ್ಲರಿಗೂ ಬಹಳ ಕಷ್ಟದ ದಿನಗಳಾಗಿದ್ದವು. ಯಾವಾಗಲೂ ನಾನು ಪ್ರೀತಿಪಾತ್ರನಾದ, ಮರೆಗುಳಿ ಪ್ರೊಫೆಸರ್ ಮಾದರಿಯವನು ಎಂದು ನೋಡುತ್ತಿದ್ದ ಬಿಲ್ ಅದ್ಭುತವಾದ ಆಂತರಿಕ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿದ. ಇದು ನಾನು ಅವನ ಬಗೆಗೆ ತಿಳಿದದ್ದಕ್ಕಿಂತಲೂ ಹೆಚ್ಚಾಗಿಯೇ ಇತ್ತು. ಬಹುಶಃ ವಿಶಿಷ್ಟ ಪರಿಸ್ಥಿತಿಗಳು ವಿಶಿಷ್ಟ

ಪ್ರತಿಸ್ಪಂದನಗಳನ್ನು ಅಗತ್ಯಗೊಳಿಸುತ್ತವೆ. ಆದರೂ, ಇದಕ್ಕಾಗಿ ನಾನು ಬಿಲ್‌ನನ್ನು ಅತ್ಯಂತ ಹೆಚ್ಚಾಗಿ ಪ್ರಶಂಸಿಸಿದೆ. ನಾನು ಆಳವಾದ ಖಿನ್ನತೆಯ ಅವಧಿಗಳನ್ನು ಅನುಭವಿಸಿದಾಗಲೆಲ್ಲ Mr. H ಅವರು ದೇಶದಲ್ಲಿ ಅತ್ಯಂತ ಉಚ್ಚ ಶ್ರೇಣಿಯ ಸ್ತನ ಕ್ಯಾನ್ಸರ್ ತಜ್ಞರಲ್ಲಿ ಒಬ್ಬರೆಂಬುದನ್ನು ಬಿಲ್ ನನಗೆ ನೆನಪು ಮಾಡುತ್ತಲೇ ಇದ್ದ. ಆದರೆ ಇದೇನೂ ನನಗೆ ವಾಸ್ತವದ ಸಂಗತಿಗಳನ್ನು ಸುಲಭಗೊಳಿಸಲಿಲ್ಲ.

ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿದ್ದಾಗ ನಾನು ಯೋಚಿಸತೊಡಗಿದೆ: ಶಸ್ತ್ರಚಿಕಿತ್ಸೆಯಿಂದ ನಾನು ಬದುಕಿ ಹೊರಬರುವೆನೇ? ಅಕಸ್ಮಾತ್ ಬದುಕಿ ಬಂದರೂ ನಾನು ಮತ್ತೆ ಮಾಮೂಲಿ ಜೀವನವನ್ನು ನಡೆಸಲು ಸಮರ್ಥಳಾಗುವೆನೇ? ನಂತರ ನಾನು ನೋಡಲು ಹೇಗೆ ಕಾಣಿಸಬಹುದು? ಎಷ್ಟು ಕುರೂಪವಾಗಿರಬಹುದು ನಾನು? ತಮ್ಮ ಪತ್ನಿಯರು ಇಂತಹ ತೀಕ್ಷ್ಣವಾದ ಶಸ್ತ್ರಕ್ರಿಯೆಗೆ ಒಳಗಾದಾಗ, ಅವರ ಗಂಡಂದಿರು ಹೇಗೆ ಪ್ರತಿಕ್ರಿಯಿಸುತ್ತಾರೆ? ಶಸ್ತ್ರಚಿಕಿತ್ಸೆಯ ಬಹುತೇಕ ತೊಡಕುಗಳನ್ನು, ಅದರ ಎಲ್ಲ ಅರ್ಥಗಳನ್ನು Mr. H ನನಗೆ ವಿವರಿಸಲು ನಿಜವಾಗಿಯೂ ಪ್ರಯತ್ನಿಸಿದ್ದರಾದರೂ, ಆ ಸಮಯದಲ್ಲಿ ನಾನು ವಿಪರೀತ ಭಾವಪರವಶಳಾಗಿದ್ದೆನಾಗಿ ಅದನ್ನೆಲ್ಲಾ ಗ್ರಹಿಸಿಕೊಳ್ಳಲು ತೀರಾ ದಿಗ್ಭ್ರಾಂತಳಾಗಿದ್ದೆ. ಒಂದು ಸ್ತರದಲ್ಲಿ, ನಾನು ಶಸ್ತ್ರಚಿಕಿತ್ಸೆಯ ಅವಧಿಯಲ್ಲಿ ಅಥವಾ ಚಿಕಿತ್ಸೆ ಮುಗಿದ ಸ್ವಲ್ಪ ಸಮಯದ ನಂತರ ಸತ್ತುಹೋಗುತ್ತೇನೆಂದು ನನಗೆ ನಾನೇ ಮನದಟ್ಟು ಮಾಡಿಕೊಂಡಿದ್ದೆ. ಮತ್ತು ಮತ್ತೊಂದು ಸ್ತರದಲ್ಲಿ ಎಲ್ಲವೂ ಒಳ್ಳೆಯದಾಗುವುದು, ಎಂದು ತೀವ್ರವಾದ ಭರವಸೆಯಿಂದಿದ್ದೆ. ನನ್ನ ಶರೀರ ಕೈಕೊಡದೇ ಇದ್ದಲ್ಲಿ, ನಾನು ಖಂಡಿತ ಮತ್ತೆ ಜೀವನಕ್ಕೆ, ನನ್ನ ಕಾರ್ಯಕ್ಷೇತ್ರಕ್ಕೆ ಹಿಂದಿರುಗುವೆನೆಂದು ದೃಢ ನಿಶ್ಚಯ ಮಾಡಿದ್ದೆ. ಎಷ್ಟೆಲ್ಲಾ ಸಂಕಷ್ಟಗಳನ್ನು ಹಾದುಬಂದಿರುವ ನಾನು ಅವೆಲ್ಲವೂ ಇಲ್ಲಿಗೇ ಮುಕ್ತಾಯವಾಗಲು ಬಿಡಲಾರೆ ಎಂದು ನನ್ನಲ್ಲಿಯೇ ನಾನು ತರ್ಕ ಮಾಡಿ, ವಾಗ್ವಾದ ಮಾಡುತ್ತಿದ್ದೆ. ನಾಜಿಗಳ ಚಿತ್ರಹಿಂಸೆ, ನನ್ನ ಅಪಘಾತ, ಮೊದಲ ಮದುವೆ, ನನ್ನನ್ನು ಕೈಬಿಟ್ಟು ಮೋಸಮಾಡಿದವರು, ಗರ್ಭಪಾತಗಳು ಮತ್ತು ಇವೆಲ್ಲವನ್ನೂ ಬಂಧಿಸಿರುವ ಅನೇಕ ಸಂತೋಷದ ಸಮಯಗಳು ಇವೆಲ್ಲವನ್ನೂ ನನ್ನ ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡೆ. ಶಸ್ತ್ರಚಿಕಿತ್ಸೆಯ ನಂತರ ನಾನು ಬದುಕು ಮುಂದುವರೆಸುತ್ತೇನೆ ಎಂದು ನನಗೆ ನಾನು ಭರವಸೆ ಕೊಟ್ಟುಕೊಳ್ಳಲು ಪ್ರಯತ್ನಿಸಿದೆ. ಆದರೆ, ಅದೇ ಸಮಯದಲ್ಲಿಯೇ, ಒಂದೇ ಸಮನೆ ಕಿರಿಕಿರಿಯನ್ನುಂಟುಮಾಡುವ ಧ್ವನಿಯೊಂದು ಒಳಗಿನಿಂದ ಒತ್ತಿ ಒತ್ತಿ ಹೇಳುತ್ತಿತ್ತು. "ಇನ್ನು ನಿನ್ನ ಸಮಯ ಮುಗಿದಿದೆ" ಎಂದು; ಹಾಗಾಗಿ ನನ್ನೊಡನೆಯೇ ನಾನು ವಾದ ಮಾಡುವುದನ್ನು ಮುಂದುವರೆಸಿದೆ.

ನನ್ನ ಜೊತೆಯಲ್ಲಿ ನಾನು ನನ್ನ ಹ್ಯಾಂಡ್ ಡಿಕ್ಟಾಫೋನನ್ನು ತಂದಿದ್ದೆ (ರಿಕಾರ್ಡ್ ಮಾಡಿಕೊಳ್ಳುವ ಹಾಗೂ ನಂತರ ಟೈಪು ಮಾಡಲು, ಉಕ್ತ ಲೇಖನ ಹೇಳುವ ಯಂತ್ರ). ಮಿಷೆಲೆಯನ್ನು ದತ್ತು ತೆಗೆದುಕೊಂಡ ಬಗೆಗೆ ಅವಳಿಗೆ ತಿಳಿಸಿ ಒಂದು ಸಂದೇಶವನ್ನು ಕಳಿಸಬೇಕೆಂದು ನಾನು ನಿರ್ಧರಿಸಿದ್ದೆ. ನಾನು ಬದುಕುಳಿಯಲು ಹೆಚ್ಚು ಸಮಯವಿಲ್ಲವೆಂಬ ನಿಶ್ಚಯದಿಂದಾಗಿ, ಈ ದತ್ತಕದ ಸುದ್ದಿಯನ್ನು ಮಿಷೆಲ್ಲೆಗೆ ತಿಳಿಸುವ ಹೆಚ್ಚುವರಿ ಜವಾಬ್ದಾರಿಯಿಂದ ಬಿಲ್‌ನನ್ನು ಬಿಡುಗಡೆ ಮಾಡಬೇಕೆಂದು ಬಯಸಿದೆ. ಆಗ ಮಿಷೆಲ್ಲೆ ೧೭ ವರ್ಷದವಳಾಗಿದ್ದಳು ಮತ್ತು ಈ ಆಘಾತವನ್ನು ಕಡಿಮೆ ಮಾಡಲು ನಾನು ಕೂಡ ಹತ್ತಿರವಿರುವುದಿಲ್ಲವೆಂದುಕೊಂಡೆ. ನಾನು ದೈಹಿಕವಾಗಿ ಅಲ್ಲಿದ್ದು, ನನಗೆ ಹೇಗನಿಸುತ್ತಿತ್ತು ಎಂದು ಹೇಳಲು ಸಾಧ್ಯವಾಗದಿದ್ದರೂ, ಕಡೆಯ ಪಕ್ಷ ಅವಳು ನನ್ನ ಧ್ವನಿಯನ್ನಾದರೂ ಕೇಳುವಳು ಎಂದು ತರ್ಕಬದ್ಧವಾಗಿ ಆಲೋಚಿಸಿದೆ. ನನ್ನನ್ನು ಸಮಾಧಿ ಮಾಡಿದ ನಂತರ ನನ್ನ ಧ್ವನಿಯನ್ನು ಕೇಳಲು ಬಿಲ್ ಮತ್ತು ಮಿಷೆಲ್ಲೆಗೆ ಎಷ್ಟು ನಿಗೂಢ, ವಿಲಕ್ಷಣ ಎನ್ನಿಸಬಹುದು ಮತ್ತು ಅವರು ಎಷ್ಟು ಭಯಭೀತರಾಗಬಹುದು ಎಂದು ನಾನು ಕಲ್ಪಿಸಿಕೊಂಡೆ ಮತ್ತು ನಾನು ಆ ಜೀವನದ ಒಂದು ಭಾಗವಾಗಿ ಇರದಿದ್ದರೂ, ಜೀವನವು ಅವರ ಪಾಲಿಗೆ ಹೇಗೆ ಮುಂದುವರೆಯುವುದು ಎಷ್ಟು ವಿಚಿತ್ರ ಎಂದು ಆಲೋಚಿಸುತ್ತಿದ್ದೆ. ನಾನು ರಿಕಾರ್ಡ್ ಮಾಡುವ ಗುಂಡಿಯನ್ನು ಒತ್ತಿದೆ ಮತ್ತು ಮೈಕ್ರೋಫೋನಿನಲ್ಲಿ ಮಾತನಾಡತೊಡಗಿದೆ. ನನ್ನ ಶಬ್ದಗಳನ್ನು ಸರಿಯಾಗಿ ಜೋಡಿಸಲು ಪ್ರಯತ್ನಿಸುವಾಗ, ಕಣ್ಣೀರನ್ನು ತಡೆಹಿಡಿಯಲು ನಾನು ಮಾತುಗಳನ್ನು ನಿಲ್ಲಿಸಬೇಕಾಗುತ್ತಿತ್ತು:

ಡಾರ್ಲಿಂಗ್ ಮಿಷೆಲ್ಲೆ,

ನೀನು ಈ ಧ್ವನಿಮುದ್ರಣವನ್ನು ಎಂದಾದರೂ ಕೇಳಬೇಕಾಗಬಹುದೋ ಏನೋ ನನಗೆ ತಿಳಿದಿಲ್ಲ. ಇಷ್ಟು ವರ್ಷಗಳಲ್ಲಿ ನಿನ್ನಿಂದ ನಾವು ಮುಚ್ಚಿಟ್ಟಿರುವ ಪ್ರಾಮಾಣಿಕ ಸತ್ಯವನ್ನು ನನ್ನ ತೊಡೆಯ ಮೇಲೆ ನಿನ್ನನ್ನು ಕೂಡಿಸಿಕೊಂಡು ಹೇಳುವುದನ್ನು ನಾನು ಹೆಚ್ಚು ಇಷ್ಟಪಡುತ್ತೇನೆ. ನಿನ್ನನ್ನು ದತ್ತು ತೆಗೆದುಕೊಂಡಿದ್ದೆವೆಂದು ನಿನಗೆ ಹೇಳದೇ ಇರುವುದರಲ್ಲಿ ನಾವು ನಿನಗೆ ಅನ್ಯಾಯ ಮಾಡುತ್ತೇವೆ ಎಂದು ನೀನು ಯೋಚಿಸುವೆ ಎಂದು ನನಗೆ ತಿಳಿದಿದೆ. ಆದರೆ, ನನ್ನನ್ನು ನಂಬು ಮಗು, ನಾವು ನಿನ್ನನ್ನು ಅಷ್ಟೊಂದು ಹೆಚ್ಚಾಗಿ ಪ್ರೀತಿಸುತ್ತಿದ್ದುದರಿಂದಾಗಿ ಮತ್ತು ನಿನ್ನನ್ನು ನಮ್ಮ ಮೊದಲು ಹುಟ್ಟಿದ, ನಮ್ಮ ಮೊದಲ ಮಗು ಎಂದೇ ಭಾವಿಸಿದ್ದರಿಂದಾಗಿ ಈ ವಿಷಯವನ್ನು ಈಗಾಗಲೇ ನಿನಗೆ ಹೇಳಿರಲಿಲ್ಲ. ನೀನು ನಮಗೆ ಅತ್ಯಂತ ಹೆಚ್ಚಿನ ಸಂತೋಷವನ್ನು ತಂದುಕೊಟ್ಟಿದ್ದೀ, ಹಾಗಾಗಿ ನಮ್ಮ ದೈಹಿಕ, ಜೈವಿಕ ಮಗುವಾಗಿರುವ ಡೆಬ್ಬಿಗೂ ನಿನಗೂ ನಡುವೆ ಯಾವುದೇ ರೀತಿಯಲ್ಲಿ ಭೇದ

ಭಾವ ಮಾಡಲು ಇಷ್ಟಪಡಲಿಲ್ಲ. ವಿಶೇಷವಾಗಿ ನಾನು ಮತ್ತು ಅಪ್ಪ ಇಬ್ಬರಿಗು, ಸೋದರಿಯರ ನಡುವೆ ಸಾಮಾನ್ಯವಾಗಿ ಕಂಡುಬರುವ ಪೈಪೋಟಿ ಮತ್ತು ಅಸೂಯೆಗಳ ಸಂಪೂರ್ಣ ಅರಿವಿತ್ತಾಗಿ ನಾವು ಅದಕ್ಕೆ ಅವಕಾಶ ಕೊಡಲಿಲ್ಲ. ನಾವೇನಾದರೂ ನಿನಗೆ ಮೊದಲೇ ಹೇಳಿದ್ದಿದ್ದರೆ ಯಾವುದೇ ಒಂದು ಸಣ್ಣ ಕುರುಹನ್ನು ನೀನು, ನಾವು ಡೆಬ್ಬಿಯನ್ನು ಹೆಚ್ಚು ಇಷ್ಟಪಡುತ್ತೇವೆ ಎಂದು ಆರೋಪಿಸಿಬಿಡಬಹುದಾಗಿತ್ತು ಎಂದು ನಾವು ಹೆದರಿದೆವು. ಅದೂ ಕೇವಲ ನೀನು ದತ್ತು ತೆಗೆದುಕೊಂಡವಳು ಮತ್ತು ಅವಳು ನಮ್ಮ ಸ್ವಂತ ಮಗಳಾಗಿದ್ದಳೂ ಎಂದು ನೀನು ಭಾವಿಸಬಹುದಾಗಿತ್ತು.

ಈಗ ನೀನು ಸಾಕಷ್ಟು ಪರಿಪಕ್ವತೆಯನ್ನು ಪಡೆದಿದ್ದು, ನಿನ್ನನ್ನು ದತ್ತು ತೆಗೆದು ಕೊಂಡಿದ್ದೆವೆಂದು, ನಮ್ಮ ಜೀವನದಲ್ಲಿ ಎಂದಿಗೂ, ಎಂದೆಂದಿಗೂ ಡೆಬ್ಬಿ ಮತ್ತು ನಿನ್ನ ನಡುವೆ ಭೇದ ಮಾಡಲಿಲ್ಲವೆಂಬುದ್ನು ಅರಿಯುತ್ತೀ, ಅರಿತು ಮೆಚ್ಚುತ್ತಿ ಮತ್ತು ನಿರ್ಧರಿಸುತ್ತೀ ಎಂದು ನಾನು ಭರವಸೆ ಹೊಂದಿದ್ದೇನೆ. ಇದಕ್ಕೆ ಸಂಪೂರ್ಣ ವಿರುದ್ಧವಾಗಿ ಎನಿಸಿದರೂ, ಒಂದು ದೃಷ್ಟಿಯಲ್ಲಿ, ಇದು ವಿಚಿತ್ರ ಎನಿಸಬಹುದಾದರೂ, ನೀನು ನನಗೆ ಬಹಳ ಬೇಕಾದವಳಾಗಿದ್ದೀ ಹಾಗೆಯೇ ಅಪ್ಪನಿಗೂ ಕೂಡ ಬೇಕಾಗಿದ್ದೀ ನೀನು ಎಂದು ನಾನು ತಿಳಿದಿದ್ದೇನೆ. ಏಕೆಂದರೆ, ನಿನ್ನನ್ನು ನಾವು ಆಯ್ಕೆ ಮಾಡಿ ಕೊಂಡೆವು; ನೀನು ಕೇವಲ ಒಂದೆರಡು ದಿನದ ಮಗುವಾಗಿದ್ದಾಗ ನಮ್ಮಲ್ಲಿಗೆ ಬಂದೆ. ನಾವು ನಮ್ಮ ಅದೃಷ್ಟ ಮತ್ತು ದೈವಾನುಗ್ರಹವನ್ನು ಪರಿಭಾವಿಸಿದೆವು. ಏಕೆಂದರೆ ನಾವು ಒಂದು ಯೆಹೂದಿ ಮಗುವನ್ನೇ ದತ್ತು ತೆಗೆದುಕೊಳ್ಳಬೇಕೆಂದು ಬಯಸಿದ್ದೆವು ಮತ್ತು ಯೆಹೂದಿ ಮಗುವು ದತ್ತಕಕ್ಕೆ ಸಿಗುವುದು ಬಹಳ ಕಷ್ಟಕರವಾಗಿತ್ತು. ಆದರೆ, ನಾವು ಬಹಳ ಅದೃಷ್ಟಶಾಲಿಗಳಾಗಿದ್ದೆವು. ಬೆಕ್ಕಿ ಆಂಟಿಯ ಸೋದರ, ಜಾಕ್ ಅಂಕಲ್, ನಮ್ಮ ವೈದ್ಯ ಸ್ನೇಹಿತ, ನಾವು ಒಂದು ಮಗುವನ್ನು ದತ್ತು ತೆಗೆದುಕೊಳ್ಳಲು ನಿರ್ಧರಿಸುವುದನ್ನು ತಿಳಿದು, ಒಂದು ದಿನ ದೂರವಾಣಿಯ ಮೂಲಕ ಕರೆ ಮಾಡಿದ. ಪದವಿಪೂರ್ವ ಶಿಕ್ಷಣ ಪಡೆಯುತ್ತಿದ್ದ ಯೆಹೂದಿ ಯುವತಿಯೊಬ್ಬಳು ಗರ್ಭಿಣಿಯಾಗಿದ್ದು, ತನ್ನ ದವಾಖಾನೆಗೆ ಬಂದಿರುವುದಾಗಿ ತಿಳಿಸಿದ. ಅವಳ ಮಗುವಿನ ತಂದೆ ಒಬ್ಬ ಯುವ ಯೆಹೂದಿ ವಕೀಲನಾಗಿದ್ದ. ಹುಡುಗಿಯ ತಂದೆತಾಯಿಗಳು, ಅವಳ ಮಗುವನ್ನು ಯಾರಾದರೂ ಯೆಹೂದಿ ದಂಪತಿಯೇ ದತ್ತು ತೆಗೆದುಕೊಳ್ಳಬೇಕೆಂದು ತೀವ್ರ ಆಸಕ್ತಿ ಹೊಂದಿದ್ದರು. ಹಾಗಾಗಿ ಇವೆಲ್ಲವು ನಮ್ಮ ಪ್ರಾರ್ಥನೆಗಳಿಗೆ ಉತ್ತರವೆನಿಸಿತು. ನಾವು ಎಂದೂ ನಿನ್ನ ಜೈವಿಕ ತಾಯಿಯ ಪರಿಚಯ ಹೊಂದಿರಲಿಲ್ಲ. ಹಾಗೆಯೇ ನಿನ್ನ ನಿಜವಾದ ತಂದೆಯೂ ನಮಗೆ ಗೊತ್ತಿರಲಿಲ್ಲ. ಆದರೆ, ನಮ್ಮ ಮನಸ್ಸುಗಳಲ್ಲಿ ನಾವೇ ನಿನ್ನ ತಂದೆತಾಯಿ ಎಂದು ನಮ್ಮನ್ನು ಭಾವಿಸಿಕೊಂಡಿದ್ದೇವೆ. ನಾನು ಅನೇಕ ಬಾರಿ ನಿನಗೆ ಹೇಳುತ್ತಿದ್ದಂತೆ

ನೀನು ಒಂದು ಅದ್ಭುತವಾದ ಮಗುವಾಗಿದ್ದೆ. ನೀನು ಕೇವಲ ನೋಡಲು ಚೆಲುವಾಗಿದ್ದುದು ಮಾತ್ರವಲ್ಲ, ಬಹಳ ಉತ್ತಮವಾದ ಸ್ವಭಾವವನ್ನೂ ಪಡೆದಿದ್ದೆ. ನೀನು ನಮ್ಮ ಹೆಮ್ಮೆ ಮತ್ತು ಸಂತೋಷವಾಗಿದ್ದೆ. ನಮ್ಮ ಎಲ್ಲ ಸ್ನೇಹಿತರೆದುರಿಗೆ ನಿನ್ನನ್ನು ನಾವು ತೋರಿಸಬಹುದಾಗಿತ್ತು...

ನೀನು ಅನೇಕ ಬಾರಿ, ನಾನು ನಿನಗೆ ಜನ್ಮಕೊಟ್ಟ ಸಮಯದ ಬಗೆಗೆ ಏನು ನೆನಪಿನಲ್ಲಿದೆ ಎಂದು ನನ್ನನ್ನು ಪ್ರಶ್ನಿಸಿದ್ದೀಯ. ನೀನು ಬುದ್ಧಿವಂತಳು, ಚುರುಕು ಮತ್ತು ಸೂಕ್ಷ್ಮ ಬುದ್ಧಿಯವಳೂ ಆದುದರಿಂದ ನಾನು ಸುಮ್ಮನೆ ಈ ವಿಷಯವನ್ನು ಮುಂದೂಡುತ್ತಿದ್ದೇನೆ ಎಂದು ನೀನು ಅರ್ಥಮಾಡಿಕೊಂಡಿದ್ದೆ ಎಂದು ನಾನು ಅರಿತಿದ್ದೆ. ನಿನಗೆ ಸುಳ್ಳು ಹೇಳುವುದು ನನಗೆ ಇಷ್ಟವಿರಲಿಲ್ಲ. ಜೊತೆಗೆ, ಆ ಸಮಯದಲ್ಲಿ ನಾನು ನಿಜವನ್ನು ನಿನಗೆ ತಿಳಿಸಲಾರೆ ಎಂದೂ ನನಗನ್ನಿಸಿತು. ವಿಶೇಷವಾಗಿ, ನಾನು ಆಸ್ಪತ್ರೆಗೆ ಹೋಗುವ ಹಿಂದಿನ ರಾತ್ರಿ, ನಿನಗೆ ನೆನಪಿರಬಹುದು, ನೀನು ಹುಟ್ಟುವ ಮುಂಚೆ ನನಗೆ ಕೊಟ್ಟಿದ್ದ ಅರಿವಳಿಕೆಯ ಬಗೆಗೆ ಪ್ರಶ್ನಿಸಿದ್ದೆ ಮತ್ತು ನಾನು ನಿನ್ನನ್ನು ನೋಡಿದ ಪ್ರಥಮ ಕ್ಷಣ ಯಾವುದೆಂದೂ ಪ್ರಶ್ನಿಸಿದ್ದೆ. ಮತ್ತು ಆಗಲೂ ಕೂಡ ಮತ್ತೆ ನನ್ನ ಉತ್ತರಗಳು, ಕೇವಲ ನುಣುಚಿಕೊಳ್ಳುವಂತಹವಾಗಿದ್ದವು. ಆ ಸಮಯದಲ್ಲಿ ಅದು ನಿನಗೂ ಅರ್ಥವಾಗಿತ್ತೆಂದು ನಾನು ಅಂದುಕೊಂಡೆ. ಆ ಕ್ಷಣದಲ್ಲಾದರೂ ಸತ್ಯವನ್ನು ನಿನಗೆ ಹೇಳಿಬಿಡಬೇಕೆಂದು ನಾನು ಬಹುವಾಗಿ ಬಯಸಿದೆ. ಏಕೆಂದರೆ, ನಾನು ಇದನ್ನು ಹೇಳದೇ ಆಸ್ಪತ್ರೆಗೆ ಹೋಗಲು ಇಷ್ಟಪಡಲಿಲ್ಲ ಮತ್ತು ಬಹುಶಃ ನಾನು ಆಸ್ಪತ್ರೆಯಿಂದ ಎಂದಿಗೂ ಆಚೆ ಬಾರದಿರಬಹುದು ಮತ್ತು ನಿನ್ನನ್ನು ದತ್ತು ತೆಗೆದುಕೊಂಡಿರುವ ಸತ್ಯಸಂಗತಿಯನ್ನು ನಿನಗೆ ತಿಳಿಸುವ ಕಷ್ಟದ ಕೆಲಸವನ್ನು ಅಪ್ಪನಿಗೆ ಬಿಟ್ಟು ಹೋಗಲು ನನಗೆ ಇಷ್ಟವಿರಲಿಲ್ಲ. ಆದರೂ ನಿನ್ನ ಎಳೆಯ ಮನಸ್ಸಿನ ಮೇಲೆ ಈಗಾಗಲೇ ನಾನು ಇಂತಹ ಭಾರದ ಹೊರೆಯನ್ನು ಹೊರಿಸುತ್ತಿದ್ದೇನೆ ಎಂಬುದನ್ನು ನಾನು ಅರಿತುಕೊಂಡೆ. ಹಾಗೂ ಅದನ್ನು ಮತ್ತಷ್ಟು ಕಷ್ಟಕರವನ್ನಾಗಿ ಮಾಡುವುದು ನ್ಯಾಯವಲ್ಲ ಎನಿಸಿತು ನನಗೆ.

ನೀನು ನಮ್ಮದೇ ರಕ್ತ ಮಾಂಸದ ಮಗು ಎಂದು ನಂಬುತ್ತ ನಿನ್ನನ್ನು ಬೆಳೆಸಿದುದರಲ್ಲಿ ನಾವು ತಪ್ಪು ಮಾಡಿದೆವೆಂದು ನೀನು ಭಾವಿಸುವುದಾದರೆ, ದಯವಿಟ್ಟು ನಮ್ಮನ್ನು ಕ್ಷಮಿಸು. ಆದರೆ, ನನ್ನನ್ನು ನಂಬು, ನಮಗೆ ಸಂಬಂಧಿಸಿದಂತೆ, ಎಂದಿಗೂ ಒಂದು ಸ್ವಲ್ಪವೂ ಮತ್ತು ಮುಂದೆ ಎಂದೂ ಕೂಡ ಸ್ವಲ್ಪವೂ ವ್ಯತ್ಯಾಸ, ದತ್ತು ಪುತ್ರಿಯಾದ ನಿನಗೂ ಮತ್ತು ನನ್ನ ಗರ್ಭದಿಂದ ಜನಿಸಿ ಬಂದ ಡೆಟ್ಟಿಗೂ ಇರುವುದಿಲ್ಲ. ನಿನ್ನನ್ನು ಪಡೆಯುವುದರಲ್ಲಿ ಮತ್ತು ಸಾಕುವುದರಲ್ಲಿ ನಿನ್ನ ತಂದೆಗೆ ಅದೆಷ್ಟು ಸಂತೋಷ ತೃಪ್ತಿಗಳಿವೆ ಮತ್ತು ನನಗೂ ಕೂಡ ಎಂಬುದನ್ನು ನೀನು ಎಂದಾದರೂ ಮೆಚ್ಚುವೆಯೆಂದು ನಾನು ಯೋಚಿಸಿಲ್ಲ. ಒಂದು ಹೆಣ್ಣಿಗೆ ಮಗುವನ್ನು ಪಡೆಯುವುದು

ಬಹಳ ಮುಖ್ಯವಾದದ್ದು; ಬಹುಶಃ ಪುರುಷನಿಗಿಂತಲೂ, ಹೆಣ್ಣಿಗೆ ಅದು ಮತ್ತೂ ಮುಖ್ಯವಾದದ್ದು. ನಾನು ಎಷ್ಟೆಲ್ಲಾ ಗರ್ಭಪಾತಗಳಿಗೊಳಗಾಗಿದ್ದೆ ಮತ್ತು ಒಂದು ಹೆಣ್ಣಾಗಿ ನಾನು ಸಂಪೂರ್ಣವಾಗಿ ವಿಫಲಳಾಗಿದ್ದೇನೆ ಎಂದು ಭಾವಿಸಿದೆ. ವಿಶೇಷವಾಗಿ, ನಿನ್ನ ಅಪ್ಪ ಮಕ್ಕಳನ್ನು ಬಯಸುತ್ತಿದ್ದರು ಎಂದು ನಾನು ತಿಳಿದಿದ್ದೆ. ಅವರು ಬಯಸಿದಂತಹ ಮಗುವನ್ನು ಅವರಿಗೆ ನೀಡಲು ನಾನು ತೀವ್ರವಾಗಿ ಪ್ರಯತ್ನಿಸುತ್ತಿದ್ದೆ. ನೀನು ಬಂದಾಗ, ಅದೂ ನೀನು ಸಂಪೂರ್ಣವಾಗಿ ಯೆಹೂದಿಯೇ ಆಗಿದ್ದಾಗ, ನಮ್ಮ ಅದೃಷ್ಟವನ್ನು ನಮಗೇ ನಂಬಲು ಸಾಧ್ಯವಾಗಲಿಲ್ಲ. ಅಲ್ಲದೆ, ನೀನು ಅಂತಹ ಸುಂದರವಾದ ಪುಟ್ಟ ಹುಡುಗಿಯಾಗಿ ಬೆಳೆಯುತ್ತಿರುವುದನ್ನು ಮತ್ತು ಈಗ ಇಂತಹ ಸುಂದರ, ಬುದ್ಧಿವಂತ ಮತ್ತು ದೈವದತ್ತವಾದ ಸಹಜ ಸಾಮರ್ಥ್ಯ ಪ್ರತಿಭೆಗಳನ್ನು ಪಡೆದಿರುವ ಯುವತಿಯಾಗಿ ಬೆಳೆದಿರುವುದನ್ನು ನೋಡಿದಾಗ, ನಮ್ಮಂತಹ ಅದೃಷ್ಟವಂತರು ಇನ್ನಿಲ್ಲ ಎಂದುಕೊಂಡೆವು. ನನ್ನ ಅವಶ್ಯಕತೆಯುಂಟಾದಾಗ ನಿನಗೆ ಮಾರ್ಗದರ್ಶನ ಮಾಡಲು, ನೆರವು ನೀಡಲು, ಇನ್ನೂ ಅನೇಕ ವರ್ಷಗಳು ನಾನು ಇರುತ್ತೇನೆಯೇ ಎನ್ನುವುದನ್ನು ಖಚಿತವಾಗಿ ತಿಳಿಯಬಯಸುತ್ತೇನೆ ನಾನು. ಆದರೆ, ಈಗ ಸದ್ಯದಲ್ಲಿ ವಿಷಯ ಅಷ್ಟೊಂದು ಆಶಾದಾಯಕವಾಗಿ ಕಾಣಿಸುತ್ತಿಲ್ಲ. ಆದ್ದರಿಂದ ನನ್ನ ಮುದ್ದು ಮಗುವೇ ನಾನು ನಿನಗೆ ಸಲಹೆ ನೀಡಲು, ನೆರವು ನೀಡಲು, ನಿನ್ನ ಬಳಿ ಇಲ್ಲದೇ ಹೋದಲ್ಲಿ, ನೀನು ಯಾವಾಗಲೂ ನಿನ್ನ ಅಪ್ಪನ ಮಾತಿಗೆ ಕಿವಿಗೊಟ್ಟು ಕೇಳು ಮತ್ತು ಓಟ್ಟೊ ಅಂಕಲ್‌ಗೆ ಪತ್ರ ಬರಿ ಅಥವಾ ಅವನೊಡನೆ ಮಾತನಾಡು. ಇಲ್ಲ, ಅವನ ಸಲಹೆಯನ್ನು ಕೇಳಲು ಆಸ್ಟ್ರೇಲಿಯಾಕ್ಕೆ ಹೋಗಿ ಭೇಟಿ ನೀಡು. ಅಲ್ಲದೇ, ನಿನ್ನ ಮತ್ತು ನಿನ್ನ ತಂಗಿಯ ನಡುವೆ ಈಗಾಗಲೇ ಇರುವ ಬಾಂಧವ್ಯ ನೀವು ದೊಡ್ಡವರಾದಂತೆಲ್ಲಾ ಮತ್ತಷ್ಟು ಶಕ್ತವಾಗುತ್ತದೆ ಎಂದು ನಾನು ಹೆಚ್ಚು ಭರವಸೆ ತಾಳುತ್ತೇನೆ. ಕೌಟುಂಬಿಕ ಬಂಧನಗಳು ಅತ್ಯಂತ ಮುಖ್ಯವಾದದ್ದು ಮತ್ತು ನೀನು ತೀರಾ ಅನ್ಯೋನ್ಯವಾಗಿ ಹೆಣೆದುಕೊಂಡಿರುವ ಒಂದು ಕುಟುಂಬದ ಸದಸ್ಯೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡು.

ನಾನು ಇಲ್ಲಿ ಹಾಸಿಗೆಯಲ್ಲಿ ಮಲಗಿಕೊಂಡು, ಈ ತೀರಾ ಅವೈಯಕ್ತಿಕ ವೆನಿಸುವ ಡಿಕ್ಟಾಫೋನಿನಲ್ಲಿ ಮಾತನಾಡುತ್ತಿರಬಾರದಿತ್ತೆಂದು ನಾನು ಎಷ್ಟೊಂದು ಆಶಿಸುತ್ತೇನೆ. ನಾನು ನಿನ್ನನ್ನು ತೊಡೆಯ ಮೇಲೆ ಕೂರಿಸಿಕೊಂಡು ಅಥವಾ ನೀನೀಗ ಇಷ್ಟೊಂದು ದೊಡ್ಡವಳಾಗಿ ಬೆಳೆದಿರುವುದರಿಂದ ನಿನ್ನ ತೊಡೆಯ ಮೇಲೆ ನಾನು ಕುಳಿತುಕೊಂಡು, ಇಬ್ಬರೂ ಪರಸ್ಪರ ತಬ್ಬಿಕೊಂಡು, ಮುಖಾಮುಖಿಯಾಗಿ ನಾನು ಇದನ್ನೆಲ್ಲಾ ಹೇಳುವುದನ್ನು ಹೆಚ್ಚು ಇಷ್ಟಪಡುತ್ತೇನೆ. ನಿನ್ನ ದತ್ತಕದ ಸುದ್ದಿಯನ್ನು ಅರಗಿಸಿಕೊಳ್ಳುವುದು ನಿನಗೆ ಕಷ್ಟವಾಗುತ್ತದೆಂದು ನನಗೆ ತಿಳಿದಿದೆ. ಅಲ್ಲದೇ, ಇಂತಹ ಭಯಂಕರ ಕಾಯಿಲೆಯಿಂದ ನಾನು ನರಳುತ್ತಿದ್ದೇನೆಂದು

ಒಪ್ಪಿಕೊಳ್ಳುವುದು ನನಗೆ ಎಷ್ಟು ಕಷ್ಟವಾಯಿತೆಂಬುದು ನನಗೆ ಚೆನ್ನಾಗಿ ತಿಳಿದಿದೆ. ನೀನು ದತ್ತು ಪಡೆದವಳು ಎಂದು ತಿಳಿದುಕೊಳ್ಳುವುದು, ನಿಜಕ್ಕೂ ಬೇರೆಯೇ ಸಂಗತಿ. ಆದರೂ ಇದು ನಿನ್ನನ್ನು ಹೆಚ್ಚು ಗಾಸಿಗೊಳಿಸುವುದು ಎಂದು ನಾನು ನಿರೀಕ್ಷಿಸುತ್ತೇನೆ.

ಈ ಹೊಡೆತದ ತೀಕ್ಷ್ಣತೆಯನ್ನು ಸ್ವಲ್ಪ ಕಡಿಮೆ ಮಾಡಲು, ನಾನು ಅಲ್ಲಿರಲು ಸಾಧ್ಯವಾದರೆ ಎಂದು ನಾನು ಬಯಸುತ್ತೇನೆ. ನಾನು ದೇವರನ್ನು ನಂಬಿ, ನನ್ನ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಲಿ ಎಂದು ಪ್ರಾರ್ಥಿಸಲು ಸಾಧ್ಯವಾದರೆ ಮತ್ತು ನೀನು ಎಂದೂ ಈ ಧ್ವನಿ ಮುದ್ರಣವನ್ನು ಕೇಳಬೇಕಾಗದೇ ಅದಕ್ಕೆ ಪ್ರತಿಯಾಗಿ ಎಲ್ಲವನ್ನೂ ನಾನೇ ನಿನಗೆ ಮುಖತಃ ಹೇಳಲು ಸಾಧ್ಯವಾದರೆ ಎಂದುಕೊಳ್ಳುತ್ತೇನೆ. ನನ್ನನ್ನು ಕುರಿತಂತೆ, ಸಂಗತಿಗಳು ತಪ್ಪಿನಡೆದರೆ– ನನ್ನ ಜೀವನದ ಈ ಸಂದರ್ಭದಲ್ಲಿ ನಾನು ಅಕ್ಷರಶಃ ಸಾವಿನ ಬಾಗಿಲಿನಲ್ಲಿ ನಿಂತಿರುವಾಗ, ಯಾವ ವಿಷಯದ ಬಗೆಗೂ ಹಗುರಾಗಿ ಮಾತನಾಡುವುದಿಲ್ಲ ಯಾರೂ ಕೂಡ ಎಂಬುದನ್ನು ನೀನು ಅರಿತಿರುತ್ತೀ ಎಂದು ನಾನು ಅಂದುಕೊಂಡಿದ್ದೇನೆ– ನಾನು ನಿನ್ನನ್ನು ನನ್ನ ತೋಳುಗಳಲ್ಲಿ ಹಿಡಿದುಕೊಂಡ ಮೊದಲ ಕ್ಷಣದಿಂದಲೂ ನಿನ್ನನ್ನು ನನ್ನ ಹೃದಯಪೂರ್ವಕವಾಗಿ ಪ್ರೀತಿಸಿದ್ದೇನೆ ಮತ್ತು ನನ್ನ ಸಾಯುವ ಕ್ಷಣದ ತನಕ ನಿನ್ನನ್ನು ಪ್ರೀತಿಸುತ್ತೇನೆ. ನಾನೇನಾದರೂ ಈ ಶಸ್ತ್ರ ಚಿಕಿತ್ಸೆಯಿಂದ ಉಳಿದು ಬರದಿದ್ದರೆ, ಯಾವ ಹೆಣ್ಣೂ ಆಸೆಪಡುವಂತಹ ಅದ್ಭುತ ಪತಿಯಾಗಿರುವ ನಿನ್ನ ಅಪ್ಪನಿಗೆ ನಿನ್ನ ಮತ್ತು ಡೆಬ್ಬಿಯ ಬೆಂಬಲದ ಅವಶ್ಯಕತೆಯಿರುತ್ತದೆ. ದಯವಿಟ್ಟು ನೀವು ಅದನ್ನು ಅವರಿಗೆ ನೀಡಿ; ಅವರಿಗೆ ಅತ್ಯಂತ ಹೆಚ್ಚಿನ ಸಂಕಷ್ಟದ ಅವಧಿ ಎಂದು ನಾನು ತಿಳಿದುಕೊಂಡಿರುವ ಆ ಸಮಯದಲ್ಲಿ, ದಯವಿಟ್ಟು ಅವರಿಗೆ ನೀವು ನೆರವು ನೀಡಿ.

ನೀನು ದತ್ತು ಪಡೆದ ಮಗು ಎಂಬುದು ನಿಜವಾಗಿ ಡೆಬ್ಬಿಗೆ ತಿಳಿದಿಲ್ಲ. ಆದರೆ, ಅದು ಅವಳಿಗೆ ಕೇವಲ ಆಶ್ಚರ್ಯವಾಗಿ ಮಾತ್ರವಲ್ಲ, ಆಘಾತವಾಗಿಯೂ ಅವಳ ಜೀವನದಲ್ಲಿ ಪ್ರವೇಶಿಸುವುದು. ಏಕೆಂದರೆ, ನಿನಗೆ ಈ ವಿಷಯದ ಅರಿವಿಲ್ಲದಿರಬಹುದಾದರೂ ಅವಳು ಮೊದಲಿನಿಂದಲೂ, ಮತ್ತು ಈಗಲೂ ಕೂಡ ನಿನ್ನ ಬಗೆಗೆ ಅಸೂಯೆ ತಾಳಿದ್ದಾಳೆ. ಏಕೆಂದರೆ, ಅವಳು ತನ್ನ ದೃಷ್ಟಿಕೋನದಿಂದ ಆಲೋಚಿಸುತ್ತಾಳೆ. ನೀನು ಸೌಂದರ್ಯ, ಬುದ್ಧಿಶಕ್ತಿ, ಕೌಶಲ್ಯ ಎಲ್ಲವನ್ನೂ ಪಡೆದುಕೊಂಡಿದ್ದೀ ಮತ್ತು ಯಾವಾಗಲೂ ನಮ್ಮಿಂದ ಆದ್ಯತೆಯ ಪುರಸ್ಕಾರರೂಪದ ಉಪಚಾರವನ್ನು ಪಡೆಯುತ್ತಿದ್ದೀ ಮತ್ತು ತನ್ನಲ್ಲಿ ಸೌಂದರ್ಯ, ಬುದ್ಧಿಶಕ್ತಿ ಕೌಶಲ್ಯಗಳ ಕೊರತೆಯಿದೆಯೆಂದೂ ಕೂಡ ಅವಳು ತಪ್ಪಾಗಿ ಊಹಿಸುತ್ತಾಳೆ. ಅವಳನ್ನು ಅರ್ಥ ಮಾಡಿಕೊಂಡು ನಿನ್ನ ತಂಗಿಯಂತೆಯೇ ನೋಡಿಕೊಳ್ಳುವುದನ್ನು ಮುಂದುವರೆಸು ಎಂದು ನಿನ್ನನ್ನು ಕೇಳುವುದು, ನಿನ್ನಿಂದ ತೀರಾ ಹೆಚ್ಚು ಕಷ್ಟಕರ ವಾದದ್ದನ್ನು

ಅಪೇಕ್ಷಿಸಿದಂತೆ ಎಂದು ನನಗೆ ಅರಿವಿದೆ. ಏಕೆಂದರೆ, ನಿಮ್ಮಿಬ್ಬರ ನಡುವೆ ನಡೆಯುವ ಎಲ್ಲ ಜಗಳ, ಹೊಡೆದಾಟಗಳ ನಡುವೆಯೂ– ಇವೆಲ್ಲವು ಸೋದರಿಯರ ನಡುವೆ ಸಹಜವೇ ಆದರೂ– ನಿನ್ನ ತಂಗಿಯು ನಿನ್ನನ್ನು ಬಹುವಾಗಿ ಪ್ರೀತಿಸುತ್ತಾಳೆ ಮತ್ತು ಪ್ರಶಂಸಿಸುತ್ತಾಳೆ.

ನನ್ನನ್ನು ನಂಬು, ಈ ಡಿಕ್ಟಾಫೋನಿನಲ್ಲಿ ನನ್ನ ಮಾತುಗಳನ್ನು ದಾಖಲಿಸುವುದು ನನಗೆ ಸುಲಭವಾಗಿಲ್ಲ. ವಿಶೇಷವಾಗಿ, ಸ್ವಲ್ಪ ಸಮಯದೊಳಗೇ ನನ್ನನ್ನು ತಳ್ಳು ಕುರ್ಚಿಯಲ್ಲಿ ಶಸ್ತ್ರಚಿಕಿತ್ಸೆಯ ಕೊಠಡಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ನನ್ನ ಹಣೆಯಬರಹವು ನಿರ್ಧರಿಸಲ್ಪಡುತ್ತದೆ ಎಂಬುದು ನನಗೆ ತಿಳಿದಿರುವುದ ರಿಂದಾಗಿ, ಇದು ಮತ್ತಷ್ಟು ಕಷ್ಟವಾಗಿದೆ. ಅದು ಏನಾದರೂ ಆಗಲಿ, ನಾನು ಬದುಕುಳಿಯುವೆನೋ, ಅಥವಾ ಸಾಯುವೆನೋ, ನನ್ನ ಮಟ್ಟಿಗೆ ಹೇಳುವುದಾದರೆ, ನೀನು ನನ್ನ ಮಗಳು ಮತ್ತು ಹರ್ಷ ತುಂಬಿದ ಮಗುವಾಗಿದ್ದ ಆ ಪುಟ್ಟ ಹುಡುಗಿಯನ್ನು ನಾನು ಹೃದಯಪೂರ್ವಕ ಪ್ರೀತಿಸುತ್ತೇನೆ ಮತ್ತು ಆ ಹುಡುಗಿಯು ಸುಂದರವಾದ ಯುವತಿಯಾಗಿ ಬೆಳೆದುದನ್ನು ನೋಡಲು ನಾನು ಸಾಕಷ್ಟು ಅದೃಷ್ಟಶಾಲಿಯಾಗಿದ್ದೆ ಎನ್ನುವುದನ್ನು ನೀನು ನಂಬಲೇಬೇಕು. ನನ್ನ ಪ್ರೀತಿಯು ಯಾವಾಗಲೂ ನಿನ್ನೊಡನೆ ಇರುತ್ತದೆ. ದಯವಿಟ್ಟು ಸಂತೋಷವಾಗಿರುವುದನ್ನು ಮುಂದುವರೆಸು. ನಿನಗಾಗಿ ನಾನು ಅಷ್ಟು ಮಾತ್ರವನ್ನೇ ಬಯಸುವುದು, ನೀನು ಯಾವಾಗಲೂ ನನ್ನನ್ನು ನಿನ್ನ ಅಮ್ಮ ಎಂದೇ ನೆನಪು ಮಾಡಿಕೊಳ್ಳಬೇಕು.

ನನ್ನ ಈ ಉಕ್ತಲೇಖನದ ಮುಕ್ತಾಯಕ್ಕೆ ಬರುವ ಸ್ವಲ್ಪ ಸಮಯದ ಮುನ್ನ ನನ್ನ ವಾರ್ಡಿನ ಸಿಸ್ಟರ್ ಬಂದು ಶಸ್ತ್ರ ಚಿಕಿತ್ಸಾಪೂರ್ವದ, ಶಮಕವನ್ನು ನೀಡಿದಳು. ಮಿಷೆಲ್ಲೆಗೆ ನನ್ನ ಈ ಸಂದೇಶವನ್ನು ಮುಗಿಸಿದ ನಂತರ, ದಿಢೀರನೆ ನನ್ನ ಮನಸ್ಸಿಗೆ ಅನ್ನಿಸಿತು.: "ಇವೇ ನಾನು ನನ್ನ ಕುಟುಂಬದ ಯಾವುದೇ ಸದಸ್ಯನಿಗೆ ಹೇಳುವ ಕೊನೆಯ ಪದಗಳಾಗಿರಬಹುದು." ಅವರಿಗೆ ಹೇಳಬೇಕಾದದ್ದು ಇನ್ನೂ ಬಹಳಷ್ಟು ಇತ್ತೆಂದು ನನಗೆ ಅನ್ನಿಸಿತು. ಎಲ್ಲಕ್ಕಿಂತಲೂ ಹೆಚ್ಚಾಗಿ, ಬಿಲ್‌ನನ್ನು ನಾನು ಎಷ್ಟು ಪ್ರೀತಿಸಿದ್ದೆನೆಂದು ಅವನಿಗೆ ತಿಳಿಸಬೇಕಾಗಿತ್ತು; ಅವನಂತಹ ಮಾನಸಿಕ ಸಾಮರ್ಥ್ಯವಿರುವ ವ್ಯಕ್ತಿಯು, ನನ್ನಂತಹವಳನ್ನು ತನ್ನ ಜೀವನದ ಸಂಗಾತಿಯಾಗಿ ಆರಿಸಿಕೊಂಡಿದ್ದುದನ್ನು ನೆನೆದು ನಾನು ಈಗಲೂ ಅದೆಷ್ಟು ವಿಸ್ಮಯಪಡುತ್ತೇನೆ; ಮತ್ತು ನನ್ನ ವಿಶಿಷ್ಟ ಮಾನಸಿಕ ಪ್ರಕೃತಿಯನ್ನು ಅವನು ಸಹಿಸಿಕೊಂಡಿದ್ದುದಕ್ಕೆ ನಾನೆಷ್ಟು ಕೃತಜ್ಞಳಾಗಿದ್ದೆ ಎನ್ನುವುದನ್ನು ತಿಳಿಸಬೇಕಾಗಿತ್ತು. ಆದರೆ, ಆ ಶಮಕವು ತನ್ನ ಪ್ರಭಾವ ಬೀರತೊಡಗಿತ್ತು ಮತ್ತು ಇನ್ನೊಂದು ಸಂದೇಶಕ್ಕೆ ಸಮಯವಿಲ್ಲ ಎಂದು ತಿಳಿದೆ. ನಾನು ಏನು ಹೇಳಬೇಕೆಂದು ಬಯಸಿದ್ದೆನೋ, ಅದನ್ನು ಅವನು ತಿಳಿದುಕೊಳ್ಳುತ್ತಾನೆ ಎಂದು ಭರವಸೆಯಿಡುವಷ್ಟನ್ನು ಮಾತ್ರ ನಾನು ಮಾಡಬಹು

ದಾಗಿತ್ತು. ಈಗ ನಾನು ಅತ್ಯಂತ ವಿಷಾದದಿಂದ ತಿಳಿದುಕೊಂಡೆ. ನಾವಿಬ್ಬರೂ ಪರಸ್ಪರ ಯಾವ ಭಾವನೆಗಳನ್ನು ಹೊಂದಿದ್ದೆವೆಂದು ಮತ್ತು ಒಬ್ಬರು ಇನ್ನೊಬ್ಬರಿಗೆ ಅದೆಷ್ಟು ಬೇಕಾಗಿದ್ದೆವು ಎಂದು ನಾವು ಎಂದೂ ಒಬ್ಬರಿಗೊಬ್ಬರು ಹೇಳಿಕೊಳ್ಳಲಿಲ್ಲ. ನಮ್ಮ ಪ್ರೀತಿಯು ಕೇವಲ ತೀರಾ ಅಪರೂಪವಾಗಿ ನಮ್ಮ ನಡುವೆ ಚರ್ಚಿಸಲ್ಪಡುತ್ತಿತ್ತು. ೨೩ ವರ್ಷಗಳ ನಮ್ಮ ವೈವಾಹಿಕ ಜೀವನದಲ್ಲಿ, ನಾವು ತೀರಾ ಕೆಲವೇ ಬಾರಿ ವಾದ, ವಿವಾದಗಳನ್ನು ಮಾಡಿದ್ದೆವು. ನಮ್ಮ ಪ್ರೀತಿ, ಪರಸ್ಪರ ಪ್ರಶಂಸೆಗಳು ಸ್ಪರ್ಶಗಳ ಮೂಲಕ, ಮತ್ತು ದೃಷ್ಟಿಯ ಮೂಲಕ ಅಭಿವ್ಯಕ್ತಗೊಳ್ಳುತ್ತಿದ್ದವು ಮತ್ತು ನನಗೇನನ್ನಿಸಿತು ಎಂದು ಬಿಲ್‌ಗೆ ತಿಳಿಸುವ ಅವಕಾಶಕ್ಕಾಗಿ ನಾನು ಕಾತರಿಸುತ್ತಿದ್ದೆ. ಬಿಲ್‌ನ ಮಿನುಗು ಕಣ್ಣುಗಳನ್ನು ಮತ್ತು ಅವನು ನನ್ನನ್ನು ನೋಡಿದಾಗ ಆ ಕಣ್ಣುಗಳಲ್ಲಿ ಹೇಗೆ ಬೆಳಕು ಮೂಡುತ್ತಿತ್ತು ಎನ್ನುವುದನ್ನು ನಾನು ಮತ್ತೆ ನೋಡುವುದಿಲ್ಲ ಎಂಬ ಯೋಚನೆಯಿಂದ ಬಿಸಿ ಕಣ್ಣೀರು ನನ್ನ ಕೆನ್ನೆಯ ಮೇಲೆ ತೊಟ್ಟಿಕ್ಕಿ ಹರಿಯುತ್ತಿತ್ತು.

ನನ್ನ ಕಣ್ಣುಗಳು ಮುಚ್ಚಿಕೊಳ್ಳತೊಡಗಿದವು ಮತ್ತು ನನ್ನ ತಲೆಯು ತಿರುಗ ತೊಡಗಿತು. ನನ್ನ ಅರಿವಿಗೆ ಬಂದ ಮುಂದಿನ ಸಂಗತಿಯೆಂದರೆ, ಧ್ವನಿಗಳು ನನ್ನನ್ನು ಕರೆಯುತ್ತಿದ್ದುದ್ದು ನನಗೆ ಕೇಳಿಸಿತು: "ಸ್ಕಾರ್ಲೆಟ್, ಏಳು, ಎದ್ದೇಳು!" ನರ್ಸ್‌ಗಳು ನನ್ನನ್ನು ಅರಿವಳಿಕೆಯಿಂದ ಆಚೆಗೆ ತರಲು ಪ್ರಯತ್ನಿಸುತ್ತಿದ್ದರು. ಬಿಲ್ ನನ್ನ ತಲೆಯ ಮೇಲೆ ಅದೇನೋ ಇರುವಂತೆ ಚುಂಬಿಸುತ್ತ, ನನ್ನ ಕೂದಲನ್ನು ನೇವರಿಸುತ್ತಾ ಅಲ್ಲಿ ನಿಂತಿದ್ದ. ನಾನು ಅತ್ತುಬಿಟ್ಟೆ. ನನ್ನ ಕೈಯನ್ನು ಬಿಲ್ ಮೃದುವಾಗಿ ಹಿಡಿದುಕೊಂಡ. ನಾನು ನನ್ನ ಸುತ್ತಲೂ ಒಮ್ಮೆ ನೋಡುವ ಅವಕಾಶ ಪಡೆದೆ. ನಾನು ಮತ್ತೆ ಆಸ್ಪತ್ರೆಯಲ್ಲಿನ ನನ್ನ ಹಾಸಿಗೆಯಲ್ಲಿದ್ದೆ. ಎಡ ತೋಳಿಗೆ ಡ್ರಿಪ್ಸ್ ಹಾಕಿದ್ದರು ಮತ್ತು ನನ್ನ ಬಲಸ್ತನವಿದ್ದ ಪ್ರದೇಶದಿಂದ ಬಂದಂತಹ ಒಂದು ಕೊಳವೆಯಿತ್ತು ಮತ್ತು ಬಲಸ್ತನದ ಭಾಗವು ಔಷಧದ ಪಟ್ಟಿಗಳಿಂದ ದಪ್ಪನಾಗಿ ಕಟ್ಟಲ್ಪಟ್ಟಿತ್ತು. ಬಿಲ್ ನನ್ನ ಕಿವಿಗಳಲ್ಲಿ ಪಿಸುಗುಟ್ಟುತ್ತಿದ್ದ: "ಡಾರ್ಲಿಂಗ್, ನೀನು ಇದನ್ನು ಸಾಧಿಸಿಬಿಟ್ಟೆ. ಇದನ್ನು ಸಾಧಿಸಿಬಿಟ್ಟೆ. ನನಗೆ ತಿಳಿದಿತ್ತು ನೀನು ಇದನ್ನು ಸಾಧಿಸುತ್ತೀ ಎಂದು!" ಅವನ ಕಣ್ಣುಗಳಲ್ಲಿ ಆ ಮಿನುಗನ್ನು ಹುಡುಕುತ್ತಾ ನಾನು ಅವನ ಮುಖವನ್ನು ನೋಡಿದೆ. ಆದರೆ ನಾನು ಅಲ್ಲಿ ಕಂಡಿದ್ದೆಲ್ಲಾ ಬರಿಯ ಕಣ್ಣೀರು ಮಾತ್ರ. ನಾನು ಅವನ ಕೈಯನ್ನು ಹಿಸುಕಲು ಪ್ರಯತ್ನಿಸಿದೆ. ಆದರೆ, ನೋವು ನನ್ನನ್ನು ತನ್ನ ಅಧೀನಪಡಿಸಿಕೊಂಡಿತು. ನನ್ನನ್ನು ಮತ್ತೆ ನಿದ್ರೆಗೆ ಜಾರಿಸಲು ಮತ್ತೊಂದು ಶಾಮಕವನ್ನು ನನಗೆ ಕೊಡಲಾಯಿತು. ನಂತರದ ದಿನಗಳಲ್ಲಿ Mr. H ನನ್ನನ್ನು ನೋಡಲು ಕ್ರಮವಾಗಿ ಬರುತ್ತಿದ್ದರು ಮತ್ತು ನನ್ನ ಮ್ಯಾಸ್ಟೆಕ್ಟಮಿ ಶಸ್ತ್ರಚಿಕಿತ್ಸೆಯು ಸಂಪೂರ್ಣ ಯಶಸ್ವಿಯಾಗಿದೆಯೆಂದೂ, ತಾವು ನನ್ನ ಆ ಕ್ಯಾನ್ಸರಿನ ಬೆಳವಣಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಾದದ್ದರಿಂದ, ನನ್ನ ಉಳಿವಿಗೆ ಬಹಳ

ಒಳ್ಳೆಯದಾಯಿತೆಂದೂ ನನಗೆ ಆಶ್ವಾಸನೆ ನೀಡಿದರು. ಸ್ವಲ್ಪ ಸಮಯದ ತನಕ ಅದನ್ನೆಲ್ಲಾ ಅರ್ಥ ಮಾಡಿಕೊಳ್ಳಲು ನಾನು ಬಹಳವೇ ನಿಶ್ಶಕ್ತಳಾಗಿದ್ದೆ. ಬಿಲ್ ನನ್ನನ್ನು ನೋಡಲು ಪ್ರತಿದಿನವೂ ಬರುತ್ತಿದ್ದ ಮತ್ತು ನನ್ನನ್ನು ನೋಡಲು, ಮಕ್ಕಳನ್ನು ಭಾನುವಾರ ಕರೆದುಕೊಂಡು ಬರುವುದಾಗಿ ಹೇಳಿದ. ಈ ಮಧ್ಯೆ ಡೆಬ್ಬಿಯು ಯಾವುದೋ ಒಂದು ಗ್ರಂಥಿಗೆ ಸಂಬಂಧಿಸಿದಂತೆ ಜ್ವರದಿಂದ ನರಳುತ್ತಿದ್ದಳೆಂದು ತಪಾಸಣೆಯಿಂದ ತಿಳಿದುಬಂದಿತು. ಎಲ್ಲವನ್ನೂ ಬಿಲ್ ಹೇಗೆ ನಿರ್ವಹಿಸುತ್ತಿದ್ದಾನೆ ಎಂದು ನಾನು ಚಿಂತಿಸುತ್ತಿದ್ದೆ.

ನನ್ನ ಹುಡುಗಿಯರು ನನ್ನನ್ನು ನೋಡಲು ಬರುವ ವೇಳೆಗೆ, ನನ್ನ ಗಾಯದಿಂದ ಒಸರುತ್ತಿದ್ದ ದ್ರವಾಂಶವನ್ನು ಹಿಡಿದಿಟ್ಟುಕೊಳ್ಳಲು ಇರುವ ಶೀಶೆಯನ್ನು ನನ್ನ ಜೊತೆಯಲ್ಲಿಯೇ ಕೊಂಡೊಯ್ಯಬೇಕಾದರೂ, ನಾನು ಓಡಾಡಲು ಸಮರ್ಥಳಾಗಿದ್ದೆ. ನನ್ನ ಕುಟುಂಬವು ನನ್ನ ಜೊತೆಯಲ್ಲಿ ಇದ್ದುದ್ದು ನನ್ನ ನೈತಿಕ ಧೈರ್ಯ, ಸ್ಥೈರ್ಯಗಳಿಗೆ, ಹೆಚ್ಚಿನ ಪ್ರೋತ್ಸಾಹವಾಗಿತ್ತು. ಆದಾಗ್ಯೂ, ನಾನು ಬಿಲ್‌ನನ್ನು ನೋಡುತ್ತಿದ್ದಾಗ, ಅವನ ಮುಖದ ಎಡಭಾಗವು, ಇಳಿಬಿದ್ದಿದ್ದನ್ನು ಗಮನಿಸಿದೆ ಮತ್ತು ಅವನಿಗೆ ಪಾರ್ಶ್ವವಾಯು ತಗುಲಿದೆಯೆಂದು ಹೆದರಿದೆ. ಆದರೆ, ಅವನನ್ನಾಗಲೀ, ಮಕ್ಕಳನ್ನಾಗಲೀ ಗಾಬರಿಗೊಳಿಸಲು ನಾನು ಬಯಸಲಿಲ್ಲ. ಆದರೆ ನಾವು ಪರಸ್ಪರ ಬೀಳ್ಕೊಳ್ಳುವಾಗ, ಅವರು ಮನೆ ತಲುಪಿದ ಕೂಡಲೇ ನನಗೆ ಫೋನು ಮಾಡಬೇಕೆಂದು, ನನಗೆ ವಚನ ನೀಡುವಂತೆ ಕೇಳಿದೆ. ಇದರಿಂದ, ಅವರು ಕ್ಷೇಮವಾಗಿ ಮನೆ ತಲುಪಿದರು ಎಂದು ನಾನು ತಿಳಿಯಬಹುದಾಗಿತ್ತು. ಅವರು ಮನೆ ತಲುಪಲು ಗರಿಷ್ಠ ಎರಡು ಗಂಟೆಗಳು ಬೇಕಾಗುವುದೆಂದು ನಾನು ಲೆಕ್ಕಾಚಾರ ಮಾಡಿದ್ದೆ. ಆದ್ದರಿಂದ ಮೂರು ಗಂಟೆಗಳು ಕಳೆದ ಮೇಲೂ ದೂರವಾಣಿಯ ಕರೆ ಬರದೇ ಇದ್ದಾಗ, ನಾನು ಮನೆಗೆ ಕರೆ ಮಾಡಿದೆ. ಆದರೆ ಯಾವುದೇ ಉತ್ತರವನ್ನೂ ಪಡೆಯಲಿಲ್ಲ. ಕಾರನ್ನು ಚಾಲಿಸುತ್ತಿದ್ದಾಗ ಬಿಲ್ ತೀವ್ರ ಆಘಾತಕ್ಕೊಳಗಾಗಿರುವನೆಂದೂ, ಅವರೆಲ್ಲರೂ ಮಾರಕವಾದ ಅಪಘಾತಕ್ಕೆ ಒಳಗಾಗಿರುವರೆಂದು ನಾನು ನಿಶ್ಚಯಿಸಿದೆ. ನಾನು ಅನೇಕ ಆ್ಯಂಬುಲೆನ್ಸ್‌ಗಳ ಸೈರನ್‌ಗಳನ್ನು, ಅಪಘಾತಗಳಲ್ಲಿ ಗಾಯಗೊಂಡವರನ್ನು ಮೃತ ಶರೀರವನ್ನೂ– ತರುತ್ತಿದ್ದ ಆ್ಯಂಬುಲೆನ್ಸ್‌ಗಳನ್ನು ಕೇಳಿಸಿಕೊಳ್ಳತೊಡಗಿದ್ದೆ. ನನ್ನ ಕುಟುಂಬವೂ ಅವುಗಳಲ್ಲಿ ಒಂದಾಗಿರಬಹುದೆಂದು ಚಿಂತಿಸುತ್ತಿದ್ದೆ. ನಾನು ಸಾವಿಗೆ ಸಮೀಪದ ಅನುಭವವನ್ನು ಹಾದು ಬಂದದ್ದು, ನನ್ನ ಕುಟುಂಬವನ್ನೇ ಕಳೆದುಕೊಳ್ಳುವುದಕ್ಕೆ ಎಂಬ ವಿಡಂಬನೆ ನನ್ನ ಮನಸ್ಸಿಗೆ ಬಂದಿತು. ಸದ್ಯ ಆದರೆ, ದೂರವಾಣಿಯ ಕರೆಯ ಶಬ್ದ ನನ್ನ ಆಲೋಚನೆಗಳನ್ನು ಕೊನೆಗಾಣಿಸಿತು ಮತ್ತು ಬಿಲ್‌ನ ಧ್ವನಿಯನ್ನು ಕೇಳಿದುದರಿಂದ ನನ್ನ ಆತಂಕ ನಿವಾರಣೆಯಾಯಿತು. ಪ್ರಯಾಣದ ಮಧ್ಯೆ ಏನನ್ನಾದರೂ ಸ್ವಲ್ಪ ತಿನ್ನುವುದಕ್ಕಾಗಿ ಅವರು ಒಂದು ಕಡೆ ಸ್ವಲ್ಪ ಹೊತ್ತು

ನಿಂತಿದ್ದರು. ಹಾಗಾಗಿ ಮನೆ ತಲುಪಲು ಸ್ವಲ್ಪ ತಡವಾಗಿತ್ತು. ಕೆಲವು ದಿನಗಳ ನಂತರ, ನನ್ನನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಹೋಗಲು ಬಿಲ್ ಬಂದಾಗ, ನಾನು ಅವನ ಮುಖ ಜೋಲು ಬಿದ್ದಿದ್ದ ಬಗೆಗೆ ಅವನನ್ನು ಕೇಳಿದೆ. ತಾನು ಮುಖದ ಲಘು ಪಾರ್ಶ್ವವಾಯುವಿನಿಂದ ಕಷ್ಟಪಡುತ್ತಿರುವುದಾಗಿಯೂ, ಅದು ಯಾವುದರಿಂದ ಉಂಟಾಗಿದೆಯೆಂದು ತನಗೆ ತಿಳಿದಿಲ್ಲವೆಂದೂ ಹೇಳಿದ. ಅದು ಆಘಾತವಲ್ಲವೆಂದು ತಿಳಿದು ನಾನು ಸ್ವಲ್ಪ ಸಮಾಧಾನಗೊಂಡೆ.

ಮತ್ತೆ ಮನೆಗೆ ಮರಳಿ ಬಂದದ್ದು, ಮನಸ್ಸಿಗೆ ನೆಮ್ಮದಿ ಎನಿಸಿತ್ತು. ಆದರೆ ನಾನು ಇನ್ನೂ ಸಾಕಷ್ಟು ದುರ್ಬಲಳಾಗಿದ್ದೆ ಮತ್ತು ನನ್ನ ದೇಹವು ಅನುಭವಿಸಿದ್ದ ಅಂಗ ಭಾಗಕ್ಕೆ ಹೊಂದಿಕೊಳ್ಳುವುದರಲ್ಲಿ ಸಾಕಷ್ಟು ಹೆಚ್ಚು ಮಾನಸಿಕ ಸಮಸ್ಯೆಗಳು ನನ್ನನ್ನು ಕಾಡುತ್ತಿದ್ದವು. ಕೇವಲ ಒಂದೇ ಒಂದು ಸ್ತನ ಹೊಂದಿದ್ದವಳಾಗಿದ್ದು, ನಾನು ಪರಿಪೂರ್ಣ ಹೆಣ್ಣಲ್ಲ, ಮತ್ತು ಬಿಲ್ ನನ್ನ ಗಂಡನಾಗಿ ಉಳಿಯುವಂತೆ ನಾನು ನಿರೀಕ್ಷಿಸುವಂತಿಲ್ಲ ಎಂದು ನಾನು ಭಾವಿಸುತ್ತಿದ್ದೆ. ಆದ್ದರಿಂದ ಒಂದು ದಿನ ನಾವು ಪಕ್ಕಪಕ್ಕದಲ್ಲಿ ಹಾಸಿಗೆಯ ಮೇಲೆ ಮಲಗಿದ್ದಾಗ, ನಾನು ಹೇಳಿದೆ: ಅವನೇನಾದರೂ ನನ್ನನ್ನು ಬಿಟ್ಟುಬಿಡಲು ಇಚ್ಛಿಸುವುದಾದರೆ, ನಾನು ಅರ್ಥಮಾಡಿ ಕೊಳ್ಳುತ್ತೇನೆ ಮತ್ತು ಅವನ ಮಾರ್ಗದಲ್ಲಿ ಅಡ್ಡಬರುವುದಿಲ್ಲ ಎಂದು. ಬಿಲ್, ನಾಚಿಕೆಯಿಂದ ನನ್ನನ್ನು ಬಿಗಿಯಾಗಿ ತಬ್ಬಿ ಹಿಡಿದು ನನ್ನ ಕಿವಿಯಲ್ಲಿ ಪಿಸುಗುಟ್ಟಿದ: "ನಿನಗೆ ಒಂದೇ ಕಣ್ಣು, ಒಂದು ತೋಳು, ಒಂದು ಕಾಲು ಇಷ್ಟೇ ಇದ್ದರೂ, ಇದ್ಯಾವುದನ್ನೂ ಲೆಕ್ಕಿಸದೆ ನಿನ್ನನ್ನು ಪ್ರೀತಿಸುತ್ತೇನೆ" ಹೀಗೆ ಹೇಳಿ ಮೃದುವಾಗಿ ನನ್ನನ್ನು ತನ್ನ ತೋಳುಗಳೊಳಗೆ ತೆಗೆದುಕೊಂಡ ಮಾತ್ರ ನನ್ನನ್ನು ರಮಿಸಿ, ಪ್ರೀತಿ ಮಾಡಿದ.

ಬಿಲ್ ನನ್ನನ್ನು ಬಹಳ ಪ್ರೀತಿಸುತ್ತಿದ್ದ ಮತ್ತು ನನ್ನ ಬಗೆಗೆ ಗಮನ ನೀಡುತ್ತಿದ್ದ. ಇದು ನನ್ನ ಆತ್ಮವಿಶ್ವಾಸವನ್ನು ಮತ್ತೆ ನನಗೆ ತಂದುಕೊಟ್ಟಿತು ಹಾಗೂ ನನ್ನನ್ನು ಪುನಃ ಆರೋಗ್ಯಶಾಲಿಯಾಗಿ ಮಾಡಿತು. ಆದಾಗ್ಯೂ, ನನ್ನ ಬದುಕಿನ ದಿನಗಳು ಇಷ್ಟೇ ಎಂದು ನಿಗದಿತವಾಗಿದ್ದವು ಎಂದು ನಾನು ಭಾವಿಸಿದೆ ಮತ್ತು ಎಷ್ಟು ಸಾಧ್ಯವೋ ಅಷ್ಟನ್ನೂ ಗಿಡುಗಿಕೊಳ್ಳಲು ಇಚ್ಛಿಸಿದೆ. ನಾನು ಮಿಷೆಲ್ಲೆಯ ದತ್ತಕದ ವಿಷಯವನ್ನು ಅವಳಿಗೆ ತಿಳಿಸುವುದರ ಬಗೆಗೆ ನಾನು ಹೇಗೆ ಯೋಜಿಸಿದ್ದೆ ಎಂಬುದನ್ನು ಬಿಲ್‌ಗೆ ಹೇಳಿದೆ, ಹಾಗೂ ಶಸ್ತ್ರಚಿಕಿತ್ಸೆಯಲ್ಲಿ ಉಳಿದು ಬಂದದ್ದರಿಂದ, ನಾನೇ ಅದನ್ನು ಅವಳಿಗೆ ಹೇಳಬೇಕು ಎಂದುಕೊಂಡೆ ಮತ್ತು ಈಗ ನಾನು ಅವಳ ಜೊತೆಯಲ್ಲಿಯೇ ಇದ್ದು, ಅವಳನ್ನು ಸಾಂತ್ವನಗೊಳಿಸಿ, ಅವಳನ್ನು ನಾನು ಎಷ್ಟೊಂದು ಪ್ರೀತಿಸುತ್ತೇನೆ ಎಂದು ತೋರಿಸಬಹುದು ಎಂದೂ ಹೇಳಿದೆ. ಅಂತಹ ಭಾವತೀವ್ರತೆಯ ಕಾರ್ಯಕ್ಕೆ ನಾನು ಇನ್ನೂ ದುರ್ಬಲಳಾಗಿದ್ದೇನೆ ಎಂದು ಬಿಲ್ ಆಲೋಚಿಸಿದ.

ಆದರೆ, ಆ ಸಂದೇಶವನ್ನು ಉಕ್ತಲೇಖನವಾಗಿ ಹೇಳುವುದಕ್ಕೆ ನಾನು ಶಕ್ತಳಾಗಿದ್ದುದರಿಂದ, ಅದನ್ನು ಅವಳಿಗೆ ತಲುಪಿಸಲೂ ಸಾಕಷ್ಟು ಶಕ್ತಳಾಗಿದ್ದೇನೆ ಎಂದು ಬಿಲ್‌ನೊಡನೆ ವಾದಿಸಿದೆ. ಮಿಷೆಲ್ಲೆಯು ಈ ಸುದ್ದಿಯನ್ನು ಆದಷ್ಟೂ ಕಡಿಮೆ ದುಃಖಕರ ರೀತಿಯಲ್ಲಿ ಕೇಳಿಸಿಕೊಳ್ಳಬೇಕು ಎಂಬುದನ್ನು ನಾನು ನಿಶ್ಚಯಿಸಿಕೊಳ್ಳಬಯಸಿದೆ ಮತ್ತು ಆ ಮಾರ್ಗವು ನಾನೇ ಮುಖತಃ ಅವಳಿಗೆ ಹೇಳುವ ಮಾರ್ಗವೆಂದು ನನಗೆ ಖಚಿತವಾಗಿತ್ತು.

ನಾನು ಚೇತರಿಸಿಕೊಳ್ಳುತ್ತಿದ್ದಾಗ, ಓಟ್ಟೊ ಮತ್ತು ಮೇರಿಯನ್ ನನ್ನನ್ನು ಭೇಟಿ ಮಾಡಲು ಸಿಡ್ನಿಯಿಂದ ಬಂದಿದ್ದರು. ಡೆಬ್ಬಿಯನ್ನು ಅವರೊಡನೆ, ದೂರದ ವಾಕಿಂಗ್‌ಗೆ ಕಳಿಸಿದೆ. ತನ್ನ ಪ್ರೀತಿಯ ಅಂಕಲ್ ಸಂಪೂರ್ಣವಾಗಿ ತನ್ನ ಸಾಲಿಗೇ ಪಡೆಯುವ ಅವಕಾಶದಿಂದಾಗಿ ಡೆಬ್ಬಿ ಉತ್ಸಾಹಿತಳಾಗಿದ್ದಳು ಮತ್ತು ತನ್ನನ್ನು ಆಕೆ ಮನೆಯಲ್ಲಿಯೇ ಉಳಿಸಿಕೊಂಡಿದ್ದಾಳೆ ಎಂಬುದರ ಬಗೆಗೆ ಮಿಷೆಲ್ಲೆಗೆ ಯಾವ ವಿಚಾರವೂ ತಿಳಿದಿರಲಿಲ್ಲ.

ನಮ್ಮ ಜೊತೆ ಮೊಗಸಾಲೆಯಲ್ಲಿ ಬಂದು ಕುಳಿತುಕೊಳ್ಳುವಂತೆ ಮಿಷೆಲೆಯನ್ನು ಬಿಲ್ ಕರೆದಾಗ, ನಾನು ಗೊಂದಲ, ತಳಮಳಗಳಲ್ಲಿದ್ದೆ. ನಾನು ಅವಳನ್ನು ಹತ್ತಿರಕ್ಕೆ ಎಳೆದು ಕೂಡಿಸಿಕೊಂಡು, ಧ್ವನಿಮುದ್ರಣದ ಗುಂಡಿಯನ್ನು ಒತ್ತಿದೆ, ನನ್ನ ಶಸ್ತ್ರ ಚಿಕಿತ್ಸೆಗೆ ಮುಂಚೆ ಅವಳಿಗಾಗಿ ನಾನು ಒಂದು ಸಂದೇಶವನ್ನು ಧ್ವನಿಮುದ್ರಿಸಿದ್ದೆನೆಂದೂ, ಮತ್ತು ಅವಳು ಅದನ್ನು ಈಗ ಕೇಳಿಸಿಕೊಳ್ಳುವುದು ಸೂಕ್ತವೆಂದೂ ನಾನು ಭಾವಿಸಿರುವುದಾಗಿ ಅವಳಿಗೆ ಹೇಳಿದೆ. ಅವಳು ಧ್ವನಿಮುದ್ರಣದ ಟೇಪನ್ನು ಮೌನವಾಗಿ ಆಲಿಸುತ್ತಿರುವಾಗ, ನಾನು ಅವಳ ಕೂದಲನ್ನೂ, ಕೆನ್ನೆಯನ್ನು ನೇವರಿಸುತ್ತಿದ್ದೆ. ಅವಳು ಇಡಿಯ ಧ್ವನಿಮುದ್ರಣದ ಟೇಪನ್ನು ಕೇಳಿಸಿಕೊಳ್ಳುವ ಅವಧಿಯಲ್ಲಿ ಒಂದಿಷ್ಟೂ ಚಲಿಸಲಿಲ್ಲ. ಅವಳ ಪ್ರತಿಕ್ರಿಯೆ ಏನಾಗಿರಬಹುದೆಂಬ ಬಗೆಗೆ ನಾನು ಹೆದರಿದ್ದೆ. ಆ ಟೇಪು ಮುಕ್ತಾಯವಾದಾಗ ಬಿಲ್, ಮೃದುವಾಗಿ ಹೇಳಿದ: “ಇನ್ನೂ ಹೆಚ್ಚಿನದನ್ನೇನಾದರೂ ನಿನಗೆ ಹೇಳಲು ನಾವು ಬಯಸುತ್ತೇವೆ, ಆದರೆ ನಿನ್ನ ಜೈವಿಕ ತಾಯಿಯ ಬಗೆಗೆ ಯಾವುದೇ ವಿವರಗಳನ್ನು ತಿಳಿದುಕೊಳ್ಳಲು ಕಾನೂನಿನ ಪ್ರಕಾರ ನಮಗೆ ಅನುಮತಿಯಿರಲಿಲ್ಲ. ಆದಾಗ್ಯೂ, ನಿನಗೆ ಹೆಚ್ಚಿಗೆ ಏನಾದರೂ ಕಂಡು ಹಿಡಿಯಬೇಕೆನಿಸಿದರೆ, ನಿನ್ನ ಸಹಾಯಕ್ಕೆ ಎಷ್ಟು ಸಾಧ್ಯವೋ, ಅಷ್ಟೆಲ್ಲವನ್ನೂ ನಾವು ಮಾಡುತ್ತೇವೆ. ಆಗ ಮಿಷೆಲ್ಲೆ ತನ್ನ ಬಾಹುಗಳನ್ನು ನನ್ನ ಸುತ್ತಲೂ ಸುತ್ತಿ, ಒತ್ತಾಯ ಪೂರ್ವಕವಾಗಿ ಹೇಳಿದಳು: “ನನ್ನ ಮಟ್ಟಿಗೆ ಹೇಳುವುದಾದರೆ, ನನಗೆ ಸಂಬಂಧಿಸಿದಂತೆ, ನಾನು ಎಂದಿನಿಂದಲೂ ತಿಳಿದಿರುವ ನೀವು ಮಾತ್ರವೇ ನನ್ನ ತಾಯಿ ಮತ್ತು ತಂದೆ.” ಅವಳ ಮೊದಲ ಪ್ರತಿಕ್ರಿಯೆಯಿಂದ ನಾನು ನೆಮ್ಮದಿಗೊಂಡೆ ಮತ್ತು ಅವಳ ಪರಿಪಕ್ವವಾದ ಮತ್ತು ಪ್ರೇಮಪೂರ್ಣ ಪ್ರತಿಕ್ರಿಯೆಗಾಗಿ ಆಶ್ಚರ್ಯಗೊಂಡೆ. ಇದು ನಾನು ಅವಳನ್ನು ಮತ್ತಷ್ಟು ಮೆಚ್ಚಿ ಪ್ರಶಂಸಿಸುವಂತೆ ಮಾಡಿತು.

# ೧೫. ಬೆಂಕಿಯೊಡನೆ ಹೋರಾಟ

ಒಮ್ಮೆ ಶಸ್ತ್ರಚಿಕಿತ್ಸೆಯು ಮುಗಿದು, ನನ್ನ ಶಕ್ತಿಯನ್ನು ಮತ್ತೆ ಗಳಿಸಿದ ನಂತರ, ನಾನು ನನ್ನ ಮಾಮೂಲಿನ ಜೀವನಕ್ಕೆ ಹಿಂದಿರುತ್ತೇನೆ ಅಥವಾ ಒಂದು ಸ್ತನವನ್ನು ತೆಗೆದು ಹಾಕಿದ ನಂತರ, ನಾನು ಎಷ್ಟು ಮಾಮೂಲಿಯಾಗಿರಬಹುದೆಂದು ನಿರೀಕ್ಷಿಸಬಹುದೋ ಅಷ್ಟು ಇರಬಹುದೆಂದು ಭಾವಿಸಿದ್ದೆ. ಆದರೆ, ನಾನು ವ್ಯಾಪಕ ಪ್ರಮಾಣದ ರೇಡಿಯೋ ಥೆರಪಿ ಚಿಕಿತ್ಸೆಗೆ ಒಳಗಾಗಬೇಕಾಯಿತು, ಆ ಚಿಕಿತ್ಸೆಯು ನೋವನ್ನುಂಟುಮಾಡುವಂತಹುದಲ್ಲವಾದರೂ, ದೈಹಿಕವಾಗಿ ತೀವ್ರವಾಗಿ ಬಳಲಿಸುವಂತಹುದಾಗಿತ್ತು. ಜೊತೆಗೆ ನನ್ನ ಬದಲಾದ ದೈಹಿಕ ರೂಪಕ್ಕೆ ಹೊಂದಿಕೊಳ್ಳಲು ನನಗೆ ಸಾಕಷ್ಟು ಸಮಯ ಬೇಕಾಯಿತು. ನಾನು ದೈಹಿಕವಾಗಿ ಅಂಗಹೀನಳಾಗಿಯೂ ಮತ್ತು ಮಾನಸಿಕವಾಗಿ ಕ್ರೋಧಭರಿತಳೂ, ಅಸಮಾಧಾನಗೊಂಡವಳೂ ಆಗಿ ಭಾವಿಸತೊಡಗಿದೆ. ನಾನು ಒಂದೇ ಸಮನೆ ಕೇಳುತ್ತಿದ್ದೆ: "ನಾನೇ ಯಾಕೆ ಆಗಬೇಕಾಗಿತ್ತು?" ನಾನು ಸಾಕಷ್ಟು ಅನುಭವಿಸಿಯಾಗಿತ್ತು ಎಂದು ಭಾವಿಸಿದೆ. ಆದರೆ, ಸವಾಲುಗಳು ತಮ್ಮನ್ನು ತಾವು ಹಾಜರುಪಡಿಸಿಕೊಳ್ಳುವುದು ಮುಂದುವರೆದಿತ್ತು. ಯಾರಿಂದಲೂ ಮೇಲಕ್ಕೆ ಎಳೆಯಲು ಸಾಧ್ಯವಾಗದಂತಹ, ಆತ್ಮ ಮರುಕದ ಆಳವಾದ ಮಡುವಿನೊಳಕ್ಕೆ ನಾನು ಬಿದ್ದಿದ್ದೆ. ಅವರ ಕಣ್ಣೆದುರಿಗೇ ನಾನು ಮುದುಡಿ ಹೋಗುತ್ತಿರುವುದನ್ನು ಬಿಲ್ ಮತ್ತು ನನ್ನ ಹುಡುಗಿಯರು ವೀಕ್ಷಿಸಬೇಕಾಗಿತ್ತು. ನಾನು ಅಪರಾಧ ಪ್ರಜ್ಞೆಯಿಂದ ಬಳಲಿದೆ. ಅವರು ಯಾವಾಗಲೂ ನನ್ನನ್ನು ಸಮರ್ಥಳೂ ಮತ್ತು ಬಲಶಾಲಿಯಾಗಿಯೂ, ಎಲ್ಲ ರಂಗಗಳಲ್ಲಿಯೂ ಹೊರಾಡುವವಳನ್ನಾಗಿಯೂ ನೋಡಿದ್ದರು. ಈಗ ಇದ್ದಕ್ಕಿದ್ದಂತೆ ನಾನು ಕೇವಲ ವ್ಯಾಕುಲಪೂರ್ಣ, ವಿಷಾದದ ಮುದ್ದೆಯಾಗಿ ಮಾರ್ಪಾಟಾಗಿಬಿಟ್ಟಿದ್ದೆ.

ಹಲವು ವಾರಗಳ ನಂತರ ಸಾಮೂಹಿಕ ಕಗ್ಗೊಲೆಯ ಬಗೆಗೆ (Holocaust) ಸಾಕ್ಷ್ಯಚಿತ್ರವೊಂದನ್ನು ನಾನು ವೀಕ್ಷಿಸುತ್ತಿದ್ದೆ. ಇದು ನನ್ನ ಪುನಶ್ಚೇತನಕ್ಕೆ ಹೊಸ ತಿರುವನ್ನು ನೀಡಿತು. ನಾನು, ಯುದ್ಧ ಸಮಯದಲ್ಲಿ ಸೆರೆಯಾಳುಗಳನ್ನು ಕೂಡಿಟ್ಟಿರುವ ಶಿಬಿರದಲ್ಲಿನ (concentration camps) ಬಲಿಪಶುಗಳನ್ನು ವೀಕ್ಷಿಸಿದಾಗ, ಅವರು ಅನುಭವಿಸುತ್ತಿದ್ದ ಯಾತನೆಗಳನ್ನು ಕಂಡಾಗ, ನನ್ನ ಆತ್ಮಮರುಕದ ಬಗೆಗೆ ಶೀಘ್ರವೇ ನಾನು ಲಜ್ಜೆಗೊಂಡೆ ಮತ್ತು ಇದಿನ್ನೂ ಹೆಚ್ಚು ಕೆಟ್ಟದಾಗಬಹುದಾಗಿತ್ತು ಎಂದು

ನನಗೆ ನಾನೇ ಹೇಳಿಕೊಂಡೆ. ಬಿಲ್‌ನ ಬೆಂಬಲದಿಂದ, ನಾನು ನನ್ನ ಭಗ್ನಗೊಂಡಂತಹ, ಅಂಗಹೀನ ದೇಹವನ್ನು ಒಪ್ಪಿಸಿಕೊಳ್ಳತೊಡಗಿದೆ ಮತ್ತು ಅವರೊಡನೆಯೇ ಜೀವನಕ್ಕೆ ಹೊಂದಿಕೊಂಡೆ.

ನನ್ನ ಚೈತನ್ಯ, ಉತ್ಸಾಹಗಳಲ್ಲಿ ಬದಲಾವಣೆಯಾದ ಕೂಡಲೇ, ಬಿಲ್‌ನನ್ನು ಹಾಲೆಂಡಿನ NIASನಲ್ಲಿ (ನೆದರ್‌ಲ್ಯಾಂಡ್ಸ್ ಇನ್ಸಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್) ೧೯೮೦/೮೧ನೇ ಶೈಕ್ಷಣಿಕ ವರ್ಷವನ್ನು ಕಳೆಯಲು ಆಹ್ವಾನಿಸಲಾಯಿತು. ಸಮರ್ಥಳಾಗಿದ್ದೇನೆ ಎಂದು ಪ್ರಯತ್ನಿಸುತ್ತಾ ಈ ಆಹ್ವಾನವನ್ನು ಒಪ್ಪಿಕೊಳ್ಳುವಂತೆ ಬಿಲ್‌ನನ್ನು ನಾನು ಒತ್ತಾಯಪಡಿಸಿದೆ. ಆದರೆ, ಅವನಿಲ್ಲದೇ ಹೇಗೆ ನಿರ್ವಹಿಸುತ್ತೇನೆ ಎಂದು ಒಳಗೊಳಗೇ ಚಿಂತಿಸುತ್ತಿದ್ದೆ. ಮಿಷೆಲ್ಲೆ ಮತ್ತು ಡೆಬ್ಬಿ ಇಬ್ಬರಿಗೂ ಆ ವರ್ಷದಲ್ಲಿ ಬಹಳ ಮುಖ್ಯವಾದ ಪರೀಕ್ಷೆಗಳಿದ್ದವು ಮತ್ತು ಬಹಳಷ್ಟು ಬೆಂಬಲ, ಪ್ರೋತ್ಸಾಹಗಳ ಅವಶ್ಯಕತೆ ಅವರಿಗಿದ್ದಿತು. ಆದರೆ, ಬಿಲ್ ಹಾಲೆಂಡ್‌ಗೆ ಹೋಗಲು ತೀವ್ರವಾಗಿ ಬಯಸುತ್ತಿದ್ದನೆಂದು ನನಗೆ ತಿಳಿದಿತ್ತು. ಆದ್ದರಿಂದ ಅವನ ಹಾದಿಯಲ್ಲಿ ಅಡ್ಡಬರಲು ನಾನು ಇಷ್ಟಪಡಲಿಲ್ಲ. ವಾಸೆನರ್‌ನ ಒಂದು ಫ್ಲಾಟಿನಲ್ಲಿ ಬಿಲ್‌ನನ್ನು ನೆಲೆಗೊಳಿಸಿ ಅವನ ಗೃಹಕೃತ್ಯದ ಪರಿಸ್ಥಿತಿಯನ್ನು ಅಣಿಗೊಳಿಸಿ ಬರಲು ಸೆಪ್ಟೆಂಬರ್ ತಿಂಗಳಿನಲ್ಲಿ ನಾವು ಒಟ್ಟಿಗೇ ಹೊರಟೆವು. ಬಿಲ್‌ನನ್ನು ಅವನ ಹೊಸ ಮನೆಯಲ್ಲಿ ಬಿಟ್ಟು ಬರುವಾಗ, ನನಗೆ ಇನ್ನು ಸಹಾಯ ಮಾಡುವವರು ಯಾರು ಎಂದು ನನಗೆ ಚಿಂತೆಯಾಯಿತು.

ಮುಂದಿನ ಕೆಲವು ತಿಂಗಳುಗಳು ಬೇಗ ಕಳೆದವು. ನಾನು ಮತ್ತೆ ಕೆಲಸದಲ್ಲಿ ನಿರತಳಾದೆ, ಹುಡುಗಿಯರು ಅಣಕು ಪರೀಕ್ಷೆಗಳನ್ನು ಮುಗಿಸಿದರು, ಮತ್ತು ನಾವೆಲ್ಲರೂ ನಮ್ಮ ನಮ್ಮ ಜೀವನಗಳಲ್ಲಿ ಮಗ್ನರಾಗಿದ್ದೆವು. ನನ್ನ ಹುಡುಗಿಯರಿಗಾಗಿ, ನಾನು ಅಲ್ಲಿರಲೇಬೇಕೆಂದು ಬಯಸಿದೆ, ಜನವರಿಯಲ್ಲಿ, ನನ್ನ ನಿಯತ ವೈದ್ಯಕೀಯ ತಪಾಸಣೆಯ ಸಮಯದಲ್ಲಿ Mr H, ತಾವು ಎಲ್ಲ ಕ್ಯಾನ್ಸರಿನ ಬೆಳವಣಿಗೆಗಳನ್ನು ತೆಗೆದುಹಾಕಿಬಿಟ್ಟಿದ್ದೇನೆಂದು ಯೋಚಿಸಿದ್ದ ಪ್ರದೇಶದಲ್ಲಿ ಮೂರು ಗಡ್ಡೆ (ಗ್ರಂಥಿ) ಗಳನ್ನು ಕಂಡರು. ಆ ಗ್ರಂಥಿಯು ಹಾನಿಕಾರಕವೋ ಅಲ್ಲವೋ ಎಂದು ತಾವು ನಿರ್ಧರಿಸುವ ಸಲುವಾಗಿ, ಒಂದು ಗ್ರಂಥಿಯಿಂದ ಅದರ ಭಾಗವನ್ನು ತೆಗೆಯಲು ಸಣ್ಣದೊಂದು ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆಂದು ನನಗೆ ವಿವರಿಸಿದರು. ಅವರು ಶೀಘ್ರದಲ್ಲಿಯೇ ಜಪಾನಿಗೆ ಹೊರಡಬೇಕಾಗಿದ್ದುದರಿಂದ, ಮರುದಿನವೇ ಶಸ್ತ್ರ ಚಿಕಿತ್ಸೆಯನ್ನು ಮಾಡಲು ಬಯಸಿದ್ದರು.

ಅವರ ಮಾತುಗಳು ನನ್ನ ತಲೆಯೊಳಗೆ ಗಿರಗಿರನೆ ಸುತ್ತತೊಡಗಿದವು ಮತ್ತು ನನಗೆ ಮಾತನಾಡಲು ಸಾಧ್ಯವಾಗಲಿಲ್ಲ. ನಾನು ಅವರಿಂದ, ವಾಸ್ತವತೆಯಿಂದ, ಜೀವನದಿಂದಲೇ ಓಡಿಹೋಗಲು ಬಯಸಿದೆ. ಆದರೆ, ಅದಕ್ಕೆ ಬದಲಾಗಿ ಸುಮ್ಮನೆ

ಮೇಲಕ್ಕೆ ಎದ್ದೆ. ನನ್ನ ಕೋಟನ್ನು ಧರಿಸಿದೆ ಮತ್ತು ಅವರನ್ನು ಮರುದಿನ ಬಂದು ಕಾಣುವುದಾಗಿ ತಿಳಿಸಿದೆ. ಮನೆಗೆ ಹೋಗುವಾಗಿನ ರೈಲು ಪ್ರಯಾಣದ ಸಮಯ ಪೂರ್ತಿ, ಎಲ್ಲವನ್ನೂ ಬಿಟ್ಟುಬಿಡುವ ಬಗೆಗೆ ಆಳವಾಗಿ ಯೋಚಿಸತೊಡಗಿದೆ. ನನ್ನ ಜೀವನದಲ್ಲಿ ಸಾಕಷ್ಟು ಅನುಭವಿಸಿಯಾಗಿತ್ತು. ಈಗ ಹೋರಾಡಲು ಸ್ವಲ್ಪ ಶಕ್ತಿಯೂ ಉಳಿದಿರಲಿಲ್ಲವೆಂದುಕೊಂಡೆ. ಆದರೆ, ಮಿಷೆಲ್ಲೆಯ ಮುಖ ನೋಡಿದಾಗ, ಮನೆಯ ಬಾಗಿಲ ಮೂಲಕ ಒಳಕ್ಕೆ ಪ್ರವೇಶಿಸಿದಾಗ, ನಾನು ಇವರನ್ನು ಬಿಡುವುದು ಸಾಧ್ಯವಿಲ್ಲ ಎಂದು ಅರಿತುಕೊಂಡೆ. Mr H, ಹೇಳಿದ ವಿಷಯವನ್ನು ಅವರಿಗೆ ತಿಳಿಸಿದೆ. ಇಬ್ಬರೂ ನನ್ನ ಸುತ್ತಲೂ ತಮ್ಮ ತೋಳುಗಳನ್ನು ಸುತ್ತಿದರು, ಮುತ್ತಿಟ್ಟರು ಮತ್ತು ತಬ್ಬಿಕೊಂಡರು. ಆ ರಾತ್ರಿ ನಾನು ಮರುದಿನದ ಆಲೋಚನೆಗಳನ್ನು ತಡೆಯಲು ಪ್ರಯತ್ನಿಸಿದೆ. ನಾಲ್ಕು ನಿದ್ರೆ ಗುಳಿಗೆಗಳನ್ನು ನುಂಗಿ, ಅಂತಿಮವಾಗಿ ಒಂದು ರೀತಿಯ ವಿಸ್ಮೃತಿಯ ಸ್ಥಿತಿಯನ್ನು ತಲುಪಲು ಯಶಸ್ವಿಯಾದೆ.

ಮರುದಿನ ಬೆಳಗಾಯಿತು. ಒಂದು ರೀತಿಯ ದಿಗ್ಭ್ರಮೆಯ ಸ್ಥಿತಿಯಲ್ಲಿ ನಾನು ಆಸ್ಪತ್ರೆಗೆ ಹೋದೆ. ನಾನು ಹೀಗೆ ನನ್ನ ಪಾಡಿಗೆ ಒಬ್ಬಳೇ ಬಂದಿರುವುದನ್ನು ಕಂಡು ಆಸ್ಪತ್ರೆಯ ಸಿಬ್ಬಂದಿಗೆ ಆಶ್ಚರ್ಯವಾಯಿತು. ನಾನು ನಗಲು ಪ್ರಯತ್ನಿಸಿದೆ. ಆದರೆ, ಅಂತರಂಗದಲ್ಲಿ ತೀರಾ ಒಂಟಿ ಎಂಬ ಭಾವವನ್ನು ಅನುಭವಿಸಿದೆ. ಶಸ್ತ್ರ ಚಿಕಿತ್ಸೆಯ ಕೋಣೆಗೆ ಕರೆದೊಯ್ಯಲು, ಕಾಯುತ್ತಿದ್ದ ಸಮಯದಲ್ಲಿ ನಾನು ಬಿಲ್‌ಗೆ ಪತ್ರ ಬರೆಯುವ ಅವಶ್ಯಕತೆಯಿದೆಯೆಂದು ನಿರ್ಧರಿಸಿದೆ. ಅವನಿಗಾಗಿ ನನ್ನ ಮನಸ್ಸು ಅಳುತ್ತಿತ್ತು. ಅವನು ನನ್ನ ಜೊತೆಯಲ್ಲಿ ಇರಬೇಕಾಗಿತ್ತೆಂದು ನಾನು ತೀವ್ರ ಹತಾಶಳಾಗಿ ಬಯಸುತ್ತಿದ್ದೆ. ಆದರೆ, ಅವನು ಅಲ್ಲಿ ಇಲ್ಲದೇ ಇದ್ದುದರಿಂದ ಬಹಳವಾಗಿ ನೋವನ್ನು ಅನುಭವಿಸಿದೆ. ನಾನು ನೋಯುತ್ತಿದ್ದಹಾಗೆ ಅವನನ್ನೂ ನೋಯಿಸಲು ಬಯಸಿದೆ. ಆದರೆ, ಇದು ನ್ಯಾಯವಲ್ಲ ಎಂಬುದು ನನ್ನ ಅಂತರಂಗಕ್ಕೆ ತಿಳಿದಿತ್ತು. ಯಾರ ಮೇಲಾದರೂ ನಾನು ಅಪ್ಪಳಿಸಿ, ಜಾಡಿಸಬೇಕಾಗಿತ್ತು, ಬಿಲ್‌ನನ್ನು ಬಿಟ್ಟರೆ, ಬೇರೆ ಯಾರನ್ನು ನಾನು ನೋಯಿಸಲು ಸಾಧ್ಯ?

ಶಸ್ತ್ರಚಿಕಿತ್ಸೆ ಬಹಳ ಶೀಘ್ರವಾಗಿ ಮುಗಿಯಿತು ಹಾಗೂ ಕೇವಲ ಸ್ಥಳೀಯ ಅರಿವಳಿಕೆ ಮಾತ್ರ ಅವಶ್ಯಕವಾಗಿತ್ತು. ಹಾಗಾಗಿ ನಾನು ಅದೇ ದಿನವೇ ಮನೆಗೆ ಹಿಂದಿರುಗಬಹುದಾಗಿತ್ತು. ನಾನು ಆಸ್ಪತ್ರೆಯಿಂದ ಹೊರಡುವುದಕ್ಕೆ ಮುಂಚೆ ಈ ಪರೀಕ್ಷೆಯ ಫಲಿತಾಂಶಗಳನ್ನು ಇನ್ನು ಕೆಲವು ದಿನಗಳಲ್ಲಿ ದೂರವಾಣಿಯ ಮೂಲಕ ನನಗೆ ತಿಳಿಸುವುದಾಗಿ Mr. H ಹೇಳಿದರು. ಮಿಷೆಲ್ಲೆ ಮತ್ತು ಡೆಬ್ಬಿ, ಆತಂಕ ತುಂಬಿದ ಮುಖಗಳಿಂದ ನನ್ನನ್ನು ಭೇಟಿಯಾದರು. ಡೆಬ್ಬಿ ನನ್ನ ತೊಡೆಯನ್ನು ಹತ್ತಿ ಕುಳಿತಳು. ಅವರು ಬೆಳೆದು ದೊಡ್ಡವರಂತೆ ವರ್ತಿಸಲು ಬಹಳವಾಗಿ ಪ್ರಯತ್ನಿಸಿದರು. ಆದರೆ, ಅವರು ವಿಪರೀತವಾಗಿ ಹೆದರಿದ್ದರು. ಅಲ್ಲದೇ, ಕೆಲವೇ

ದಿನಗಳ ಹಿಂದೆ ಡೆಬ್ಬಿಯ ಅತ್ಯುತ್ತಮ ಸ್ನೇಹಿತೆಯ ತಾಯಿ ಸ್ತನ ಕ್ಯಾನ್ಸರಿನಿಂದಲೇ ಮರಣ ಹೊಂದಿದ್ದುದು ಅವರಿಬ್ಬರನ್ನೂ ಕಂಗೆಡಿಸಿತ್ತು. ನಾನು ಇದ್ದ ಪರಿಸ್ಥಿತಿಯನ್ನು ನೋಡಿದ ಅವರು, ನಾನು ಬಿಲ್‌ಗೆ ಕರೆಮಾಡಿ ನಾನಿರುವ ಪರಿಸ್ಥಿತಿಯನ್ನು, ನನಗೆ ಏನಾಗುತ್ತಿದೆ ಎನ್ನುವುದನ್ನು ಅವನಿಗೆ ತಿಳಿಸಬೇಕೆಂದು ಬಯಸಿದರು. ಆದರೆ, ನಾನು ನಿರಾಕರಿಸಿದೆ. ಏನೋ ಒಂದು ರೀತಿಯ ಮೂರ್ಖತನದಿಂದಲೆಂಬಂತೆ, ಎಲ್ಲವನ್ನೂ ನಾನೇ ಸರಿಪಡಿಸಿಕೊಳ್ಳಲು, ನಾನೇ ನಿರ್ವಹಿಸಲು ಬಯಸಿದೆ. ನನ್ನ ಪಾಡಿಗೆ ನನ್ನನ್ನು ಅವನು ಬಿಟ್ಟುಬಿಟ್ಟಿದ್ದರಿಂದ, ನಾನು ನನ್ನ ಪಾಡಿಗೆ ನಿರ್ವಹಿಸಬಲ್ಲೆ ಎನ್ನುವುದನ್ನು ತೋರಿಸುತ್ತೇನೆ ಎಂದುಕೊಂಡೆ. ಎಂತಹ ಮೂರ್ಖತನವಾಗಿತ್ತು ನನ್ನದು!

ಮುಂದಿನ ಕೆಲವು ದಿನಗಳು ತೀರಾ ನಿಧಾನಗತಿಯಲ್ಲಿ ಸಾಗಿದವು. ನಾನು ಕಾಲದ ತಿರುವಿನಲ್ಲಿ ಸಿಕ್ಕಿಕೊಂಡಿದ್ದೆ. ನನ್ನ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಸಂಭವನೀಯ ಫಲಿತಾಂಶಗಳ ಬಗೆಗೆ ನನ್ನೊಡನೆ ನಾನು ಚರ್ಚಿಸುತ್ತಿದ್ದೆ. ನಾನು ಅತ್ಯಂತ ಕೆಟ್ಟದ್ದನ್ನು ಊಹಿಸಿದ್ದೆ ಮತ್ತು ಉತ್ತಮವಾದದ್ದನ್ನು ಭರವಸೆಯಿಂದ ಕಾಯುತ್ತಿದ್ದೆ. Mr. H ಕಡೆಗೂ ದೂರವಾಣಿಯ ಮೂಲಕ ಕರೆಮಾಡಿ ಫಲಿತಾಂಶಗಳನ್ನು ಹೇಳಿದರು. ಅವರು ಈ ಎಲ್ಲ ಸಂಗತಿಗಳ ಬಗೆಗೆ ಅತ್ಯಂತ ಶಾಂತ ರೀತಿಯಿಂದಿದ್ದು, ಮುಂದಿನ ಪರೀಕ್ಷೆಗಳಿಗಾಗಿ ತಾವು ಮಾಡಿರುವ ಅನೇಕ ಸಿದ್ಧತೆಗಳ ಬಗೆಗೆ ಹೇಳಿದರು. ನನಗೆ ನಾನು ಮಾಡಬೇಕೆನಿಸಿದ ಒಂದೇ ಒಂದು ಕೆಲಸವೆಂದರೆ ಅವರನ್ನು ಕುರಿತು "ನೀನೊಬ್ಬ ಕಟುಕ, ನಾನು ಮತ್ತಷ್ಟು ಕ್ಯಾನ್ಸರಿನಿಂದ ಯಾತನೆಯನ್ನು ಅನುಭವಿಸಲಿ ಎಂದೇ ನೀವು ನನ್ನ ಸ್ತನವನ್ನು ಕತ್ತರಿಸಿಹಾಕಿದಿರಿ" ಎಂದು ಚೀರಬೇಕೆನ್ನಿಸಿತ್ತು. ನಾನು ಮೊದಲ ಬಾರಿ Mr. H ಅವರನ್ನು ಭೇಟಿ ಮಾಡಿದಾಗ ನಾನು ಅವರನ್ನು ಒಬ್ಬ ಶೂರ, ವೀರನೆಂಬಂತೆ ಆರಾಧಿಸಿದ್ದೆ; ನಾನು ಈಗ ಮನಗಂಡಿದ್ದೆ. ನನ್ನ ಆ ಆರಾಧನಾ ಮೂರ್ತಿಗಿದ್ದುದು ಜೇಡಿಮಣ್ಣಿನ ಕಾಲುಗಳೆಂದು.

ಡೆಬ್ಬಿ ಈಗಾಗಲೇ ಶಾಲೆಯಿಂದ ಮನೆಗೆ ಬಂದಿದ್ದಳು. ತಿಳಿದು ಬಂದಿರುವುದು ಶುಭಸಮಾಚಾರ ಅಲ್ಲವೆಂದು ಗ್ರಹಿಸಿದ್ದಳು. ಅವಳು ತನ್ನ ತೋಳುಗಳನ್ನು ನನ್ನ ಸುತ್ತಲೂ ಹಾಕಿದಳು. ನಾನು ಅವಳ ಕೂದಲುಗಳಲ್ಲಿ ಮುಖವಿಟ್ಟು ಬಿಕ್ಕಿಬಿಕ್ಕಿ ಅತ್ತುಬಿಟ್ಟೆ. ಶೀಘ್ರದಲ್ಲಿಯೇ ನಾವಿಬ್ಬರೂ ಅಳುತ್ತಿದ್ದೆವು. ಮಿಷೆಲ್ಲೆ ನಮ್ಮಿಬ್ಬರನ್ನು ನೋಡಿ, ಪರಿಸ್ಥಿತಿಯನ್ನು ತನ್ನ ವಶಕ್ಕೆ ತೆಗೆದುಕೊಂಡಳು ಮತ್ತು ನಾನು ಬಿಲ್‌ಗೆ ಫೋನು ಮಾಡಿ ವಿಷಯವನ್ನು ತಿಳಿಸದಿದ್ದರೆ ತಾನೇ ಬಿಲ್‌ಗೆ ಫೋನ್ ಮಾಡುವುದಾಗಿ ಬೆದರಿಸಿದಳು. ಅವಳು ತನ್ನ ಮಾತಿನಂತೆಯೇ ಹಾಲೆಂಡಿನಲ್ಲಿದ್ದ ತನ್ನ ತಂದೆಗೆ ಕರೆ ಮಾಡಿದಳು. ಅವನು ಭಯಂಕರವಾಗಿ ತಳಮಳಗೊಂಡ ಮತ್ತು ನನ್ನ ಜೊತೆ

ಮಾತನಾಡಬೇಕೆಂದು ಪಟ್ಟುಹಿಡಿದ. ನಾನು ಎಲ್ಲವನ್ನು ನಿರ್ವಹಿಸುತ್ತಿದ್ದೇನೆ ಎಂದು ನಟಿಸಿದೆ. ಏಕೆಂದರೆ, ಅವನು ನನ್ನ ಜೊತೆಯಿರಲಿ ಎಂದು ನಾನು ಎಷ್ಟು ಬಯಸುತ್ತಿದ್ದೆ ಎನ್ನುವುದನ್ನು ಅವನ ಎದುರು ಒಪ್ಪಿಕೊಳ್ಳಲು ನಾನು ಬಯಸಲಿಲ್ಲ. ಅವನು ಮುಂದಿನ ವಿಮಾನವನ್ನು ಹಿಡಿದು ಬರುವುದಾಗಿ ಹೇಳಿದಾಗ, ನೆಮ್ಮದಿ ನನ್ನಲ್ಲಿ ತುಂಬಿ ಹರಿಯಿತು. ಆದರೆ, ಅವನಿಗೆ ಇದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುವ ಬದಲು, ಅವನು ಮುಂದಿನ ವಾರ ಬರುವ ತನ್ನ ಮೊದಲಿನ ಕಾರ್ಯಕ್ರಮಕ್ಕೇ ಅಂಟಿಕೊಳ್ಳಬೇಕೆಂದು ಅವನ ಮನವೊಲಿಸಿದೆ. ನನಗೆ ಅವನ ಅಗತ್ಯ ಅದೆಷ್ಟೊಂದು ಇತ್ತು ಎಂಬುದನ್ನು ಒಪ್ಪಿಕೊಳ್ಳಲು ನನ್ನ ಹೆಮ್ಮೆ ನನಗೆ ಅನುಮತಿಸುತ್ತಿರಲಿಲ್ಲ. ಮರುದಿನ ಮೂರ್ಖಳಂತೆ, ಬಿಲ್ ಏನಾದರೂ, ಡ್ರೈವ್‌ನ ಹಾದಿಯಲ್ಲಿ ನಡೆದು ಬರುತ್ತಿದ್ದಾನೆಯೇ ಎಂದು ಕಿಟಕಿಯಿಂದಾಚೆಗೆ ಮೂರ್ಖತನದಿಂದ ನೋಡುತ್ತಿದ್ದೆ. ನಾನು ಈಗಲೇ ಬರಬೇಡವೆಂದು ಅವನನ್ನು ತಡೆದಿದ್ದರೂ ಕೂಡ ಅವನು ಮನೆಗೆ ಹಿಂದಿರುಗಲು ನಿರ್ಧರಿಸಿರುತ್ತಾನೆಂದು ಆಸೆ ಭರವಸೆಗಳಿಂದ ಕಾಯುತ್ತಿದ್ದೆ.

ಕಡೆಗೆ, ಬಿಲ್ ಹಿಂದಿರುಗಿ ಬಂದಾಗ ಅವನು ತೀರಾ ಬಸವಳಿದಿದ್ದ ಮತ್ತು ಚಿಂತಿತನಾಗಿದ್ದ. ಹಾಗಾಗಿ ನಾನು ಅವನ ಬಳಿಗೆ ಹೋಗಿ ಅವನನ್ನು ಹಿಡಿದುಕೊಂಡು ಸಂತೈಸಬೇಕೆನ್ನಿಸಿತ್ತು. ಆದರೆ, ನಾನು ಬಹಳ ನೋವನ್ನನುಭವಿಸಿದ್ದೆ ಮತ್ತು ಕೋಪಗೊಂಡಿದ್ದೆ. ನನ್ನ ಪಾಡಿಗೆ ನಾನು ಎಲ್ಲವನ್ನೂ ನಿರ್ವಹಿಸಲು ಬಿಟ್ಟು ಹೋಗಿಬಿಟ್ಟುದ್ದಕ್ಕೆ ನಾನು ಅವನನ್ನು ಕ್ಷಮಿಸಲಾರದವಳಾಗಿದ್ದೆ. ಏನೋ ನನ್ನಲ್ಲಿ ಎಲ್ಲವೂ ಬರಿ ಗೊಂದಲವಾಗಿತ್ತು. ಅಂತಿಮವಾಗಿ, ಆ ದಿನ ರಾತ್ರಿ ನಾವು ಹಾಸಿಗೆಯಲ್ಲಿ ಮಲಗಿದಾಗ, ಬಿಲ್ ನನ್ನನ್ನು ಆಲಂಗಿಸಲು ಪ್ರಯತ್ನಿಸಿದ. ನಾನು ಅವನಿಗೆ ಬೆನ್ನು ತಿರುಗಿಸಿದೆ ಮತ್ತು ಕ್ರೂರವಾಗಿ ಹೇಳಿದೆ. ನನ್ನ ಸ್ತನದ ಶಸ್ತ್ರಚಿಕಿತ್ಸೆಯಾದ ನಂತರ ಅವನು ನನ್ನ ಬಗೆಗೆ ಚಿಂತಿಸುವುದನ್ನು, ನನ್ನ ಬಗೆಗೆ ಗಮನ ನೀಡುವುದನ್ನು ನಿಲ್ಲಿಸಿಬಿಟ್ಟಿದ್ದಾನೆ ಎನ್ನಿಸುತ್ತಿದೆ ನನಗೆ ಎಂದು. ಅವನು ಮುಖ ಕಿವಿಚಿಕೊಂಡಿದ್ದನ್ನು ನಾನು ಅರಿತೆ. ತಕ್ಷಣವೇ ನಾನಾಡಿದ ಮಾತುಗಳಿಗೆ ವಿಷಾದಿಸಿದೆ. ಮತ್ತು ಅವನಿಗೆ ಎಷ್ಟೊಂದು ನೋವುಂಟುಮಾಡಿದ್ದೆನೆಂಬುದನ್ನು ಮನಗಂಡೆ.

ಆಸ್ಪತ್ರೆಯ ಸ್ಟ್ರೆಚರ್‌ನಲ್ಲಿ ಮಲಗಿದ್ದಾಗ ನಾನು ಬಿಲ್‌ಗೆ ಬರೆದಿದ್ದ ಪತ್ರವನ್ನು ಬೆಳಿಗ್ಗೆ ಕೊಟ್ಟೆ. ಅದರಿಂದ ಆಶಿಸಿದ ಪರಿಣಾಮ ಉಂಟಾಯಿತು. ಅವನು ಮಣಿದ. ಅವನು ನನ್ನನ್ನು ನೋಯಿಸಿದಷ್ಟೇ, ನಾನೂ ಅವನನ್ನು ನೋಯಿಸಿದೆನೆಂದು ನಾನು ಹರ್ಷಪಟ್ಟೆ. ಅವನು ನನ್ನನ್ನು ತನ್ನ ತೋಳುಗಳಲ್ಲಿ ತೆಗೆದುಕೊಂಡು ಮತ್ತೆ ಮತ್ತೆ 'ಸಾರಿ' ಹೇಳತೊಡಗಿದ. ಕಡೆಗೂ ಕೆಲವು ಒತ್ತಡಗಳನ್ನು ತೆಗೆದುಕೊಳ್ಳುವುದಕ್ಕಾಗಿ ಬಿಲ್ ಇಲ್ಲಿ ಇದ್ದಾನೆ ಎಂದು ನೆಮ್ಮದಿಗೊಂಡೆ ಮತ್ತು ಅವನ ಬಾಹುಗಳಲ್ಲಿ ಮುದುಡಿಕೊಂಡೆ. ಆದಾಗ್ಯೂ ನಾನು ಅವನನ್ನು ಎಷ್ಟೊಂದು ಪ್ರೀತಿಸಿದೆ ಮತ್ತು

ಅವನ ಅಗತ್ಯ ಎಷ್ಟೊಂದಿತ್ತು ಎನ್ನುವುದನ್ನು ಎಂದೂ ಮನಗಾಣಲಿಲ್ಲ ಅವನು ಎಂದುಕೊಳ್ಳುತ್ತೇನೆ. ಹಾಗಿಲ್ಲದಿದ್ದರೆ, ಅವನು ಮತ್ತೆ ನೆದರ್‌ಲ್ಯಾಂಡ್‌ಗೆ ಹಿಂದಿರುಗಿ ಹೋಗುತ್ತಿರಲಿಲ್ಲ. ಸ್ವಲ್ಪ ದಿನಗಳ ನಂತರ ಅವನು ಏರ್‌ಪೋರ್ಟಿಗೆ ಡ್ರೈವ್ ಮಾಡಿಕೊಂಡು ಹೋದಾಗ, ನನ್ನ ಒಂದು ಭಾಗವು ಅವನಿಗೆ ಶಾಶ್ವತವಾಗಿ ವಿದಾಯ ಹೇಳುತ್ತಿತ್ತು ಎನಿಸಿತು ನನಗೆ.

ನಾನು ಸಾಕಷ್ಟು ಸಕಾರಾತ್ಮಕವಾಗಿಯೇ ಆಲೋಚಿಸಲು ಪ್ರಯತ್ನಿಸಿದೆ. ಆದರೆ ನಾನು ಬಹಳ ಯಾತನೆಯನ್ನು ಅನುಭವಿಸುತ್ತಿದ್ದೆ. ನನ್ನ ಎದೆಯ ಮೇಲಿದ್ದ ಆ ಶಸ್ತ್ರಚಿಕಿತ್ಸೆಯ ಗುರುತಿನಿಂದ ನಾನು ಸತತವಾಗಿ ಮುಜುಗರ, ಅಸೌಖ್ಯಗಳನ್ನು ಅನುಭವಿಸುತ್ತಿದ್ದೆ. ಹಾಗೂ ನನ್ನ ಭುಜಗಳಲ್ಲಿ ಚಾಕುವಿನಿಂದ ಕತ್ತರಿಸುತ್ತಿರುವರೇನೋ ಎಂಬಂತಹ ನೋವನ್ನು ಅನುಭವಿಸುತ್ತಿದ್ದೆ. ನಿರಾಶಾ ವಾದಿಯಂತೆ ಇದು ನನ್ನ ಶರೀರಾದ್ಯಂತ ಹರಡುತ್ತಿರುವ ಕ್ಯಾನ್ಸರ್ ಎಂದು ನಾನು ಭಾವಿಸಿದೆ. ನಾನು ಇತ್ತೀಚೆಗೆ ಒಳಪಟ್ಟಿದ್ದ ಎಲ್ಲ ಪರೀಕ್ಷೆಗಳ ಫಲಿತಾಂಶಗಳನ್ನು ನಾನು ಇನ್ನೂ ಕಾಯುತ್ತಿದ್ದೆ ಮತ್ತು ವೈದ್ಯರು ಭಯಂಕರ ಸತ್ಯವನ್ನು ನನಗೆ ಹೇಳಲು ಇಷ್ಟಪಡದಿರುವುದರಿಂದಲೇ ಇಷ್ಟೊಂದು ದೀರ್ಘವಾದ ಕಾಯುವಿಕೆ ಯಿರಬೇಕೆಂದೂ ಕಲ್ಪಿಸಿಕೊಂಡೆ. ನನಗೆ ಒಂದೇ ಸಮನೆ ಕೆಟ್ಟ ಕನಸುಗಳಾಗುತ್ತಿದ್ದವು. ನನ್ನ ಎಡಗಡೆಯ ಸ್ತನದ ಮೇಲೆ ದೊಡ್ಡ ಕಪ್ಪು ಮಚ್ಚೆಯೊಂದನ್ನು ಕಂಡಂತೆ ನನಗೆ ಕನಸಾಯಿತು. ಮತ್ತು ಅದು ನನ್ನ ಇಡಿಯ ವ್ಯಕ್ತಿತ್ವವನ್ನೇ ನನ್ನ ಇಡಿಯ ಶರೀರವನ್ನೇ ನುಂಗಿಹಾಕಿಬಿಡುವಷ್ಟು ದೊಡ್ಡದಾಗಿ, ಬೆಳೆದು ಬೆಳೆದು ಬೆಳೆಯುತ್ತಲೇ ಹೋಯಿತು. ನನಗೆ ಎಚ್ಚರವಾದ ಮೇಲೆ ಕೂಡ ನಾನು ಅದರ ಪ್ರಭಾವದಿಂದ ಮುಕ್ತಳಾಗಲು ಸಾಧ್ಯವಾಗದಿದ್ದಂತಹ ಕನಸುಗಳಲ್ಲಿ ಅದೂ ಒಂದಾಗಿತ್ತು. ನನ್ನನ್ನು ಗಾಢವಾಗಿ ನಿದ್ರೆಗೆ ತಳ್ಳಲು ನಾನು ಹೆಚ್ಚು ಹೆಚ್ಚಾಗಿ ನನ್ನ ನಿದ್ರೆಯ ಗುಳಿಗೆಗಳನ್ನು ಅವಲಂಬಿಸತೊಡಗಿದೆ.

ಬೆಳಗಿನ ಸಮಯದಲ್ಲಿ ನನ್ನನ್ನು ನಾನು ಹಾಸಿಗೆಯಿಂದ ಆಚೆಗೆ ಎಳೆದುಕೊಂಡು ಬರುವುದು ಅತ್ಯಂತ ಕಷ್ಟವೆನಿಸಿತು. ನನ್ನನ್ನು ಸ್ವಲ್ಪವಾದರೂ ಹರ್ಷಗೊಳಿಸಲು, ಬಿಲ್‌ನಿಂದ ಒಂದು ಪತ್ರಕ್ಕಾಗಿ ಯಾವಾಗಲೂ ಆಶಿಸುತ್ತಿದ್ದೆ. ಅವನ ಪತ್ರಗಳು ಸ್ನೇಹಪೂರ್ಣವೂ, ಪ್ರೀತಿ ತುಂಬಿದವೂ ಆಗಿದ್ದು ನನ್ನ ಜೀವನವನ್ನು ಮುಂದೆ ಸಾಗಿಸಲು ನನಗೆ ಶಕ್ತಿ ಕೊಡುತ್ತಿದ್ದವು. ನಾನೇನಾದರೂ ಸತ್ತುಹೋಗಿದ್ದೇ ಆದರೆ, ತಾನು ಹೇಗೆ ಒಳಗೊಳಗೇ ಮುರುಟಿಹೋಗುವೆನು ಎಂದು ನನಗೆ ಅನೇಕ ಬಾರಿ ಬರೆಯುತ್ತಿದ್ದ. ನೀವೇ ನೋವನ್ನು ಅನುಭವಿಸುವುದಕ್ಕಿಂತಲೂ ಹೆಚ್ಚಾಗಿ, ನೀವು ಪ್ರೀತಿಸುವವರು ನೋವನ್ನು ಅನುಭವಿಸುತ್ತಿರುವುದನ್ನು ನೋಡುವುದು ಬಹಳ ಕಷ್ಟ ಎಂದು, ಇದು ನನಗೆ ಮನದಟ್ಟು ಮಾಡಿಸಿತು.

ಕಡೆಗೂ ನನ್ನ ಪರೀಕ್ಷೆಗಳ ಫಲಿತಾಂಶಳು ತಿಳಿದವು. ಇನ್ನೊಂದು ಸುತ್ತಿನ

ರೇಡಿಯೋ ಥೆರಪಿಯು, ನನ್ನ ಆರೋಗ್ಯವನ್ನು ಸರಿಗೊಳಿಸುವುದು ಎಂಬ ಆಶ್ವಾಸನೆಯನ್ನು ನಾನು ಪಡೆದೆ. ಮತ್ತೆ ಹೆಚ್ಚಿನ ಶಸ್ತ್ರಚಿಕಿತ್ಸೆಯು ಬೇಕಾಗಿಲ್ಲವೆಂಬುದನ್ನು ಅರಿತು ನಾನು ಕೂಡಾ ಆ ವೈದ್ಯರಷ್ಟೇ ಆಶಾವಾದಿಯಾಗಲು ಪ್ರಯತ್ನಿಸಿದೆ. ಆರು ವಾರಗಳ ನಂತರ ನಾನು ಮತ್ತೆ ನನ್ನ ಕೆಲಸಕ್ಕೆ ಹಿಂದಿರುಗಲು ನಿರ್ಧರಿಸಿದೆ. ನನ್ನ ಆಫೀಸಿಗೆ ಹೋದಾಗ, ಅಲ್ಲಿ ಶೇಖರವಾಗಿದ್ದ ಅಂಚೆಯ ರಾಶಿಯಲ್ಲಿ, ಕಷ್ಟದಿಂದ ಕೈಯಾಡಿಸಿ ನೋಡತೊಡಗಿದೆ. ಕೆಲಸದಲ್ಲಿ ಮಗ್ನಳಾಗಿರುವಾಗ ನನ್ನ ನೋವು ಮಾಯವಾಗಿದ್ದನ್ನು ಕಂಡುಕೊಂಡೆ. ಮತ್ತು ಒಂದು ದಾನಿ ಸಂಸ್ಥೆಯಿಂದ, ತಾನು ನನ್ನ ಮತ್ತೊಂದು ಕಾರ್ಯಯೋಜನೆಗೆ ಹಣದ ನೆರವು ನೀಡಲು ಆಸಕ್ತ ವಾಗಿರುವುದಾಗಿ ಬಂದಿದ್ದ ಪತ್ರವನ್ನು ನೋಡಿದಾಗ, ತಿಂಗಳುಗಳಿಂದಲೂ ಕಂಡಿರದಿದ್ದಂತಹ ಉತ್ತಮ ಆರೋಗ್ಯ ಹೊಂದಿದ್ದೇನೆನ್ನಿಸಿತು ನನಗೆ. ಮತ್ತೆ ನಾನು ನನ್ನ ಕೆಲಸದಲ್ಲಿ ನನ್ನನ್ನು ತೊಡಗಿಸಿಕೊಂಡೆ. ಮತ್ತು ದೇಹದ ಮೇಲೆ ಮನಸ್ಸಿನ ವಿಜಯ ಎಂಬ ನನ್ನ ತತ್ತ್ವಸಿದ್ಧಾಂತದಂತೆ ಬದುಕಲು ಮತ್ತೆ ಪ್ರಯತ್ನಿಸಿದೆ.

ನಾನು ನನ್ನ ಶರೀರದ ಮೇಲೆ ನಿಯಂತ್ರಣವನ್ನು ಮತ್ತೆ ಗಳಿಸಿದ ಕೂಡಲೇ ಮತ್ತು ನನ್ನ ಕಾರ್ಯದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದ ಕೂಡಲೇ, ಸಾಕಷ್ಟು ಪ್ರತಿಫಲಗಳು ಬರಲಾರಂಭಿಸಿದವು. ಭಾರತೀಯ ಗ್ರಾಮಗಳ ಅಧ್ಯಯನದ ಬಗೆಗೆ ನಾನು ಪ್ರಕಟಿಸಿದ್ದ ಎರಡು ಗ್ರಂಥಗಳು ಸ್ಥಳೀಯ ಭಾಷೆಯ ಅನುವಾದಗಳಲ್ಲಿ ಹೊರಬಂದವು ಮತ್ತು ದಕ್ಷಿಣ ಭಾರತದ ಹೈಸ್ಕೂಲ್‌ಗಳಲ್ಲಿ ಪಠ್ಯಪುಸ್ತಕಗಳಾಗಿ ಉಪಯೋಗಿಸಲ್ಪಟ್ಟವು. ಇದನ್ನು ನನ್ನ ಅತ್ಯಂತ ಹೆಮ್ಮೆಯ ಸಾಧನೆಗಳಲ್ಲಿ ಒಂದೆಂದು ನಾನು ಪರಿಗಣಿಸಿದೆ. ನನ್ನ "ಮಹಿಳಾ ಕಾರ್ಯ ಯೋಜನೆಯು" ಮುಕ್ತಾಯ ವಾದದ್ದರಿಂದ ಹಾಗೂ ಅದರಲ್ಲಿ ಭಾಗವಹಿಸಿದ, ಬಹುತೇಕ ಸಂಶೋಧಕರೆಲ್ಲರೂ ತಮ್ಮ ಡಾಕ್ಟರೇಟ್ ಪದವಿಗಳನ್ನು ಪಡೆದು ಆಗಿತ್ತೆಂದೂ, ನಾನು ಕಡಿಮೆ ಪ್ರಯಾಣವನ್ನು ಒಳಗೊಂಡಂತಹ ಕಾರ್ಯ ಯೋಜನೆಯನ್ನು ಅನುಸರಿಸಲು ಪ್ರಯತ್ನಿಸಿದೆ. ಹಾಗಾಗಿ ಮ್ಯೂನಿಕ್‌ನಲ್ಲಿರುವ "ಜರ್ಮನ್ ಯೂತ್ ಇನ್‌ಸ್ಟಿಟ್ಯೂಟ್"ನ ಸಹಯೋಗದೊಂದಿಗೆ, 'ಮಹಿಳೆ ಕೆಲಸ ಮತ್ತು ಕುಟುಂಬ' ಎನ್ನುವ ಕಾರ್ಯಯೋಜನೆಗೆ ಧನಸಹಾಯವನ್ನು ಪಡೆದೆ. ಇದು ಜರ್ಮನಿಗೆ ಅನೇಕ ಬಾರಿ ಪ್ರಯಾಣವನ್ನೊಳಗೊಂಡಿತ್ತು ಮತ್ತು ನಾನು ಅಲ್ಲಿಯ ಇನ್‌ಸ್ಟಿಟ್ಯೂಟ್‌ನ ಯುವ ಸಂಶೋಧಕರಲ್ಲಿ ಉತ್ತಮ ಸ್ನೇಹಿತರನ್ನು ಪಡೆದೆ. ಯುದ್ಧಾನಂತರದ ಯುವ ಜರ್ಮನರೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವುದು, ಅವರೊಡನೆ ಮಾತನಾಡಿ ವಿವರಿಸುವುದು ನನಗೆ ಬಹಳ ಸುಲಭವೆನ್ನಿಸಿತು. ಎರಡನೆಯ ಮಹಾಯುದ್ಧದಲ್ಲಿ ಜೀವಿಸಿದ್ದ ವಯಸ್ಸಾದ ಜರ್ಮನರನ್ನು ಭೇಟಿಯಾದಾಗ ಮಾತ್ರ, ನನಗೆ ಒಂದು ರೀತಿಯ ಇರುಸುಮುರುಸು, ಮುಜುಗರಗಳುಂಟಾಗುತ್ತಿದ್ದವು.

ಯುದ್ಧದ ಪಾಶವೀ ಕೃತ್ಯಗಳಲ್ಲಿ ಅವರು ಯಾವ ಪಾತ್ರ ವಹಿಸಿದ್ದಿರಬಹುದು ಎಂದು ಆಲೋಚಿಸುತ್ತಿದ್ದೆ.

ಒಂದು ದಿನ ನಮ್ಮನ್ನೆಲ್ಲಾ ಒಂದು ಪಬ್‌ಗೆ ರಾತ್ರಿಯ ಊಟಕ್ಕೆ ಕರೆದುಕೊಂಡು ಹೋಗಲಾಯಿತು. ಹೊಗೆ ತುಂಬಿದ ಆ ಕೋಣೆಯನ್ನು ಪ್ರವೇಶಿಸುತ್ತಲೇ, ಆ ಇನ್‌ಸ್ಟಿಟ್ಯೂಟಿನ ಸಿಬ್ಬಂದಿ ವರ್ಗದವರೆಲ್ಲರೂ ತಮ್ಮ ಮುಂದೆ, ಬಿಯರ್‌ನ ಪಿಂಟ್‌ಗಳನ್ನು ಇಟ್ಟುಕೊಂಡು ಅಲ್ಲಿದ್ದ ಉದ್ದವಾದ ಮೇಜಿನ ಸುತ್ತಲೂ, ಜೋರಾಗಿ ಗದ್ದಲ ಮಾಡಿಕೊಂಡು ಹರಟುತ್ತಾ ಕುಳಿತಿರುವುದನ್ನು ನಾನು ನೋಡಿದೆ. ಈ ದೃಶ್ಯವು, ೧೯೩೦ರ ಮೊದಲ ಭಾಗದಲ್ಲಿ, ಹಿಟ್ಲರನು, ಜರ್ಮನಿಯನ್ನು ನಾಜಿಗಳು ವಶಪಡಿಸಿಕೊಳ್ಳುವುದಕ್ಕೆಂದು ಸಂಚು ರೂಪಿಸಲು ನಡೆಸುತ್ತಿದ್ದ ಪಬ್‌ಮೀಟಿಂಗುಗಳ, ನಾನು ನೋಡಿದ್ದ ಚಿತ್ರಗಳನ್ನು ನನಗೆ ನೆನಪು ಮಾಡಿಸಿತು. ಇದರಿಂದಾಗಿ ನನ್ನಲ್ಲಿ ಬಹಳ ಅಹಿತಕರ ಮತ್ತು ಅಸಮಾಧಾನದ ಭಾವನೆಗಳು ಮೂಡಿದವು. ಇದು ಸಾಲದೆಂಬಂತೆ, ನಾನು ಮೇಜಿನ ಅಗ್ರಭಾಗದಲ್ಲಿ, ವಯಸ್ಸಾದ ಜರ್ಮನ್‌ರಾಗಿದ್ದ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕರ ಪಕ್ಕದಲ್ಲಿಯೇ ಕೂಡಿಸಲ್ಪಟ್ಟೆ. ಅವರ ಇಂಗ್ಲಿಷ್ ಭಾಷೆಯು ತೀರಾ ಸಾಧಾರಣವಾಗಿತ್ತು. ಆದ್ದರಿಂದ ಅವರೊಡನೆ ಜರ್ಮನ್ ಭಾಷೆಯಲ್ಲಿಯೇ ಸಂಭಾಷಿಸಲು ನಾನು ಮುಂದಾದೆ. ಅವರು, ನಂಬಲಸಾಧ್ಯವಾದ ಅಕೃತ್ರಿಮತೆ, ಮುಗ್ಧತೆಗಳ ಈ ಪ್ರಶ್ನೆಯನ್ನು ಕೇಳಿದಾಗ, ನನಗೆ ನಂಬಲೇ ಆಗಲಿಲ್ಲ: "ಇಂಗ್ಲಿಷ್ ಯೂನಿವರ್ಸಿಟಿಯಿಂದ ಬಂದಿರುವ ಪ್ರೊಫೆಸರ್ ಒಬ್ಬರು ನಿಮ್ಮಂತೆ ಅದು ಹೇಗೆ ಇಷ್ಟು ಚೆನ್ನಾಗಿ ಜರ್ಮನ್ ಭಾಷೆಯಲ್ಲಿ ಮಾತನಾಡಬಲ್ಲರು?" ಪ್ರಶ್ನೆಯನ್ನು ಉತ್ತರಿಸುವ ಮುನ್ನ– ಜರ್ಮನ್ ನನ್ನ ಮಾತೃಭಾಷೆ ಎಂದು– ಒಂದೆರಡು ಕ್ಷಣ ನಾನು ಅನುಮಾನಿಸಿದೆ. ನಂತರ ಅವರಿಗೆ ವಿವರಿಸತೊಡಗಿದೆ. ನಾನು ವಿಯೆನ್ನಾದಲ್ಲಿ ಜನಿಸಿದ್ದೆನೆಂದೂ, ೧೯೩೮ರಲ್ಲಿ ಅಲ್ಲಿಂದ ಬಿಟ್ಟು ಹೊರಟೆನೆಂದೂ ಹೇಳಿದೆ. ನಾನು ಯೆಹೂದಿ ನಿರಾಶ್ರಿತಳು ಎಂದು ಅವರು ತಿಳಿದುಕೊಳ್ಳುವುದಿಲ್ಲ ಎಂಬುದು ನನ್ನ ಅರಿವಿಗೆ ಬರಲೇ ಇಲ್ಲ. ಜರ್ಮನಿಯನ್ನು ನಾನು ಏಕೆ ಬಿಟ್ಟುಹೋದೆನೆಂದು ಅವರು ನನ್ನನ್ನು ಕೇಳಿದಾಗ ನಾನು ನಿಜವಾಗಿಯೂ ಸ್ವಲ್ಪ ಅಚ್ಚರಿಗೊಂಡೆ. ಏನು ಹೇಳಬೇಕು ಎಂಬುದು ನನಗೆ ನಿಜವಾಗಿಯೂ ತಿಳಿಯಲಿಲ್ಲ. ನಾನು ಸಮಾಧಾನವಾಗಿ ಉತ್ತರಿಸಿದಾಗ, ನಿಜವಾಗಿಯೂ ಒಂದು ರೀತಿಯ ತಳಮಳಕ್ಕೊಳಗಾಗಿದ್ದೆ: "ಏಕೆಂದರೆ, ನಾನು ಯೆಹೂದಿ ಜನಾಂಗಕ್ಕೆ ಸೇರಿದವಳು. ನಾನೇನಾದರೂ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗದೇ ಇದ್ದಿದ್ದರೆ, ನಾನು ಉಳಿಯುತ್ತಿದ್ದುದು ಖಂಡಿತವಾಗಿಯೂ ಅಸಂಭವವಾಗಿರುತ್ತಿತ್ತು." ಮೇಜಿನ ಮೇಲೆ ಸಾವಿನಂತಹ ಮೌನ ಇಳಿದುಬಂದಿತ್ತು ಮತ್ತು ನನ್ನ ಹೃದಯ ಹೊಡೆದು ಕೊಳ್ಳಲು ಆರಂಭಿಸಿತು. ನನ್ನನ್ನು ಎಲ್ಲಿಗೋ "ಫ್ರಾಗ್‌ಮಾರ್ಚ್" ಮಾಡಿಸುತ್ತಾ

(ಕೈಗಳನ್ನು ಹಿಂದಕ್ಕೆ ಕಟ್ಟಿ, ಮುಂದೆ ತಳ್ಳಿಕೊಂಡು ಕರೆದುಕೊಂಡು ಹೋಗುವುದು) ಕರೆದುಕೊಂಡು ಹೋಗುತ್ತಾರೆಂದು ನಿಶ್ಚಯಿಸಿದೆ. ನಂತರ ಇದ್ದಕ್ಕಿದ್ದಂತೆಯೇ ಪ್ರತಿಯೊಬ್ಬರೂ ಒಟ್ಟಿಗೇ ಮಾತನಾಡಲು ಆರಂಭಿಸಿದರು ಮತ್ತು ಎಲ್ಲ ದಿಕ್ಕುಗಳಿಂದಲೂ ನನ್ನತ್ತ ಪ್ರಶ್ನೆಗಳು ಎಸೆಯಲ್ಪಡುತ್ತಿದ್ದವು. ನನ್ನ ಅನುಭವಗಳ ಬಗೆಗೆ ಅವರೆಲ್ಲಾ ಆಕರ್ಷಿತರಾಗಿದ್ದರು ಮತ್ತು ನಾನು ಪುನಃ ಜರ್ಮನಿಗೆ ಬರುವ ಬಗೆಗೆ ನನಗೆ ಹೇಗನ್ನಿಸಿತು ಎನ್ನುವುದನ್ನು ತಿಳಿಯಲು ಕಾತರರಾಗಿದ್ದರು. ಅವರ ಅನೇಕ ಪ್ರಶ್ನೆಗಳಿಗೆ ಉತ್ತರಿಸುವುದು ನನಗೆ ಸುಲಭವಾಗಿರಲಿಲ್ಲ. ಏಕೆಂದರೆ, ಅವರು ಏನು ಮಾಡಿದ್ದರೆಂಬುದನ್ನು ನೆನೆಯುವಾಗ, ನನ್ನ ದ್ವೇಷವು ತೀರಾ ಮೇಲ್ಮೈ ಮಟ್ಟದಲ್ಲಿಯೇ ಕುದಿಯುತ್ತಿತ್ತು. ನನ್ನ ನೆನಪುಗಳೆಲ್ಲಾ ಅಳಿಸಿಹೋಗಿದೆಯೆಂದು ನಾನು ತಿಳಿದಿದ್ದೆ. ಆದರೆ ಈ ಪ್ರಶ್ನೆಗಳ ತೀವ್ರ ದಾಳಿಯನ್ನು ಎದುರಿಸಿದಾಗ, ನಾನು ದಿಢೀರನೆ ಮನಗಂಡೆ. ಇದು ಕೇವಲ ನನಗೆ ಆಗಿದ್ದ ಕೆಲವು ವಿಷಯವಾಗಿ ಮಾತ್ರ ಉಳಿದಿಲ್ಲ. ಆದರೆ, ಒಂದು ಅರ್ಥದಲ್ಲಿ, ನಾನು ಏನಾಗಿದ್ದೆನೋ ಅದರ ಭಾಗವಾಗಿ ಬಿಟ್ಟಿತ್ತು ಎಂದು.

ನೆದರ್‌ಲ್ಯಾಂಡ್ಸ್‌ನಲ್ಲಿ ಇದ್ದಾಗ, ೧೯೮೧/೮೨ರ ಅಕಾಡೆಮಿಕ್ ವರ್ಷದ ಕಡೆಯ ಭಾಗದಲ್ಲಿ ಬಿಲ್, ತನ್ನ ಸೇವಾ ಅವಧಿಪೂರ್ವವೇ ನಿವೃತ್ತಿ ಪಡೆಯಬೇಕೆಂದು ನಿರ್ಧರಿಸಿದ್ದ. ಇದರಿಂದ, ಅವನು ತನ್ನ ಸಂಶೋಧನೆ ಮತ್ತು ಬರವಣಿಗೆಯಲ್ಲಿ ಮನಸ್ಸನ್ನು ಕೇಂದ್ರೀಕೃತಗೊಳಿಸಬಹುದಾಗಿತ್ತು. 'ಮಹಿಳೆ ಉದ್ಯೋಗ ಮತ್ತು ಕುಟುಂಬ' ಈ ಕಾರ್ಯಯೋಜನೆಯ ಮುಕ್ತಾಯದ ನಂತರ ನಾನು ಕೂಡ ಬಿಲ್‌ನ ಮಾರ್ಗವನ್ನೇ ಅನುಸರಿಸಲು ನಿರ್ಧರಿಸಿದೆ. ನಾನು IDS ಅನ್ನು ಬಿಟ್ಟು ಬಂದಾಗಿನಿಂದಲೂ, ನನ್ನ ಸಂಶೋಧನಾ ಕಾರ್ಯದಲ್ಲಿ ಕೀರ್ತಿಯನ್ನು ನನ್ನದೇ ಆದ ಹಕ್ಕು, ಮಾನ್ಯತೆಗಳನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದೆ. ಇದು ಯಾವುದೇ ವಿಧ್ಯುಕ್ತ ಉದ್ಯೋಗದ ಆಸರೆಯ ನಿರ್ಬಂಧಗಳಿರದೇ ನನ್ನ ವೃತ್ತಿ ಜೀವನವನ್ನು ಮುಂದುವರೆಸಬಹುದೆಂಬ ಆತ್ಮವಿಶ್ವಾಸವನ್ನು ನನ್ನಲ್ಲಿ ತುಂಬಿತ್ತು. ನನ್ನ ಯೋಚನೆ ಸಮರ್ಪಕವಾಗಿತ್ತು. ದೇವರಿಗೆ ವಂದನೆಗಳನ್ನು ಸಲ್ಲಿಸಬೇಕು. ಉಪನ್ಯಾಸಗಳನ್ನು ನೀಡಲು ಮತ್ತು ಅಭಿವೃದ್ಧಿಯ ಸಲಹಾಗಾರಳಾಗಿ ಕಾರ್ಯ ನಿರ್ವಹಿಸಲು ಅನೇಕ ಬೇಡಿಕೆಗಳು ಬರತೊಡಗಿದವು. ಹೊಸದಾಗಿ ಕಂಡುಕೊಂಡ ಈ ಸ್ವಾತಂತ್ರ್ಯವನ್ನು ನಾನು ಆನಂದದಿಂದ ಆಸ್ವಾದಿಸಿದೆ ಮತ್ತು ಜೀವನವು ಮತ್ತೆ ತನ್ನ ಸ್ಥಾನದಲ್ಲಿ ಸುಸ್ಥಿರವಾಗುತ್ತಿದೆಯೆಂದು ಭಾವಿಸಿದೆ.

ನಾನು ಆಗಿನ್ನೂ ಜರ್ಮನಿಯ ಓಲ್ಡನ್‌ಬರ್ಗ್ ಯೂನಿವರ್ಸಿಟಿಯಲ್ಲಿ ಮತ್ತೊಂದು ಉಪನ್ಯಾಸ ನೀಡಲು ಆಹ್ವಾನವನ್ನು ಒಪ್ಪಿಕೊಂಡಿದ್ದೆ. ಆಗ ಬಿಲ್ ನನ್ನನ್ನು ತನ್ನ ಅಧ್ಯಯನದಲ್ಲಿ ಸೇರಿಕೊಳ್ಳುವಂತೆ ಕೇಳಿದ. ಅವನು ಇಷ್ಟೇಕೆ

ಮಂಕಾಗಿದ್ದಾನೆಂದು ನಾನು ಅಚ್ಚರಿಗೊಂಡೆ. ತನಗೆ ಕೆಲವು, ಹೃದಯಕ್ಕೆ ಸಂಬಂಧ ಪಟ್ಟಂತೆ ತೊಂದರೆಗಳು ಇವೆಯೆಂದೂ, ನಮ್ಮ ವೈದ್ಯರೊಡನೆ ಸಮಾಲೋಚಿಸಿದಾಗ ಅವರು ಕೂಡಲೇ, ಲಂಡನ್ನಿನ ಕ್ರಾಮ್‌ವೆಲ್ ಆಸ್ಪತ್ರೆಯಲ್ಲಿ ಆಂಜಿಯೋಗ್ರಾಮ್ ಮಾಡಿಸಿಕೊಳ್ಳಲು ಏರ್ಪಾಟು ಮಾಡಿರುವುದಾಗಿಯೂ, ಬಿಲ್ ಸಮಾಧಾನವಾಗಿ ಹೇಳಿದ. ನಾನು ಅವನನ್ನು ಕೆದಕಿ, ಕೇಳತೊಡಗಿದೆ. ನನಗೇಕೆ ಹೇಳಿರಲಿಲ್ಲವೆಂದು ಕೇಳಿದೆ. ಆದರೆ ನನಗೆ ಆಗಲೇ ಉತ್ತರ ತಿಳಿದಿತ್ತು: ಬಿಲ್ ನನ್ನನ್ನು ಚಿಂತೆಗೀಡು ಮಾಡಲು ಬಯಸಿರಲಿಲ್ಲ. ನಾನು ನನ್ನ ಜರ್ಮನಿಯ ಪ್ರಯಾಣವನ್ನು ರದ್ದು ಗೊಳಿಸಿ ಬಿಲ್‌ನ ಆಂಜಿಯೋಗ್ರಾಂಗೆ, ಅವನ ಜೊತೆಯಲ್ಲಿ ಹೋದೆ. ನಮ್ಮ ದಿಢೀರ್ ಪಾತ್ರದ ತಿರುಗುಮುರುಗನ್ನು ನನಗೆ ನಂಬಲೇ ಸಾಧ್ಯವಾಗಲಿಲ್ಲ. ಕೇವಲ ತಿಂಗಳುಗಳಷ್ಟು ಹಿಂದೆ, ಅವನು ನನ್ನ ಕೈಹಿಡಿದುಕೊಂಡು ಕುಳಿತು, ನನ್ನನ್ನು ಸಾಂತ್ವನಗೊಳಿಸಲು ಪ್ರಯತ್ನಿಸುತ್ತಿದ್ದ, ಈಗ ಅವನ ಹಾಸಿಗೆಯ ಪಕ್ಕದಲ್ಲಿ ಕುಳಿತು, ಅವನನ್ನು ಸಾಂತ್ವನಗೊಳಿಸುವುದು, ಆಂಜಿಯೋಗ್ರಾಂನ ಫಲಿತಾಂಶವನ್ನು ಕೇಳುತ್ತಾ ಕಾಯುತ್ತಾ ಕೂರುವುದು ಈಗ ನನ್ನ ಸರದಿಯಾಗಿತ್ತು. ಸಲಹಾಕಾರನು ಬರುತ್ತಿರುವುದನ್ನು ನಾವು ನೋಡಿದಾಗ, ನಾನು ಬಿಲ್‌ನ ಕೈಯನ್ನು ಹಿಸುಕಿದೆ. ಬಿಲ್ ನನ್ನ ಕಡೆಗೆ ತಿರುಗಿಕೊಂಡು ಹೇಳಿದ: "ವಿವಾಹವೆಂದರೆ ಏನೆಲ್ಲಾ ಎಂದು ನಿನಗೆ ತಿಳಿದಿದೆಯಾ? ಅದು, ಪರಸ್ಪರರು ಆಸ್ಪತ್ರೆಯ ಹಾಸಿಗೆಯ ಬಳಿ, ಒಬ್ಬರು ಮತ್ತೊಬ್ಬರ ಬಳಿ ಕುಳಿತಿರುವುದು ಮತ್ತು ಪರಸ್ಪರರಿಗೆ ಬೆಂಬಲ ಕೊಡುವುದು." ಅವನಿಗೆ ಅವಶ್ಯಕವಾಗಿರುವ ಬೆಂಬಲವನ್ನು ನೀಡಲು ನಾನು ಸಾಕಷ್ಟು ಶಕ್ತಳಾದರೆ ಸಾಕು ಎಂದು ನಾನು ಆಶಿಸಿದೆ.

ಆ ಸಲಹಾಕಾರನು ಅದೊಂದು ಸರ್ವೇಸಾಧಾರಣ ಸಂಗತಿಯೆಂಬಂತೆ, ಬಿಲ್‌ಗೆ ಮೂರು ಬೈಪಾಸ್ ಹೃದಯ ಶಸ್ತ್ರಚಿಕಿತ್ಸೆಯ ಅಗತ್ಯವಿದೆಯೆಂದು ಹೇಳಿದ ಮತ್ತು ಶಸ್ತ್ರಚಿಕಿತ್ಸೆಯ ದಿನವನ್ನು ನಿಗದಿಪಡಿಸಲು ತನ್ನ ದಿನಚರಿಯ ಪುಸ್ತಕವನ್ನು ತೆರೆದ. ಇವನೇನು, ಜೀವಕ್ಕೆ ಅಪಾಯ ತರಬಹುದಾದಂತಹ (ಅಥವಾ ಜೀವವನ್ನು ರಕ್ಷಿಸುವಂತಹ) ಒಂದು ಘಟನೆಗೆ ವ್ಯವಸ್ಥೆ ಮಾಡುತ್ತಿರುವುದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ರಾತ್ರಿಯೂಟಕ್ಕೆ ಕರೆದುಕೊಂಡು ಹೋಗಲು ಏರ್ಪಾಟು ಮಾಡುತ್ತಿದ್ದಾನೆಯೇ ಎನಿಸಿತು ನನಗೆ. ಬಿಲ್‌ನ ಕಾಯಿಲೆಯ ತೀವ್ರತೆಯ ಬಗೆಗೆ ನಾನು ಗಾಬರಿಯಾಗಿ, ಆಘಾತಗೊಂಡೆ. ಆದರೂ ನನ್ನ ಚಿತ್ತಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಹೆಣಗಾಡಿದೆ. ಒಂದೇ ಒಂದು ಮಾತನ್ನು ಹೇಳದೇ ಆ ಸಲಹಾಕಾರನ ಮಾತುಗಳನ್ನು ಬಿಲ್ ಅರ್ಥಮಾಡಿಕೊಂಡ. ನಂತರ, ಒಂದೆರಡು ಕ್ಷಣಗಳಾದ ಮೇಲೆ, ಅವನು ಶಾಂತನಾಗಿ ಆ ಸಲಹಾಕಾರನಿಗೆ, ತನಗಾಗಿ ಕಾಲವನ್ನು ವ್ಯಯಿಸಿದ್ದಕ್ಕಾಗಿ ವಂದಿಸಿದ. ಮತ್ತು ಶಸ್ತ್ರಚಿಕಿತ್ಸೆಗೆ ಉತ್ತಮವಾದ ಸಮಯ ಯಾವುದೆಂದು ನಿರ್ಧರಿಸಲು ಪ್ರಯತ್ನಿಸಿದ.

ನಿಜವಾದ ಹೆದರಿಕೆಯನ್ನು ನನ್ನಿಂದ ಮರೆಮಾಚುವುದಕ್ಕೋಸ್ಕರ, ಅವನು ತನ್ನ ಭಾವನೆಗಳ ಮೇಲೆ ಬಿಗಿಯಾದ ನಿಯಂತ್ರಣವನ್ನು ಹೇರಲು ಪ್ರಯತ್ನಿಸುತ್ತಿದ್ದುದನ್ನು ನಾನು ನೋಡಿದೆ. ಈ ಸುದ್ದಿಯನ್ನು ಹೊಂದಿಸಿಕೊಳ್ಳಲು ಇಬ್ಬರೂ ಪ್ರಯತ್ನಿಸುತ್ತಿದ್ದೆವು. ಇಬ್ಬರೂ ಕಾರಿನಲ್ಲಿ ಮೌನವಾಗಿದ್ದೆವು. ಬಿಲ್ ಮಾತನಾಡಿದ ಒಂದೇ ಒಂದು ವಿಷಯವೆಂದರೆ, ನನ್ನ ಜರ್ಮನಿಯ ಪ್ರಯಾಣ ತಪ್ಪಿಹೋದದ್ದಕ್ಕಾಗಿ, ಅವನು ಬಹಳ ವ್ಯಸನಪಟ್ಟಿದ್ದ ಎನ್ನುವುದು ಮಾತ್ರ. ಏನು ಹೇಳಬೇಕೆಂದು ನನಗೆ ತಿಳಿಯಲಿಲ್ಲ; ಇಂತಹ ಪರಿಸ್ಥಿತಿಯಲ್ಲಿಯೂ ನಾನು ಹೋಗಲು ಇಷ್ಟಪಡುತ್ತಿದ್ದೇನೆಂದು ಅವನು ಹೇಗೆ ಯೋಚಿಸಲು ಸಾಧ್ಯ? ಅವನು ನನ್ನ ಪ್ರೀತಿಯನ್ನು ನಿಜವಾಗಿಯೂ ಎಂದೂ ನಂಬಲಿಲ್ಲ ಮತ್ತು ನಾನು ಅವನ ಜೊತೆಯಲ್ಲಿ ಅತ್ಯಂತ ಹೆಚ್ಚಿನ ಕೆಡುಕನ್ನು ಕೂಡ ಎದುರಿಸಲು ಸಿದ್ಧಳಿರುತ್ತೇನೆ ಎಂಬುದನ್ನು ಅವನು ಎಂದು ಒಪ್ಪಿಕೊಂಡಿರಲೇ ಇಲ್ಲ. ಅವನ ನಮ್ರತೆ, ಸಂಕೋಚಸ್ವಭಾವಗಳು, ನನ್ನಲ್ಲಿ ಮುಗುಳ್ನಗುವನ್ನು ತರಿಸಿದವು. ನಾನು ಅವನ ಕೈಯನ್ನು ತೆಗೆದುಕೊಂಡು ಮೃದುವಾಗಿ ಹಿಸುಕಿದೆ ಮತ್ತು ಹೇಳಿದೆ, "ನಾನು ಅವನ ಪಕ್ಕದಲ್ಲಿ ಬಿಟ್ಟು, ಎಂದೂ ಎಲ್ಲಿಯೂ ಇರುವುದಿಲ್ಲ."

ಶಸ್ತ್ರ ಚಿಕಿತ್ಸೆಯ ಅವಧಿಯ ವಾರಗಳ ಮುಂಚೆ, ಬಿಲ್ ಏನನ್ನೂ ಹೇಳಲಿಲ್ಲ. ಅವನ ಈ ಶಾಂತಚಿತ್ತತೆಯ ಬಗೆಗೆ ನಾನು ಅಚ್ಚರಿಗೊಂಡೆ. ನಾನು ಯಾವಾಗಲೂ ಕೇಳುತ್ತಿದ್ದೆ. "ನಾನೇ ಏಕೆ ಆಗಬೇಕಿತ್ತು?" ಎಂದು. ಆದರೆ, ನಾನು ಎಂದೂ ಒಪ್ಪಿಕೊಳ್ಳದಿದ್ದ ರೀತಿಯಲ್ಲಿ ಬಿಲ್ ತನ್ನ ವಿಧಿಯನ್ನು ಒಪ್ಪಿಕೊಂಡಿದ್ದಂತೆ ತೋರಿತು. ನನ್ನ ಮ್ಯಾಸ್ಟೆಕ್ಟಮಿ ಶಸ್ತ್ರಚಿಕಿತ್ಸೆಗೆ ಮುಂಚೆ, ಶಸ್ತ್ರ ಚಿಕಿತ್ಸೆಯನ್ನು ತಡೆದುಕೊಂಡು ನಾನು ಉಳಿಯುವುದಿಲ್ಲವೆಂಬ ಭ್ರಮೆ ಹಿಡಿದಿದ್ದು, ನಾನು ಸತ್ತರೆ ಅವನು ಏನು ಮಾಡಬೇಕು ಎನ್ನುವುದರ ಬಗೆಗೆ, ಅಸ್ವಸ್ಥ ಭಾವನೆಯ ಧ್ವನಿಯಲ್ಲಿ ಮಾತನಾಡುತ್ತಲೇ ಇದ್ದೆ. ಬಿಲ್ ಅಂತಹ ಸಾಧ್ಯತೆಯ ಬಗೆಗೆ ಎಂದೂ ಮಾತನಾಡಲೇ ಇಲ್ಲ ಮತ್ತು ಆ ವಿಷಯವನ್ನು ನಾನೇ ಮೊದಲು ಪ್ರಸ್ತಾಪಿಸಲು ನಾನು ಬಯಸಲಿಲ್ಲ. ಅದಕ್ಕೆ ಬದಲಾಗಿ, ಅವನ ಶಸ್ತ್ರಚಿಕಿತ್ಸೆ ಮತ್ತು ಕಾಯಿಲೆಯ ವ್ಯಾವಹಾರಿಕ, ಮತ್ತು ವಾಸ್ತವಾಂಶಗಳ ಬಗೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಿದೆವು. ಮಿಷೆಲ್ಲೆಯು ಈ ಸಮಯಕ್ಕೆ ಆಗಲೇ ತನ್ನ ಪದವಿಯನ್ನು ಮುಗಿಸಿ ಸೆಂಟ್ರಲ್ ಲಂಡನ್ನಿನಲ್ಲಿ ಉದ್ಯೋಗ ಮಾಡುತ್ತಿದ್ದುದರಿಂದ, ನಾನು ಲಂಡನ್ನಿನ ಅವಳ ಫ್ಲಾಟ್‌ನಲ್ಲಿಯೇ ಉಳಿದುಕೊಳ್ಳಲು ಯೋಚಿಸಿದ್ದೆ. ಶಸ್ತ್ರಚಿಕಿತ್ಸೆಯ ದಿವಸ ನನ್ನ ಜೊತೆ ಇರಲು ಸಾಧ್ಯವಾಗುವಂತೆ ಡೆಬ್ಬಿ ಏರ್ಪಾಡು ಮಾಡಿಕೊಂಡಿದ್ದಳು.

ಶಸ್ತ್ರ ಚಿಕಿತ್ಸೆಯ ದಿನ ಬಂದಾಗ ಸಾಧ್ಯವಾದಷ್ಟು ಹೆಚ್ಚು ಸಮಯ ಬಿಲ್‌ನ ಜೊತೆಯಲ್ಲಿಯೇ ಇದ್ದೆ ನಾನು, ಅವನನ್ನು ಹಾಗೆಯೇ ಬಿಟ್ಟುಹೋಗಲೂ ನಾನು ಇಷ್ಟಪಡಲಿಲ್ಲ. ಹಾಗೆಯೇ ಅವನು ನನ್ನ ದುಃಖವನ್ನು ನೋಡುವುದೂ ನನಗೆ

ಇಷ್ಟವಿರಲಿಲ್ಲ. ಕಡೆಯ ಸಾರಿ ಅವನನ್ನು ತಬ್ಬಿಕೊಂಡು, ಆಶಾವಾದವನ್ನು ಹೊರಸೂಸಲು ಪ್ರಯತ್ನಿಸುತ್ತಾ, ಎಲ್ಲವೂ ಒಳ್ಳೆಯದಾಗುವುದೆಂದೂ, ಅವನನ್ನು ನೋಡಲು ಆಮೇಲೆ ನಾನು ಬರುವುದಾಗಿ ಹೇಳುತ್ತಾ ಅಲ್ಲಿಂದ ಹೊರಟು ಬಂದೆ. ವಾರ್ಡನ್ನು ಬಿಟ್ಟು ಬರುತ್ತಿದ್ದಂತೆಯೇ ನನ್ನಲ್ಲಿ ಕಣ್ಣೀರು ಸ್ಫೋಟಿಸಿತು. ಇಂತಹ ಶಿಕ್ಷೆಯನ್ನು ನೀಡುವಂತಹ, ಯಾವ ಕೆಟ್ಟದ್ದನ್ನು ಮಾಡಿದ್ದೆ ನಾನು ಎಂದು ಚಿಂತಿಸತೊಡಗಿದೆ.

ಬೇರೆ ಏನು ಮಾಡುವುದೆಂದು ತಿಳಿಯದೆ, ಡೆಬ್ಬಿ ಮತ್ತು ನಾನು ದಿನದ ಬಹುತೇಕ ಸಮಯ ಫೋನಿನ ಹತ್ತಿರವೇ ಕುಳಿತಿದ್ದೆವು. ನಿಮಿಷಗಳು ಕಳೆಯುತ್ತಿದ್ದಂತೆಯೇ ನಾನು ಹೆಚ್ಚು ಹೆಚ್ಚು ಆತಂಕಗೊಂಡೆ. ಶಸ್ತ್ರಚಿಕಿತ್ಸೆಯು ಬೆಳಿಗ್ಗೆ ೧೦ ಗಂಟೆಗೆ ಆರಂಭವಾಗಿ ಮತ್ತು ಮಧ್ಯಾಹ್ನ ೨ ಗಂಟೆಗೆ ಮುಗಿಯಬೇಕಾಗಿತ್ತು. ನಾನು ಅತ್ಯಂತ ಕೆಟ್ಟದ್ದನ್ನೇ ಊಹಿಸಿದೆ. ಡೆಬ್ಬಿ ನನ್ನನ್ನು ಸಮಾಧಾನಪಡಿಸಲು ಪ್ರಯತ್ನಿಸಿದಳು. ಆದರೆ ಸಾಯಂಕಾಲ ೫ ಗಂಟೆಯ ವೇಳೆಗೆ ನಾವಿಬ್ಬರೂ ತೀರಾ ಉದ್ರಿಕ್ತರಾದೆವು. ಮಿಷೆಲ್ಲೆ ಮನೆಗೆ ಬಂದಳು. ನಾವು ಮೂವರೂ ಒಬ್ಬರಿಗೊಬ್ಬರು ಒತ್ತೊತ್ತಾಗಿ ತಾಗಿಕೊಂಡು ಕುಳಿತೆವು. ನಾನು ಶಸ್ತ್ರ ಚಿಕಿತ್ಸಕನನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದೆ. ಲೆಕ್ಕವಿಲ್ಲದಷ್ಟು ಬಾರಿ ನಂಬರುಗಳನ್ನು ಯತ್ನಿಸಿದರೂ, ಸಂಪರ್ಕ ಸಿಗದಿದ್ದಾಗ, ನನ್ನ ಆತಂಕ ಮತ್ತಷ್ಟು ಹೆಚ್ಚಾಗಲು ಕಾರಣವಾಯಿತು. ಅಲ್ಲಿ ಏನಾಗುತ್ತಿದೆಯೆಂಬುದರ ಬಗೆಗೆ ಯಾರೊಬ್ಬರಿಗೂ ತಿಳಿದಿಲ್ಲವೇನು? ಕಡೆಗೆ ಒಬ್ಬ ನರ್ಸ್‌ನನ್ನು ಪತ್ತೆ ಹಚ್ಚಿದರು. ಬಿಲ್‌ನ್ನು ತೀವ್ರನಿಗಾ ಘಟಕಕ್ಕೆ ಬದಲಾಯಿಸಿರುವುದಾಗಿಯೂ, ಅವನು ಎಷ್ಟು ನಿರೀಕ್ಷಿಸಬಹುದಾಗಿತ್ತೋ ಅಷ್ಟು ಉತ್ತಮವಾಗಿರುವನೆಂದೂ ಆ ನರ್ಸ್ ವರದಿ ಮಾಡಿದಳು. ಮರುದಿನ ಬೆಳಿಗ್ಗೆ ನಾನು ಆಸ್ಪತ್ರೆಗೆ ಬರಬಹುದೆಂದೂ, ಬಿಲ್‌ನ ಸ್ಥಿತಿಯಲ್ಲಿ ಏನಾದರೂ ಬದಲಾವಣೆ ಕಂಡುಬಂದಲ್ಲಿ ಅವಳು ಕರೆ ಮಾಡುವು ದಾಗಿಯೂ ತಿಳಿಸಿದಳು. ನಗಬೇಕೋ, ಅಳಬೇಕೋ ಎಂಬುದು ನನಗೆ ತಿಳಿಯಲಿಲ್ಲ; ಮೊದಲನೆಯ ಸುತ್ತಿನಲ್ಲಿ ಬಿಲ್ ಚಿಕಿತ್ಸೆಯನ್ನು ಎದುರಿಸಿ ಯಶಸ್ವಿಯಾಗಿದ್ದ. ನಾವು ಈ ರಾತ್ರಿಯನ್ನು ಮಾತ್ರ ಕಳೆಯಬೇಕಾಗಿತ್ತು.

ಮರುದಿನ ಬೆಳಿಗ್ಗೆ ಡೆಬ್ಬಿ ನನ್ನ ಜೊತೆಯಲ್ಲಿ ಆಸ್ಪತ್ರೆಗೆ ಬಂದಳು. ನಾವು ಗೌನ್‌ಗಳನ್ನು, ರಕ್ಷಣಾ ಪಾದರಕ್ಷೆಗಳನ್ನೂ, ತಲೆಗೆ ವಿಶೇಷ ಉಡುಪನ್ನೂ ಧರಿಸಬೇಕಾದುದರಿಂದ, ಪರಿಸ್ಥಿತಿಯನ್ನು ತಿಳಿಗೊಳಿಸಲು, ನಾವು ಚಂದ್ರನ ಮೇಲೆ ನಡೆಯಲು ಹೋಗುತ್ತಿದ್ದೇವೆ ಎನ್ನಿಸುತ್ತಿದೆ ಎಂದು ಡೆಬ್ಬಿಯು ಹಾಸ್ಯ ಮಾಡಿದಳು. ಆದಾಗ್ಯೂ, ಬಿಲ್ ಅಲ್ಲಿ ಮಲಗಿರುವುದನ್ನು ನೋಡಿದಾಗ, ನಾನು ಜ್ಞಾನ ತಪ್ಪಿ ಬೀಳುವುದರಲ್ಲಿದ್ದೆ. ವಿವಿಧ ರೀತಿಯ ದ್ರವಗಳು ಶರೀರದಿಂದ ಒಳಕ್ಕೂ, ಹೊರಕ್ಕೂ

ಪ್ರವಹಿಸಲು ಅಳವಡಿಸಿದ್ದ ಅನೇಕ ನಳಿಕೆಗಳಿಂದಾಗಿ ನಾನು ಬಿಲ್‌ನನ್ನು ನೋಡಲೂ ಕೂಡ ಆಗಲಿಲ್ಲ. ಅವನು ಬಿಳಿಚಿಕೊಂಡಿದ್ದ ಮತ್ತು ನಿಶ್ಚೇಷ್ಟಿತನಾಗಿದ್ದ ಮತ್ತು ಒಂದೇ ರಾತ್ರಿಯಲ್ಲಿ ವೃದ್ಧನಾಗಿಬಿಟ್ಟಂತೆ ಕಾಣಿಸಿದ. ಅವನು ನಮ್ಮನ್ನು ಗಮನಿಸಿದಂತೆ ಕಾಣಿಸಲಿಲ್ಲ. ಅವನು ಪ್ರಜ್ಞಾಹೀನನಾಗಿದ್ದನೆಂದು ನಾನು ಚಿಂತಿಸಿದೆ. ಡೆಬ್ಬಿ ನನ್ನ ಕೈಯನ್ನು ತೆಗೆದುಕೊಂಡಳು. ನನ್ನನ್ನು ಸಮಾಧಾನವಾಗಿ ಇರಿಸಲು ಅವಳು ಪ್ರಯತ್ನಿಸುತ್ತಿದ್ದುದನ್ನು ನಾನು ಅರಿತೆ. ಆ ಕ್ಷಣದಲ್ಲಿ ಬಿಲ್‌ನ ಕಣ್ಣುಗಳು ಅಲ್ಲಾಡಿದವು ಮತ್ತು ತೆರೆದುಕೊಂಡವು. ನನ್ನ ಕಡೆಗೆ ನೋಡಿ, ಅವನು ಕ್ಷೀಣವಾಗಿ ಮುಗುಳ್ನಕ್ಕ, ಆ ಎಲ್ಲ ನಳಿಕೆಗಳಿಂದಾಗಿ ಮಾತನಾಡಲು ಅವನಿಗೆ ಕಷ್ಟವಾಗುತ್ತಿತ್ತು. ಆದ್ದರಿಂದ ನಾನು ಸುಮ್ಮನೆ ಅವನ ಕೆನ್ನೆಯನ್ನು ನೇವರಿಸಿದೆ.

ಕೆಲವೇ ದಿನಗಳ ಅವಧಿಯಲ್ಲಿ ಬಿಲ್ ನನ್ನ ಜೊತೆ ಮನೆಗೆ ಹಿಂದಿರುಗಿದ್ದ ಎನ್ನುವುದನ್ನು ನನಗೆ ನಂಬಲು ಸಾಧ್ಯವಿರಲಿಲ್ಲ. ಅವನ ಮೊದಲಿನ ಶಕ್ತಿಯನ್ನು ಮತ್ತೆ ಗಳಿಸಲು ಅವನಿಗೆ ಬಹಳ ದೀರ್ಘಕಾಲ ಬೇಕಾಯಿತು. ಆದರೆ, ಅವನು ಮನೆಯಲ್ಲಿ ಬಂದಿರುವುದರಿಂದ ನಾನು ಹೆಚ್ಚು ಸಂತೋಷಗೊಂಡಿದ್ದೆ. ಅವನ ಹಿಂದಿನ ಶಕ್ತಿ, ಉತ್ಸಾಹಗಳಲ್ಲಿ ಬಹಳಷ್ಟನ್ನು ಬಿಲ್ ಕಳೆದುಕೊಂಡಿದ್ದ. ಹಾಗಾಗಿ, ಅವನನ್ನು ಕರೆದುಕೊಂಡು ಬರುವುದು, ಕರೆದುಕೊಂಡು ಹೋಗುವುದು ಇವುಗಳನ್ನು ನೋಡುತ್ತಾ ಮತ್ತೆ ಮತ್ತೆ ಹತಾಶನಾಗುತ್ತಿದ್ದ. ಆದರೆ ನಾನು ಮಾತ್ರ ಒಮ್ಮೆಯೂ ಆಕ್ಷೇಪಿಸಲಿಲ್ಲ. ಏಕೆಂದರೆ, ಬಿಲ್‌ಗೆ ಅತ್ಯಂತ ಹೆಚ್ಚಿನ ನಿಗಾ ಬೇಕಾಗಿದೆಯೆಂದು ಶಸ್ತ್ರ ಚಿಕಿತ್ಸಕ ನನಗೆ ಎಚ್ಚರಿಕೆ ನೀಡಿದ್ದ, ವಿಶೇಷವಾಗಿ ಬಿಲ್ ಡಯಾಬಿಟಿಕ್ ಆಗಿದ್ದುದರಿಂದ ಅವನ ಪರಿಸ್ಥಿತಿ ಮತ್ತಷ್ಟು ಜಟಿಲವಾಗಬಹುದೆಂದೂ ಹೇಳಿದ್ದ.

ಬಿಲ್‌ನ ಚೇತರಿಕೆಯ ಅವಧಿಯು ಮುಗಿದ ನಂತರ, ನಾವು ಮನೆಯಲ್ಲಿ ಸರಳವಾದ ಬದುಕಿನ ರೀತಿಗೆ ಹೊಂದಿಕೊಂಡೆವು. ದಿನದ ಬಹುಭಾಗವನ್ನು ನಾವು ಓದುತ್ತಾ ಅಥವಾ ಬರೆಯುತ್ತಾ ನಮ್ಮ ಅಧ್ಯಯನ ಕೋಣೆಗಳಲ್ಲಿ ಕಳೆಯುತ್ತಿದ್ದೆವು ಮತ್ತು ಸಾಯಂಕಾಲಗಳಲ್ಲಿ ಒಟ್ಟಿಗೇ ಸೇರುತ್ತಿದ್ದೆವು. ಆಗಾಗ್ಗೆ ಸಾಕಷ್ಟು ದೀರ್ಘವಾಗಿ ಚರ್ಚಿಸುತ್ತಿದ್ದೆವು ಮತ್ತು ನಮ್ಮ ಅಕಾಡೆಮಿಕ್ ಆಶ್ರಯದಲ್ಲಿ, ಸುಲಲಿತವಾಗಿ, ಆಕರ್ಷಕವಾಗಿ ವೃದ್ಧರಾಗುತ್ತಿರುವುದನ್ನು ನಾನು ಕಾಣಬಹುದಿತ್ತು. ನಾವಿಬ್ಬರೂ ನಮ್ಮ ಕೆಲಸಗಳನ್ನೂ ಪರಸ್ಪರರ ಜೊತೆಯನ್ನೂ ಆನಂದಿಸುತ್ತಿದ್ದೆವು. ಆದಾಗ್ಯೂ, ಅದು ಹೀಗೇ ಇರುವುದಿಲ್ಲವೆಂದು, ನಾನು ಅರಿತಿರ ಬೇಕಾಗಿದ್ದಿತು.

ಯೋಮ್ ಕಪ್ಪುರ್‌ನಂದು ನನಗೆ ರಕ್ತಸ್ರಾವವಾಗುತ್ತಿರುವುದನ್ನು ನಾನು ಕಂಡುಕೊಂಡೆ. ತಕ್ಷಣವೇ ಅತ್ಯಂತ ಕೆಟ್ಟದ್ದನ್ನೇ ನಾನು ಯೋಚಿಸಿದೆ ಮತ್ತು ಸ್ತ್ರೀರೋಗ ತಜ್ಞರಿಂದ ಸಂಪೂರ್ಣ ತಪಾಸಣೆಯ ನಂತರ ನನ್ನ ಹೆದರಿಕೆಯು ದೃಢಪಟ್ಟಿತು. ಶಸ್ತ್ರಚಿಕಿತ್ಸೆ ಮಾಡಿ ತೆಗೆಯಬೇಕಾದ ಗೆಡ್ಡೆಯೊಂದಿದೆಯೆಂದು ಕೇಳಿ ನಾನು ಕ್ಯಾನ್ಸರ್

ಹರಡಿಬಿಟ್ಟಿತ್ತು ಎಂಬುದನ್ನು ಮನದಟ್ಟು ಮಾಡಿಕೊಂಡೆ. ಮತ್ತೊಂದು ಶಸ್ತ್ರ ಚಿಕಿತ್ಸೆಗಾಗಲೀ, ರೇಡಿಯೋ ಥೆರಪಿಗಾಗಲೀ, ಅಥವಾ ಕಿಮೋಥೆರಪಿಗಾಗಲೀ ನಾನು ಸಿದ್ಧಳಿಲ್ಲವೆಂದು ಅಲ್ಲಿಯೇ, ಆಗಲೇ ನಾನು ನಿರ್ಧರಿಸಿದೆ. ನಾನು ಸಾಯುವುದೇ ಆದಲ್ಲಿ, ಆದಷ್ಟು ಶೀಘ್ರವಾಗಿ ಸಾಯಲು ಬಯಸಿದೆ. ಈ ಯಾತನೆಯನ್ನು ಹೀಗೆ ಮುಂದುವರೆಸುವುದಕ್ಕಿಂತಲೂ ಅದು ಉತ್ತಮವೆನಿಸಿತ್ತು. ನಾನು ನನ್ನ ಈ ಭಾವೋದ್ರೇಕದ ಮಾತುಗಳನ್ನು ಮುಗಿಸುವ ತನಕ ಸುಮ್ಮನಿದ್ದ ಆ ಪರಿಣತ ವೈದ್ಯನು ಆ ಬೆಳವಣಿಗೆಯು, ಹಾನಿಕರವಲ್ಲದ್ದು ಎಂದು ನನಗೆ ಭರವಸೆ ನೀಡಿದ ನಂತರ ನಾನು ಶಸ್ತ್ರ ಚಿಕಿತ್ಸೆಗೆ ಒಪ್ಪಿದೆ.

ಇತ್ತೀಚೆಗೆ ಆಸ್ಪತ್ರೆಯ ದಿನಚರಿಯು ಸಾಕಷ್ಟು ಪರಿಚಿತವಾಗತೊಡಗಿತ್ತು. ಆದರೆ, ಒಂದು ದೊಡ್ಡ ವ್ಯತ್ಯಾಸವೆಂದರೆ, ಬಿಲ್ ನನಗೆ ಮೊದಲಿನ ಬೆಂಬಲವನ್ನು ಕೊಡಲು ಸಾಧ್ಯವಾಗುತ್ತಿರಲಿಲ್ಲ. ಅವನು ಇನ್ನೂ ದುರ್ಬಲನಾಗಿದ್ದ ಮತ್ತು ಕಾರನ್ನು ಚಲಿಸಲು ಅಸಮರ್ಥನಾಗಿದ್ದ, ಹಾಗಾಗಿ ಆಸ್ಪತ್ರೆಗೆ ಹೋಗುವುದು ಮತ್ತೆ ಅಲ್ಲಿಂದ ಬರುವುದು ಇವು ನನ್ನ ಪಾಲಿಗೇ ಬಂದಿತು. ನಾನು ಅವನನ್ನೇನೂ ದೂರಲಿಲ್ಲ. ಆದರೆ, ನಮ್ಮ ಬಾಂಧವ್ಯದ ಈ ಹಂತದಿಂದಾಗಿ ನಾನು ಚಿಂತಿತಳಾದೆ. ನನ್ನ ಭಯ, ಆತಂಕಗಳ ಬಗೆಗೆ ಅವನೊಡನೆ ಏನನ್ನೂ ನಾನು ಮಾತನಾಡಲಾರದಾದೆ. ಅನವಶ್ಯಕವಾಗಿ ಅವನನ್ನು ಚಿಂತೆಗೀಡುಮಾಡಲು ನಾನು ಬಯಸಲಿಲ್ಲ. ಈ ಪರಿಸ್ಥಿತಿಯನ್ನು ನಾವು ಹೇಗೆ ನಿರ್ವಹಿಸಬಹುದು ಎಂದು ಯೋಜಿಸುವುದರ ಬದಲು, ನಾನು ಮನೆಗೆ ಬಂದಾಗ, ಬಿಲ್ ತನ್ನ ಪಾಡಿಗೆ ತಾನು ಹೇಗೆ ನಿರ್ವಹಿಸುತ್ತಾ ನೆಂಬುದನ್ನು ಪರಿಗಣಿಸಬೇಕಾಗಿತ್ತು.

ವೈದ್ಯರು ಮೊದಲು ಆಲೋಚಿಸಿದುದ್ದಕ್ಕಿಂತಲೂ ತೀವ್ರತರದ್ದಾಗಿತ್ತು ಶಸ್ತ್ರ ಚಿಕಿತ್ಸೆ. ತಾನು ಒಂದು ಟೆನ್ನಿಸ್ ಚೆಂಡಿನ ಗಾತ್ರದ ಗಡ್ಡೆಯನ್ನು ತನ್ನ ಗರ್ಭಾಶಯದಿಂದ ತೆಗೆದುದಾಗಿ, ವೈದ್ಯನು ಮನಸ್ಸಿಲ್ಲದೆ ಒಪ್ಪಿಕೊಂಡರು. ಆ ಗಡ್ಡೆಯು ಹಾನಿಕಾರಕ ವಲ್ಲವೆಂದು ನಟಿಸಲು ಅವರು ಪ್ರಯತ್ನಿಸಿದರು. ಆದರೆ, ಅವರು ಕೀಮೋಥೆರಪಿ ಯನ್ನು ಸೂಚಿಸಿದಾಗ, ನಾನು ಅಂಡಾಶಯದ ಕ್ಯಾನ್ಸರಿನಿಂದ ಬಳಲುತ್ತಿದ್ದೆನೆಂದು ನನಗೆ ತಿಳಿಯಿತು. ನಾನು ಕೋಪೋದ್ರಿಕ್ತಳಾದೆ. ನನಗೆ ಸುಳ್ಳು ಹೇಳಿದ್ದರು. ನಾನು ನನ್ನ ಸಲಹೆಗಾರರನ್ನು ಕರೆದೆ ಮತ್ತು ಅವನು ಮುಖಹೇಡಿ, ಅಂಜುಬುರುಕನಂತೆ, ಬಂದಾಗ, ಅವನತ್ತ ತಿರುಗಿ ನಾನು ಕಿರುಚಿದೆ: "ನೀನು ನನಗೆ ಸುಳ್ಳು ಹೇಳಿದೆ. ನನಗೆ ಕ್ಯಾನ್ಸರ್ ಇತ್ತೆಂದು ಮೊದಲಿನಿಂದಲೂ ತಿಳಿದಿತ್ತು. ಇದಕ್ಕಾಗಿ ನಿನ್ನನ್ನು ನಾನು ಎಂದಿಗೂ, ಎಂದಿಗೂ ಕ್ಷಮಿಸುವುದಿಲ್ಲ!" ಅವನು ನನ್ನ ಹಾಸಿಗೆಯ ಮೇಲೆ ಕುಳಿತುಕೊಂಡ, ನನ್ನ ಭುಜಗಳನ್ನು ದೃಢವಾಗಿ ಹಿಡಿದುಕೊಂಡ. ಹೌದು ನಾನು ಸುಳ್ಳು ಹೇಳಿದ್ದೆ, ಇಲ್ಲದಿದ್ದರೆ ನೀನು ಶಸ್ತ್ರಚಿಕಿತ್ಸೆಗೆ ಒಪ್ಪದೇ ತಿರಸ್ಕರಿಸುತ್ತಿದ್ದೆ ಎಂದು

ವಿವರಿಸಿದ. ಅವನ ಮುಂದಿನ ಮಾತುಗಳು ನನ್ನನ್ನು ಬುಡಮಟ್ಟ ಅಲ್ಲಾಡಿಸಿಬಿಟ್ಟವು. ಶಸ್ತ್ರಚಿಕಿತ್ಸೆಯಿರದಿದ್ದರೆ, ನಾನು ಕೇವಲ ಕೆಲವೇ ತಿಂಗಳುಗಳಲ್ಲಿಯೇ ಸಾಯುತ್ತಿದ್ದೆ. ಹೊರಡಲು ಅವನು ಎದ್ದುನಿಂತ. ಮತ್ತು ಸಮಾಧಾನವಾಗಿ ಹೇಳಿದ: "ಕೆಲವು ವರ್ಷಗಳಾದ ಮೇಲೆ ನೀನು ನನ್ನ ನಿರ್ಧಾರವನ್ನು ಪ್ರಶಂಸಿಸುತ್ತೀ ಎಂದು ಆಶಿಸುತ್ತೇನೆ." ಆದರೂ, ಆ ಕ್ಷಣದಲ್ಲಿ, ಶೀಘ್ರ ಮರಣವು ಮನಸ್ಸಿಗೆ ಹೆಚ್ಚು ಆಕರ್ಷಕವೂ, ಹಿತಕರವೂ ಆಗಿ ತೋರುತ್ತಿತ್ತು ಮತ್ತು ದಿಂಬಿನಲ್ಲಿ ಮುಖ ಹುದುಗಿಸಿ ನಾನು ಬಿಕ್ಕಳಿಸಿ ಅಳತೊಡಗಿದೆ.

ಬೆಂಬಲಪೂರ್ಣನಾಗಿಯೂ, ಹರ್ಷಚಿತ್ತನಾಗಿಯೂ ಇರಲು ಬಿಲ್ ತನ್ನ ಸಾಮರ್ಥ್ಯವಿದ್ದಷ್ಟೂ ಪ್ರಯತ್ನಿಸಿದ. ಆದರೆ, ಅವನು ನಿಸ್ತೇಜನಾಗಿಯೂ, ವಾಸ್ತವ ವಾಗಿಯೂ ಕಾಯಿಲೆಯವನಂತೆ ಕಾಣಿಸಲಾರಂಭಿಸಿದ್ದುದನ್ನು ನಾನು ಗಮನಿಸಿದೆ: ಆದರೆ, ಕೀಮೋಥೆರಪಿಯ ಬಗೆಗೆ ಭಯಂಕರ ಸಂಗತಿಗಳನ್ನು ಕೇಳಿದ್ದ ನಾನು, ಆ ಸಮಯದಲ್ಲಿ ಕೇವಲ ಅದರ ಬಗೆಗೆ ಮಾತ್ರವೇ ನನ್ನ ಗಮನವನ್ನು ಕೇಂದ್ರೀಕರಿಸ ಬಲ್ಲವಳಾಗಿದ್ದೆ. ಕೀಮೋಥೆರಪಿಯನ್ನು ಮುಗಿಸುವುದು ಹೇಗೆಂಬುದು ನನ್ನ ಚಿಂತೆಯಾಗಿತ್ತು. ನಾನು ಖಿನ್ನತೆಗೊಳಗಾದೆ ಮತ್ತು ವೈಫಲ್ಯವನ್ನನುಭವಿಸಿದೆ. ನನ್ನ ಮನಸ್ಸು ಮತ್ತೆ ನನ್ನ ಕೈಬಿಟ್ಟಿತ್ತು ಮತ್ತು ತನ್ನನ್ನು ತಾನು ಕ್ಯಾನ್ಸರಿಗೆ ಕೊಟ್ಟುಕೊಂಡಿತ್ತು. ಅದರೊಡನೆ ಹೋರಾಡಲು ನನಗೆ ಸ್ವಲ್ಪವೂ ಶಕ್ತಿ ಉಳಿದಿಲ್ಲ ಎಂದೆನಿಸಿತು.

ಕೀಮೋಥೆರಪಿಯು ನನಗೆ ವಾಕರಿಕೆ ಬರಿಸುತ್ತಾ ಜುಗುಪ್ಸೆ ತರಿಸಿತು ಮತ್ತು ನನ್ನಲ್ಲಿದ್ದ ಪ್ರತಿಯೊಂದು ಔನ್ಸಿನಷ್ಟು ಶಕ್ತಿಯನ್ನು ಕಸಿದುಕೊಂಡಿತು. ದಿನವನ್ನು ಕಳೆಯಲು ನಾನು ಮಾಡಬಹುದಾದದ್ದು ಅಷ್ಟು ಮಾತ್ರ. ಬಹಳಷ್ಟು ಸಮಯ ನಾನು ಸುಮ್ಮನೆ ಮುದುಡಿಕೊಂಡು ಮಲಗಿರಬೇಕು ಮತ್ತು ಸತ್ತು ಹೋಗಬೇಕು ಎಂದು ಮಾತ್ರ ಬಯಸುತ್ತಿದ್ದೆ. ಆದರೆ, ಬಿಲ್‌ನನ್ನು ಮುಂದಿನ ಪ್ರಪಾತದ ತುದಿಯಲ್ಲಿ ನೋಡಲು, ಸರಿಯಾದ ಸಮಯದಲ್ಲಿ, ಕಾಲ ಹೊಂದಿಸಲು ಹೇಗೋ ನಿರ್ವಹಿಸಿದೆ.

ಒಂದು ದಿನ ಬೆಳಿಗ್ಗೆ, ತನ್ನ ಜವಾಬ್ದಾರಿಯನ್ನು ತಾನೊಬ್ಬನೇ ನಿರ್ವಹಿಸಲು ಇನ್ನು ಶಕ್ತಿಯಿರದೇ, ಬಿಲ್, ತಾನು ಕೆಮ್ಮಿದಾಗ ರಕ್ತ ಬರಲು ಆರಂಭವಾಗಿರುವುದಾಗಿ ತಿಳಿಸಿದ. ನಾನು ಅವನ ಕಡೆಗೆ ನೋಡಿ ಅಚ್ಚರಿಗೊಂಡೆ. ಪರಸ್ಪರ ಅವಲಂಬಿತರಾಗಲು ನಾವು ಏಕೆ ಇಷ್ಟು ಕಷ್ಟಪಡುತ್ತಿದ್ದೇವೆ; ನಾವೇಕೆ ಬಹಳ ಶಕ್ತರಾಗಿರಬೇಕು ಎಂದು ಪ್ರಯತ್ನಿಸುತ್ತೇವೆ? ನಾನು ಅವನನ್ನು ತಬ್ಬಿಕೊಂಡೆ ಮತ್ತು ಅವನ ಮೈ ಸುಡುತ್ತಿದೆ ಎಂದು ಮನಗಂಡೆ. ನಾನು ತಕ್ಷಣವೇ ನಮ್ಮ ವೈದ್ಯರನ್ನು ಸಂಪರ್ಕಿಸಿ, ಬಂದು ಬಿಲ್‌ನನ್ನು ನೋಡುವಂತೆ ಹೇಳಲು ಪ್ರಯತ್ನಿಸಿದೆ. ಆದರೆ, ಅದು ಹಬ್ಬದ ಕಾಲವಾದ್ದರಿಂದ (ಅದು ನ್ಯೂ ಇಯರ್ಸ್ ಈವ್ ಆಗಿತ್ತು) ವೈದ್ಯಕೀಯ ನೆರವು

ಪಡೆಯುವುದು ಕಷ್ಟವಾಯಿತು. ಹಾಗಾಗಿ ನಮಗೆ ಕೇವಲ ವೈದ್ಯರ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಯುವ ವೈದ್ಯನೊಬ್ಬ ಮಾತ್ರ ದೊರೆತ. ಆದರೆ, ಅವನು ಪರಿಸ್ಥಿತಿಯ ತೀವ್ರತೆಯನ್ನು ಗ್ರಹಿಸಲಿಲ್ಲ. ನಮ್ಮ ಮದುವೆ ಆದಾಗಿನಿಂದಲೂ ಯಾವಾಗಲೂ ನಾವು ಹೊಸವರ್ಷವನ್ನು ಮಧ್ಯರಾತ್ರಿಯ ಸ್ವಸ್ತಿಪಾನದೊಂದಿಗೆ ಸ್ವಾಗತಿಸಿದ್ದೆವು. ಹಾಗಾಗಿ ಬಿಲ್ ಬಹಳ ದುರ್ಬಲನಾಗಿದ್ದರೂ ತಾನು ಎಚ್ಚರ ವಾಗಿರುವುದಾಗಿ ಪಟ್ಟುಹಿಡಿದ. ಆದರೆ, ಮಧ್ಯರಾತ್ರಿಗೆ ಸ್ವಲ್ಪ ಸಮಯಕ್ಕೆ ಮುನ್ನ ಅವನು ಚಳಿಯಿಂದ ನಡುಗಲು ಆರಂಭಿಸಿದ. ನಾನು ಅವನನ್ನು ಮಹಡಿಯ ಮೇಲೆ ಅವನ ಹಾಸಿಗೆಗೆ ಕರೆದುಕೊಂಡು ಹೋದೆ.

ಹೇಗೋ ರಾತ್ರಿಯಂತೂ ಕಳೆಯಿತು. ಆದರೆ, ಮರುದಿನ ನಾವು ವೈದ್ಯರನ್ನು ಮತ್ತು ಪರಿಣತರನ್ನು ಹುಡುಕತೊಡಗಿದೆವು ಮತ್ತು ಬಿಲ್ ಶ್ವಾಸಕೋಶದ ಕ್ಯಾನ್ಸರ್‌ನಿಂದ ನರಳುತ್ತಿದ್ದಾನೆಂದು ರೋಗನಿರ್ಣಯ ಮಾಡಿದರು. ಶಸ್ತ್ರಚಿಕಿತ್ಸೆ ಮಾಡಲು ಸಾಧ್ಯವಾದ ಹೊರತೂ ಶ್ವಾಸಕೋಶದ ಕ್ಯಾನ್ಸರಿಗೆ ಯಾವುದೇ ನಿಜವಾದ, ಸರಿಯಾದ ಚಿಕಿತ್ಸೆಯೂ ಇಲ್ಲವೆಂದು ನಮ್ಮಿಬ್ಬರಿಗೂ ತಿಳಿದಿತ್ತು. ಹಾಗಾಗಿ ಇದು ಮುಕ್ತಾಯದ ಆರಂಭ ಎಂದು ನಾನು ಭಾವಿಸಿದೆ. ಅತ್ಯಂತ ಕಠಿಣವಾದ ಕೆಲಸವೆಂದರೆ, ನನ್ನ ದುಃಖ, ಅಳಲುಗಳನ್ನು ಬಿಲ್‌ನಿಂದ ಮರೆಯಾಗಿಟ್ಟುಕೊಳ್ಳುವುದೇ ಆಗಿತ್ತು. ನಾನು ಅವನಿಗಾಗಿ ಶಕ್ತಳಾಗಿರಲು ಅತ್ಯಂತ ಕಷ್ಟಪಟ್ಟು ಪ್ರಯತ್ನಿಸಿದೆ. ಮೊದಲ ಬಾರಿಗೆ ನಾವಿಬ್ಬರೂ ನಮ್ಮ ಸಾವಿನ ಬಗೆಗೆ ಮುಕ್ತವಾಗಿ, ತೆರೆದ ಮನದಿಂದ ಚರ್ಚಿಸಿದೆವು. ಏಕೆಂದರೆ ನಾವು ನಮ್ಮ ಹುಡುಗಿಯರಿಗಾಗಿ ಸರಿಯಾಗಿ ಯೋಜನೆಗಳನ್ನು ಮಾಡಬೇಕಾಗಿತ್ತು. ನಾವು ನಮ್ಮ ಉಯಿಲುಗಳನ್ನಂತೂ ಮಾಡಿದ್ದೆವು ಮತ್ತು ನಮಗೆ ಸಾಧ್ಯವಾದಷ್ಟೂ ಉತ್ತಮ ಮಟ್ಟದಲ್ಲಿ ಅವರಿಗೆ ಅವಶ್ಯಕವಾದದ್ದನ್ನೆಲ್ಲಾ ಒದಗಿಸಿದ್ದೆವು. ಆದರೆ, ನನಗಿಂತಲೂ ಹತ್ತು ವರ್ಷಗಳು ಹಿರಿಯನಾದ ಆಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದ ನನ್ನ ಸೋದರ ಓಟ್ವೊ ಒಬ್ಬನನ್ನು ಉಳಿದು, ಈ ಮಕ್ಕಳನ್ನು ನೋಡಿಕೊಳ್ಳಲು, ನಾವು ಸಂತೋಷದಿಂದ ಒಪ್ಪಿಸಬಹುದಾದ ಬೇರೆ ಯಾರೊಬ್ಬ ಸಂಬಂಧಿಕರೂ ನಮಗಿರಲಿಲ್ಲ.

ಕಡೆಯ ಭರವಸೆಯೆಂಬಂತೆ, ಬಿಲ್‌ನನ್ನು ಶ್ವಾಸಕೋಶದ ಕ್ಯಾನ್ಸರಿನ ಶಸ್ತ್ರ ಚಿಕಿತ್ಸೆಯಲ್ಲಿ ಪರಿಣತಿ ಪಡೆದಿದ್ದ ಶಸ್ತ್ರ ಚಿಕಿತ್ಸಕರ ಬಳಿಗೆ ಕಳಿಸಲಾಯಿತು. ಆ ಶಸ್ತ್ರ ಚಿಕಿತ್ಸಕರು ಬಿಲ್‌ನನ್ನು ಪರೀಕ್ಷೆ ಮಾಡುತ್ತಿದ್ದಾಗ, ನಾನು ಹೊರಗಡೆ ಕಾಯುತ್ತಾ ಇದ್ದೆ ಮತ್ತು ನನ್ನ ಜೀವನದಲ್ಲಿ ಮೊದಲನೆಯ ಬಾರಿಗೆ ಪ್ರಾರ್ಥಿಸಲು ಆರಂಭಿಸಿದೆ. ಅಲ್ಲಿ ಮೇಲುಗಡೆ ಸಹಾಯ ಮಾಡುವಂತಹ ಯಾರೋ ಒಬ್ಬ ಇದ್ದಾನೆ ಎಂದು ನಂಬಲು ಆಶಿಸಿದೆ. ಶಸ್ತ್ರ ಚಿಕಿತ್ಸಕನು, ತಮ್ಮನ್ನು ಬಂದು ಸೇರುವಂತೆ ನನ್ನನ್ನು ಕರೆದಾಗ, ನನ್ನ ಮುಖದ ಮೇಲಿದ್ದ ಆತಂಕವನ್ನು ನೋಡಿದ ಮತ್ತು ಕುಳಿತುಕೊಂಡು

ವಿಶ್ರಮಿಸಲು ಪ್ರಯತ್ನಿಸುವಂತೆ, ಮೃದುವಾಗಿ ಹೇಳಿದ. ಅವನು ಶಸ್ತ್ರಚಿಕಿತ್ಸೆ ಮಾಡುವುದಾಗಿಯೂ ಹೇಳಿದ. ನಾನು ದೊಡ್ಡದಾದ ನೆಮ್ಮದಿಯ ನಿಟ್ಟುಸಿರು ಬಿಟ್ಟೆ ಮತ್ತು ದೇವರೊಡನೆ ಮೌನದ ಒಪ್ಪಂದವನ್ನು ಮಾಡಿಕೊಂಡೆ. ಶ್ವಾಸಕೋಶದಲ್ಲಿ ಕ್ಯಾನ್ಸರಿನ ಬೆಳವಣಿಗೆಯನ್ನು ಅವಲಂಬಿಸಿ, ಬಿಲ್‌ನ ಒಂದು ಶ್ವಾಸಕೋಶವನ್ನು ಅವನು ತೆಗೆಯಬೇಕಾಗಬಹುದೆಂದು, ಅದು ಬಿಲ್‌ನನ್ನು ಗಣನೀಯವಾಗಿ ದುರ್ಬಲನನ್ನಾಗಿಸುವುದೆಂದೂ, ವಿಶೇಷವಾಗಿ ಹೃದಯದ ಬೈಪಾಸ್ ಮಾಡಿಸಿ ಕೊಂಡಿರುವುದರಿಂದಾಗಿ ಮತ್ತಷ್ಟು ಸಂಕೀರ್ಣವಾಗುವುದೆಂದೂ ವೈದ್ಯರು ಹೇಳಿದರು. ಅದರೆ ಈ ಶಸ್ತ್ರಚಿಕಿತ್ಸೆಯು ಬಿಲ್‌ಗೆ ಇನ್ನು ಕೆಲವು ವರ್ಷಗಳು ಜೀವದಾನ ಮಾಡುವುದೆಂದೂ ತಿಳಿಸಿದರು.

ಈ ಆತಂಕ, ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲು, ಬಿಲ್ ಬಗೆಗೆ ಹೇಳಿದ್ದ ಮದುವೆಯ ಸೂತ್ರವನ್ನು ನೆನಪು ಮಾಡಿದೆ ಮತ್ತು ಅವನಿಗೆ ಹೇಳಿದೆ. ಹೀಗೆ ಸಂಪೂರ್ಣವಾಗಿ ಇಬ್ಬರು ಮತ್ತೊಬ್ಬರ ಆಸ್ಪತ್ರೆಯ ಹಾಸಿಗೆಗಳ ಪಕ್ಕದಲ್ಲಿ ಕುಳಿತಿರುವುದು ಎಂದಿದ್ದರೆ, ನಾನು ಇಡಿಯ ವಿಷಯವನ್ನು ಮರುಚಿಂತನೆಗೆ ಗುರಿಪಡಿಸುತ್ತಿದ್ದೆ. ಅವನು ನಗಲು ಪ್ರಯತ್ನಿಸಿದ. ಆದರೆ, ಆ ಹಂತದಲ್ಲಿ ಕೇವಲ ಕೆಮ್ಮಲು ಮಾತ್ರ ಸಾಧ್ಯವಾಯಿತು ಅವನಿಗೆ.

ಕೆಲವು ದಿನಗಳ ನಂತರ ಬಿಲ್ ಗೈಸ್ ಆಸ್ಪತ್ರೆಗೆ ಹೋದ. ಮತ್ತೆ ಡೆಬ್ಬಿಯು ನನ್ನ ಜೊತೆಯಲ್ಲಿ ಇದ್ದಳು. ಬಿಲ್ ಶಸ್ತ್ರಚಿಕಿತ್ಸಾ ಕೋಣೆಯಿಂದ ಆಚೆಗೆ ಬರುವುದನ್ನು ಆತಂಕದಿಂದ ಕಾಯುತ್ತಿದ್ದೆವು. ನಾನು ನನ್ನ ತಾಳ್ಮೆಯ ಕೊನೆಯ ಹಂತದಲ್ಲಿದ್ದೆ. ಆದರೆ, ನನ್ನ ಜೊತೆಗೆ ಡೆಬ್ಬಿಯು ಇದ್ದುದು, ಈ ದೀರ್ಘ ಕಾಲವನ್ನು ಕಳೆಯಲು ಸಹಾಯವಾಯಿತು. ಕಡೆಗೂ, ಬಿಲ್‌ನನ್ನು ಸ್ಟ್ರೆಚರ್ ಮೇಲೆ ಕರೆದುಕೊಂಡು ಬಂದರು. ಅವನು ಇನ್ನೂ ಅರಿವಳಿಕೆಯ ಮಂಪರಿನಲ್ಲಿಯೇ ಇದ್ದು, ಮತ್ತು ಅವನ ದೇಹದಿಂದ ಅನೇಕ ನಳಿಕೆಗಳು ಹೊರಗೆ ಬಂದಿದ್ದವು. ಒಬ್ಬ ದಾದಿಯು ಸತತವಾಗಿ ಅವನ ಪ್ರಗತಿಯನ್ನು ನೋಡಿಕೊಳ್ಳುತ್ತಿದ್ದಳು. ಸ್ವಲ್ಪ ಸಮಯದ ನಂತರ ಶಸ್ತ್ರಚಿಕಿತ್ಸಕರು ಒಳಕ್ಕೆ ಬಂದರು ಮತ್ತು ರೋಗಗ್ರಸ್ತನಾಗಿದ್ದ ಬಿಲ್‌ನ ಶ್ವಾಸ ಕೋಶವನ್ನು ತೆಗೆದುಹಾಕಿರುವುದಾಗಿ ಹೇಳಿದರು. “ಬಿಲ್ ಈಗ ಒಂದೇ ಒಂದು ಶ್ವಾಸಕೋಶವನ್ನು ಹೊಂದಿದ್ದಾನೆ. ಹಾಗಾಗಿ ಇದು ಅವನ ಉಸಿರಾಟದ ಸಾಮರ್ಥ್ಯದ ಮೇಲೆ ತೀವ್ರ ಪರಿಣಾಮವನ್ನು ಉಂಟುಮಾಡುತ್ತದೆ. ಆದರೆ ಜೀವನವನ್ನು ಸರಳವಾಗಿ, ಸುಲಭವಾಗಿ, ಸ್ವೀಕರಿಸಿದರೆ, ಅವನು ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬಹುದು. ನೀನು ಮತ್ತು ನಿನ್ನ ಮಗಳು ಈಗ ಸದ್ಯಕ್ಕೆ ಮನೆಗೆ ಹೋಗಿ. ಏಕೆಂದರೆ, ನಿನ್ನ ಗಂಡನಿಗೆ ಎಚ್ಚರಿಕೆ ಬರಲು ಇನ್ನೂ ಕೆಲವು ಗಂಟೆಗಳೇ ಬೇಕಾಗುತ್ತದೆ. ನಿಮ್ಮಿಬ್ಬರಿಗೂ ವಿಶ್ರಾಂತಿಯ ಅವಶ್ಯಕತೆಯಿರುವಂತೆ ತೋರುತ್ತಿದೆ. ಬೆಳಿಗ್ಗೆ ನೀವು

ಫೋನ್ ಮಾಡಿ, ನಿನ್ನ ಗಂಡನು ಹೇಗೆ ಗುಣಮುಖನಾಗುತ್ತಿದ್ದಾನೆಂದು ತಿಳಿದು ಕೊಳ್ಳಬಹುದು."

ನಾವು ಬಿಟ್ಟುಬರುವಾಗ ಬಿಲ್ ಬಹಳ ದುಃಸ್ಥಿತಿಯಲ್ಲಿದ್ದ. ಆದರೆ ಅವನು ಇನ್ನೂ ಜೀವಂತವಾಗಿ ಇದ್ದುದಕ್ಕೆ ನಾನು ನನ್ನ ಅದೃಷ್ಟದ ತಾರೆಗೆ ಕೃತಜ್ಞತೆಗಳನ್ನು ಅರ್ಪಿಸಿದೆ. ಇಡಿಯ ರಾತ್ರಿ ನನಗೆ ನಿದ್ರಿಸಲು ಸಾಧ್ಯವಾಗಲಿಲ್ಲ ಮತ್ತು ಮರುದಿನ ಬೆಳಿಗ್ಗೆ ೭ ಗಂಟೆಗೆ ನಾನು ವಾರ್ಡಿಗೆ ದೂರವಾಣಿಯಿಂದ ಕರೆ ಮಾಡಿದೆ. ಬಿಲ್‌ನ ಆರೋಗ್ಯ ಬಹಳ ಉತ್ತಮಗೊಳ್ಳುತ್ತಿರುವುದಾಗಿಯೂ, ನಾನು ಬಯಸುವುದಾದರೆ, ಅವನೊಡನೆ ಸಂಪರ್ಕ ಕಲ್ಪಿಸುವುದಾಗಿಯೂ ಆ ವಾರ್ಡಿನ ಸಿಸ್ಟರ್ ಹೇಳಿದಳು. ಕೇವಲ ಕೆಲವೇ ಗಂಟೆಗಳಿಗೂ ಮುಂಚೆ ಅವನು ಕಾಣಿಸುತ್ತಿದ್ದಂತಹ ಪರಿಸ್ಥಿತಿಯಲ್ಲಿದ್ದವನು ಈಗ ಫೋನಿನಲ್ಲಿ ಮಾತನಾಡುವಂತೆ ಆಗಿದ್ದಾನೆ ಎನ್ನುವುದನ್ನು ನನಗೆ ನಂಬಲು ಸಾಧ್ಯವೇ ಆಗಲಿಲ್ಲ. ನಂತರ ನಾನು ಅವನ ಧ್ವನಿಯನ್ನು ಕೇಳಿಸಿಕೊಂಡೆ: "ಡಾರ್ಲಿಂಗ್, ಸಮಾಧಾನದಿಂದಿರು, ನಾನು ಬಹಳ ಆರೋಗ್ಯವಾಗಿರುವಂತೆ ಅನ್ನಿಸುತ್ತದೆ." ನನಗೆ ಮಾತನಾಡಲೂ ಸಾಧ್ಯವಾಗಲಿಲ್ಲ. ನನ್ನ ಕಣ್ಣೀರನ್ನು ತಡೆಹಿಡಿಯಲು ನಾನು ಪ್ರಯತ್ನಿಸಿದೆ.

ಮುಂದಿನ ಕೆಲವು ತಿಂಗಳುಗಳು ನಮ್ಮ ಅತ್ಯಂತ ದಾರುಣವೆನಿಸಿದ ತಿಂಗಳುಗಳಲ್ಲಿ ಕೆಲವಾಗಿದ್ದವು. ನಾನು ಇನ್ನೂ ನನ್ನ ಕೀಮೋಥೆರಪಿ ಚಿಕಿತ್ಸೆಯನ್ನು ಪಡೆಯುತ್ತಿದ್ದೆ. ಬಿಲ್ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದ. ಅವನ ಶ್ವಾಸಕೋಶದ ಶಸ್ತ್ರಚಿಕಿತ್ಸೆಯು ಅವನ ಹೃದಯದ ಪರಿಸ್ಥಿತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿತ್ತು. ಅದು ಮಧ್ಯರಾತ್ರಿಯಲ್ಲಿ ಆಂಜೈನಾ ಯಾತನೆಯನ್ನು ತರುತ್ತಿತ್ತು. ಆ್ಯಂಬುಲೆನ್ಸ್‌ಗೆ ಕರೆ ಮಾಡುವುದು, ಅವರು ಬರುವುದನ್ನು ಆತಂಕದಿಂದ ಕಾಯುವುದು, ಬಿಲ್‌ನನ್ನು ತೀವ್ರ ನಿಗಾ ಘಟಕಕ್ಕೆ ಧಾವಿಸಿ ಕೊಂಡೊಯ್ಯುವುದು ನಂತರ ಒಂದೆರಡು ದಿನಗಳ ನಂತರ ಅವರು ಮತ್ತೆ ಬಿಲ್‌ನನ್ನು ಮನೆಗೆ ಕರೆತರುವುದು ಈ ಒಂದು 'ವ್ಯಾಯಾಮ' ನನಗೆ ಬೇಗನೇ ಅಭ್ಯಾಸವಾಯಿತು. ಬಿಲ್‌ನೊಡನೆ ಜೀವಿಸುವುದು ಬಹಳ ಕಷ್ಟವಾಗತೊಡಗಿತು. ಒಂದು ಕಾಲದಲ್ಲಿ ಅತ್ಯಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಜಾಗರೂಕತೆಯಿಂದ ಸಂರಕ್ಷಿಸುತ್ತಿದ್ದ ಗಂಡ ಎನ್ನುವುದು ದೂರದ ನೆನಪಾಗಿಬಿಟ್ಟಿತು. ತನ್ನ ಅಸಮರ್ಥತೆಗಳಿಂದಾಗಿ ಅವನು ಸತತವಾಗಿ ಹತಾಶೆಗೊಳ್ಳುತ್ತಿದ್ದ, ಮತ್ತು ನನ್ನನ್ನು ಅವಲಂಬಿಸಬೇಕಾಗಿರುವುದಕ್ಕೆ ತೀವ್ರವಾಗಿ ಅಸಮಾಧಾನಗೊಳ್ಳುತ್ತಿದ್ದ. ಅವನ ದೃಷ್ಟಿಯಲ್ಲಿ ಸೋಲುತ್ತಿದ್ದೇನೆಂದು, ಅವನ ಆರೈಕೆಯಲ್ಲಿ ವಿಫಲಳಾಗುತ್ತಿರುವೆನೆಂದು ನನ್ನಲ್ಲಿ ಅಪರಾಧ ಪ್ರಜ್ಞೆ ಕಾಡುತ್ತಿತ್ತು. ಜೊತೆಗೆ, ಎಲ್ಲವನ್ನೂ ನಾನೊಬ್ಬಳೇ, ನನ್ನದೇ ಜವಾಬ್ದಾರಿಯಿಂದ ನಿರ್ವಹಿಸಬೇಕೆಂಬ ಅಸಹನೆಯೂ ನನನ್ನು ಕಾಡುತ್ತಿತ್ತು.

ನಾವು ಉಳಿಯಬೇಕಾದರೆ, ನಮ್ಮ ಜೀವನಶೈಲಿಯನ್ನು, ಅನಿರೀಕ್ಷಿತವಾಗಿ ಬದಲಾಯಿಸಿಕೊಳ್ಳಬೇಕು ಎಂದು ನಾವು ಶೀಘ್ರವೇ ಮನದಟ್ಟು ಮಾಡಿಕೊಂಡೆವು. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿದ್ದ ನಮ್ಮ ಮನೆಯನ್ನು ಮಾರಿದೆವು ಮತ್ತು ಸಮುದ್ರದ ಮುಂಭಾಗದಲ್ಲಿದ್ದ ಒಂದು ಫ್ಲಾಟಿಗೆ ವಾಸಸ್ಥಳವನ್ನು ಬದಲಾಯಿಸಿದೆವು. ಹಸ್ಲಾಕ್ಸ್‌ನಲ್ಲಿದ್ದ ನಮ್ಮ ಮನೆಯು ನನ್ನ ನಿಜವಾದ ಶಾಶ್ವತ ಮನೆಯಾಗಿತ್ತು. ಬೇರುಗಳನ್ನು ಕಿತ್ತುಕೊಂಡು ಬೇರೆ ಕಡೆಗೆ ಹೋಗುವುದರಿಂದ, ಅಗಾಧವಾದ ಮಾನಸಿಕ ಆಘಾತ, ಯಾತನೆಗಳು ಉಂಟಾಗುತ್ತವೆ ಎಂಬುದನ್ನು ನಾನು ಕಂಡುಕೊಂಡೆ. ನಾನು ಮತ್ತೊಮ್ಮೆ ಅಲೆಮಾರಿಯಾದೆನೆಂದು ಭಾವಿಸಿದೆ. ವಿಶೇಷವಾಗಿ, ತೀವ್ರ ಶೈತ್ಯ ಮತ್ತು ತೇವದ ಬ್ರಿಟನ್ನಿನ ಚಳಿಗಾಲವನ್ನು ತಪ್ಪಿಸಿಕೊಳ್ಳಲು ಚಳಿಗಾಲಗಳನ್ನು ವಿದೇಶಗಳಲ್ಲಿ ಕಳೆಯಬೇಕಾದಾಗ ಈ ಭಾವನೆ ತೀವ್ರವಾಗುತ್ತಿತ್ತು. ನಮ್ಮಿಬ್ಬರಲ್ಲಿ ಒಬ್ಬರೂ ಈ ಹೊಸ ಪರಿಸ್ಥಿತಿಗೆ ನಿಜವಾಗಿ ಹೊಂದಿಕೊಂಡಿರಲಿಲ್ಲ ಮತ್ತು ನಮ್ಮ ಬಾಂಧವ್ಯದ ಮೇಲಿನ ಒತ್ತಡ ಸ್ಪಷ್ಟವಾಗಿತ್ತು. ನಾವು ಪರಸ್ಪರ ಒಟ್ಟಿಗೇ ಜೀವಿಸಲೂ ಸಾಧ್ಯವಾಗು ತ್ತಿರಲಿಲ್ಲ. ಆದರೆ, ಒಬ್ಬರನ್ನೊಬ್ಬರು ಬಿಟ್ಟು ಜೀವಿಸಲೂ ಸಾಧ್ಯವಾಗುತ್ತಿರಲಿಲ್ಲ. ಇಬ್ಬರೂ ಕೂಡ ಒಂದು ಪ್ರಮಾಣದಲ್ಲಿ ಸೆರೆವಾಸದ ಅನುಭವವನ್ನು ಪಡೆಯುತ್ತಿದ್ದೆವು. ಪ್ರಯಾಣದ ಆಹ್ವಾನಗಳನ್ನು ನಾನು ಇನ್ನು ಮೇಲೆ ಒಪ್ಪಿಕೊಳ್ಳುವಂತೆಯೇ ಇರಲಿಲ್ಲ. ಏಕೆಂದರೆ, ಬಿಲ್‌ನನ್ನು ಬಿಟ್ಟುಹೋಗಲು ನನಗೆ ಧೈರ್ಯ ಬರುತ್ತಿರಲಿಲ್ಲ ಮತ್ತು ಬಿಲ್ ಆದರೂ ತನ್ನ ಪರಿಸ್ಥಿತಿಯ ನಿರ್ಬಂಧಗಳಿಂದಾಗಿ, ಬಲೆಯಲ್ಲಿ ಸಿಕ್ಕಿದವ ನಂತಾಗಿದ್ದ. ಬರುಬರುತ್ತಾ ನಾನು ಹೆಚ್ಚು ಮುಂಗೋಪಿಯಾದೆ ಮತ್ತು ಹಿಂದೆ ಎಂದೂ ಇರದಿದ್ದ ರೀತಿಯಲ್ಲಿ ನಾವಿಬ್ಬರೂ ಜಗಳ ಆಡಿದೆವು. ಆದಾಗ್ಯೂ, ನಾವು ಚರ್ಚೆ ಮಾಡಿದ ಕೂಡಲೇ ಮತ್ತೆ ರಾಜಿಯಾಗುತ್ತಿದ್ದೆವು. ಏಕೆಂದರೆ, ನಮ್ಮ ಪ್ರೇಮ ಮತ್ತು ಪರಸ್ಪರರ ಬಗೆಗೆ ಇದ್ದ ಗೌರವಗಳು ಈಗಲೂ ಕೂಡ ಎಂದಿನಂತೆಯೇ ಶಕ್ತ ಮತ್ತು ಪ್ರಗಾಢವಾಗಿದ್ದವು. ನಾವಿಬ್ಬರೂ ಯುವಕರು, ಆರೋಗ್ಯವಂತರೂ ಆಗಿದ್ದು, ಒಟ್ಟಿಗೇ ಕಳೆದಿದ್ದ ಸಂತೋಷದ ದಿನಗಳನ್ನು ನೆನೆಯುತ್ತಾ ನಾನು ಅನೇಕ ವೇಳೆ ಬಿಲ್‌ನ ತೋಳುಗಳೊಳಗೆ ಒತ್ತಿಕೊಂಡು ಮುದುಡಿಕೊಳ್ಳುತ್ತಿದ್ದೆ. ಆ ವರ್ಷಗಳೆಲ್ಲಾ ಎಲ್ಲಿ ಹೋದವೆಂದು ಮತ್ತು ನಮ್ಮ ಜೀವನ ಹೇಗೆ ಬದಲಾಗಿದ್ದಿತೆಂಬುದನ್ನು ನಾನು ಅರಿಯದಾದೆ ಹಾಗೂ ನಂಬಲಾರದಾದೆ.

* * * *

# ೧೬. ಜೀವನ ಮತ್ತು ಮರಣ

ನಮಗೆ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಬಿಲ್ ಮತ್ತು ನಾನು ನಮ್ಮ ವೃತ್ತಿಜೀವನವನ್ನು ಮುಂದುವರೆಸಿದೆವು. ಬಿಲ್ ಮುಂದೆ ತನ್ನ ಎರಡು ಗ್ರಂಥಗಳನ್ನು ಹಲವಾರು ಲೇಖನಗಳನ್ನೂ ಪೂರ್ಣಗೊಳಿಸುವ ಕಾರ್ಯವನ್ನು ನಿಭಾಯಿಸಿದ ಮತ್ತು ನಾನು ಸಂಶೋಧನೆ ಮತ್ತು ಬರವಣಿಗೆ ಹಾಗೂ ನನ್ನನ್ನು ಉತ್ಸಾಹದಿಂದಿಟ್ಟು ಕೊಳ್ಳುವುದಕ್ಕಾಗಿ ಬೇರೆ ಬೇರೆ ಕಾರ್ಯ ಯೋಜನೆಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ. ಸಮುದ್ರದಾಚೆಯ ನನ್ನ ಸಮಾಲೋಚನೆಗಳನ್ನು ನಾನು ಬಹಳವಾಗಿ ತಪ್ಪಿಸಿಕೊಂಡೆ ಎನಿಸಿತು. ಏಕೆಂದರೆ ಅವು ನನಗೆ ದೃಶ್ಯಾವಳಿಯ, ನನ್ನ ಜೀವನದ ಪರಿಸರಕ್ಕಿಂತ ಭಿನ್ನವಾದ ಸ್ವಾಗತಾರ್ಹ ಬದಲಾವಣೆಯನ್ನು ಒದಗಿಸಿದ್ದವು ಮತ್ತು ಯಾವಾಗಲೂ ನನ್ನ ಧೈರ್ಯ, ಸ್ಥೈರ್ಯಗಳನ್ನು ವೃದ್ಧಿಪಡಿಸುವ ಟಾನಿಕ್‌ನಂತೆ ಇದ್ದಿತು. ಪ್ರತಿ ಬಾರಿ ನನ್ನನ್ನು ಎಲ್ಲಿಗಾದರೂ ಆಹ್ವಾನಿಸಿದಾಗಲೂ, ಅವರು ವಾಸ್ತವವಾಗಿಯೂ ನಾನು ಬರಲಿ ಎಂದು ಬಯಸುತ್ತಿದ್ದಾರೆಂದು ನಾನು ಎಂದೂ ನಂಬಲಾರದವಳಾಗಿದ್ದೆ, ಮತ್ತು ನಾನು ಅಪೇಕ್ಷಿತ ಫಲಿತಾಂಶಗಳನ್ನು ಉಂಟುಮಾಡುವುದಿಲ್ಲವೆಂದು ಉದ್ವೇಗಕ್ಕೆ ಒಳಗಾಗುತ್ತಿದ್ದೆ. ಆದರೆ ಎರಡು ರೀತಿಯಲ್ಲಿಯೂ ನನ್ನ ಎಣಿಕೆ ಯಾವಾಗಲೂ ತಪ್ಪಾಗಿತ್ತು. ಈ ಪ್ರಯಾಣಗಳಿಂದ ನಾನು, ಉಲ್ಲಾಸದ ಮನೋಭಾವದೊಡನೆ ಹಿಂದಿರುಗುತ್ತಿದ್ದೆ. ಆದರೆ, ಬಿಲ್‌ನನ್ನು ಬಿಟ್ಟುಹೋಗುವುದು ಅತ್ಯಂತ ಕಷ್ಟವಾಗ ತೊಡಗಿತು. ಏಕೆಂದರೆ, ನಾನು ಹೊರಡುವ ಮೊದಲು ಅವನು ತೀವ್ರವಾದ ಆಂಜನಾದ ಆಕ್ರಮಣದಿಂದ ನರಳುತ್ತಿದ್ದ ಮತ್ತು ನನ್ನಲ್ಲಿ ಅಪರಾಧ ಪ್ರಜ್ಞೆ ಕಾಡತೊಡಗುತ್ತಿತ್ತು ನನ್ನ ಅವಶ್ಯಕತೆಗಳೊಂದಿಗೆ ಅವನ ಅವಶ್ಯಕತೆಗಳನ್ನು ಸಮತೋಲನ ಮಾಡಲು ಪ್ರಯತ್ನಿಸುವುದು ಬಹಳ ಕಷ್ಟವಾಗಿತ್ತು. ಮತ್ತು ಕೆಲವು ಬಾರಿ ನಮ್ಮ ಫ್ಲಾಟಿನಲ್ಲಿ ನಾನು, ದಿನ ಕಳೆದಂತೆ ಅತ್ಯಂತ ಉನ್ಮತ್ತಳಾಗುತ್ತಿದ್ದೆ. ನನ್ನ ಸ್ವಂತ ಜೀವನವನ್ನು ಬಲಿ ಕೊಡಲು ನನಗೆ ಇಷ್ಟವಿರಲಿಲ್ಲ. ಆದರೆ, ನಮ್ಮ ದಿನಗಳು ಇನ್ನು ಕೆಲವೇ ದಿನಗಳು ಮಾತ್ರ ಎಂದು ನನಗೆ ತಿಳಿದಿತ್ತು. ಹಾಗಾಗಿ ಸಾಧ್ಯವಾದಷ್ಟು ಹೆಚ್ಚು ಸಮಯ ನಾನು ಬಿಲ್‌ನ ಜೊತೆಯಲ್ಲಿ ಇರಲು ಬಯಸಿದೆ.

ಈ ವರ್ಷಗಳೆಲ್ಲವೂ ಆಸ್ಪತ್ರೆಗಳು, ಶಸ್ತ್ರಚಿಕಿತ್ಸೆಗಳು, ಕಾಯಿಲೆಯ ನಂತರದ ಚೇತರಿಕೆಗಳೂ ಇವುಗಳ ಸುತ್ತಲೂ ಸುತ್ತುತ್ತಿರುವಂತೆ ಕಂಡುಬಂದರೂ ಇವುಗಳೆಲ್ಲವೂ

ಅದೃಷ್ಟವಶಾತ್, ದೇವರ ದಯೆಯೆಂಬಂತೆ ಸಾಮಾನ್ಯ ಕೌಟುಂಬಿಕ ಘಟನೆಗಳ ವಿರಾಮ ಚಿಹ್ನೆಗಳನ್ನೂ ಒಳಗೊಂಡಿದ್ದವು. ಮಿಷೆಲ್ಲೆಯು ಕೀಲೆ ಯೂನಿವರ್ಸಿಟಿಯಲ್ಲಿ ಅಧ್ಯಯನ ಮಾಡುತ್ತಿದ್ದಾಗ ನೀಲ್‌ನೊಡನೆ ಭೇಟಿಯಾದಳು. ಅವನು ಯೆಹೂದಿ ಯಾಗಿದ್ದುದರಿಂದ ನಾವು ಹರ್ಷಗೊಂಡೆವು ಮತ್ತು ಅವನು ಮಿಷೆಲ್ಲೆಗೆ ಯೋಗ್ಯಪುರುಷನೇ ಎಂದು ಯೋಚಿಸಿದೆವು. ಕೆಲವು ವರ್ಷಗಳು ಅವರಿಬ್ಬರೂ ಒಟ್ಟಿಗೇ ಇದ್ದ ಬಳಿಕ ತಾವು ಮದುವೆಯಾಗಲು ಬಯಸುವುದಾಗಿ ಪ್ರಕಟಿಸಿದರು. ಅವನ ಜೊತೆಯಲ್ಲಿ ಮತ್ತು ಅವನ ಕುಟುಂಬದವರೊಂದಿಗೆ ನಾವು ಒಳ್ಳೆಯ ಬಾಂಧವ್ಯ ಹೊಂದಿದ್ದುದರಿಂದ ನಾವು ಅತ್ಯಂತ ಹೆಚ್ಚು ಹರ್ಷಿತರಾದೆವು ಮತ್ತು ಮಿಷೆಲ್ಲೆ ಮತ್ತು ನೀಲ್ ಮಕ್ಕಳು ಬೇಕೆಂದು ನಿರ್ಧರಿಸಿದಲ್ಲಿ ನೀಲ್ ಸ್ನೇಹಪೂರ್ಣ ಹಾಗೂ ಪ್ರೀತಿ ತುಂಬಿದ ತಂದೆಯಾಗುತ್ತಾನೆ ಎಂದುಕೊಂಡೆವು.

ಮಿಷೆಲ್ಲೆಯ ವಿವಾಹವು ಒಂದು ಆನಂದದಾಯಕವಾದ ವಿಶೇಷ ಘಟನೆ ಯಾಗಿತ್ತು. ಮಿಷೆಲ್ಲೆಯ ಜೊತೆಯಲ್ಲಿ ದೇವಾಲಯದ ನಡುವಿನ ಹಾದಿಯಲ್ಲಿ ಹೋಗುವಾಗ ಬಿಲ್ ಅತ್ಯಂತ ಹೆಮ್ಮೆ ಹಾಗೂ ಸಂತುಷ್ಟ ತಂದೆಯಂತೆ ಕಾಣಿಸುತ್ತಿದ್ದ, ನಾವೆಲ್ಲರೂ ಮದುವೆಯ ಚಪ್ಪರದ ಕೆಳಗೆ ನಿಂತಾಗ (chuppah- the Jewish wedding canopy) ಬಿಲ್ ನನ್ನ ಕೈಯನ್ನು ಹಿಸುಕಿದ ಮತ್ತು ನನ್ನ ಕಿವಿಯಲ್ಲಿ ಪಿಸುನುಡಿದ: "ಡಾರ್ಲಿಂಗ್, ಮಿಷೆಲ್ಲೆಯ ಮದುವೆಯನ್ನು ನೋಡುವಷ್ಟು ದೀರ್ಘಕಾಲ ಬದುಕುವೆವು ಎಂದು ನಾವು ಎಂದೂ ಆಲೋಚಿಸಿದಲಿಲ್ಲ. ನಮ್ಮ ಜೀವನದ ಅತ್ಯಂತ ಸಂತೋಷದ ದಿನಗಳಲ್ಲಿ ಇದೂ ಒಂದು ಎಂದು ನಾವು ಪರಿಗಣಿಸ ಬಹುದು!" ಈ ಮಾತುಗಳು ನನ್ನ ಕಣ್ಣುಗಳಲ್ಲಿ ನೀರು ತರಿಸಿದವು.

ಅತಿಥಿಗಳಿಗೆ ಶುಭ ಕೋರುತ್ತಾ ಸ್ವಾಗತಿಸುವ ಸಾಲಿನಲ್ಲಿ ನಾವು ನಿಂತಿದ್ದಾಗ, ನನ್ನ ಕುಟುಂಬದ ಮೇಲೆ ಸಾಮೂಹಿಕ ಹತ್ಯಾಕಾಂಡವು ಉಂಟುಮಾಡಿದ್ದ ವಿನಾಶಕಾರೀ ಪರಿಣಾಮದ ಅತ್ಯಂತ ಕೆಟ್ಟ ಜ್ಞಾಪನ ಪತ್ರದಂತಿತ್ತು ಅದು. ನಮ್ಮ ಅತಿಥಿಗಳ ಪಟ್ಟಿ ತೀರಾ ಪುಟ್ಟದಾಗಿತ್ತು. ನಮ್ಮ ಕುಟುಂಬದ ಕಡೆಯಿಂದ ಪ್ರತಿನಿಧಿಸುತ್ತಿದ್ದವರು ಕುರ್ಟ್ ಮತ್ತು ಅವನ ಕುಟುಂಬ ಮಾತ್ರ. ಆದರೆ, ನೀಲ್‌ನ ಕುಟುಂಬದವರು ಈ ಕೌಟುಂಬಿಕ ಕೂಟದಲ್ಲಿ ಭಾಗವಹಿಸಿ ಸಂತೋಷವನ್ನು ಅನುಭವಿಸಲು ದೂರದೂರದಿಂದ ಬಂದಿದ್ದರು. ನನ್ನ ಈ ಆಲೋಚನೆಗಳು ನನ್ನ ಸಂತೋಷವನ್ನು ಹಾಳು ಮಾಡದಿರುವಂತೆ ನಾನು ಪ್ರಯತ್ನಿಸಿದೆ ಮತ್ತು ಸಾಂಪ್ರದಾಯಕ ಯೆಹೂದೀ ರೀತಿಯಲ್ಲಿ ಮಿಷೆಲ್ಲೆಯನ್ನು ಕುರ್ಚಿಯ ಮೇಲೆ ಕೂಡಿಸಿ ಮೇಲಕ್ಕೆ ಎತ್ತಿ, ಪುರುಷರೂ ಸುತ್ತಲೂ ಅವಳನ್ನು ಕುರ್ಚಿಯ ಸಮೇತ ಕರೆದೊಯ್ಯುವುದನ್ನು ವೀಕ್ಷಿಸಿದೆ.

ಮಿಷೆಲ್ಲೆಯು ನನಗಿಂತಲೂ ಶೀಘ್ರವಾಗಿ ಪತ್ನಿಯಾಗಿರುವುದಕ್ಕೆ ಹೊಂದಿ

ಕೊಂಡಳು. ಸ್ವಲ್ಪ ದಿನಗಳಲ್ಲಿಯೇ ಅವಳು ತಾನು ಗರ್ಭಿಣಿಯಾಗಿರುವುದಾಗಿ ತಿಳಿಸಿದಳು. ನಾನು ಎದುರಿಸಿದಂತಹ ವಿಷಮ ಪರೀಕ್ಷೆಗಳನ್ನು, ಅವಳು ಹಾದು ಹೋಗಬೇಕಾಗದಿರಲಿ ಎಂದು ನಾನು ಆಶಿಸಿದೆ. ಆದ್ದರಿಂದ, ಒಂಬತ್ತು ತಿಂಗಳುಗಳ ನಂತರ ಅವಳು, ಆರೋಗ್ಯಪೂರ್ಣ, ಚೆಲುವಾದ, ದುಂಡು ದುಂಡಾಗಿದ್ದ ಮಗುವಿಗೆ ಜನ್ಮಕೊಟ್ಟಾಗ, ನಾವು ಸಂತಸದ ಪರಾಕಾಷ್ಠೆಯಲ್ಲಿದ್ದು, ಚಂದ್ರಲೋಕದಲ್ಲಿ ಇರುವವರಂತೆ ಖುಷಿಪಟ್ಟೆವು. ವಿಶಾಲವಾದ ಕಣ್ಣುಗಳು ಮತ್ತು ಶಾಂತ, ಗಂಭೀರ ಅಭಿವ್ಯಕ್ತಿಯ, ರೆಬೆಕ್ಕಾ ಬಲು ಸುಂದರವಾದ ಮಗುವಾಗಿದ್ದಳು. ಮಕ್ಕಳನ್ನು ನೋಡಿಕೊಳ್ಳುವ ಅಥವಾ ಅವು ಬೆಳೆಯುತ್ತಿದ್ದಂತೆ ಶಿಸ್ತಿಗೆ ಒಳಪಡಿಸುವ ಯಾವುದೇ ಜವಾಬ್ದಾರಿಯೂ ಇಲ್ಲದೇ ಮೊಮ್ಮಗಳನ್ನು ಪ್ರೀತಿಸುವ ಮತ್ತು ಅವಳನ್ನು ತಬ್ಬಿಕೊಳ್ಳುವ ಅಜ್ಜಿ ತಾತಂದಿರ ಆನಂದದ ಅನುಭವದ ಪ್ರಯೋಜನವನ್ನು ನಾವು ಶೀಘ್ರವಾಗಿ ಕಂಡುಕೊಂಡೆವು. ಮಿಷೆಲ್ಲೆಯು ತನ್ನ ಮಗುವನ್ನು ಕಣ್ಣುಗೊಂಬೆಯಂತೆ ಮುದ್ದುಮಾಡುವ ತಾಯಿಯಾಗಿದ್ದಳು. ತನ್ನ ಈ ಪಾತ್ರದಲ್ಲಿ, ಅವಳು ನನ್ನಂತೆ ಅಲ್ಲದೆ, ಸಂಪೂರ್ಣ ಸಾರ್ಥಕ್ಯವನ್ನನುಭವಿಸುವಂತೆ ಕಂಡಳು.

ಮಿಷೆಲ್ಲೆಯು ತನ್ನ ಎರಡನೆಯ ಮಗುವನ್ನು ನಿರೀಕ್ಷಿಸುತ್ತಿದ್ದಾಗ, ನಾನು ಆಸ್ಪತ್ರೆಗೆ ಹೋದಾಗ ನಾನು ರೆಬೆಕ್ಕಾಳ ಜೊತೆಯಲ್ಲಿ ಇರುವಂತೆ ನನ್ನನ್ನು ಕೇಳಿದ್ದಳು. ೧೯೯೩, ಜನವರಿ ೧೯ನೆಯ ತಾರೀಖು ಮಧ್ಯರಾತ್ರಿಯಾದ ಸ್ವಲ್ಪ ಸಮಯದ ನಂತರ, ಮಿಷೆಲ್ಲೆ ನನಗೆ ಕರೆ ಮಾಡಿದಳು. ಸಾಧ್ಯವಾದಷ್ಟು ಬೇಗ ನಾನು ಅಲ್ಲಿಗೆ ಹೋದೆ, ನಾನು ಹೋಗುವ ವೇಳೆಗೆ ರೆಬೆಕ್ಕಾ ಕಿರಿಚುತ್ತಿದ್ದಳು. ನಾನು ರೆಬೆಕ್ಕಾಳನ್ನು ಎತ್ತಿಕೊಂಡು, ನನ್ನ ಜೊತೆಯಲ್ಲಿಯೇ ಹಾಸಿಗೆಗೆ ಕರೆದುಕೊಂಡು ಹೋದೆ. ತೋಳುಗಳಲ್ಲಿಟ್ಟುಕೊಂಡು ತೂಗುತ್ತಿದ್ದರೂ ಅವಳು ಕಿರಿಚುವುದನ್ನು ಮುಂದುವರೆಸಿದಳು. ಆದರೆ, ಕಡೆಗೆ ನನ್ನ ತೋಳುಗಳೊಳಗೇ ನಿದ್ರೆ ಮಾಡಿದಳು. ಅವಳನ್ನು ನಾನು ಭದ್ರವಾಗಿ ಅಪ್ಪಿಕೊಂಡು, ನನ್ನ ಇಬ್ಬರು ಹುಡುಗಿಯರೂ ಚಿಕ್ಕವರಿದ್ದಾಗ ಹೀಗೆಯೇ ಮಧ್ಯರಾತ್ರಿಯಲ್ಲಿ ತೂಗುತ್ತಾ ನಿದ್ರೆ ಮಾಡಿಸುತ್ತಿದ್ದುದನ್ನು ನೆಪವು ಮಾಡಿಕೊಂಡೆ. ಇನ್ನೇನು ನಾನು ಕೂಡ ನಿದ್ರೆ ಮಾಡುವವಳಿದ್ದೆ. ಅಷ್ಟರಲ್ಲಿ ಫೋನ್ ಟ್ರಿಣ್ ಎಂದಿತು. ಮಿಷೆಲ್ಲಿಯು ಬೆಂಜಮಿನ್‌ಗೆ ಜನ್ಮಕೊಟ್ಟಳೆಂದು ನೀಲ್ ಘೋಷಿಸಿದ. ತನ್ನ ಕುಟುಂಬದ ಸಂಪ್ರದಾಯವನ್ನು ಮುಂದುವರೆಸಲು ಮೊಮ್ಮಗ ಹುಟ್ಟಿದನೆಂದು ತಿಳಿದರೆ ಬಿಲ್ ಹರ್ಷದಿಂದ ರೋಮಾಂಚಿತಗೊಳ್ಳುವನೆಂದು, ಬಿಲ್‌ಗೆ ಫೋನು ಮಾಡಲು ತೀವ್ರ ಕಾತರದಿಂದಿದ್ದೆ ನಾನು. ಬೆನ್‌ನನ್ನು ಪ್ರಥಮ ಬಾರಿಗೆ ನೋಡಿದಾಗ ಬಿಲ್ ಬಹಳ ವಿಚಲಿತನಾದ. ಆದರೆ, ಮಗುವನ್ನು ಅವನ ಕೈಗೆ ನಾನು ಕೊಡಲು ಹೋದಾಗ, ವಿಷಾದದಿಂದ ಬೇಡವೆಂದು ತಲೆಯಲ್ಲಾಡಿಸಿದ. ನಾನು ತೀರಾ ನಿತ್ರಾಣನಾಗಿದ್ದೇನೆಂದು ಅವನು ಒಪ್ಪಿಕೊಂಡ. ತನ್ನ ಮೊದಲ ಮೊಮ್ಮಗನನ್ನು

ಕೂಡ ಅವನಿಗೆ ಎತ್ತಿಕೊಳ್ಳಲು ಸಾಧ್ಯವಾಗಲಿಲ್ಲವೆಂಬ ವಾಸ್ತವ, ಅವನು ಎಷ್ಟು ತೀವ್ರವಾಗಿ ಕಾಯಿಲೆಯಿಂದ ನರಳುತ್ತಿದ್ದ ಎಂಬ ಕಠಿಣ ಸತ್ಯವನ್ನು ನನಗೆ ಮನಗಾಣಿಸಿತು.

ನನ್ನ ಬಗೆಗೆ ಹೇಳುವುದಾದರೇ ನನ್ನದೇ ಬೇರೆ ರೀತಿಯ ಹೇಳಿಕೆಯಾಗಿತ್ತು ಮತ್ತೆ ನಾನು ನನ್ನ ವೃತ್ತಿ ಹಾಗೂ ಕುಟುಂಬದ ಬದ್ಧತೆಗಳ ನಡುವೆ, ಎರಡು ಹೋಳಾಗಿದ್ದೆ. ಮಿಷೆಲ್ಲೆಯು ಗರ್ಭಿಣಿ ಎಂದು ನನಗೆ ತಿಳಿಯುವುದಕ್ಕೆ ಮುಂಚೆಯೇ ನಾನು ನ್ಯೂಡೆಲ್ಲಿಯ ಒಂದು ಸಮ್ಮೇಳನದಲ್ಲಿ ಒಂದು ಪ್ರಬಂಧ ಮಂಡಿಸುವ ಆಹ್ವಾನವನ್ನು ಒಪ್ಪಿಕೊಂಡಿದ್ದೆ. ಮತ್ತು ಅದನ್ನು ರದ್ದುಗೊಳಿಸುವ ಸಾಧ್ಯತೆ ಇಲ್ಲವೆಂದು ನಾನು ಭಾವಿಸಿದೆ. ಮಿಷೆಲ್ಲೆಯ ಹೆರಿಗೆಯ ದಿನಗಳು ಸಮೀಪಿಸುತ್ತಿದ್ದಂತೆಯೇ, ಅವಳು ಮಗುವಿಗೆ ಜನ್ಮ ಕೊಡುವುದಕ್ಕೆ ಮೊದಲೇ ನಾನು ಹೊರಡಬೇಕಾಗುತ್ತೇನೋ ಎಂದು ಹೆಚ್ಚು ಚಿಂತಿಸತೊಡಗಿದೆ. ಅದೃಷ್ಟವಶಾತ್ ಬೆಂಜಮಿನ್, ಬೇಗನೇ ಒಳ್ಳೆಯ ಸಮಯದಲ್ಲಿ ಹುಟ್ಟಿಬಂದ. ಆದರೂ ಅವನು ಹುಟ್ಟಿದ ಕೆಲವೇ ದಿನಗಳ ನಂತರ ನಾನು ಹೊರಡಬೇಕಾಗಿತ್ತು. ಅಂದರೆ ನಾನು ನನ್ನ ಮೊಮ್ಮಗನ ಶುದ್ಧಗೊಳಿಸುವ ಸಮಾರಂಭದಿಂದ ವಂಚಿತಳಾಗಬೇಕಾಯಿತು. ನಾನು ಬಹಳ ಅಸಮಾಧಾನಗೊಂಡೆ ಮತ್ತು ಅಜ್ಜಿಯ ಕರ್ತವ್ಯಗಳನ್ನು ಸಾರ್ಥಕವಾಗಿ ನಿರ್ವಹಿಸದಿರುವ ಬಗೆಗೆ ಅಪರಾಧ ಪ್ರಜ್ಞೆ ತಳೆದೆ. ಆದರೆ ನಾನು ಬೇರೆ ಏನೂ ಮಾಡಲು ಸಾಧ್ಯವಿರಲಿಲ್ಲವೆಂದು ಭಾವಿಸಿದೆ. ಶುದ್ಧೀಕರಣದ ಸಮಯಕ್ಕೆ ಸರಿಯಾಗಿ ಆ ದಿನ ಮಿಷೆಲ್ಲೆಗೆ ಕರೆಮಾಡಿದೆ ಮತ್ತು ದೈಹಿಕವಾಗಿ ನಾನು ಅಲ್ಲಿ ಇರದಿದ್ದರೂ ನನ್ನ ಚೈತನ್ಯ ಸ್ವರೂಪದಲ್ಲಿ ನಾನು ಅಲ್ಲಿಯೇ ಇದ್ದೆ ಎಂಬುದನ್ನು ತೋರಿಸುವುದಕ್ಕಾಗಿ, ಆದರೆ ಅವೆರಡೂ ಒಂದೇ ಅಲ್ಲ ಎನ್ನುವುದು ನನಗೆ ತಿಳಿದಿತ್ತು.

ಬಿಲ್ ಮತ್ತು ನಾನು ನಮ್ಮ ಮೊಮ್ಮಕ್ಕಳು ಶಿಶುಗಳ ಹಂತದಿಂದ ಚಿಕ್ಕ ಹುಡುಗರಾಗಿ ಬೆಳೆಯುವ ಹಂತವನ್ನು ವೀಕ್ಷಿಸುತ್ತಾ ಅನೇಕ ಗಂಟೆಗಳ ಹರ್ಷದ ಸಮಯವನ್ನು ಕಳೆದೆವು. ರೆಬೆಕ್ಕಾಳನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ಕಥೆಗಳ ನಂತರ ಕಥೆಗಳನ್ನು ಓದುತ್ತಿರುವುದನ್ನು ಪ್ರೀತಿಸುತ್ತಿದ್ದ. ಮಕ್ಕಳ ಜೊತೆಯಲ್ಲಿ ಇರುವುದು ಅವನನ್ನು ಮತ್ತೆ ಚೈತನ್ಯಪೂರ್ಣವಾಗಿರುವಂತೆ ಮಾಡುತ್ತಿತ್ತು. ಮಕ್ಕಳ ಭೇಟಿಗಾಗಿ ಅವನು ತನ್ನೆಲ್ಲಾ ಶಕ್ತಿಯನ್ನೂ ಒಟ್ಟುಮಾಡಿಕೊಳ್ಳುತ್ತಿದ್ದ. ಆದರೆ, ಅವರು ಹೊರಡುತ್ತಿದ್ದಂತೆಯೇ ಅವನ ಶಕ್ತಿಯೂ ಸೋರಿಹೋಗುತ್ತಿತ್ತು. ಕೆಲವು ಬಾರಿ ಮಕ್ಕಳು ನಮ್ಮಲ್ಲಿಯೇ ಉಳಿದುಕೊಳ್ಳುತ್ತಿದ್ದರು. ಅವರನ್ನು ಹಾಸಿಗೆಯಲ್ಲಿ ಮಲಗಿಸಿ, ನಿದ್ರೆ ಮಾಡಿಸಿದ ನಂತರ ಬಿಲ್ ಮತ್ತು ನಾನು ಪರಸ್ಪರ ಒಬ್ಬರನ್ನು ನೋಡಿ ಮತ್ತೊಬ್ಬರು ಮೌನವಾಗಿ ಮುಗುಳ್ನಗುತ್ತಾ ಜೀವನ ಎಂದರೆ ಇದೇ ಎಂಬ ಪರಸ್ಪರ ತಿಳಿವಳಿಕೆಯಿಂದ ಸಂತೋಷವಾಗಿದ್ದೆವು. ನಾವು ಎಷ್ಟೆಂದರೂ ಸಾಲ

ಪಡೆದ ಸಮಯದಲ್ಲಿ ಬದುಕುತ್ತಿದ್ದೇವೆಂಬ ಅರಿವಿನಿಂದಾಗಿ, ಆ ಮಕ್ಕಳ ಜೊತೆ ಕಳೆಯುವ ಒಂದೊಂದು ಕ್ಷಣವನ್ನು ಸಂತೋಷಚಿತ್ತರಾಗಿ ಕಳೆದು, ಆ ಕ್ಷಣಗಳನ್ನು ಜೋಪಾನ ಮಾಡಿದೆವು.

ಡೆಬ್ಬಿಯ ಜೀವನವು ಸ್ವಲ್ಪ ಹೆಚ್ಚು ಸಂಕೀರ್ಣಗೊಂಡಿತ್ತು. ಬದುಕಿನಲ್ಲಿ ನೆಲೆ ನಿಲ್ಲುವುದು ಅವಳಿಗೆ ಕಷ್ಟವೆನಿಸಿತ್ತು. ಮತ್ತು ಪ್ರವಾಸ ಮಾಡುವ ತನ್ನ ತಾತ್ಕಾಲಿಕ ಆಸಕ್ತಿಯಿಂದ ಬಿಡಿಸಿಕೊಳ್ಳುವುದರಲ್ಲಿ ಒಂದು ವರ್ಷವನ್ನು ಕಳೆದಳು. ಅವಳಿಗೆ ಬಹುಸಂಖ್ಯೆಯ ಕೆಲಸಗಳೂ, ಬಹುಸಂಖ್ಯೆಯ ಯುವಕ ಸ್ನೇಹಿತರೂ ಇದ್ದರು. ಆದರೆ, ಯಾರೊಡನೆಯೂ, ಎಲ್ಲಿಯೂ ಬೇರೂರುವ ಅಥವಾ ಗಟ್ಟಿ ಸಂಬಂಧ ಬೆಳೆಸುವ ಒಲವಿರುವಂತೆ ಕಂಡುಬರುತ್ತಿರಲಿಲ್ಲ. ಬಿಲ್ ಮತ್ತು ನಾನು ಇದರ ಬಗೆಗೆ ಅನೇಕ ಬಾರಿ ಚರ್ಚಿಸಿದೆವು. ಏಕೆಂದರೆ, ಡೆಬ್ಬಿಯ ಅನೇಕ ಯುವಕ ಸ್ನೇಹಿತರು ಯೆಹೂದಿಗಳಾಗಿರಲಿಲ್ಲ ಎಂಬುದು ಬಿಲ್‌ನ ಕಾಳಜಿಯಾಗಿತ್ತು. ಅವಳು ಯೆಹೂದಿ ಜೊತೆಗಾರರನ್ನೇ ಆಯ್ಕೆ ಮಾಡಿಕೊಳ್ಳಲಿ ಎಂಬುದೇ ನನಗೆ ಹೆಚ್ಚು ಇಷ್ಟವಾಗಿತ್ತಾದರೂ, ನಾನು ಸ್ವಲ್ಪ ಹೆಚ್ಚಿನ ಉದಾರ ಮನೋಭಾವವಿದ್ದು, ಅವಳು ಸಂತೋಷವಾಗಿದ್ದರೆ ಸಾಕು ಎಂದು ಮಾತ್ರ ಬಯಸುತ್ತಿದ್ದೆ ಎಂಬುದು ಡೆಬ್ಬಿಗೆ ತಿಳಿದಿತ್ತು.

ನೀರ್ಗಲ್ಲ ಮೇಲೆ ಜಾರು ಹಲಗೆ ಕಾಲಿಗೆ ಕಟ್ಟಿಕೊಂಡು ಓಡಾಡುವ ಪ್ರವಾಸದಿಂದ ಹಿಂದಿರುಗಿದ್ದ ಡೆಬ್ಬಿ ಒಂದು ದಿನ ನಮ್ಮನ್ನು ಭೇಟಿ ಮಾಡಲು ಬಂದಳು ಮತ್ತು ತಾನು ತನ್ನ ಜೀವನವನ್ನು ಕಳೆಯಬಹುದೆಂದು ಕಲ್ಪಿಸಿಕೊಳ್ಳ ಬಹುದಾದ ಒಬ್ಬ ವ್ಯಕ್ತಿಯನ್ನು ಭೇಟಿ ಮಾಡಿರುವುದಾಗಿಯೂ ತಿಳಿಸಿದಳು. ಬೇರೆ ಯಾರಲ್ಲಿಯೂ ಇರದಿದ್ದ ಯಾವ ವಿಶೇಷತೆ ಅವನಲ್ಲಿತ್ತು ಎಂದು ನಾನು ಅವಳನ್ನು ಛೇಡಿಸಿದೆ. ಆದರೆ, ಅವಳು ಗಂಭೀರವಾಗಿದ್ದಳೆಂದು ತಕ್ಷಣವೇ ಮನಗಂಡೆ. ಅಷ್ಟು ಸ್ವಲ್ಪ ಸಮಯದಲ್ಲಿಯೇ ಅವಳಲ್ಲಿ ಕಂಡುಬಂದ ಭಾವನೆಗಳ ಪ್ರಗಾಢತೆಯಿಂದ, ನಾನು ತೀರಾ ಅಚ್ಚರಿಗೊಂಡೆ. ಆದರೆ, ಅವಳ ಉತ್ಸಾಹಕ್ಕೆ ತಣ್ಣೀರನ್ನೆರಚಲು ಇಚ್ಛಿಸಲಿಲ್ಲ. ಆ ವ್ಯಕ್ತಿಯನ್ನು ಮತ್ತು ಅವನ ಕುಟುಂಬವನ್ನು ವರ್ಣಿಸತೊಡಗಿದಳು. ನಂತರ ಏಕೋ ಸುಮ್ಮನಾದಳು. ದೀರ್ಘವಾಗಿ ಉಸಿರೆಳೆದುಕೊಂಡು ಅವಳು ಹೇಳಿದಳು: "ಅವನು ಯೆಹೂದಿಯಲ್ಲ, ಅಪ್ಪ ಇದಕ್ಕೆ ಎಂದೂ ಒಪ್ಪುವುದಿಲ್ಲವೆಂದು ನನಗೆ ಗೊತ್ತು, ಏನು ಮಾಡಬೇಕು ಎನ್ನುವುದು ನನಗೆ ತಿಳಿದಿಲ್ಲ." ಡೆಬ್ಬಿಯು ಯೆಹೂದಿ ಪಂಗಡದಿಂದ ಹೊರಗೆ ಮದುವೆ ಮಾಡಿಕೊಂಡರೆ ಬಿಲ್ ಎಷ್ಟು ನಿರಾಶನಾಗುತ್ತಾನೆ ಎಂಬುದು ನನಗೆ ತಿಳಿದಿತ್ತು. ಏಕೆಂದರೆ, ನಾವು ಅನೇಕ ಬಾರಿ ಇಂತಹ ಸಾಧ್ಯತೆಯ ಬಗೆಗೆ ಚರ್ಚಿಸಿದ್ದೆವು. ನನ್ನ ಮನಸ್ಸು ಎರಡು ಭಾಗವಾಗಿ ಹೋಯಿತು; ನಾನು ನನ್ನ ಮಗಳ ಸಂತೋಷದಲ್ಲಿ ಪಾಲ್ಗೊಳ್ಳಲು ಬಯಸಿದೆ.

ಆದರೆ, ನಾನು ಹಾಗೆ ಮಾಡಿದ್ದೇ ಆದಲ್ಲಿ, ಅದು ಬಿಲ್‌ನನ್ನ ಮತ್ತಷ್ಟು ಕಂಗೆಡಿಸುವುದೆಂದೂ ತಿಳಿದಿದ್ದೆ. ಬಿಲ್‌ನ ಜೀವನವನ್ನು ಹ್ರಸ್ವಗೊಳಿಸುವಂತಹ ಯಾವುದೇ ಘಟನೆ ನಡೆಯುವುದನ್ನು ನಾನು ಇಷ್ಟಪಡುತ್ತಿರಲಿಲ್ಲ. ನನ್ನ ಗಂಡನ ಬಗೆಗಿನ ಪ್ರೀತಿ ಮತ್ತು ನನ್ನ ಮಗಳ ಮೇಲಿನ ಪ್ರೀತಿ ಇವೆರಡರ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ನನ್ನನ್ನು ಒತ್ತಾಯಿಸಲಾಗುತ್ತಿದೆಯೆಂಬಂತೆ ನಾನು ಭಾವಿಸಿದೆ.

ಈ ವಿಷಯವನ್ನು, ಸುದ್ದಿಯನ್ನು ಹೇಗೆ ಹೊರಗೆಡಹಬೇಕು ಎಂಬುದನ್ನು ಸರಿಯಾಗಿ ಯೋಜಿಸುವ ಮುಂಚೆ, ನಾನು ಜೇಮ್ಸ್ ಅನ್ನು ಭೇಟಿಯಾಗಿ ನಾನೇ ಸ್ವತಃ ಒಮ್ಮೆ ಅವನನ್ನು ಪರೀಕ್ಷಿಸಲು ನಿರ್ಧರಿಸಿದೆ. ಬಿಲ್ ಹೊರಗೆ ಹೋಗಿರುತ್ತಾನೆಂದು ತಿಳಿದಿದ್ದಾಗ ಡೆಬ್ಬಿಯು ಜೇಮ್ಸ್‌ನನ್ನು ಕರೆದುಕೊಂಡು ಬಂದಳು. ಜೇಮ್ಸ್ ಒಬ್ಬ ಗಂಭೀರ ಹಾಗೂ ಗಟ್ಟಿ ಮನಸ್ಸು ಮತ್ತು ಸಮತೋಲನದ ವ್ಯಕ್ತಿತ್ವವುಳ್ಳ ಯುವಕನೆಂದೂ, ಡೆಬ್ಬಿಗೆ ಒಳ್ಳೆಯ ಜೊತೆಗಾರನಾಗುವನೆಂದೂ ನನ್ನ ಮನಸ್ಸಿಗೆ ಹೊಳೆಯಿತು. ಆದಾಗ್ಯೂ, ಯೆಹೂದಿಗಳು ತಮ್ಮ ಯೆಹೂದಿಗಳಲ್ಲದ ಜೊತೆಗಾರರಿಂದ ಹೇಗೆ ನಂಬಿಕೆ ದ್ರೋಹಕ್ಕೊಳಗಾಗಿದ್ದರೆಂಬ ಕಥೆಗಳು ನನ್ನನ್ನು ಪೀಡಿಸುತ್ತಿದ್ದವು. ಮತ್ತು ನನ್ನ ಮಗಳನ್ನು ಅಂತಹ ಅನುಭವದಿಂದ ರಕ್ಷಿಸಬೇಕೆಂದು ನಾನು ತೀವ್ರವಾಗಿ ಬಯಸಿದೆ. ಇಂತಹ ಸಂದರ್ಭಗಳಲ್ಲಿ ನೀನೇನು ಮಾಡುವೆ ಎಂಬ ಪ್ರಶ್ನೆಯನ್ನು ಜೇಮ್ಸ್‌ಗೆ ನಾನು ಕೇಳಿದಾಗ, ಎಂತಹ ಸಂದರ್ಭದಲ್ಲಿಯೂ ಯಾವಾಗಲೂ ತಾನು ಡೆಬ್ಬಿಯ ಪರವಾಗಿ ನಿಲ್ಲುವೆನೆಂದೂ, ತನ್ನ ಸಾಮರ್ಥ್ಯವಿರುವಷ್ಟು ಉತ್ತಮವಾಗಿ ಅವಳನ್ನು ರಕ್ಷಿಸುವೆನೆಂದೂ ಜೇಮ್ಸ್ ಹೇಳಿದ. ಅವನನ್ನು ಇನ್ನೂ ಹೆಚ್ಚು ಪರೀಕ್ಷಿಸಲು ನನಗೆ ಏನೂ ಉಳಿದಿರಲಿಲ್ಲ. ಹಾಗಾಗಿ, ಜೇಮ್ಸ್ ಬಗೆಗೆ ಬಿಲ್‌ಗೆ ತಿಳಿಸುವ ಸೂಕ್ತ ಸಮಯ ಇದು ಎಂದು ನಾನು ನಿರ್ಧರಿಸಿದೆ.

ಹಿಟ್ಲರನು ಎಂದೂ ಸಂಪೂರ್ಣವಾಗಿ ನಿರ್ವಹಿಸದೇ ಬಿಟ್ಟ ಕಾರ್ಯವನ್ನು ಮುಗಿಸಿಬಿಡಲು ಡೆಬ್ಬಿಯು ನೆರವಾಗುತ್ತಿದ್ದಾಳೆ ಎಂಬುದು ಬಿಲ್‌ನ ತಕ್ಷಣದ ಪ್ರತಿಕ್ರಿಯೆಯಾಗಿತ್ತು. ಬಿಲ್ ಕೋಪಗೊಂಡಿದ್ದ ಮತ್ತು ಇಂತಹದೊಂದು ಸಂಗತಿ ಹೇಗೆ ಸಾಧ್ಯವಾಯಿತು ಎಂಬುದರ ಬಗೆಗೆ ಗೊಂದಲಗೊಂಡಿದ್ದ. ಮತ್ತೆ ಮತ್ತೆ ಅವನು ಇದೇ ಪ್ರಶ್ನೆಯನ್ನು ಕೇಳುತ್ತಿದ್ದ: "ಡೆಬ್ಬಿಯನ್ನು ಬೆಳೆಸುವುದರಲ್ಲಿ ನಾವೆಲ್ಲಿ ತಪ್ಪು ಮಾಡಿದೆವು?" ಡೆಬ್ಬಿಯು ಬಿಲ್‌ನೊಡನೆ ಮಾತನಾಡಿ ಅವನ ಮನ ಒಲಿಸಲು ಪ್ರಯತ್ನಿಸಿದಳು. ಆದರೆ ಬಿಲ್, ತನ್ನದೆಂದು ಪರಿಗಣಿಸಿದ್ದ ಹಕ್ಕನ್ನಾಗಲೀ, ನೈತಿಕ ನಿಲುವನ್ನಾಗಲೀ ಬಿಟ್ಟುಕೊಡಲು ಸಿದ್ಧನಿರಲಿಲ್ಲ. ಕೇವಲ ತನ್ನ ಧಾರ್ಮಿಕ ಹಿನ್ನೆಲೆಯಲ್ಲಿ ಪಾಲ್ಗೊಂಡಿಲ್ಲವೆಂಬ ಒಂದೇ ಕಾರಣಕ್ಕಾಗಿ, ತಾನು ಪ್ರೀತಿಸಿದ ಜೇಮ್ಸ್‌ನನ್ನು ಬಿಟ್ಟುಬಿಡಲು ಡೆಬ್ಬಿಗೆ ಮನಸ್ಸಿರಲಿಲ್ಲ. ಡೆಬ್ಬಿಯ ಮನಸ್ಸು ಎರಡು ಹೋಳಾಗಿದ್ದುದನ್ನು

ನಾನು ಅರಿಯಬಲ್ಲವಳಾಗಿದ್ದೆ. ಅವಳು ತನ್ನ ತಂದೆಯನ್ನು ಗಾಢವಾಗಿ ಪ್ರೀತಿಸುತ್ತಿದ್ದಳು. ಅವನಿಗೆ ಎಷ್ಟು ಅಸಂತೋಷ, ದುಃಖಗಳನ್ನು ತರುತ್ತಿದ್ದೇನೆಂದೂ ನೋಡುತ್ತಿದ್ದಳು. ಅವರಿಬ್ಬರ ನಡುವೆಯೂ ಸೇತುವೆ ಕಟ್ಟಲು ನಾನು ನನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸಿದೆ. ಆದರೆ, ಬಿಲ್ ತನ್ನ ಮಾತುಗಳನ್ನೇ ಪುನರುಚ್ಚರಿಸತೊಡಗಿದ: "ಡೆಬ್ಬಿ ವಯಸ್ಸಿಗೆ ಬಂದಿರುವವಳು, ಮತ್ತು ತನ್ನ ತೀಮಾನಗಳನ್ನು ತಾನೇ ಮಾಡಿ ಕೊಳ್ಳಬಲ್ಲವಳು, ಆದರೆ ಅವುಗಳನ್ನು ನಾನು ಇಷ್ಟಪಡುವಂತೆ ಅವಳು ನಿರೀಕ್ಷಿಸ ಬಾರದು!" ನಮ್ಮದೇ ಆದ ಸಂತಾನವನ್ನು ಸೃಷ್ಟಿಸುವಲ್ಲಿ ನಾವು ಎದುರಿಸಿದ ತೊಂದರೆಗಳನ್ನು ನೆನಪು ಮಾಡಿಕೊಳ್ಳುತ್ತಾ ಮತ್ತು ಡೆಬ್ಬಿಯು ಹುಟ್ಟಿದಾಗ ಎಷ್ಟು ಹರ್ಷಪಟ್ಟಿದ್ದೆವು ಎಂದು ಆಲೋಚಿಸುತ್ತಾ, ತಂದೆ ಮಗಳ ನಡುವೆ ಬೆಳೆಯುತ್ತಿರುವ ಈ ಅಂತರವನ್ನು ಕಂಡು ನನ್ನ ಹೃದಯ ಒಡೆಯಿತು. ಹಾಗಾಗಿ, ಈ ಒತ್ತಡವು ತನಗೆ ಬಹಳ ಹೆಚ್ಚಾಯಿತೆಂದು, ಜೇಮ್ಸ್‌ನೊಡನೆ ಬಾಂಧವ್ಯವನ್ನು ತಾನು ಮುರಿದುಕೊಂಡಿರುವುದಾಗಿಯೂ ಡೆಬ್ಬಿಯು ಪ್ರಕಟಿಸಿದಾಗ, ನಾನು ಬಹಳ ನೆಮ್ಮದಿಗೊಂಡೆ. ಈ ಸುದ್ದಿಯಿಂದ ಬಿಲ್ ಅಂತೂ ಬಹಳ ಹರ್ಷಿತನಾದ. ಆದರೆ, ಇದು ಡೆಬ್ಬಿಗೆ ಎಂತಹ ಕಷ್ಟಕರವಾದ ನಿರ್ಧಾರವಾಗಿತ್ತೆಂಬುದನ್ನು ನಾನು ತಿಳಿದುಕೊಂಡೆ. ಅವಳು ಮಂಕಾದಳು ಮತ್ತು ಒಳಸರಿದುಕೊಂಡಳು, ಅಂತರ್ಮುಖಿಯಾದಳು. ನಾನು ಅವಳನ್ನು ಅವಳು ಚಿಕ್ಕಹುಡುಗಿಯಾದಾಗ ಮಾಡುತ್ತಿದ್ದಂತೆ ನನ್ನ ತೋಳುಗಳೊಳಗೆ ಹುದುಗಿಸಿಕೊಳ್ಳಲು ಬಯಸಿದೆ. ಆದರೆ, ಅವಳು ತನ್ನ ದೂರವನ್ನು ಕಾಯ್ದುಕೊಳ್ಳಲು ಪಟ್ಟುಹಿಡಿದಳು.

ನಮ್ಮ ಕ್ಷೇತ್ರ ಸಂಶೋಧನೆಯ ದಿನಗಳು ಬಹಳ ಹಿಂದೆಯೇ ಮುಗಿದು ಹೋಗಿದ್ದವೆಂದು ನಾನು ಆಲೋಚಿಸಿದ್ದೆ. ಆದರೆ ೧೯೯೩ರಲ್ಲಿ, ಇನ್ನೊಂದಷ್ಟು ಹೆಚ್ಚು ಮಾಹಿತಿ ಸಂಗ್ರಹಿಸಲು ತಾನು ಮತ್ತೊಮ್ಮೆ ತೊಲಾಯ್‌ಗೆ ಹಿಂದಿರುಗುವ ಅವಶ್ಯಕತೆಯಿದೆ ಎಂದು ಬಿಲ್ ನಿರ್ಧರಿಸಿದ. ನಮ್ಮ ಪ್ರವಾಸಕ್ಕೆ ಸಿದ್ಧ ಮಾಡಿಕೊಳ್ಳುತ್ತಿದ್ದ. ನಾನು ಇದನ್ನು ನಂಬಲಾರದವಳಾಗಿದ್ದೆ. ನಾವು ಅಲ್ಲಿ ನಾಲ್ಕು ತಿಂಗಳುಗಳು ಇರಬೇಕಾಗಿದ್ದುದರಿಂದ, ನಾನು ಅಗತ್ಯವಾದ ಎಲ್ಲ ಔಷಧ ಸಾಮಗ್ರಿಗಳನ್ನೂ ತೆಗೆದುಕೊಳ್ಳಬೇಕಾಗಿತ್ತು ಮತ್ತು ಬಿಲ್‌ಗೆ ಅಗತ್ಯವಾಗುವ ವೈದ್ಯಕೀಯ ಸಹಾಯವು ದೊರೆಯುವ ಬಗೆಗೂ ಖಚಿತಗೊಳಿಸಿಕೊಳ್ಳಬೇಕಾಗಿತ್ತು. ನಾನು ಆತಂಕಗೊಂಡಿದ್ದೆ. ಆದರೆ, ವಿಮಾನವನ್ನೇರಿದಾಗ ಉತ್ಸಾಹಗೊಂಡಿದ್ದೆ ಕೂಡ. ವಿಮಾನವು ಮೇಲಕ್ಕೆ ಏರುತ್ತಿದ್ದಾಗ ಬಿಲ್‌ನ ಕೈಯನ್ನು ಹಿಡಿದು ಕುಳಿತಿದ್ದ ನಾನು ದುಃಖದಿಂದ ಆವೃತ್ತಳಾಗಿದ್ದೆ. ನಾವಿಬ್ಬರೂ ನಮ್ಮ ಎಪ್ಪತ್ತರ ದಶಕದಲ್ಲಿ ಅಲ್ಲಿ ಕುಳಿತಿದ್ದೆವು. ಜೊತೆಯಾಗಿ ನಡೆಸುತ್ತಿರುವ ನಮ್ಮ ಕೊನೆಯ ಸಾಹಸ ಇದೆಂದು, ಅದಕ್ಕಾಗಿ ಒಟ್ಟಿಗೇ ಹೊರಡುತ್ತಿದ್ದೇವೆಂದು ನನಗೆ ತಿಳಿದಿತ್ತು.

ಅಲ್ಲಿಯ ಹವಾಗುಣವು ಬಿಲ್‌ನ ದೈಹಿಕ ಸ್ಥಿತಿಗೆ ಸೂಕ್ತವೆನಿಸಿತು ಮತ್ತು ಅವನು ಹಲವು ವರ್ಷಗಳಲ್ಲಿ ಇದ್ದುದಕ್ಕಿಂತಲೂ ಹೆಚ್ಚು ಉತ್ಸಾಹಶೀಲನಾದ. ತೊಲಾಯ್ ಪುರುಷರ ರಹಸ್ಯ ಸಂಘದ ಅಂತಿಮ ಹಂತದ ದೀಕ್ಷಾವಿಧಿಗಳಲ್ಲಿ ಭಾಗವಹಿಸಲು ಬಿಲ್‌ನನ್ನು ಆಹ್ವಾನಿಸಲಾಯಿತು. ಇದು ಅವನ ಜೀವಿತಕಾಲದ ಮಹತ್ವಾಕಾಂಕ್ಷೆಯಾಗಿತ್ತು. ಕೊಡುಗೆಯಂದು ನಮಗೆ ಸ್ವಲ್ಪ ಭೂಮಿಯನ್ನು ಕೊಟ್ಟರು ಮತ್ತು ಇಲ್ಲಿಯೇ ಒಂದು ಮನೆ ಮಾಡುವ ಮತ್ತು ನನ್ನ ಹುಡುಗಿಯರಿಬ್ಬರನ್ನೂ ಇಲ್ಲಿಗೆ ಭೇಟಿ ಮಾಡಲು ಕರೆದುಕೊಂಡು ಬರುವ ಕನಸು ಕಾಣತೊಡಗಿದೆ. ನಾನು ನಮಗೆ ಇನ್ನೂ ಭವಿಷ್ಯವಿದೆ ಎಂದು ಆಲೋಚಿಸತೊಡಗಿದೆ. ಆದಾಗ್ಯೂ, ಜೇಮ್ಸ್ ತನ್ನೊಡನೆ ಈಗ ತಾನೇ ವಿವಾಹದ ಪ್ರಸ್ತಾಪ ಮಾಡಿದ್ದಾನೆಂದು ಡೆಬ್ಬಿಯಿಂದ ದೂರವಾಣಿಯ ಕರೆಯನ್ನು ಕೇಳುತ್ತಲೇ, ಬಿಲ್‌ನ ಮುಖದ ಮೇಲೆ ಕಪ್ಪು ನೆರಳೊಂದು ಬಿದ್ದಿತು. ಹಾಗಾಗಬಾರದೆಂದು ನನಗೆ ತಿಳಿದಿತ್ತು. ತಕ್ಷಣವೇ ನಾನು ಅವಳನ್ನು ಅಭಿನಂದಿಸಿದೆ. ಆದರೆ, ಸುಮ್ಮನೆ ಫೋನಿನಿಂದ ದೂರಕ್ಕೆ ನಡೆದುಬಿಟ್ಟ. ಅವನ ಭುಜಗಳು ಜೋತುಬಿದ್ದಿದ್ದವು ಮತ್ತು ಕಾಲುಗಳು ನೆಲವನ್ನು ಒದೆಯುತ್ತಿದ್ದವು.

ನಾವು ಹಿಂತಿರುಗಿದ ನಂತರ ಮತ್ತೊಂದು ಸಂಕಷ್ಟದ ಅವಧಿಯು ಎದುರಾಯಿತು. ಡೆಬ್ಬಿ ಮತ್ತು ಅವಳ ತಂದೆಯ ಮದುವೆ ಸಂಬಂಧಗಳು ಬಿಗಿಗೊಂಡವು ಮತ್ತು ನಾನು ಇವರಿಬ್ಬರ ಮಧ್ಯೆ ಸಿಕ್ಕಿಹಾಕಿಕೊಂಡಿದ್ದೆ. ಡೆಬ್ಬಿಯು, ವಿವಾಹದ ಆಚರಣೆಗಳನ್ನು ನಡೆಸಲು ಒಪ್ಪಿಕೊಂಡಿದ್ದ, ಯೆಹೂದಿ ಧರ್ಮಶಾಸ್ತ್ರ ಪಂಡಿತರೊಬ್ಬರನ್ನು ಗೊತ್ತುಮಾಡಿಕೊಂಡಿದ್ದಳು. ಅವನಿಗೆ ಫೋನು ಮಾಡುತ್ತಾ ಬಿಲ್ ಅನೇಕ ಗಂಟೆಗಳನ್ನೇ ಕಳೆದ. ಈ ಘಟನೆಗೆ ತನ್ನನ್ನು ತಾನು ಹೊಂದಿಸಿ ಕೊಳ್ಳಲು ಪ್ರಯತ್ನಿಸಿದ. ಆದರೆ, ವಿವಾಹ ಸಮಾರಂಭದಲ್ಲಿ ಉಪಸ್ಥಿತನಿರಲು ಒಪ್ಪಿಕೊಂಡರೂ, ತಾನು ರಿಸೆಪ್ಷನ್‌ನ ಸಂದರ್ಭದಲ್ಲಿ ಖಂಡಿತವಾಗಿಯೂ ಭಾಷಣ ಮಾಡುವುದಿಲ್ಲವೆಂಬುದರ ಬಗೆಗೆ ಅವನು ಹಠಮಾರಿಯಾಗಿಯೇ ಉಳಿದಿದ್ದ. ತನ್ನದೇ ತೀರ್ಮಾನಗಳನ್ನು ತೆಗೆದುಕೊಳ್ಳಲು ಡೆಬ್ಬಿಯು ಸಾಕಷ್ಟು ವಯಸ್ಸಾದವ ಳಾಗಿರುವುದಾಗಿಯೂ, ಆದರೆ ತಾನು ಅವಳ ನಿರ್ಧಾರಗಳನ್ನು ಸಮ್ಮತಿಸಲು ಅವಳು ನಿರೀಕ್ಷಿಸಬಾರದು ಎಂಬುದನ್ನು ಬಿಲ್ ಮತ್ತೆ ಮತ್ತೆ ನೆನಪು ಮಾಡುತ್ತಿದ್ದ. ಡೆಬ್ಬಿಯು ತನ್ನ ನಿರಾಶೆಯನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದಳು. ಆದರೆ, ಇದು ಅವಳನ್ನು ಎಷ್ಟೊಂದು ನೋಯಿಸುತ್ತಿತ್ತು ಎಂದು ನಾನು ಅರಿತಿದ್ದೆ. ಡೆಬ್ಬಿ ಮತ್ತು ಜೇಮ್ಸ್ ತಮ್ಮ ವಿವಾಹದ ದಿನವನ್ನು ನಿಶ್ಚಯಿಸಿದಾಗ, ಬಿಲ್ ಹಲವಾರು ಬಾರಿ ತೀರ ಗಂಭೀರವಾದ ಆಂಜನಲ್ ಅಟ್ಯಾಕ್‌ಗಳಿಗೆ ಒಳಗಾದ ಮತ್ತು ನಾನು ಇನ್ನು ಮೇಲೆ ಇದನ್ನೆಲ್ಲಾ ನಿರ್ವಹಿಸಲಾರೆ ಎಂದು ಭಾವಿಸಿದೆ. ಡೆಬ್ಬಿ ಮತ್ತು ಅವಳ ವಿವಾಹದ ಸಿದ್ಧತೆ ಮತ್ತು ಯೋಜನೆಗಳಿಂದ ನನ್ನನ್ನು ನಾನು ಸಂಪೂರ್ಣವಾಗಿ

ಹೊರಗಿರಿಸಿಕೊಂಡೆ. ಹಾಗೂ ಬಿಲ್‌ನ ಜೊತೆಗಿನ ನನ್ನ ಜೀವನದ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಿದೆ. ಅತ್ಯಂತ ಅಸ್ಥಿರವಾಗಿದ್ದು ಅಪಾಯದಲ್ಲಿದ್ದ ನಮ್ಮ ಬದುಕಿನ ಸಮತೋಲನವನ್ನು ಮತ್ತೆ ಪಡೆಯಲು ನಾನು ಪ್ರಯತ್ನಿಸುತ್ತಿದ್ದೆ ಮತ್ತು ಮುಂದೆ ನಡೆಯಲಿರುವ ಮದುವೆಯ ಬಗೆಗಿನ ಯಾವುದೇ ಸುದ್ದಿಯೂ ಈ ಸಮತೋಲನವನ್ನು ಹಾಳು ಮಾಡುವುದೆಂದು ನನಗೆ ತಿಳಿದಿತ್ತು. ನನ್ನ ಈ ನಿರಾಸಕ್ತಿಯಿಂದ ಡೆಬ್ಬಿಯು ಒಂದು ರೀತಿಯ ಗೊಂದಲಕ್ಕೊಳಗಾದವಳಂತೆ ಕಂಡಳು. ಆದರೆ, ಅವಳ ಸಿದ್ಧತೆ, ಯೋಜನೆಗಳಿಗಿಂತಲೂ ಹೆಚ್ಚಾಗಿ ನಾನು ಅವಳ ತಂದೆಯ ಆರೋಗ್ಯವನ್ನು ಆಯ್ಕೆ ಮಾಡಿಕೊಂಡಿದ್ದೆ ಎಂದು ನಾನು ಅವಳಿಗೆ ತಿಳಿಸಲಾಗಲಿಲ್ಲ.

ಡೆಬ್ಬಿಯ ವಿವಾಹವು ಒಂದು ಅದ್ಭುತವಾದ ಘಟನೆಯಾಗಿ ರೂಪುಗೊಂಡಿತು ಮತ್ತು ಬಹಳಷ್ಟು ಮನವೊಲಿಸಿದ ಬಳಿಕ, ಬಿಲ್ ಬಹಳವಾಗಿ ಹೃದಯಕ್ಕೆ ತಟ್ಟುವಂತಹ ಮತ್ತು ಸೂಕ್ಷ್ಮ ಸಂವೇದನಾ ಶೀಲತೆಯ ಭಾಷಣವನ್ನು ಮಾಡಿದ. ಬಿಲ್ ಮೇಲಕ್ಕೆ ಎದ್ದಾಗ, ಅವನು ಏನು ಮಾತನಾಡುವನೋ ಎಂದು ಖಂಡಿತವಾಗಿಯೂ ಚಿಂತಿಸುತ್ತಾ ಆಳವಾದ ಉಸಿರನ್ನು ಎಳೆದುಕೊಂಡಿದ್ದವಳು, ಅವನು ಮಾತುಗಳನ್ನು ಮುಗಿಸಿ ಕುಳಿತುಕೊಂಡಾಗ, ಹೋಗಿ ತನ್ನ ತಂದೆಯನ್ನು ಅಪ್ಪಿಕೊಂಡಳು ಮತ್ತು ಅವಳ ಕಣ್ಣುಗಳು ನೀರಿನಿಂದ ತುಂಬಿದ್ದನ್ನು ನಾನು ನೋಡಿದೆ.

ಮದುವೆಯ ನಂತರ, ತನ್ನ ಹೊಸ ಅಳಿಯನೊಂದಿಗೆ, ಬಿಲ್ ಸಾಕಷ್ಟು ವಿವೇಚನಾಯುಕ್ತ ಸ್ನೇಹಪೂರ್ಣ ಸಂಬಂಧವನ್ನೇ ಸ್ಥಾಪಿಸಿಕೊಂಡ. ಇದು ನಮ್ಮಿಬ್ಬರಿಗೂ ನೆಮ್ಮದಿ ನೀಡಿತು. ಮಿನ್ನಿಯಾಪೊಲಿಸ್‌ನಲ್ಲಿ ಡೆಬ್ಬಿಯು ಎಲಿನಾರಳಿಗೆ ಜನ್ಮಕೊಟ್ಟಾಗ ಬಿಲ್ ಮತ್ತು ಜೇಮ್ಸ್ ನಡುವೆ ಸ್ನೇಹದ ಕೊಂಡಿಗೆ ಅಂತಿಮವಾಗಿ ಮುದ್ರೆ ಬಿದ್ದಿತು. ಮಗು ಹುಟ್ಟಿದ ಕೆಲವೇ ನಿಮಿಷದ ನಂತರ, ಈ ಸುದ್ದಿಯನ್ನು ನಮ್ಮೊಡನೆ ಹಂಚಿಕೊಳ್ಳಲು ಡೆಬ್ಬಿಯು ನಮಗೆ ಫೋನ್ ಮಾಡಿದಳು. ಮತ್ತೊಬ್ಬ ಮೊಮ್ಮಗಳನ್ನು ಪಡೆದಿದ್ದಕ್ಕೆ ನಾವು ಅತ್ಯಂತ ಹರ್ಷಿತರಾಗಿದ್ದೆವು ಮತ್ತು ಆ ಕೂಡಲೇ ಡೆಬ್ಬಿಯನ್ನು ಭೇಟಿ ಮಾಡಲು, ವಿಮಾನಯಾನಕ್ಕೆ ಏರ್ಪಾಟು ಮಾಡಿದೆವು. ಡೆಬ್ಬಿಯ ಮಗುವನ್ನು ನನ್ನ ತೋಳುಗಳಲ್ಲಿ ಎತ್ತಿಕೊಳ್ಳಲು ಸಾಧ್ಯವಾದಷ್ಟು ದೀರ್ಘ ಕಾಲ ನಾನು ಬದುಕಿರುವೆನೆಂದು ನಾನು ನಂಬಿರಲಿಲ್ಲ. ಅವಳ ಮೊದಲ ಮಗುವನ್ನು ನೋಡುವುದಿರಲಿ, ನಾನು ಅವಳು ಮದುವೆಯಾಗುವುದನ್ನು ನೋಡುವೆನೆಂದು ಕೂಡಾ ಎಂದೂ ಯೋಚಿಸಿರಲಿಲ್ಲ. ಎಲಿನಾರ್ ಬಲು ಸುಂದರವಾದ ಮಗುವಾಗಿದ್ದು, ನನಗೆ ಡೆಬ್ಬಿಯು ಮಗುವಾಗಿದ್ದಾಗಿನದೇ ನೆನಪನ್ನು ತರಿಸುತ್ತಿತ್ತು. ಮಗುವನ್ನು ಹತ್ತಿರ, ಹಿಡಿದುಕೊಂಡು ಅವಳ ಕಣ್ಣುಗಳನ್ನೇ ದಿಟ್ಟಿಸಿ ನೋಡುತ್ತಿದ್ದಾಗ ಬಿಲ್ ಕೂಡಾ ಹಾಗೇ ಆಲೋಚಿಸುತ್ತಿದ್ದಾನೆ ಎನಿಸಿತು. ನಾವು

ಅವರೊಡನೆ, ಸಮಾಧಾನದಿಂದ ಒಂದು ವಾರ ಕಳೆದೆವು. ಮತ್ತು ಆ ಅವಧಿಯಲ್ಲಿ ಬಿಲ್ ಮತ್ತು ಡೆಬ್ಬಿ ಸ್ವಲ್ಪ ಮಟ್ಟಿಗೆ ತಮ್ಮ ಹಿಂದಿನ ನಿಕಟತೆಯನ್ನು ಮತ್ತೆ ಸ್ಥಾಪಿಸಿಕೊಳ್ಳುವಲ್ಲಿ ಸಮರ್ಥರಾದರು.

ನಾವು ಇಂಗ್ಲೆಂಡಿಗೆ ಹಿಂತಿರುಗಿದ ನಂತರ ಬಿಲ್ ಹೆಚ್ಚು ಸ್ಥಿರಗೊಂಡಂತೆ ಕಂಡುಬಂದ: ನನ್ನ ಸಾಕ್ಷ್ಯಚಿತ್ರ "ಗ್ರಾಮೀಣ ಧ್ವನಿಗಳು– ದಕ್ಷಿಣ ಭಾರತದಲ್ಲಿ ನಲವತ್ತು ವರ್ಷಗಳಲ್ಲಿನ ಪರಿವರ್ತನೆ" ಇದರ ವಿಧಿವತ್ತಾದ ಬಿಡುಗಡೆಯಲ್ಲಿ ಉಪಸ್ಥಿತಳಿರುವಂತೆ ನನ್ನನ್ನು ಭಾರತಕ್ಕೆ ಆಹ್ವಾನಿಸಲಾಗಿತ್ತು. ಅನೇಕ ವರ್ಷಗಳ ಹಿಂದೆ ನಾನು ನಡೆಸಿದ್ದ ಅಧ್ಯಯನಗಳ ಆಧಾರದ ಮೇಲೆ ಈ ಸಾಕ್ಷ್ಯಚಿತ್ರ ನಿರ್ಮಿತವಾಗಿತ್ತು. ಈ ಕಾರ್ಯಕ್ರಮದಲ್ಲಿ ಉಪಸ್ಥಿತಳಿರಲು ಒಪ್ಪಿಕೊಳ್ಳುವಂತೆ ಬಿಲ್ ನನ್ನನ್ನು ಪ್ರೋತ್ಸಾಹಿಸಿದ. ನಾನು ಬಹಳ ಉತ್ಸಾಹಿತಳಾಗಿದ್ದೆ. ಆದರೆ, ಅದೇ ಸಮಯದಲ್ಲಿ, ನಾನಿಲ್ಲದೇ ಒಂಬತ್ತು ದಿನಗಳವರೆಗೆ ಬಿಲ್ ಒಬ್ಬನೇ ಇರಬಲ್ಲನೇ ಎಂಬುದರ ಬಗೆಗೆ ನನಗೆ ಆತಂಕವೂ ಆಗಿತ್ತು. ಈ ಭಾವನೆಯನ್ನು ಕೊಡವಿಕೊಳ್ಳಲು ಪ್ರಯತ್ನಿಸಿದೆ ಹಾಗೂ ನನ್ನ ಜೀವಿತಾವಧಿಯ ಈ ಪ್ರವಾಸದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡೆ. ನಾನು ಹೋದ ಕಡೆಯಲ್ಲೆಲ್ಲಾ ನನಗೆ, V.I.P. ಉಪಚಾರ ದೊರೆಯಿತು ಮತ್ತು ಒಕ್ಕೂಟದ ಮಂತ್ರಿಗಳಿಂದ, ಹಿರಿಯ ಆಡಳಿತಾಧಿಕಾರಿಗಳಿಂದ, ಮತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರಿಂದ ಸನ್ಮಾನಿಸಲ್ಪಟ್ಟೆ. ಅವರೆಲ್ಲರೂ ನನ್ನ ಈ ಕಾರ್ಯಕ್ಕಾಗಿ ನನ್ನನ್ನು ಅಭಿನಂದಿಸಿದರು ಮತ್ತು ಈ ಕೆಲಸವು ಭಾರತದ ಅಭಿವೃದ್ಧಿಯಲ್ಲಿ ಮಹತ್ವದ ಕೊಡುಗೆಯಾಗಿದೆಯೆಂದು ಅಭಿಪ್ರಾಯಪಟ್ಟರು. ಇದು ಕೇವಲ ಕನಸಲ್ಲ ಎಂದು ಖಚಿತಪಡಿಸಿಕೊಳ್ಳಲು, ನನ್ನನ್ನು ನಾನು ಜಿಗುಟಿಕೊಂಡು ನೋಡಬೇಕಾಯಿತು. ಇದು ನನ್ನ ವೃತ್ತಿ ಜೀವನದ ಯಶಸ್ಸಿನ ಉತ್ತುಂಗ ಶಿಖರವಾಗಿತ್ತು. ಮತ್ತು ಅದನ್ನು ನಾನು ಸಂತೋಷದಿಂದ ಅನುಭವಿಸಲು ನಿರ್ಧರಿಸಿದೆ.

ನಾನು ಭಾರತದಲ್ಲಿದ್ದಾಗ ಬಿಲ್‌ಗೆ ಪದೇಪದೇ ಫೋನು ಮಾಡುತ್ತಿದ್ದೆ ಮತ್ತು ತಾನು ಆರೋಗ್ಯವಾಗಿರುವುದಾಗಿ ಅವನು ಆಶ್ವಾಸನೆ ನೀಡುತ್ತಿದ್ದ. ಆದಾಗ್ಯೂ ತಾನು ಇಲ್ಲದೇ ಇದ್ದರೂ ನಾನು ನನ್ನ ಕಾರ್ಯವನ್ನು ಮುಂದುವರೆಸುತ್ತೇನೆಂದು ವಾಗ್ದಾನ ಮಾಡುವಂತೆ ನನ್ನನ್ನು ಕೇಳತೊಡಗಿದಾಗ, ನಾನು ಚಿಂತಿಸತೊಡಗಿದೆ. ಆ ಚಿಂತೆಯನ್ನು ಕೊಡವಿಬಿಡಲು ಪ್ರಯತ್ನಿಸಿದೆ. ಆದರೆ, ನಾನು ಮನೆಗೆ ಹಿಂತಿರುಗಿದಾಗ, ಅವನ ಮಾತುಗಳ ಅರ್ಥವನ್ನು ಕಂಡುಕೊಂಡೆ. ಅವನು ತೀರಾ ನಿಸ್ತೇಜನಾಗಿ ಮತ್ತು ಮುರುಟಿಕೊಂಡು ಸುಕ್ಕಾದಂತೆ ಕಾಣಿಸುತ್ತಿದ್ದ. ನನ್ನ ಪ್ರವಾಸವು, ಅವನಿಂದ ಆರೋಗ್ಯವನ್ನು ಅಪಹರಿಸಿಬಿಟ್ಟಿತ್ತು ಎಂದು ನನಗೆ ಅರ್ಥವಾಯಿತು. ಅವನು ಮತ್ತೊಂದು ತೀವ್ರವಾದ ಆಂಜಿನಾದ ಆಕ್ರಮಣಕ್ಕೆ ಒಳಗಾದ. ನಾನು ಆ್ಯಂಬುಲೆನ್ಸ್‌ಗಾಗಿ ಕರೆ ಮಾಡುವುದು, ಬಿಲ್‌ನ ಜೊತೆಯಲ್ಲಿ ಆ್ಯಂಬುಲೆನ್ಸ್ ಬರುವ

ತನಕ ಕಾಯುವುದು ಮುಂತಾದ ನನ್ನ ದಿನಚರಿಯಲ್ಲಿ ನಿರತಳಾದೆ.

ಚಳಿಗಾಲಕ್ಕಾಗಿ ನಾವು ಆಸ್ಟ್ರೇಲಿಯಾಕ್ಕೆ ಹೋಗಬೇಕೆಂದು ನಿಗದಿಯಾಗಿದ್ದ ಹನ್ನೊಂದು ದಿನಗಳಿಗಿಂತ ಮುಂಚೆ ಬಿಲ್‌ಗೆ ಹೀಗಾಗಿದ್ದು. ಆ ಪ್ರಯಾಣದ ಸಮಯಕ್ಕೆ ತನ್ನನ್ನು ಗುಣಪಡಿಸುವಂತೆ ವೈದ್ಯರಿಗೆ ಹೇಳಬೇಕೆಂದು ಬಿಲ್ ಒತ್ತಾಯಿಸಿದ. ಬಿಲ್ ಪ್ರಯಾಣ ಮಾಡುವಷ್ಟು ಗುಣಮುಖನಾಗುತ್ತಾನೆಯೇ ಎನ್ನುವುದರ ಬಗೆಗೆ ತಕ್ಷಣವೇ ನನ್ನ ಮನಸ್ಸಿನಲ್ಲಿ ತೀವ್ರವಾದ ಅನುಮಾನಗಳು ಆರಂಭವಾದವು. ಹಿಂದೆ ಅನೇಕ ಸಂದರ್ಭಗಳಲ್ಲಿ ಬಿಲ್‌ಗೆ ಚಿಕಿತ್ಸೆ ನೀಡಿದ್ದ ವೈದ್ಯರು, ಕೆಲವೇ ದಿನಗಳಲ್ಲಿ ಅವನು ಮತ್ತೆ ಗುಣವಾಗುವನೆಂದು ನನಗೆ ಆಶ್ವಾಸನೆ ನೀಡಿದರು. ಆದರೂ, ಈ ಬಾರಿ ನಾನು ಅವರ ಮಾತುಗಳನ್ನು ನಂಬಲಿಲ್ಲ; ಏನೋ, ಯಾವುದೋ ಒಂದು ಈ ಬಾರಿ ಬೇರೆಯಾಗಿರುವಂತೆ ಕಂಡಿತು. ಆದರೆ, ಅದು ಏನು ಎನ್ನುವುದು ನನಗೆ ಖಚಿತವಿರಲಿಲ್ಲ. ಅವನ ಹಾಸಿಗೆಯ ಪಕ್ಕದಿಂದ ಕದಲಲು ನಾನು ನಿರಾಕರಿಸಿದೆ. ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಲು ವೈದ್ಯರು ನನಗೆ ಒತ್ತಾಯ ಮಾಡಿದರೂ ಕೂಡ, ನಾನು ಬಿಲ್‌ನನ್ನು ಬಿಟ್ಟುಹೋಗಲಿಲ್ಲ.

ಮುಂದಿನ ಒಂದೆರಡು ದಿನಗಳಲ್ಲಿ ಬಿಲ್‌ನ ಆರೋಗ್ಯ ಸ್ಥಿರವಾದಂತೆ ಕಂಡಿತು. ಹಾಗಾಗಿ, ನಾನೇ ನನ್ನ ಆಲೋಚನೆಯಲ್ಲಿ ತಪ್ಪು ಮಾಡಿದ್ದೇನೇನೋ ಎಂದು ಚಿಂತಿಸತೊಡಗಿದೆ. ನಾವು ಮೊದಲು ಸಿದ್ಧತೆ ಮಾಡಿಕೊಂಡಿದ್ದಂತೆಯೇ, ನಾವು ಆಸ್ಟ್ರೇಲಿಯಾಕ್ಕೆ ಬರುವೆವೆಂದು ಓಟ್ವೊಗೆ ಫೋನ್ ಮಾಡಿ ತಿಳಿಸಿದೆ ಮತ್ತು ತೀವ್ರಾಸಕ್ತಿಯಿಂದ ಸಾಮಾನುಗಳನ್ನು ಕಟ್ಟಿಡಲು ಆರಂಭಿಸಿದೆ. ಮೂರನೆಯ ದಿನ, ಬಿಲ್‌ನನ್ನು ಮನೆಗೆ ಕರೆದುಕೊಂಡು ಹೋಗುವೆ ಎಂಬ ಆತ್ಮವಿಶ್ವಾಸದಿಂದ ಬಿಲ್‌ನ ವಾರ್ಡ್‌ಗೆ ಬಂದೆ. ಆದರೆ, ನಾನು ವಾರ್ಡನ್ನು ಪ್ರವೇಶಿಸುತ್ತಿದ್ದಂತೆಯೇ ಒಬ್ಬಳು ನರ್ಸ್ ನನ್ನನ್ನು ತಡೆದಳು ಮತ್ತು ತನ್ನ ತೋಳುಗಳನ್ನು ನನ್ನ ಭುಜದ ಮೇಲೆ ಸುತ್ತಲೂ ಹಾಕಿದಳು. ನನಗೆ ಮಾತನಾಡಲೂ ಸಹ ಆಗಲಿಲ್ಲ. ನಾನು ಒದ್ದಾಡುತ್ತಿರುವುದನ್ನು ನೋಡಿದ ಅವಳು ತಕ್ಷಣವೇ, ಮಧ್ಯ ಮಾತನಾಡಿ ಬಿಲ್, ಗಂಭೀರವಾದ ಹೃದಯಾಘಾತದಿಂದ ನರಳುತ್ತಿರುವುದಾಗಿಯೂ, ವೈದ್ಯರು ಅವನನ್ನು ಉಳಿಸಲು ಪ್ರಯತ್ನಿಸುತ್ತಿರುವುದಾಗಿಯೂ ಹೇಳಿದಳು.

ನನ್ನ ಅತ್ಯಂತ ಕೆಟ್ಟ ದುಃಸ್ವಪ್ನವು, ಅಂತಿಮವಾಗಿ ನಿಜವಾಗುತ್ತಿರುವುದನ್ನು ತಿಳಿದು, ನಾನು ಏನು ಮಾಡಬೇಕು, ಏನು ಯೋಚಿಸಬೇಕು ಎನ್ನುವುದು ನನಗೆ ತಿಳಿಯಲಿಲ್ಲ. ಈ ಕ್ಷಣಕ್ಕೆ ನನ್ನನ್ನು ನಾನು ಸಿದ್ಧ ಮಾಡಿಕೊಳ್ಳಲು ಇನ್ನೂ ಕಾಲಾವಕಾಶವಿದೆ ಎಂದು ನಾನು ಆಲೋಚಿಸಿದ್ದೆ. ಆದರೆ ನಾನು ಏನು ಮಾಡಿದ್ದರೂ ಕೂಡ, ಇದು ಸುಲಭವಾಗುತ್ತಿರಲಿಲ್ಲವೆಂದು ನಾನು ಬೇಗನೇ ಮನಗಂಡೆ. ಆ ಸಿಸ್ಟರ್ ನನ್ನನ್ನು ನಯವಾಗಿ ಒಂದು ಖಾಸಗಿ ಕೋಣೆಗೆ ಕರೆದುಕೊಂಡು ಹೋದಳು.

ಸ್ವಲ್ಪ ಸಮಯದ ನಂತರ ಒಬ್ಬ ವೈದ್ಯರು ಬಂದು ಬಿಲ್‌ಗೆ ಬೀಟಾ–ಬ್ಲಾಕರ್ಸ್ ಅನ್ನು ಕೊಡಲು ಒಪ್ಪಿಗೆಯ ಪತ್ರಕ್ಕೆ ನಾನು ಸಹಿ ಹಾಕುವಂತೆ ಕೇಳಿದರು. ಬೀಟಾ–ಬ್ಲಾಕರ್ಸ್, ಸ್ಟ್ರೋಕನ್ನು ಉಂಟುಮಾಡುವ ಸಾಧ್ಯತೆಯಿರುವುದರಿಂದ ರೋಗಿಯ ಕಡೆಯವರ ಸಹಿ ಅವಶ್ಯಕವೆಂದೂ ವಿವರಿಸಿದರು. ನಾನು ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಾರದಾದೆ. ಸಂಪೂರ್ಣ ಅಸಹಾಯಕಳೂ ಮತ್ತು ಒಬ್ಬಂಟಿಯೂ ನಾನಾಗಿರುವೆ ಎನಿಸಿತು. ಬಿಲ್‌ನೊಡನೆ ನಾನು ಈ ವಿಷಯವಾಗಿ ಮಾತನಾಡಬೇಕಿತ್ತು. ಆದರೆ, ಅದು ಅಸಾಧ್ಯವಾಗಿತ್ತು. ನನ್ನ ಗಂಡ, ನನ್ನ ಪ್ರೀತಿಯ ಗಂಡನು ಈಗ ಸಾವಿನ ಬಾಗಿಲಿನಲ್ಲಿದ್ದ ಮತ್ತು ನಾನು ಕೂಡ ಅವನಿಲ್ಲದೇ ಬದುಕುವುದಕ್ಕಿಂತಲೂ ಅವನ ಜೊತೆಯಲ್ಲಿಯೇ ಸಾಯಲು ಬಯಸಿದ್ದೆ. ಆ ವೈದ್ಯರು ನನ್ನ ಕಡೆಗೆ ನೋಡಿದರು. ಉತ್ತರಕ್ಕಾಗಿ ಅವರು ತಾಳ್ಮೆಯಿಂದ ಕಾಯುತ್ತಿದ್ದರು. ಯೋಚಿಸುವುದಕ್ಕಾಗಲೀ, ಏನಾದರೂ ಕಾರ್ಯ ಮಾಡುವುದಕ್ಕಾಗಲೀ, ನಾನು ಅಸಮರ್ಥಳಾಗಿದ್ದುದನ್ನು ನೋಡಿದ ಸಿಸ್ಟರ್, ನಾನು ಯಾರಿಗಾದರೂ ಫೋನ್ ಮಾಡಲು ಇಚ್ಛಿಸುವೆನೇ ಎಂದು ಕೇಳಿದಳು. ಯಾರಿಗೆ ಫೋನ್ ಮಾಡಬೇಕು ಎನ್ನುವುದು ಮೊದಲು ಹೊಳೆಯಲಿಲ್ಲ– ನನ್ನ ಮಿದುಳು ಮಿದುವಾಗಿ ಬಳಕುವ ಜೆಲ್ಲಿಯಂತಾಗಿತ್ತು. ಆದರೆ, ನಾನು ಆಗ ನಮ್ಮ G.P.ಯನ್ನು ನೆನಪು ಮಾಡಿಕೊಂಡೆ (General Practitioners) ಅವರು ಕೆಲವು ವರ್ಷಗಳಿಂದಲೂ ನಮಗೆ ಶಕ್ತಿಯ ಗೋಪುರದಂತಿದ್ದರು. ಅದೃಷ್ಟವಶಾತ್ ಬೇಗನೇ ಅವರ ಸಂಪರ್ಕ ಸಿಕ್ಕಿತು. ಬೇರೆ ಆಯ್ಕೆಯೇ ಇಲ್ಲವೆಂದು ಅವರು ಹೇಳಿದರೂ: ಬಿಲ್‌ಗೆ ಇದೊಂದೇ ಇರುವ ಅವಕಾಶವೆಂದೂ ಹೇಳಿದರು. ಒಪ್ಪಿಗೆಯ ಪತ್ರಕ್ಕೆ ಸಹಿ ಹಾಕಿದೆ ಮತ್ತು ನನ್ನ ತಲೆಯನ್ನು ಕೈಗಳಲ್ಲಿ ಹಿಡಿದುಕೊಂಡು ಅತೀವ ದುಃಖದಿಂದ ಕುಳಿತುಕೊಂಡೆ.

ಬಿಲ್‌ನನ್ನು ನೋಡಲು ನನಗೆ ಅನುಮತಿ ನೀಡುವ ಮೊದಲು ನಾನು ಗಂಟೆಗಳೆಂದು ತೋರುತ್ತಿದ್ದ ಸಮಯ ಕಾಯುತ್ತಾ ಕುಳಿತಿದ್ದೆ. ಅವನು ಪ್ರಜ್ಞಾಹೀನನಾಗಿದ್ದ ಮತ್ತು ಆಮ್ಲಜನಕದ ಮಾಸ್ಕ್‌ನ ನೆರವಿನಿಂದ ಅವನು ಉಸಿರಾಡುತ್ತಿದ್ದ. ಅವನ ಶರೀರದ ಹಲವು ಸ್ಥಳಗಳಲ್ಲಿ ನಳಿಕೆಗಳನ್ನು ಹೊಂದಿಸಿಟ್ಟಿದ್ದರು. ಅವನನ್ನು ಮುಟ್ಟಲು ಮತ್ತು ಬಿಗಿಯಾಗಿ ಹಿಡಿದುಕೊಳ್ಳಲು ನಾನು ಬಯಸಿದೆ. ಆದರೆ, ಅವನನ್ನು ಸುತ್ತಿಕೊಂಡಿರುವ ಈ ಎಲ್ಲಾ ಉಪಕರಣಗಳನ್ನೂ ಅವ್ಯವಸ್ಥೆಗೊಳಿಸುವೆನೆಂದು ಹೆದರಿದೆ. ಅವನಿಗೆ ಎಚ್ಚರವಾಗಲೆಂದು ನಾನು ಸಂಕಲ್ಪಿಸಿದೆ. ಮತ್ತು ಇನ್ನೆಂದಿಗೂ ನಾನು ಅವನ ಧ್ವನಿಯನ್ನು ಕೇಳಲಾರೆ ಎನ್ನುವುದನ್ನು ನನಗೆ ನಂಬಲು ಸಾಧ್ಯವಾಗಲಿಲ್ಲ. ನಾನಿನ್ನು ಯಾರ ಬಳಿ ನನ್ನ ಎಲ್ಲ ವಿಷಯಗಳನ್ನೂ ನಂಬಿಕೆ, ವಿಶ್ವಾಸಗಳಿಂದ ಹೇಳಿಕೊಳ್ಳಲಿ? ನನ್ನ ಯಶಸ್ಸು, ಗೆಲುವುಗಳನ್ನು ಯಾರೊಡನೆ ಹಂಚಿಕೊಳ್ಳಲಿ? ಪ್ರತಿಯೊಂದೂ ನನ್ನ ವಿರುದ್ಧವಿದೆ ಎನ್ನಿಸಿದಾಗ ನನ್ನನ್ನು

ಪ್ರೋತ್ಸಾಹಿಸುವವರು ಯಾರು? ಬಿಲ್ ನನಗೆ ಅತ್ಯಂತ ಅವಶ್ಯಕವಾಗಿದ್ದ, ನನಗೆ ಅದೆಷ್ಟು ಬೇಕಾಗಿದ್ದ, ಅವನಿಲ್ಲದ ಜೀವನವನ್ನು ನನಗೆ ಕಲ್ಪಿಸಿಕೊಳ್ಳುವುದೇ ಅಸಾಧ್ಯವಾಗಿತ್ತು.

ಬಿಲ್‌ನನ್ನು ತೀವ್ರ ನಿಗಾ ಘಟಕಕ್ಕೆ ಬದಲಾಯಿಸುತ್ತಿರುವಾಗ ನಾನು ಆ ಟ್ರಾಲಿಯನ್ನು ಹಿಂಬಾಲಿಸಿದೆ. ಆ ಗಳಿಗೆಯಲ್ಲಿ ಮಿಷೆಲ್ಲೆ ಬಂದಳು. ನಾನು ಅನುಭವಿಸುತ್ತಿದ್ದ ದುಃಖವನ್ನು, ಕಡೆಗೆ ನಾನು ಹೊರಹಾಕಬಲ್ಲವಳಾದೆ. ಮುಂದಿನ ನಾಲ್ಕು ಹಗಲು ನಾಲ್ಕು ರಾತ್ರಿಗಳನ್ನು ನಾವು ಬಿಲ್‌ನ ಹಾಸಿಗೆಯ ಪಕ್ಕದಲ್ಲಿಯೇ ಕಳೆದೆವು. ಏನನ್ನಾದರೂ ಸ್ವಲ್ಪ ತಿಂದು ಬರಲು ಮಾತ್ರ ಅವನನ್ನು ಬಿಟ್ಟು ಎದ್ದು ಹೋಗುತ್ತಿದ್ದೆವು. ನಾವಿಬ್ಬರೂ ಅವನೊಡನೆ ಮಾತನಾಡಲು ಪ್ರಯತ್ನಿಸಿದೆವು. ಅವನು ನಮ್ಮ ಮಾತನ್ನು ಕೇಳಿಸಿಕೊಳ್ಳಬಹುದು ಮತ್ತು ಅರ್ಥಮಾಡಿಕೊಳ್ಳಬಹುದು ಎಂದುಕೊಂಡಿದ್ದೆವು. ಆದರೆ, ಯಾವುದೇ ಪ್ರತಿಕ್ರಿಯೆಯೂ ಅವನಿಂದ ಇರಲಿಲ್ಲ. ದೀರ್ಘ ರಾತ್ರಿಗಳ ಅವಧಿಯಲ್ಲಿ ನಾನು ಅವನ ತಲೆಯ ಪಕ್ಕದಲ್ಲಿ ನನ್ನ ತಲೆಯನ್ನಿಟ್ಟು ಮಲಗುತ್ತಿದ್ದೆ ಮತ್ತು ಅವನು ಆರೋಗ್ಯದಿಂದಿದ್ದು, ನಾನು ಹೇಳಿದ್ದನ್ನೆಲ್ಲಾ ಕೇಳಿಸಿಕೊಳ್ಳಬಹುದಾಗಿದ್ದಾಗ, ನಾನು ಹೇಳಬೇಕೆಂದಿದ್ದ ಎಲ್ಲವನ್ನೂ ನಾನು ಈಗ ಪಿಸುಗುಡುತ್ತಿದ್ದೆ. ನಾನು ಯಾವಾಗಲೂ ಅವನನ್ನು ಪ್ರೀತಿಸುತ್ತಿದ್ದೆನೆಂದೂ, ಎಂದಿಗೂ, ಎಂದಿಗೂ ಅವನನ್ನು ಪ್ರೀತಿಸುವುದನ್ನು ನಿಲ್ಲಿಸುವುದಿಲ್ಲವೆಂದೂ ಅವನಿಗೆ ಹೇಳಿದೆ. ಅವನ ಜೊತೆಯಲ್ಲಿ ನನ್ನ ಬದುಕನ್ನು ಹಂಚಿಕೊಳ್ಳಲು ಸಾಧ್ಯವಾದದ್ದಕ್ಕೆ ನಾನು ಎಂತಹ ಅದೃಷ್ಟಶಾಲಿಯೆಂದೂ, ಹೇಳಿದೆ ಮತ್ತು ಅವನು ಯವಾಗಲೂ ನನ್ನ ಬದುಕಿನ ನಕ್ಷತ್ರವಾಗಿದ್ದುದಕ್ಕೂ, ನನ್ನ ಮಾರ್ಗದರ್ಶಿಯಾಗಿದ್ದುದಕ್ಕೂ ಅವನಿಗೆ ಧನ್ಯವಾದ, ಕೃತಜ್ಞತೆಗಳನ್ನು ಹೇಳಿದೆ. ಇದನ್ನೆಲ್ಲಾ ನಾನು ಮತ್ತೆ ಮತ್ತೆ ಪುನರುಚ್ಚರಿಸುತ್ತಿದ್ದೆ. ಯಾವುದೋ ಒಂದು ಸ್ತರದಲ್ಲಿ ಬಿಲ್ ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ ಎಂಬ ಆಸೆಯಿಂದ.

ನಮ್ಮ ಮಾತುಗಳು ಬಿಲ್‌ಗೆ, ಜೀವನಕ್ಕೆ ಮರಳಿ ಬರಲು ನಡೆಸಬೇಕಾದ ಹೋರಾಟಕ್ಕೆ ಅವಶ್ಯಕವಾದ ಶಕ್ತಿಯನ್ನು ಕೊಡುವುವು ಎಂದು ನಾನು ಭರವಸೆಗೆ ವಿರುದ್ಧವಾಗಿ ಭರವಸೆ ಹೊಂದಿದ್ದೆ. ಆದರೆ ವೈದ್ಯರು ನಿರಾಶಾವಾದಿಗಳಾಗಿದ್ದರು. ಏನಿದ್ದರೂ ಇನ್ನು ಕೆಲವೇ ದಿನಗಳು ಮಾತ್ರ ಎಂದು ಹೇಳಿದರು. ನಾನು ಡೆಬ್ಬಿಗೆ ಫೋನ್ ಮಾಡಿ ತಿಳಿಸಿದೆ. ಈ ಮುನ್ಸೂಚನೆಯನ್ನು ಕೇಳಿದಾಗ ಅವಳು, ಮುಂದಿನ ವಿಮಾನವನ್ನು ಹಿಡಿದು ಇಲ್ಲಿಗೆ ಹೊರಟುಬರಲು ನಿಶ್ಚಯಿಸಿದಳು. ಅಂದು ಮಧ್ಯಾಹ್ನ ಮಿಷೆಲ್ಲೆ ಮತ್ತು ನಾನು ಸ್ವಲ್ಪ ಬಿಡುವು ತೆಗೆದುಕೊಳ್ಳುವಂತೆ ವೈದ್ಯರು ನಮ್ಮ ಮನವೊಲಿಸಿದರು. ಮಿಷೆಲ್ಲೆಯು ತನ್ನ ಮನೆಗೆ ತನ್ನ ಕುಟುಂಬದವರ ಬಳಿ ಹೋಗಬೇಕೆಂದೂ, ಹಾಗೂ ಅವಳು ಹಿಂತಿರುಗಿದ ನಂತರ ನಾನು ಮನೆಗೆ

ಹೋಗಿ ಷವರ್‌ಸ್ನಾನ ಮತ್ತು ವಿಶ್ರಾಂತಿ ಪಡೆಯುವುದೆಂದೂ ನಾವು ಒಪ್ಪಿಕೊಂಡೆವು. ನೀಲ್ ನನ್ನನ್ನು ಮನೆಗೆ ತನ್ನ ಕಾರಿನಲ್ಲಿ ಕರೆದುಕೊಂಡು ಬಂದ ಮತ್ತು ನಂತರ ಮತ್ತೆ ಕರೆದುಕೊಂಡು ಹೋಗುವ ಉದ್ದೇಶದಿಂದ, ಅವಶ್ಯಕವಾದ ವಸ್ತುಗಳನ್ನು ಕೊಳ್ಳಲೆಂದು ಅಂಗಡಿಗೆ ಹೋದ. ನಾನಿನ್ನೂ ಬೀಗದಲ್ಲಿ ಬೀಗದ ಕೈಯನ್ನು ತಿರುಗಿಸುತ್ತಿದ್ದಾಗಲೇ ಮನೆಯೊಳಗಿನಿಂದ ಫೋನ್ ರಿಂಗಿಣಿಸುತ್ತಿರುವ ಶಬ್ದ ಕೇಳಿಬಂತು. ಕಾತರದಿಂದ ತಡಕಾಡುತ್ತಾ ಫ್ಲಾಟ್‌ನೊಳಕ್ಕೆ ಸರಿಯಾದ ಸಮಯದಲ್ಲಿ ಹೋದಾಗ, ಉತ್ತರಿಸುವ ಫೋನಿನಲ್ಲಿ, ಬಿಲ್‌ನ ಸ್ಥಿತಿಯು ಇದ್ದಕ್ಕಿದ್ದಂತೆಯೇ ಗಂಭೀರವಾಗಿದೆಯೆಂದೂ, ಆದಷ್ಟು ಬೇಗ ಆಸ್ಪತ್ರೆಗೆ ಬರಬೇಕೆಂದೂ ಮಿಷೆಲ್ಲೆಯು ಹೇಳುತ್ತಿರುವುದು ಕೇಳಿಸಿತು. ನೀಲ್ ನನ್ನನ್ನು ಕರೆದುಕೊಂಡು ಬಂದಿದ್ದರಿಂದ, ನಾನು ನನ್ನ ಕಾರನ್ನು ಆಸ್ಪತ್ರೆಯಲ್ಲಿಯೇ ಬಿಟ್ಟುಬಂದಿದ್ದೆ. ಸ್ಥಳೀಯ ಟ್ಯಾಕ್ಸಿ ಕಂಪೆನಿಯೊಂದಕ್ಕೆ ಫೋನ್ ಮಾಡಿದಾಗ, ಇನ್ನೂ ಅರ್ಧ ಗಂಟೆ ಕಾಯಬೇಕಾಗುತ್ತದೆ ಎಂದರು. ಯಾವುದಾದರೂ ಒಂದು ಟ್ಯಾಕ್ಸಿಯನ್ನು ಹಿಡಿಯೋಣವೆಂದು ನಾನು ಮನೆಯಿಂದ ಆಚೆಗೆ ಧಾವಿಸಿದೆ ಮತ್ತು ನನ್ನ ನೆರೆಹೊರೆಯವರೊಬ್ಬರಿಗೆ ಢಿಕ್ಕಿ ಹೊಡೆದೆ. ನಾನೆಷ್ಟು ತಲ್ಲಣಗೊಂಡಿದ್ದೆ ಎಂದು ನೋಡಿದ ಅವರು, ತಕ್ಷಣವೇ ನನ್ನನ್ನು ಆಸ್ಪತ್ರೆಗೆ ಕರೆತಂದರು. ನಾನು ವಾರ್ಡಿಗೆ ಓಡುತ್ತಿದ್ದಂತೆ, ಮಿಷೆಲ್ಲೆ ನನ್ನನ್ನು ಹಿಡಿದುಕೊಂಡಳು ಮತ್ತು ಬಿಲ್ ಮತ್ತೆ ಸ್ಥಿರವಾಗಿದ್ದಾನೆ ಎಂದು ಹೇಳಿದಳು. ನನಗೆ ನೆಮ್ಮದಿ ಎನಿಸಿತು. ಆದರೆ ಇಂತಹ ಏಳುಬೀಳುಗಳ ಗಳಿಗೆ, ಗಳಿಗೆಗೆ ತೀವ್ರ ರೀತಿಯ ಬದಲಾವಣೆಯ ಅಸ್ತಿತ್ವವನ್ನು ನಿಭಾಯಿಸುತ್ತಾ, ನಾನೆಷ್ಟು ದಿನ ಉಳಿಯಬಲ್ಲೆ ಎಂದು ಚಿಂತಿಸಿದೆ. ಬಿಲ್ ಸದ್ಯದ ಸ್ಥಿತಿಯನ್ನು ತಿಳಿಸಲು, ಅವಳು ವಿಮಾನವನ್ನು ಏರುವ ಮುನ್ನ ಡೆಬ್ಬಿಗೆ ಫೋನ್ ಮಾಡಲು ನಿರ್ಧರಿಸಿದೆ. ನಾನು ಸುದ್ದಿಯನ್ನು ತಿಳಿಸುತ್ತಿದ್ದಂತೆಯೇ, ಅವಳು ಬಿಕ್ಕಳಿಸಿ ಅಳುತ್ತಾ, ಹೇಗಾದರೂ ಮಾಡಿ, ತಾನು ಬರುವತನಕ ಬಿಲ್‌ನನ್ನು ಜೀವಂತವಾಗಿರಿಸಿಕೊಂಡಿರಲು ಹೇಳಿದಳು; ಅವಳು ಬಿಲ್‌ನನ್ನು ಮತ್ತೆ ತಾನು ನೋಡಲೇಬೇಕು ಎಂದಳು. ಇದೆಲ್ಲಾ ನನ್ನ ಕೈಲಿಲ್ಲ ಎಂದು ತಿಳಿದಿದ್ದರೂ, ನನಗೆ ಏನು ಸಾಧ್ಯವೋ ಅದನ್ನು ಮಾಡುವೆನೆಂದು ಅವಳಿಗೆ ವಚನವಿತ್ತೆ.

ಅವನಿನ್ನೂ ಉಸಿರಾಡುತ್ತಿದ್ದಾನೆಯೇ ಎಂಬುದನ್ನು ಸತತವಾಗಿ ಪರೀಕ್ಷಿಸುತ್ತಾ ಮಿಷೆಲ್ಲೆ ಮತ್ತು ನಾನು ಮತ್ತೊಂದು ರಾತ್ರಿಯನ್ನು ಬಿಲ್‌ನ ಹಾಸಿಗೆಯ ಪಕ್ಕದಲ್ಲಿ ಕಳೆದೆವು. ಅವನು ಆ ರಾತ್ರಿಯನ್ನು ಕಳೆಯಲು ಮನಸ್ಸು ಮಾಡುವಂತೆ, ಡೆಬ್ಬಿಯು ಬೆಳಿಗ್ಗೆ ಬರುತ್ತಾಳೆಂದು ಹೇಳುತ್ತಿದ್ದೆವು. ಅದು ಬಿಲ್‌ಗೆ ಉತ್ತಮ ಪ್ರೇರಣೆ ನೀಡುತ್ತದೆ ಎಂದುಕೊಂಡೆವು. ಆದರೆ ಅವನು ಇದನ್ನು ಗುರುತಿಸಿದ ಯಾವುದೇ ಚಿಹ್ನೆಯೂ ಕಂಡುಬರಲಿಲ್ಲ. ನೀಲ್ ತನ್ನ ಮಕ್ಕಳೊಡನೆ, ಡೆಬ್ಬಿ ಮತ್ತು ಅವಳ ಕುಟುಂಬವನ್ನು

ವಿಮಾನನಿಲ್ದಾಣದಿಂದ ಕರೆದುಕೊಂಡು ಬರಲು ಒಪ್ಪಿಕೊಂಡಿದ್ದ ಮತ್ತು ಎಲ್ಲರನ್ನೂ ನೇರವಾಗಿ ಆಸ್ಪತ್ರೆಗೇ ಕರೆತರುವುದಾಗಿಯೂ ಹೇಳಿದ್ದ. ತ್ರಾಸದಾಯಕವಾದ, ತಾಳ್ಮೆಯನ್ನು ಪರೀಕ್ಷಿಸುವಂತಹ ವಿಮಾನ ಪ್ರಯಾಣದ ನಂತರ, ಮರುದಿನ ಭಾನುವಾರ ಬೆಳಿಗ್ಗೆ ಡೆಬ್ಬಿ ಬಂದಳು. ತನ್ನ ತಂದೆ ಇನ್ನೂ ಬದುಕಿದ್ದಾನೆಯೇ ಎಂದು ತಿಳಿಯಲು ತೀರಾ ಹತಾಶಳಾಗಿದ್ದಳು. ತನ್ನ ತಂದೆಯು ಸಾವಿನ ಬಾಗಿಲಿನಲ್ಲಿರುವುದನ್ನು ನೋಡಿ, ಡೆಬ್ಬಿ ಹೇಗೆ ಪ್ರತಿಕ್ರಿಯಿಸುತ್ತಾಳೆಯೋ ಎಂದು ನನಗೆ ಚಿಂತೆಯಾಗಿತ್ತು. ಆದರೆ, ಅವಳು ವಾರ್ಡಿನೊಳಕ್ಕೆ ಪ್ರವೇಶಿಸುತ್ತಿದ್ದಂತೆಯೇ, ಬಿಲ್ ಅವಳ ಧ್ವನಿಯನ್ನು ಕೇಳಿದ ಮತ್ತು ತನ್ನ ಕಣ್ಣುಗಳನ್ನು ತೆರೆದ. ನಾನು ಒಂದು ಪವಾಡಕ್ಕೆ ಸಾಕ್ಷಿಯಾಗಿದ್ದೇನೆಯೋ ಎಂದು ಭಾವಿಸಿದೆ. ಮಿಷೆಲ್ಲೆ ಮತ್ತು ನಾನು ಅತ್ಯಂತ ಆಶ್ಚರ್ಯದಿಂದ ಪರಸ್ಪರರನ್ನು ನೋಡಿದೆವು. ಕರ್ತವ್ಯದಲ್ಲಿದ್ದ ವೈದ್ಯಕೀಯ ಸಿಬ್ಬಂದಿ ಪರೀಕ್ಷಿಸಲೆಂದು ಧಾವಿಸಿ ಬಂದಿತು. ಆದರೆ ಒಳಗೆ ಏನಾಗುತ್ತಿದೆಯೆಂದು ನೋಡಿದ ಅವರು ಬೇಗ ಹಿಂದಿರುಗಿದರು.

ಡೆಬ್ಬಿಯು, ಬಿಲ್‌ನ ಹಾಸಿಗೆಯ ಹತ್ತಿರ ಹೋಗಿ ಅವನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಳು. ಬಿಲ್ ಕೇವಲ ಇಷ್ಟೇ ಹೇಳಿದ: "ಡೆಬ್ಬಿ, ನನ್ನ ಡಾರ್ಲಿಂಗ್" ತಕ್ಷಣವೇ ಅವಳು ಅಳುವುದಕ್ಕೆ ಆರಂಭಿಸಿದುದನ್ನು ನಾನು ನೋಡಿದೆ. ಮತ್ತು ಬೇಗ ಹೋಗಿ, ಪುಟ್ಟ ಎಲಿನಾರ್‌ಳನ್ನು, ಅವಳ ತಾತನಿಗೆ ಕೊಡುವುದಕ್ಕಾಗಿ ಕರೆದುಕೊಂಡು ಬಂದೆ. ಎಲಿನಾರ್, ಬಿಲ್‌ನ ಹಾಸಿಗೆಯ ಮೇಲೆ ಕುಳಿತು ಅವನಿಗೆ ಅಳವಡಿಸಿದ್ದ ನಳಿಕೆಗಳೊಡನೆ ಆಡತೊಡಗಿದಳು. ಅವನು ಹೇಳಿದ ಇದೊಂದು ಅದ್ಭುತ ಮಗು, ನಂತರ ಅವನು ತನ್ನ ಉಳಿದ ಮೊಮ್ಮಕ್ಕಳು ತನ್ನ ಸುತ್ತಲೂ ಒಟ್ಟುಗೂಡುವಂತೆ ಕೇಳಿದ ಮತ್ತು ಪ್ರತಿಯೊಬ್ಬರನ್ನೂ ಆಶೀರ್ವದಿಸಿ, ನಂತರ ನಮ್ಮೆನ್ನೆಲ್ಲಾ ಆಶೀರ್ವದಿಸಿದ. ಕಟ್ಟಕಡೆಗೆ ಜೇಮ್ಸ್ ಕೈ ಹಿಡಿದು, ತನ್ನಲ್ಲಿ ಉಳಿದಿದ್ದ ಶಕ್ತಿಯನ್ನೆಲ್ಲಾ ಬಿಟ್ಟು ಆ ಕೈಯನ್ನು ಹಿಸುಕಿದ. ತಾನು ಅವನಿಗೆ ನೀಡಿದ್ದ ನೋವಿಗಾಗಿ ಕ್ಷಮೆ ಕೇಳುತ್ತಿದ್ದನೋ ಎನ್ನುವಂತೆ. ನಂತರ ತನಗೆ ಹಾಕಿದ್ದ ಮಾಸ್ಕ್ ಅನ್ನು ಎಳೆದುಬಿಟ್ಟ. ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ತನಗಾಗಿ 'ಕಡ್ಡಿಶ್' ಹೇಳಿಕೊಳ್ಳಲು ಪ್ರಾರಂಭಿಸಿದ. (Kaddish= ಮರಣ ಹೊಂದುವವರಿಗಾಗಿ ಹೇಳುವ ಯೆಹೂದೀ ಪ್ರಾರ್ಥನೆ.) ತನಗೆ ಇನ್ನು ಸಾಕು ಸಾಕಾಗಿತ್ತೆಂದು ಅವನು ನನಗೆ ಹೇಳುತ್ತಿದ್ದಾನೆ ಎನಿಸಿತು, ನನ್ನ ದುಃಖವನ್ನು ಅವನು ನೋಡದಿರಲಿ ಎಂದು ನಾನು ಆ ಕೋಣೆಯಿಂದ ಹೊರಕ್ಕೆ ಹೋದೆ.

ತನ್ನ ನೋವು, ಅವಶ್ಯಕತೆಗಳಿಗಿಂತಲೂ ಮುಂಚೆ ಬೇರೆ ಎಲ್ಲರ ಬಗೆಗೂ ಆಲೋಚಿಸುವ ಬಿಲ್‌ನ ರೀತಿಯೇ ಹೀಗಿತ್ತು. ತನ್ನ ಪ್ರಜ್ಞೆಯನ್ನು ಮತ್ತೆ ಹಿಂದಕ್ಕೆ ಪಡೆದುಕೊಳ್ಳಲು ಅವನಲ್ಲಿದ್ದ ಪ್ರತಿಯೊಂದು ಔನ್ಸಿನಷ್ಟು ಚೈತನ್ಯವೂ ಅವನಿಗೆ

ಬೇಕಾಗಿದ್ದಿರಬಹುದು. ಹಿಂದೆ ಎಂದಿಗಿಂತಲೂ ಹೆಚ್ಚಾಗಿ ನಾನು ಆಗ ಬಿಲ್‌ನನ್ನು, ಅವನ ಚಾರಿತ್ರ್ಯದ ಶಕ್ತಿ ಸಾಮರ್ಥ್ಯಕ್ಕಾಗಿ ಮತ್ತು ನಿಸ್ವಾರ್ಥ ಪ್ರೇಮಕ್ಕಾಗಿ ಪ್ರಶಂಸಿಸಿದೆ.

ಬಿಲ್ ಮತ್ತೆ ತನ್ನ ಪ್ರಜ್ಞಾಹೀನ ಸ್ಥಿತಿಗೆ ಜಾರಿದಾಗ, ಅವನ ಜೀವನದ ಕಡೆಯ ಗಳಿಗೆಗಳಲ್ಲಿ, ನಾವೆಲ್ಲರೂ ಯಾವುದೇ ತೊಂದರೆಯಿಲ್ಲದೆ ಒಟ್ಟಿಗೆ ಇರಲು ಅವಕಾಶ ಮಾಡಿಕೊಡುವ ಸಲುವಾಗಿ ವೈದ್ಯರು ಅವನನ್ನು, ಪ್ರತ್ಯೇಕವಾಗಿದ್ದ ಒಂಟಿ ಕೋಣೆಯೊಂದಕ್ಕೆ ಬದಲಾಯಿಸಲು ಏರ್ಪಾಟು ಮಾಡಿದರು. ನಾವು ಆಸ್ಪತ್ರೆಯ ಮೂಲಕ ಆ ಕೋಣೆಗೆ ಹೋದೆವು. ಅದು ಶವಸಂಸ್ಕಾರದ ಮೆರವಣಿಗೆಯಂತೆ ಭಾಸವಾಯಿತು. ಆ ಪಕ್ಕದ ಕೋಣೆಯಲ್ಲಿ ಇರುವುದು ಒಂದು ರೀತಿಯಲ್ಲಿ ವಿಚಿತ್ರ ಎನಿಸುತ್ತಿತ್ತು. ಗಿಜಿಗುಡುತ್ತಿದ್ದ ತೀವ್ರ ನಿಗಾ ಘಟಕದಲ್ಲಿ ಒಂದು ಪ್ರಮಾಣದ ಭರವಸೆಯಿತ್ತು. ಆದರೆ, ಈಗ ಕೇವಲ ಕಾಯುವಿಕೆಯ ಸಂಗತಿ ಮಾತ್ರವಾಗಿತ್ತು. ಈ ಗಂಭೀರ ವಾತಾವರಣದಲ್ಲಿನ ಒಂದೇ ಒಂದು ವಿಭಿನ್ನತೆಯೆಂದರೆ, ಮೂಲೆಯಲ್ಲಿ ಸಮಾಧಾನವಾಗಿ ಆಟವಾಡುತ್ತಿದ್ದ ಎಲಿನಾರ್, ತನ್ನ ಗಂಟಲಿನಿಂದ ಹೊರಡಿಸುತ್ತಿದ್ದ ಗುಳುಗುಳು ಶಬ್ದಗಳು, ಜೀವನ ಮತ್ತು ಮರಣ ಪರಸ್ಪರ ಅದೆಷ್ಟು ಹತ್ತಿರವಿದ್ದವು ಎಂದು ನಾನು ಆಲೋಚಿಸದೆ ಇರಲಾರದಾದೆ. ಮತ್ತು ಆ ಗಳಿಗೆಯಲ್ಲಿ, ನಾನು ಬಿಟ್ಟುಕೊಡಲು ಸಿದ್ಧಳಾಗಬೇಕೆಂದು ಅರಿತೆ ಹಾಗೂ ಬಿಲ್ ತನಗೆ ಅರ್ಹವಾಗಿದ್ದ ರೀತಿಯಲ್ಲಿ ಘನತೆಯಿಂದ ಸಾಯಲು ಅವನನ್ನು ಬಿಡಬೇಕು ಎಂದೂ ಅರಿತೆ. ಹೃದಯ ರೋಗ ತಜ್ಞರು ಬಂದು ಬಿಲ್‌ನ ದೇಹಕ್ಕೆ ಅಳವಡಿಸಿದ್ದ ಎಲ್ಲ ನಳಿಕೆಗಳನ್ನೂ, ಡ್ರಿಪ್ಸ್‌ಗಳನ್ನು ತೆಗೆದುಹಾಕಲು ಏರ್ಪಾಟು ಮಾಡಿದರು ಮತ್ತು ಒಮ್ಮೆ ಬಿಲ್‌ನನ್ನು ಹಾಸಿಗೆಯ ಆಧಾರದ ಮೇಲೆ ಮಲಗಿಸಿದಾಗ ಅವನು ಸುಮ್ಮನೆ ನಿದ್ರಿಸುತ್ತಿರುವಂತೆ ಕಾಣಿಸುತ್ತಿದ್ದ. ಯೆಹೂದೀ ಧರ್ಮದ ಪುರೋಹಿತರು ಬಂದರು ಮತ್ತು ನಮ್ಮ ಜೊತೆಯಲ್ಲಿ ಕುಳಿತುಕೊಂಡರು ಮತ್ತು ಸ್ವಲ್ಪ ಸಮಯದಲ್ಲಿಯೇ ಅವನ ಉಸಿರಾಟದ ಗತಿ ಸರಾಗವಾಯಿತು ಮತ್ತು ಅವನು ತನ್ನ ಕೊನೆಯ ಉಸಿರನ್ನು ಎಳೆದುಕೊಳ್ಳುವುದನ್ನು ನಾವು ಕೇಳಿಸಿಕೊಂಡೆವು. ಏನು ಹೇಳಬೇಕೆಂಬುದು, ನಮ್ಮಲ್ಲಿ ಯಾರಿಗೂ ತಿಳಿಯಲಿಲ್ಲವಾಗಿ, ಮೌನ ಆವರಿಸಿತು. ನಾನು ಅವನ ಮೇಲೆ ಬಾಗಿ ಮತ್ತೊಮ್ಮೆ ಹೇಳಿದೆ: "ನನ್ನ ಹೃದಯ ತುಂಬಿ ನಿನ್ನನ್ನು ನಾನು ಪ್ರೀತಿಸುತ್ತೇನೆ, ನೀನಿಲ್ಲದೆ, ಅದು ಹೇಗೆ ನಾನು ನನ್ನ ಬದುಕನ್ನು ಸಾಗಿಸುತ್ತೇನೆಯೋ ನನಗೆ ತಿಳಿದಿಲ್ಲ."

ನಾವು ಆಸ್ಟ್ರೇಲಿಯಾಕ್ಕೆ ವಿಮಾನಯಾನ ಮಾಡಬೇಕು ಎಂದುಕೊಂಡಿದ್ದ ದಿನ ಬಿಲ್‌ನ ಸಮಾಧಿಯಾಯಿತು. ಆಸ್ಟ್ರೇಲಿಯಾಕ್ಕೆ ಬದಲಾಗಿ ಅವನು ಅಜ್ಞಾತದೆಡೆಗೆ ಪ್ರಯಾಣ ಹೊರಟಿದ್ದ ಮತ್ತು ಅವನಿಗೆ ಶೋಕ ಪಡುವುದಕ್ಕಾಗಿ ನಾನು ಹಿಂದೆ

ಉಳಿದಿದ್ದೆ. ನಮ್ಮ ಮಕ್ಕಳ ಪರಂಪರೆಯನ್ನು ಆಸ್ತಿಯಾಗಿ ನನಗೆ ಅವನು ಬಿಟ್ಟು ಹೋಗಿದ್ದುದಕ್ಕೆ ಅವನಿಗೆ ಕೃತಜ್ಞಳಾಗಿದ್ದೆ. ನಮ್ಮ ಈ ದುಃಖದಲ್ಲಿ ನಾವೆಲ್ಲರೂ ಒಂದಾಗಿದ್ದೆವು ಮತ್ತು ಶವಸಂಸ್ಕಾರ ಮತ್ತು ಜೀವನದ ಆಚೆಗಿನ ಸಿದ್ಧತೆಗಳನ್ನು ಮಾಡುವಾಗ ನಾವು ಒಬ್ಬರನ್ನೊಬ್ಬರು ಅತ್ಯಂತ ಗಾಢವಾಗಿ ಅವಲಂಬಿಸಿದ್ದೆವು. ನೀಲ್ ಮತ್ತು ಜೇಮ್ಸ್‌ಗೆ, ಬಿಲ್ ಬಗೆಗೆ ಯಾವ ರೀತಿಯ ಭಾವನೆಗಳಿದ್ದವು ಎನ್ನುವುದರ ಬಗೆಗೆ ನನಗೆ ಏನೂ ತಿಳಿದಿರಲಿಲ್ಲ. ಆದರೆ, ಅವರ ಕಾಳಜಿ ಮತ್ತು ಈ ಎಲ್ಲ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕೆಂಬ ಅವರ ಮನಸ್ಸಿನ ಇಚ್ಛೆ ನನ್ನನ್ನು ಆಶ್ಚರ್ಯಪಡಿಸಿತು. ವಿಶೇಷವಾಗಿ, ನೀಲ್ ಮತ್ತು ಜೇಮ್ಸ್ ಇಬ್ಬರೂ ನನ್ನ ದುಃಖದ ಬಗೆಗೆ ತೋರಿದ ಕಳಕಳಿಗಾಗಿ ನಾನು ಅವರಿಬ್ಬರಿಗೂ ಕೃತಜ್ಞಳಾಗಿದ್ದೆ.

ಕೆಲವು ದಿನಗಳ ನಂತರ, ಡೆಬ್ಬಿ ಮತ್ತು ಜೇಮ್ಸ್ ಅಮೆರಿಕಾಕ್ಕೆ ಹಿಂದಿರುಗಬೇಕಾಯಿತು. ಇದರಿಂದ ನಾನು ಎಂದಿಗಿಂತಲೂ ಹೆಚ್ಚು ಒಂಟಿಯಾದಂತೆನಿಸಿತು. ಅನೇಕ ವರ್ಷಗಳ ಕಾಲ ಬಿಲ್‌ನೊಡನೆ ಹಂಚಿಕೊಂಡು ಮಲಗುತ್ತಿದ್ದ ಹಾಸಿಗೆಯಲ್ಲಿ, ಎಚ್ಚರಾಗುತ್ತಲೇ ಅವನಿಗಾಗಿ ಕೈ ಚಾಚುತ್ತಿದ್ದ ಹಾಸಿಗೆಯಲ್ಲಿ, ಈಗವನು ಇಲ್ಲ ಎಂಬ ನೆನಪಿನೊಂದಿಗೆ, ಆ ಹಾಸಿಗೆಯಲ್ಲಿ ಮಲಗಿ ನಿದ್ರಿಸುವುದು ನನಗೆ ಅತ್ಯಂತ ಕಷ್ಟವೆನಿಸಿತು. ಇದು ನೀಲ್‌ಗೆ, ತಮ್ಮ ಮನೆಯ ಬೀಗದ ಕೈ ಒಂದನ್ನು ನನಗೆ ನೀಡುವ ಪ್ರೇರಣೆ ನೀಡಿತು. ನೀಲ್ ಬೀಗದ ಕೈ ಕೊಡುತ್ತಾ ಹೇಳಿದ: "ಇದು ಈಗ ನಿಮ್ಮ ಮನೆ ಕೂಡ. ನಿಮಗೆ ಯಾವಾಗ ಬೇಕೆನಿಸಿದರೆ ಆಗ ಬಂದು ನಮ್ಮ ಜೊತೆಯಲ್ಲಿರಿ." ನನ್ನ ಮನಸ್ಸನ್ನು ಇದು ತಟ್ಟಿತು. ಬಿಲ್ ತನ್ನ ತಂದೆ ನನಗಾಗಿ ಎಂತಹ ಒಳ್ಳೆತನದ, ಸುಸಂಸ್ಕೃತ ಹಾಗೂ ನಿಕಟವರ್ತಿಯಾದ ಪ್ರೀತಿಸುವ ಕುಟುಂಬವನ್ನು ಬಿಟ್ಟುಹೋಗಿದ್ದಾನೆ ಎನ್ನುವುದನ್ನು ಬಿಲ್ ನೋಡುವಂತಿದ್ದರೆ ಎನ್ನಿಸಿತು.

ನಿಧಾನವಾಗಿ ನಾನು ನನ್ನ ಪಾಡಿಗೆ ಜೀವನಕ್ಕೆ ಹೊಂದಿಕೊಳ್ಳತೊಡಗಿದೆ. ನನಗಾಗಿ ಅಂಗಡಿಗೆ ಹೋಗಿ ಅವಶ್ಯಕ ವಸ್ತುಗಳನ್ನು ಕೊಂಡುಕೊಂಡು ಬರುವುದಕ್ಕೆ ಹೊಂದಿಕೊಳ್ಳಬೇಕಾಗಿತ್ತು ಮತ್ತು ಬಿಲ್‌ನ ಆಹಾರ ತಯಾರಿಸುವ ದಿನಚರಿ ನನಗೆ ಈಗ ಇರಲಿಲ್ಲ. ಅನೇಕ ಬಾರಿ, ನಾನು ಬೇಗ ಅವನ ಬಳಿಗೆ ಹಿಂದಿರುಗಬೇಕಾಗಿದೆ ಎಂದು ಯೋಚಿಸುತ್ತಿದ್ದೆ. ಆದರೆ, ನಾನು ಮನೆಗೆ ಹೋದಾಗ ಅವನು ಅಲ್ಲಿ ಇರುವುದಿಲ್ಲವೆಂಬ ನೆನಪು ಬರುತ್ತಿತ್ತು. ಅವನು ಕುಳಿತುಕೊಳ್ಳುತ್ತಿದ್ದ ಖಾಲಿ ಖುರ್ಚಿಯ ಎದುರಿಗೆ ನಾನು ಮೌನವಾಗಿ ಕುಳಿತುಕೊಂಡಿರಬೇಕಾಗಿದ್ದ ಸಂಜೆಗಳನ್ನು ನಾನು ದ್ವೇಷಿಸುತ್ತಿದ್ದೆ. ಮತ್ತು ಈ ನೋವನ್ನು ಮರೆಯಲು ಬೆಳಗಿನ ಜಾವ ಮೂರು ಗಂಟೆಯಲ್ಲಿ, ಪೀಠೋಪಕರಣಗಳನ್ನು ಮರುಜೋಡಣೆ ಮಾಡುತ್ತಿದ್ದೆ. ಬಹಳ ವರ್ಷಗಳಿಂದ ತಮ್ಮ ಪತಿಗಳನ್ನು ಕಳೆದುಕೊಂಡಿದ್ದ ನನ್ನ ಸ್ನೇಹಿತೆಯರು ನನ್ನನ್ನು

ವಿಧವಾ ಜೀವನದ ದೀಕ್ಷೆಗೆ ಒಳಪಡಿಸಲು ಪ್ರಯತ್ನಿಸಿದರು. ಆದರೆ, ನಾನು ನನ್ನನ್ನು ಹಾಗೆ ವಿಧವೆಯೆಂದು ಪರಿಗಣಿಸಲು ನಿರಾಕರಿಸಿದೆ. ಬಿಲ್ ಈಗಲೂ ನನ್ನ ಜೊತೆ ಇದ್ದ ಮತ್ತು ಯಾವಾಗಲೂ ನನ್ನ ಜೊತೆಯೇ ಇರುತ್ತಾನೆ.

* * * *

# ೧೭. ಮರಣದ ನಂತರದ ಜೀವನ

ಬಿಲ್‌ಗೆ ವಾಗ್ದಾನ ನೀಡಿದ್ದಂತೆ, ನಾನು ನನ್ನ ಕೆಲಸವನ್ನು ಮುಂದುವರೆಸಲು ಪ್ರಯತ್ನಿಸಿದೆ. ಆದರೆ, ಈ ಕಾರ್ಯವಿಧಾನದಲ್ಲಿ ಅವನು ಬಹುಮಟ್ಟಿನ ಭಾಗವಾಗಿದ್ದುದರಿಂದ ಅವನಿಲ್ಲದೆಯೇ ಈ ಕಾರ್ಯದಲ್ಲಿ ಮುಂದುವರೆಯುವುದು, ಅಸಾಧ್ಯವೆನಿಸಿತ್ತು ನನಗೆ. ನನ್ನ ವಿಚಾರಗಳ ಹಿಂದೆ ಯಾವಾಗಲೂ ಅವನು ಸ್ಫೂರ್ತಿಯಾಗಿದ್ದ ಮತ್ತು ನನ್ನ ಕಾರ್ಯ ಯೋಜನೆಗಳನ್ನು ಪರೀಕ್ಷಿಸುವ, ಪ್ರಸರಿಸುವ, ದಕ್ಷ ಮತ್ತು ಸಮರ್ಥ ವ್ಯಕ್ತಿಯಾಗಿದ್ದ. ನಾನು ಅವನ ಸಲಹೆಗಳನ್ನು ಮತ್ತು ತಿಳಿವಳಿಕೆಯ ಲಾಭ, ಉಪಯೋಗಗಳನ್ನು ಪಡೆಯಲು ನಾನು ಅತ್ಯಂತ ತೀವ್ರವಾಗಿ ಬಯಸುತ್ತಿದ್ದೆ. ಇದನ್ನೆಲ್ಲಾ ಅವನು ಬದುಕಿದ್ದಾಗ ಎಂದೂ ನಾನು ಹೇಳಲಿಲ್ಲವೆಂದು ಮನಗಂಡೆ ಮತ್ತು ಈ ಮಾತುಗಳೆಲ್ಲಾ ಅವನು ಸತ್ತ ನಂತರವೇ ಬಂದವೆಂದು ಕೋಪಗೊಂಡೆ. ಗಡಿಯಾರವನ್ನು ನಾನು ಹಿಂದಕ್ಕೆ ತಿರುಗಿಸಲು ಇಚ್ಛಿಸಿದೆ. ಹಾಗಾದರೆ, ನಾನು ಅವನನ್ನು ಎಷ್ಟೊಂದು ಪ್ರೀತಿಸಿದ್ದೆ, ಎಷ್ಟೊಂದು ಪ್ರಶಂಸಿಸುತ್ತಿದ್ದೆ ಮತ್ತು ಅವನು ಹೇಗೆ ನನ್ನ ಗುರುವಾಗಿದ್ದನು ಎಂಬುದನ್ನು ಅವನಿಗೆ ಹೇಳಬಹುದಾಗಿತ್ತು ಎಂದು.

ಬಿಲ್‌ನ ಬಗೆಗೆ ತಾವು ಹೇಗೆ ಭಾವಿಸಿದ್ದೆವು ಎಂದು ಹೇಳಬಯಸಿದವರಲ್ಲಿ ನಾನು ಕೇವಲ ಒಬ್ಬಳೇ ಆಗಿರಲಿಲ್ಲ; ಸಂತಾಪ ಸೂಚಕ ಸಂದೇಶಗಳು ಪ್ರವಾಹದಂತೆ ಹರಿದು ಬಂದವು. ಅನೇಕ ಸಂಖ್ಯೆಯಲ್ಲಿ ಮೃತನ ಸಂಕ್ಷಿಪ್ತ ಜೀವನ ಚಿತ್ರವನ್ನೊಳಗೊಂಡ ನಿಧನ ವಾರ್ತೆಗಳು ಪ್ರಕಟವಾದವು. ನನ್ನ ದುಃಖವನ್ನು ಹಂಚಿಕೊಳ್ಳಲು ಬಯಸಿದ ಜನರು ನನ್ನನ್ನು ಸುತ್ತುವರಿದಿದ್ದರು. ಆದರೆ, ನನಗೆ ಅವರು ಯಾರ ಜೊತೆಯೂ ಬೇಕಾಗಿರಲಿಲ್ಲ. ನನಗೆ ಕೇವಲ ಬಿಲ್ ಮಾತ್ರವೇ ಹಿಂದಿರುಗಿ ಬರಬೇಕಾಗಿತ್ತು. ನಮ್ಮ ಸಹೋದ್ಯೋಗಿಗಳಿಂದ ಹೃತ್ಪೂರ್ವಕ ಆಹ್ವಾನಗಳನ್ನು ನಾನು ಪಡೆದೆ. ಆದರೆ, ನನ್ನ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳದೇ, ಯಾರನ್ನೂ ನಾನು ಎದುರಿಸಲಾರೆ ಎನ್ನಿಸಿದ್ದರಿಂದ, ನಾನು ಯಾವುದೇ ಆಹ್ವಾನವನ್ನೂ ಒಪ್ಪಿಕೊಳ್ಳಲಿಲ್ಲ. ನನ್ನನ್ನು ತನ್ನ ತಾಯಿ ಎಂದೇ ಪರಿಗಣಿಸಿದ್ದ, ದಕ್ಷಿಣ ಭಾರತದ ನನ್ನ ಸ್ನೇಹಿತರಲ್ಲಿ ಒಬ್ಬರಿಂದ ಕೂಡ ನಾನು ಕರೆಗಳನ್ನು ಪಡೆದೆ. ನನ್ನ ಪಾಡಿಗೆ ನಾನು ಒಬ್ಬಳೇ ಇದ್ದೇನೆ ಎಂದು ಅವನು ಅರಿತಾಗ, ನಾನು ಭಾರತಕ್ಕೆ ಬಂದುಬಿಡ

ಬೇಕೆಂದೂ ತಮ್ಮ ಕುಟುಂಬದೊಂದಿಗೇ ಇದ್ದುಬಿಡಬೇಕೆಂದೂ ಮತ್ತು ಅಲ್ಲಿ, ಅವರು ನನಗೆ ತಾನು ಅವಶ್ಯಕವೆಂದು ಪರಿಗಣಿಸಿದ್ದ ಪ್ರೀತಿಯ ಆರೈಕೆ ನೀಡುವರೆಂದೂ, ಇದಕ್ಕೆ ನಾನು ಅರ್ಹಳೆಂದೂ ತಿಳಿಸಿ, ಭಾರತಕ್ಕೆ ಬರಲು ಒತ್ತಾಯಿಸಿದ್ದ.

ಜೀವನದಲ್ಲಿ ಮೊದಲ ಬಾರಿಗೆ, ನನ್ನ ಕಾಲವನ್ನು ಹೇಗೆ ಭರಿಸಬೇಕೆಂಬುದರ ಬಗೆಗೆ ನಾನು ತಿಳಿಯದಾದೆ ಮತ್ತು ಗೊತ್ತು ಗುರಿಯಿಲ್ಲದವಳಂತೆ, ಉದ್ದೇಶವಿರದವಳಂತೆ ಭಾವಿಸಿದೆ. ನನ್ನ ಕಾರ್ಯವು ತನ್ನ ಉದ್ದೇಶವನ್ನು ಕಳೆದುಕೊಂಡಿತ್ತು ಮತ್ತು ಕೇವಲ ಸಂತಾಪ ಸೂಚಕ ಸಂದೇಶಗಳನ್ನು ಓದುತ್ತಾ, ಓದುತ್ತಾ ನನ್ನ ದಿನಗಳನ್ನು ಕಳೆದೆ. ನಾನು ಕಳೆದುಕೊಂಡಿದ್ದ ಮನುಷ್ಯನ ಹತ್ತಿರಕ್ಕೆ ಈ ಸಂದೇಶಗಳು ನನ್ನನ್ನು ಕರೆದುಕೊಂಡು ಹೋಗುವುವೇನೋ ಎನ್ನುವಂತೆ, ಅವುಗಳನ್ನು ಓದಿದೆ. ಅವನೊಡನೆ ಮಾತನಾಡಲು ಪ್ರಯತ್ನಿಸಿದೆ. ಆದರೆ, ಅವನ ಮೌನ ಅದನ್ನು ಮತ್ತಷ್ಟು ಅಹಿತಕರವನ್ನಾಗಿ ಮಾಡಿತು. ಪ್ರವಾಹಕ್ಕೆ ಎದುರಾಗಿ ಈಜುವ ಶಕ್ತಿ ನನ್ನಲ್ಲಿ ಈಗ ಇರಲಿಲ್ಲ. ಅದೂ ವಿಶೇಷವಾಗಿ ನಾನೇ ಸ್ವತಃ ಮಾಡುವ ಕಾರ್ಯವಾಗಿದ್ದರಂತೂ ಸ್ವಲ್ಪ ಶಕ್ತಿಯೂ ಇರಲಿಲ್ಲವೆನಿಸಿತ್ತು.

ಡೆಬ್ಬಿಯ ಎರಡನೆಯ ಮತ್ತು ಅತ್ಯಂತ ತ್ರಾಸದಾಯಕ ಮಗಳು ರೂಬಿಯ ರೂಪದಲ್ಲಿ ನನ್ನ ಬಿಡುಗಡೆ ದೊರೆಯಿತು. ಯಾವುದೇ ನಿಯಮ, ನಿರ್ಬಂಧಗಳಿರದೇ ನನ್ನ ಅವಶ್ಯಕತೆಯಿರುವ ಮತ್ತು ರಾತ್ರಿಯಿಡೀ ನನ್ನೊಡನೆ ಇರುವಂತಹ ಒಬ್ಬ ವ್ಯಕ್ತಿಯನ್ನು ನಾನು ಕಂಡುಕೊಂಡೆ. ರೂಬಿಗಾಗಿ ನಾನು ಹಾಡಿದೆ. ಅವಳಿಗೆ ಉಣಿಸಿದೆ ಮತ್ತು ಮಿಷೆಲ್ಲೆ, ಡೆಬ್ಬಿ ಮಕ್ಕಳಾಗಿದ್ದಾಗ ನಾನು ಪಡೆದಿದ್ದ ಅಮೂಲ್ಯ ಕ್ಷಣಗಳನ್ನು ನಾನು ಮತ್ತೆ ಹಿಡಿದಿಟ್ಟುಕೊಂಡೆ. ಈ ತಿಂಗಳುಗಳಲ್ಲಿ ಮೊದಲ ಬಾರಿಗೆ ನಾನು ನನ್ನಿಂದ ಬಿಡುಗಡೆ ಪಡೆಯುವುದನ್ನು ನಿರ್ವಹಿಸಿದೆ. ಆದಾಗ್ಯೂ, ಫ್ಲಾಟಿನ ನನ್ನ ಮನೆಗೆ ಹಿಂತಿರುಗಿದಾಗ ಮತ್ತೆ ಆ ಶೂನ್ಯ ಮೂರ್ತರೂಪ ತಾಳುತ್ತಿತ್ತು, ಪ್ರತ್ಯಕ್ಷವಾಗುತ್ತಿತ್ತು ಮತ್ತು ಅದರಿಂದ ತಪ್ಪಿಸಿಕೊಳ್ಳುವ ಅವಶ್ಯಕತೆ ನನ್ನನ್ನು ಸಂಪೂರ್ಣವಾಗಿ ಸದೆಬಡಿದು ಮುಳುಗಿಸಿಬಿಡುತ್ತಿತ್ತು.

ಆಗಿನಿಂದ, ನಾನು ಪ್ರತಿಯೊಂದು ಆಹ್ವಾನವನ್ನೂ ಒಪ್ಪಿಕೊಳ್ಳತೊಡಗಿದೆ ಮತ್ತು ಪ್ರಪಂಚದಾದ್ಯಂತ ಉಪನ್ಯಾಸಗಳನ್ನು ನೀಡುತ್ತ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತಾ ಅಕೆಡೆಮಿಕ್ ಅಲೆಮಾರಿಯ ಜೀವನಕ್ಕೆ ಹಿಂದಿರುಗಿದೆ. ನನ್ನ ಪಾಡಿಗೆ ನಾನು ಫ್ಲಾಟಿನಲ್ಲಿ ಇರುವುದಕ್ಕಿಂತಲೂ, ಹೋಟೆಲ್‌ಗಳಲ್ಲಿ ಕಾಲ ಕಳೆಯುವುದು ಅಥವಾ ಬೇರೆ ಬೇರೆ ಜನರೊಡನೆ ಉಳಿದುಕೊಳ್ಳುವುದು ಸುಲಭ, ಹಿತಕರವೆನ್ನಿಸಿತು. ನಾನು ದೂರದಲ್ಲಿರುವವರೆಗೂ, ಇಂಗ್ಲೆಂಡಿನಲ್ಲಿ ಬಿಲ್ ನನಗಾಗಿ ಕಾಯುತ್ತಿರುತ್ತಾನೆಂದು ನನಗೆ ನಾನು ಸೋಗು ಹಾಕಿಕೊಳ್ಳಬಹುದಾಗಿತ್ತು. ಪ್ರತಿಯೊಂದು ಬಾರಿ ನನ್ನ ಫ್ಲಾಟಿನ ಬೀಗದಲ್ಲಿ ಬೀಗದ ಕೈಯನ್ನು ತಿರುಗಿಸುವಾಗಲೂ ಹೂವಿನ ಗುಚ್ಛವನ್ನು

ಮೇಜಿನ ಮೇಲಿಟ್ಟು, ತನ್ನ ಕುರ್ಚಿಯಲ್ಲಿ ಕುಳಿತು ನನಗಾಗಿ ಕಾಯುತ್ತಿದ್ದಾನೆ ಎಂದು ನನ್ನನ್ನು ನಾನು ನಂಬಿಸಿಕೊಳ್ಳುತ್ತಿದ್ದೆ.

ಒಂದೇ ಒಂದು ವರ್ಷದ ಅವಧಿಯಲ್ಲಿ ನಾನು ನೆದರ್‌ಲ್ಯಾಂಡ್ಸ್ ಮತ್ತು ಬರ್ಲಿನ್‌ನಲ್ಲಿ ಕಾಲ ಕಳೆದೆ. ನ್ಯೂಗಿನಿಯ ಪಾಪುವ ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿಯ ತನಕ ಬೋಧನಾವೃತ್ತಿ ಕೈಕೊಂಡೆ. ಸಮಾಲೋಚನಾ ಕೇಂದ್ರಗಳನ್ನು ನಡೆಸುತ್ತಾ ಮೊದಲ ಬಾರಿಗೆ ಚೈನಾ, ಲಾಜಸ್ ಹಾಗೂ ಬುಲ್ಗೇರಿಯಾ ಮತ್ತು ನೈಜೀರಿಯಾಗಳಿಗೆ ಭೇಟಿ ನೀಡಿದೆ. ಪ್ರತಿಯೊಂದು ಬಾರಿಯೂ ವಿಭಿನ್ನ ಸಂಸ್ಕೃತಿಗಳು ಒಡ್ಡಿದ ಸವಾಲುಗಳನ್ನು ನಾನು ಎದುರಿಸಿದಾಗ, ಇಂತಹ ಸಂದರ್ಭದಲ್ಲಿ ಬಿಲ್ ಯಾವ ಸಲಹೆ ನೀಡುತ್ತಿದ್ದ ಎಂದು ಆಲೋಚಿಸಲು ಪ್ರಯತ್ನಿಸುತ್ತಿದ್ದೆ ಮತ್ತು ನನ್ನ ಈಗಿನ ಮೌನ ಗುರುವಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೆ.

ಬುಲ್ಗೇರಿಯಾದ ಕಾರ್ಯಯೋಜನೆಯು, ವಿಶೇಷವಾಗಿ ಸವಾಲೆನಿಸುವವಂತಿತ್ತು. "ಸಾಂಸ್ಕೃತಿಕವಾಗಿ ಅಳವಡಿಸಲ್ಪಟ್ಟ ಮಾರುಕಟ್ಟೆಯ ಸಂಶೋಧನೆ ಮತ್ತು ಸಾಮಾಜಿಕ ವ್ಯಾಪಾರೋದ್ಯಮ" ಎಂಬ ವಿಷಯವನ್ನು ಕೇಂದ್ರವಾಗುಳ್ಳ ತರಬೇತಿಯ ಕಾರ್ಯಾಗಾರವನ್ನು, "ಸೋಫಿಯಾ ವಾಲಂಟರಿ ಸೆಂಟರ್ ಫಾರ್ ಇಂಡಿಪೆಂಡೆಂಟ್ ಲಿವಿಂಗ್"ಗಾಗಿ ನಡೆಸಿ ಕೊಡುವಂತೆ ನನ್ನನ್ನು ಕೇಳಲಾಗಿತ್ತು (ಸ್ವತಂತ್ರ ಜೀವನಕ್ಕಾಗಿ, ಸೋಫಿಯಾ ಸ್ವಯಂ ಸೇವಾ ಕೇಂದ್ರ). ಅಂಗವಿಕಲರಿಗೆ, ಎಷ್ಟು ಸಾಧ್ಯವೋ ಅಷ್ಟು ಸ್ವಾವಲಂಬಿಯಾಗಿಯೂ, ಸ್ವತಂತ್ರರನ್ನಾಗಿಯೂ ಮಾಡುವಂತಹ ಅನುಕೂಲಗಳನ್ನು ಒದಗಿಸಿಕೊಡುವುದಕ್ಕಾಗಿ ಆ ಕೇಂದ್ರವು ಸ್ಥಾಪನೆಗೊಂಡಿತ್ತು. ಇದು ಹಿಂದೆ ನಾನು ನಿರ್ವಹಿಸಿದ್ದ ಯಾವುದೇ ಕಾರ್ಯಯೋಜನೆಗಿಂತಲೂ ವಿಭಿನ್ನವಾಗಿತ್ತು ಹಾಗೂ ವಿಭಿನ್ನ ರೀತಿಯ ಅಂಗವೈಕಲ್ಯ ಹೊಂದಿದ್ದಂತಹ ಮತ್ತು ಗಾಲಿ ಕುರ್ಚಿಗಳ ಮೇಲೆಯೇ ಇರಬೇಕಾಗಿದ್ದಂತಹ ಹಲವು ಯುವಕ ಯುವತಿಯರೊಡನೆ ಭೇಟಿ ಮಾಡಬೇಕಾದ ಕಾರ್ಯವನ್ನು ಅದು ಒಳಗೊಂಡಿತ್ತು. ಕೆಲವು ದಿನಗಳಷ್ಟು ಕಾಲ ಅಲ್ಲಿ ಇದ್ದ ನಾನು ಅವರಲ್ಲಿ ಕಂಡ ಅದ್ಭುತ ಧೈರ್ಯ ಮತ್ತು ಜೀವನೋತ್ಸಾಹವನ್ನು ಪ್ರಶಂಸಿಸದೇ ಇರಲು ಸಾಧ್ಯವಾಗಲಿಲ್ಲ. ಇದು ನನಗೆ, ಜೀವನದಲ್ಲಿ ಉದ್ದೇಶದ ಬಗೆಗೆ ಹೊಸ ಅರ್ಥವೊಂದನ್ನು ನೀಡಿತು. ನಾನು ಎಷ್ಟು ಅದೃಷ್ಟವಂತಳು ಎಂಬುದನ್ನು ಮನಗಂಡೆ. ಪ್ರೀತಿಪಾತ್ರನಾದ ಪತಿಯೊಂದಿಗೆ ನಾನು ತುಂಬು ಜೀವನವನ್ನು ನಡೆಸಿದ್ದೆ. ಹಾಗಾಗಿ, ನನಗಾಗಿ ವ್ಯಥೆಪಡಲು ನನಗೆ ಕಾರಣವೇ ಇರಲಿಲ್ಲ. ನಾನು ಅಲ್ಲಿಂದ ಹಿಂದಿರುಗಿ ಬಂದೆ. ಈ ಜಗತ್ತಿನಲ್ಲಿರುವ ಕೆಲವಾದರೂ ಹೆಚ್ಚು ಸವಲತ್ತುಗಳನ್ನು ಪಡೆಯದಿರುವವರ ಜೀವನವನ್ನು ಉತ್ತಮಪಡಿಸಲು ನನ್ನ ಪರಿಣತಿ ಮತ್ತು ಪ್ರಯತ್ನಗಳನ್ನು ಮುಡಿಪಿಡಬೇಕೆಂಬ ನನ್ನ ನಿರ್ಧಾರವನ್ನು ಮುಂದುವರೆಸಬೇಕೆಂದು

ದೃಢ ನಿಶ್ಚಯ ಮಾಡಿದೆ. ಬಿಲ್ ನನ್ನನ್ನು ನೋಡಿ ಮುಗುಳ್ನಗುತ್ತಿದ್ದಾನೆಂದು ಭಾವಿಸಿದೆ. ಎಷ್ಟೋ ಯುಗಗಳಿಂದಲೂ ಇರದಂತಹ ಉತ್ತಮ ಮನಸ್ಥಿತಿಯನ್ನು ಪಡೆದಂತೆನಿಸಿತು.

ಕೆಲವು ತಿಂಗಳುಗಳ ನಂತರ ಒಂದು ದಿನ ಬೆಳಿಗ್ಗೆ, ನಾನು ನನ್ನ ಕಾಗದ ಪತ್ರಗಳನ್ನು ಪರಿಶೀಲಿಸುತ್ತಿದ್ದಾಗ, ವಿಯೆನ್ನಾದ 'ಜ್ಯೂಯಿಷ್ ವೆಲ್‌ಕವರ್ ಸರ್ವಿಸ್'ನಿಂದ, ನನ್ನನ್ನು ವಿಯೆನ್ನಾಕ್ಕೆ ಹಿಂದಿರುಗುವಂತೆ ಆಹ್ವಾನ ನೀಡಿದ್ದ ಪತ್ರವೊಂದು ಬಂದಿದ್ದುದನ್ನು ನೋಡಿದೆ. ಆ ಸಂಸ್ಥೆಯ ಬಗೆಗೆ ನಾನು ಅಸ್ಪಷ್ಟವಾಗಿ ಕೇಳಿದ್ದೆ. ಆ ಸಂಸ್ಥೆಯು ನಿರಾಶ್ರಿತರ ಗುಂಪುಗಳನ್ನು, ತಮ್ಮ ತಮ್ಮ ಹುಟ್ಟಿದ ಊರುಗಳಿಗೆ ಮತ್ತೊಮ್ಮೆ ಭೇಟಿ ಕೊಡಲು ಅವಕಾಶ ಮಾಡಿಕೊಡುವ ಸಲುವಾಗಿ ಮತ್ತೆ ಆಸ್ಟ್ರಿಯಾಕ್ಕೆ ಬರಲು ಆಹ್ವಾನಿಸುತ್ತಿತ್ತು. ಈ ಪ್ರಸ್ತಾಪದ ಬಗೆಗೆ ಮಿಶ್ರ ಭಾವನೆಗಳಿದ್ದವು. ಆದರೆ, ನನಗೆ ವಿರಾಮದ ಅವಶ್ಯಕತೆಯಿತ್ತು. ಕಡೆಯ ಪಕ್ಷ ನಾನು ಒಂಟಿಯಾಗಿ, ಸಹಾಯವಿರದೆ ಇರುವುದಿಲ್ಲವಲ್ಲ ಎನ್ನಿಸಿತು.

ನಾನು ವಿಯೆನ್ನಾಗೆ ವಿಮಾನದಲ್ಲಿ ಪ್ರಯಾಣಿಸಿದೆ. ಆ ಗುಂಪಿನಲ್ಲಿ ಯಾರಾದರೂ ಒಬ್ಬರು ನನಗೆ ಪರಿಚಿತರಾದವರು ಇರಬಹುದೇ ಎಂದು ಅಚ್ಚರಿಗೊಂಡೆ. ಆದರೆ ಆ ನಲವತ್ತು ನಿರಾಶ್ರಿತರೂ ವಿಯೆನ್ನಾ ಮೂಲದವರೇ ಆಗಿದ್ದರೂ ಕೂಡ, ನಾನು ಒಂದೇ ಒಂದು ಹೆಸರನ್ನೂ ಕೂಡ ಗುರುತಿಸಲಾಗಲಿಲ್ಲ. ನಾವು ಅಪರಿಚಿತ ಒಂದು ಗುಂಪಾಗಿದ್ದೆವು; ಜೊತೆಯಾಗಿ ಹಂಚಿಕೊಂಡಿದ್ದ ಇತಿಹಾಸವನ್ನೊಂದನ್ನುಳಿದು, ಬೇರೆ ಯಾವುದೇ ಸಮಾನ ಅಂಶಗಳಿಲ್ಲದ ಜನರ ಗುಂಪಾಗಿದ್ದೆವು ನಾವು. ಆದರೆ, ನಾವೆಲ್ಲರೂ ಎಷ್ಟೋ ವರ್ಷಗಳಿಂದಲೂ, ಒಬ್ಬರನ್ನೊಬ್ಬರು ತಿಳಿದಿದ್ದೆವೆಂದು ಭಾವಿಸಲು ನಮಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಪ್ರತಿಯೊಬ್ಬನಿಗೂ ಒಂದೊಂದು ಕಥೆ ಹೇಳಲು ಇತ್ತು. ಅವುಗಳಲ್ಲಿ ಅನೇಕ ಕಥೆಗಳೂ, ನನಗೆ ದುಃಸ್ವಪ್ನದ ಅನುಭವ ನೋಡಿ ನನ್ನನ್ನು ಮತ್ತೆ ವಿಯೆನ್ನಾದ ಆ ಹಳೆಯ ದಿನಗಳಿಗೆ ಕೊಂಡೊಯ್ಯುತ್ತಿದ್ದವು. ಆ ದಿನಗಳಲ್ಲಿ, ಬಾಗಿಲ ಮೇಲಿನ ಒಂದೊಂದು ಬಡಿತವೂ ನಮ್ಮನ್ನು ಹೆದರಿಕೆಯಿಂದ ನೆಗೆಯುವಂತೆ ಮಾಡುತ್ತಿದ್ದಿತು. ಪ್ರತಿಯೊಂದು ಬಾರಿ ರಸ್ತೆಯಲ್ಲಿ ಹೋಗುವಾಗಲೂ ನಾಜೀಗಳು ನಮ್ಮನ್ನು ಹಿಡಿದುಕೊಂಡು ಹೋಗುವವರೆಂಬ ಭೀತಿಯಿಂದ ನಡುಗುತ್ತಿದ್ದೆವು. ಈ ಸಂದರ್ಭದಲ್ಲಿ– ನನಗೆ ಸಾಂತ್ವನದ ಅವಶ್ಯಕತೆಯಿದ್ದಾಗ– ನಾನು ಬಿಲ್‌ನ ಸಂತೈಸುವ ಬಾಹುಗಳನ್ನು ಕಳೆದುಕೊಂಡ ಅನುಭವ ತೀವ್ರವಾಯಿತು.

ವಿಯೆನ್ನಾಕ್ಕೆ ಬಂದ ಮೊದಲ ಸಾಯಂಕಾಲ, ಯಾವುದೂ ಬದಲಾಗಿರುವುದಿಲ್ಲ ಎಂಬ ನಿರೀಕ್ಷೆಯಿಂದ, ನಾನು ನಗರದ ಒಳಗೆಲ್ಲಾ ಅಲೆದಾಡಿದೆ. ಆದರೆ, ಪ್ರಮುಖವಾದ ಹೆಗ್ಗುರುತುಗಳನ್ನು ಬಿಟ್ಟರೆ, ಇದು ನನ್ನದೇ ನಗರವೆಂದು ನನಗೆ ಗುರುತಿಸಲೇ ಸಾಧ್ಯವಾಗಲಿಲ್ಲ. ನಾನು ಮತ್ತು ಅಪ್ಪ ಕಾರ್ಡ್ಸ್ ಆಡುತ್ತಿದ್ದ ಕಾಫೀ ಅಂಗಡಿಯು

(Kaffee haus) ಈಗ ಬಟ್ಟೆಯ ಅಂಗಡಿಯಾಗಿದ್ದಿತು. ಸಾಂಪ್ರದಾಯಕವಾದ ಎಲ್ಲ ಕಾಫೀ ಅಂಗಡಿಗಳೂ ಕಣ್ಮರೆಯಾಗಿ, ಅದರ ಬದಲಾಗಿ ವಿಶ್ವವ್ಯಾಪಿಯಾಗಿರುವ ಫಾಸ್ಟ್ ಫುಡ್ ರೆಸ್ಟೋರೆಂಟ್‌ಗಳು ತಲೆಯೆತ್ತಿದ್ದವು. ನಾನು ನನ್ನ ಮನೆಯಲ್ಲಿರುವಂತಹ ಅನುಭವ ಹೊಂದುತ್ತೇನೆಂದು ನಿರೀಕ್ಷಿಸಿದ್ದೆ. ಆದರೆ, ಈ ಹೊಸ ವಿಯೆನ್ನಾದಲ್ಲಿ ಪರಿಚಿತವೆನಿಸುವ ಯಾವುದನ್ನೂ ನಾನು ಕಾಣಲಾಗಲಿಲ್ಲ. ಹಾಗಾಗಿ ಅಪರಿಚಿತ ದೇಶದಲ್ಲಿ ನಾನೊಬ್ಬಳು ಅಪರಿಚಿತಳು ಎಂದು ಭಾವಿಸಿದೆ. ವಿಯೆನ್ನಾದಲ್ಲಿ ನಾನಿದ್ದ ಕಾಲವು ಸಂಪೂರ್ಣವಾಗಿ ಬೇರೆಯೇ ಜೀವನದ್ದಾಗಿದ್ದಿತ್ತೆಂದೂ ಮತ್ತು ನಾನು ಸಂಪೂರ್ಣವಾಗಿ ಬೇರೆಯೇ ಅಸ್ತಿತ್ವದಲ್ಲಿ ಪುನರ್ಜನ್ಮ ಪಡೆದಿದ್ದೇನೆಯೇ ಎನ್ನಿಸಿತು ನನಗೆ. ನನ್ನ ಬೇರುಗಳ ಅರ್ಥ ಕಂಡುಕೊಳ್ಳುವೆನೆಂದು ನಾನು ಆಶಿಸಿದ್ದೆ. ಆದರೆ ವಿಯೆನ್ನಾದಲ್ಲಿನ ನನ್ನ ಮೊದಲಿನ ವರ್ಷಗಳಿಗೂ ಮತ್ತು ನನ್ನ ಈಗಿನ ಜೀವನಕ್ಕೂ ನಡುವೆ ಕೊಂಡಿಯನ್ನು ಸ್ಥಾಪಿಸುವಲ್ಲಿ ನನಗೆ ಬಹಳ ಕಷ್ಟವಾಯಿತು. ಆನ್‌ಶ್ಲುಸ್ (Anschluss) ನಡೆದಾಗಿನಿಂದ ಎಲ್ಲಿದ್ದೆ ನೀನು ಏನು, ಏನು ಮಾಡುತ್ತಿದ್ದೆ ಎಂದು ಬೀದಿಯಲ್ಲಿ ಓಡಾಡುವ ವ್ಯಕ್ತಿಯನ್ನು ಕೇಳಬೇಕು ಎಂದು ಬಯಸಿದೆ. ಏಕೆಂದರೆ, ಅಂತಹದೊಂದು ಘಟನೆ ಎಂದಾದರೂ ಆಯಿತು ಎಂಬುದಕ್ಕೆ ಯಾವ ಸಾಕ್ಷ್ಯವೂ ಇರಲಿಲ್ಲ. ಆ ಘಟನೆಯು ನನಗಾದಂತೆಯೇ, ಅವರಿಗೂ ಕೂಡ ಅಗಾಧ ಯಾತನಾಮಯವೂ, ಮಾನಸಿಕ ಆಘಾತವುಂಟು ಮಾಡಿದ್ದೂ ಆಗಿತ್ತೆಂದು ತಿಳಿಯುವ ಅಗತ್ಯ ನನಗಿತ್ತು. ಆದರೆ, ನಾನು ಯಾವ ಕುರುಹುಗಳನ್ನೂ ಕಾಣಲಿಲ್ಲ.

ನಾನು ಕಾರ್ಲ್‌ಮಾರ್ಕ್ಸ್ ಹಾಫ್‌ಗೆ ಹೋದೆ. ಅಲ್ಲಿ ವಾಸವಿದ್ದ ದಂಪತಿ, ನಮ್ಮ ಹಳೆಯ ಅಪಾರ್ಟ್‌ಮೆಂಟಿಗೆ ನಾನು ಮರುಭೇಟಿ ನೀಡಲು ಅನುಮತಿಸಿದರು. ಅದು ಹಿಂದೆ ಎಂದೂ ಇರದಿದ್ದ ವೈಭವದಿಂದ, ಪುನರುಜ್ಜೀವನಗೊಂಡ ಅಂದವಾದ ಫ್ಲಾಟ್ ಆಗಿ ಬದಲಾಗಿತ್ತು. ಆ ಕೋಣೆಗಳಲ್ಲಿ ಓಡಾಡುತ್ತಾ, ಅಡಿಗೆ ಮನೆಯ ಸಿಂಕ್‌ನ ಬಳಿ ನನ್ನ ಅಮ್ಮನನ್ನು ಮತ್ತು ಮೇಜಿನ ಬಳಿ ಓದುತ್ತಾ ಕುಳಿತ ನನ್ನ ಸೋದರನನ್ನೂ ಕಲ್ಪಿಸಿಕೊಂಡು ನೋಡಬಲ್ಲವಳಾಗಿದ್ದೆ. ಆ ದಂಪತಿ ನನ್ನನ್ನು ಹಿಂಬಾಲಿಸಿ ಬಂದರು. ಈ ಸ್ಥಳವು ನನಗೇಕೆ ಇಷ್ಟೊಂದು ಪ್ರಭಾವ ಬೀರುತ್ತಿದೆಯೆಂದು ನಿಜವಾಗಿ ಆಶ್ಚರ್ಯಗೊಂಡಿದ್ದರು. ಈ ಫ್ಲಾಟ್ ನನ್ನ ರಕ್ಷಿತ ಗೃಹವೂ, ನನ್ನ ಸೆರೆಮನೆಯೂ, ನಮ್ಮ ಕುಟುಂಬದ ಮನೆಯೂ, ಎಷ್ಟೋ ವರ್ಷಗಳ ಹಿಂದೆ ಆಗಿತ್ತೆಂದು ಅವರಿಗೆ ವಿವರಿಸಲು ಪ್ರಯತ್ನಿಸಿದೆ.

ವಿಯೆನ್ನಾಕ್ಕೆ ಪ್ರವಾಸ ಹೊರಡುವುದಕ್ಕೆ ಮೊದಲು, ಹದಿನಾರು ವರ್ಷದ ಹುಡುಗಿಯ ಭಯ ಭರವಸೆಗಳನ್ನು ದಾಖಲಿಸಿದ್ದ ನನ್ನ ಹಳೆಯ ಜರ್ನಲ್ ಅನ್ನು ಮತ್ತೆ ಓದಲು ನಿಶ್ಚಯಿಸಿದೆ. ನಾನು ವಿಯೆನ್ನಾವನ್ನು ಬಿಟ್ಟು ಬಂದ ೧೯೩೮,

ಜುಲೈ ೨೩ರ ಉಲ್ಲೇಖ ಹೀಗಿತ್ತು:

"ವಿಯೆನ್ನಾದಿಂದ ಅಜ್ಞಾತ ಪ್ರದೇಶಕ್ಕೆ ನಿರ್ಗಮನ. ಒಂದು ಕಡೆ ನಾವು ಯುಗೋಸ್ಲಾವಿಯಾಕ್ಕೆ ಹೋಗಲು ನಮ್ಮ ವೀಸಾಗಳನ್ನು ಪಡೆದುದರ ಬಗೆಗೆ ನನಗೆ ನಿಜವಾಗಿ ಸಂತೋಷವಾಗಿದೆ ಮತ್ತು ಅಂತಿಮವಾಗಿ ನಾವು ಆಸ್ಟ್ರಿಯಾದಿಂದ ಆಚೆಗೆ ಹೋಗಬಹುದು; ಎರಡನೆಯದಾಗಿ, ಪ್ರಸಕ್ತ ಪರಿಸ್ಥಿತಿಯಲ್ಲಿ ವಿಯೆನ್ನಾವನ್ನು ಬಿಟ್ಟುಹೋಗುವುದರ ಬಗೆಗೆ ನಾನು ತೀವ್ರವಾಗಿ ಮಾನಸಿಕ ಕ್ಷೋಭೆಗೊಳಗಾಗಿದ್ದೇನೆ. ನನಗೆ ಏನೇ ಆದರೂ ಕೂಡ, ನಾನು ಎಂದಿಗೂ ಎಂದೆಂದಿಗೂ ಈ ದೇಶಕ್ಕೆ ಹಿಂದಿರುಗಿ ಬರಲು ಇಷ್ಟಪಡುವುದಿಲ್ಲವೆಂದು ನನಗೆ ತಿಳಿದಿದೆ. ಈ ದೇಶದಲ್ಲಿ ಜನರು ತಮ್ಮ ಮಾನವೀಯತೆಯನ್ನು ಸಂಪೂರ್ಣವಾಗಿ ತ್ಯಜಿಸಿಬಿಡುವುದನ್ನು ಮತ್ತು ನಂಬಲು ಅಸಾಧ್ಯವಾಗುವಂತಹ ಭಯಂಕರವಾದ ಪಾಶವೀಕೃತ್ಯಗಳನ್ನು ನಡೆಸಲು ಸಿದ್ಧರಾಗುವುದನ್ನೂ ನಾನು ನೋಡಿದ್ದೇನೆ.

ಕಳೆದ ಬೇಸಿಗೆಯಲ್ಲಿ ಒಂದು ಯುಕವರ ಗುಂಪಿನೊಂದಿಗೆ ನಾನು ಪ್ಯಾರಿಸ್ಸಿಗೆ ಹೋಗಿ ಅಲ್ಲಿ ವಿಲ್ಲಿಯೊಡನೆ ನನ್ನ ಪ್ರೇಮ ಉಂಟಾದಾಗ, ನಮ್ಮ ಜೀವನಗಳು ಈ ರೀತಿಯ ತಿರುವು ತೆಗೆದುಕೊಳ್ಳಬಹುದೆಂದು ಒಂದು ಕ್ಷಣವೂ ನಾನು ಆಲೋಚಿಸಿರಲಿಲ್ಲ. ಆಸ್ಟ್ರಿಯಾದ ಜನರು ತಾವು ಆಗ ನಡೆದುಕೊಂಡಷ್ಟು ಅಸಭ್ಯವಾಗಿ, ಕೊಳಕಾಗಿ ವರ್ತಿಸುವರೆಂದು ನಾನು ಎಂದಿಗೂ ಕಲ್ಪನೆ ಮಾಡುತ್ತಿರಲಿಲ್ಲ. ಆಯಿತು, ಈಗ ನನಗೆ ಚೆನ್ನಾಗಿ ಬುದ್ಧಿ ಬಂದಿದೆ; ವೈಯಕ್ತಿಕವಾಗಿ ಚೆನ್ನಾಗಿ ನನಗೆ ಪರಿಚಯವಿದ್ದು, ಅವರನ್ನು ಸರಿಯಾಗಿ ತಿಳಿಯದ ಹೊರತು, ಯಾರನ್ನೂ ನಂಬಲು ನಾನು ಎಂದೂ ಸಿದ್ಧವಿರುವುದಿಲ್ಲ. ವಿಲ್ಲಿಗೆ ಏನಾಯಿತು ಎಂದು ನಾನು ಚಿಂತಿಸುತ್ತೇನೆ. ಆದರೂ ಅವನ ಬಗೆಗೆ ಯೋಚಿಸುವುದನ್ನು ನಾನು ನಿಲ್ಲಿಸಬೇಕು. ಏಕೆಂದರೆ, ನಾವೆಲ್ಲರೂ ಹೊಸ ಮತ್ತು ಉತ್ತಮವಾದ ಜೀವನವನ್ನು ಆರಂಭಿಸಲು ಸಾಧ್ಯವಾಗುವಂತಹ ಸ್ಥಳವನ್ನು ಕಂಡುಕೊಳ್ಳಲು ನಾನು ಎಚ್ಚರಿಕೆಯಿಂದಿರಲು ಮತ್ತು ಶಕ್ತಳಾಗಿರಲು ಪ್ರಯತ್ನಿಸಬೇಕು."

ರೈಲು ನಿಲ್ದಾಣಕ್ಕೆ ಬರುತ್ತಾ ಹಾದಿಯಲ್ಲಿ ಆ ವಿಧಿ ನಿರ್ಣಯದ ದಿವಸ ಟ್ಯಾಕ್ಸಿಯಲ್ಲಿ ಕುಳಿತು, ಕಡೆಯ ಬಾರಿಗೆ, ಇದುವರೆಗೂ ನಾನು ಬೆಳೆದಿದ್ದ, ನನ್ನ ಇಡಿಯ ಜೀವನವನ್ನು ಕಳೆದಿದ್ದ ಆ ನಗರದ ಕಡೆಗೆ ನೋಡುತ್ತಾ ಪಿಸುಗುಟ್ಟಿದೆ: "ನಿನಗೆ ವಿದಾಯ ವಿಯೆನ್ನಾ, ನಾನು ನಿನ್ನನ್ನು ಮತ್ತೆ ಎಂದಿಗೂ ನೋಡುವುದಿಲ್ಲ!"

ಹಾಗಿದ್ದರೂ ಅರವತ್ತೈದು ವರ್ಷಗಳ ನಂತರ ನಾನು ಮತ್ತೆ ಇಲ್ಲಿ ಇದ್ದೆ. ನಾನು ವಿಯೆನ್ನಾದಲ್ಲಿದ್ದಾಗ ಯೂನಿವರ್ಸಿಟಿಯಲ್ಲಿ ಉಪನ್ಯಾಸ ನೀಡುವಂತೆ ನನ್ನನ್ನು ಆಹ್ವಾನಿಸಲಾಯಿತು: ಪವಿತ್ರವಾದ ದೇಗುಲವೆಂದು ನಾನು ಪರಿಗಣಿಸಿದ್ದು, ಎಂದಿಗೂ ಅದರಲ್ಲಿ ನಾನು ಪ್ರವೇಶ ಪಡೆಯದಿದ್ದ ಸ್ಥಳ ಅದು. ಉಪನ್ಯಾಸದ ಮೇಜಿನ ಹಿಂದೆ

ನಿಂತು ನೋಡುತ್ತಾ ನಾನು ಈ ವ್ಯಂಗ್ಯವನ್ನು ಗಮನಿಸಿದೆ: ನನ್ನ ಕ್ಷೇತ್ರದಲ್ಲಿ ತಜ್ಞಳೆಂದೂ, ಪ್ರೊಫೆಸರ್ ಎಂದೂ ನಾನು ವಿದ್ಯಾರ್ಥಿಗಳ ಸಮೂಹಕ್ಕೆ ಪರಿಚಯಿಸಲ್ಪಡುತ್ತಿದ್ದೆ ಮತ್ತು ಒಂದು ಕಾಲದಲ್ಲಿ ಅಂತಹ ವಿದ್ಯಾರ್ಥಿ ಸಮೂಹಕ್ಕೆ ಸೇರುವುದನ್ನು ನನಗೆ ನಿರಾಕರಿಸಲಾಗಿತ್ತು. ನನ್ನ ಉಪನ್ಯಾಸವನ್ನು ಸ್ನೇಹಪೂರ್ಣವಾಗಿ ಸ್ವೀಕರಿಸಿದುದನ್ನು ಕಂಡು ನನಗೆ ಹರ್ಷವಾಯಿತು. ಹಳೆಯ ನೆನಪಿನ ಭೂತವನ್ನು ಹುಗಿದಿದ್ದನೆಂಬ ಭಾವನೆಯಿಂದ ಅಲ್ಲಿಂದ ಹೊರಟೆ.

ವಾರದ ಉಳಿದ ದಿನಗಳು ಅನೇಕ ಲಘು ಪ್ರವಾಸಗಳು, ಯಹೂದಿ ಸ್ವಾಗತ ಸರ್ವಿಸ್‌ನಿಂದ ಏರ್ಪಡಿಸಿದ್ದ ಕಾರ್ಯಕ್ರಮಗಳಿಂದ ತುಂಬಿಹೋಗಿದ್ದವು. ಅಲ್ಲಿನ ಬಹುತೇಕ ಜನರ ದೃಷ್ಟಿಯಲ್ಲಿ ನಾನು ಹಿಂದೆ ಎಂದೂ ಅಲ್ಲಿ ಇರದಿದ್ದ ಪ್ರವಾಸಿಯಂತೆ ಹಾಗೂ ಆ ಪ್ರವಾಸಿಗೆ ಸುತ್ತಲೂ ಎಲ್ಲವನ್ನೂ ತೋರಿಸುತ್ತಿದ್ದಾರೆ ಎನ್ನುವಂತೆ ಭಾವಿಸಿದೆ. ಆದರೆ, ಒಂದು ಸಂಜೆ ನಮ್ಮನ್ನು ವೈನ್‌ಬಾರ್ ಒಂದಕ್ಕೆ ಕರೆದೊಯ್ಯಲಾಯಿತು (Heurigen), ಮತ್ತು ಅದು ಕೂಡಲೇ ನನ್ನಲ್ಲಿ ಅಹಿತಕರ ಭಾವವನ್ನುಂಟುಮಾಡಿತು. ಮನೋರಂಜನೆ ನೀಡುವವರನ್ನು ಅವರು ಗೊತ್ತು ಮಾಡಿದ್ದರು. ಆ ಗಾಯಕರು ಕೂಡಲೇ ಹಾಡುತ್ತಾ ಹಿಡಿಯಿರುವ ತಮ್ಮ ದೊಡ್ಡ ಬಿಯರ್ ಗ್ಲಾಸುಗಳನ್ನು ಬೀಸುತ್ತ, ಸಂಗೀತದ ಲಯಕ್ಕೆ ಅನುಗುಣವಾಗಿ ಇಡಿಯ ಬಾರ್ ಅನ್ನು ಗಾಯನದಲ್ಲಿ ಮುಳುಗಿಸಿದರು. ಈ ವಾತಾವರಣವು ನನ್ನನ್ನು ಸುತ್ತುಗಟ್ಟಿ ಆಕ್ರಮಿಸುತ್ತಿರುವಂತೆ ನನಗೆ ಅನ್ನಿಸಿತು ಮತ್ತು ಅಲ್ಲಿಂದ ನಾನು ಹೊರಕ್ಕೆ ಹೋಗಲೇಬೇಕೆನಿಸಿತು. ಅಲ್ಲಿಂದ ದಾರಿ ಬಿಡಿಸಿಕೊಂಡು ಹೊರಕ್ಕೆ ಬರುತ್ತಿರುವಾಗ ಇದ್ದಕ್ಕಿದ್ದಂತೆಯೇ ನನ್ನನ್ನು ಭಯ ಆವರಿಸಿತು. ನಾಜೀ ಸಿಪಾಯಿಗಳು ತಮ್ಮ ಸಮವಸ್ತ್ರಗಳಲ್ಲಿ ಬಂದುಬಿಡುವರೆಂದು ಅರ್ಧ ನಿರೀಕ್ಷಿಸುತ್ತಾ ನನ್ನ ಭಯ ಹೆಚ್ಚಿತು. ದೈಹಿಕವಾಗಿ ನನಗೆ ಹೊಟ್ಟೆ ತೊಳಸಿದಂತಾಯಿತು. ನಾನು ಜೋರಾಗಿ ಕಿರಿಚಿಕೊಳ್ಳ ಬಯಸಿದೆ: "ಏನು ಎಲ್ಲರಿಗೂ ಹುಚ್ಚು ಹಿಡಿದಿದೆಯೇ? ಇಲ್ಲಿ ಏನು ನಡೆದಿತ್ತೆನ್ನುವುದನ್ನು ಪ್ರತಿಯೊಬ್ಬನೂ ಮರೆತುಬಿಟ್ಟಿದ್ದಾನೆಯೇ?" ನನಗೆ ಉಸಿರಾಡಲೂ ಸಾಧ್ಯವಾಗಲಿಲ್ಲ. ನನ್ನ ಪಾಡಿಗೆ ನಾನು ಒಬ್ಬಳೇ ಹೋಟೆಲಿನ ನನ್ನ ಕೋಣೆಗೆ ಬಂದೆ; ನನ್ನ ಕೋಣೆಯ ಶಾಂತ ವಾತಾವರಣದಲ್ಲಿ ಮಾತ್ರವೇ ನಾನು ಸಮಾಧಾನ ಪಡೆಯಲು ಆರಂಭಿಸಿದೆ.

ಮರುದಿನ ವಿಯೆನ್ನಾ ಪುರಸಭೆಯಲ್ಲಿ, ನಮ್ಮನ್ನು ಗೌರವಿಸುವುದಕ್ಕಾಗಿ ಸ್ವಾಗತಕೂಟವೊಂದನ್ನು ಏರ್ಪಡಿಸಲಾಗಿತ್ತು. ಉಪಮೇಯರ್ ಏನು ಹೇಳುವರೋ ಎಂದು ಯೋಚಿಸುತ್ತಾ ನಾನು ಕೋಪಗೊಂಡಿದ್ದೆ ಮತ್ತು ಹತಾಶಳಾಗಿದ್ದೆ. ಆದರೆ, ಅವರು, ನಾವು ಅನುಭವಿಸಿದ ಸಂಕಷ್ಟಗಳಿಗಾಗಿ, ಆಸ್ಟ್ರಿಯಾದ ಜನತೆಯ ಪರವಾಗಿ ಕ್ಷಮಾಪಣೆ ಕೇಳಿದಾಗ ನನಗೆ ನೆಮ್ಮದಿಯೆನಿಸಿತು. ಅಲ್ಲದೇ ಆಸ್ಟ್ರಿಯಾದ ಜನತೆ

ತಮ್ಮ ಪಶ್ಚಾತ್ತಾಪವನ್ನು ಪ್ರಕಟಿಸಲು ಅವರಿಗೆ ಅವಕಾಶ ಮಾಡಿಕೊಟ್ಟು ನಾವು ವಿಯೆನ್ನಾಗೆ ಹಿಂದಿರುಗಿ ಬರಲು ಒಪ್ಪಿದ್ದಕ್ಕಾಗಿ ನಮಗೆ ಧನ್ಯವಾದಗಳನ್ನು ಅವರು ಸಲ್ಲಿಸಿದರು. ಆಸ್ಟ್ರಿಯಾದಲ್ಲಿ ಮತ್ತೆಂದೆಂದಿಗೂ ಅಂತಹ ಸಾಮೂಹಿಕ ಹತ್ಯಾಕಾಂಡ ನಡೆಯಲು ಅವಕಾಶ ನೀಡುವುದಿಲ್ಲವೆಂಬ ಭರವಸೆ ನೀಡಲು ತಮಗೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುತ್ತಿರುವುದಾಗಿಯೂ ಅವರು ಹೇಳಿದರು. ಆದರೆ, ಈ ಆಶ್ವಾಸನೆಯು ನಮಗೆ ಬಹಳ ತಡವಾಯಿತೆಂದು ಅವರಿಗೆ ಹೇಳಲು ನಾನು ಬಯಸಿದೆ. ಒಂದು ಚಿಕ್ಕ ಸಂದರ್ಶನದಲ್ಲಿ ನಾನು ಅವರಿಗೆ ಇದನ್ನು ಸ್ಪಷ್ಟಪಡಿಸಿದೆ. ನಾನು ಕ್ಷಮಿಸಲು ಸಾಧ್ಯವಾಗಬಹುದು. ಆದರೆ, ಎಂದಿಗೂ ನನಗೆ ಮರೆಯಲು ಸಾಧ್ಯವಾಗುವುದಿಲ್ಲ.

ಹಿಟ್ಲರ್‌ನ ಆಗಮನದಿಂದಾಗಿ ನಾನೇನಾದರೂ ಹೀಗೆ ದಿಢೀರನೆ ಪ್ರಾಪ್ತ ವಯಸ್ಕ ಸ್ಥಿತಿಗೆ ಎತ್ತಿ ಎಸೆಯಲ್ಪಡದೇ ಇದ್ದಿದ್ದರೆ, ನನ್ನ ಜೀವನವು ಏನಾಗಿರುತ್ತಿತ್ತು, ಹೇಗಿರುತ್ತಿತ್ತು ಎಂದು ನಾನು ಅನೇಕ ಬಾರಿ ಯೋಚಿಸಿ ಅಚ್ಚರಿಗೊಂಡಿದ್ದೇನೆ. ನಾನು ಕನಸು ಕಂಡಿದ್ದಂತೆ, ವೈದ್ಯಕೀಯ ವಿಭಾಗದಲ್ಲಿ ಡಾಕ್ಟರ್ ಆಗುತ್ತಿದ್ದೆನೇ? ನನ್ನ ಪ್ರಥಮ ಪ್ರೇಮವಾದ ವಿಲ್ಲಿಯೊಡನೆ ವಿವಾಹವಾಗಿರುತ್ತಿದ್ದೆನೇ? ಆದರೆ ನಾನೀಗ ೮೦ ವರ್ಷ ವಯಸ್ಸಾದವಳು, ಕೊನೆಯೇ ಇರದ ಈ ಪ್ರಶ್ನೆಗಳನ್ನೆಲ್ಲಾ ತಡೆದಿಡಲು, ನಿಲ್ಲಿಸಲು ಪ್ರಯತ್ನಿಸುತ್ತಿದ್ದೇನೆ ಮತ್ತು ಏನಾಗಿದೆಯೋ, ಏನಿದೆಯೋ ಮತ್ತು ಯಾವುದು ಮುಂದುವರಿಯುವುದೋ ಅದರ ಬಗೆಗೆ ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸುತ್ತಿದ್ದೇನೆ.

ನನ್ನ ಜೀವನದ ವಿಭಿನ್ನ ಹಂತಗಳಿಂದ, ವಿವಿಧ ಸ್ಥಳಗಳಿಂದ ಬಂದಿದ್ದ ನನ್ನ ಸ್ನೇಹಿತರು ಮತ್ತು ಕುಟುಂಬ ವರ್ಗದಿಂದ ಸುತ್ತುವರೆದಿದ್ದು, ನಾನು ನನ್ನ ೮೦ನೆಯ ಜನ್ಮದಿನದ ಸಮಾರಂಭವನ್ನು ಆಚರಿಸಿಕೊಂಡೆ; ರಸ್ಕಿನ್ ಕಾಲೇಜ್, ಇಂಡಿಯಾ, ಆಫ್ರಿಕಾ, ಪಾಪುವಾ, ನ್ಯೂಗಿನಿ, ಮ್ಯಾಂಚೆಸ್ಟರ್ ಮತ್ತು ಸಸೆಕ್ಸ್‌ಗಳಿಂದ ಬಂದಿದ್ದ ನನ್ನ ಆತ್ಮೀಯರು ನನ್ನನ್ನು ಸುತ್ತುವರೆದಿದ್ದರು. ಈ ದಿನವನ್ನು ನನ್ನ ಜೊತೆಯಲ್ಲಿ ಹಂಚಿಕೊಳ್ಳಲು ನನ್ನ ಇಬ್ಬರು ಸಹೋದರರು, ನನ್ನ ಇಬ್ಬರು ಪುತ್ರಿಯರು, ನಾಲ್ಕು ಮೊಮ್ಮಕ್ಕಳು ಎಲ್ಲರೂ ಬಂದಿದ್ದರು. ಪ್ರಪಂಚದ ಮೂಲೆ ಮೂಲೆಗಳಿಂದ ಸಂದೇಶಗಳು ಬಂದವು. ನಾನು ಎಲ್ಲರ ಪ್ರೀತಿಪಾತ್ರಳು ಮತ್ತು ಅಭಿಮಾನ ಗಳಿಸಿದವಳೆಂದು ಭಾವಿಸಿ ಹರ್ಷಿಸಿದೆ.

ಆದರೆ, ಈಗ  ಬಂದಿದೆ ಮತ್ತು ಮರಗಳಿಂದ ಎಲೆಗಳು ಉದುರುವುದನ್ನು ವೀಕ್ಷಿಸುತ್ತಾ ಕುಳಿತುಕೊಳ್ಳುತ್ತೇನೆ. ಇದು ನನ್ನದೇ ಅವನತಿಯನ್ನು ಸಂಕೇತಿಸುತ್ತದೆ. ನಾನು ವಸಂತಕ್ಕಾಗಿ ನವೀಕರಣಗೊಂಡ ಶಕ್ತಿ ಹಾಗೂ ಬೆಳವಣಿಗೆಗಾಗಿ ಆಶಿಸುತ್ತೇನೆ. ಸಾವಿನ ಬಗೆಗೆ ಮತ್ತು ಅದರ ನಿರ್ಣಾಯಕತೆಯ ಬಗೆಗೆ ಯೋಚಿಸುತ್ತೇನೆ ಮತ್ತು

ಅದರ ಸಾಮೀಪ್ಯ ಮತ್ತು ನಿಕಟತೆಯ ಬಗೆಗೆ ಹೆದರುತ್ತೇನೆ. ದೃಢವಾದ ಧಾರ್ಮಿಕ ನಂಬಿಕೆ ಹೊಂದಿದ್ದು, ಸಾವಿನ ನಂತರದ ಜೀವನದ ಬಗೆಗೆ, ಹಿತಕರವಾದ ಅಥವಾ ತೃಪ್ತಿಕರವಾದ ಆಲೋಚನೆಗಳಿರುವವರ ಬಗೆಗೆ ನನಗೆ ಅಸೂಯೆ ಎನಿಸುತ್ತದೆ. ಬಹಳ ವರ್ಷಗಳ ಹಿಂದೆಯೇ ದೇವರು ನನ್ನನ್ನು ಪರಿತ್ಯಜಿಸಿಬಿಟ್ಟಿದ್ದರಿಂದ ಮತ್ತು ಅನೇಕ ವರ್ಷಗಳ ಪ್ರಾರ್ಥನೆಗಳಿಗೆ ಪ್ರತ್ಯುತ್ತರ, ಪರಿಹಾರ ಯಾವುದೂ ದೊರೆಯದುದರಿಂದ ಧರ್ಮವು ಯಾವುದೇ ಸಾಂತ್ವನವನ್ನು ನನಗೆ ನೀಡುವುದಿಲ್ಲವೆಂದು ನಾನು ಭಾವಿಸುತ್ತೇನೆ. ಆದ್ದರಿಂದ, ನಾನು ಹೆಚ್ಚು ಹೆಚ್ಚು, ಯಾವಾಗಲೂ ಕಾರ್ಯನಿರತಳಾಗಿರುವುದರಿಂದ ಸಾವನ್ನು ದೂರಕ್ಕೆ ತಳ್ಳುತ್ತೇನೆ. ನಾನು ಪ್ರತಿದಿನವೂ ವ್ಯಾಯಾಮ ಶಾಲೆಯಲ್ಲಿ ವ್ಯಾಯಾಮ ಮಾಡುವುದರಿಂದ ನನ್ನ ಸ್ನೇಹಿತರು ಮತ್ತು ನನ್ನ ಕುಟುಂಬ ನನ್ನು ಉನ್ಮತ್ತಳು, ಗೀಳು ತುಂಬಿದವಳು ಎಂದು ಯೋಚಿಸುತ್ತಾರೆ. ಆದರೆ, ಅಲ್ಲಿನ ಸಿಬ್ಬಂದಿ ನನ್ನನ್ನು ತಮ್ಮ ಅತ್ಯಂತ ವಯಸ್ಸಾದ ಸದಸ್ಯರಲ್ಲಿ ಒಬ್ಬಳೆಂದು ಸ್ನೇಹದಿಂದ ಸ್ವಾಗತಿಸುತ್ತಾರೆ ಮತ್ತು ನಾನು ಈಗಲೂ ಹೊಸ ಹೊಸ ವಿಷಯಗಳಲ್ಲಿ ಆಸಕ್ತಿ ಹೊಂದಿ, ಹೊಸ ವಿಷಯಗಳನ್ನು ಮಂಡಿಸುತ್ತಿದ್ದೇನೆಂಬುದು, ಮನಸ್ಸಿಗೆ ಹಿತ ನೀಡುತ್ತದೆ. ಹೊಸ ಕಾರ್ಯ ಯೋಜನೆಗಳನ್ನು ಕೈಗೊಳ್ಳುವುದನ್ನು ನಾನು ಮುಂದುವರೆಸುತ್ತಿದ್ದೇನೆ. ಪ್ರತಿಯೊಬ್ಬರೂ ಇನ್ನು ನಾನೇಕೆ ಸುಮ್ಮನೆ ಇದ್ದು ವಿಶ್ರಾಂತಿ ಪಡೆದು ಸಂತೋಷದಿಂದ ಇರಬಾರದು ಎಂದು ಕೇಳುತ್ತಾರೆ. ಆದರೆ, ಪ್ರವಾಹಕ್ಕೆ ಎದುರಾಗಿ ಈಜುವುದೊಂದೇ ದಾರಿ ನನಗೆ ತಿಳಿದಿರುವುದು ಎನ್ನುವುದನ್ನು ಅವರು ಅರ್ಥಮಾಡಿಕೊಳ್ಳುವುದಿಲ್ಲ.

* * * *